ಭಾರತದ ಸ್ವಾತಂತ್ರ್ಯ ಚಳುವಳಿ

1857-1947



ಎ.ಪಿ.ಶ್ರೀನಿವಾಸಮೂರ್ತಿ

ಭಾರತದ ಸ್ವಾತಂತ್ರ್ಯ ಚಳುವಳಿ
1857 - 1947

ಎ. ಪಿ. ಶ್ರೀನಿವಾಸಮೂರ್ತಿ
ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ
ಮೈಸೂರು ವಿಶ್ವವಿದ್ಯಾನಿಲಯ
(ಕರ್ನಾಟಕ)

ಅಭ್ಯುದಯ ಪ್ರಕಾಶನ
ಬೆಂಗಳೂರು – 560 004

BHARATADA SWATANTRYA CHALUVALI : 1857–1947 in Kannada by Prof. A. P. Srinivasa Murthy. A concise, well documented history of the freedom struggle of India Published by M/s ABHYUDAYA PRAKASHANA, 2/C, Sannidhi Road, Basavanagudi Bangalore-560 004, INDIA. Price Rs. 30·00 Pages 264+24 Printed at M/s Kesari Mudranalaya, 59, V Main, Chamarajpet, Bangalore-560 018

ಪ್ರಕಾಶಕರು :

ಅಭ್ಯುದಯ ಪ್ರಕಾಶನ
2/C, ಸನ್ನಿಧಿ ರಸ್ತೆ
ಬಸವನಗುಡಿ, ಬೆಂಗಳೂರು – 560 004

ಪ್ರಕಟಣೆ :


ಶ್ರೀ ಗೀತಾ ಜಯಂತಿ
1 . 12 . 1987

ಬೆಲೆ : ರೂ. **30–00**

ಮುದ್ರಕರು :

ಕೇಸರಿ ಮುದ್ರಣಾಲಯ
59, ಐದನೇ ರಸ್ತೆ
ಚಾಮರಾಜಪೇಟೆ
ಬೆಂಗಳೂರು – 560 018

ಈ ಗ್ರಂಥವನ್ನು ಬರೆಯುವಾಗ
ಇದರ ವಿಷಯಗಳನ್ನು
ಕುತೂಹಲದಿಂದ ಕೇಳಿ ತಿಳಿದುಕೊಂಡು
ಪ್ರೀತಿವಾತ್ಸಲ್ಯಪೂರಕವಾಗಿ
ನನ್ನನ್ನು ಉತ್ತೇಜಿಸಿದ



ನನ್ನ ಮಾತೃಶ್ರೀಯವರಾದ
ಮುಡವತ್ತಿ ಶೇಷಮ್ಮನವರ
ಅಡಿದಾವರೆಗಳಲ್ಲಿ

ರಾಷ್ಟ್ರಧ್ವಜ



ಸಂವಿಧಾನ ಸಭೆಯು ೧೯೪೭ರ ಜುಲೈ ೨೨ ರಂದು ಅಂಗೀಕರಿಸಿದ ರಾಷ್ಟ್ರಧ್ವಜದಲ್ಲಿ ಅಡ್ಡವಾಗಿ ಮೇಲ್ಭಾಗದಲ್ಲಿ ಕಡು ಕೇಸರಿ ಬಣ್ಣ, ಮಧ್ಯದಲ್ಲಿ ಬಿಳಿ ಮತ್ತು ತಳದಲ್ಲಿ ಕಡು ಹಸಿರು ಬಣ್ಣ, ಇವು ಸಮ ಪ್ರಮಾಣದಲ್ಲಿವೆ. ಧ್ವಜದ ಅಗಲ ಮತ್ತು ಉದ್ದಗಳು ಎರಡಕ್ಕೆ ಮೂರರ ಪ್ರಮಾಣದಲ್ಲಿವೆ. ಬಿಳಿ ಪಟ್ಟಿಯ ಮಧ್ಯದಲ್ಲಿ ಸಮುದ್ರ ನೀಲಿ ಬಣ್ಣದಲ್ಲಿ ಒಂದು ಚಕ್ರವಿದೆ. ಸಾರನಾಥದಲ್ಲಿ ಅಶೋಕ ಸಿಂಹ ಸ್ತಂಭದ ಚೌಕಟ್ಟಿನ ಮೇಲಿನ ಚಕ್ರವೇ ಇದು. ಅದರ ವ್ಯಾಸವು ಸುಮಾರು ಬಿಳಿ ಪಟ್ಟಿಯ ಅಗಲದಷ್ಟಿದ್ದು, ಅದಕ್ಕೆ ೨೪ ಅರೆಗಳಿವೆ.



ರಾಷ್ಟ್ರ ಲಾಂಛನ



ಭಾರತ ಸರಕಾರವು ೧೯೫೦ರ ಜನವರಿ ೨೬ ರಂದು ಅಂಗೀಕರಿಸಿದ ಭಾರತದ ರಾಷ್ಟ್ರೀಯ ಲಾಂಛನವು ಸಿಂಹಗಳಿರುವ ಸಾರನಾಥದ ಅಶೋಕ ಸ್ತಂಭವಾಗಿದ್ದು, ಅದನ್ನು ಸಾರನಾಥದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಮಹಾತ್ಮ ಬುದ್ಧನು ತನ್ನ ಶಿಷ್ಯರಿಗೆ ಪ್ರಥಮ ಬೋಧನೆಯನ್ನಿತ್ತ ಸಾರನಾಥದ ಜಾಗದಲ್ಲಿ ಅಶೋಕನು ಈ ಸ್ತಂಭವನ್ನು ಸ್ಥಾಪಿಸಿದ್ದನು.

ಮೂಲ ರೂಪದಲ್ಲಿ ನಾಲ್ಕು ಸಿಂಹಗಳಿದ್ದು, ಈ ಲಾಂಛನದಲ್ಲಿ ಕೇವಲ ಮೂರು ಸಿಂಹಗಳು ಕಾಣುತ್ತವೆ, ನಾಲ್ಕನೆಯದು ಮರೆಯಲ್ಲಿದೆ. ಮೂಲ ರೂಪದಲ್ಲಿರುವ ಘಂಟೆಯಾಕಾರದ ಕಮಲದ ಪುಷ್ಪವು ಈ ಲಾಂಛನದಲ್ಲಿ ಲುಪ್ತವಾಗಿದೆ. ಚೌಕಟ್ಟಿನ ಮಧ್ಯದಲ್ಲಿ ಚಕ್ರವು ಸ್ಪಷ್ಟವಾಗಿ ಕಾಣುತ್ತದೆ. ಬಲಭಾಗದಲ್ಲಿ ಒಂದು ಎತ್ತು ಮತ್ತು ಎಡಭಾಗದಲ್ಲಿ ಒಂದು ಕುದುರೆ ಇದ್ದು, ಇತರ ಚಕ್ರಗಳ ರೂಪರೇಖೆಗಳು ತೀರ ಬಲ ಮತ್ತು ಎಡ ಭಾಗಗಳಲ್ಲಿವೆ. ಚೌಕಟ್ಟಿನ ಕೆಳಭಾಗದಲ್ಲಿ ದೇವನಾಗರಿ ಲಿಪಿಯಲ್ಲಿ 'ಸತ್ಯಮೇವ ಜಯತೆ' (ಸತ್ಯಕ್ಕೇ ಜಯ) ಎಂಬ ವಾಕ್ಯವನ್ನು ಕೆತ್ತಲಾಗಿದೆ.

ಮುನ್ನುಡಿ

ಭಾರತದ ಸ್ವಾತಂತ್ರ್ಯ ಚಳುವಳಿಯ ವಿವಿಧ ಮುಖಗಳನ್ನೂ, ವಿವಿಧ ಘಟನೆಗಳನ್ನೂ ಒಳಗೊಂಡ ಅನೇಕ ಗ್ರಂಥಗಳು ಹಾಗೂ ವರದಿಗಳು ಇರುವುದಾದರೂ, ಇದರ ಸಂಕ್ಷಿಪ್ತ ವಿವರಣೆಯ ಅವಶ್ಯಕತೆಯನ್ನು ಪೂರೈಸುವ ದೃಷ್ಟಿಯಿಂದ ಪ್ರೊ| ಎ. ಪಿ. ಶ್ರೀನಿವಾಸಮೂರ್ತಿಯವರು ಈ ಪುಸ್ತಕವನ್ನು ಬರೆದಿರುತ್ತಾರೆ. ಭಾರತದ ಸುದೀರ್ಘ ಇತಿಹಾಸದಲ್ಲಿ ಒಂದು ಅತ್ಯಂತ ಮುಖ್ಯ ಅಧ್ಯಾಯದ ಪರಿಚಯವನ್ನು ನಮ್ಮ ದೇಶದ ಯುವ ಜನಾಂಗಕ್ಕೆ ಮಾಡಿಕೊಡುವುದಕ್ಕೂ, ಮಹಾ ಪ್ರಮುಖ ಮುಂದಾಳುಗಳ ಸ್ಫೂರ್ತಿದಾಯಕ ನೇತೃತ್ವದಲ್ಲಿ ಭಾರತದ ಜನತೆಯು ನಡೆಸಿದ ಸ್ವಾತಂತ್ರ್ಯ ಸಂಗ್ರಾಮದ ಹಿಂದೆ ಅಡಗಿದ್ದ ಗುರಿಗಳನ್ನೂ, ಧ್ಯೇಯಗಳನ್ನೂ ನಮ್ಮ ಯುವ ಜನಾಂಗಕ್ಕೆ ಪರಿಚಯ ಮಾಡಿಕೊಡುವುದಕ್ಕೂ, ರಾಷ್ಟ್ರೀಯ ಸಂಘಟನೆ, ರಾಷ್ಟ್ರ ಪುನರುಜ್ಜೀವನ ಮತ್ತು ರಾಷ್ಟ್ರ ಪ್ರಗತಿಯ ಕಾರ್ಯನಿರ್ವಹಣೆಯಲ್ಲಿ ಅವರು ಭಾರತ ಮಾತೆಯ ಸುಪುತ್ರ ಸುಪುತ್ರಿಯರಾಗಿ ತಮ್ಮ ಪಾತ್ರವನ್ನು ಕೈಕೊಳ್ಳುವಂತೆ ಅವರನ್ನು ಪ್ರೇರೇಪಿಸುವುದಕ್ಕೂ, ನಮ್ಮ ಸ್ವಾತಂತ್ರ್ಯ ಚಳುವಳಿಯ ಒಂದು ಸುಸಂಬದ್ಧ ಹಾಗೂ ಸಂಕ್ಷಿಪ್ತ ವಿವರಣೆಯು ತುಂಬ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

ಲೇಖಕರು ಅಂತಹ ಕೃತಿ ರಚನೆ ಬಗ್ಗೆ ಆಲೋಚಿಸುತ್ತಿದ್ದ ಸಮಯದಲ್ಲಿ ಡೆಲ್ಲಿ ಪ್ರಾಧಿಕಾರವು ಸ್ವಾತಂತ್ರ್ಯ ಚಳುವಳಿಯನ್ನು ಕುರಿತ ಗ್ರಂಥಕ್ಕೆ ಬಹುಮಾನ ಯೋಜನೆಯನ್ನು ಪ್ರಕಟಿಸಿತು. ಇದು ಅವರಿಗೆ ಈ ವಿಷಯ ಕುರಿತ ಹೆಚ್ಚು ಆಳವಾದ ಅಧ್ಯಯನಕ್ಕೆ ಪ್ರೇರಣೆಯಾಯಿತು. ಹೀಗೆ ಇವರು ಇಂಗ್ಲಿಷ್‌ನಲ್ಲಿ ಬರೆದ "ಭಾರತ ಸ್ವಾತಂತ್ರ್ಯ ಚಳುವಳಿಯ ಇತಿಹಾಸ, 1857–1947" ಎಂಬ ಹಸ್ತಪ್ರತಿಗೆ ಈ ಅಖಿಲ ಭಾರತ ಸ್ಪರ್ಧೆಯಲ್ಲಿ ಯೋಗ್ಯತಾ ಪ್ರಶಸ್ತಿ ಲಭಿಸಿತು.

ಪ್ರೊ| ಶ್ರೀನಿವಾಸಮೂರ್ತಿಯವರು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲಿಯೂ ಚೆನ್ನಾಗಿ ನುರಿತ ಬರಹಗಾರರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇವರು ಪದವಿ ಹಾಗೂ ಪದವಿಯೋತ್ತರ ತರಗತಿಗಳಿಗೆ

ಪಾಠ ಹೇಳಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಸ್ವತಃ ಸಂಶೋಧನೆಯನ್ನು ನಡೆಸಿ, ಸುಮಾರು ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿ ಗಣ್ಯ ಸ್ಥಾನ ಪಡೆದಿದ್ದಾರೆ. ಇವರು ಅನೇಕ ಲೇಖನಗಳನ್ನೂ, ಮೂವತ್ತು ಗ್ರಂಥಗಳನ್ನೂ ಬರೆದಿರುತ್ತಾರೆ ಹಾಗೂ ಇವರ ಕೆಲವು ಗ್ರಂಥಗಳಿಗೆ ಪ್ರಶಸ್ತಿ ಲಭಿಸಿದೆ. ಇವರ ಬರಹಗಳು ಅರ್ಥಶಾಸ್ತ್ರಕ್ಕೆ ಮಾತ್ರ ಸೀಮಿತವಾಗದೆ ಇತರ ಕ್ಷೇತ್ರಗಳಿಗೂ ಹರಡಿವೆ. ಇವರು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆದಿರುವ ಸರ್ ಎಂ. ವಿಶ್ವೇಶ್ವರಯ್ಯನವರ ಅತ್ಯಂತ ಉಪಯುಕ್ತವಾದ ಜೀವನಚರಿತ್ರೆಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

ಪ್ರಸಕ್ತ ಪುಸ್ತಕದ ಕೊನೆಯಲ್ಲಿ ಇವರು ಕೊಟ್ಟಿರುವ ಆಧಾರ ಗ್ರಂಥಗಳ ಪಟ್ಟಿಯು ಸೂಚಿಸುವಂತೆ, ಈ ಪುಸ್ತಕವು ಅನೇಕ ಮೂಲ ಗ್ರಂಥಗಳ ಅಧ್ಯಯನ ಹಾಗೂ ಇವರ ಸಂಶೋಧನಾ ಪ್ರವೃತ್ತಿಯ ಫಲವಾಗಿದೆ. ವಿವಿಧ ಮೂಲಗಳಿಂದ ಸಂಗ್ರಹಿಸಿದ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳನ್ನು ನಿಷ್ಪಕ್ಷಪಾತ ಧೋರಣೆಯಿಂದ ತುಲನೆಮಾಡಿ ವಿವರಿಸಿರುತ್ತಾರೆ. ಘಟನೆಗಳ ನಿರೂಪಣೆ ಕ್ರಮಬದ್ಧವಾಗಿಯೂ, ಖಚಿತವಾಗಿಯೂ, ಆಸಕ್ತಿದಾಯಕವಾಗಿಯೂ ಇದೆ. ಚಳುವಳಿಯಲ್ಲಿ ಭಾಗವಹಿಸಿದ್ದ ಗಣ್ಯ ವ್ಯಕ್ತಿಗಳ ಪ್ರಕಾಶಮಾನ ಚಿತ್ರಣವೂ, ಸ್ವಾತಂತ್ರ್ಯ ಸಂಗ್ರಾಮದ ದೀರ್ಘ ಪಥದಲ್ಲಿ ಸಕ್ರಿಯವಾಗಿದ್ದ ವಿವಿಧ ಶಕ್ತಿಗಳ ಹಾಗೂ ದೈವಲೀಲೆಯ ಏರಿಳಿತಗಳ ವಿವರಣೆಯೂ ಸಮಂಜಸವಾಗಿವೆ.

ಈ ಅಧ್ಯಯನವು 1857 ರಿಂದ 1947ರ ವರೆಗಿನ – ಅಂದರೆ ಮೊದಲ ಸ್ವಾತಂತ್ರ್ಯ ಯುದ್ಧದಿಂದ 1947ರ ಭಾರತದ ಸ್ವಾತಂತ್ರ್ಯ ಮಸೂದೆಯ ವರೆಗಿನ ಆಗುಹೋಗುಗಳನ್ನು ಒಳಗೊಂಡಿರುವುದಾದರೂ, ಇದರಲ್ಲಿ 1857ಕ್ಕೆ ಹಿಂದಿನ ಕಾಲದ ಅವಶ್ಯಕ ಹಿನ್ನೆಲೆಯ ವಿಷಯಗಳನ್ನೂ ಕೊಡಲಾಗಿದೆ. ಹೀಗೆ, ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಈಸ್ಟ್ ಇಂಡಿಯ ಕಂಪನಿಯೊಂದನ್ನು ವ್ಯವಸ್ಥೆಗೊಳಿಸಿಕೊಂಡು ಹೇಗೆ ಭಾರತವನ್ನು ರಾಜಕೀಯವಾಗಿ ವಶಪಡಿಸಿಕೊಂಡರೆಂಬುದರ ಸ್ಪಷ್ಟ ಚಿತ್ರವಿದೆ. ಮುಖ್ಯವಾಗಿ ಇಂಗ್ಲೆಂಡಿನ ಹಾಗೂ ಇಂಗ್ಲಿಷ್ ಭಾಷೆಯ ಮೂಲಕ ಸ್ಥಾಪನೆಯಾದ ಪಾಶ್ಚಾತ್ಯ ಸಂಪರ್ಕದ ಪ್ರಭಾವವು ಹೇಗೆ ನಮ್ಮ ದೇಶದ ಜನತೆಯ ಮನಸ್ಸನ್ನು

ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳ ಅವಶ್ಯಕತೆಗಳ ಕಡೆಗೆ ತಿರುಗಿಸಿತೆಂಬುದನ್ನೂ; ರಾಜಾ ರಾಂಮೋಹನ ರಾಯ್ ಅವರ ಬ್ರಹ್ಮ ಸಮಾಜ, ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜ ಇಂತಹ ಹೊಸ ಸಂಸ್ಥೆಗಳು ಭಾರತದ ಸ್ವಚ್ಛ ಸಂಸ್ಕೃತಿಯನ್ನು ಹೇಗೆ ಬೆಳಗಿಸಿದವೆಂಬುದನ್ನೂ ಮತ್ತು ಈ ಚಳುವಳಿಗಳೆಲ್ಲವೂ ನಿರ್ಮಿಸಿದ ರಾಷ್ಟ್ರೀಯತಾ ವಾತಾವರಣವು 1857ರ ದಂಗೆಯಿಂದ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗೆ ಹೊಂದಿದ್ದ ಸಂಬಂಧವನ್ನೂ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿದ್ದ ಭಾರತವನ್ನು ಬ್ರಿಟಿಷ್ ಮಹಾರಾಣಿಯವರು ತಮ್ಮ ನೇರ ಆಳ್ವಿಕೆಗೆ ವಹಿಸಿಕೊಂಡುದುದನ್ನೂ ವಿವರಿಸಲಾಗಿದೆ.

ನಂತರ ಪುಸ್ತಕದ ಮುಖ್ಯ ವಿಷಯವಾದ 1857ರ ತರುವಾಯದ ಘಟನೆಗಳ ವಿವರಣೆ ಕೈಗೊಳ್ಳಲಾಗಿದೆ. ಬ್ರಿಟಿಷ್ ಅಧಿಕಾರಶಾಹಿಯು "ವಿಭಜಿಸಿ ಆಳು" (ಡಿವೈಡ್ ಅಂಡ್ ರೂಲ್) ಎಂಬ ನೀತಿಯನ್ನು ಉದ್ದಕ್ಕೂ ಅನುಸರಿಸುತ್ತಾ ಬಂದು, ಈ ಮೂಲಕ ತನ್ನ ಆಳ್ವಿಕೆಯನ್ನು ಭದ್ರಪಡಿಸಲು ಕಾಲಕಾಲಕ್ಕೆ ಕೈಗೊಂಡ ಕ್ರಮಗಳನ್ನೂ, ಇದರೊಡನೆಯೇ ಆಗಿಂದಾಗ್ಗೆ ಅಲ್ಪಸ್ವಲ್ಪ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವ ಪ್ರಯತ್ನ ಮಾಡಿದುದನ್ನೂ (1857ಕ್ಕೂ ಮುಂಚೆ ಕೈಗೊಂಡ ರೆಗ್ಯುಲೇಟಿಂಗ್ ಮಸೂದೆ, ಪಿಟ್ಸ್ ಇಂಡಿಯಾ ಮಸೂದೆ, ಛಾರ್ಟರ್ ಮಸೂದೆಗಳಿಂದಲೂ ಆರಂಭಿಸಿ) ನಿರೂಪಿಸಿರುತ್ತಾರೆ. ಭಾರತ ಸಂವಿಧಾನ ಸುಧಾರಣೆಗಳಲ್ಲಿ 1909ರ "ಮಿಂಟೋ – ಮಾರ್ಲೆ" ಸುಧಾರಣೆಗಳು ಮೊದಲನೆಯ ಮುಖ್ಯ ಹೆಜ್ಜೆಯಾಗಿವೆ. ಇದು ವಿಧಾನಸಭೆಗಳಲ್ಲಿ ಜನಾಭಿಪ್ರಾಯಕ್ಕೆ ಅಲ್ಪಸ್ವಲ್ಪ ಅವಕಾಶ ಮಾಡಿಕೊಡುವುದರ ಜೊತೆಗೆಯೇ ಮುಸಲ್ಮಾನರಲ್ಲಿ ಪ್ರತ್ಯೇಕತಾ ಭಾವನೆಯನ್ನು ಉತ್ತೇಜಿಸಿ, ಮತೀಯ ಪ್ರಾತಿನಿಧ್ಯದ ಬೀಜಗಳನ್ನು ಬಿತ್ತಿತು. ಆ ವೇಳೆಗೆ, ಭಾರತೀಯರ ರಾಷ್ಟ್ರೀಯ ಕಾಂಗ್ರೆಸ್ಸು, ದೇಶದ ಆಳ್ವಿಕೆಯಲ್ಲಿ ಜನತೆಗೆ ಸಹಜವಾಗಿ ಸಲ್ಲಬೇಕಾದ ಪಾತ್ರದ ಬಗ್ಗೆ ಪ್ರಜ್ಞೆ ಹೊಂದಿದ್ದ ವಿದ್ಯಾವಂತ ಭಾರತೀಯರ ವ್ಯವಸ್ಥೆಯಾಗಿ ಕ್ರಿಯಾಶೀಲವಾಗಿದ್ದಿತು. ಇಂಗ್ಲಿಷ್ ವಿದ್ಯಾಭ್ಯಾಸ ಹಾಗೂ ಪಾಶ್ಚಾತ್ಯ ಸಂಪರ್ಕದಿಂದ ಉಂಟಾಗಿದ್ದ ಪ್ರಜಾಪ್ರಭುತ್ವ ಭಾವನೆಗಳು, ಪ್ರಜಾಪ್ರತಿನಿಧಿ ಸರ್ಕಾರ

ಮತ್ತು ಮಾನವ– ಹಕ್ಕುಗಳ ಭಾವನೆಗಳು ಇವೆಲ್ಲವೂ ಅನೇಕ ಭಾರತೀಯರ ಮನಸ್ಸನ್ನು ಹೊಕ್ಕಿದ್ದವು. ಈ ಹಂತದಲ್ಲಿ ಭಾರತೀಯ ಕಾಂಗ್ರೆಸ್ಸು ದೇಶಕ್ಕೆ ಸ್ವಯಂ ಆಡಳಿತ ಗಳಿಸುವ ತನ್ನ ಉದ್ದೇಶ ಸಾಧನೆಗೆ ಪಾಶ್ಚಾತ್ಯ ರಾಜಕೀಯ ಚಿಂತನೆಯ ಉದಾರವಾದ ಧ್ಯೇಯಗಳನ್ನು ಪ್ರತಿಪಾದಿಸಿತು. ಅನಿ ಬೆಸಾಂಟ್ ಮತ್ತು ಲೋಕಮಾನ್ಯ ತಿಲಕ್‌ರವರ ಪ್ರಭಾವಶಾಲಿ ನೇತೃತ್ವದಲ್ಲಿ ಕಾರ್ಯಾ ಚರಣೆ ನಡೆಸಿದ "ಹೋಂ ರೂಲ್ ಲೀಗ್"ಗಳು ಈ ಉದಾರ ಧ್ಯೇಯ ಪ್ರತಿಪಾದನಾ ಚಳುವಳಿಯಲ್ಲಿ ಮುಖ್ಯ ಪಾತ್ರವಹಿಸಿದುವು. ಪ್ರಥಮ ಪ್ರಪಂಚ ಯುದ್ಧ ಸ್ಫೋಟಿಸಿದುದು ಮತ್ತು ಮಿತ್ರ ರಾಷ್ಟ್ರಗಳು ಘೋಷಿಸಿದ ಯುದ್ಧದ ಘನ ಉದ್ದೇಶಗಳು ಚಳುವಳಿಗೆ ಪುಷ್ಟಿ ನೀಡಿದಂತಾಯಿತು. ಚಳುವಳಿಯು ಹೀಗೆ ಮುಂದುವರಿಯುತ್ತಿದ್ದ ಸಂದರ್ಭದಲ್ಲಿಯೇ ಬ್ರಿಟಿಷ್ ಸರ್ಕಾರವು 'ಮಾಂಟೆಗು – ಚೆಮ್ಸ್‌ಫರ್ಡ್' ಸುಧಾರಣೆಗಳನ್ನು ಜಾರಿಗೆ ತರು ವುದರ ಮೂಲಕ ಪ್ರಾಂತ್ಯಗಳ ಆಡಳಿತದಲ್ಲಿ ಜನತಾ ಪ್ರತಿನಿಧಿಗಳಿಗೆ ಆಗ ಇದ್ದುದಕ್ಕಿಂತ ಸ್ವಲ್ಪ ಹೆಚ್ಚು ಅವಕಾಶ ಮಾಡಿಕೊಟ್ಟಿತು; ಆದರೆ, ಮತೀಯ ಪ್ರಾತಿನಿಧ್ಯ ತತ್ವವನ್ನೂ ಮುಂದುವರಿಸಿತು. ಪ್ರಥಮ ಪ್ರಪಂಚ ಯುದ್ಧ ಮುಗಿದ ತರುಣದಲ್ಲಿಯೇ ಸರ್ಕಾರವು "ರೌಲೆಟ್ ಮಸೂದೆಗಳನ್ನು" ಜಾರಿಗೆ ತರುವುದರ ಮೂಲಕ ಜನರ ಮೂಲಭೂತ ಹಕ್ಕುಗಳಿಗೆ ತೀವ್ರವಾದ ಧಕ್ಕೆ ಉಂಟುಮಾಡಿತು. ಈ ಮಸೂದೆಗಳ ವಿರುದ್ಧ ದೇಶದ ಜನತೆ ಪ್ರತಿಭಟಿಸಿತು. ಆಗ, ಆಫ್ರಿಕದಲ್ಲಿ ಸತ್ಯಾಗ್ರಹದ ಮೂಲಕ ಯಶಸ್ಸು ಗಳಿಸಿ ಕೀರ್ತಿ ಪಡೆದಿದ್ದ ಮಹಾತ್ಮಾ ಗಾಂಧಿಯವರು ಸ್ವದೇಶಕ್ಕೆ ಮರಳಿ, ಈ ಮಸೂದೆಗಳನ್ನು ವಿರೋಧಿಸಿ ಸತ್ಯಾಗ್ರಹ ಹೂಡಿದರು. ಜಲಿಯನ್‌ವಾಲಾ ಬಾಗ್ ಹತ್ಯಾ ಕಾಂಡ ಮತ್ತು ಬ್ರಿಟಿಷರ ಇತರ ಅಮಾನುಷ ದಮನ ಕಾರ್ಯಗಳು ಹಿಂಬಾ ಲಿಸಿ ಬಂದವು. ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಬ್ರಿಟಿಷ್ ಸರ್ಕಾರವು ಕೈಗೊಳ್ಳುತ್ತಿದ್ದ ಕ್ರೂರ ಕ್ರಮಗಳನ್ನು ಅದು ಸಮರ್ಥಿಸಿಕೊಳ್ಳುತ್ತಾ ಇತ್ತೇ ವಿನಾ, ಜನತೆಯ ಸಾವುನೋವುಗಳ ಬಗ್ಗೆ ಸ್ವಲ್ಪವೂ ಅದು ಪಶ್ಚಾತ್ತಾಪ ತೋರಿಸಲಿಲ್ಲ. ಆದುದರಿಂದ, 1920ರಲ್ಲಿ ಮಹಾತ್ಮಾ ಗಾಂಧಿ ಯವರ ಸರ್ವೋಚ್ಚ ನಾಯಕತ್ವದಲ್ಲಿ ಅಸಹಕಾರ ಚಳುವಳಿ ಪ್ರಾರಂಭ ವಾಯಿತು. ಚಳುವಳಿಯ ಪಥದಲ್ಲಿ ಏರುಪೇರುಗಳಿದ್ದವು. 1930ರಲ್ಲಿ ಗಾಂಧಿಜಿಯವರು ಕೈಗೊಂಡ ಚರಿತ್ರಾರ್ಹವಾದ ಉಪ್ಪಿನ ಸತ್ಯಾಗ್ರಹಕ್ಕೆ

ದೇಶದಾದ್ಯಂತವೂ ಜನತೆಯ ಬೆಂಬಲ ದೊರಕಿ ಅದು ಯಶಸ್ವಿಯಾಗಿ ನಡೆಯಿತು. ಅಷ್ಟರಲ್ಲಿಯೇ, ಭಾರತದ ರಾಜಕೀಯ ಸಮಸ್ಯೆಯ ಪರಿಹಾರಕ್ಕಾಗಿ ಬ್ರಿಟಿಷ್ ಸರ್ಕಾರವು ದುಂಡುಮೇಜಿನ ಸಮ್ಮೇಳನವೊಂದನ್ನು ಏರ್ಪಡಿಸಿತು. ಗಾಂಧಿ – ಇರ್ವಿನ್ ಒಪ್ಪಂದದೊಡನೆ ಉಪ್ಪಿನ ಸತ್ಯಾಗ್ರಹ ನಿಂತ ಮೇಲೆ ಗಾಂಧೀಜಿಯವರು ಲಂಡನ್ನಿನಲ್ಲಿ ಜರುಗಿದ ಎರಡನೆಯ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು. ಆದರೆ, ಭಾರತದ ನಿಯೋಗಗಳೊಳಗಿದ್ದ ಭೇದ ಹಾಗೂ ಪ್ರತಿಗಾಮಿ ಶಕ್ತಿಗಳನ್ನು ಉಪಾಯದಿಂದ ಉಪಯೋಗಿಸಿಕೊಂಡು ಬ್ರಿಟಿಷ್ ಸರ್ಕಾರವು ಭಾರತಕ್ಕೆ ಪ್ರಜಾಸತ್ತಾತ್ಮಕ ಆಡಳಿತ ಯೋಜನೆಯನ್ನು ರೂಪಿಸುವ ಕಾರ್ಯವನ್ನು ತಡೆಹಿಡಿಯಿತು. ತರುವಾಯ, 1932ರಲ್ಲಿ ಸತ್ಯಾಗ್ರಹ ಚಳುವಳಿಯನ್ನು ಕಾಂಗ್ರೆಸ್ಸು ಮುಂದುವರಿಸಿತು. ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ಸು ಮತ್ತು ಬ್ರಿಟನ್ನಿನ ಲೇಬರ್ ಪಕ್ಷಗಳು ಪಾಲ್ಗೊಳ್ಳದಿದ್ದ ಇನ್ನೊಂದು ದುಂಡುಮೇಜಿನ ಸಮ್ಮೇಳನವನ್ನು ಕರೆದು ಈ ಸಂಕುಚಿತ ಸಮ್ಮೇಳನದ ನಿರ್ಣಯಾನುಸಾರ ಒಂದು ರಾಜ್ಯಾಂಗ ಮಸೂದೆಯನ್ನು 1935ರಲ್ಲಿ ಜಾರಿಗೆ ತಂದಿತು. ಈ ರಾಜ್ಯಾಂಗ ಸುಧಾರಣೆಯು ದೇಶೀಯ ಸಂಸ್ಥಾನಗಳನ್ನು ಒಳಗೊಂಡ ಸಮಗ್ರ ಭಾರತದ ಫೆಡರಲ್ ರಚನೆಯನ್ನೂ, ಬಹುಮಟ್ಟಿನ ಪ್ರಾಂತೀಯ ಸ್ವಾತಂತ್ರ್ಯವನ್ನೂ ಒಳಗೊಂಡಿದ್ದಿತು. ದೇಶೀಯ ರಾಜರುಗಳು ಒಪ್ಪದಿದ್ದುದರಿಂದ ಸಮಗ್ರ ಫೆಡರಲ್ ರಚನೆಯ ಭಾಗವನ್ನು ಕೈಬಿಡಲಾಯಿತು. ಹೊಸ ರಾಜ್ಯಾಂಗದ ಪ್ರಕಾರ ಪ್ರಾಂತೀಯ ವಿಧಾನಸಭೆಗಳಿಗೆ ನಡೆಸಲಾದ ಚುನಾವಣೆಗಳಲ್ಲಿ ಅನೇಕ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಬಹುಮತ ಗಳಿಸಿ, ಸರ್ಕಾರ ರಚಿಸಲು ಒಪ್ಪಿತು. ಈ ಸುಧಾರಣೆ ಜಾರಿಗೆ ಬಂದ ಸ್ವಲ್ಪ ಕಾಲದಲ್ಲಿಯೇ ಎರಡನೆ ಪ್ರಪಂಚ ಯುದ್ಧ ಆರಂಭವಾದಾಗ, ಕಾಂಗ್ರೆಸ್ ಸರ್ಕಾರಗಳೊಡನೆ ಸಮಾಲೋಚಿಸದೆಯೇ ಬ್ರಿಟಿಷ್ ಸರ್ಕಾರವು ಭಾರತವನ್ನೂ ತನ್ನೊಡನೆ ಯುದ್ಧಕ್ಕೆ ಸೆಳೆದುಕೊಂಡುದುದರಿಂದ ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜೀನಾಮೆಯಿತ್ತವು. ಸ್ವಾತಂತ್ರ್ಯ ಚಳುವಳಿ ಮುಂದುವರಿಯಿತು. ಫಾಸಿಸ್ಟ್ ಹಾಗೂ ನಾಜಿ ಸರ್ವಾಧಿಕಾರದ ವಿರುದ್ಧವಾಗಿಯೂ, ಸ್ವಯಂನಿರ್ಣಯಾಧಿಕಾರ ಹಕ್ಕಿಗೂ, ಪ್ರಜಾಸತ್ತಾತ್ಮಕ ಪದ್ಧತಿಯ ಪರ

ವಾಗಿಯೂ ಯುದ್ಧವನ್ನು ನಡೆಸುತ್ತಿರುವುದೆಂದು ಮಿತ್ರ ರಾಷ್ಟ್ರಗಳು, ಅಟ್ಲಾಂಟಿಕ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದುದರಿಂದ ಕಾಂಗ್ರೆಸ್ಸು, ಭಾರತಕ್ಕೂ ಪ್ರಜಾ ಪ್ರತಿನಿಧಿ ಸರ್ಕಾರ ಕೊಡಲು ಬ್ರಿಟನ್ನು ಒಪ್ಪಿದರೆ, ಯುದ್ಧ ಕಾರ್ಯದಲ್ಲಿ ಪೂರ್ಣವಾಗಿ ಸಹಕರಿಸುವುದೆಂದು ಹೇಳಿತು. ಆದರೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅವರು ಅಟ್ಲಾಂಟಿಕ್ ಪ್ರಣಾಳಿಕೆ ಭಾರತ ದಂತಹ ಬ್ರಿಟಿಷ್ ಅಧೀನ ರಾಷ್ಟ್ರಗಳಿಗೆ ಅನ್ವಯಿಸದು ಎಂದು ಪ್ರಕಟಿಸಿದರು.

ಆದಾಗ್ಯೂ ಯುದ್ಧ ಪರಿಸ್ಥಿತಿ ಗಂಭೀರವಾಗತೊಡಗಿದುದರಿಂದ, ಬ್ರಿಟಿಷ್ ಸರ್ಕಾರವು ಭಾರತ ರಾಜ್ಯಾಂಗ ಸಮಸ್ಯೆಯ ನಿವಾರಣೆಗೆ ಪ್ರಯತ್ನ ಮುಂದುವರಿಸಿ "ಕ್ರಿಪ್ಸ್ ನಿಯೋಗ"ವನ್ನು ಭಾರತಕ್ಕೆ ಕಳಿಸಿತು. ಈ ಪ್ರಯತ್ನವೂ ವಿಫಲವಾಯಿತು. ಕಾಂಗ್ರೆಸ್ಸು "ಬ್ರಿಟಿಷರೇ, ಭಾರತ ಬಿಟ್ಟು ಹೊರಡಿ" (ಕ್ವಿಟ್ ಇಂಡಿಯಾ) ಚಳುವಳಿಯನ್ನು ಆರಂಭಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಸರ್ಕಾರವು ಹಠಾತ್ತಾಗಿ ಗಾಂಧೀಜಿಯವರನ್ನೂ, ಕಾಂಗ್ರೆಸ್ ಕಾರ್ಯಕರ್ತರನ್ನೂ, ಇತರ ಮುಖಂಡರುಗಳನ್ನೂ ಬಂಧಿಸಿತು. ಆದರೆ, ಜನರು ಈ ಬೆಳವಣಿಗೆಗೆ ತಲೆಬಾಗುವಂತಿರಲಿಲ್ಲ. ಅವರು ರೊಚ್ಚಿಗೆದ್ದರು. ರಾಷ್ಟ್ರಾದ್ಯಂತ ಪ್ರಚಂಡ ಚಳುವಳಿ ಉಂಟಾಯಿತು. ನಾಯಕರಿಲ್ಲದೆ ಜನರು ಸ್ವಯಂಪ್ರೇರಿತರಾಗಿ ನಡೆಸಿದ ಚಳುವಳಿಯ ಕಾರ್ಯಾಚರಣೆಗಳಲ್ಲಿ ಕೆಲವೆಡೆ ಗಳಲ್ಲಿ ಹಿಂಸಾತ್ಮಕ ಘಟನೆಗಳೂ ಅನಿವಾರ್ಯವಾಗಿ ನಡೆದವು. ಅಷ್ಟರಲ್ಲಿಯೇ ಯುದ್ಧ ಮುಗಿಯಿತು. ಬದಲಾಯಿಸಿದ ಭಾರತದ ಆಂತರಿಕ ಪರಿಸ್ಥಿತಿ ಗಳನ್ನು, ಮುಖ್ಯವಾಗಿ ನೌಕಾದಳದವರು ದಂಗೆ ಎದ್ದುದನ್ನು, ಗಮನಿಸಿ ಭಾರತವನ್ನು ಇನ್ನು ಮುಂದೆ ಸೈನ್ಯ ಬಲದ ಆಧಾರದ ಮೇಲೆ ತನ್ನ ವಶದಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗುವುದಿಲ್ಲವೆಂಬ ಅಂಶವನ್ನು ಬ್ರಿಟಿಷ್ ಸರ್ಕಾರವು ಮನಗಂಡಿತು. ಬ್ರಿಟನ್ನಿನಲ್ಲಿಯೂ ಚರ್ಚಿಲ್‌ರವರ ಕನ್ಸರ್‌ವೇಟಿವ್ ಪಕ್ಷದ ಬದಲಾಗಿ ಹೆಚ್ಚು ಉದಾರ ಧೋರಣೆ ಹೊಂದಿದ್ದ ಲೇಬರ್ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಈ ಹೊಸ ಲೇಬರ್ ಪಕ್ಷದ ಸರ್ಕಾರವು ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲು ಅವಶ್ಯಕವಾದ ಪೂರ್ವ ಭಾವಿ ಕ್ರಮಗಳ ಬಗ್ಗೆ ಸಂಧಾನ ನಡೆಸಲು "ಕ್ಯಾಬಿನೆಟ್ ನಿಯೋಗ" ವೊಂದನ್ನು ಭಾರತಕ್ಕೆ ಕಳುಹಿಸಿತು. ಈ ನಿಯೋಗದ ಯೋಜನೆಯು ಪ್ರಥಮತಃ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳೆರಡಕ್ಕೂ ಒಪ್ಪಿಗೆ

ಯಾದಾಗ್ಯೂ, ತರುವಾಯ ಕೆಲವು ಷರತ್ತುಗಳ ಅರ್ಥ ವಿತರಣೆಯಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು. ಅಂತಿಮವಾಗಿ, ಭಾರತ ದೇಶದ ವಿಭಜನೆಯೊಡನೆ ಮಾತ್ರವೇ ಸ್ವಾತಂತ್ರ್ಯ ಬರುವಂತಾಯಿತು.

ಈ ಮೇಲೆ ಹೇಳಿರುವ ಎಲ್ಲಾ ಘಟನೆಗಳನ್ನೂ ಪುಸ್ತಕದಲ್ಲಿ ಸಾಕಷ್ಟು ವಿಸ್ತಾರವಾಗಿ ವಿವರಿಸಲಾಗಿದೆ. ಅಲ್ಲದೆ, ಸಂದರ್ಭೋಚಿತವಾಗಿ ಸ್ವಾತಂತ್ರ್ಯ ಚಳುವಳಿಗೆ ಸೇರುವ ಇನ್ನೂ ಕೆಲವು ವಿಷಯಗಳ ವಿವರಣೆಯೂ ಇದೆ. ಹೀಗೆ, ಚಳುವಳಿಯಲ್ಲಿ ಕ್ರಾಂತಿಕಾರ ಸಂಘದ ಅನೇಕ ವ್ಯಕ್ತಿಗಳು ದೇಶದಲ್ಲಿಯೂ, ಪರದೇಶಗಳಲ್ಲಿಯೂ ನಡೆಸಿದ ಕಾರ್ಯಾಚರಣೆಗಳನ್ನೂ ಅವರು ಮಾಡಿದ ಮಹತ್ವಪೂರ್ಣ ತ್ಯಾಗಗಳನ್ನೂ, ಸುಭಾಷ್‌ಚಂದ್ರ ಬೋಸ್ ಅವರು "ಆಜಾದ್ ಹಿಂದ್ ಸರ್ಕಾರ" ಸ್ಥಾಪಿಸಿ, ಭಾರತೀಯ ರಾಷ್ಟ್ರೀಯ ಸೇನೆ ಕಟ್ಟಿ ಬ್ರಿಟಿಷರ ವಿರುದ್ಧ ನಡೆಸಿದ ಸಂಗ್ರಾಮಗಳನ್ನೂ ವಿವರಿಸಲಾಗಿದೆ. ಹಿಂದೂ ಮಹಾಸಭಾದ ಉಗಮ ಹಾಗೂ ರಾಜಕೀಯ ಚಳುವಳಿಗೆ ಅದರ ಕೊಡುಗೆಯನ್ನೂ ಪ್ರಸ್ತಾಪಿಸಲಾಗಿದೆ. ಅಂತಿಮ ಘಟ್ಟದ ಆಗುಹೋಗುಗಳಲ್ಲಿ ದೇಶೀಯ ರಾಜರುಗಳ ಆಳ್ವಿಕೆಯಲ್ಲಿದ್ದ ರಾಜ್ಯಗಳ ಒಲವುಗಳು, ಇವುಗಳ ಬಗ್ಗೆ ಬ್ರಿಟಿಷ್ ಸರ್ಕಾರ ತಾಳಿದ ಧೋರಣೆ, ನಮ್ಮ ಮುಖಂಡರುಗಳು, ಮುಖ್ಯವಾಗಿ ಸರ್ದಾರ್ ವಲ್ಲಭ್‌ಭಾಯಿ ಪಟೇಲ್ ಅವರು, ಅನುಸರಿಸಿದ ವಿವೇಕಯುತ ಮಾರ್ಗದ ಪರಿಣಾಮವಾಗಿ ದೇಶೀಯ ಸಂಸ್ಥಾನಗಳು ಭಾರತದ ರಾಜಕೀಯ ಚೌಕಟ್ಟಿನೊಳಗೆ ಸೇರಿದುದು, ಇವು ಒಂದು ಮುಖ್ಯ ಭಾಗವಾಗಿದೆ.

ಒಟ್ಟಿನಲ್ಲಿ 1857 – 1947ರ ಅವಧಿಯ ಸ್ವಾತಂತ್ರ್ಯ ಚಳುವಳಿಯ ಸಮಗ್ರ ಹಾಗೂ ವಿವರವಾದ ಚಿತ್ರವನ್ನು ಈ ಪುಸ್ತಕದಲ್ಲಿ ನಾವು ಕಾಣಬಹುದು. ವಿವರಣೆಯು ಸ್ಪಷ್ಟವಾಗಿಯೂ, ಖಚಿತವಾಗಿಯೂ, ಸುಸಂಬದ್ಧವಾಗಿ ಹೆಣೆದುಕೊಂಡಂತೆಯೂ, ಓದುಗರಿಗೆ ಉಲ್ಲಾಸದಾಯಕವಾಗಿಯೂ ಇದೆ. ವಿಷಯಗಳ ನಿರೂಪಣೆ ವಸ್ತುನಿಷ್ಠವಾಗಿದೆ ಮತ್ತು ಲೇಖಕರ ಮನೋಧರ್ಮವನ್ನು ಪ್ರತಿಬಿಂಬಿಸುವಂತಿದೆ. ಯಾವುದೇ ಇತಿಹಾಸವು ಅದರ ತಾತ್ವಿಕ ಉದ್ದೇಶ ನೆರವೇರಿಸಬೇಕಾದರೆ ಇತಿಹಾಸಕಾರನು ತನ್ನ

ಮನೋಧರ್ಮ ಅನುಸರಿಸಿ ಘಟನೆಗಳ ಮೌಲ್ಯ ನಿರ್ಣಯ ಮಾಡುವುದು ಅನಿವಾರ್ಯ ಮತ್ತು ಅವಶ್ಯಕ.

ನಮ್ಮ ಪೂರ್ವಜರು ಸ್ವಾತಂತ್ರ್ಯ ಸಾಧನೆಗಾಗಿ ವಹಿಸಿದ ನಿಸ್ವಾರ್ಥ ಹಾಗೂ ಸಾಹಸಯುತ ಪಾತ್ರವನ್ನೂ, ವಿವಿಧ ಸಂಸ್ಥೆಗಳು ಕೈಗೊಂಡ ಕಾರ್ಯಾಚರಣೆಗಳು ಹಾಗೂ ಅವುಗಳು ಎದುರಿಸಬೇಕಾಗಿ ಬಂದ ಸಮಸ್ಯೆಗಳನ್ನೂ ವಿದ್ಯಾರ್ಥಿಗಳು ಮತ್ತು ಇತರ ಯುವಜನಾಂಗದವರು ಅಧ್ಯಯನ ಮಾಡುವುದರ ಮೂಲಕ ರಾಷ್ಟ್ರೀಯ ಸಂಘಟನೆ, ರಾಷ್ಟ್ರೀಯ ಪುನರುಜ್ಜೀವನ ಹಾಗೂ ರಾಷ್ಟ್ರದ ಏಳಿಗೆ ಕಾರ್ಯ ನಿರ್ವಹಣೆ ಮಾಡುವ ತಮ್ಮ ಕರ್ತವ್ಯಕ್ಕೆ ತಕ್ಕ ಸ್ಫೂರ್ತಿ ಪಡೆಯಲು ಈ ಪುಸ್ತಕವು ಸಹಾಯವಾಗುವುದೆಂಬುದೇ, ಹಿಂದೆಯೇ ಹೇಳಿರುವಂತೆ ಲೇಖಕರ ಆಕಾಂಕ್ಷೆಯಾಗಿದೆ. ವಸಾಹತು ಪದ್ಧತಿಯ ಸಂಬಂಧಗಳು ಹೇಗೆ ವಸಾಹತುಗಳನ್ನು ಹೊಂದುವವರನ್ನೂ ಮತ್ತು ವಸಾಹತುಗಳ ಜನತೆಯನ್ನೂ ನೈತಿಕ ಅಧೋಗತಿಗೆ ಇಳಿಸುವುವು ಎಂಬುದು ಒಂದು ಅತಿ ಮುಖ್ಯ ವಿಷಯವಾಗಿದೆ. ನಾವು ರಾಜಕೀಯ ಸ್ವಾತಂತ್ರ್ಯ ಗಳಿಸಿರುವೆವಾದರೂ, ನಮ್ಮಲ್ಲಿ ವಿಭಜನೆಗೆ ಕಾರಣವಾದ ಬೀಜಗಳು, ಪರ ರಾಷ್ಟ್ರಗಳ ಮೌಲ್ಯಗಳ ಅನುಕರಣೆಯೂ, ನೆರೆಹೊರೆ ರಾಷ್ಟ್ರಗಳ ಹುದುಗಿದ ಶತೃತ್ವವೂ ಸಕ್ರಿಯವಾಗಿ ಈಗಲೂ ಮುಂದುವರೆದಿವೆ. ನಮ್ಮ ದೇಶದ ಇತಿಹಾಸದಿಂದ ಸರಿಯಾದ ಪಾಠಗಳನ್ನು ಕಲಿತು, ಹಿಂದೆ ದುಷ್ಟ ಪ್ರವೃತ್ತಿಗಳನ್ನು ಹುಟ್ಟಿಸಿದ ಬೀಜಗಳನ್ನು ಬಿತ್ತಲು ಫಲವತ್ತಾದ ಪರಿಸ್ಥಿತಿಗೆ ಕಾರಣವಾದ ನಮ್ಮ ಸಾಮಾಜಿಕ ರಚನೆಯ ಹಾಗೂ ರಾಷ್ಟ್ರೀಯ ಗುಣಗಳ ದೌರ್ಬಲ್ಯವನ್ನು ತೊಡೆದುಹಾಕದಿದ್ದರೆ, ಈ ವಿನಾಶಕಾರಕ ಅಂಶಗಳು ಸಕ್ರಿಯವಾಗಿ ಮುಂದುವರಿಯುವುದಷ್ಟೇ ಅಲ್ಲದೆ ಇನ್ನೂ ತೀವ್ರ ಸ್ವರೂಪ ತಾಳುವುವು. ಈ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ಲೇಖಕರು ಅಕ್ಕಪಕ್ಕದ ರಾಷ್ಟ್ರಗಳೆಲ್ಲವೂ ಸೇರಿಕೊಂಡು ಅಂತರರಾಷ್ಟ್ರೀಯ ಪ್ರಾದೇಶಿಕ ಸಂಘವೊಂದನ್ನು ವಿಕಾಸಗೊಳಿಸುವುದರ ಅವಶ್ಯಕತೆಯನ್ನು ಸೂಚಿಸಿರುವುದು ಸಮಂಜಸವಾಗಿದೆ. ಈ ನಿಟ್ಟಿನಲ್ಲಿ ಪ್ರಾದೇಶಿಕ ಸಹಕಾರಕ್ಕಾಗಿ ದಕ್ಷಿಣ ಏಷ್ಯಾ ಸಂಘವೊಂದು 1985ರ ಕೊನೆಯಲ್ಲಿ ಸ್ಥಾಪನೆಯಾದುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ನಮ್ಮ ಯುವ ಜನಾಂಗದವರು

ನಮ್ಮ ದೇಶದ ಸತ್ಪ್ರಜೆಗಳಾಗುವುದಷ್ಟೇ ಅಲ್ಲದೆ ಪ್ರಪಂಚದ ಸತ್ಪ್ರಜೆಗಳಾಗುವುದನ್ನೂ ಕಲಿಯಬೇಕೆಂಬುದನ್ನು ಈ ಬೆಳವಣಿಗೆಯು ಸೂಚಿಸುವುದು.

ಕೊನೆಯಲ್ಲಿ, ಈ ಪುಸ್ತಕವು ಲೇಖಕರು ಆಶಿಸಿರುವಂತೆ ವಿದ್ಯಾರ್ಥಿಗಳು ಮತ್ತು ಯುವ ಜನಾಂಗದವರಷ್ಟೇ ಅಲ್ಲದೆ, ಎಲ್ಲರೂ ಓದಿ ಪ್ರಯೋಜನ ಪಡೆಯುವಂತಿದೆ ಎಂದು ಹೇಳಲಪೇಕ್ಷಿಸುತ್ತೇನೆ.

ಬೆಂಗಳೂರು — ನಿಟ್ಟೂರು ಶ್ರೀನಿವಾಸರಾವ್

13 · 6 · 1987

ಪೀಠಿಕೆ

ನಮ್ಮ ಭಾರತವನ್ನು ಬ್ರಿಟಿಷರ ಆಳ್ವಿಕೆಯಿಂದ ವಿಮುಕ್ತಿಗೊಳಿಸಿ ಅದನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲು ಭಾರತೀಯರು ನಡೆಸಿದ ದೀರ್ಘ ರಾಷ್ಟ್ರೀಯ ಚಳುವಳಿ ಕುರಿತು ಅನೇಕ ವಿವರವಾದ ಗ್ರಂಥಗಳು ಇರುವುದಾದರೂ ಮುಖ್ಯ ವಿಷಯಗಳನ್ನು ಒಳಗೊಂಡ ಸಂಕ್ಷಿಪ್ತವಾದ ಗ್ರಂಥವೊಂದು ಮುಖ್ಯವಾಗಿ ವಿದ್ಯಾರ್ಥಿ ವೃಂದಕ್ಕೆ ಉಪಯೋಗವಾಗಬಹುದೆಂಬ ದೃಷ್ಟಿಯಿಂದ **'ಭಾರತದ ಸ್ವಾತಂತ್ರ್ಯ ಚಳುವಳಿ 1857 – 1947'** ಎಂಬ ಈ ಗ್ರಂಥವನ್ನು ರಚಿಸಲಾಗಿದೆ.

ಭಾರತವನ್ನು ಬ್ರಿಟಿಷರು ವಶಪಡಿಸಿಕೊಂಡುದುದರ ಮುಖ್ಯ ಘಟ್ಟಗಳು, 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮ, ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆ, ಕಾಂಗ್ರೆಸ್ಸು, ಮುಸ್ಲಿಂ ಲೀಗು, ಹಿಂದೂ ಮಹಾಸಭೆ ಇವುಗಳ ಉಗಮ, ಭಾರತದ ಸಂವಿಧಾನಾತ್ಮಕ ಬೆಳವಣಿಗೆಯ ಹೆಗ್ಗುರುತುಗಳು, 1947ರಲ್ಲಿ ಸ್ವಾತಂತ್ರ್ಯ ಲಭಿಸುವವರೆಗೆ ಹಿಂಸಾವಾದಿ ಕ್ರಾಂತಿಕಾರಿಗಳೂ, ಅಹಿಂಸಾವಾದಿಗಳೂ ತಂತಮ್ಮದೇ ಆದ ಮಾರ್ಗಗಳಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ನಡೆಸಿದ ಹೋರಾಟ ಹಾಗೂ ಬ್ರಿಟಿಷ್ ಮತ್ತು ಭಾರತ ಸರ್ಕಾರಗಳು ಚಳುವಳಿಯ ದಮನಕ್ಕೆ ಬಲಪ್ರಯೋಗ ಹಾಗೂ 'ಒಡೆದು ಆಳು' ಅಥವಾ 'ವಿಭಜಿಸು, ಆಳು' (Divide and Rule) ಎಂಬ ಕುಯುಕ್ತಿಗಳನ್ನು ಉಪಯೋಗಿಸಿದ ಬಗೆ – ಇವೆಲ್ಲವನ್ನೂ ಸಂಗ್ರಹವಾಗಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ. 1919ರ ಲಷ್ಕರೀ ಶಾಸನ ಆಡಳಿತದಲ್ಲಿ ಪಂಜಾಬಿನಲ್ಲಿ ಸರ್ಕಾರವು ನಡೆಸಿದ ಘೋರ ದುಷ್ಕೃತ್ಯಗಳು, ಉಪ್ಪಿನ ಸತ್ಯಾಗ್ರಹಿಗಳ ಹಾಗೂ ಇತರ ಸ್ವಾತಂತ್ರ್ಯ ಚಳುವಳಿಕಾರರ ಮೇಲೆ ಪೋಲೀಸರ ದೌರ್ಜನ್ಯ, ಜೈಲುಗಳಲ್ಲಿ ಸ್ವಾತಂತ್ರ್ಯ ಹೋರಾಟದ ವೀರರು ಅನುಭವಿಸಿದ ಕಠಿಣ ಪರಿಸ್ಥಿತಿಗಳು ಇವುಗಳ ಸ್ಥೂಲ ಚಿತ್ರಣವನ್ನು ಅನುಬಂಧದಲ್ಲಿಯೂ, ಕೊನೆಯಲ್ಲಿ ಕೆಲವು ದೇಶಭಕ್ತಿ ಗೀತೆಗಳನ್ನೂ, ರಾಷ್ಟ್ರಗೀತೆಯನ್ನೂ ಕೊಡಲಾಗಿದೆ.

1928ರಲ್ಲಿ ಶಿವಮೊಗ್ಗ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ಮಹಾತ್ಮಾ ಗಾಂಧೀಜಿಯವರ ದರ್ಶನ ಹಾಗೂ ಸ್ಫೂರ್ತಿದಾಯಕ ಭಾಷಣ ದಿಂದ ಪ್ರಭಾವಿತರಾದ ಅನೇಕ ಬಾಲಕರಲ್ಲಿ ನಾನೂ ಸೇರಿದ್ದೆ. ನಮ್ಮನ್ನು 'ಪ್ರಭಾತ್ ಫೇರಿ'ಗೆ[1] ಕರೆದುಕೊಂಡು ಹೋಗುತ್ತಿದ್ದ ನಮ್ಮ ಕೆಲವು ಉಪಾಧ್ಯಾಯರೂ, ನಾವು ಸೇರಿದ್ದ ಸೇವಾದಳದ ನಿರ್ದೇಶಕರೂ ನಮ್ಮಲ್ಲಿ ರಾಷ್ಟ್ರಭಕ್ತಿಯನ್ನು ಬೆಳೆಸಲು ಕಾರಣರಾದರು. ತರುವಾಯ 1933–35 ರಲ್ಲಿ ಬಿ. ಎ. ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ಪ್ರಸಿದ್ಧ ಇತಿಹಾಸ ಪ್ರಾಧ್ಯಾಪಕರಾಗಿದ್ದ ಡಾ. ಎಂ. ಹೆಚ್. ಕೃಷ್ಣ ಅವರು ಭಾರತದ ಇತಿಹಾಸ ಕುರಿತ ಪಾಠಗಳನ್ನು ಬೋಧಿಸುವಾಗ ರಾಷ್ಟ್ರೀಯತಾ ಭಾವನೆಯನ್ನೂ, ಆಗ ನಡೆಯುತ್ತಿದ್ದ ಚಳುವಳಿಯ ಮಹತ್ವವನ್ನೂ ವಿವರಿಸುತ್ತಿದ್ದರು. ನಿವೃತ್ತ ನಾದ ನಂತರ ಹಿಂದೆ ಓದಿದ್ದ ಕೆಲವು ಭಾರತ ಇತಿಹಾಸ ಗ್ರಂಥಗಳನ್ನು ಪುನರಾವರ್ತನೆ ಮಾಡುವಾಗ ಪ್ರಕೃತ ಪುಸ್ತಕವನ್ನು ಬರೆಯುವ ಪ್ರೇರಣೆ ಯಾಯಿತು. ಇದು ಸ್ವಾತಂತ್ರ್ಯ ಚಳುವಳಿ ಕುರಿತ ಅನೇಕ ಹೊಸ ಗ್ರಂಥ ಗಳ ಅಧ್ಯಯನಕ್ಕೂ ಕಾರಣವಾಯಿತು. ಈ ಪುಸ್ತಕದಲ್ಲಿರುವ ವಿಷಯ ಗಳೆಲ್ಲವನ್ನೂ ಕೊನೆಯಲ್ಲಿ ಕೊಟ್ಟಿರುವ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ. ಈ ಅನೇಕ ಗ್ರಂಥಕರ್ತೃಗಳಿಗೆ ನಾನು ಋಣಿ.

ಅಧ್ಯಾಯಗಳನ್ನು ಬರೆದು ಮುಗಿಸುತ್ತಿದ್ದಂತೆಯೇ ಅವುಗಳನ್ನು ಓದಿ ಉತ್ಸಾಹ ನೀಡಿದ ನನ್ನ ಪತ್ನಿ ಗೌರಮ್ಮ, ಹಸ್ತಪ್ರತಿಯನ್ನು ಓದಿ ಸೂಕ್ತ ಸಲಹೆಗಳನ್ನು ಕೊಟ್ಟ ಡಾ. ಆರ್. ಕೇಶವ್, ಹಸ್ತಪ್ರತಿ, ಟೈಪ್‌ಪ್ರತಿ, ರಾಷ್ಟ್ರಧ್ವಜ, ರಾಜ್ಯಲಾಂಛನದ ಚಿತ್ರಗಳು ಇತ್ಯಾದಿಗಳನ್ನು ಸಿದ್ಧಪಡಿಸುವು ದರಲ್ಲಿ ಶ್ರೀ ಬಿ. ಎಸ್. ವೆಂಕಟೇಶರಾವ್ ಮತ್ತು ನನ್ನ ಮಗ ಡಾ। ಆನಂದ

---

1. ಸ್ವಾತಂತ್ರ್ಯ ಚಳುವಳಿ ನಡೆಯುತ್ತಿರುವುದನ್ನು ಜನರ ಗಮನಕ್ಕೆ ತರುವ ಹಾಗೂ ಅವರೆಲ್ಲರ ಸಕ್ರಿಯ ಸಹಕಾರ ಪಡೆಯುವ ಉದ್ದೇಶದಿಂದ ಕೆಲವರು ಕೂಡಿ ಕೊಂಡು ರಾಷ್ಟ್ರಭಕ್ತಿ ಗೀತೆಗಳನ್ನು ಹಾಡುತ್ತಾ ನಗರಗಳ ವಿವಿಧ ಭಾಗಗಳಲ್ಲಿ ಬೆಳಗಿನ ಝಾವದಲ್ಲಿ ಸಂಚರಿಸುವ ಕಾರ್ಯಕ್ರಮವನ್ನು 'ಪ್ರಭಾತ ಫೇರಿ' ಎಂದು ಕರೆಯಲಾಯಿತು.

ಮೂರ್ತಿ ಮತ್ತು ಆತನ ಪತ್ನಿ ಚಿ. ಸೌ. ಶ್ಯಾಮಲ ಆನಂದಮೂರ್ತಿ ಇವರುಗಳಿಂದಲೂ, ಪುಸ್ತಕದ ಪ್ರಕಟಣೆಗೆ ಏರ್ಪಾಡು ಮಾಡುವುದರಲ್ಲಿ ನನ್ನ ತಮ್ಮ ಚಿ|| ಅರಕಲಿ ನಾರಾಯಣನಿಂದಲೂ ಸಹಾಯವಾಗಿದೆ. ಇವರೆಲ್ಲರಿಗೂ ನನ್ನ ವಂದನೆಗಳು.

ಪುಸ್ತಕಕ್ಕೆ ಅಮೂಲ್ಯ 'ಮುನ್ನುಡಿ' ಬರೆದುಕೊಟ್ಟು ಹಾರೈಸಿದ ಕರ್ನಾಟಕದ ಮಾಜಿ ಮುಖ್ಯನ್ಯಾಯಾಧೀಶರೂ, ಮಾಜಿ ವಿಜಿಲೆನ್ಸ್ ಕಮೀಷನರೂ, ಮಾಜಿ ಆಕ್ಟಿಂಗ್ ಗೌರ್ನರೂ ಹಾಗೂ ಗೋಖಲೆ ಸಾರ್ವಜನಿಕ ಸಂಸ್ಥೆಯ ಪ್ರಸಕ್ತ ಗೌರವ ಕಾರ್ಯದರ್ಶಿಯವರೂ ಆಗಿರುವ ಮಾನ್ಯ ಶ್ರೀ ನಿಟ್ಟೂರ್ ಶ್ರೀನಿವಾಸರಾವ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಪುಸ್ತಕವನ್ನು ಪ್ರಕಟಿಸಲು ಒಪ್ಪಿ ಪ್ರಕಟಣೆಗೆ ಅತ್ಯುತ್ತಮ ಏರ್ಪಾಟು ಮಾಡಿದ ಅಭ್ಯುದಯ ಪ್ರಕಾಶನದ ಮಾಲಿಕ ವರ್ಗದವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಪುಸ್ತಕದ ಮುಖಪುಟಕ್ಕೆ ಆಕರ್ಷಕವಾದ ಚಿತ್ರವನ್ನು ಬರೆದುಕೊಟ್ಟ ಶ್ರೀ ಚಿ. ಸು. ಕೃಷ್ಣ ಸೆಟ್ಟಿ ಅವರಿಗೂ, ಪುಸ್ತಕವನ್ನು ಶೀಘ್ರವಾಗಿಯೂ, ಸುಂದರವಾಗಿಯೂ ಮುದ್ರಿಸಿ ಸಿದ್ಧಪಡಿಸಿದ ಕೇಸರಿ ಪ್ರೆಸ್ಸಿನ ಶ್ರೀ ಬಿ. ಎಸ್. ನಂಜುಂಡಯ್ಯ ಮತ್ತು ಅವರ ಸಹಾಯಕ ಸಿಬ್ಬಂದಿಯವರಿಗೂ ನಾನು ಆಭಾರಿಯಾಗಿದ್ದೇನೆ.

ವಿದ್ಯಾರ್ಥಿಗಳಿಗೇ ಅಲ್ಲದೆ ಸಾಮಾನ್ಯ ಓದುಗರಿಗೂ ಈ ಪುಸ್ತಕವು ಉಪಯೋಗವಾಗುವುದೆಂದು ಆಶಿಸಿದ್ದೇನೆ.

ದಿನಾಂಕ, ಆಗಸ್ಟ್ 15, 1987 ಎ. ಪಿ. ಶ್ರೀನಿವಾಸಮೂರ್ತಿ

151, ಸುರಭಿ, 12ನೇ ಮೆಯಿನ್
10ನೇ ಕ್ರಾಸ್, ಸರಸ್ವತಿಪುರಂ
ಮೈಸೂರು–570 023

ಪ್ರಕಾಶಕರ ನುಡಿ

ನಮ್ಮೆಲ್ಲರ ಪ್ರೀತಿಯ ಭಾರತಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳೇ ಸಂದಿವೆ. ಅಸಂಖ್ಯಾತ ಜನರ ತ್ಯಾಗ, ಬಲಿದಾನಗಳ ಬೆಲೆಯಿಂದಾಗಿ ದೀರ್ಘಕಾಲದ ಪರದಾಸ್ಯದ ಶೃಂಖಲೆ ದೂರವಾಗಿ ಸ್ವತಂತ್ರ ದೇಶವಾಗಿ ಭಾರತ ಮತ್ತೊಮ್ಮೆ ತಲೆಯೆತ್ತಿ ನಿಲ್ಲುವಂತಾಯಿತು. ಆದರೆ, ದೇಶಕ್ಕಾಗಿ ಪ್ರಾಣತೆತ್ತ ದೇಶಭಕ್ತರ ಕನಸು ಕೇವಲ ರಾಜಕೀಯ ಸ್ವಾತಂತ್ರ್ಯ ಗಳಿಸುವುದು ಮಾತ್ರ ಆಗಿರಲಿಲ್ಲ. ದೇಶದ ಸರ್ವತೋಮುಖ ಪ್ರಗತಿ ಸಾಧಿಸುವುದರ ಜೊತೆಗೆ, ಜನ ಸಾಮಾನ್ಯರಲ್ಲಿ ಸ್ವಾಭಿಮಾನ, ನಿಷ್ಠೆ, ಶಿಸ್ತು, ಕರ್ತವ್ಯ ಪ್ರಜ್ಞೆ, ಆತ್ಮವಿಶ್ವಾಸ, ಸ್ವಾವಲಂಬನೆ, ಈ ಎಲ್ಲ ಗುಣಗಳೂ ಅರಳಿದಾಗ ಮಾತ್ರ ನಾವು ಪಡೆದಿರುವ ಸ್ವಾತಂತ್ರ್ಯ ಅರ್ಥಪೂರ್ಣ ಆದೀತು; ಸ್ವಾತಂತ್ರ್ಯ ಯಜ್ಞದಲ್ಲಿ ತಮ್ಮ ಪ್ರಾಣ ಪುಷ್ಪಗಳ ಹವಿಸ್ಸನ್ನು ನೀಡಿ ಆತ್ಮಾಹುತಿ ಮಾಡಿಕೊಂಡ ದೇಶಭಕ್ತರ ತ್ಯಾಗಕ್ಕೆ ಹೆಚ್ಚು ಬೆಲೆ ಬಂದೀತು.

ಯಾವುದೇ ದೇಶದ ಅಭ್ಯುದಯ ಆ ದೇಶದ ಯುವ ಪೀಳಿಗೆಯ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಆದಕ್ಕಾಗಿ ಇಂದಿನ ಪೀಳಿಗೆ ಸಜ್ಜುಗೊಳ್ಳಬೇಕಾಗಿದೆ. ತಮ್ಮ ದೇಶಕ್ಕಾಗಿ ದುಡಿಯುವ, ಬಾಳುವ, ಮಡಿಯುವ ಸ್ಫೂರ್ತಿ ಪಡೆಯಬೇಕಾಗಿದೆ. ಅದಕ್ಕಾಗಿ ದೇಶದ ಹಿರಿಮೆಯ ಬಗ್ಗೆ, ಹಾಗೂ ಇಂದಿನ ಪರಿಸ್ಥಿತಿಯ ಬಗ್ಗೆ ಜ್ಞಾನ ಪಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಪೂರಕವಾದ ಸಾಹಿತ್ಯ ವಿಪುಲವಾಗಿ ಬರಬೇಕಾಗಿದೆ. ಜೊತೆಗೆ ಸ್ವಾತಂತ್ರ್ಯ ಹೋರಾಟದ ಅದ್ಭುತ ಇತಿಹಾಸವೂ ಇಂದಿನ ಪೀಳಿಗೆಗೆ ಲಭ್ಯವಾಗಬೇಕಾಗಿದೆ.

ಪ್ರೊ|| ಎ. ಪಿ. ಶ್ರೀನಿವಾಸಮೂರ್ತಿ ಅವರು ತಮ್ಮ "ಭಾರತದ ಸ್ವಾತಂತ್ರ್ಯ ಚಳುವಳಿ 1857–1947" ಗ್ರಂಥವನ್ನು ಪ್ರಕಟಿಸಲು ಅನುಮತಿ ನೀಡಿ ಉಪಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಸುಂದರವಾದ ಮುಖಪುಟದ ಚಿತ್ರವನ್ನು ತಯಾರಿಸಿಕೊಟ್ಟ ಖ್ಯಾತ ಕಲಾಕಾರ ಶ್ರೀ ಜಿ. ಸು. ಕೃಷ್ಣ ಶೆಟ್ಟಿ ಅವರಿಗೂ, ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಕೇಸರಿ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಸ್ವಾತಂತ್ರ್ಯ ಹೋರಾಟದ ವೀರಗಾಥೆಯ ಪರಿಚಯ ನೀಡುವ ಈ ಗ್ರಂಥವನ್ನು ನಮ್ಮ ಪ್ರಕಾಶನ ಸಂಸ್ಥೆಯ ಪ್ರಥಮ ಪುಷ್ಪವಾಗಿ, ಸಮಾಜರೂಪಿ ಪರಮಾತ್ಮನ ಅಡಿದಾವರೆಗಳಲ್ಲಿ ಸಮರ್ಪಿಸುತ್ತಿದ್ದೇವೆ.

ಶ್ರೀ ಗೀತಾ ಜಯಂತಿ — ಪ್ರಕಾಶಕರು

1–12–1987

ಪುಸ್ತಕ ಕುರಿತು

ಭಾರತವನ್ನು ಬ್ರಿಟಿಷರು ವಶಪಡಿಸಿಕೊಂಡುದುದರ ಮುಖ್ಯ ಘಟ್ಟಗಳು, 1857ರ ಪ್ರಥಮ ಭಾರತ ಸ್ವಾತಂತ್ರ್ಯ ಸಂಗ್ರಾಮ, ಭಾರತೀಯ ರಾಷ್ಟ್ರೀಯತೆಯ ವಿಕಾಸ, ಕಾಂಗ್ರೆಸ್ಸು, ಮುಸ್ಲಿಂಲೀಗು, ಹಿಂದೂಮಹಾಸಭಾ ಇವುಗಳ ಉಗಮ, ಭಾರತದ ಸಂವಿಧಾನಾತ್ಮಕ ಬೆಳವಣಿಗೆಯ ಹೆಗ್ಗುರುತುಗಳು. 1947ರಲ್ಲಿ ಸ್ವಾತಂತ್ರ್ಯ ಲಭಿಸುವವರೆಗೆ ಕ್ರಾಂತಿಕಾರರೂ, ಅಹಿಂಸಾವಾದಿಗಳೂ ತಂತಮ್ಮದೇ ಆದ ಮಾರ್ಗಗಳಲ್ಲಿ ಒಂಭತ್ತು ದಶಕಗಳ ಕಾಲ ತಾಯ್ನಾಡಿನ ಸ್ವಾತಂತ್ರ್ಯಸಾಧನೆಗಾಗಿ ನಡೆಸಿದ ಹೋರಾಟದ ವಿವಿಧ ಘಟ್ಟಗಳು, ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಸರ್ಕಾರವು ನಡೆಸಿದ ದುಷ್ಕೃತ್ಯಗಳು, ಸ್ವಾತಂತ್ರ್ಯವೀರರು ಅನುಭವಿಸಿದ ಕಠಿಣ ಪರಿಸ್ಥಿತಿಗಳು, ಬ್ರಿಟಿಷ್ ಸರ್ಕಾರದ 'ವಿಭಜಿಸು, ಆಳು' ಎಂಬ ಕುತಂತ್ರದ ಪರಿಣಾಮಗಳು— ಇವೆಲ್ಲವನ್ನೂ ಸಂಗ್ರಹವಾಗಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

ಪರಿವಿಡಿ

ಶ್ರೀ

ಅಧ್ಯಾಯ - 1

ಬ್ರಿಟನ್ನು ಭಾರತವನ್ನು ವಶಪಡಿಸಿಕೊಂಡುದುದು

ಭಾರತದಂತಹ ವಿಸ್ತಾರ ದೇಶವನ್ನು ಬ್ರಿಟನ್ನು ತನ್ನ ಆಳ್ವಿಕೆಗಾಗಿ ವಶಪಡಿಸಿಕೊಂಡುದುದು ಪ್ರಪಂಚದ ಇತಿಹಾಸದಲ್ಲಿ ಒಂದು ಅತಿ ಮುಖ್ಯ ವಿಷಯವಾಗಿದೆ. ಹಂತ ಹಂತವಾಗಿ ಇಡೀ ಭಾರತವನ್ನು ಬ್ರಿಟನ್ನು ಹೇಗೆ ವಶಪಡಿಸಿಕೊಂಡಿತೆಂಬುದನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಹದಿನಾರನೆಯ ಶತಮಾನದ ಆದಿಯಲ್ಲಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲಿಷರು ಇತ್ಯಾದಿ ಐರೋಪ್ಯರು ಭಾರತಕ್ಕೆ ವರ್ತಕರಾಗಿ ಆಗಮಿಸಿದರು. ಮಧ್ಯಯುಗದಿಂದಲೂ ಯೂರೋಪ್ ದೇಶಗಳಲ್ಲಿ ಭಾರತದ ಸಾಂಬಾರ ಸರಕುಗಳಿಗೆ (Spices), ಇನ್ನೂ ಇತರ ಸರಕುಗಳಿಗೆ ವಿಶೇಷ ಬೇಡಿಕೆ ಇತ್ತು. ತುರ್ಕಿ (Turkey) ಯ ಪ್ರಾಬಲ್ಯದಿಂದ ಯೂರೋಪಿನಿಂದ ಭಾರತಕ್ಕೆ ಬರುವ ಮಾರ್ಗ ಐರೋಪ್ಯರಿಗೆ ಅಲಭ್ಯವಾದುದರಿಂದ 1498 ರಲ್ಲಿ ವಾಸ್ಕೋಡಗಾಮನಿಂದ ಕಂಡುಹಿಡಿಯಲ್ಪಟ್ಟ ಕೇಪ್ ಆಫ್ ಗುಡ್‌ಹೋಪ್ ಮೂಲಕ ಭಾರತಕ್ಕೆ ಬರುವ ಮಾರ್ಗವು ಇವರಿಗೆ ಉಪಯೋಗವಾಯಿತು.

ಭಾರತಕ್ಕೆ ಬಂದ ಐರೋಪ್ಯ ವರ್ತಕರು ತಂತಮ್ಮಲ್ಲಿಯೇ ಏರ್ಪಡಿಸಿಕೊಂಡಿದ್ದ ವಾಣಿಜ್ಯ ಕಂಪೆನಿಗಳ (Trading Companies) ಸದಸ್ಯರಾಗಿ ಬಂದರು. ಈ ವಾಣಿಜ್ಯ ಕಂಪೆನಿಗಳು ಆಯಾ ಸರ್ಕಾರದ ಸನ್ನದು (Chatrer) ಒಂದನ್ನು ಹೊಂದಿದ್ದವು. ಯುದ್ಧ ಮಾಡಲೂ, ಒಪ್ಪಂದ

ಮಾಡಿಕೊಳ್ಳಲೂ, ಪ್ರದೇಶಗಳನ್ನು ಗೆದ್ದು ವಶಪಡಿಸಿಕೊಳ್ಳಲೂ, ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಲೂ – ಇತ್ಯಾದಿ ಅಧಿಕಾರಗಳೆಲ್ಲವನ್ನೂ ಈ ಸನ್ನದಿನ ಮೂಲಕ ಈ ವಾಣಿಜ್ಯ ಕಂಪೆನಿಗಳು ಹೊಂದಿದ್ದವು. ಅಂದಮೇಲೆ ಇವು ಕೇವಲ ವರ್ತಕ ಸಂಘಗಳಾಗಿರದೆ ದೇಶಗಳನ್ನು ಗೆದ್ದು ತಮ್ಮ ವಶಪಡಿಸಿ ಕೊಳ್ಳುವ ಸಾರ್ವಭೌಮತ್ವದ (Imperialism) ಸಾಧನವಾಗಿದ್ದುವೆಂಬುದು ಸುಸ್ಪಷ್ಟ. ವ್ಯಾಪಾರದ ಮೂಲಕ ಅತ್ಯಧಿಕ ಲಾಭಪಡೆಯುವುದು ಈ ವಾಣಿಜ್ಯ ಕಂಪೆನಿಗಳ ಸದಸ್ಯರ ಆಸಕ್ತಿಯಾಗಿತ್ತಾದರೂ, ಈ ವ್ಯಾಪಾರಕ್ಕೆ ಅವಶ್ಯಕವಾದ ಖಾಯಂ ನೆಲೆಗಳನ್ನು ಭಾರತದಲ್ಲಿ ಸ್ಥಾಪಿಸಿಕೊಳ್ಳುವುದು ಈ ಕಂಪೆನಿಗಳಿಗೆ ಅವಶ್ಯಕವಾಯಿತು. ಭಾರತದ ಸರಕುಗಳನ್ನು ಯೂರೋಪಿಗೆ ಕೊಂಡೊಯ್ಯಲು ಹಾಗೂ ಅಲ್ಲಿನ ಸರಕುಗಳನ್ನು ತಂದು ಭಾರತಕ್ಕೆ ಮಾರಲೂ ವಿವಿಧ ಐರೋಪ್ಯ ಕಂಪೆನಿಗಳೊಳಗೆ ಪೈಪೋಟಿ ಇದ್ದಿತು. ಭಾರತ ದಲ್ಲಿ ಕೇಂದ್ರಗಳ ಸ್ಥಾಪನೆಗೆ ಹಾಗೂ ಅವಶ್ಯಕ ಅನುಕೂಲತೆಗಳನ್ನು ಪಡೆಯಲು ವಿವಿಧ ಐರೋಪ್ಯ ವಾಣಿಜ್ಯ ಕಂಪೆನಿಗಳು ಭಾರತದಲ್ಲಿ ಆಗ ಇದ್ದ ಅನೇಕ ರಾಜರು, ನವಾಬರು, ಪಾಳೆಯಗಾರರು – ಇವರೆಲ್ಲರೊಡನೆ ಸಂಧಾನ ಗಳನ್ನು ಕೈಗೊಂಡವು.

ಕಾಲಕ್ರಮವಾಗಿ ಭಾರತದಲ್ಲಿ ರಾಜಕೀಯ ಅಧಿಕಾರವನ್ನೂ ಆರ್ಥಿಕ ಪ್ರಯೋಜನವನ್ನೂ ಪಡೆಯಲು ಫ್ರೆಂಚ್ ಮತ್ತು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಗಳೊಳಗೆ ಮಾತ್ರ ವಿಶೇಷ ಪೈಪೋಟಿ ಇದ್ದಿತು. ಇವರಲ್ಲಿ ಶೀಘ್ರವಾಗಿಯೇ ಇಂಗ್ಲಿಷ್ ವಾಣಿಜ್ಯ ಕಂಪೆನಿಯದೇ ಮೇಲುಗೈಯಾಯಿತು. ಈ ಕಂಪೆನಿಯು ಭಾರತವನ್ನು ಗೆಲ್ಲುವ ಪ್ರಯತ್ನವನ್ನು ಮಾಡುತ್ತಾ ಬಂದಿತು. ಒಂದೊಂದು ಭಾಗವನ್ನಾಗಿಯೇ ಗೆದ್ದು ಒಂದು ಶತಮಾನದಲ್ಲಿ ಸಂಪೂರ್ಣ ಭಾರತವನ್ನು ಅದು ವಶಪಡಿಸಿಕೊಂಡಿತು. 1856 – 57 ರ ವೇಳೆಗೆ ಪೋರ್ಚುಗೀಸರ ಅಧೀನದಲ್ಲಿದ್ದ ಗೋವಾ, ಡಯು ಹಾಗೂ ಡಾಮನ್ ಹೊರತು ಮತ್ತು ಫ್ರೆಂಚರ ಅಧೀನದಲ್ಲಿದ್ದ ಪಾಂಡಿಚೆರಿ ಹೊರತು ಇಡೀ ಭಾರತ ಬ್ರಿಟನ್ನಿನ ಅಧೀನ ರಾಷ್ಟ್ರವಾಗಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಮೂಲಕ ಆಳಲ್ಪಟ್ಟಿತು. ಹೀಗೆ ಒಂದು ವಾಣಿಜ್ಯ ಕಂಪೆನಿಯು ರಾಜ್ಯ ವೊಂದನ್ನು ಯುದ್ಧಗಳ ಮೂಲಕ ಸಂಪಾದಿಸಿ ತನ್ನ ಆಳ್ವಿಕೆಗೆ ಒಳಪಡಿಸಿ

ಕೊಂಡುದುದು ಒಂದು ವಿಚಿತ್ರವೆಂದು ತೋರಬಹುದಾದರೂ ವಾಸ್ತವವಾಗಿ ಇದರ ಹಿಂದೆ ಇದ್ದ ಬಲ ಬ್ರಿಟಿಷ್ ಸರ್ಕಾರದ ಬಲ ಎಂಬುದು ಆ ಸರ್ಕಾರವು ತನ್ನ ಸಾಮ್ರಾಜ್ಯತ್ವದ (Imperialism) ಅಂದರೆ ತನ್ನ ರಾಜ್ಯದಾಹ ನೀತಿಯ ಪ್ರಕಾರ ಕಾಲಕಾಲಕ್ಕೆ, ಈ ಕಂಪೆನಿಗೆ ಒದಗಿಸಿದ ಅನುಕೂಲತೆಗಳು ಮತ್ತು ಉತ್ತೇಜಕ ಕ್ರಮಗಳಿಂದ ವ್ಯಕ್ತವಾಗುವುದು. ಸಾಮ್ರಾಜ್ಯ ವಿಸ್ತರಣ ಕಾರ್ಯಕ್ಕೆ ಈಸ್ಟ್ ಇಂಡಿಯಾ ಕಂಪೆನಿಗೆ ಉದ್ದಕ್ಕೂ ಅತ್ಯಂತ ದಕ್ಷರಾದ ವ್ಯಕ್ತಿಗಳ[1] ಸೇವೆ ಲಭಿಸಿತು.

ಪ್ರಾರಂಭದಲ್ಲಿ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು 'ಫ್ಯಾಕ್ಟರಿಗಳು' ಎಂದು ಕರೆಯಲಾಗುವ ಕೆಲವೇ ವಾಣಿಜ್ಯ ಕೇಂದ್ರಗಳನ್ನು ಆಯಾ ಪ್ರದೇಶದ ಸರ್ಕಾರಗಳ ಅನುಮತಿ ಪಡೆದು ಸ್ಥಾಪಿಸಿತು. ಈ ಫ್ಯಾಕ್ಟರಿಗಳು ವಾಸ್ತವವಾಗಿ ಕೋಟೆಗಳಾಗಿದ್ದವು. ಕಂಪನಿಯ ವ್ಯಾಪಾರಿ ಸದಸ್ಯರುಗಳು

---

1. ಲಾರ್ಡ್ ಕ್ಲೈವ್, ವಾರನ್ ಹೇಸ್ಟಿಂಗ್ಸ್ (1772–85), ಲಾರ್ಡ್ ಕಾರ್ನ್‌ವಾಲಿಸ್ (1786–92), ಲಾರ್ಡ್ ವೆಲ್ಲೆಸ್ಲಿ (1795–1805), ಸರ್ ಜಾರ್ಜ್ ಬಾರ್ಲೊ (1805–07), ಲಾರ್ಡ್ ಮಿಂಟೊ (1807–13), ಲಾರ್ಡ್ ಹೇಸ್ಟಿಂಗ್ಸ್ (1813–23), ಲಾರ್ಡ್ ಅಮ್‌ಹರ್ಸ್ಟ್ (1823–28), ಲಾರ್ಡ್ ವಿಲಿಯಂ ಬೆಂಟಿಂಕ್ (1828–35), ಸರ್ ಚಾರ್ಲ್ಸ್ ಮೆಟ್‌ಕಾಫ್ (1835–36), ಲಾರ್ಡ್ ಅಕ್‌ಲೆಂಡ್ (1836–42), ಲಾರ್ಡ್ ಎಲೆನ್‌ಬರೋ (1842–44), ಲಾರ್ಡ್ ಹಾರ್ಡಿಂಜ್ (1844–48), ಲಾರ್ಡ್ ಡಾಲ್‌ಹೌಸಿ (1848–56), ಲಾರ್ಡ್ ಕ್ಯಾನಿಂಗ್ (1856–62), ಲಾರ್ಡ್ ಎಲ್ಗಿನ್ (1862–63), ಲಾರ್ಡ್ ಲಾರೆನ್ಸ್ (1864–69), ಲಾರ್ಡ್ ಮೇಯೋ (1869–72), ಲಾರ್ಡ್ ನಾರ್ತ್‌ಬ್ರೂಕ್ (1872–76), ಲಾರ್ಡ್ ಲಿಟ್ಟನ್ (1876–80), ಲಾರ್ಡ್ ರಿಪನ್ (1880–84), ಲಾರ್ಡ್ ಡಫರಿನ್ (1884–88), ಲಾರ್ಡ್ ಲ್ಯಾನ್ಸ್‌ಡೋನ್ (1888–92), ಲಾರ್ಡ್ ಎಲ್ಗಿನ್ (1894–99), ಲಾರ್ಡ್ ಕರ್ಜನ್ (1899–1905), ಲಾರ್ಡ್ ಮಿಂಟೊ (1905–10), ಲಾರ್ಡ್ ಹಾರ್ಡಿಂಜ್ (1910–16), ಲಾರ್ಡ್ ಚೆಮ್ಸ್‌ಫರ್ಡ್ (1916–21). ಲಾರ್ಡ್ ರೀಡಿಂಗ್ (1921–26), ಲಾರ್ಡ್ ಇರ್ವಿನ್ (1926–31). ಲಾರ್ಡ್ ವಿಲಿಂಗ್‌ಡನ್ (1931–36), ಲಾರ್ಡ್ ಲಿನ್‌ಲಿತ್‌ಗೋ (1936–44), ಲಾರ್ಡ್ ವೇವೆಲ್ (1946–47), ಲಾರ್ಡ್ ಮೌಂಟ್‌ಬ್ಯಾಟನ್ (1947–48).

ಯುದ್ಧದಲ್ಲಿ ತೊಡಗಬಲ್ಲ ಯೋಧರೂ ಆಗಿದ್ದರು. ಕೆಲವೇ ಫ್ಯಾಕ್ಟರಿಗಳ ಸ್ಥಾಪನೆಯೊಡನೆ ಪ್ರಾರಂಭಿಸಿದ ಈಸ್ಟ್ ಇಂಡಿಯಾ ಕಂಪೆನಿಯು ಕ್ರಮ ಕ್ರಮವಾಗಿ ಅನೇಕ ಯುದ್ಧಗಳನ್ನು ಮಾಡಿ ತನ್ನ ರಾಜಕೀಯ ಅಧಿಕಾರ ವನ್ನು ದೇಶವಿಸ್ತಾರವಾಗಿ ಬೆಳೆಸಿಕೊಂಡಿತು. ಈ ಯುದ್ಧಗಳ ಹಾಗೂ ಒಪ್ಪಂದಗಳ ವಿವರಣೆ ಇಲ್ಲಿ ಅನಗತ್ಯ. ಭಾರತದ ಮೇಲೆ ಬ್ರಿಟಿಷರ ಅಧಿಕಾರ ವಿಸ್ತರಣೆಯಾದ ಹಂತಗಳನ್ನೂ ಬ್ರಿಟಿಷ್ ಸರ್ಕಾರವು ಕೈಗೊಂಡ ಕೆಲವು ಮುಖ್ಯ ರಾಜಕೀಯ ಹೆಗ್ಗುರುತುಗಳನ್ನೂ ಸೂಚಿಸಲು ಕೆಳಗಣ ಅಂಶ ಗಳನ್ನು ಕೊಡಲಾಗಿದೆ :

1. 1746–48, 1748–54 ಹಾಗೂ 1756–63 ರ ಯುದ್ಧಗಳಲ್ಲಿ ಜಯಗಳಿಸಿ ಫ್ರೆಂಚರನ್ನು ದಕ್ಷಿಣ ಭಾರತದಿಂದ ಓಡಿಸಿ, ಈ ಪ್ರದೇಶ ದಲ್ಲಿ ತಮ್ಮ ಹಿಡಿತವನ್ನು ನೆಲೆಗೊಳಿಸಿಕೊಂಡರು.
2. ಪ್ಲಾಸಿ ಕದನ (1757) ಮತ್ತು ಬಕ್ಸಾರ್ ಕದನಗಳ (1764) ವಿಜಯದಿಂದ ಇಂಗ್ಲಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳ ಅಧಿಪತಿಗಳಾದರು.
3. 1784 ರಲ್ಲಿ ಜಾರಿಗೆ ತರಲಾದ ಪಿಟ್ಸ್ ಇಂಡಿಯ ಮಸೂದೆಯ ಪ್ರಕಾರ ಈಸ್ಟ್ ಇಂಡಿಯಾ ಕಂಪೆನಿಯ ರಾಜಕೀಯ ಹಾಗೂ ಆಡಳಿತ ಚಟುವಟಿಕೆಗಳ ಮೇಲ್ವಿಚಾರಣೆ ಹಾಗೂ ನಿರ್ದೇಶನ ಅಧಿಕಾರವನ್ನು ಬ್ರಿಟಿಷ್ ಸರ್ಕಾರವು ಕೈಗೊಂಡಿತು.
4. ಬ್ರಿಟಿಷ್ ಸರ್ಕಾರದ ಆದೇಶದ ಮೇಲೆ ಲಾರ್ಡ್ ಕಾರ್ನ್‌ವಾಲೀಸನು ಟೀಪೂ ಸುಲ್ತಾನನ ರಾಜ್ಯದ ಬಹುಭಾಗವನ್ನು ಆಕ್ರಮಿಸಿಕೊಂಡನು.
5. 1798–1805 ರ ಅವಧಿಯಲ್ಲಿ 'ಸಬ್ಸಿಡಿಯರಿ ಅಲೈಯೆನ್ಸ್' (Subsidiary Alliance) ನೀತಿಯನ್ನು ಅನ್ವಯಿಸಿ ಲಾರ್ಡ್ ವೆಲ್ಲೆಸ್ಲಿಯು ಹೈದರಾಬಾದನ್ನು ಬ್ರಿಟಿಷರ ಅಧೀನಕ್ಕೆ ಬರುವಂತೆಯೂ ಗ್ವಾಲಿಯರ್, ಬರೋಡ, ಇಂದೂರು, ನಾಗಪುರ, ಪೂನಾಗಳನ್ನು ಬ್ರಿಟಿಷರ ನೇರ ಪ್ರಭಾವಕ್ಕೆ ಒಳಪಡುವಂತೆಯೂ ಮಾಡಿದನು.
6. 1813–1823 ರ ಅವಧಿಯಲ್ಲಿ ಲಾರ್ಡ್ ಹೇಸ್ಟಿಂಗ್ಸನು ಮರಾಠ

ರನ್ನೂ, ರಾಜಪುಟಾಣದ ಕೇಂದ್ರ ಸಂಸ್ಥಾನಗಳನ್ನೂ, ನೇಪಾಳದ ಗೂರ್ಖರನ್ನೂ ಸೋಲಿಸಿದನು.

7. ಹೇಸ್ಟಿಂಗ್ಸನ ತರುವಾಯ ಬಂದ ಲಾರ್ಡ್ ಅವಾರ್ಹಸ್ಟ್‌ನು ಬರ್ಮೀಯರನ್ನು ಸೋಲಿಸಿದನು.

8. 1845–46 ಮತ್ತು 1849ರಲ್ಲಿ ಜರುಗಿದ ಸಿಖ್ ಯುದ್ಧಗಳ ನಂತರ ಪಂಜಾಬು ಬ್ರಿಟಿಷರ ವಶವಾಯಿತು.

9. 1856 ರಲ್ಲಿ ಔಧ್‌ನ್ನು ಬ್ರಿಟಿಷರು ತೆಗೆದುಕೊಂಡರು.

10. 1858 ರಲ್ಲಿ ಗೌರ್ನರ್ ಜನರಲ್‌ಆಗಿ ಭಾರತಕ್ಕೆ ಆಗಮಿಸಿದ ಲಾರ್ಡ್ ಡಾಲ್‌ಹೌಸಿಯು "ಡಾಕ್ಟ್ರಿನ್ ಆಫ್ ಲ್ಯಾಪ್ಸ್" (Doctrine of Lapse) ನಿಯಮವನ್ನು ಜಾರಿಗೆ ತಂದು ಅನೇಕ ಸಣ್ಣ ಪುಟ್ಟ ಸಂಸ್ಥಾನಗಳನ್ನು ಬ್ರಿಟಿಷರ ಆಳ್ವಿಕೆಗೆ ಒಳಪಡಿಸಿದನು.

11. ಮೇಲೆ ಹೇಳಿರುವಂತೆ ಬ್ರಿಟಿಷರ ಆಳ್ವಿಕೆಯು ಭಾರತವನ್ನೆಲ್ಲಾ ಒಳಗೊಂಡಾಗ ಬ್ರಿಟಿಷರು ತೆಗೆದುಕೊಳ್ಳದೆ ಉಳಿದ ಭಾಗಗಳು ಇವು :–

   ಅ) ಗೋವ, ಡಾಮನ್ ಮತ್ತು ಡಯು, ದಾದ್ರ ಹಾಗೂ ನಗರ್ ಹವೇಲಿ – ಇವು ಪೋರ್ಚುಗೀಸರ ಅಧೀನದಲ್ಲಿ ಉಳಿದವು.

   ಆ) ಮಾಹೆ, ಕರೈಕಲ್ ಮತ್ತು ಪಾಂಡಿಚೇರಿ ಫ್ರೆಂಚರ ಅಧೀನದಲ್ಲೇ ಉಳಿದವು.

12. 1858 ರ ನವೆಂಬರ್ 1 ರಂದು ಭಾರತದ ಸರ್ಕಾರವನ್ನು ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟಿಷ್ ಸಾರ್ವಭೌಮರು ನೇರವಾಗಿ ವಹಿಸಿಕೊಂಡುದುದು ಮುಖ್ಯ ರಾಜಕೀಯ ಹೆಗ್ಗುರುತಾಗಿದೆ. ನಾವು ಭಾರತೀಯರು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿಡಿತಕ್ಕೆ ಬಂದ ವಿವಿಧ ಹಂತಗಳನ್ನು ಮೇಲಿನ ಸಂಕ್ಷಿಪ್ತ ಅಂಶಗಳು ಸೂಚಿಸುವುವು. ಈ ಹಂತಗಳ ಇತಿಹಾಸದ ಸೂಕ್ಷ್ಮ ವಿವರಣೆಯಿಂದ ತಿಳಿಯಬಹುದಾದ ಬ್ರಿಟಿಷರ ಬಲದ ಮೂಲಗಳನ್ನೂ ಭಾರತದ ದೌರ್ಬಲ್ಯದ ಮೂಲಗಳನ್ನೂ ಹೀಗೆ ಸಂಗ್ರಹಿಸಿ ಹೇಳಬಹುದು : **ಮೊದಲನೆಯದಾಗಿ,** ಬ್ರಿಟಿಷರ ಆರ್ಥಿಕ ಬಲ

ಭಾರತದ ಆರ್ಥಿಕ ಬಲಕ್ಕಿಂತ ತುಂಬ ಹೆಚ್ಚಾಗಿದ್ದಿತು. ಆಧುನಿಕ ಕೈಗಾರಿಕಾ ಕ್ರಾಂತಿಯ ಫಲವನ್ನು ಅನುಭವಿಸಿದ ಮೊದಲಿಗ ರಾಷ್ಟ್ರವಾದ ಬ್ರಿಟನ್ನು ಯಂತ್ರಗಳಿಂದ ಸಿದ್ಧಪಡಿಸಿದ ಸರಕುಗಳನ್ನು ಇತರ ರಾಷ್ಟ್ರಗಳಿಗೆ ಒದಗಿಸುವ ಸುಸ್ಥಿತಿಯಲ್ಲಿದ್ದಿತು. ಅಲ್ಲದೆ, ಆಧುನಿಕ ಯುದ್ಧ ಶಸ್ತ್ರಾಸ್ತ್ರಗಳನ್ನೂ, ನೌಕಾಬಲವನ್ನೂ ಅದು ವಿಶೇಷವಾಗಿ ಹೊಂದಿದ್ದಿತು. **ಎರಡನೆಯದಾಗಿ,** ತಮ್ಮ ಸಾಮ್ರಾಜ್ಯನಿರ್ಮಾಣ ಕಾರ್ಯ ಯೋಜನೆಯನ್ನು ಅನುಸರಿಸುವುದರಲ್ಲಿ ಬ್ರಿಟಿಷರು ಒಳ್ಳೆಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. **ಮೂರನೆಯದಾಗಿ** ಭಾರತವು ಒಂದೇ ರಾಜ್ಯವಾಗಿರದೆ ಅನೇಕಾನೇಕ ರಾಜರುಗಳು ಹಾಗೂ ಪಾಳೆಯಗಾರರಿಂದ ಕೂಡಿದ್ದ ಸಂದರ್ಭವನ್ನು ಭೇದೋಪಾಯದ ಮೂಲಕ ಬ್ರಿಟಿಷರು ತಮ್ಮ ಹಿತಸಾಧನೆಯನ್ನು ದಕ್ಷತೆಯಿಂದ ನಡೆಸಿಕೊಂಡರು. ಅಂದಿನ ಭಾರತದ ರಾಜರುಗಳೆಲ್ಲರೂ ಬ್ರಿಟಿಷರ ವಿರುದ್ಧ ಏಕತೆಯಿಂದ ಇದ್ದಿದ್ದರೆ, ಅಥವಾ ಭಾರತದಲ್ಲಿ ಒಂದೇ ಸರ್ಕಾರವಿದ್ದಿದ್ದರೆ, ಬಹುಶಃ ಭಾರತವನ್ನು ಗೆದ್ದು ವಶಪಡಿಸಿಕೊಳ್ಳುವುದು ಬ್ರಿಟಿಷರಿಗೆ ಅಷ್ಟು ಸುಲಭವಾಗಿರಲಿಕ್ಕಿಲ್ಲವೆಂದು ಹೇಳಬಹುದು. ಈ ಮೂರು ಅಂಶಗಳನ್ನು ಗ್ರಹಿಸಿ ಭಾರತದ ಯೋಚನಾಶೀಲ ಮುಂದಾಳುಗಳು ಭಾರತದಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಒಂದುಗೂಡಿಸಲೂ, ಉತ್ತಮ ವ್ಯವಸ್ಥೆಯನ್ನು ಏರ್ಪಡಿಸಲೂ ಹವಣಿಸಲಾರಂಭಿಸಿದರು. ಇವುಗಳ ವಿವರಣೆಯನ್ನು ಮುಂದೆ ಕೊಡಲಾಗುವುದು.

ಹೀಗೆ ಭಾರತವು ಬ್ರಿಟನ್ನಿನ ಅಧೀನ ರಾಷ್ಟ್ರವಾದ ಕಾಲದಿಂದಲೂ ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಳ್ಳುವುದು ದೇಶದ ಅನೇಕ ವಿಚಾರಶೀಲ ಜನರ ಮುಖ್ಯ ಆಸಕ್ತಿಯಾಯಿತು. 1757 ರ ಪ್ಲಾಸಿ ಕದನದಿಂದಲೇ ಬ್ರಿಟಿಷರ ವಿರುದ್ಧವಾಗಿ ದೇಶದ ವಿವಿಧ ಭಾಗಗಳಲ್ಲಿ ಅನೇಕ ದಂಗೆಗಳು ಉಂಟಾದವು. ಹೀಗೆ ಸಂಭವಿಸಿದ ದಂಗೆಗಳ ಬಗ್ಗೆ ಎಸ್. ಬಿ. ಚೌಧುರಿಯವರು[1] ನೀಡಿ

---

1. Choudhari S. B.; Civil Disturbances during the British Rule in India, 1765 to 1857

ರುವ ಪಟ್ಟಿಯ ಪ್ರಕಾರ ಉತ್ತರಭಾರತದಲ್ಲಿ 23, ಬೊಂಬಾಯಿ ಹಾಗೂ ಪಶ್ಚಿಮ ಭಾರತದಲ್ಲಿ 23 ಮತ್ತು ದಕ್ಷಿಣಭಾರತದಲ್ಲಿ 19 ದಂಗೆಗಳು ಸಂಭವಿಸಿದವು. ಆದರೆ, ಇವೆಲ್ಲವುಗಳಲ್ಲಿಯೂ ಅತ್ಯಂತ ದೊಡ್ಡ ದಂಗೆ 1857 ರಲ್ಲಿ ಸಂಭವಿಸಿದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಇದರ ವಿವರಣೆಯನ್ನು ಮುಂದಿನ ಅಧ್ಯಾಯದಲ್ಲಿ ಕೊಡಲಾಗಿದೆ.

❖❖❖

ಅಧ್ಯಾಯ - 2

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, 1857

ಭಾರತದ ಇತಿಹಾಸದಲ್ಲಿ 1857 ನೆ ವರ್ಷವು ಸ್ಮರಣೀಯ ವರ್ಷವಾಗಿದೆ. ಬ್ರಿಟಿಷರು ತಮ್ಮ ಸ್ವಾರ್ಥ, ಆರ್ಥಿಕ, ರಾಜಕೀಯ ಹಿತಕ್ಕಾಗಿ ಭಾರತದಲ್ಲಿ ನೆಲಸಿದ ಕಾಲದಲ್ಲಿಯೇ, ಇವರ ಅಧಿಕಾರವನ್ನು ಭಾರತದಿಂದ ಉಚ್ಚಾಟನೆ ಮಾಡುವ ಉದ್ದೇಶದಿಂದ ಕೆಲವು ಶಕ್ತಿಗಳು ಗುಪ್ತವಾಗಿಯೇ ರೂಢಿಸಲ್ಪಡುತ್ತಿದ್ದವು. 1857 ರಲ್ಲಿ ಈ ಶಕ್ತಿಗಳು ಹೊರಹೊಮ್ಮಿ ಬ್ರಿಟಿಷರನ್ನು ಶಕ್ತಿಪೂರ್ವಕವಾಗಿ ಎದುರಿಸಿದವು. ಇದನ್ನು ಬ್ರಿಟಿಷರು 'ಸಿಪಾಯಿ ದಂಗೆ' ಎಂದು ಕರೆದರಾದರೂ ವಾಸ್ತವವಾಗಿ ಇದು ಪ್ರಥಮ ಸ್ವಾತಂತ್ರ್ಯ ಹೋರಾಟವೇ ಆಗಿದ್ದಿತು. ಈ ಸಂಗ್ರಾಮ ಹೇಗೆ ನಡೆಯಿತೆಂಬುದರ ಹಾಗೂ ಈ ಸಂಗ್ರಾಮದ ತರುವಾಯದ ಪರಿಣಾಮಗಳ ವಿವರಣೆಯನ್ನು ಈ ಅಧ್ಯಾಯದಲ್ಲಿ ಕೊಡಲಾಗುವುದು.

ಹಿಂದೆ ವಿವರಿಸಿದಂತೆ ಹತ್ತೊಂಬತ್ತನೆ ಶತಮಾನದ ಮಧ್ಯದ ವೇಳೆಗೆ ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ಕಾಲದಿಂದಲೂ ಅವರಿಗೆ ಎಲ್ಲವೂ ಸುಗಮವಾಗಿರಲಿಲ್ಲ. ಅನೇಕ ಕಾರಣಗಳಿಂದ ಭಾರತದ ಜನತೆಯ ವಿವಿಧ ಪಂಗಡಗಳು ಬ್ರಿಟಿಷರ ಆಳ್ವಿಕೆಯ ಬಗ್ಗೆ ತೀವ್ರ ಅಸಮಾಧಾನ ತಳೆದಿದ್ದವು. ಈ ಕಾರಣಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಬ್ರಿಟಿಷರು 1) ಭಾರತದ ಕೈಗಾರಿಕೆಗಳ ನಾಶಕ್ಕೆ ಕಾರಣರಾದರು; 2) ಅನೇಕ ರಾಜರ ಅಧಿಕಾರವನ್ನು ಮೊಟಕುಗೊಳಿಸಿದರು ಮತ್ತು ಅನೇಕ ಜಮೀನುದಾರರ ಆಸ್ತಿಗಳನ್ನು ವಶಪಡಿಸಿಕೊಂಡರು; 2) ಕೆಲಸಕ್ಕೆ ನೇಮಿಸಿಕೊಳ್ಳುವವರಲ್ಲಿ

ಭಾರತೀಯರಿಗೆ ಕೀಳು ಅಂತಸ್ತು ನೀಡಿದರು; 4) ಭಾರತೀಯ ಸಾಮಾಜಿಕ ಪದ್ಧತಿಗಳನ್ನು ಬದಲಾಯಿಸಿ ಆಂಗ್ಲೀಯ ಪದ್ಧತಿಗಳನ್ನು ಜಾರಿಗೆ ತರಲು ಪ್ರಯತ್ನಿಸಿದರು; 5) ಜನರನ್ನು ಮತಾಂತರಗೊಳಿಸಿ ಕ್ರಿಶ್ಚಿಯನ್ ಮತ ಹರಡಲು ಹವಣಿಸಿದರು; 6) ದೇಶದಲ್ಲಿ ಆಳುತ್ತಿದ್ದ ಮುಸಲ್ಮಾನರನ್ನು ಕಡೆಗಣಿಸಿದರು. ಈ ಕೆಲವು ಕಾರಣಗಳಿಂದ ದೇಶದ ಹಿಂದುಗಳು ಮತ್ತು ಮುಸಲ್ಮಾನರಿಬ್ಬರೂ ಬ್ರಿಟಿಷರ ವಿರುದ್ಧ ಒಳೊಳಗೇ ಕುದಿಯುತ್ತಿದ್ದರು. 7) ಎಲ್ಲಕ್ಕಿಂತ ಮಿಗಿಲಾಗಿ ಈಸ್ಟ್ ಇಂಡಿಯಾ ಕಂಪೆನಿಯ ಸೇನೆಯಲ್ಲಿಯೂ, ಇಂಗ್ಲಿಷ್ ಹಾಗೂ ಭಾರತೀಯ ಸೈನಿಕರೊಳಗೆ ತಾರತಮ್ಯ ಮಾಡಿ ಭಾರತೀಯ ಸೈನಿಕರಿಗೆ ಕೀಳು ಅಂತಸ್ತು ನೀಡಿದರು. ಭಾರತೀಯ ಸೈನಿಕರಿಗೆ ಕಡಿಮೆ ಸಂಬಳ, ಕಡಿಮೆ ದರ್ಜೆಯ ವಸತಿ, ಉಡುಪು, ಆಹಾರ ಹಾಗೂ ಇತರ ಸೌಕರ್ಯಗಳು. ಇವುಗಳಿಂದ ಭಾರತೀಯ ಸೈನಿಕರು ಸ್ವಾಭಾವಿಕವಾಗಿಯೇ ಅಸಮಾಧಾನ ಹೊಂದಿದ್ದರು. ಇಂತಹ ತಾರತಮ್ಯ ಧೋರಣೆಯನ್ನು ಪ್ರತಿಭಟಿಸಿ ದಂಗೆ ಎದ್ದ ಪ್ರಸಂಗಗಳೂ ಹಿಂದಿನಿಂದಲೇ ಇದ್ದವು. 1766 ರಲ್ಲಿ ಬಂಗಾಳ ರೆಜಿಮೆಂಟು (Regiment) ದಂಗೆ ಎದ್ದುದು; 1806 ರಲ್ಲಿ ವೆಲ್ಲೂರಿನ ಸೈನಿಕ ವಿಭಾಗದಲ್ಲಿ ತಲೆದೋರಿದ ತೊಂದರೆ; 1844 ರಲ್ಲಿ ಬಂಗಾಳದ ನಾಲ್ಕು ರೆಜಿಮೆಂಟುಗಳು ಸಿಂಧ್‌ಗೆ ಹೋಗಲು ನಿರಾಕರಿಸಿದುದು; 1849 ರಲ್ಲಿ ನಾಲ್ಕು ರೆಜಿಮೆಂಟಿನವರು ತಮಗೆ ನಿಗದಿ ಮಾಡಿದ್ದ ಕಡಿಮೆ ಸಂಬಳವನ್ನು ತೆಗೆದುಕೊಳ್ಳದುದು; 1852 ರಲ್ಲಿ ಒಂದು ರೆಜಿಮೆಂಟಿನವರು ಬರ್ಮಕ್ಕೆ ಹೋಗಲು ಒಪ್ಪದುದು – ಇತ್ಯಾದಿಗಳು ಬ್ರಿಟಿಷರ ಭಾರತೀಯ ಸೈನಿಕ ವಿಭಾಗದವರಲ್ಲಿ ಒಳೊಳಗೇ ಕುದಿಯುತ್ತಿದ್ದ ಅತೃಪ್ತಿ ಹಾಗೂ ಅಸಮಾಧಾನಭಾವನೆಯ ಕೆಲವು ನಿದರ್ಶನಗಳು. ಈ ಅತೃಪ್ತಿಯನ್ನು ಹೋಗಲಾಡಿಸುವ ಯಾವುದೇ ಕ್ರಮವನ್ನು ಬ್ರಿಟಿಷರು ಯೋಚಿಸಲೂ ಇಲ್ಲ.

1850 ರ ದಶಕದಲ್ಲಿ ಭಾರತೀಯ ಸೈನಿಕರ ಅತೃಪ್ತಿ ಹೆಚ್ಚಾಗುತ್ತಾ ಬಂದಿತು. ಇದಕ್ಕೆ ಹಲವಾರು ಕಾರಣಗಳಿದ್ದವು. 1) ಡಾಲ್‌ಹೌಸಿಯು ಕೈಗೊಂಡ ವಿಸ್ತರಣ ಕ್ರಮಗಳು ಇವರ ಹಿತಕ್ಕೆ ವಿರೋಧವಾಗಿದ್ದವು. 2) ಔಧ್ ರಾಜ್ಯವನ್ನು ಬ್ರಿಟಿಷರು ವಶಪಡಿಸಿಕೊಂಡುದುದು ಜನರಲ್ಲಿ

ಅಸಮಾಧಾನವುಂಟುಮಾಡಿದ್ದಿತು ಮತ್ತು ಅನೇಕ ಭಾರತೀಯ ಸೈನಿಕರು ಔಧ್ ರಾಜಮನೆತನದ ಬಗ್ಗೆ ಗೌರವ ಹೊಂದಿದ್ದರು. 3) ಬ್ರಿಟಿಷರು ಕ್ರಿಶ್ಚಿಯನ್ ಮತಕ್ಕೆ ಜನರನ್ನು ಮತಾಂತರಗೊಳಿಸುವ ಚಳುವಳಿಯನ್ನು ಕೈಗೊಂಡುದು ಸಾಮಾನ್ಯ ಜನತೆಯಂತೆಯೇ ಸೈನಿಕರಲ್ಲಿಯೂ ಅತೃಪ್ತಿಯನ್ನು ತಂದಿದ್ದಿತು. 4) ಬರ್ಮ, ಚೀನಾ ಇಂತಹ ಹೊರರಾಷ್ಟ್ರಗಳಲ್ಲಿ ಬ್ರಿಟಿಷರು ತಮ್ಮ ಹಿತಸಾಧನೆಗಾಗಿ ನಡೆಸುತ್ತಿದ್ದ ಯುದ್ಧಗಳಲ್ಲಿ ತಮ್ಮನ್ನು ಉಪಯೋಗಿಸಿಕೊಳ್ಳುತ್ತಿದ್ದುದನ್ನು ಭಾರತದ ಸೈನಿಕರು ವಿರೋಧಿಸುತ್ತಿದ್ದರು. ಅನೇಕ ವೇಳೆ ಅವರು ಹೀಗೆ ಬೇರೆ ದೇಶಗಳಿಗೆ ಹೋಗಲು ನಿರಾಕರಿಸಿದುದೂ ಉಂಟು. ಇದನ್ನು ತಪ್ಪಿಸುವ ದೃಷ್ಟಿಯಿಂದ 1856ರಲ್ಲಿ 'ಜನರಲ್ ಸರ್ವಿಸ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್' ಎಂಬ ಮಸೂದೆಯೊಂದನ್ನು ಡಾಲ್‌ಹೌಸಿಯವರು ಜಾರಿಗೆ ತಂದರು. ಇದರ ಪ್ರಕಾರ ಭಾರತೀಯರು ಸೈನ್ಯಕ್ಕೆ ಸೇರುವಾಗ 'ತಾವು ಎಲ್ಲಿಗೆ ಬೇಕಾದರೂ ಹೋಗಲು ಸಿದ್ಧವಾಗಿದ್ದೇವೆ' ಎಂದು ಪ್ರಮಾಣ ಮಾಡುವ ಹೇಳಿಕೆಯೊಂದನ್ನು ಲಿಖಿತ ರೂಪದಲ್ಲಿ ಕೊಡಬೇಕಿದ್ದಿತು. ಇದರಿಂದ ಭಾರತೀಯ ಸೈನಿಕರಲ್ಲಿ ಅಸಮಾಧಾನ ಉಂಟಾಯಿತು. 5) ಭಾರತದಲ್ಲಿ ಇದ್ದ ಒಟ್ಟು ಸೈನಿಕ ಸಂಖ್ಯೆಯಲ್ಲಿ ಬಹುಮಂದಿ ಭಾರತೀಯರೇ ಆಗಿದ್ದು ಬ್ರಿಟಿಷ್ ಸೈನಿಕರು ಕೇವಲ ಕೆಲವೇ ವ್ಯಕ್ತಿಗಳಾಗಿದ್ದರು. ವಶಪಡಿಸಿಕೊಂಡ ಔಧ್‌ನಲ್ಲಿ, ಡೆಲ್ಲಿಯಲ್ಲಿ ಇಡಲಾದ ಸೈನಿಕ ತುಕಡಿಯಲ್ಲಿ ಮತ್ತು ಇಂತಹ ಇತರ ಸೈನಿಕ ತುಕಡಿಗಳಲ್ಲಿ ಎಲ್ಲರೂ ಭಾರತೀಯರೇ ಆಗಿದ್ದರು. ಕ್ರಿಮಿಯನ್ ಯುದ್ಧದಲ್ಲಿ ಬ್ರಿಟಿಷರು ಬಳಸಿದ ಸೈನ್ಯದಲ್ಲಿ ಭಾರತೀಯ ಸೈನಿಕರ ಭಾಗವೇ ಅತಿ ಮುಖ್ಯವಾಗಿದ್ದಿತು. ಬ್ರಿಟಿಷರು ತಮ್ಮ ಮೇಲೆ ಎಷ್ಟು ಅವಲಂಬನೆ ಹೊಂದಿದ್ದಾರೆ ಎಂಬುದನ್ನು ಭಾರತೀಯ ಸೈನಿಕರು ಈ ಮೇಲಿನ ಸ್ಥಿತಿಯಿಂದ ಮನಗಂಡರು. ಹೀಗಿರುವಲ್ಲಿಯೂ ಸಂಬಳ, ಆಹಾರ, ವಸತಿ, ಉಡುಪು ಮತ್ತು ಇತರ ಸೌಕರ್ಯಗಳ ಬಗ್ಗೆ ತಮಗೆ ಬ್ರಿಟಿಷರು ನೀಡಿದ ಕೆಳದರ್ಜೆಯ ಅಂತಸ್ತಿನಿಂದ ಭಾರತದ ಸೈನಿಕರಲ್ಲಿ ವಿಶೇಷ ಅತೃಪ್ತಿ ಬೆಳೆಯುತ್ತಿದ್ದಿತು.

6) ಹೀಗೆ ಮೇಲೆ ಹೇಳಿದ ಕಾರಣಗಳಿಂದ ಆಗಲೆ ತುಂಬ ಅಸಮಾ

ಧಾನಗೊಂಡಿದ್ದ ಭಾರತೀಯ ಸೈನಿಕರನ್ನು ರೊಚ್ಚಿಗೆಬ್ಬಿಸಿದುದು, ಕೊಬ್ಬು ಸವರಿದ್ದ ತುಪಾಕಿಗಳನ್ನು (greased cartridges) ಉಪಯೋಗಿಸಲು ಕೊಟ್ಟುದುದು. ಇವು ಹೊಸದಾದ ಎನ್‌ಫೀಲ್ಡ್ ಬಂದೂಕುಗಳಿಗೆ ಉಪಯೋಗಿಸುವ ತುಪಾಕಿಗಳಾಗಿದ್ದವು. ಬಂದೂಕಿನೊಳಗೆ ಇದನ್ನು ಹಾಕುವು ದಕ್ಕೆ ಮುಂಚೆ ಇದನ್ನು ಹಲ್ಲಿನಲ್ಲಿ ಕಚ್ಚಬೇಕಾಗಿದ್ದಿತು. ಈ ತುಪಾಕಿಗಳ ಮೇಲೆ ಇದ್ದುದು ಹಂದಿಯ ಮತ್ತು ಹಸುವಿನ ಕೊಬ್ಬು ಎಂಬುದು ಈ ಸೈನಿಕರಿಗೆ ತಿಳಿಯಿತು. ಮುಸಲ್ಮಾನರಿಗೆ ಹಂದಿ ಕೊಬ್ಬನ್ನು ಕಚ್ಚುವಂತೆ ಮಾಡಿದುದೂ, ಹಿಂದುಗಳಿಗೆ ಹಸುವಿನ ಕೊಬ್ಬನ್ನು ಕಚ್ಚುವಂತೆ ಮಾಡಿ ದುದೂ ಬ್ರಿಟಿಷರು ದುರುದ್ದೇಶಪೂರ್ವಕವಾಗಿ ಮಾಡಿದ ಕೆಲಸವೆಂದು ಇವೆರಡು ಮತಗಳ ಸೈನಿಕರೂ ಕೋಪಗೊಂಡರು. ಮತೀಯ ನಂಬಿಕೆಗಳ ವಿರುದ್ಧ ಬ್ರಿಟಿಷರು ನಡೆಸಿದ ಈ ಕಾರ್ಯದಿಂದ ಸೈನಿಕರಿಗೆ ಧಾರ್ಮೋದ್ರೇಕ ವಾಯಿತು. ಹಿಂದಿನಿಂದಲೂ, ಮೇಲೆ ಹೇಳಿದ ಕಾರಣಗಳಿಂದ ಆಗಲೇ ಅತೃಪ್ತಿ, ಅಸಮಾಧಾನಗೊಂಡಿದ್ದ ಸೈನಿಕರಿಗೆ ಕೊಬ್ಬು ಸವರಿದ್ದ ತುಪಾಕಿ ಗಳನ್ನು ಉಪಯೋಗಿಸಲು ಕೊಟ್ಟುದುದು ತಕ್ಷಣವೇ ಹಠಾತ್ತಾಗಿ ದಂಗೆ ಏಳಲು ಪ್ರಚೋದನೆಯಾಯಿತು. ಇದು ಬ್ರಿಟಿಷರನ್ನು ಬಲಪೂರ್ವಕವಾಗಿ ದೇಶದಿಂದ ಓಡಿಸುವ ಪ್ರಯತ್ನವಾಗಿ ಪರಿಣಮಿಸಿತು.

ದಂಗೆಯು ಹರಡಿದುದು

ಮಂಗಲ್ ಪಾಂಡೆ ಎಂಬ ಬ್ರಾಹ್ಮಣ ಸಿಪಾಯಿ ಬ್ಯಾರಕ್‌ಪೂರ್ ಎಂಬಲ್ಲಿ 1856 ರ ಮಾರ್ಚಿ 29 ರಂದು ಬ್ರಿಟಿಷರ ಆಳ್ವಿಕೆಯನ್ನು ನೇರವಾಗಿ ಪ್ರತಿಭಟಿಸಿದನು. ಇದೇ ದಂಗೆಯ ಪ್ರಾರಂಭ. 1857 ರ ಮೇ 11 ರಂದು ಮೀರತ್‌ನಲ್ಲಿದ್ದ ಸೈನಿಕರು ದಂಗೆ ಎದ್ದು ಅವರ ಬ್ರಿಟಿಷ್ ಮೇಲಧಿ ಕಾರಿಯನ್ನು ಗುಂಡಿಕ್ಕಿ ಕೊಂದರು ಹಾಗೂ ಅವರ ಬಂಗಲೆಗಳನ್ನು ಸುಟ್ಟು ಹಾಕಿದರು. ಅಲ್ಲಿಂದ ಅವರು ಡೆಲ್ಲಿಗೆ ತೆರಳಿ ಹಿಂದಿನ ಮೊಘಲ್ ಚಕ್ರವರ್ತಿ ಬಹದೂರ್‌ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿದರು. ತರುವಾಯ ಉತ್ತರಪ್ರದೇಶ, ಬಂಗಾಳ, ಬಿಹಾರ, ಸೆಂಟ್ರಲ್ ಇಂಡಿಯ, ರಾಜಸ್ಥಾನ್, ಡೆಕ್ಕನ್ ಮತ್ತು ಪಂಜಾಬಿನಲ್ಲಿದ್ದ ಸೈನಿಕರೂ ದಂಗೆ ಎದ್ದರು. ಹೀಗೆ ಭಾರತೀಯ ಸೈನಿಕರು ತಾವೇತಾವಾಗಿ ದಂಗೆ ಎದ್ದುದನ್ನು ಗಮನಿಸಿದ

ರಾಜರುಗಳು, ನವಾಬರು ಮತ್ತು ಪಾಳೆಯಗಾರರು ಈ ಸೈನಿಕರ ಮುಂದಾಳತ್ವಕ್ಕೆ ಮುಂದೆ ಬಂದರು. ಇವರೆಲ್ಲರೂ ಬ್ರಿಟಿಷರಿಂದ ಅಧಿಕಾರ ಹಾಗೂ ಸಂಪತ್ತು ನಷ್ಟವಾಗಿಸಿಕೊಂಡವರಾಗಿದ್ದರು. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹೀಗೆ ಹರಡುತ್ತಿದ್ದ ದಂಗೆಗೆ ಮುಂದಾಳಾದವರಲ್ಲಿ ಈ ಕೆಲವರು ಮುಖ್ಯವಾಗಿದ್ದರು :- ಬಹದೂರ್ ಷಾ, ಝಾನ್ಸಿರಾಣಿ, ತಾಂತಿಯ ಟೋಪಿ, ನಾನಾ ಸಾಹೇಬ್, ಖಾನ್ ಬಹದೂರ್ ಖಾನ್, ಅಜೀಮುಲ್ಲ ಮತ್ತು ಕುನ್ವಾರ್ ಸಿಂಗ್. ಇವರೆಲ್ಲರೂ ಭಾರತದ ಸ್ವಾತಂತ್ರ್ಯ ಹೋರಾಟದ ಮೊದಲಿಗರೆಂದು ಹೇಳಬಹುದು. ಇವರು ತಂತಮ್ಮ ಶಕ್ತ್ಯಾನುಸಾರ ಬ್ರಿಟಿಷರೊಡನೆ ಹೋರಾಡಿದರು. ಆದರೆ ಬ್ರಿಟಿಷರು ಇವರನ್ನು ಬಲ ಹಾಗೂ ಕುತಂತ್ರಗಳಿಂದ ಸೋಲಿಸಿದರು. ಈ ಸ್ವಾತಂತ್ರ್ಯವೀರರ ಕದನಗಳ ವಿವರಣೆ ಇಲ್ಲಿ ಅನಗತ್ಯ.

ದಂಗೆ ಎದ್ದ ಸಿಪಾಯಿಗಳ ಇಚ್ಛೆಯಂತೆ ಭಾರತದ ಸಾಮ್ರಾಟನೆಂದು ಘೋಷಿಸಿಕೊಂಡ ಬಹದೂರ್ ಷಾ ಆಗಲೆ ವೃದ್ಧರಾಗಿದ್ದು ಹೋರಾಟದ ಮುಂದಾಳತ್ವ ವಹಿಸಲು ಅಸಮರ್ಥರಾಗಿದ್ದರು. 1857 ಸೆಪ್ಟೆಂಬರ್ 21ರಂದು ಅವರು ಬ್ರಿಟಿಷರಿಗೆ ಶರಣಾಗತರಾಗಬೇಕಾಯಿತು. ಬ್ರಿಟಿಷರು ಅವರನ್ನು ಗಡಿಪಾರು ಮಾಡಿ ರಂಗೂನಿಗೆ ಕಳಿಸಿಬಿಟ್ಟರು. ಪೇಶ್ವೆ ಬಾಜಿರಾಯನ ಮಗನಾಗಿದ್ದ ನಾನಾ ಸಾಹೇಬ್ ಧೈರ್ಯದಿಂದ ಯುದ್ಧಮಾಡಿ ಕೊನೆಗೆ ಕಾನ್‌ಪುರದಲ್ಲಿ ಬ್ರಿಟಿಷರಿಗೆ ಸೋಲಬೇಕಾಯಿತು. ತಾಂತಿಯ ಟೋಪಿ ಎಂದು ಕರೆಯಲ್ಪಡುತ್ತಿದ್ದ ರಾಮಚಂದ್ರ ಪಾಂಡುರಂಗರು ಗ್ವಾಲಿಯರ್ ಸೈನಿಕರ ಮುಂದಾಳತ್ವ ವಹಿಸಿ ಬ್ರಿಟಿಷರನ್ನು ಕೆಲವು ಕಡೆ ಎದುರಿಸಿದರು. ಕೊನೆಯಲ್ಲಿ ಭಾರತೀಯನೇ ಆದ ಮಾನಸಿಂಗ್ ಎಂಬಾತನ ದೇಶದ್ರೋಹದಿಂದ ಬ್ರಿಟಿಷರ ಕೈಗೆ ಸೆರೆಬೀಳಬೇಕಾಯಿತು. ಬ್ರಿಟಿಷರು ಅವರನ್ನು ಗಲ್ಲಿಗೇರಿಸಿದರು. ಕುನ್ವಾರ್‌ಸಿಂಗ್ ಎಂಬ ವೀರನು ಅನೇಕ ಕಡೆಗಳಲ್ಲಿ ಬ್ರಿಟಿಷ್ ಸೇನೆಯನ್ನು ಎದುರಿಸಿ ಕೊನೆಗೆ ಸೋಲಬೇಕಾಯಿತು. ಎಲ್ಲರಿಗಿಂತ ಹೆಚ್ಚು ದಿಟ್ಟತನದಿಂದ ಬ್ರಿಟಿಷರೊಡನೆ ಹೋರಾಡಿದವಳು ವೀರ ಮಹಿಳೆ ಝಾನ್ಸಿರಾಣಿ ಲಕ್ಷ್ಮಿಬಾಯಿ. ಝಾನ್ಸಿಯಲ್ಲಿ ಇದ್ದ ಸಿಪಾಯಿಗಳು ದಂಗೆ ಘೋಷಿಸಿದಾಗ ಬ್ರಿಟಿಷರು ಕೈಗೊಂಡ ದಮನ ಕ್ರಿಯೆಗಳನ್ನು ಸಾಹಸ

ದಿಂದ ಎದುರಿಸಲು ಝಾನ್ಸಿರಾಣಿಯು ಪ್ರಬಲವಾದ ವ್ಯವಸ್ಥೆ ಏರ್ಪಡಿಸಿ ಹೋರಾಟ ನಡೆಸಿದಳು. ಬ್ರಿಟಿಷರು ಈ ರಾಣಿಯೊಡನೆ ನಡೆಸಿದ ಕದನವೇ 1857ರ ಯುದ್ಧದ ಅತ್ಯಂತ ಘೋರವಾದ ಕದನವಾಗಿದ್ದಿತು. ಸ್ತ್ರೀವ್ಯಕ್ತಿಯು ಅಷ್ಟು ಮಟ್ಟಿನ ಘೋರ ಸಂಗ್ರಾಮ ನಡೆಸಿದುದು ಎಲ್ಲರಿಗೂ ಆಶ್ಚರ್ಯ ವಾಯಿತು. ಬ್ರಿಟಿಷರ ಕಡೆ ಸೇನಾಧಿಪತಿಯಾಗಿ ಹೋರಾಡಿದ ಸರ್ ಹ್ಯೂರೋಸ್ ಎಂಬಾತನು ಹೀಗೆ ಹೇಳಿದ್ದಾನೆ: "ಸ್ತ್ರೀ ಆಗಿದ್ದಾಗ್ಯೂ ಸಹ, ಆಕೆಯು ದಂಗೆ ಎದ್ದವರಲ್ಲಿ ಎಲ್ಲರಿಗಿಂತಲೂ ಅತ್ಯಂತ ಧೈರ್ಯಶಾಲಿಯೂ ಹಾಗೂ ಅತ್ಯುತ್ತಮ ಸೈನಿಕ ಮುಂದಾಳು ವ್ಯಕ್ತಿಯೂ ಆಗಿದ್ದಳು." ಝಾನ್ಸಿರಾಣಿಯನ್ನು ಸೋಲಿಸಿದಾಗ ಬ್ರಿಟಿಷರು ಭಾರತದ 1857 ರ ಸ್ವಾತಂತ್ರ್ಯ ಸಂಗ್ರಾಮವನ್ನು ಪೂರ್ತಿಯಾಗಿ ದಮನ ಮಾಡಿದಂತಾಯಿತು. ಬ್ರಿಟಿಷರು ಸ್ವಾಭಾವಿಕವಾಗಿಯೇ ಸಂತೋಷಭರಿತರಾದರು ; ಆದರೆ ಭಾರತೀ ಯರು ಈ ಪ್ರಥಮ ಪ್ರಯತ್ನ ಫಲಿಸದುದರ ಬಗ್ಗೆ ಚಿಂತಾಕ್ರಾಂತರಾದರು. ಮತ್ತು ಅನೇಕ ಮುಂದಾಳುಗಳು ಹೊಸ ಮಾರ್ಗಗಳ ಅನ್ವೇಷಣೆಯಲ್ಲಿ ನಿರತರಾದರು.

1857 ರ ಸಂಗ್ರಾಮ ಕುರಿತ ಕೆಲವು ಅಭಿಪ್ರಾಯಗಳು

1857 ರಲ್ಲಿ ಜರುಗಿದ ಬ್ರಿಟಿಷರ ವಿರುದ್ಧದ ದಂಗೆ ಕುರಿತು ಇತಿಹಾಸ ಕಾರರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಬ್ರಿಟಿಷರು ಇದನ್ನು ಕೇವಲ ಸಿಪಾಯಿದಂಗೆ ಎಂದು ಕರೆದರು. ಆರ್. ಸಿ. ಮಜುಂದಾರ್ ಎಂಬ ಇತಿಹಾಸಕಾರರು ಇದು ಬಹುಮಟ್ಟಿಗೆ ಸೈನ್ಯದ ಕ್ರಿಯಾಚಾಲನೆಯಾಗಿದ್ದುದು ನಿಜ ; ಆದರೆ ಸಾಮಾನ್ಯ ಜನರೂ ಸ್ವಲ್ಪ ಮಟ್ಟಿಗೆ ಇದರಲ್ಲಿ ಪಾತ್ರ ವಹಿಸಿ ದರು ಎಂದಿರುತ್ತಾರೆ.[1] ಎಸ್. ಬಿ. ಚೌಧರಿ[2] ಅವರ ಪ್ರಕಾರ 1857 ರ ದಂಗೆಯು ಸಿಪಾಯಿಗಳಿಂದ ಪ್ರಾರಂಭವಾಯಿತಾದರೂ ವಿದೇಶಿ ಅಧಿಕಾರ ವನ್ನು ಧಿಕ್ಕರಿಸಲು ದೇಶದ ಅನೇಕ ವರ್ಗದವರು ಕೂಡಿ ಕೈಗೊಂಡ

1. Mujumdar R. C.; The Sepoy Mutiny and the Revolt of 1857, Calcutta, 1957
2. Choudhari S. B.; Civil Rebellion in Indian Mutinies, 1857–58, Calcutta, 1957, P. 257.

ಪ್ರಥಮ ಪ್ರಯತ್ನವಾಗಿದೆ. 1857 ರ ದಂಗೆಯು ವಾಸ್ತವವಾಗಿ ಬ್ರಿಟಿಷರ ವಿರುದ್ಧದ ರಾಷ್ಟ್ರೀಯ ಸಮರವಾಗಿ ಅದು ಭಾರತದ ಪ್ರಥಮ ಸ್ವಾತಂತ್ರ್ಯ ಯುದ್ಧವಾಗಿದ್ದಿತೆಂಬುದು ಇನ್ನೊಂದು ಅಭಿಪ್ರಾಯವಾಗಿದೆ.

ಮೇಲಿನ ವಿವಿಧ ಅಭಿಪ್ರಾಯಗಳ ಚರ್ಚೆ ಇಲ್ಲಿ ಅನವಶ್ಯಕ. ಬ್ರಿಟಿಷರ ವಿರುದ್ಧ ಹೋರಾಡಿದ ಭಾರತೀಯರ ಉದ್ದೇಶ ದೇಶವನ್ನು ಬ್ರಿಟಿಷರ ರಾಜಕೀಯ ಹಿಡಿತದಿಂದ ತಪ್ಪಿಸಬೇಕು ಎಂಬುದೇ ಆಗಿದ್ದಿತಾದುದ ರಿಂದ 1857ರ ದಂಗೆಯನ್ನು ಭಾರತದ ಸ್ವಾತಂತ್ರ್ಯಸಮರವೆಂದು ಹೇಳುವು ದರಲ್ಲಿ ಔಚಿತ್ಯವಿದೆ. ಆದರೆ ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿರು ವಂತೆ ಇದು ಪದದ ಪೂರ್ಣಾರ್ಥದಲ್ಲಿ ರಾಷ್ಟ್ರೀಯ ದಂಗೆ ಎಂದು ಹೇಳಲಾ ಗುವುದಿಲ್ಲ. ಏಕೆಂದರೆ ದಂಗೆಗೆ ಸೇರದ ಕೆಲವು ಗುಂಪುಗಳಿದ್ದವು; ಹಾಗೂ ಕೆಲವು ಗುಂಪುಗಳು ಬ್ರಿಟಿಷರಿಗೇ ಬೆಂಬಲ ನೀಡಿದವು. ಅನೇಕ ರಾಜರು ಗಳು ದಂಗೆಯಲ್ಲಿ ಭಾಗಿಗಳಾಗಲಿಲ್ಲ. ಪಾಟಿಯಾಲ ರಾಜರಂತಹ ಕೆಲವು ರಾಜರು ಬ್ರಿಟಿಷರಿಗೆ ಸಹಾಯ ನೀಡಿದರು. ಬ್ರಿಟಿಷರು ಸಾವಿರಾರು ಜಮೀನುದಾರರ ಜಮೀನುಗಳನ್ನು ಅವರಿಂದ ಕಸಿದುಕೊಂಡಿದ್ದರಾದರೂ, ಎಷ್ಟೋ ಜಮೀನುದಾರರು ದಂಗೆಗೆ ಸೇರಲಿಲ್ಲ. ಆಗ ಇದ್ದ ಸುಮಾರು ಐವತ್ತು ಲಕ್ಷ ಮುಸಲ್ಮಾನರಲ್ಲಿ ಕೇವಲ ಅಲ್ಪಭಾಗ ಮಾತ್ರ ಮೊಘಲ್ ಚಕ್ರವರ್ತಿಯ ಹಿಂದೆ ನಿಂತರು. ಸಿಖ್ಖರು ಬ್ರಿಟಿಷರಿಗೆ ನಿಷ್ಠೆಯಿಂದಿದ್ದು ಅವರಿಗೇ ಸಹಾಯಕರಾದರು. ಭಾರತದಲ್ಲಿ ಆಗಿನ ಕಾಲದಲ್ಲಿ ರಾಷ್ಟ್ರೀಯತಾ ಭಾವನೆ, ರಾಷ್ಟ್ರವ್ಯಾಪಿ ಭಾರತ ದೇಶಪ್ರೇಮದ ಭಾವನೆಗಳು ಬೆಳೆದಿರಲಿಲ್ಲವೆಂಬುದನ್ನು ಈ ಮೇಲಿನ ಅಂಶಗಳು ಸ್ಪಷ್ಟಪಡಿಸುವುವು. ಡಿ. ಸಿ. ಗುಪ್ತ ಹೇಳಿರುವಂತೆ, "ದೇಶಪ್ರೇಮ ಹಾಗೂ ಭಾರತ ರಾಷ್ಟ್ರೀ ಯತಾ ಭಾವನೆಗಳು ಆಗ ಇನ್ನೂ ಉಗಮಹಂತದಲ್ಲಿದ್ದವು; ಹತ್ತೊಂಬತ್ತನೆ ಶತಮಾನದ ಕೊನೆಯ ಭಾಗದವರೆಗೂ ಈ ಭಾವನೆಗಳು ಸಾಕಷ್ಟು ಬಲ ವಾಗಿರಲಿಲ್ಲ". [1] ವಿವಿಧ ಮುಂದಾಳುಗಳು ನಡೆಸಿದ ಹೋರಾಟವು ಸುವ್ಯವಸ್ಥಿತವಾಗಿರಲಿಲ್ಲವೆಬುಂದು ಇನ್ನೊಂದು ಗಮನಾರ್ಹ ಅಂಶವಾಗಿದೆ.

---

1. Gupta D. C,; Indian National Movement, Vikas. 1970, P. 12

ಈ ಮುಂದಾಳುಗಳಲ್ಲಿ ಒಬ್ಬೊಬ್ಬರೂ ತಮ್ಮವೇ ಆದ ಆಸೆ, ಆಕಾಂಕ್ಷೆಗಳನ್ನು ಹೊಂದಿದ್ದರು. ಅವರ್ಯಾರೂ ಸಮಗ್ರ ಭಾರತದ ಸರ್ಕಾರ ರಚಿಸುವ ಆಲೋಚನೆ ಹೊಂದಿರಲಿಲ್ಲ. ಒಂದು ವೇಳೆ ಬ್ರಿಟಿಷರನ್ನು ಅಂದಿನ ಸಮರದಲ್ಲಿ ಸೋಲಿಸಲು ಸಾಧ್ಯವಾಗಿದ್ದರೂ ತರುವಾಯ ಈ ವಿವಿಧ ರಾಜರುಗಳೊಳಗೆ ಅಂತರ್‌ಯುದ್ಧ ಸಂಭವಿಸುತ್ತಿತ್ತೇ ವಿನಹ ಸ್ವತಂತ್ರ ಅಖಂಡ ಭಾರತದ ಸರ್ಕಾರವೊಂದು ರಚನೆಯಾಗುವ ಪರಿಸ್ಥಿತಿ ಇರಲಿಲ್ಲ ಎಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ.

ದಂಗೆಯ ಪರಿಣಾಮಗಳು

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷರ ಹಾಗೂ ಭಾರತೀಯರ ಮೇಲೆ ತನ್ನದೇ ಆದ ಕೆಲವು ಮುಖ್ಯ ಪರಿಣಾಮಗಳನ್ನು ಹೊಂದಿದ್ದಿತು.

1. ರಾಜಕೀಯ ವ್ಯವಸ್ಥೆಯ ಬದಲಾವಣೆ

ಅವರೆವಿಗೆ ಭಾರತದ ಆಳ್ವಿಕೆಯು ಗೌರ್ನರ್ ಜನರಲ್ ಮತ್ತು ಈಸ್ಟ್ ಇಂಡಿಯಾ ಕಂಪೆನಿಯ ಅಧ್ಯಕ್ಷರ ಕೈಯಲ್ಲಿದ್ದಿತು. ಪ್ರಥಮ ಬಾರಿಗೆ ಬ್ರಿಟಿಷ್ ಆಳ್ವಿಕೆಯ ವಿರುದ್ಧ ನಡೆಸಿದ ಬೃಹತ್ ಪ್ರಮಾಣದ ಸಂಗ್ರಾಮದ ಪರಿಣಾಮವಾಗಿ ಭಾರತದ ಆಡಳಿತ ಜವಾಬ್ದಾರಿಯನ್ನು ಬ್ರಿಟಿಷ್ ಸರ್ಕಾರವೇ ನೇರವಾಗಿ ಕೈಗೊಂಡಿತು. 1858ರಲ್ಲಿ ಅನುಮೋದಿಸಲಾದ ಭಾರತ ಸರ್ಕಾರವನ್ನು ಉತ್ತಮಗೊಳಿಸುವ ಮಸೂದೆಯ ('Act For the Better Government of India') ಪ್ರಕಾರ 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ' ಎಂಬ ಸ್ಥಾನವನ್ನು ನಿರ್ಮಿಸಲಾಯಿತು. ಈ ಸ್ಥಾನಕ್ಕೆ ನೇಮಿಸಲ್ಪಡುವವರು ಬ್ರಿಟಿಷ್ ಕ್ಯಾಬಿನೆಟ್ಟಿನ ಸದಸ್ಯರಾಗಿರುತ್ತಿದ್ದರು. ಹಾಗೂ ನೇರವಾಗಿ ಬ್ರಿಟಿಷ್ ಪಾರ್ಲಿಮೆಂಟಿಗೆ ಇವರು ಹೊಣೆಯಾಗಿರುತ್ತಿದ್ದರು. ಇವರ ಸಹಾಯಕ್ಕಾಗಿ ತಾಂತ್ರಿಕ ಸಲಹಾ ಸದಸ್ಯರನ್ನೊಳಗೊಂಡ 'ಭಾರತೀಯ ಸಮಿತಿ' [ಇಂಡಿಯ ಕೌನ್ಸಿಲ್] ಯನ್ನು ರಚಿಸಲಾಯಿತು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಟರ ಪ್ರತಿನಿಧಿಯಾಗಿ 'ವೈಸರಾಯ್' ಪದವಿಯೊಂದನ್ನು ಸೃಜಿಸಲಾಯಿತು. 'ಸೆಕೆಟರಿ ಆಫ್ ಸ್ಟೇಟ್' ಆದೇಶದ

ಪ್ರಕಾರ ವೈಸರಾಯ್ ನಡೆದುಕೊಳ್ಳತಕ್ಕದ್ದೆಂದು ವಿಧಿಸಲಾಯಿತು. ಹೀಗೆ ಭಾರತ ಸರ್ಕಾರವು ಬ್ರಿಟಿಷ್ ಸರ್ಕಾರದ ನೇರ ವಶಕ್ಕೆ ಬಂದಿತು.

2. ಭಾರತ ಕುರಿತ ಬ್ರಿಟಿಷರ ನೀತಿಯಲ್ಲಿ ಬದಲಾವಣೆ

ಭಾರತದ ಹಾಗೂ ಭಾರತೀಯರ ಬಗ್ಗೆ ಬ್ರಿಟಿಷರ ಧೋರಣೆಯಲ್ಲಿ ತೀವ್ರ ಬದಲಾವಣೆಯುಂಟಾಯಿತು. ತಾವು ಭಾರತೀಯರ ಮೇಲೆ ಎಸಗಿದ ಕ್ರೌರ್ಯಗಳೆಲ್ಲವನ್ನು ಮರೆತು, ದಂಗೆ ಎದ್ದ ಭಾರತೀಯರು ಕೆಲವು ಆಂಗ್ಲೇಯ ರನ್ನು ಹಿಂಸೆಗಳಿಗೊಳಪಡಿಸಿದುದನ್ನು ಮಾತ್ರ ಜ್ಞಾಪಿಸಿಕೊಂಡು ಭಾರತೀಯ ರನ್ನು ನಂಬಬಾರದೆಂಬ ಹಾಗೂ ಭಾರತೀಯರನ್ನು ಜಾಗರೂಕತೆಯಿಂದ ನೋಡುತ್ತಲೇ ಇರಬೇಕೆಂಬ ಭಾವನೆಗಳನ್ನು ಬೆಳೆಸಿಕೊಂಡರು. ಇದಕ್ಕೆ ತಕ್ಕ ಏರ್ಪಾಡುಗಳ ಕಡೆ ಗಮನಹರಿಸಿದರು. ಭಾರತೀಯರ ಸಾಮಾಜಿಕ ಹಾಗೂ ಮತೀಯ ವಿಷಯಗಳಲ್ಲಿ ಪ್ರವೇಶಿಸಿ ಕೆಲವು ಸುಧಾರಣೆಗಳನ್ನು ತರುವ ಪ್ರಯತ್ನವನ್ನು ಮಾಡಿದುದು ಭಾರತೀಯರು ದಂಗೆ ಎದ್ದುದಕ್ಕೆ ಸ್ವಲ್ಪ ಮಟ್ಟಿಗೆ ಕಾರಣವಾಯಿತೆಂಬುದನ್ನು ಗ್ರಹಿಸಿ ಬ್ರಿಟಿಷರು ಈ ಸಮರದ ತರುವಾಯ ಇಂತಹ ಕಾರ್ಯಾಚರಣೆಗಳ ಬಗ್ಗೆ ತಮ್ಮ ಧೋರಣೆಯನ್ನು ಬದಲಾಯಿಸಿಕೊಂಡರು.

3. ಸೇನೆಯಲ್ಲಿನ ಬದಲಾವಣೆಗಳು

ಭಾರತದ ಸೇನೆಯಲ್ಲಿ ಬ್ರಿಟಿಷ್ ಸೈನಿಕರ ವಿಭಾಗ ಅವರಿಗೆ ಸಾಪೇಕ್ಷ ವಾಗಿ ಕಡಿಮೆ ಇದ್ದುದನ್ನು ಹೆಚ್ಚು ಮಾಡಲಾಯಿತು. ಬಂಗಾಳ ಸೇನೆಯಲ್ಲಿ ಬ್ರಿಟಿಷ್ ಮತ್ತು ಭಾರತೀಯ ಸೈನಿಕರು ಸಮವಾಗಿರಬೇಕೆಂದೂ, ಇತರ ಕಡೆಗಳಲ್ಲಿ ಇಬ್ಬರು ಭಾರತೀಯ ಸೈನಿಕರಿಗೆ ಒಬ್ಬ ಬ್ರಿಟಿಷ್ ಸೈನಿಕನು ಇರುವಂತೆಯೂ ಏರ್ಪಾಡು ಮಾಡಲಾಯಿತು. ಪುನರ್ರಚಿಸಲಾದ ಸೇನೆ ಯಲ್ಲಿ ಬ್ರಾಹ್ಮಣರು ಹಾಗೂ ರಜಪೂತರನ್ನು ಸೇರಿಸಲಿಲ್ಲ. ಸಿಖ್ಖರು, ಪಠಾಣರು ಮತ್ತು ಗೂರ್ಖಾಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸೇನೆಗೆ ನೇಮಿಸಿ ಕೊಳ್ಳಲಾಯಿತು. ಜವಾಹರಲಾಲ್ ಅವರು ಹೇಳಿರುವಂತೆ [1] ಸೇನೆಗೆ

---

1. Jawaharlal Nehru; Discovery of India, Calcutta, The Signet Press, 1946

ಸೇರಿಸಿಕೊಂಡ ವಿವಿಧ ಪಂಗಡಗಳೊಳಗೆ ರಾಷ್ಟ್ರೀಯ ಐಕ್ಯತಾ ಭಾವನೆಯು ಉದ್ಭವಿಸಲು ಅವಕಾಶವಿರದಂತೆ ಬೇರೆ ಬೇರೆ ಪಂಗಡಗಳನ್ನು ಜೋಡಿಸಲಾಯಿತು; ಅಲ್ಲದೆ ಸೇನೆಯಲ್ಲಿದ್ದ ಮತೀಯ ಹಾಗೂ ಬುಡಕಟ್ಟು ಜನಾಂಗದವರಲ್ಲಿ ಮತೀಯ ಮತ್ತು ಬುಡಕಟ್ಟು ನಿಷ್ಠೆಯನ್ನು ಪ್ರೋಷಿಸಲು ಪ್ರಯತ್ನಿಸಲಾಯಿತು. ಸೇನೆಯವರು ಜನತೆಯೊಡನೆ ಸಂಪರ್ಕ ಹೊಂದಿರದಂತೆ ಜಾಗರೂಕತೆಯಿಂದ ನೋಡಿಕೊಳ್ಳಲಾಯಿತು. ಸೇನೆಯಲ್ಲಿನ ಮುಖ್ಯ ಸ್ಥಾನಗಳೆಲ್ಲವನ್ನೂ ಇಂಗ್ಲಿಷರಿಗೆ ಮೀಸಲಾಗಿ ಇಡಲಾಯಿತು. ಯುದ್ಧ ಬಳಕೆಯ ಹೆಚ್ಚು ಪರಿಣಾಮಕಾರಿ ಆಯುಧಗಳನ್ನು ಭಾರತೀಯ ಸೈನಿಕರಿಗೆ ಕೊಡುತ್ತಿರಲಿಲ್ಲ. ಈ ವಿವಿಧ ಸೇನಾ ಪುನರ್ವ್ಯವಸ್ಥೆಯ ಮೂಲಕ ಬ್ರಿಟಿಷರು ತಮಗೆ ನಿಷ್ಠೆಯಿಂದಿರತಕ್ಕ ಭಾರತೀಯ ಸೇನೆಯನ್ನು ನಿರ್ಮಿಸಿಕೊಂಡರು. ಈ ಭಾರತೀಯ ಸೇನೆಯು ವಾಸ್ತವವಾಗಿ ಬ್ರಿಟಿಷ್ ಸಾಮ್ರಾಜ್ಯದ ಬೆನ್ನೆಲುಬಾಗಿದ್ದಿತು.

4. ಭಾರತೀಯ ರಾಜರುಗಳಿಗೆ ಜೀವದಾನ

ಭಾರತದಲ್ಲಿ ವಿವಿಧ ರಾಜ್ಯಗಳಿದ್ದು ಈ ವಿವಿಧ ರಾಜರುಗಳೊಳಗೆ ಒಮ್ಮತವಿಲ್ಲದೆ ಅವರುಗಳೊಳಗೆ ಭೇದ ಕಲ್ಪಿಸುವಂತೆ ಮಾಡುವುದು ಬ್ರಿಟಿಷರ ಕುಟಿಲನೀತಿಯಾಗಿದ್ದಿತು. ಈ ದೃಷ್ಟಿಯಿಂದ ಹಿಂದೆ ಅನುಸರಿಸುತ್ತಿದ್ದ ದೇಶೀಯ ರಾಜ್ಯಗಳನ್ನು (Native States) ತಮ್ಮ ವಶಕ್ಕೆ ತೆಗೆದುಕೊಳ್ಳುವ ನೀತಿಯನ್ನು ಕೈಬಿಡಲಾಯಿತು. ಬ್ರಿಟಿಷ್ ಸಾಮ್ರಾಜ್ಯದ ಪರಮಾಧಿಕಾರಕ್ಕೆ ಒಪ್ಪಿಸಿ ದೇಶೀಯ ರಾಜರುಗಳಿಗೆ ಅವರವರ ಸಂಸ್ಥಾನಗಳನ್ನು ಬಿಟ್ಟುಕೊಡಲಾಯಿತು. ಹೀಗೆ ಮಾಡಿದುದರಿಂದ ಈ ರಾಜರುಗಳು ಬ್ರಿಟಿಷರ ಬಗ್ಗೆ ನಿಷ್ಠೆಯಿಂದ ವರ್ತಿಸಿದರು. ಭಾರತದ ರಾಷ್ಟ್ರೀಯತಾ ಭಾವನೆ ಬೆಳೆಯಲು ಅಡಚಣೆಯುಂಟುಮಾಡುವ ವಿರೋಧ ಶಕ್ತಿಯನ್ನು ಇದರಿಂದ ಕಲ್ಪಿಸಲಾಯಿತು. 'ವಿಭಜಿಸು, ಆಳು' (Divide and Rule) ಎಂಬ ಬ್ರಿಟಿಷರ ನೀತಿಗೆ ಇದು ಒಂದು ನಿದರ್ಶನವಾಗಿದೆ.

5. ಭಾರತದ ಜನತೆಯ ಮೇಲೆ ದಂಗೆ ವಿಫಲತೆಯ ಪರಿಣಾಮ

ಹುಮ್ಮಸ್ಸಿನಿಂದ ಹೋರಾಡಿದ ವೀರರ ಪ್ರಯತ್ನ ಫಲಿಸದೆ ಬ್ರಿಟಿಷರಿಗೆ ಶರಣಾಗತರಾಗಬೇಕಾದ ಸಂದರ್ಭದಿಂದ ಭಾರತೀಯರು ಕೆಲವು ಮುಖ್ಯ

ಪಾಠಗಳನ್ನು ಕಲಿತಂತಾಯಿತು. ಏಕೈಕ ರಾಷ್ಟ್ರೀಯ ಮುಖಂಡನ ನೇತೃತ್ವ, ಪೂರ್ವಯೋಜಿತ ಯೋಜನಾಬದ್ಧ ಸಿದ್ಧತೆ, ವ್ಯವಸ್ಥಾ ಬಲ, ದಕ್ಷ ಹಾಗೂ ಸುಶಿಕ್ಷಿತ ಸೇನಾ ಬಲ, ಉತ್ತಮ ಯುದ್ಧ ಅಸ್ತ್ರಗಳು– ಇವೆಲ್ಲವೂ ಇಲ್ಲದಿದ್ದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಬಲವನ್ನು ಎದುರಿಸುವುದು ಸಾಧ್ಯವಿಲ್ಲ ಎಂಬುದು 1857ರ ದಂಗೆಯ ವಿಫಲತೆಯಿಂದ ಭಾರತೀಯ ಸ್ವಾತಂತ್ರ್ಯಮುಂದಾಳುಗಳು ಹಾಗೂ ಸ್ವಾತಂತ್ರ್ಯವೀರರು ಕಲಿತ ಒಂದು ಪಾಠ.

1857ರ ಹೋರಾಟದಿಂದ ಜನತೆಯ ಮನೋಧರ್ಮದ ಮೇಲೆ ಉಂಟಾದ ಪರಿಣಾಮವು ಇನ್ನೊಂದು ಗಮನಾರ್ಹ ಅಂಶವಾಗಿದೆ. ದಂಗೆಯನ್ನು ದಮನ ಮಾಡುವ ಕಾರ್ಯದಲ್ಲಿ ಬ್ರಿಟಿಷರು ಭಾರತೀಯರ ಮೇಲೆ ಎಸಗಿದ ಕ್ರೌರ್ಯ ವರ್ಣಿಸಲಸಾಧ್ಯ. ಗ್ಯಾರಟ್ ಎಂಬ ಪ್ರಸಿದ್ಧ ಇತಿಹಾಸಕಾರ ಬ್ರಿಟಿಷರ ಕಾರ್ಯಾಚರಣೆಗಳನ್ನು ಹೀಗೆ ವಿವರಿಸಿರುತ್ತಾನೆ:

"ಬ್ರಿಟಿಷರು ತಮ್ಮ ಸೆರೆಯಾಳುಗಳನ್ನು ಯಾವ ವಿಚಾರಣೆಗೂ ಗುರಿಪಡಿಸದೆ ಕೊಂದರು. ಕೊಲ್ಲುವುದರಲ್ಲಿ ಅತ್ಯಂತ ಅನಾಗರಿಕ ವಿಧಾನದಲ್ಲಿ ಕೊಂದರು – ಮುಸಲ್ಮಾನರನ್ನು ಹಂದಿ ಚರ್ಮಗಳಲ್ಲಿ ಸುತ್ತಿ ಹೊಲಿದು ಅವರಿಗೆ ಹಂದಿಕೊಬ್ಬನ್ನು ಬಳಿದು ಗಲ್ಲಿಗೇರಿಸಿ ನಂತರ ಅವರ ಶವವನ್ನು ಸುಡುವುದು[1] ಮತ್ತು ಹಿಂದೂ ಸೆರೆಯಾಳುಗಳನ್ನು ಹೇಸಿಗೆ ಮಾಡಿಕೊಳ್ಳುವಂತೆ ಬಲಾತ್ಕರಿಸುವುದು. ದಿಲ್ಲಿಯಲ್ಲೇ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹಸ್ರಾರು ಸಾಮಾನ್ಯ ಪ್ರಜೆಗಳನ್ನು ಕೊಂದರು. ಅಪರಾಧವೆಸಗಿದ ಕೆಲವು ಹಳ್ಳಿಗಳನ್ನು ಗುರುತಿಟ್ಟು ಅವುಗಳನ್ನು ನಾಶಪಡಿಸಿ ಅವುಗಳ ನಿವಾಸಿಗಳನ್ನು ಸಾಯಿಸಿದರು ಮತ್ತು ನಮ್ಮ ಸೇನೆಗಳು ಎಲ್ಲೆಲ್ಲಿ ಹೋದವೋ ಅಲ್ಲೆಲ್ಲಾ ಅಲ್ಲಿ ವಾಸಿಸುತ್ತಿದ್ದವರನ್ನು ವಿವೇಚನೆಯಿಲ್ಲದೆ ಸುಡಲಾಯಿತು".[2]

---

1. ಮುಸಲ್ಮಾನರ ಮತೀಯ ನಂಬಿಕೆಗಳನ್ನು ಅವಹೇಳನ ಮಾಡಿದ ವಿಚಿತ್ರ ತರಹ ಇವು ಎಂದು ಹೇಳಬಹುದು.

2. Garrat G. T. *An Indian Commentary*, London, Butler and Tanner, Ltd. 1918, Quoted in D. C. Gupta, *opcit.*, P. 17

ಮೇಲೆ ವಿವರಿಸಲಾಗಿರುವ ಬ್ರಿಟಿಷರ ಅಮಾನುಷ ಹಾಗೂ ಅತ್ಯಂತ ಅನಾಗರಿಕ ಕ್ರೌರ್ಯಕೃತ್ಯಗಳ ಸಮಾಚಾರ ಕಾಲಕ್ರಮೇಣ ಭಾರತದ ಎಲ್ಲಾ ಭಾಗದ ಜನಗಳಿಗೂ ತಿಳಿಯಿತು. ತಾಂತಿಯತೋಪಿ, ಝಾನ್ಸಿರಾಣಿ ಇತ್ಯಾದಿ ವೀರರ ಶೌರ್ಯ ಸಾಹಸದ ಕಾರ್ಯಗಳ ಬಗ್ಗೆ ಜನ ಮೆಚ್ಚುಗೆ ವ್ಯಕ್ತಪಡಿಸಿದರು: ಆದರೆ ಅವರಿಗಾದ ಅಂತ್ಯ ಕುರಿತು ಮರುಗಿದರು. ಸಾಮಾನ್ಯ ಜನರಲ್ಲಿ ಅಕ್ಷರತೆ ಹಾಗೂ ವಿದ್ಯಾಭ್ಯಾಸ ಹರಡುವುದರ ಮೂಲಕ ಮತ್ತು ಕೆಲವು ಸಾಮಾಜಿಕ ಸುಧಾರಣೆಗಳ ಮೂಲಕ ರಾಷ್ಟ್ರೀಯ ಐಕ್ಯತೆ ಭಾವನೆಯನ್ನು ಬೆಳೆಸುವುದರಿಂದ ಮಾತ್ರ ಬ್ರಿಟಿಷರ ವಿರುದ್ಧ ಹೋರಾಡುವ ಸಾಮರ್ಥ್ಯ ಸಂಪಾದಿಸಬಹುದೆಂಬುದನ್ನು ದೇಶದ ಬುದ್ಧಿಜೀವಿಗಳು ಮನಗಂಡರು. ಹತ್ತೊಂಭತ್ತನೆ ಶತಮಾನದ ಎರಡನೆ ಭಾಗದಲ್ಲಿ ಕೆಲವು ಗಣ್ಯ ಭಾರತೀಯರು ಈ ಕಾರ್ಯನಿರ್ವಹಣೆಯಲ್ಲಿ ತೊಡಗಿದರು.

❖❖❖

ಅಧ್ಯಾಯ - 3

ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆ

ಭಾರತೀಯ ರಾಷ್ಟ್ರೀಯತೆಯನ್ನು ಸೂಚಿಸುವ 'ಭರತಖಂಡ' ಎಂಬ ಪದ ಪುರಾಣಗಳಷ್ಟೇ ಪುರಾತನವಾದುದು. ವೇದಗಳು, ಪುರಾಣಗಳು ಮತ್ತು ರಾಮಾಯಣ ಮಹಾಭಾರತಗಳಂತಹ ಬೃಹತ್ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ಸಾಂಸ್ಕೃತಿಕ ಹಾಗೂ ತತ್ವಶಾಸ್ತ್ರೀಯ ಮೌಲ್ಯಗಳ ಮೇಲೆ ಭಾರತೀಯ ರಾಷ್ಟ್ರೀಯತೆಯು ವಿಕಾಸಗೊಂಡಿತೆಂದು ಹೇಳಬಹುದು. ಹೆಸರಾಂತ ಇತಿಹಾಸಜ್ಞ ಪರ್ಸಿವಲ್ ಗ್ರಿಫಿತ್ಸ್ ಹೇಳಿರುವಂತೆ ದೇಶಕ್ಕೆ ಮುಸಲ್ಮಾನರು ಆಗಮಿಸಿದಂದಿನಿಂದ ಜನಾಂಗ, ಮತ, ಭಾಷೆ, ಸಾಮಾಜಿಕ ಪರಂಪರೆಗಳಲ್ಲಿ ಭಿನ್ನತೆ ಉಂಟಾಗಿ ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಅಡ್ಡಿ ಬಂದಿತು.[1] ತರುವಾಯ ಬ್ರಿಟಿಷರ ಆಗಮನ, ಅವರು ಜನರನ್ನು ಕ್ರಿಶ್ಚಿಯನ್ ಮತಾಂತರಗೊಳಿಸುವಿಕೆ ಇತ್ಯಾದಿಗಳು ಭಾರತ ಸಮಾಜದೊಳಗೆ ಇನ್ನೊಂದು ಪರಕೀಯ ಅಂಶವನ್ನು ಸೇರಿಸಿದಂತಾಯಿತು. ಒಟ್ಟಿನಲ್ಲಿ ಮೂಲತಃ ಇದ್ದ ಭಾರತೀಯ ರಾಷ್ಟ್ರೀಯತೆ ಜೊತೆಗೆ ಪರಕೀಯ ಅಂಶಗಳು ಕೆಲವು ಹೀಗೆ ಬೆರೆತುಕೊಂಡಂತಾಯಿತು. ಆದಾಗ್ಯೂ ಭಾರತ ರಾಷ್ಟ್ರವು ತನ್ನದೇ ಆದ ಸಾಂಸ್ಕೃತಿಕ ಗುಣ ವಿಶೇಷಗಳನ್ನು ಉಳಿಸಿಕೊಂಡು ಬಂದಿದೆ. ಪ್ರಕೃತ ನಮ್ಮ ಆಸಕ್ತಿ ಇರುವುದು ಭಾರತರಾಷ್ಟ್ರೀಯತೆಯ ರಾಜಕೀಯ ಮುಖದಲ್ಲಿ, ಅಂದರೆ ಬ್ರಿಟಿಷರ ಆಳ್ವಿಕೆಯ ಹಿಡಿತದಿಂದ ದೇಶವನ್ನು ವಿಮೋಚನೆಗೊಳಿಸುವ

1. Griffiths, Sir Percival, *Modern India*. London, 1957, P. 67

ಹೆಗ್ಗುರಿಯುಳ್ಳ ಸಮಗ್ರ ಭಾರತದ ಏಕೈಕ ದೃಷ್ಟಿಕೋಣದ ರಾಷ್ಟ್ರೀಯತಾ ಭಾವನೆಯಲ್ಲಿ. ಇಂತಹ ರಾಷ್ಟ್ರೀಯತಾ ಭಾವನೆ ಬೆಳೆದ ಬಗೆಯನ್ನು ಕೆಳಗೆ ವಿವರಿಸಲಾಗುವುದು.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಬ್ರಿಟಿಷರ ದೌರ್ಜನ್ಯ ಆಳ್ವಿಕೆ ಬಗ್ಗೆ ಜನರಲ್ಲಿ ಸಾಕಷ್ಟು ತಿಳಿವಳಿಕೆಯನ್ನು ಹರಡುವ ಮೂಲಕ ಅವರಿಂದ ದೇಶವನ್ನು ವಿಮೋಚನೆ ಗೊಳಿಸುವ ದೃಷ್ಟಿಯುಳ್ಳ ರಾಷ್ಟ್ರೀಯ ಸ್ಫೂರ್ತಿಯನ್ನು ನೀಡಿತು. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಉಂಟಾದ ಕೆಲವು ಬೆಳವಣಿಗೆಗಳು ಈ ರಾಷ್ಟ್ರೀಯತೆಯನ್ನು ಬಲಗೊಳಿಸಿದವು.

1. ರಾಷ್ಟ್ರೀಯತಾ ಬೆಳವಣಿಗೆಗೆ ಇಂಗ್ಲೀಷ್ ಭಾಷೆಯ ಕೊಡುಗೆ

ಇಂಗ್ಲೀಷ್ ಭಾಷೆ ದೇಶದಲ್ಲಿ ಹರಡಿದುದು ಈ ಬೆಳವಣಿಗೆಗಳಲ್ಲಿ ಅತ್ಯಂತ ಮುಖ್ಯವಾದುದೆಂದು ಹೇಳಬಹುದು. ಈಸ್ಟ್ ಇಂಡಿಯ ಕಂಪೆನಿಯು ಭಾರತದಲ್ಲಿ ನೆಲೆಗಳನ್ನು ಸ್ಥಾಪನೆಮಾಡಿಕೊಂಡ ಕಾಲದಿಂದಲೂ ಅದರ ನಿರ್ದೇಶಕರು ತಮ್ಮ ಸೇವೆಗೆ ಇಂಗ್ಲಿಷ್ ಕಲಿತ ಭಾರತೀಯರ ಅವಶ್ಯಕತೆ ಯನ್ನು ಕಂಡುಕೊಂಡರು. ದೇಶದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಆರಂಭಿಸಿ ದುದಕ್ಕೆ ಲಾರ್ಡ್ ಮೆಕಾಲೆ ಕಾರಣಕರ್ತನಾಗಿದ್ದನು. ಆತನ ಉದ್ದೇಶ ಇವು :– ಭಾರತದಲ್ಲಿನ ಬ್ರಿಟಿಷ್ ಸರ್ಕಾರಕ್ಕೆ ಸೇವೆ ಸಲ್ಲಿಸಲು ಇಂಗ್ಲಿಷ್ ತಿಳಿದವರನ್ನು ಒದಗಿಸುವುದು ಒಂದು ಉದ್ದೇಶವಾಗಿದ್ದಿತು. ಪಾಶ್ಚಾತ್ಯ ವಿದ್ಯಾಭ್ಯಾಸವು ಭಾರತೀಯರಲ್ಲಿ ಇಂಗ್ಲಿಷ್ ಆಳ್ವಿಕೆಯ ಬಗ್ಗೆ ನಿಷ್ಠೆಯನ್ನು ಉಂಟುಮಾಡುವುದೆಂದೂ, ಆಂಗ್ಲ ಸಂಸ್ಕೃತಿಯನ್ನು ಹರಡಲು ಸಹಾಯ ವಾಗುವುದೆಂದೂ ಮೆಕಾಲೆ ನಂಬಿದ್ದನು. ಈ ಉದ್ದೇಶಗಳು ಸ್ವಲ್ಪ ಮಟ್ಟಿಗೆ ಸಾಧನೆಯಾದವಾದರೂ ಜೊತೆಗೇ ಇಂಗ್ಲಿಷ್ ವಿದ್ಯಾಭ್ಯಾಸವೂ ಕೆಳಗೆ ವಿಶದ ಪಡಿಸಿರುವಂತೆ ಭಾರತೀಯ ರಾಷ್ಟ್ರೀಯತೆಯು ಬೆಳೆಯಲು ಸಹಾಯ ವಾಯಿತು.

ಭಾರತದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಸಾಕಷ್ಟು ಶೀಘ್ರವಾಗಿ ಹರಡಿತು. ಇದು ಯುವಕರಿಗೆ ಸರ್ಕಾರಿ ಸೇವೆ ಮತ್ತು ಉಪಾಧ್ಯಾಯ,

ವೈದ್ಯ ಹಾಗೂ ಲಾಯರ್ ವೃತ್ತಿಗಳಿಗೂ ಅವಕಾಶ ಕಲ್ಪಿಸಿದುದರಿಂದ ಅನೇಕರು ಇಂಗ್ಲಿಷ್ ಕಲಿತರು. ಹೀಗೆ ಇಂಗ್ಲಿಷ್ ಭಾಷೆಯನ್ನು ಕಲಿತ ವರು ಐರೋಪ್ಯ ರಾಜ್ಯಶಾಸ್ತ್ರಜ್ಞರ[1] ಬರಹಗಳನ್ನು ಓದಿದರು. ಈ ಬರಹ ಗಳಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃಭಾವ, ಪ್ರಜಾಪ್ರಭುತ್ವ, ರಾಷ್ಟ್ರೀಯ ಸ್ವತಂತ್ರತೆ, ರಾಷ್ಟ್ರೀಯ ಸ್ವನಿರ್ಣಯಾಧಿಕಾರ (Self-determination) ಇಂತಹ ಉದಾತ್ತ ಭಾವನೆಗಳನ್ನು ಅನೇಕರು ಓದಿ ಇವುಗಳಿಂದ ಪ್ರಭಾವಿತ ರಾದರು. ಇಂಗ್ಲಿಷರು ಹೇಗೆ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡಿ ಇವುಗಳನ್ನು ಸರಿಪಡಿಸಿಕೊಂಡರೆಂಬುದನ್ನು ಅವರು ಓದಿದರು. ಫ್ರಾನ್ಸಿನ ಕ್ರಾಂತಿಯ ಇತಿಹಾಸವೂ ಅವರನ್ನು ಸ್ಫೂರ್ತಿಗೊಳಿಸಿತು. ಆಧುನಿಕ ಯುರೋಪಿನ ಇತಿಹಾಸ ಓದಿ ಅಲ್ಲಿ ರಾಷ್ಟ್ರೀಯ ಹಾಗೂ ಪ್ರಜಾಪ್ರಭುತ್ವ ರಾಜ್ಯಗಳ ಸ್ಥಾಪನೆಯಾದುದನ್ನು ತಿಳಿದರು.

ಇಂಗ್ಲಿಷ್ ಭಾಷೆಯ ಮೂಲಕ ಮೇಲಿನ ವಿವಿಧ ಗ್ರಂಥಗಳನ್ನು ಓದಿದ ಅನೇಕ ಭಾರತೀಯರು ಭಾರತವೂ ಸ್ವತಂತ್ರವಾಗಬೇಕೆಂದು ಹೇಳಲಾರಂಭಿಸಿ ದರು. 'ಸ್ವರಾಜ್ಯ ನಮ್ಮ ಆಜನ್ಮಸಿದ್ಧ ಹಕ್ಕು' ಎಂಬುದು ಸ್ವಾತಂತ್ರ್ಯ ಚಳುವಳಿಯ ಮೂಲಮಂತ್ರವಾಯಿತು.

ಇಂಗ್ಲಿಷ್ ವಿದ್ಯಾಭ್ಯಾಸವು ಭಾರತದಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಒಂದು ವಿಧದ ಬೌದ್ಧಿಕ ಪುನರುಜ್ಜೀವನವನ್ನು ಉಂಟು ಮಾಡಿತು. ಸಾಮಾನ್ಯವಾಗಿ ಭಾರತದ ರಾಷ್ಟ್ರೀಯತೆ ಬೆಳೆಸಲು ಶ್ರಮಿಸಿದ ಎಲ್ಲಾ ಮುಖಂಡರೂ ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಯೋಜನ ಪಡೆದವರೇ ಆಗಿದ್ದರು. ರಾಜಾ ರಾಮ್‌ಮೋಹನ್ ರಾಯ್, ದಾದಾಭಾಯಿ ನವರೋಜಿ, ಡಬ್ಲ್ಯು. ಸಿ. ಬ್ಯಾನರ್ಜಿ, ಸುರೇಂದ್ರನಾಥ್ ಬ್ಯಾನರ್ಜಿ, ಫಿರೋಜ್‌ಷಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ, ದಿನ್‌ಷಾ. ಇ. ವಾಚ, ಇತ್ಯಾದಿ ಯಾಗಿ ಎಲ್ಲಾ ರಾಷ್ಟ್ರೀಯ ಚಳುವಳಿಗಾರರೂ ತಾವು ಪಡೆದ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ತಮ್ಮವೇ ಆದ ಪಾಠಗಳನ್ನು ಕಲಿತು ದೇಶಸೇವೆಗೆ

---

1. ಇವರಲ್ಲಿ ಗಣ್ಯರಾದ ಕೆಲವರು ಇವರು :– ಎಡ್‌ಮಂಡ್ ಬರ್ಕ್, ಹರ್ಬರ್ಟ್ ಸ್ಪೆನ್ಸರ್, ಜಾನ್ ಸ್ಟೂಯರ್ಟ್ ಮಿಲ್, ಲಾಕ್, ವಾಲ್ಟೇರ್, ರೂಸೋ, ಥಾಮಸ್ ಪೆಯಿನ್, ಮೆಜೀನಿ, ಕವೂರ್.

ಬದ್ಧಕಂಕಣರಾದರು. ಇವರೆಲ್ಲರೂ ಭಾರತದ ಜನಸಾಮಾನ್ಯರಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಬೆಳೆಸಲು ಪ್ರಯತ್ನಿಸಿದರು.

ಇಂಗ್ಲಿಷ್ ಭಾಷೆ ರಾಷ್ಟ್ರೀಯ ಐಕ್ಯತಾ ಪ್ರಚಾರ ಕಾರ್ಯಕ್ಕೆ ಅನುಕೂಲಮಾಡಿಕೊಟ್ಟಿತು. ಭಾರತದ ವಿವಿಧ ಭಾಗಗಳ ಭಾಷಾವೈವಿಧ್ಯವನ್ನು ಮೀರಿ ಇಂಗ್ಲಿಷ್ ಭಾಷೆಯು ಈ ವಿವಿಧ ಭಾಗಗಳ ಮುಂದಾಳುಗಳಿಗೆ ಉಪಯುಕ್ತವಾದ ಸಂಪರ್ಕಭಾಷೆಯಾಯಿತು. ಸಾಮಾನ್ಯವಾಗಿ ಎಲ್ಲಾ ಭಾಗದ ರಾಷ್ಟ್ರೀಯ ಮುಂದಾಳುಗಳೂ ಇಂಗ್ಲಿಷ್ ಭಾಷೆಯ ವಿದ್ಯಾಭ್ಯಾಸ ಪಡೆದವರಾಗಿದ್ದರು. ಮುಂದಾಳುಗಳೇ ಅಲ್ಲದೆ ಅನೇಕ ಬುದ್ಧಿಜೀವಿಗಳೂ ಇಂಗ್ಲಿಷ್ ಕಲಿತಿದ್ದರು. ಇದರಿಂದ ದೇಶವನ್ನು ಬ್ರಿಟಿಷರಿಂದ ವಿಮುಕ್ತಿಗೊಳಿಸುವ ಸಮಸ್ಯೆಗಳನ್ನು ಕುರಿತು ರಾಷ್ಟ್ರೀಯ ವಿಚಾರ ವೇದಿಕೆಗಳನ್ನು ಏರ್ಪಡಿಸುವುದು ಸಾಧ್ಯವಾಯಿತು.

2. ಸಾಮಾಜಿಕ–ಸಾಂಸ್ಕೃತಿಕ ಪುನಶ್ಚೇತನ ಹಾಗೂ ರಾಷ್ಟ್ರೀಯತೆ

ಭಾರತೀಯ ರಾಷ್ಟ್ರೀಯತೆಯನ್ನು ಪೋಷಿಸಲು ಹತ್ತೊಂಬತ್ತನೆ ಶತಮಾನದ ಪೂರ್ವಾರ್ಧದಲ್ಲಿ ಕೆಲವು ಗಣ್ಯ ಸಮಾಜಸುಧಾರಕರು[1] ಕೈಗೊಂಡ ಸಾಮಾಜಿಕ– ಸಾಂಸ್ಕೃತಿಕ ಪುನರುಜ್ಜೀವನ ಕಾರ್ಯಾಚರಣೆಗಳು ಸಹಾಯಕವಾದವು. ಬಂಗಾಳದಲ್ಲಿ ರಾಜಾ ರಾಂಮೋಹನ್‌ರಾಯ್ ಆರಂಭಿಸಿದ 'ಬ್ರಹ್ಮೊಸಮಾಜ', ಮಹಾರಾಷ್ಟ್ರದಲ್ಲಿ ಎಂ.ಜಿ. ರ್‍ಯಾನಡೆಯವರ ನೇತೃತ್ವದಲ್ಲಿ ಸ್ಥಾಪನೆಯಾದ 'ಪ್ರಾರ್ಥನಾ ಸಮಾಜ', ಉತ್ತರ ಪ್ರದೇಶ ಹಾಗೂ ಪಂಜಾಬ್‌ಗಳಲ್ಲಿ ದಯಾನಂದ ಸರಸ್ವತಿಯಿಂದ ಪ್ರಾರಂಭಿಸಲ್ಪಟ್ಟ 'ಆರ್ಯ ಸಮಾಜ', ದಕ್ಷಿಣ ಭಾರತದಲ್ಲಿ ಅನಿ ಬೆಸಂಟ್ ನೇತೃತ್ವದಲ್ಲಿ ಶುರು ಆದ 'ಥಿಯಸಾಫಿಕಲ್ ಸೊಸೈಟಿ', ಸ್ವಾಮಿ ವಿವೇಕಾನಂದ ಸ್ಥಾಪಿಸಿದ 'ರಾಮಕೃಷ್ಣ ಮಿಷನ್' – ಇವೆಲ್ಲವೂ ಹಿಂದೂ ಧರ್ಮ ಚಿಂತನೆಯ ಹೊಸಬೆಳಕನ್ನು ಹುಟ್ಟಿಸಿದವು. ಈ ಸಂಸ್ಥೆಗಳ ಕಾರ್ಯಾಚರಣೆಗಳು ಹಿಂದೂಗಳಲ್ಲಿ

---

1. ಇವರಲ್ಲಿ ಕೆಲವು ಮುಖ್ಯರಾದವರು ಇವರು : ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಸ್ವಾಮಿ ದಯಾನಂದ ಸರಸ್ವತಿ, ರಾಜಾ ರಾಂಮೋಹನ್ ರಾಯ್, ಕೇಶಬ್‌ಚಂದ್ರ ಸೇನ್, ಅನಿ ಬೆಸೆಂಟ್, ಎಂ.ಜಿ. ರಾನಡೆ, ಸರ್ ಸಯ್ಯದ್‌ಅಹ್ಮದ್ ಖಾನ್, ಇತ್ಯಾದಿ.

ಸ್ವಧರ್ಮ ಪಾಲನೆಯ ಬಗ್ಗೆ ವಿಶೇಷ ವಿಶ್ವಾಸವನ್ನು ಹುಟ್ಟಿಸಿ ಜನರಲ್ಲಿ ಹುಟ್ಟಿದ್ದ ಪಾಶ್ಚಾತ್ಯ ಅನುಕರಣೆಯ ಬಲವನ್ನು ತಡೆಗಟ್ಟಿದವು. 'ಏಳಿ, ಎಚ್ಚೆತ್ತುಕೊಳ್ಳಿ, ಗುರಿ ತಲುಪುವವರೆಗೆ ನಿಲ್ಲದಿರಿ' (Arise, Awake, Stop Not Till The Goal is Reached) ಎಂಬ ವಿವೇಕಾನಂದರ ವಾಣಿಯು ಜಡತ್ವದಲ್ಲಿದ್ದ ಭಾರತದ ಜನತೆಯನ್ನು ಹೊಡೆದೆಬ್ಬಿಸಿತು. ಹಿಂದೂ ಧರ್ಮ ಹಾಗೂ ಹಿಂದೂ ಸಂಸ್ಕೃತಿಗಳ ಪುನರುಜ್ಜೀವನಗೊಳಿಸುವ ಸಮಾಜ ಸುಧಾರಕರ ಕಾರ್ಯ ರಾಜಕೀಯ ದೃಷ್ಟಿಯಿಂದ ಮಹತ್ವಪೂರಿತವಾಗಿದ್ದಿತು. ಈ ಸಮಾಜ ಸುಧಾರಕರ ಬೋಧನೆಗಳನ್ನು ರಾಜಕೀಯ ಕ್ಷೇತ್ರಕ್ಕೆ ಅಳವಡಿಸಿಕೊಂಡು ಭಾರತ ರಾಷ್ಟ್ರೀಯತೆಯನ್ನು ಬಲಗೊಳಿಸುವ ಪ್ರಯತ್ನವನ್ನು ಬಾಲಗಂಗಾಧರ ತಿಲಕ್, ಮಹದೇವ್ ಗೋವಿಂದ ರಾನಡೆ, ಅರಬಿಂದ ಘೋಷ್, ಬಿಪಿನ್ ಚಂದ್ರ ಪಾಲ್ ಇಂತಹ ಮಹಾ ಭಾರತೀಯರು ಕೈಗೊಂಡು ಯಶಸ್ವಿಯಾಗಿ ನೆರವೇರಿಸುತ್ತಾ ಬಂದರು. ಹಿಂದೂಗಳಲ್ಲಿ ಹೊಸ ಹುರುಪು ತಲೆದೋರಿತು. ರಾಷ್ಟ್ರಾದ್ಯಂತದ ಮುಖ್ಯಸ್ಥರು ಒಂದುಗೂಡಿ ದೇಶದ ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ವಿವೇಚಿಸಲಾರಂಭಿಸಿದರು.

ಹಿಂದೂ ಪುನರುಜ್ಜೀವನದ ಜೊತೆಗೆಯೇ ಭಾರತೀಯ ಮುಸಲ್ಮಾನರಲ್ಲಿಯೂ ಪುನರುತ್ಥಾನಕಾರ್ಯವು ಸರ್ ಸಯ್ಯದ್ ಅಹ್ಮದ್‌ಖಾನ್ ನೇತೃತ್ವದಲ್ಲಿ ಜರುಗಿತು. ಭಾರತೀಯ ರಾಷ್ಟ್ರೀಯತೆಯನ್ನು ಘೋಷಿಸುವುದೇ ಈ ಭಾರತೀಯನ ಉದ್ದೇಶವಾಗಿದ್ದಿತು. ಈ ದೃಷ್ಟಿಯಿಂದ ಆತನು 'ವೈಜ್ಞಾನಿಕ ಸಂಘ' (Scientific Society) ವೊಂದನ್ನು ಸ್ಥಾಪಿಸಿ, ಹಿಂದೂ ಮತ್ತು ಮುಸಲ್ಮಾನ ಎರಡು ಮತದವರನ್ನೂ ಈ ಸಂಘಕ್ಕೆ ಸದಸ್ಯರನ್ನಾಗಿ ಸೇರಿಸಿದನು. ಭಾರತೀಯ ಮುಸಲ್ಮಾನರನ್ನು ಆಧುನಿಕಗೊಳಿಸುವ ಉದ್ದೇಶದಿಂದ ಈತನು ಮುಸಲ್ಮಾನರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಹರಡಲು ಪ್ರಯತ್ನಿಸಿದನು.

ಮೇಲಿನ ಎಲ್ಲಾ ಸಾಮಾಜಿಕ – ಮತೀಯ – ಸಾಂಸ್ಕೃತಿಕ ಪುನಶ್ಚೇತನ ಕಾರ್ಯಗಳೂ ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯಕವಾದವು.

3. ರಾಷ್ಟ್ರೀಯತಾ ಬೆಳವಣಿಗೆ – ವೃತ್ತಾಂತ ಪತ್ರಿಕೆಗಳ ಪಾತ್ರ

ಮೊದಮೊದಲು ಈಸ್ಟ್ ಇಂಡಿಯ ಕಂಪೆನಿಯು ವೃತ್ತಾಂತ ಪತ್ರಿಕೆಗಳ ಪ್ರಕಟಣೆಗೆ ವಿರೋಧವಾಗಿದ್ದಿತು. ಇದಕ್ಕೆ ಅನುಮತಿಯನ್ನು ನಿರಾಕರಿಸುತ್ತಿದ್ದಿತು. ಕ್ರಮೇಣ ಈ ನೀತಿ ಬದಲಾಯಿಸಿ ಪತ್ರಿಕಾಸ್ವಾತಂತ್ರ್ಯವನ್ನು ನೀಡಿತು. ಆಗ ಇಂಗ್ಲಿಷಿನಲ್ಲೂ, ಭಾರತೀಯ ಭಾಷೆಗಳಲ್ಲಿಯೂ ಅನೇಕ ವೃತ್ತಪತ್ರಿಕೆಗಳು ಪ್ರಾರಂಭವಾದವು. 19ನೆಯ ಶತಮಾನದ ಕೊನೆಯ ಎರಡು–ಮೂರು ದಶಕಗಳಲ್ಲಿ ಈ ಪತ್ರಿಕೆಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿತು. ಈ ಪತ್ರಿಕೆಗಳು ಜನತೆಗೆ ತಿಳುವಳಿಕೆ ನೀಡುವ ಅತಿಮುಖ್ಯ ಸಾಧನವಾಯಿತು. ಇದರಿಂದ ಭಾರತೀಯ ರಾಷ್ಟ್ರೀಯತಾ ಬೆಳವಣಿಗೆಗೂ ಸಹಾಯವಾಯಿತು.

4. ಭಾರತೀಯರ ವಿರುದ್ಧ ಬ್ರಿಟಿಷರ ತಾರತಮ್ಯ ನೀತಿ

ಬ್ರಿಟಿಷರು ತಾವು ಆಳುವ ಜನಾಂಗದವರು ಮತ್ತು ಭಾರತದ ಮೇಲೆ ಪೂರ್ಣ ಅಧಿಕಾರ ಹೊಂದಿದವರು ಎಂಬುದನ್ನು ಅನೇಕ ವಿಧದಲ್ಲಿ ಭಾರತೀಯರಿಗೆ ತೋರಿಸಿ ತಮ್ಮ ಅಧಿಕಾರವನ್ನೂ ದರ್ಪವನ್ನೂ ಪ್ರದರ್ಶಿಸುತ್ತಿದ್ದರು. ಅಲ್ಲದೆ, ತಮ್ಮ ಹಿತಾಸಕ್ತಿಗಳ ಪೂರೈಕೆಗೆ ಭಾರತೀಯರನ್ನು ಶೋಷಣೆಗೆ ಒಳಪಡಿಸುತ್ತಿದ್ದರು.

ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುವಂತೆ ಭಾರತೀಯರ ಮೇಲೆ ಬ್ರಿಟಿಷರು ತಮ್ಮ ಪ್ರಭಾವ ಬೀರುತ್ತಿದ್ದರು. ಕ್ರಿಶ್ಚಿಯನ್ ಮತವನ್ನು ಭಾರತದಲ್ಲಿ ಹರಡಲು ವ್ಯವಸ್ಥೆ ಮಾಡಿದರು. ತಾವು ಆಳುವವರಾದುದರಿಂದ ಭಾರತೀಯರನ್ನು ಕೀಳಾಗಿ ಕಾಣುತ್ತಿದ್ದರು. ಐರೋಪ್ಯರು ಭಾರತೀಯರೊಳಗೆ ಅನೇಕ ತರಹದಲ್ಲಿ ತಾರತಮ್ಯ ತೋರಿಸಿದರು. ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದು. ಭಾರತದ ಉನ್ನತ ಅಧಿಕಾರಗಳ ಸೇವೆಗೆ ಅರ್ಹ ಯುವಕರನ್ನು ಆರಿಸಲು ಸ್ಪರ್ಧಾ ಪರೀಕ್ಷೆಯನ್ನು ಲಂಡನ್ನಿನಲ್ಲಿ ನಡೆಸಲಾಗುತ್ತಿತ್ತು. ಇದರಿಂದ ಅನೇಕರಿಗೆ ಈ ಪರೀಕ್ಷೆಗೆ ಹೋಗುವ ಅವಕಾಶವಿಲ್ಲವಾಯ್ತು. ಹಾಗೆ ಹೋಗಲು ಅನುಕೂಲವಿದ್ದ ಯುವಕರು ಹೋಗಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರನ್ನು ಕೆಲಸಕ್ಕೆ ನೇಮಿಸಿ

ಕೊಂಡಾಗ ಅವರಿಗೆ ಕೊಡುತ್ತಿದ್ದ ಸಂಬಳ ಹಾಗೂ ಸವಲತ್ತುಗಳು (Privileges) ಅದೇ ದರ್ಜೆಯಲ್ಲಿದ್ದ ಐರೋಪ್ಯ ಅಧಿಕಾರಿಗಳಿಗೆ ಕೊಡುತ್ತಿದ್ದ ಸಂಬಳ ಹಾಗೂ ಸವಲತ್ತುಗಳಿಗಿಂತ ಕಡಿಮೆಯಾಗಿದ್ದಿತು. ಅಲ್ಲದೆ ಎಲ್ಲಾ ಶಾಖೆಗಳ ಅತ್ಯುನ್ನತ ಅಧಿಕಾರ ಪದವಿಗೆ ಭಾರತೀಯರಿಗೆ ಅವಕಾಶವಿರಲಿಲ್ಲ ; ಇವು ಐರೋಪ್ಯರಿಗೇ ಮೀಸಲಾಗಿದ್ದವು.[1] ಇದರಿಂದ ಅನೇಕ ಹಿರಿಯ ಭಾರತೀಯ ಅಧಿಕಾರಿಗಳು ಹೆಚ್ಚುಕಾಲ ಸರ್ವಿಸ್ಸು ಪಡೆದವರಾದರೂ ತಮಗಿಂತ ಕಿರಿಯರಾದ ಐರೋಪ್ಯ ಅಧಿಕಾರಿಗಳ ಕೈಕೆಳಗೆ ಸೇವೆ ಮಾಡುವ ಸಂದರ್ಭಗಳಿದ್ದವು. ಈ ಪರಿಸ್ಥಿತಿಯಿಂದ ಭಾರತೀಯ ಪ್ರತಿಭಾಶಾಲಿ ಅಧಿಕಾರಿಗಳು ಅಸಮಾಧಾನಗೊಳ್ಳುವಂತಾಯಿತು. ಇನ್ನೊಂದು ಮುಖ್ಯವಾದ ತಾರತಮ್ಯ ಅಭ್ಯಾಸ ಇದು. ಎಷ್ಟೇ ಅರ್ಹ ನ್ಯಾಯಾಧೀಶನಾಗಲೀ ಭಾರತೀಯ ನ್ಯಾಯಾಧೀಶರು ಐರೋಪ್ಯರನ್ನು ವಿಚಾರಣೆ ಮಾಡುವ ಅಧಿಕಾರ ಹೊಂದಿರಲಿಲ್ಲ. ಐರೋಪ್ಯ ಅಪರಾಧಿಗಳನ್ನು ವಿಚಾರಿಸುವ ಅರ್ಹತೆ ಭಾರತೀಯ ನ್ಯಾಯಾಧೀಶರಿಗೆ ಇಲ್ಲ ಎಂಬುದೇ ಬ್ರಿಟಿಷ್ ಸರ್ಕಾರದ ನಿಲುವು ಆಗಿದ್ದಿತು. ಇದು ಭಾರತೀಯರನ್ನು ಅವಮಾನ ಮಾಡಿದಂತೆ ಆಯಿತು. ಸೈನ್ಯದಲ್ಲಿ ಭಾರತೀಯರು ಹಾಗೂ ಆಂಗ್ಲೇಯರು ಇವರುಗಳೊಳಗೆ ಸರ್ಕಾರವು ಮಾಡಿದ ಭೇದಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಭಾರತದ ಸೈನ್ಯವನ್ನು ಬ್ರಿಟಿಷರು ತಮ್ಮ ರಾಷ್ಟ್ರದ ಹಿತಕ್ಕಾಗಿ ಶೋಷಣೆಗೆ ಒಳಪಡಿಸಿದರು ಎಂಬುದು ಗಮನಾರ್ಹ ವಿಷಯ. ಉದಾಹರಣೆಗೆ, ಬ್ರಿಟಿಷರು ಆಫ್ಘನರೊಡನೆ ಯುದ್ಧ ಪ್ರಾರಂಭಿಸಿದಾಗ ಭಾರತೀಯ ಸೈನಿಕರನ್ನೇ ಅಲ್ಲಿ ಹೋರಾಡಲು ಕಳುಹಿಸಲಾಯಿತು. ಪುನಃ 1878 ರಲ್ಲಿ ಸೈಪ್ರಸ್ಸಿಗೆ ಕಳುಹಿಸಿದ ಸೇನೆಯಲ್ಲಿಯೂ ಭಾರತೀಯ ಸೈನಿಕರೇ ಇದ್ದರು. ಈ ಮಿಲಿಟರಿ ಕಾರ್ಯಾಚರಣೆಗಳಿಂದ ಭಾರತಕ್ಕೆ ನಷ್ಟವಾಯಿತೇ ವಿನಹ ಯಾವ ಲಾಭವೂ ಇರಲಿಲ್ಲ.

---

1. ತಾವು ಭಾರತೀಯರು ಎಂಬ ಒಂದು ಅಂಶದಿಂದಲೇ ಬೊಂಬಾಯಿನ ಚೀಫ್ ಎಂಜಿನಿಯರ್ ಪದವಿಯನ್ನು ತಮಗೆ ಸರ್ಕಾರವು ಕೊಡದುದನ್ನು ಪ್ರತಿಭಟಿಸಿ ಸರ್ ಎಂ. ವಿಶ್ವೇಶ್ವರಯ್ಯನವರು ಧೈರ್ಯದಿಂದ ರಾಜೀನಾಮೆ ಇತ್ತುದನ್ನು ಇಲ್ಲಿ ನೆನೆಸಿಕೊಳ್ಳಬಹುದು.

ಮೇಲಿನ ತರಹದ ತಾರತಮ್ಯ ಧೋರಣೆಯು ಭಾರತೀಯರಲ್ಲಿ ತೀವ್ರ ಅಸಮಾಧಾನ ಉಂಟುಮಾಡಿದುದು ಸ್ವಾಭಾವಿಕವೇ ಆಗಿದೆ. ಭಾರತೀಯ ರಲ್ಲಿ ರಾಷ್ಟ್ರೀಯತಾ ಭಾವನೆ ಬಲಗೊಳ್ಳುತ್ತಾ ಬರುವುದಕ್ಕೆ ಈ ತಾರತಮ್ಯ ಗಳೂ ಕಾರಣವಾದವು.

ಹೀಗೆ ಈ ಅಧ್ಯಾಯದಲ್ಲಿ ವಿವರಿಸಲಾದ ನಾನಾ ಕಾರಣಗಳಿಂದ ಪೋಷಿತವಾಗಿ ಭಾರತ ರಾಷ್ಟ್ರೀಯತೆಯು ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚು ಹೆಚ್ಚು ಜನರಲ್ಲಿ ಬೆಳೆಯುತ್ತಾ ಬಂದಿತಲ್ಲದೆ, ರಾಷ್ಟ್ರೀಯತಾ ಭಾವನೆ ಹೆಚ್ಚು ತೀವ್ರ ಸ್ವರೂಪವನ್ನು ತಳೆಯುತ್ತಾ ಬಂದಿತು. ಇವುಗಳ ಪರಿಣಾಮವಾಗಿ ಸ್ವಾತಂತ್ರ್ಯ ಚಳುವಳಿಯೂ ಸರಿ ಯಾಗಿ ರೂಪುಗೊಳ್ಳುತ್ತಾ ಬಂದಿತು. ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಡಲು ತಮಗೆ ಇದ್ದ ತಮ್ಮ ದೌರ್ಬಲ್ಯದ ಮೂಲಗಳನ್ನು ಕಂಡು ಕೊಂಡು ಇವುಗಳ ನಿವಾರಣೋಪಾಯಗಳನ್ನು ಕೈಗೊಂಡರು. ಭಾರತದಲ್ಲಿ ಅಲ್ಪಸಂಖ್ಯಾತರಾಗಿದ್ದ ಇಂಗ್ಲಿಷರು ಹೊಂದಿದ್ದ ಅಸಾಧಾರಣ ಶಕ್ತಿಯು ಇತರ ಕೆಲವು ಅಂಶಗಳ ಜೊತೆಗೆ, ಅವರ ವ್ಯವಸ್ಥಾ ದಕ್ಷತೆಯನ್ನು ಅವಲಂಬಿ ಸಿದುದನ್ನು ಭಾರತೀಯ ಮುಂದಾಳುಗಳು ಗಮನಿಸಿದರು. ಬ್ರಿಟಿಷರನ್ನು ಎದುರಿಸಲು ಭಾರತೀಯರೂ ವ್ಯವಸ್ಥಿತ ರಾಷ್ಟ್ರೀಯ ಸಂಸ್ಥೆಗಳನ್ನು ಏರ್ಪಡಿಸಿಕೊಳ್ಳುವುದು ಅತ್ಯಾವಶ್ಯಕ ಎಂಬುದನ್ನು ಅವರು ಅರಿತರು. ಈ ಆಲೋಚನಾ ಸರಣಿಯು ರಾಷ್ಟ್ರೀಯ ಕಾಂಗ್ರೆಸ್, ಮುಸ್ಲಿಮ್ ಲೀಗ್, ಹಿಂದೂ ಮಹಾಸಭಾ ಇಂತಹ ರಾಷ್ಟ್ರೀಯ ಸಂಸ್ಥೆಗಳ ಸ್ಥಾಪನೆಗೆ ಮಾರ್ಗ ವಾಯಿತು. ಮುಂದಿನ ಅಧ್ಯಾಯದಲ್ಲಿ ಈ ಸಂಸ್ಥೆಗಳ ಉಗಮ, ಉದ್ದೇಶ ಗಳು ಇತ್ಯಾದಿಗಳನ್ನು ಕುರಿತು ವಿವರಿಸಲಾಗುವುದು.

✣✣✣

ಅಧ್ಯಾಯ - 4

ರಾಷ್ಟ್ರೀಯ ಕಾಂಗ್ರೆಸ್ಸು, ಮುಸ್ಲಿಂ ಲೀಗು, ಹಿಂದೂ ಮಹಾಸಭೆ – ಇವುಗಳ ಸ್ಥಾಪನೆ

ರಾಷ್ಟ್ರೀಯ ಕಾಂಗ್ರೆಸ್ಸು (1885), ಮುಸ್ಲಿಂಲೀಗು (1906), ಹಿಂದೂ ಮಹಾಸಭಾ (1906) ಮತ್ತು ಇಂತಹ ಕೆಲವು ಇತರ ಸಂಸ್ಥೆಗಳ ಸ್ಥಾಪನೆಯು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಖ್ಯ ಮೈಲಿಗಲ್ಲುಗಳಾಗಿವೆ.

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುಂಚೆಯೇ ಬ್ರಿಟಿಷರ ಆಳ್ವಿಕೆಯಿಂದ ಜನರಿಗೆ ಉಂಟಾಗುತ್ತಿದ್ದ ಕಷ್ಟನಷ್ಟಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಕೆಲವು ಪ್ರಾದೇಶಿಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿದ್ದವು. ಕಲ್ಕತ್ತದ ಬ್ರಿಟಿಷ್ ಇಂಡಿಯ ಸೊಸೈಟಿ, ಬೊಂಬಾಯಿನ ಪ್ರೆಸಿಡೆನ್ಸಿ ಅಸೋಸಿಯೇಷನ್, ಮದರಾಸಿನ ಮಹಾಜನ ಸಭೆ ಮತ್ತು ಬ್ರಿಟಿಷ್ ಇಂಡಿಯ ಅಸೋಸಿಯೇಷನ್ನು ಇವುಗಳು ಅಂತಹ ಸಂಸ್ಥೆಗಳಾಗಿದ್ದವು. ಬ್ರಿಟಿಷ್ ಇಂಡಿಯ ಅಸೋಸಿಯೇಷನ್ ಒಮ್ಮೆ ಭಾರತದ ಸರ್ಕಾರದಲ್ಲಿ ಭಾರತೀಯರಿಗೂ ಪಾಲು ಕೊಡಬೇಕೆಂಬ ತನ್ನ ಸಲಹೆಯೊಂದನ್ನು ಕೂಡ ಬ್ರಿಟಿಷ್ ಪಾರ್ಲಿಮೆಂಟಿಗೆ ಸಲ್ಲಿಸಿದ್ದಿತು. ಆದರೆ, ಈ ಸಂಸ್ಥೆಗಳ ಪ್ರಭಾವ ಹೆಚ್ಚಾಗಿ ಬೆಳೆಯಲಿಲ್ಲ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಉಗಮದ ಕಥೆ ಸ್ವಾರಸ್ಯವಾಗಿದೆ. ಏಕೆಂದರೆ, ಇದರ ಸ್ಥಾಪನೆಗೆ ಮೊದಲು ಸಲಹೆ ಮಾಡಿ ಮೊದಲ ಪ್ರಯತ್ನ ನಡೆಸಿದವರು ಇಂಗ್ಲಿಷರೇ ಆಗಿದ್ದಾರೆ. ದೇಶದ ಸಾಮಾಜಿಕ

ಸಮಸ್ಯೆಗಳ ವಿಚಾರ ವಿನಿಮಯ ಮಾಡಿಕೊಳ್ಳಲು ದೇಶದ ಪ್ರಮುಖ ರಾಜಕೀಯ ಮುಖಂಡರುಗಳೆಲ್ಲ ವರ್ಷಕ್ಕೊಮ್ಮೆ ಸಭೆ ಸೇರುವಂತಾದರೆ ಇದು ಪ್ರಯೋಜನಕಾರಿಯಾದೀತು ಎಂಬ ಭಾವನೆಯನ್ನು 1884 ರಲ್ಲಿ ಎ. ಒ. ಹ್ಯೂಮ್[1] ಎಂಬವರು ಪ್ರಕಾಶಪಡಿಸಿದರು. ಹೀಗೆ ಹ್ಯೂಮ್ ಆಲೋಚಿಸಿದ ಸಂಸ್ಥೆಯು ಬ್ರಿಟನ್ನಿನಲ್ಲಿ ವಿರೋಧ ಪಕ್ಷವು ವಹಿಸುತ್ತಿದ್ದ ಪಾತ್ರವನ್ನು ಭಾರತದಲ್ಲಿ ವಹಿಸುವಂತೆ ವ್ಯವಸ್ಥೆಗೊಳಿಸುವುದು ಉಚಿತವಾಗುವುದೆಂದು ಆಗ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಡಫರಿನ್ ಅವರು ಹ್ಯೂಮ್‌ಗೆ ಸೂಚಿಸಿದರು. "ಭಾರತೀಯ ರಾಜಕಾರಣಿಗಳು ವರ್ಷಕ್ಕೊಮ್ಮೆ ಸಭೆ ಸೇರಿ ಆಡಳಿತದ ಕುಂದುಕೊರತೆಗಳನ್ನು ತೋರಿಸಿಕೊಟ್ಟು, ಆಡಳಿತವನ್ನು ಉತ್ತಮಗೊಳಿಸುವುದು ಹೇಗೆ ಎಂಬುದನ್ನು ಸೂಚಿಸಬೇಕು" — ಇದು ಲಾರ್ಡ್ ಡಫರಿನ್ನರ ಅಪೇಕ್ಷೆಯಾಗಿದ್ದಿತು. ಈ ಸಲಹೆ ಹ್ಯೂಮ್‌ಗೆ ಒಪ್ಪಿಗೆಯಾಯಿತು. ಸರ್ಕಾರದ ಆಡಳಿತದ ಬಗ್ಗೆ ಭಾರತೀಯರಲ್ಲಿ ಇದ್ದ ಅಸಮಾಧಾನ, ಅತೃಪ್ತಿಗಳನ್ನು ಸಂವಿಧಾನಾತ್ಮಕ ಮಾರ್ಗದಲ್ಲಿ ವ್ಯಕ್ತಪಡಿಸುವ ವೇದಿಕೆಯಾಗಿ ಕಾಂಗ್ರೆಸ್ ಸಂಸ್ಥೆಯ ಸ್ಥಾಪನೆಗೆ ಯೋಜನೆಯೊಂದನ್ನು ಹ್ಯೂಮ್ ಅವರು ಸಿದ್ಧಪಡಿಸಿದರು. 1882ರ ಮಾರ್ಚ್ 1 ರಂದು ಕಲ್ಕತ್ತಾ ವಿಶ್ವವಿದ್ಯಾನಿಲಯದ ಪದವೀಧರರಿಗೆ ಒಂದು ಸುತ್ತೋಲೆಯನ್ನು ಅವರು ಬರೆದರು. ಇದರಲ್ಲಿ ತಾವು ಆಲೋಚಿಸಿದ್ದ ಸಂಸ್ಥೆಯ ಬಗ್ಗೆ ತಮ್ಮ ಉದ್ದೇಶವನ್ನು ಸ್ಪಷ್ಟಗೊಳಿಸಿ, ಈ ಸಂಸ್ಥೆಯ ಸ್ಥಾಪನೆಗೆ ಒಳ್ಳೆಯವರೂ ನಿಷ್ಠಾವಂತರೂ ಆದ 50 ಜನರು ಮುಂದೆ ಬರಬೇಕೆಂದು ಕೇಳಿಕೊಂಡರು. ಈ ಮನವಿ ಪತ್ರಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿ ದೇಶದ ನಾನಾ ಭಾಗಗಳಿಂದ ಜನರು ಮುಂದೆ ಬಂದರು. 1885ರ ಡಿಸೆಂಬರ್‌ನಲ್ಲಿ ಇವರು ಬೊಂಬಾಯಿಯಲ್ಲಿ ಸಭೆ ಸೇರಿದರು. ಕಲ್ಕತ್ತದ ಪ್ರಮುಖ ಅಡ್ವೊಕೇಟ್ ಡಬ್ಲ್ಯು. ಸಿ. ಬ್ಯಾನರ್ಜಿ ಎಂಬವರು ಇದರ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ದೇಶದ ನಾನಾ ಭಾಗಗಳ ಗಣ್ಯ ವ್ಯಕ್ತಿಗಳು – ದಾದಾಭಾಯಿ ನವರೋಜಿ,

---

1. ಎ. ಒ. ಹ್ಯೂಮ್ ಎಂಬಾತನು ಇಂಡಿಯ ಸಿವಿಲ್ ಸರ್ವಿಸ್ ಅಧಿಕಾರಿಯಾಗಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದನು. ಭಾರತವು ಶೀಘ್ರವಾಗಿ ಸ್ವರಾಜ್ಯ ಪಡೆಯಬೇಕೆಂದು ಆತನು ಆಶಿಸಿದ್ದನು.

ಫಿರೋಜ್ ಷಾ ಮೆಹ್ತಾ, ದಿನ್‌ಷಾ ವಾಚ, ಕೆ. ಟಿ. ಟೆಲಾಂಗ್ ಇತ್ಯಾದಿ– ಕಾಂಗ್ರೆಸ್ ಸಭೆಗೆ ಹಾಜರಾಗಿದ್ದರು. ಕಾಂಗ್ರೆಸ್ ಸಂಸ್ಥೆಯ ಉದ್ದೇಶ ಗಳನ್ನು ಹೀಗೆ ವಿವರಿಸಲಾಯಿತು :

1. "ಭಾರತದ ವಿವಿಧ ಭಾಗಗಳಲ್ಲಿ ದೇಶದ ಹಿತದೃಷ್ಟಿಯಿಂದ ಕಾರ್ಯ ಮಗ್ನರಾಗಿರುವವರೊಳಗೆ ವೈಯಕ್ತಿಕ ಆತ್ಮೀಯತೆ ಹಾಗೂ ಸ್ನೇಹ ಸಂಬಂಧಗಳನ್ನು ಬೆಳೆಸುವುದು ;
2. ದೇಶಪ್ರೇಮಿಗಳಾದ ಜನರಲ್ಲಿ ನೇರ ವೈಯಕ್ತಿಕ ಸಂಪರ್ಕಗಳ ಮೂಲಕ ಜನಾಂಗ, ಮತ ಅಥವಾ ಪ್ರಾಂತೀಯ ಮನೋಭಾವ ಗಳಿಂದ ಉದ್ಭವಿಸಬಹುದಾದ ಸರ್ವವಿಧದ ಸಂಕುಚಿತ ಭಾವನೆ ಗಳನ್ನು ತೊಡೆದುಹಾಕುವಿಕೆ ;
3. ಹೆಚ್ಚು ಮುಖ್ಯವಾದ ಹಾಗೂ ತ್ವರಿತವಾಗಿ ಪರಿಹಾರವಾಗಬೇಕಾ ದಂತಹ ಪ್ರಚಲಿತ ಸಾಮಾಜಿಕ ಸಮಸ್ಯೆಗಳ ಬಗ್ಗೆ ಭಾರತದ ವಿದ್ಯಾ ವಂತ ವರ್ಗದವರ ಅಭಿಪ್ರಾಯಗಳನ್ನು ಅಧಿಕೃತವಾಗಿ ದಾಖಲೆ ಮಾಡುವುದು ;
4. ಬರಲಿರುವ ಮುಂದಿನ ಹನ್ನೆರಡು ತಿಂಗಳ ಅವಧಿಯಲ್ಲಿ ರಾಷ್ಟ್ರೀಯ ರಾಜಕಾರಣಿಗಳು ಸಾರ್ವಜನಿಕ ಹಿತಾಸಕ್ತಿಯಿಂದ ಶ್ರಮಿಸಬೇಕಾದ ಮಾರ್ಗಗಳನ್ನು ನಿರ್ಣಯಿಸುವುದು."

ರಾಷ್ಟ್ರೀಯ ಐಕ್ಯತೆ ಬಲಗೊಳಿಸುವಿಕೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಿಕೆ ಮತ್ತು ಭಾರತೀಯ ಜನತೆಯ ಹಿತಾಸಕ್ತಿಗಳಿಗಾಗಿ ಶ್ರಮಿಸುವಿಕೆ – ಇತ್ಯಾದಿ ಉದ್ದೇಶ ಗಳನ್ನು ಹೊಂದಿದ್ದ ಅಖಿಲ ಭಾರತ ಸಂಸ್ಥೆಯೊಂದು ಹೀಗೆ 1885 ರಲ್ಲಿ ಪ್ರಪ್ರಥಮವಾಗಿ ಜನ್ಮ ತಾಳಿತು. ಹಿಂದಿನ ಅಧ್ಯಾಯದಲ್ಲಿ ವಿವರಿಸಿರುವಂತೆ ರಾಷ್ಟ್ರೀಯತಾ ಭಾವನೆಯು ಬೆಳೆದು ಇಂತಹ ಸಂಸ್ಥೆಯ ಸ್ಥಾಪನೆಗೆ ಸೂಕ್ತ ವಾತಾವರಣ ಉಂಟಾಗಿದ್ದಿತಾದರೂ ಈ ಸಂಸ್ಥೆಯ ಸ್ಥಾಪನೆಗೆ ಸಲಹೆ ಹಾಗೂ ಪ್ರಥಮ ಪ್ರಯತ್ನ ಆಂಗ್ಲೇಯನಿಂದ ಉಂಟಾದುದು ಗಮನಾರ್ಹ ಅಂಶವಾಗಿದೆ.

ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಬ್ರಿಟಿಷರ ಪ್ರತಿಕ್ರಿಯೆ

ಕೆಲವು ಗಣ್ಯ ಬ್ರಿಟಿಷ್ ವ್ಯಕ್ತಿಗಳು[1] ಭಾರತೀಯ ಕಾಂಗ್ರೆಸ್ ಸ್ಥಾಪನೆಯನ್ನು ಸ್ವಾಗತಿಸಿದರು. ಸರ್ಕಾರವೂ ಮೊದಮೊದಲು ಕಾಂಗ್ರೆಸ್ಸಿನ ಬಗ್ಗೆ ವಿಶೇಷ ಸಹಾನುಭೂತಿ ವ್ಯಕ್ತಪಡಿಸಿತು. ಲಾರ್ಡ್ ಡಫರಿನ್‌ಗೆ ಈ ಸಂಸ್ಥೆಯ ಬಗ್ಗೆ ಎಷ್ಟು ಗೌರವ ಭಾವನೆ ಇತ್ತೆಂದರೆ 1886 ರಲ್ಲಿ ಕಲ್ಕತ್ತಾದಲ್ಲಿ ಸಭೆ ಸೇರಿದ್ದ ಪ್ರತಿನಿಧಿಗಳನ್ನು ಆಹ್ವಾನಿಸಿ ಸರ್ಕಾರಿ ಭವನದಲ್ಲಿ ಅವರಿಗೆ ಔತಣ ಕೂಟವನ್ನು ಅವರು ಏರ್ಪಡಿಸಿದರು. 1887 ರಲ್ಲಿ ಇಂತಹುದೇ ಔತಣವನ್ನು ಮದರಾಸಿನ ಗೌರ್ನರ್ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳಿಗೆ ಏರ್ಪಡಿಸಿದರು. ಆದರೆ ಈ ಉದಾತ್ತ ಹಾಗೂ ಉದಾರ ಭಾವನೆ ಬಹುಶೀಘ್ರವಾಗಿಯೇ ಮಾಯವಾಗಿ ಇದರ ಬದಲಿಗೆ ಕಾಂಗ್ರೆಸ್ಸನ್ನು ದಮನ ಮಾಡುವ ಧೋರಣೆಯುಂಟಾಯಿತು. ಭಾರತದ ಜನತೆಯನ್ನು ಒಂದುಗೂಡಿಸಿ ಅವರೆಲ್ಲರನ್ನೂ ತಮ್ಮ ಹಿತಾಸಕ್ತಿಗಳಿಗಾಗಿ ಕಾರ್ಯಮಗ್ನರಾಗಬೇಕೆಂದು ಪ್ರೇರೇಪಿಸುವ ಪ್ರಯತ್ನವನ್ನು ತಮ್ಮ ಜನಾಂಗದವರೇ ಆದ ಹ್ಯೂಮ್ ಕೈಗೊಂಡುದು ಬ್ರಿಟಿಷರಿಗೆ ಸಹನೆಯಾಗಲಿಲ್ಲ. ಅಲ್ಲಿನ ಅಧಿಕಾರಿಗಳು ಹೀಗೆ ಮಾಡಬಾರದೆಂದು ಹ್ಯೂಮ್ ಅವರಿಗೆ ಎಚ್ಚರಿಕೆ ಕೊಟ್ಟರು. ಆದರೆ ಹ್ಯೂಮ್ ತಮ್ಮ ಕಾರ್ಯವನ್ನು ಮುಂದುವರಿಸಿದರು. 1888 ರಲ್ಲಿ ಕಲ್ಕತ್ತಾದಲ್ಲಿ ನೆರವೇರಿದ ಕಾಂಗ್ರೆಸ್ ಅಧಿವೇಶನಕ್ಕೆ ಆಂಡ್ರ್ಯೂ ಯೂಲ್ ಎಂಬ ಆಂಗ್ಲೇಯರು ಅಧ್ಯಕ್ಷರಾದರು. 1889ರ ಕಾಂಗ್ರೆಸ್ಸಿನ ಅಧಿವೇಶನವೂ ಸರ್ ವಿಲಿಯಂ ವೆಡರ್‌ಬರ್ನ್ ಎಂಬ ಆಂಗ್ಲೇಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಅಧಿವೇಶನದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾಗಿದ್ದ ಬ್ರಾಡ್‌ಲಾ ಎಂಬವರು ಭಾಷಣಮಾಡಿದರು. ಭಾರತಜನತೆಯನ್ನು ತಮ್ಮ ರಾಜಕೀಯ ಆಕಾಂಕ್ಷೆಗಳ ಬಗ್ಗೆ ಹುರಿದುಂಬಿಸುವುದೇ ಅವರ ಭಾಷಣದ ಮುಖ್ಯ ಉದ್ದೇಶವಾಗಿದ್ದಿತು. ಈ ಬೆಳವಣಿಗೆಗಳೆಲ್ಲವೂ ಬ್ರಿಟಿಷ್ ಸರ್ಕಾರದ ಧೋರಣೆಯನ್ನು ಬದಲಾಯಿಸಿತು. ಆರಂಭದಲ್ಲಿ ಕಾಂಗ್ರೆಸ್ ಸಂಸ್ಥೆಯ

---

1. ಹ್ಯೂಮ್ ಮತ್ತು ವೆಡರ್ ಬರ್ನ್ ಅಲ್ಲದೆ ಇಂತಹವರಲ್ಲಿ ಡೇವಿಡ್ ಯೂಲ್, ಚಾರಲ್ಸ್ ಬ್ರಾಡ್‌ಲಾ, ವಿಲಿಯಂ ಎಡ್ವರ್ಡ್ ಗ್ಲಾಡ್‌ಸ್ಟೋನ್, ಲಾರ್ಡ್ ನಾರ್ತ್ ಬ್ರೂಕ್, ಪೆಕ್ವಿಕ್ ಲಾರೆನ್ಸ್, ಲಾರ್ಡ್ ಸ್ಟ್ಯಾನ್ಲಿ ಮತ್ತು ಇನ್ನೂ ಅನೇಕರು ಸೇರಿದ್ದರು.

ಸ್ಥಾಪನೆಗೆ ಉತ್ತೇಜನ ನೀಡಿದ್ದ ಲಾರ್ಡ್ ಡಫರಿನ್ ಅವರೇ 2–3 ವರ್ಷಗಳಲ್ಲಿಯೇ ತಮ್ಮ ಧೋರಣೆಯನ್ನು ಬದಲಾಯಿಸಿಕೊಂಡರು. ಕಾಂಗ್ರೆಸ್ಸು ಘೋಷಿಸಿದ ರಾಜಕೀಯ ಆಕಾಂಕ್ಷೆಗಳೆಲ್ಲವೂ ಸಂವಿಧಾನಬಾಹಿರವಾಗಿರುವುದಲ್ಲದೆ, ಈ ಆಕಾಂಕ್ಷೆಗಳನ್ನು ಈಡೇರಿಸಲು ಇಂಗ್ಲೆಂಡಿನ ಜನತೆ ಒಪ್ಪುವುದಿಲ್ಲವೆಂದು ಅವರು ಘೋಷಿಸಿದರು. ಕಾಂಗ್ರೆಸು ಕೇವಲ ಅತ್ಯಲ್ಪ ಭಾಗ (Microscopic Minority) ವಿದ್ಯಾವಂತ ಜನರನ್ನು ಮಾತ್ರ ಪ್ರತಿನಿಧಿಸುವುದೆಂದೂ, ಅದು "ರಾಜ್ಯದ್ರೋಹಿ ಸಂಸ್ಥೆ" (Seditious Body) ಆಗಿದೆ ಎಂದೂ ಡಫರಿನ್ ಅವರು ಕಾಂಗ್ರೆಸ್ಸನ್ನು ದೂಷಿಸಿದರು.[1] ಉತ್ತರ ಪ್ರದೇಶದ ಗೌರ್ನರ್ ಆಗಿದ್ದ ಸರ್ ಅಕ್‌ಲೆಂಡ್ ಕಾಲ್ವಿನ್ನನು, ಕಾಂಗ್ರೆಸ್ಸು ಭಾರತದ ಜನತೆಯನ್ನು ಪ್ರತಿನಿಧಿಸುವುದೆಂದು ಹೇಳಿಕೊಳ್ಳುತ್ತಿರುವುದು ಶುದ್ಧ ಸುಳ್ಳು ಎಂದು ಆಪಾದಿಸಿದನು.[2] ಹೀಗೆ ಕಾಂಗ್ರೆಸ್ಸು ಸ್ಥಾಪನೆಯಾದ ಅತ್ಯಲ್ಪ ಕಾಲದಲ್ಲಿಯೇ ಬ್ರಿಟಿಷರು ಕಾಂಗ್ರೆಸ್ಸಿನ ಬಗ್ಗೆ ವಿರೋಧ ಪ್ರತಿಕ್ರಿಯೆ ವ್ಯಕ್ತಪಡಿಸಲಾರಂಭಿಸಿದರು.

ಭಾರತದಲ್ಲಿದ್ದ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ಸಿನ ಬೆಳವಣಿಗೆಗೆ ಅನೇಕ ರೀತಿಯಲ್ಲಿ ತೊಂದರೆಯನ್ನು ಕೊಡಲಾರಂಭಿಸಿತು. ಕಾಂಗ್ರೆಸ್ಸು ಏರ್ಪಡಿಸುವ ಯಾವ ಸಭೆಗೂ ಹಾಜರಾಗಕೂಡದೆಂದು ಸರ್ಕಾರೀ ನೌಕರರಿಗೆಲ್ಲಾ ಸುತ್ತೋಲೆಯ ಮೂಲಕ ಆದೇಶ ನೀಡಲಾಯಿತು. ಹಾಗೆ ಈ ಆಜ್ಞೆ ಮೀರಿ ಹೋದವರಿಗೆ ದಂಡ ವಿಧಿಸಲಾಗುತ್ತಿತ್ತು. ಅಲಹಾಬಾದಿನಲ್ಲಿ ನಾಲ್ಕನೆಯ ಕಾಂಗ್ರೆಸ್ ಅಧಿವೇಶನ ಸೇರಬೇಕಾಗಿದ್ದ ಸಂದರ್ಭದಲ್ಲಿ ಖಾಲಿ ನಿವೇಶನಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರವು ತನ್ನ ಅನುಮತಿ ಕೊಡಲಿಲ್ಲ. ರಾಜ್ಯದ್ರೋಹಿ ಭಾಷಣಗಳು ಮತ್ತು ಚಟುವಟಿಕೆಗಳ ವಿರುದ್ಧ

---

1. Banerjea, A. C. [Ed] *Indian Constitutional Documents*, 1757–1945, Vol II, Calcutta, A. Mukherjea, 1946, PP 54–56, Quoted in D. C. Gupta, *op. cit.* P. 41 f.n.

2. Pattabhi Sitaramayya, *The History of the Indian National Congress, 1885–1935*, vol I, Bombay, 1948 n 3, p 65

ತೀವ್ರ ಕ್ರಮ ಕೈಗೊಳ್ಳಲು 'ಇಂಡಿಯನ್ ಪಿನಲ್ ಕೋಡ್' ತಿದ್ದುಪಡಿ ಮಾಡಿ ಅವಶ್ಯಕವಾದ ಅಧಿಕಾರವನ್ನು ಸರ್ಕಾರಕ್ಕೆ ಕೊಡಲಾಯಿತು. ವೃತ್ತಪತ್ರಿಕೆಗಳನ್ನು ಕಾಂಗ್ರೆಸು ತನ್ನ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುವುದನ್ನು ತಪ್ಪಿಸಲು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯಿತು. 1900–1905 ರ ಅವಧಿಯ ಲಾರ್ಡ್ ಕರ್ಜನ್‌ನ ಆಳ್ವಿಕೆಯಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳ ವಿರುದ್ಧ ಇಂತಹ ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ ಸರ್ಕಾರದ ಈ ದಮನ ಕಾರ್ಯಗಳು ರಾಷ್ಟ್ರೀಯ ಚಳುವಳಿಗಾರರನ್ನು ರಚ್ಚೆಬ್ಬಿಸಿ ಚಳುವಳಿಯನ್ನು ಹೆಚ್ಚು ತೀವ್ರಗೊಳಿಸಿತು.

ನೇರವಾಗಿ ಕಾಂಗ್ರೆಸ್ಸಿನ ರಾಷ್ಟ್ರೀಯ ಚಳುವಳಿಯ ವಿರುದ್ಧ ಕೈಗೊಳ್ಳಲಾದ ಮೇಲಿನ ತರಹದ ಕ್ರಮಗಳ ಜೊತೆಗೆಯೇ ಬ್ರಿಟಿಷ್ ಸರ್ಕಾರವು ಕುತಂತ್ರ ನೀತಿಯನ್ನು ಅನುಸರಿಸಿ ಚಳುವಳಿಯನ್ನು ದುರ್ಬಲಗೊಳಿಸುವ ಪ್ರಯತ್ನ ಮೊದಲಿನಿಂದಲೇ ಮಾಡುತ್ತಾ ಬಂದಿತು. 'ವಿಭಜಿಸಿ ಆಳು' **(Divide and Rule)** ಎಂಬ ಪುರಾತನ ರೋಮನ್ನರ ನೀತಿಯನ್ನು ಬ್ರಿಟನ್ನು ಭಾರತದ ರಾಷ್ಟ್ರೀಯ ಚಳುವಳಿಯನ್ನು ಎದುರಿಸಲು ಉಪಾಯದಿಂದ ಉಪಯೋಗಿಸುತ್ತಾ ಬಂದಿತು. ಭಾರತೀಯ ರಾಜರುಗಳ ಗೌರವ ಹಾಗೂ ಹಕ್ಕುಗಳಿಗೆ ಮನ್ನಣೆ ನೀಡುವ ಘೋಷಣೆಯನ್ನು 1857 ರಲ್ಲಿಯೇ ಬ್ರಿಟಿಷ್ ರಾಣಿಯವರು ಹೊರಡಿಸಿದರು. ಈ ರಾಜರುಗಳು ಬ್ರಿಟಿಷರಿಗೆ ನಿಷ್ಠೆ ಹೊಂದಿದ್ದು ರಾಷ್ಟ್ರೀಯ ಚಳುವಳಿಗೆ ಬೆಂಬಲ ನೀಡುವುದಿಲ್ಲವೆಂಬುದು ಲಾರ್ಡ್ ಕ್ಯಾನಿಂಗನೇ ವಿಶದಪಡಿಸಿದಂತೆ ಈ ಘೋಷಣೆಯ ಸೂಕ್ಷ್ಮ ಉದ್ದೇಶವಾಗಿದ್ದಿತು.[1] ವಾಸ್ತವವಾಗಿಯೂ ಅನೇಕ ರಾಜರುಗಳು ರಾಷ್ಟ್ರೀಯ ಚಳುವಳಿಯಿಂದ ಪ್ರತ್ಯೇಕವಾಗಿ ಉಳಿದರು. ಅವರುಗಳ ಸ್ವಂತ ಉಳಿವು ಬ್ರಿಟಿಷರ ಅಧಿಕಾರವನ್ನು ಅವಲಂಬಿಸಿದೆಯೇ ವಿನಹ ಕಾಂಗ್ರೆಸ್ಸಿನ ರಾಷ್ಟ್ರೀಯ ಚಳುವಳಿಯನ್ನಲ್ಲ ಎಂಬುದೇ ಅವರ ನಂಬಿಕೆಯಾಯಿತು. ಹೀಗೆ ಪ್ರಥಮತಃ ದೇಶೀಯ ರಾಜರುಗಳನ್ನು ದೇಶದ ಇತರರಿಂದ ಬೇರ್ಪಡಿಸಿದಂತಾಯಿತು. 'ವಿಭಜಿಸಿ ಆಳು' ನೀತಿಯ ಮೊದಲ ಮುಖ್ಯ ಯಶಸ್ಸು

---

1. Quoted in H. N. Brailford, *Subject India*, Bombay, 1946, P. 21

ಇದು. ನಂತರ ಇದೇ ಕುತಂತ್ರ ನೀತಿಯಿಂದ ಬ್ರಿಟಿಷರು ಮುಸಲ್ಮಾನರನ್ನು ಹಿಂದೂಗಳಿಂದ ಬೇರ್ಪಡಿಸುವ ಪ್ರಯತ್ನ ಮಾಡಿದರು. ಇದು ಹೇಗೆ ಎಂಬುದನ್ನು ಈ ಕೆಳಗೆ ವಿವರಿಸಲಾಗುವುದು.

ಪ್ರತ್ಯೇಕ ಮುಸಲ್ಮಾನ ಸಂಸ್ಥೆಗಳ ಸ್ಥಾಪನೆ – ಮುಸ್ಲಿಂ ಲೀಗಿನ ಉಗಮ

ಬ್ರಿಟಿಷರು ತಮ್ಮ ಸ್ವಪ್ರಯೋಜನಕ್ಕಾಗಿ ಉಪಾಯವಾಗಿ ಭಾರತದ ಮುಸಲ್ಮಾನರನ್ನು ಹಿಂದೂಗಳ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳನ್ನು ನಡೆಸಿದರು. ಬ್ರಿಟಿಷರ ಆಳ್ವಿಕೆಯ ಮೊದಲ ಕೆಲವು ದಶಕಗಳಲ್ಲಿ ಅವರು ಮುಸಲ್ಮಾನರನ್ನು ಸಂಶಯ ದೃಷ್ಟಿಯಿಂದ ಕಾಣುತ್ತಿದ್ದರು. ಏಕೆಂದರೆ, ಮೊಘಲರಿಂದ ತಾವು ರಾಜ್ಯವನ್ನು ಕಸಿದುಕೊಂಡುದುದು ಮುಸಲ್ಮಾನರಿಗೆ ಅಸಮಾಧಾನ ಉಂಟುಮಾಡಿತ್ತೆಂಬುದು ಅವರ ನಂಬಿಕೆ ಆಗಿದ್ದಿತು. ಅಲ್ಲದೆ 1857 ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಸಲ್ಮಾನರೂ ಬ್ರಿಟಿಷರ ವಿರುದ್ಧ ಹೋರಾಡಿದುದನ್ನು ಅವರು ಗಮನಿಸಿದ್ದರು. ಆದುದರಿಂದ ಅವರ ಧೋರಣೆ ಮುಸಲ್ಮಾನ ವಿರೋಧಿ ಧೋರಣೆ ಆಗಿದ್ದಿತು. ಆದರೆ, ಕಾಂಗ್ರೆಸ್ಸು ಸಂಸ್ಥೆಯ ಬಲ ವೃದ್ಧಿಯಾಗಲಾರಂಭಿಸಿದಾಗ ಮತ್ತು ಸರ್ ಸಯ್ಯದ್ ಮುಂದಾಳತ್ವದಲ್ಲಿ ಮುಸಲ್ಮಾನರೂ ಕಾಂಗ್ರೆಸ್ಸಿಗೆ ಸೇರಲಾರಂಭಿಸಿದಾಗ ಮುಸಲ್ಮಾನರು ಕಾಂಗ್ರೆಸ್ಸಿನಿಂದ ಬೇರೆಯಾಗಿ ಉಳಿದರೆ ತಮ್ಮ ಸಾಮ್ರಾಜ್ಯದ ಹಿತವನ್ನು ಕಾಪಾಡಿಕೊಳ್ಳಬಹುದೆಂಬುದು ಅವರ ಸೂಕ್ಷ್ಮ ಬುದ್ಧಿಗೆ ಹೊಳೆಯಿತು. ಆದುದರಿಂದ ಮುಸಲ್ಮಾನರ ಸ್ನೇಹ ಸಂಪಾದಿಸುವ ಉಪಾಯಗಳನ್ನು ಅನುಸರಿಸಲಾರಂಭಿಸಿದರು.

ಅಲಿಘರ್‌ನಲ್ಲಿದ್ದ ಆಂಗ್ಲೋ – ಓರಿಯಂಟಲ್ ಕಾಲೇಜು ಮತೀಯ ಭಿನ್ನತೆಯನ್ನು ಉತ್ತೇಜಿಸುವ ಪ್ರಮುಖ ಕೇಂದ್ರವಾಯಿತು. 1883 ರಲ್ಲಿ ಈ ಕಾಲೇಜಿನ ಪ್ರಿನ್ಸಿಪಾಲ್ ಆಗಿ ನೇಮಿಸಲ್ಪಟ್ಟ ಬೆಕ್ (Beck) ಎಂಬ ಆಂಗ್ಲೇಯ ಅತ್ಯಂತ ಉತ್ಸಾಹದಿಂದ ಹಿಂದೂ – ಮುಸಲ್ಮಾನರೊಳಗೆ ಭೇದ ಹೆಚ್ಚಿಸಲು ಅನೇಕ ಪ್ರಯತ್ನಗಳನ್ನು ಮಾಡಿದರು. ಕಾಂಗ್ರೆಸ್ಸಿಗೆ ಸೇರಿದ್ದ ಹಿರಿಯ ಮುಸಲ್ಮಾನ ಮುಖಂಡ ಸರ್ ಸಯ್ಯದರೊಡನೆ ಮಾತುಕತೆ ನಡೆಸಿ ಹಿಂದೂಗಳೊಡನೆ ಸೇರುವುದಕ್ಕಿಂತ ಬ್ರಿಟಿಷರೊಡನೆ ಸ್ನೇಹಬೆಳೆಸಿಕೊಳ್ಳುವುದ

ರಿಂದ ಭಾರತದ ಮುಸಲ್ಮಾನರಿಗೆ ಹೆಚ್ಚು ಲಾಭವುಂಟು ಎಂಬುದನ್ನು ವಿವರಿಸಿದನು. ಸರ್ ಸಯ್ಯದ್‌ಗೆ ಬೆಕ್ ಹೇಳುವುದು ಸರಿ ಅನ್ನಿಸಿತು. ಆಗಿನಿಂದ ಇವರು ರಾಷ್ಟ್ರೀಯ ಕಾಂಗ್ರೆಸ್ಸಿನ ವಿರೋಧಿಯಾದರು. ಹೀಗೆ ಬ್ರಿಟಿಷರು ಹಿಂದೂ – ಮುಸಲ್ಮಾನ ಬಾಂಧವ್ಯವನ್ನು ಕೆಡಿಸುವ ವಿಷಬೀಜವನ್ನು ಬಿತ್ತಿದಂತಾಯಿತು. ಹಾಗೂ ತರುವಾಯ ರೂಪುಗೊಂಡ ಪಾಕಿಸ್ತಾನ ಭಾವನೆಗೂ ಕಾರಣವಾಯಿತು.

ಅಲಿಘರ್ ಕಾಲೇಜು ಬಹುಕಾಲದವರೆಗೂ ಮುಸಲ್ಮಾನರ ರಾಜಕೀಯ ಕೇಂದ್ರವಾಯಿತು. ಇದಕ್ಕೆ ನೇಮಿಸಲ್ಪಟ್ಟ ಆಂಗ್ಲೇಯ ಪ್ರಿನ್ಸಿಪಾಲರುಗಳು ಎಲ್ಲಾ ವಿಧದಲ್ಲಿಯೂ ಮುಸಲ್ಮಾನ ಯುವಕ ವಿದ್ಯಾರ್ಥಿಗಳನ್ನು ಹಿಂದೂ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳನ್ನು ಮಾಡಿದರು. ಅವರುಗಳ ಉತ್ತೇಜನದಿಂದ ಮುಸಲ್ಮಾನ ವಿದ್ಯಾಭ್ಯಾಸ ಸಮ್ಮೇಳನವೆಂಬ ಒಂದು ಪ್ರತ್ಯೇಕ ಸಂಸ್ಥೆ ಸ್ಥಾಪಿಸಲ್ಪಟ್ಟಿತು. ರಾಷ್ಟ್ರೀಯ ಕಾಂಗ್ರೆಸ್ಸು ತನ್ನ ಅಧಿವೇಶನವನ್ನು ಏರ್ಪಡಿಸಿದ ದಿವಸವೇ ಮತ್ತು ಅದೇ ಸ್ಥಳದಲ್ಲಿಯೇ ಈ ಮುಸಲ್ಮಾನ ಸಮ್ಮೇಳನವೂ ತನ್ನ ಅಧಿವೇಶನವನ್ನು ಏರ್ಪಡಿಸುತ್ತಿದ್ದುದು ಅರ್ಥಗರ್ಭಿತ ವಿಷಯವಾಗಿದೆ. ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿದ್ದ ಮುಸಲ್ಮಾನರನ್ನು ತನ್ನ ಸಂಸ್ಥೆಗೆ ಆಕರ್ಷಿಸುವುದೇ ಈ ಏರ್ಪಾಡಿನ ಉದ್ದೇಶವಾಗಿದ್ದಿತು. ಪ್ರಜಾಪ್ರಭುತ್ವ ಸರ್ಕಾರ ಬೇಕೆಂದು ಕಾಂಗ್ರೆಸ್ಸು ನಡೆಸುತ್ತಿರುವ ಚಳುವಳಿಯಿಂದ ಬಹುಭಾಗ ಜನತೆಯಾಗಿರುವ ಹಿಂದೂಗಳ ಸರ್ಕಾರ ಮಾತ್ರವೇ ಉಂಟಾಗುವುದೆಂದೂ, ಇದರಿಂದ ಮುಸಲ್ಮಾನರಿಗೆ ಯಾವ ಅಧಿಕಾರವೂ ದೊರಕುವುದಿಲ್ಲವೆಂದೂ ಸರ್ ಸಯ್ಯದ್ ಅವರು ತಮ್ಮ ಮುಸಲ್ಮಾನ ಬಾಂಧವರಲ್ಲಿ ಪ್ರಚಾರ ಮಾಡುತ್ತ ಬಂದರು. ಈ ಭಾವನೆಯನ್ನು ಬ್ರಿಟಿಷ್ ಸರ್ಕಾರವು ಪೋಷಿಸಿತು.

1888ರಲ್ಲಿ ಸರ್ ಸಯ್ಯದ್ 'ಯುನೈಟೆಡ್ ಇಂಡಿಯನ್ ಪೇಟ್ರಿಯಾಟಿಕ್ ಅಸೋಸಿಯೇಷನ್' ಎಂಬ ಇನ್ನೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಘವು ಕೇವಲ ಮುಸಲ್ಮಾನ ಸಂಸ್ಥೆಯಾಗಿರದೆ ಅನೇಕ ಭಾರಿ ಹಿಂದೂ ಜಮೀನ್ದಾರರನ್ನೂ ಕೆಲವು ಐರೋಪ್ಯರನ್ನೂ ಸದಸ್ಯರಾಗಿ ಹೊಂದಿದ್ದಿತು. ಕಾಂಗ್ರೆಸ್ಸಿನ ಸದಸ್ಯರನ್ನು ಆ ಸಂಸ್ಥೆಯಿಂದ ತನ್ನ ಸಂಸ್ಥೆಗೆ ಆಕರ್ಷಿಸುವುದೂ, ಕಾಂಗ್ರೆಸ್ಸಿಗೆ ವಿರೋಧಿಯಾಗಿರುವ ಹಿಂದೂ ಹಾಗೂ ಮುಸಲ್ಮಾನ ಸಂಸ್ಥೆಗಳ

ಅಭಿಪ್ರಾಯಗಳನ್ನು ಬ್ರಿಟಿಷ್ ಜನತೆಗೂ, ಬ್ರಿಟಿಷ್ ಪಾರ್ಲಿಮೆಂಟಿಗೂ ಆಗಿಂದಾಗ್ಗೆ ವರದಿ ಮಾಡುವುದೂ ಈ ಸಂಘದ ಉದ್ದೇಶವಾಗಿದ್ದಿತು.[1]

1893ರಲ್ಲಿ ಅಲಿಘರ್ ಕಾಲೇಜಿನ ಸಹಾಯದಿಂದ ಬ್ರಿಟಿಷರು 'ಮಹ ಮಡನ್ ಆಂಗ್ಲೊ-ಓರಿಯಂಟಲ್ ಡಿಫೆನ್ಸ್ ಅಸೋಸಿಯೇಷನ್ ಆಫ್ ಅಪ್ಪರ್ ಇಂಡಿಯ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಸುಭದ್ರಗೊಳಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದೂ, ಬ್ರಿಟಿಷರ ಬಗ್ಗೆ ಭಾರತದ ಜನರಲ್ಲಿ ನಿಷ್ಠೆಯನ್ನು ಬೆಳೆಸುವುದೂ ಈ ಸಂಸ್ಥೆಯ ಉದ್ದೇಶವಾಗಿದ್ದಿತು.

ಬ್ರಿಟಿಷರ ವಿರುದ್ಧ ಕಾಂಗ್ರೆಸ್ಸು ಸ್ವದೇಶಿ ಚಳುವಳಿಯನ್ನು ಹೂಡಿ 1905ರಲ್ಲಿ ಭಾರತಕ್ಕೆ ಸ್ವರಾಜ್ಯ ನೀಡುವಂತೆ ಒತ್ತಾಯಿಸುವಂತೆ ಠರಾವು ಅನುಮೋದಿಸಿದಾಗ, ಆಗಿನ ವೈಸರಾಯ್ ಆಗಿದ್ದ ಲಾರ್ಡ್ ಮಿಂಟೋ ಕಾಂಗ್ರೆಸ್ ಚಳುವಳಿಯಿಂದ ಮುಸಲ್ಮಾನರನ್ನು ಬೇರ್ಪಡಿಸಲು ವಿಶೇಷ ಪ್ರಯತ್ನ ನಡೆಸಿದರು. ವೈಸರಾಯ್ ಅವರ ಉತ್ತೇಜನದಿಂದ ಭಾರತದ ವಿವಿಧ ಭಾಗಗಳ ಮುಸಲ್ಮಾನ ಮುಖಂಡರುಗಳು ಸಭೆ ಸೇರಿ 1906ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗನ್ನು ಸ್ಥಾಪಿಸಿದರು. ಭಾರತದ ಮುಸಲ್ಮಾನರಲ್ಲಿ ಬ್ರಿಟಿಷ್ ಸರ್ಕಾರದ ಬಗ್ಗೆ ನಿಷ್ಠೆ ಬೆಳೆಸುವುದೂ, ಭಾರತದ ಮುಸಲ್ಮಾನರ ಹಕ್ಕುಗಳನ್ನೂ ಹಿತಾಸಕ್ತಿಗಳನ್ನೂ ರಕ್ಷಿಸುವುದೇ ಈ ಸಂಸ್ಥೆಯ ಘೋಷಿತ ಉದ್ದೇಶಗಳಾಗಿದ್ದವು. ಹೀಗೆ ಮುಸ್ಲಿಂ ಲೀಗು ಸ್ಥಾಪನೆಯಾದುದು ಬ್ರಿಟಿಷರ 'ವಿಭಜಿಸು, ಆಳು' (Divide and Rule) ನೀತಿಗೆ ದೊರೆತ ಮುಖ್ಯ ಜಯ ಎಂದು ತಿಳಿಯಬಹುದು. ಮುಸ್ಲಿಂ ಲೀಗಿನ ಸ್ಥಾಪನೆಯಲ್ಲಿ ಇಂಡಿಯ ಸರ್ಕಾರದ ಹಾಗೂ ಕೆಲವು ಆಂಗ್ಲರ ಕೈವಾಡ ಪ್ರಮುಖವಾಗಿತ್ತು ಎಂಬುದನ್ನು ಈ ಬಗ್ಗೆ ಹೆಚ್ಚು ವಿವರವಾದ ಅಧ್ಯಯನವು ಸಮರ್ಥಿಸುವುದು.[2]

---

1. Rajendra Prasad, *India Divided*, Bombay, 1946 P. 103
2. ಈ ವಿವರಗಳಿಗೆ ನೋಡಿ: Majumdar R.C. *History of Freedom Movement in India*, vol. II, Calcutta, 1963, P. 224
   Ashok Mehta & Achyut Patwardhan, *The Communal Tangle*, Allahabad, 1946, P. 66
   Rajendra Prasad, *op. cit.* pp. 16 & 114

ಹಿಂದೂಗಳು ಮುಸಲ್ಮಾನರಲ್ಲಿ ಭೇದವನ್ನು ಬ್ರಿಟಿಷರು ಹುಟ್ಟಿಸಲಿಲ್ಲ, ಅದು ಹಿಂದೆಯೇ ಇತ್ತು; ಆದರೆ ಇದರ ಪ್ರಯೋಜನವನ್ನು ಮಾತ್ರ ಚೆನ್ನಾಗಿ ಪಡೆಯಲು ಬ್ರಿಟಿಷರು ಪ್ರಯತ್ನ ಮಾಡಿದರು ಎಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಇದರಂತೆಯೂ, ಬ್ರಿಟಿಷರು ಹಿಂದುಗಳ ವಿರುದ್ಧ ಮುಸಲ್ಮಾನರ ಸ್ನೇಹ ಸಂಪಾದಿಸುವ ಪ್ರಯತ್ನ ಮಾಡಿದರು ಎಂಬುದು ಸುಸ್ಪಷ್ಟ.

ಮುಸ್ಲಿಂ ಲೀಗು ಸ್ಥಾಪನೆಯಾದ 1906 ರಲ್ಲಿಯೇ ಹಿಂದೂ ಮಹಾ ಸಭೆಯೂ ಸ್ಥಾಪನೆಯಾದುದು ಅರ್ಥಗರ್ಭಿತ ವಿಷಯವಾಗಿದೆ.

ಹಿಂದೂಮಹಾಸಭಾ[1]

ಹಿಂದೂರಾಷ್ಟ್ರ ಸಂಘಟನೆ ಮತ್ತು ಅದರ ಅಭ್ಯುದಯ ಸಾಧನೆ, ಹಿಂದೂ ಮಹಾಸಭೆಯ ಧ್ಯೇಯ. ಭಾರತ ದೇಶದ ಸಂಸ್ಕೃತಿ, ಸಂಪ್ರದಾಯ ಗಳನ್ನು ಆಧರಿಸಿದ ಪ್ರಜಾಪ್ರಭುತ್ವ ರಾಜ್ಯ ಕಟ್ಟುವುದು ಇದರ ಉದ್ದೇಶ.

ಹಿಂದೂಮಹಾಸಭೆ 1906 ರಲ್ಲಿ ಸ್ಥಾಪಿಸಲ್ಪಟ್ಟಿತು. ಹಿಂದೂಮಹಾ ಸಭೆಯನ್ನು ಸಂಘಟಿಸಲೇಬೇಕೆಂದು ಅಭಿಪ್ರಾಯಪಟ್ಟವರಲ್ಲಿ ಲಾಲಾ ಲಜ ಪತ ರಾಯ್, ಪಂಡಿತ ಮದನಮೋಹನ ಮಾಳವೀಯ, ಸಿ. ವೈ. ಚಿಂತಾ ಮಣಿ ಮೊದಲಾದ ಪ್ರಮುಖರಿದ್ದರು. ಅಲ್ಪಸಂಖ್ಯಾತರೆಂಬ ಕಾರಣಕ್ಕಾಗಿ ಜಾತೀಯತಾ ಚುನಾವಣಾ ಕ್ಷೇತ್ರ ತಪ್ಪು ಎಂದು ಅವರು ಹೇಳಿದರು.

ವಿ. ಡಿ. ಸಾವರ್ಕರ್ ಮತ್ತು ಡಾ|| ಶ್ಯಾಮಪ್ರಸಾದ್ ಮುಖರ್ಜಿ ಹಿಂದೂಮಹಾಸಭೆಯ ಖ್ಯಾತ ನಾಯಕರಾಗಿದ್ದರು.

ಮುಸ್ಲಿಂಲೀಗ್ ಆರಂಭವಾದ ಕಾಲದಲ್ಲೇ ಹಿಂದೂಮಹಾಸಭೆಯೂ ಆರಂಭವಾಯಿತು.

✦✦✦

---

1. ಜ್ಞಾನಗಂಗೋತ್ರಿ, ಸಂಪುಟ 7. ಭಾರತದ ಕಥೆ ಪುಟ : 681 ; ಪ್ರಕಾಶಕರು : ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಅಧ್ಯಾಯ - 5

ಭಾರತದ ಸಂವಿಧಾನ ಸುಧಾರಣೆಯ ಮುಖ್ಯ ಘಟ್ಟಗಳು

ಭಾರತದ ರಾಷ್ಟ್ರೀಯ ಚಳುವಳಿ – ಉಗ್ರ ಹಾಗೂ ಸೌಮ್ಯರೂಪದ ಚಳುವಳಿಗಳು– ಬ್ರಿಟಿಷರ ಮೇಲೆ ಪರಿಣಾಮಹೊಂದದೆ ಇರಲಿಲ್ಲ. ಮೇಧಾವಿಗಳಾದ ಅವರು ಚಳುವಳಿಯ ಮೂಲಶಕ್ತಿಯನ್ನು ಅರ್ಥಮಾಡಿಕೊಂಡಿದ್ದರು. ಆದರೆ ಸಾರ್ವಭೌಮವಾದಿಗಳಾದ ಅವರು ಭಾರತವನ್ನು ಬಿಡಲು ಸ್ವಲ್ಪವೂ ಇಷ್ಟಪಡಲಿಲ್ಲ. ಸ್ವಾತಂತ್ರ್ಯ ಚಳುವಳಿಯನ್ನು ಯಾವುದಾದರೂ ಉಪಾಯದಿಂದ ದುರ್ಬಲಗೊಳಿಸುವುದು ಅವರ ಸತತ ಪ್ರಯತ್ನವಾಗಿದ್ದಿತು. 'ವಿಭಜಿಸು, ಆಳು' (Divide & Rule) ನೀತಿಯೇ ಅವರ ಪರಮ ಅಸ್ತ್ರವಾಗಿದ್ದಿತು. ದೇಶೀಯ ಸಂಸ್ಥಾನಗಳ ರಾಜರುಗಳನ್ನು ರಾಷ್ಟ್ರೀಯ ಚಳುವಳಿಯ ಮುಖಂಡರುಗಳಿಂದ ಪ್ರತ್ಯೇಕಿಸಿದುದನ್ನೂ, ಹಿಂದೂಗಳ ವಿರುದ್ಧ ಮುಸಲ್ಮಾನರನ್ನು ಪ್ರತ್ಯೇಕಿಸುವ ಅವರ ಪ್ರಯತ್ನಗಳನ್ನೂ ಕುರಿತು ಹಿಂದಿನ ಅಧ್ಯಾಯಗಳಲ್ಲಿ ಹೇಳಲಾಗಿದೆ. ಚಳುವಳಿಯ ಮುಖಂಡರಲ್ಲಿ ಸೌಮ್ಯವಾದಿಗಳನ್ನು ಅಲ್ಪಸ್ವಲ್ಪ ಸುಧಾರಣೆಗಳ ಮೂಲಕ ಸಮಾಧಾನಗೊಳಿಸಿ ಇವರನ್ನು ಉಗ್ರವಾದಿಗಳಿಂದ ಬೇರ್ಪಡಿಸುವ ಪ್ರಯತ್ನ ಮಾಡಿದರು. ಈ ಪ್ರಯತ್ನದ ಫಲವಾಗಿ ಭಾರತದ ಸಂವಿಧಾನದಲ್ಲಿ ಕಾಲಕಾಲಕ್ಕೆ ಸ್ವಲ್ಪಸ್ವಲ್ಪವಾಗಿ ಸುಧಾರಣೆಯಾಗುತ್ತಾ ಬಂದಿತು. ಮೊದಲ ಕೆಲವು ಸಂವಿಧಾನಾತ್ಮಕ ಬದಲಾವಣೆಗಳು ಈಸ್ಟ್ ಇಂಡಿಯ ಕಂಪೆನಿಯ ಆಡಳಿತದ ಮೇಲೆ ಬ್ರಿಟಿಷ್ ಸರ್ಕಾರದ ನಿಯಂತ್ರಣವನ್ನು ಕ್ರಮಗೊಳಿಸುವಂತಹವು ಆಗಿದ್ದವು. ಇವುಗಳನ್ನೂ ತರುವಾಯ ಸ್ವಾತಂತ್ರ್ಯ ಚಳುವಳಿಗಾರರನ್ನು ಸಮಾಧಾನಗೊಳಿಸಲು

ಕೈಗೊಂಡ ಇತರ ರಾಜಕೀಯ ಸುಧಾರಣೆಗಳನ್ನೂ ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗುವುದು.

1. ರೆಗ್ಯುಲೇಟಿಂಗ್ ಮಸೂದೆ (1773), ಪಿಟ್ಸ್ ಇಂಡಿಯ ಮಸೂದೆ, 1793, 1833 ಮತ್ತು 1853ರ ಛಾರ್ಟರ್ ಮಸೂದೆಗಳು (Charter Acts) ಈಸ್ಟ್ ಇಂಡಿಯ ಕಂಪೆನಿಯು ಭಾರತದ ರಾಜ್ಯವನ್ನು ಆಳುವ ವಿಧಾನಗಳನ್ನು ಕ್ರಮಗೊಳಿಸುವ ಮಸೂದೆಗಳಾಗಿದ್ದವು. ಇವುಗಳ ವಿವರ ಇಲ್ಲಿ ಅಪ್ರಕೃತ.

2. 1858ರ ಭಾರತ ಸರ್ಕಾರದ ಮಸೂದೆಯ ಪ್ರಕಾರ ಭಾರತದ ಆಡಳಿತವನ್ನು ಈಸ್ಟ್ ಇಂಡಿಯ ಕಂಪೆನಿಯಿಂದ ಬ್ರಿಟಿಷ್ ಸರ್ಕಾರವು ವಹಿಸಿಕೊಂಡಿತು. ಬ್ರಿಟಿಷ್ ಸಾರ್ವಭೌಮರ ಪ್ರತಿನಿಧಿಯಾಗಿ ಭಾರತದಲ್ಲಿ ಒಬ್ಬ ವೈಸರಾಯ್/ಗೌರ್ನರ್ ಜನರಲ್ ಈ ಆಡಳಿತವನ್ನು ನಿರ್ವಹಿಸತಕ್ಕದ್ದೆಂದೂ, ಈತನು ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಹಾಗೂ ಇವನ ಭಾರತ ಸಭೆಯ (India Council) ನಿರ್ದೇಶನಕ್ಕೆ ಒಳಪಟ್ಟಿರತಕ್ಕದ್ದೆಂದೂ ಈ ಮಸೂದೆಯು ಗೊತ್ತುಮಾಡಿತು.

3. ಮೇಲಿನ 1858ರ ಮಸೂದೆಯ ತರುವಾಯ ಪ್ರಾತಿನಿಧ್ಯ ಸಂಸ್ಥೆಗಳನ್ನು ರೂಪಿಸುವ ದೃಷ್ಟಿಯಿಂದ ಕಾಲಕಾಲಕ್ಕೆ ಕೆಲವು ಮಸೂದೆಗಳನ್ನು ಜಾರಿಗೆ ತರಲಾಯಿತು. ಇವುಗಳಲ್ಲಿ ಮೊದಲನೆಯದು 1861ರ ಇಂಡಿಯ ಕೌನ್ಸಿಲ್ ಮಸೂದೆ. ಇದರ ಪ್ರಕಾರ ಕೇಂದ್ರೀಯ ಹಾಗೂ ಪ್ರಾಂತೀಯ ವಿಧಾನಸಭೆಗಳು ಅಸ್ತಿತ್ವಕ್ಕೆ ಬಂದವು. ಇವುಗಳಿಗೆ ಸದಸ್ಯರಾಗಿ ಖಾಸಗಿ ವ್ಯಕ್ತಿಗಳನ್ನು – ಸರ್ಕಾರಿ ಅಧಿಕಾರಿಗಳಲ್ಲದವರನ್ನೂ –ಗೌರ್ನರ್ ಜನರಲ್ ನೇಮಕ ಮಾಡಬಹುದಿತ್ತು. ಹೀಗೆ ನೇಮಿಸಲ್ಪಡುತ್ತಿದ್ದವರು ಸಾಮಾನ್ಯವಾಗಿ ರಾಜರುಗಳು ಅಥವಾ ಭಾರಿ ಜಮೀನ್ದಾರರು ಅಥವಾ ನಿವೃತ್ತ ಅಧಿಕಾರಿಗಳಾಗಿದ್ದುದರಿಂದ ವಾಸ್ತವವಾಗಿ ಜನರ ಸಹಜ ಪ್ರತಿನಿಧಿಗಳಿಗೆ ಇವುಗಳಲ್ಲಿ ಯಾವ ಸ್ಥಾನವೂ ಇರಲಿಲ್ಲ. ಅಲ್ಲದೆ ಈ ಸಭೆಗಳಿಗೆ ನೀಡಲಾದ ಅಧಿಕಾರವೂ ಅತ್ಯಲ್ಪ.

4. 1861ರ ಮಸೂದೆಯ ನಂತರ ಮುಖ್ಯ ರಾಜಕೀಯ ಬದಲಾವಣೆಯಾದುದು 1862ರ ಇಂಡಿಯ ಕೌನ್ಸಿಲ್ ಮಸೂದೆ. ಇದರಿಂದ

ಕೆಲವು ಚುನಾಯಿತ ವ್ಯಕ್ತಿಗಳಿಗೆ ವಿಧಾನಸಭೆಗಳ ಸದಸ್ಯರಾಗುವ ಅವಕಾಶ ದೊರಕಿತು. ಈ ಸಭೆಗಳ ಸದಸ್ಯಸಂಖ್ಯೆಯನ್ನೂ ಹೆಚ್ಚಿಸಲಾಯಿತು. ಸರ್ಕಾರವು ಮಂಡಿಸುವ ವಾರ್ಷಿಕ ಹಣಕಾಸು ಹೇಳಿಕೆಗಳನ್ನು ಚರ್ಚಿಸಲು ಈ ಸದಸ್ಯರಿಗೆ ಅವಕಾಶ ಸಿಕ್ಕಿತು. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ಈ ಸಭೆಗಳು ತರಬಹುದಾಗಿದ್ದಿತು.

5. 1909ರ ಮಿಂಟೊ–ಮಾರ್ಲೆ ಸುಧಾರಣೆಗಳು ವಿಧಾನಸಭೆಗಳನ್ನು ಪುನರ್ರಚಿಸಿದವು. ಸದಸ್ಯರ ಒಟ್ಟು ಸಂಖ್ಯೆಯನ್ನೂ, ಚುನಾಯಿತ ಸದಸ್ಯರ ಸಂಖ್ಯೆಯನ್ನೂ ಹೆಚ್ಚಿಸಲಾಯಿತು. ಇಂಪೀರಿಯಲ್ ವಿಧಾನಸಭೆಯಲ್ಲಿ ಅಧಿಕಾರಿ ಸದಸ್ಯರ (Official Members) ಸಂಖ್ಯೆ ಖಾಸಗಿ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿದ್ದಿತು. ಪ್ರಾಂತೀಯ ವಿಧಾನಸಭೆಗಳಲ್ಲಿ ಖಾಸಗಿ ಸದಸ್ಯರೇ ಬಹುಸಂಖ್ಯಾತರಾಗಿದ್ದರು. ಆದರೆ ಇವೆರಡರಲ್ಲಿಯೂ ಸರ್ಕಾರವು ನಾಮಕರಣ ಮಾಡಿದ ಸದಸ್ಯರ ಸಂಖ್ಯಾಭಾಗವೇ ಹೆಚ್ಚಾಗಿದ್ದಿತು. ಹೀಗೆ ನಾಮಕರಣ ಮಾಡಲ್ಪಟ್ಟ ಸದಸ್ಯರು ಬ್ರಿಟಿಷರಿಗೆ ನಿಷ್ಠಾವಂತರಾಗಿರುತ್ತಿದ್ದುದರಿಂದ ಬ್ರಿಟಿಷರ ಇಚ್ಛೆಯಂತೆ ಸರ್ಕಾರದ ರೀತಿನೀತಿಗಳು ನಡೆಯಲು ಯಾವ ಅಭ್ಯಂತರವೂ ಇರುತ್ತಿರಲಿಲ್ಲ. ದೇಶದ ವಿವಿಧ ಭಾಗಗಳಿಗೆ ಯಾವ ವ್ಯವಸ್ಥಿತ ಪ್ರಾತಿನಿಧ್ಯವೂ ಇರಲಿಲ್ಲ. ವಿವಿಧ ಮತಗಳು ಪಂಗಡಗಳು ಮತ್ತು ವಿಶೇಷ ಹಿತಾಸಕ್ತಿಗಳಿಗೆ ಪ್ರತ್ಯೇಕ ಚುನಾವಣಾ ಕಣವನ್ನು (Separate Electorates) ಏರ್ಪಡಿಸಲಾಯಿತು. ರಾಜ್ಯ ವಿರೋಧಿ ಕಾರ್ಯಗಳಿಗಾಗಿ ಶಿಕ್ಷೆಗೊಳಗಾದವರಿಗೆ ಸಭೆಗಳ ಸದಸ್ಯತ್ವಕ್ಕೆ ಅರ್ಹತೆ ಇರಲಿಲ್ಲ. ಇದರಿಂದ ಕಾರ್ಯತಃ ಸ್ವಾತಂತ್ರ್ಯ ಚಳುವಳಿಯ ಅನೇಕ ಮುಖಂಡರುಗಳಿಗೆ ವಿಧಾನಸಭೆಗಳ ಸದಸ್ಯರಾಗುವ ಅವಕಾಶವಿರಲಿಲ್ಲ.

ಮಿಂಟೊ–ಮಾರ್ಲೆ ಸುಧಾರಣೆಗಳ ಪ್ರಕಾರ ವಿಧಾನಸಭೆಗಳ ಕರ್ತವ್ಯಗಳನ್ನು ವಿಸ್ತರಿಸಲಾಯಿತು. ಹಾಗೂ ಇವುಗಳ ಸದಸ್ಯರಿಗೆ ಹೆಚ್ಚು ಹಕ್ಕುಗಳನ್ನು ನೀಡಲಾಯಿತು. ಇಂಪೀರಿಯಲ್ ವಿಧಾನಸಭೆಯಲ್ಲಿ ಸದಸ್ಯರಿಗೆ ಬಜೆಟ್ಟಿನ ಮೇಲೆ ಚರ್ಚಿಸುವ ಹಾಗೂ ತಿದ್ದುಪಡಿಗಳನ್ನು ಸೂಚಿಸುವ ಹಕ್ಕು ನೀಡಲಾಯಿತು. ಆದರೆ, ಮತೀಯ ಸಂಬಂಧಪಟ್ಟ, ಸಾರ್ವಜನಿಕ ಸಾಲದ

ಮೇಲಿನ ಬಡ್ತಿ ಇಂತಹ ಕೆಲವು ಮುಖ್ಯ ಬಾಬುಗಳ ಬಗ್ಗೆ ಸದಸ್ಯರು ಚರ್ಚಿಸುವ ಅವಕಾಶವಿರಲಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಸದಸ್ಯರು ಸೂಚನೆಗಳನ್ನು ಚರ್ಚೆಗೆ ಮಂಡಿಸಬಹುದಿತ್ತು.

ಸ್ವರಾಜ್ಯ ಸ್ಥಾಪನೆ, ಪ್ರಜಾಪ್ರಭುತ್ವ ಸರ್ಕಾರ ಇವುಗಳಿಗಾಗಿ ಹೋರಾಡುತ್ತಿದ್ದ ಭಾರತದ ಜನತೆಗೆ ಮೇಲಿನ ಮುಖ್ಯಾಂಶಗಳನ್ನು ಒಳಗೊಂಡ ಮಿಂಟೊ – ಮಾರ್ಲೆ ಸುಧಾರಣೆಗಳು ಯಾವ ರೀತಿಯಲ್ಲೂ ತೃಪ್ತಿಕರುವಂತಹುದಾಗಿರಲಿಲ್ಲ. ವಿಧಾನಸಭೆಗಳಿಗೆ ಚುನಾಯಿಸುವ ಮತದಾನ ಹಕ್ಕು ಜನತೆಯ ಅತ್ಯಲ್ಪಭಾಗಕ್ಕೆ ಮಾತ್ರ ನೀಡಲಾಗಿತ್ತು. ಹೆಂಗಸರಿಗೆ ಮತದಾನ ಹಕ್ಕು ಕೊಡಲಿಲ್ಲ. ಚುನಾವಣೆ ಪರೋಕ್ಷ ಪದ್ಧತಿ (Indirect Election) ಅನುಸಾರವಾಗಿದ್ದಿತು. ಮುಸಲ್ಮಾನರಿಗೆ ಪ್ರತ್ಯೇಕ ಮತಕ್ಷೇತ್ರವನ್ನು ಮೀಸಲಾಗಿ ಕೊಟ್ಟುದುದರಿಂದ ಮುಸಲ್ಮಾನರಲ್ಲಿ ಪ್ರತ್ಯೇಕತಾ ಭಾವನೆಯನ್ನು ಹೆಚ್ಚು ಬಲಗೊಳಿಸಿತು ಹಾಗೂ ಕ್ರಮೇಣ ಪಾಕಿಸ್ತಾನ ರಚನೆಯಲ್ಲಿ ಕೊನೆಗೊಳ್ಳುವಂತಾಯಿತು. ಜಮೀನುದಾರರು, ವಾಣಿಜ್ಯ ಸಂಸ್ಥೆಗಳು (Chambers of Commerce) ಇತ್ಯಾದಿ ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರಾಮುಖ್ಯ ನೀಡುವ ಮೂಲಕ ಬ್ರಿಟಿಷರು ಇವರುಗಳ ಬೆಂಬಲ ಸಂಪಾದಿಸಿಕೊಂಡರು. ಎ. ಬಿ. ಕೀತ್ ಎಂಬ ರಾಜ್ಯಶಾಸ್ತ್ರಜ್ಞನು ಹೇಳಿರುವಂತೆ "ಸ್ವರಾಜ್ಯ ಸ್ಥಾಪನೆಗೆ ಪ್ರಚಾರವನ್ನು ತಡೆಗಟ್ಟುವುದು 1909ರ ಸುಧಾರಣೆಗಳ ಉದ್ದೇಶವಾಗಿದ್ದಲ್ಲಿ, ಈ ಉದ್ದೇಶ ವಿಫಲವಾಯಿತು ಅಲ್ಲದೆ ಅವು ಉಗ್ರವಾದಿಗಳ ಬೇಡಿಕೆಗಳನ್ನು ತೃಪ್ತಪಡಿಸುವಂತಹುದಾಗಿರಲಿಲ್ಲ."[1] ಭಾರತದ ಮೇಲಿನ ಆಡಳಿತದ ಅಧಿಕಾರ ಸಂಪೂರ್ಣವಾಗಿ ಬ್ರಿಟಿಷರ ಕೈಯಲ್ಲಿಯೇ ಸುರಕ್ಷಿತವಾಗಿ ಮುಂದುವರಿಯಿತು. ಗೋಖಲೆಯಂತಹ ಸೌಮ್ಯವಾದಿಗಳೂ 1909ರ ಸುಧಾರಣೆಗಳ ಶೂನ್ಯತೆಯನ್ನು ಮನಗಂಡರು. ಆದುದರಿಂದ, ಈ ಸುಧಾರಣೆಗಳ ಮೂಲಕ ಈ ಗುಂಪಿನವರನ್ನೂ ಬ್ರಿಟಿಷರು ತಮ್ಮ ಕಡೆ ವಾಲುವಂತೆ ಮಾಡಿಕೊಳ್ಳಲಾಗಲಿಲ್ಲ.

---

1. Quoted in Mahajan, V. D. *India Since 1526*, Chand & Co., New Delhi, 1964, p. 325.

1909–1919ರ ಅಂತರದ ಅವಧಿಯಲ್ಲಿ

ಮಿಂಟೊ – ಮಾರ್ಲ್ಲೆ ಸುಧಾರಣೆಗಳಿಂದ ಅತೃಪ್ತಿಗೊಂಡಿದ್ದ ಭಾರತೀಯು ರಲ್ಲಿ ಕೆಲವರು ಕ್ರಾಂತಿಕಾರಕ ಕಾರ್ಯಗಳಲ್ಲಿ ತೊಡಗಿದರು. ಮುಸಲ್ಮಾನ ರಿಗೆ ಪ್ರತ್ಯೇಕ ಮತಕ್ಷೇತ್ರ ಕೊಟ್ಟುದುದು ಅವರಿಗೆ ಸಮಾಧಾನವಾಗಿದ್ದರೂ, ತರುವಾಯ 1911 ರಲ್ಲಿ ಮುಸಲ್ಮಾನ ಬಹುಸಂಖ್ಯಾತರಿದ್ದ ಪೂರ್ವಬಂಗಾಳ ವನ್ನು ಉಳಿದ ಹಿಂದೂ ಬಹುಸಂಖ್ಯಾತರಿದ್ದ ಪಶ್ಚಿಮ ಬಂಗಾಳದ ಜೊತೆ ವಿಲೀನಗೊಳಿಸಿದುದರಿಂದ ಮುಸಲ್ಮಾನರಿಗೆ ತುಂಬ ನಿರಾಶೆಯಾಯಿತು. ಹೀಗೆ ಸಾರ್ವತ್ರಿಕವಾಗಿ ಭಾರತೀಯರಲ್ಲಿ ಅತೃಪ್ತಿ, ಅಸಮಾಧಾನವಿದ್ದ ವಾತಾ ವರಣ ಉಂಟಾಯಿತು. ಆದರೆ, 1914ರಲ್ಲಿ ಆರಂಭವಾದ ಮೊದಲನೆ ಪ್ರಪಂಚಯುದ್ಧದ ಕಾರಣದಿಂದ ಸ್ವರಾಜ್ಯ ಚಳುವಳಿಗೆ ಸ್ವಲ್ಪ ತಡೆಯುಂಟಾ ಯಿತು. ಮಹಾತ್ಮಾಗಾಂಧಿಯ ಸಲಹೆಯಂತೆ ಭಾರತವು ಬ್ರಿಟಿಷರಿಗೆ ಅವರ ಯುದ್ಧ ಪ್ರಯತ್ನದಲ್ಲಿ ಅನೇಕ ವಿಧದಲ್ಲಿ ಸಹಾಯ ಮಾಡಿತು. ಸೇನೆಗೆ ಲಕ್ಷಾಂತರ ಭಾರತೀಯರು ಸೇರಿದರು. ಯುದ್ಧದ ವೆಚ್ಚಕ್ಕೂ, ರೆಡ್‌ಕ್ರಾಸ್ ಸಂಸ್ಥೆಗೂ ಭಾರತ ಸರ್ಕಾರ ಉದಾರವಾಗಿ ಹಣ ನೀಡಿತು. ಆದರೆ, ಯುದ್ಧ ಮುಂದುವರಿದಂತೆ ಶೀಘ್ರವಾಗಿಯೇ ಮತ್ತೆ ರಾಷ್ಟ್ರೀಯ ಚಳುವಳಿ ತೀವ್ರ ವಾಗಬೇಕಾದ ಸಂದರ್ಭಗಳು ಒದಗಿದವು. ಯುದ್ಧದ ಪರಿಣಾಮವಾಗಿ ಬೆಲೆಗಳು ತೀವ್ರವಾಗಿ ಏರಿದವು; ಪದಾರ್ಥಗಳು ವಿರಳವಾದವು, ಜನಜೀವನ ಹೆಚ್ಚು ಕಷ್ಟವಾಯಿತು. ಕೇವಲ ಬ್ರಿಟಿಷರ ಹಿತಾಸಕ್ತಿಗಳ ರಕ್ಷಣೆಗಾಗಿ ನಡೆಯುತ್ತಿದ್ದ ಯುದ್ಧಕ್ಕೆ ಭಾರತವು ಏಕೆ ಸೇರಬೇಕು ಎಂಬ ಭಾವನೆ ಬೆಳೆ ಯಿತು. ಸ್ವಾತಂತ್ರ್ಯ ಚಳುವಳಿ ಮತ್ತೆ ಬಲವಾಯಿತು. ಬಾಲಗಂಗಾಧರ ತಿಲಕ್ ಮತ್ತು ಅನಿ ಬೆಸಾಂಟ್ ಅವರು 'ಹೋಂ ರೂಲ್'[1] ಚಳುವಳಿ ಯನ್ನು ಕೈಗೊಂಡರು. ಇದನ್ನು ಗಮನಿಸಿದ ಬ್ರಿಟಿಷರು ಭಾರತೀಯ ಮುಖಂಡರನ್ನು ಸಮಾಧಾನಗೊಳಿಸುವ ಆಲೋಚನೆ ಮಾಡಿದರು.

ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗು ಎಂಬವರು 1917ರ ಆಗಸ್ಟ್‌ನಲ್ಲಿ ಒಂದು ಹೇಳಿಕೆ ನೀಡಿ, ಭಾರತದಲ್ಲಿ ಸ್ವರಾಜ್ಯಸ್ಥಾಪನೆಯು ಅಂತಿಮ ಗುರಿಯಿಂದ ಆಡಳಿತದಲ್ಲಿ ಭಾರತೀಯರಿಗೆ ಹೆಚ್ಚುಹೆಚ್ಚಾಗಿ ಪಾತ್ರ

---

1. ಇದನ್ನು ಏಳನೆ ಅಧ್ಯಾಯದಲ್ಲಿ ವಿವರಿಸಲಾಗುವುದು.

ಕೊಡುತ್ತ ಬರುವುದೇ ಬ್ರಿಟಿಷ್ ಸರ್ಕಾರದ ನೀತಿಯಾಗಿದೆ ಎಂದು ಘೋಷಿಸಿದರು. ವಾಸ್ತವವಾಗಿ ಈ ಹೇಳಿಕೆ ನೀಡಿದ ಮೇಲೆ ಭಾರತಕ್ಕೆ ಸ್ವರಾಜ್ಯ ಕೊಡಲು ಬ್ರಿಟಿಷರಿಗೆ ಮೂರು ದಶಕಗಳ ಕಾಲ ಬೇಕಾಯಿತು ! ಬ್ರಿಟಿಷ್ ಸರ್ಕಾರವು ಇಂತಹ ಹೇಳಿಕೆಗಳನ್ನು ಪದೇ ಪದೇ ನೀಡುತ್ತಿದ್ದುದನ್ನು ಗಮನಿಸಿದರೆ, ಈ ಹೇಳಿಕೆಗಳು ರಾಷ್ಟ್ರೀಯ ಚಳುವಳಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಮಾತ್ರವೇ ನೀಡಿದಂತಹವು ಎಂಬ ಸಂದೇಹವುಂಟಾಗುವುದು. ಆದರೂ ಮೇಲಿನ ಹೇಳಿಕೆ ನೀಡಿದ ನಂತರ ಬ್ರಿಟಿಷ್ ಸರ್ಕಾರವು ಕೆಲವು ಸುಧಾರಣೆಗಳನ್ನು ಜಾರಿಗೆ ತರುವ ಪ್ರಯತ್ನಗಳನ್ನು ಮಾಡಿತು. ಇದರ ಫಲವಾಗಿ 1919ರಲ್ಲಿ ಮಾಂಟೆಗು–ಚೆಮ್ಸ್‌ಫರ್ಡ್[1] ಸುಧಾರಣೆಗಳು ಜಾರಿಗೆ ಬಂದವು.

ಮಾಂಟೆಗು–ಚೆಮ್ಸ್‌ಫರ್ಡ್ ಸುಧಾರಣೆಗಳು, 1919

1919ರ ಭಾರತ ಸರ್ಕಾರದ ಮಸೂದೆಯ ಪೀಠಿಕೆಯಲ್ಲಿ ಈ ಮಸೂದೆಯು "ಬ್ರಿಟಿಷ್ ಸಾಮ್ರಾಜ್ಯದ ಅಂಗವಾಗಿರುವ ಬ್ರಿಟಿಷ್ ಭಾರತದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯು" ಮತ್ತು "ಭಾರತದ ಪ್ರಾಂತ್ಯಗಳಲ್ಲಿ ಸ್ವಯಾಡಳಿತ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ" ಮತ್ತು "ಪ್ರಾಂತೀಯ ವಿಷಯಗಳ ಬಗ್ಗೆ ಪ್ರಾಂತ್ಯಗಳಿಗೆ ಆದಷ್ಟು ಸ್ವಾತಂತ್ರ್ಯ ನೀಡುವ" ನಿಟ್ಟಿನಲ್ಲಿ ಒಂದು ಗಮನಾರ್ಹ ಹೆಜ್ಜೆಯಾಗಿದೆ ಎಂದು ಹೇಳಲಾಗಿದೆ.

ಈ ಮಸೂದೆಯ ವಿವರಗಳ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು :

1. ಸೆಕ್ರೆಟರಿ ಆಫ್ ಸ್ಟೇಟ್ ಅವರಿಗೆ ಭಾರತ ಸರ್ಕಾರದಿಂದ ಕೊಡಲಾಗುತ್ತಿದ್ದ ಸಂಭಾವನೆಯನ್ನು ಇನ್ನು ಮುಂದೆ ಬ್ರಿಟಿಷ್ ಸರ್ಕಾರವು ಕೊಡುವುದು.

2. ಲಂಡನ್ನಿನಲ್ಲಿರಲು ಭಾರತದ ಹೈಕಮಿಷನರ್ ಒಬ್ಬರನ್ನು ಭಾರತ ಸರ್ಕಾರವು ನೇಮಿಸುವುದು.

---

1. ಚೆಮ್ಸ್‌ಫರ್ಡ್ ಆಗಿನ ವೈಸರಾಯ್ ಆಗಿದ್ದರು. ಮಾಂಟೆಗು ಆಗಿನ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದರು.

3. ಕೇಂದ್ರದಲ್ಲಿ ಆವರೆಗೆ ಇದ್ದ ಇಂಪೀರಿಯಲ್ ಸಭೆಯ ಬದಲಾಗಿ ಒಂದು ಕೇಂದ್ರೀಯ ವಿಧಾನಸಭೆಯನ್ನೂ, ಇನ್ನೊಂದು ರಾಜ್ಯಸಭೆಯನ್ನೂ (Council of State) ಸ್ಥಾಪಿಸಲಾಗುವುದು. ಕೇಂದ್ರೀಯ ವಿಧಾನಸಭೆಯಲ್ಲಿ 103 ಚುನಾಯಿತ ಹಾಗೂ 42 ನಾಮಕರಣ ಮಾಡಲಾದ ಸದಸ್ಯರಿರುವರು. ಚುನಾಯಿತ 103 ಸ್ಥಾನಗಳಲ್ಲಿ 51 ಸದಸ್ಯರು ಸಾಮಾನ್ಯ ಮತಕ್ಷೇತ್ರಗಳಿಂದಲೂ (General Constituencies) 32 ಮತೀಯ ಕ್ಷೇತ್ರಗಳಿಂದಲೂ (30 ಮುಸಲ್ಮಾನರು, 2 ಸಿಖ್ಖರು) ಉಳಿದ 20 ವಿಶೇಷ ಮತಕ್ಷೇತ್ರಗಳಿಂದಲೂ (9 ಐರೋಪ್ಯರಿಂದ 7 ಜಮೀನ್ದಾರರಿಂದ ಮತ್ತು 4 ಭಾರತೀಯ ವಾಣಿಜ್ಯ ಕ್ಷೇತ್ರದಿಂದ) ಚುನಾಯಿಸಲ್ಪಡುವರು. ರಾಜ್ಯಸಭೆಯಲ್ಲಿ 33 ಚುನಾಯಿತ ಹಾಗೂ 27 ಗೌರ್ನರ್‌ಜನರಲ್‌ನಿಂದ ನಾಮಕರಣಮಾಡಲಾದ ಒಟ್ಟು 60 ಸದಸ್ಯರಿರುವರು. ಈಮ್ಮೆ ರಚಿಸಲಾದ ಕೇಂದ್ರೀಯ ವಿಧಾನಸಭೆಯು ಮೂರು ವರ್ಷಗಳವರೆಗೂ, ರಾಜ್ಯಸಭೆಯು ಐದು ವರ್ಷಗಳವರೆಗೂ ಅಸ್ತಿತ್ವದಲ್ಲಿದ್ದು ತರುವಾಯ ಪುನರ್‌ರಚಿತವಾಗತಕ್ಕದ್ದು.

4. ಎರಡು ಸಭೆಗಳಿಗೂ ನೇರವಾಗಿ ಚುನಾವಣೆ ನಡೆಯತಕ್ಕದ್ದು. ಮತದಾನ ಹಕ್ಕನ್ನು ಒಬ್ಬಾತನು ಕೊಡುತ್ತಿದ್ದ ಭೂಕಂದಾಯ ಅಥವಾ ವರಮಾನ ತೆರಿಗೆ ಅಥವಾ ತನ್ನ ಸ್ವಂತ ಮನೆಗೆ ನೀಡುವ ತೆರಿಗೆಯ ಆಧಾರದ ಮೇಲೆ ನಿರ್ಣಯಿಸಲಾಗುವುದು. ಇದರ ಪ್ರಕಾರ 1920ರಲ್ಲಿ ದೇಶದಲ್ಲಿ ಒಟ್ಟು ಮತದಾರರ ಸಂಖ್ಯೆ ಕೇಂದ್ರೀಯ ವಿಧಾನಸಭೆಗೆ ಕೇವಲ 9,09,874 ಮಾತ್ರವೂ, ರಾಜ್ಯಸಭೆಗೆ 17,364 ಮಾತ್ರವೂ ಇದ್ದಿತು. ಅಂದಮೇಲೆ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕು ದೇಶದ ಬಹುಭಾಗದ ಜನರಿಗೆ ಸಿಕ್ಕಂತಾಗಲಿಲ್ಲ.

5. ಕೇಂದ್ರೀಯ ಸಭೆಯು ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದ ಕಾನೂನುಗಳನ್ನು ಮಾಡಲೂ, ತಿದ್ದುಪಡಿ ಮಾಡಲೂ ಅಧಿಕಾರ ಹೊಂದಿದ್ದಿತು. ಆದರೆ, ಈ ಅಧಿಕಾರಕ್ಕೆ ಕೆಲವು ಮುಖ್ಯ ಮಿತಿಗಳನ್ನು ಸೂಚಿಸಲಾಯಿತು. ಉದಾಹರಣೆಗೆ, ಯಾವುದೇ ಹೈಕೋರ್ಟನ್ನು ಮುಚ್ಚುವ ಕಾನೂನಿಗೆ ಸೆಕ್ರೆಟರಿ ಆಫ್ ಸ್ಟೇಟ್‌ನ ಮುನ್ನಾ ಮಂಜೂರಾತಿ ಅವಶ್ಯಕವಾಗಿದ್ದಿತು. ಭಾರತದಲ್ಲಿರುವ ಬ್ರಿಟಿಷ್ ಪ್ರಜೆಗಳ ಮತೀಯ ವಿಷಯಗಳು, ಸಾರ್ವಜನಿಕ ಸಾಲ,

ಸಾರ್ವಜನಿಕ ಆದಾಯ, ದೇಶೀಯ ಸಂಸ್ಥಾನಗಳೊಡನೆ ಅಥವಾ ಇತರ ದೇಶಗಳೊಡನೆ ಸರ್ಕಾರದ ಸಂಬಂಧ ಇತ್ಯಾದಿ ವಿಷಯಗಳನ್ನು ಕುರಿತ ಕಾನೂನುಗಳಿಗೆ ಗವರ್ನರ್ ಜನರಲ್ಲನ ಮುನ್ನಾ ಮಂಜೂರಾತಿ ಬೇಕಾಗಿದ್ದಿತು. ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಗವರ್ನರ್ ಜನರಲ್ ಇವರಿಗೆ ನೀಡಲಾದ ವಿಶೇಷ ಅಧಿಕಾರದಿಂದ ವಿಧಾನಸಭೆಯ ಕಾನೂನು ಮಾಡುವ ಹಕ್ಕು ತೀವ್ರವಾಗಿ ಮೊಟಕುಗೊಳಿಸಲ್ಪಟ್ಟಂತೆ ಆಯಿತು.

6. ಕೇಂದ್ರ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳ ಅಧಿಕಾರವನ್ನು ನಿರ್ದಿಷ್ಟಗೊಳಿಸಲು ಮಸೂದೆಯು ಎರಡು ಪಟ್ಟಿಗಳನ್ನು ಒಳಗೊಂಡಿದ್ದಿತು. ಒಂದರಲ್ಲಿ ಕೇಂದ್ರದ ಅಧಿಕಾರವ್ಯಾಪ್ತಿಗೆ ಬರತಕ್ಕ ವಿಷಯಗಳಿದ್ದವು. ರಕ್ಷಣೆ, ವಿದೇಶಿ ಸಂಬಂಧ, ಸುಂಕ, ಅಂಚೆ ಹಾಗೂ ತಂತಿ ಮತ್ತು ದೇಶಾದ್ಯಂತ ಸಮಾನ ಕಾನೂನು ಅವಶ್ಯಕತೆಯಿರಬೇಕಾದ ಇಂತಹ ಇತರ ವಿಷಯಗಳೆಲ್ಲವೂ ಕೇಂದ್ರದ ಪಟ್ಟಿಯಲ್ಲಿದ್ದವು. ಆಯಾ ಪ್ರಾಂತ್ಯದ ಹಿತಾಸಕ್ತಿಗಳಿಗೆ ಸೀಮಿತವಾದ ವಿದ್ಯಾಭ್ಯಾಸ, ಸ್ಥಳೀಯ ಆಡಳಿತ, ಸೀರಾವರಿ, ನೀರು ಸರಬರಾಜು, ಆರೋಗ್ಯ ಇತ್ಯಾದಿ ವಿಷಯಗಳೆಲ್ಲವೂ ಪ್ರಾಂತೀಯ ಅಧಿಕಾರವ್ಯಾಪ್ತಿಗೆ ಸೇರಿಸಿದ ವಿಷಯಗಳಾಗಿದ್ದವು.

7. 1919ರ ಮಸೂದೆಯು ಪ್ರಾಂತ್ಯಗಳಲ್ಲಿ ದ್ವಿಯಾಡಳಿತ ಪದ್ಧತಿಯನ್ನು (Dyarchy) ಜಾರಿಗೆ ತಂದಿತು. ಈ ಪದ್ಧತಿಯ ಪ್ರಕಾರ ಪ್ರಾಂತ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಬರುವ ವಿಷಯಗಳನ್ನು ಎರಡು ಭಾಗಗಳಾಗಿ ಪ್ರತ್ಯೇಕಿಸಲಾಯಿತು. ಒಂದನ್ನು ವರ್ಗಾವಣೆ ಮಾಡಲಾದ ವಿಷಯಗಳೆಂದೂ (Transferred Subjects) ಇನ್ನೊಂದನ್ನು ಮೀಸಲಿಡಲಾದ ವಿಷಯಗಳೆಂದೂ (Reserved Subjects) ಕರೆಯಲಾಯಿತು. ಮೀಸಲಿಡಲಾದ ವಿಷಯಗಳು[1] ಗವರ್ನರ್ ಮತ್ತು ಕಾರ್ಯಕಾರಿ ಸಭೆಯ

---

1. ನ್ಯಾಯಾಂಗ, ಪೋಲೀಸು, ನೀರಾವರಿ ಹಾಗೂ ಕಾಲುವೆಗಳು, ಜಲ ವಿದ್ಯುಚ್ಛಕ್ತಿ, ಭೂ ಕಂದಾಯ, ಭೂ ಅಭಿವೃದ್ಧಿ ಹಾಗೂ ಕೃಷಿಸಾಲಗಳು, ಕ್ಷಾಮ ನಿವಾರಣೆ, ವೃತ್ತಪತ್ರಿಕೆಗಳು, ಪುಸ್ತಕಗಳು ಹಾಗೂ ಪ್ರಿಂಟಿಂಗ್ ಪ್ರೆಸ್ಸುಗಳ ನಿಯಂತ್ರಣ, ಜೈಲುಗಳು, ಸಾಲ ಎತ್ತುವಿಕೆ, ಅರಣ್ಯ (ಬೊಂಬಾಯಿ, ಬರ್ಮಾಗಳನ್ನು ಬಿಟ್ಟು) ಫ್ಯಾಕ್ಟರಿ ಮೇಲ್ವಿಚಾರಣೆ, ಕಾರ್ಮಿಕ ವಿವಾದಗಳ ಇತ್ಯರ್ಥ, ಕೈಗಾರಿಕಾ ವಿಮೆ, **ವಸತಿ – ಇವು ಮೀಸಲಿಡಲಾದ ವಿಷಯಗಳು.**

(Executive Council) ಆಡಳಿತ ವ್ಯಾಪ್ತಿಗೂ, ವರ್ಗಾವಣೆ ಮಾಡಲಾದ ವಿಷಯಗಳು[1] ಗೌರ್ನರ್ ಹಾಗೂ ಮಂತ್ರಿಗಳ ಆಡಳಿತ ವ್ಯಾಪ್ತಿಗೂ ಸೇರಿದ್ದವು. ಕಾರ್ಯಕಾರಿ ಸಭೆಯ ಸದಸ್ಯರು ಗೌರ್ನರ್‌ರಿಂದ ನಾಮಕರಣ ಮಾಡಲ್ಪಟ್ಟವರೂ ಅಧಿಕಾರ ವರ್ಗಕ್ಕೆ ಸೇರಿದವರೂ ಆಗಿದ್ದರು. ಮಂತ್ರಿಗಳು ವಿಧಾನಸಭಾ ಸದಸ್ಯವರ್ಗದವರಿಂದ ಗೌರ್ನರ್ ಆರಿಸಿಕೊಂಡವರೂ, ಜನರ ಪ್ರತಿನಿಧಿಗಳೂ ಆಗಿದ್ದರು. ಇವೆರಡು ವರ್ಗದವರಲ್ಲಿ ಸಾಮರಸ್ಯವಿರಲಿಲ್ಲ. ಸಾಮಾನ್ಯವಾಗಿ ಅವರೊಳಗೆ ಭಿನ್ನಾಭಿಪ್ರಾಯಗಳು ಹೆಚ್ಚಾಗಿದ್ದವು. ಇದರಿಂದ ದ್ವಯಾಡಳಿತ ಪದ್ಧತಿಯ ಆಚರಣೆಯಲ್ಲಿ ಸಾಮರಸ್ಯವಿರಲಿಲ್ಲ. ಆದರೂ 1921 ರಿಂದ 1937 ರ ವರೆಗೆ ಈ ಪದ್ಧತಿ ನಡೆದುಕೊಂಡುಬಂದಿತು. ಆದರೆ ತಾತ್ವಿಕ ಆಧಾರರಹಿತವಾದ ಹಾಗೂ ಆಚರಣೆಯಲ್ಲಿ ದೋಷಪೂರ್ಣವಾದ ಈ ಪದ್ಧತಿಯು ಅನೇಕ ವಿದ್ವಾಂಸರ ಹಾಗೂ ಇತರ ಗಣ್ಯವ್ಯಕ್ತಿಗಳ ಕಟುವಾದ ಟೀಕೆಗೆ ಒಳಗಾಯಿತು.[2] ಇವುಗಳ ಚರ್ಚೆ ಇಲ್ಲಿ ಅಪ್ರಕೃತ. ಭಾರತವು ಕೇಳುತ್ತಿದ್ದ ಸ್ವರಾಜ್ಯ ಹಾಗೂ ಪ್ರಜಾಸತ್ತಾತ್ಮಕ ದೃಷ್ಟಿಯಿಂದ ಇದು ಏನೂ ನೀಡಲಿಲ್ಲ. ವಾಸ್ತವವಾಗಿ ಗೌರ್ನರನ ನಿರಂಕುಶ ಆಡಳಿತ ಹಿಂದಿನಂತೆಯೇ ಮುಂದುವರಿಯಿತು. ಅವನು ಚುನಾಯಿಸಿದ ಮಂತ್ರಿಗಳು ಜನರನ್ನು ಪ್ರತಿನಿಧಿಸುವರೆಂದು ಹೇಳಲಾಗುತ್ತಿದ್ದಾದರೂ ಅವರುಗಳನ್ನು ಗೌರ್ನರನು ತನ್ನ ಇಷ್ಟಬಂದಾಗ ವಜಾ ಮಾಡಬಹುದಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದವರಿಗೆ ಮಾಂಟೆಗು–ಚೆಮ್ಸ್‌ಫರ್ಡ್ ಸುಧಾರಣೆಗಳು ಏನೂ ಸಮಾಧಾನ ತರಲಿಲ್ಲ. 1919ರ ಅಧಿವೇಶನದಲ್ಲಿ ಕಾಂಗ್ರೆಸು ಈ ಸುಧಾರಣೆಗಳನ್ನು "ಅಪರಿಪೂರ್ಣ, ಅತೃಪ್ತಿಕರ ಹಾಗೂ ಅನಿರೀಕ್ಷಿತವಾದುವು" ಎಂದು ಟೀಕಿಸಿ ಭಾರತದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿತು.

---

1. ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಆರೋಗ್ಯ, ವೈದ್ಯಕೀಯ ಸೇವೆ, ಭಾರತೀಯರ ವಿದ್ಯಾಭ್ಯಾಸ, ಲೋಕೋಪಯೋಗಿ ಕೆಲಸಗಳು, ಸಹಕಾರ ಸಂಘಗಳು, ಬೊಂಬಾಯಿ ಬರ್ಮಾಗಳಲ್ಲಿ ಅರಣ್ಯ, ಕೈಗಾರಿಕೆಗಳ ಅಭಿವೃದ್ಧಿ.

2. ಕೆಲವು ಗಣ್ಯವ್ಯಕ್ತಿಗಳ ಈ ಟೀಕೆಗಳ ಬಗ್ಗೆ ನೋಡಿ–
Mahajan, V. D. *op. cit* PP 353–359

ಒಟ್ಟಿನಲ್ಲಿ ಹೇಳುವುದಾದರೆ, ಅನೇಕ ಲೋಪದೋಷಗಳಿದ್ದಾಗ್ಯೂ ಹಿಂದೆ ಇದ್ದ ಪರಿಸ್ಥಿತಿಗಿಂತ ಈ 1919ರ ಮಸೂದೆಯು ಸ್ವಲ್ಪ ಉತ್ತಮ ಪರಿಸ್ಥಿತಿಯನ್ನು ಉಂಟುಮಾಡಿತೆಂದು ಒಪ್ಪಬಹುದು. ಏಕೆಂದರೆ, ಉನ್ನತ ಮಟ್ಟದಲ್ಲಿ ಆಡಳಿತ ಸಮಸ್ಯೆಗಳನ್ನು ಒಳಹೊಕ್ಕು ತಿಳಿಯುವ ಅವಕಾಶವನ್ನು ಕೆಲವು ಭಾರತೀಯರಿಗೆ ಅದು ದೊರಕಿಸಿಕೊಟ್ಟಿತು.

7. 1919ರ ರಾಜಕೀಯ ಸುಧಾರಣೆಯ ನಂತರ ಉಂಟಾದ ಮುಖ್ಯವಾದ ಮುಂದಿನ ಸುಧಾರಣೆಯಾದುದು ಹದಿನಾರು ವರ್ಷಗಳ ತರುವಾಯ ಅಂದರೆ 1935 ರಲ್ಲಿ, ಇದಾದ ನಂತರ 1947ರಲ್ಲಿ ಪ್ರಥಮ ಭಾರತೀಯ ಮಧ್ಯಂತರ ಸರ್ಕಾರವು ಕಾಂಗ್ರೆಸ್ಸಿನ ಜವಹರಲಾಲ್ ನೆಹ್ರೂ ಅವರಿಂದ ಮುಸ್ಲಿಂಲೀಗಿನ ಸಹಕಾರದೊಡನೆ ರಚಿತವಾಯಿತು. ಮರುವರ್ಷ 1947ರ ಜುಲೈ 18ರಂದು ಭಾರತದ ಸ್ವಾತಂತ್ರ್ಯ ಮಸೂದೆಯನ್ನು ಬ್ರಿಟಿಷ್ ಪಾರ್ಲಿಮೆಂಟು ಅನುಮೋದಿಸಿತು. ಹಾಗೂ ಇದು 1947ರ ಆಗಸ್ಟ್ 15ರಂದು ಜಾರಿಗೆ ಬಂದಿತು. ಭಾರತ ಗಣರಾಜ್ಯದ ಹೊಸ ಸಂವಿಧಾನ 1950ರ ಜನವರಿ 26 ರಂದು ಜಾರಿಗೆ ಬಂದಿತು. 1919–1947ರ ಅವಧಿಯ ಈ ವಿವಿಧ ಸುಧಾರಣಾ ಘಟ್ಟಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ಹೇಳಲಾಗುವುದು.

❖❖❖

ಅಧ್ಯಾಯ - 6

ಭಾರತದ ಸ್ವಾತಂತ್ರ್ಯ ಸಂಗ್ರಾಮ - ಕ್ರಾಂತಿಕಾರರ ಪಾತ್ರ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮೊದಲಿನಿಂದಲೂ ಎರಡು ಭಿನ್ನಮಾರ್ಗಗಳನ್ನು ಗುರುತಿಸಬಹುದು. ಬ್ರಿಟಿಷರನ್ನು ಶಸ್ತ್ರಾಸ್ತ್ರಗಳ ಸಹಾಯದಿಂದ ಭಾರತದಿಂದ ಓಡಿಸಬೇಕೆಂದು ಹೋರಾಡಿದ ಕ್ರಾಂತಿವೀರರದು ಒಂದು ಮಾರ್ಗ. ಮಹಾತ್ಮಾ ಗಾಂಧಿಯವರ ಮೂಲ ತತ್ವಗಳಾದ ಸತ್ಯ ಅಹಿಂಸೆಗಳ ಆಧಾರದ ಮೇಲೆ ನಡೆಸಿದ ಸತ್ಯಾಗ್ರಹ ಚಳುವಳಿಯು ಇನ್ನೊಂದು ಮಾರ್ಗ. ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಮುಖದ ವಿವರಣೆಯನ್ನು ಈ ಅಧ್ಯಾಯದಲ್ಲಿಯೂ, ಅಹಿಂಸಾಮುಖದ ವಿವರಣೆಯನ್ನು ಮುಂದಿನ ಅಧ್ಯಾಯಗಳಲ್ಲಿಯೂ ನೀಡಲಾಗುವುದು.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರು ಭಾರತದ ವೀರರನ್ನು ಹೇಗೆ ಸೋಲಿಸಿದರು ಎಂಬುದನ್ನು ಹಿಂದೆ ವಿವರಿಸಲಾಗಿದೆ. ಈ ಅವಮಾನಕರ ಸೋಲಿನಿಂದ ಭಾರತದ ಅಂತಃತೇಜಸ್ಸು ಪುನಶ್ಚೇತನಗೊಂಡಿತೇ ವಿನಹ ಅಳಿಯಲಿಲ್ಲ. ಮೊದಲ ಸ್ವಾತಂತ್ರ್ಯಯುದ್ಧದಲ್ಲಿ ಅನೇಕ ವೀರಾಗ್ರಣಿಗಳು ಸೆರೆಹಿಡಿಯಲ್ಪಟ್ಟರು ಮತ್ತು ಕೊಲ್ಲಲ್ಪಟ್ಟರು. ಆದರೆ ಇವರಲ್ಲಿದ್ದ ಕ್ರಾಂತಿಸ್ಫೂರ್ತಿಯನ್ನೇ ಹೊಂದಿದ್ದ ಅನೇಕ ದೇಶಭಕ್ತ ಪರಾಕ್ರಮಿಗಳು ಉದಯಿಸಿ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಮಾರ್ಗದಲ್ಲಿ ಕಾರ್ಯೋನ್ಮುಖರಾದರು. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರನ್ನು ಯಾಚಿಸುವುದು, ಅವರಿಗೆ ಮನವಿಗಳನ್ನು ಸಲ್ಲಿಸುವುದು, ಅವರೊಡನೆ ಸಮಾಲೋಚಿಸುವುದು, ಶಾಂತಿಯುತವಾಗಿ ಕಾನೂನು ಭಂಗ ಮಾಡುವುದರ **ಮೂಲಕ ಬ್ರಿಟಿಷರನ್ನು**

ಒತ್ತಾಯಿಸುವುದು ಇತ್ಯಾದಿ ಕ್ರಮಗಳೆಲ್ಲವೂ ಈ ಕ್ರಾಂತಿಕಾರರಿಗೆ ಒಪ್ಪಿಗೆಯಾಗಲಿಲ್ಲ. ಪಾಶವೀಶಕ್ತಿಯ ಆಧಾರದ ಮೇಲೆ ರಚಿಸಲ್ಪಟ್ಟು ಬಲಪ್ರಯೋಗದಿಂದ ಮುಂದುವರಿಸಲಾಗುತ್ತಿರುವ ಸಾರ್ವಭೌಮಶಾಹಿಯನ್ನು ಅಳಿಸಲು ಸಶಸ್ತ್ರ ಬಲಪ್ರಯೋಗವೇ ಅತ್ಯಾವಶ್ಯಕ ಎಂದು ಅವರು ದೃಢವಾಗಿ ನಂಬಿದ್ದರು. ಬ್ರಿಟಿಷರು ಭಾರತದಲ್ಲಿ ಅನುಸರಿಸುತ್ತಿದ್ದ ದಬ್ಬಾಳಿಕೆಯಿಂದ ಅವರು ಕೋಪೋದ್ರಿಕ್ತರಾಗಿ ತಾವೂ ಬಲಿಷ್ಠರಾಗಿ ಶಸ್ತ್ರಾಸ್ತ್ರಗಳ ಮೂಲಕ ಅವರೊಡನೆ ಹೋರಾಡಬೇಕೆಂಬ ಛಲದಿಂದ ಕೂಡಿದವರಾಗಿದ್ದರು. ಈ ಕ್ರಾಂತಿಕಾರರು ಬ್ರಿಟಿಷ್ ಭಾರತದ ಎಲ್ಲಾ ಪ್ರಾಂತಗಳಲ್ಲೂ ಕೇಂದ್ರಗಳನ್ನು ಸ್ಥಾಪಿಸಿಕೊಂಡು ರಹಸ್ಯವಾಗಿ ತಮ್ಮ ಕಾರಭಾರಗಳನ್ನು ನಡೆಸಿದರು. ಇವರ ಕಾರ್ಯಾಚರಣೆಗಳು ಭಾರತಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅಮೆರಿಕ, ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಜಪಾನು ಇತ್ಯಾದಿ ಪರರಾಷ್ಟ್ರಗಳಲ್ಲಿಯೂ ತಮ್ಮ ಕಾರ್ಯಕೇಂದ್ರಗಳನ್ನು ಸ್ಥಾಪಿಸಿಕೊಂಡರು. ಇತರ ರಾಷ್ಟ್ರಗಳು ಅವುಗಳ ಸ್ವಾತಂತ್ರ್ಯ ಚಳುವಳಿಯಲ್ಲಿ ಅಲ್ಲಿನ ಜನರು ಅನುಸರಿಸಿದ ಮಾರ್ಗ, ತಂತ್ರಗಳು, ಪ್ರಚಾರ ವಿಧಾನಗಳು ಇತ್ಯಾದಿಗಳನ್ನು ಕ್ರಾಂತಿನಾಯಕರು ತಮ್ಮ ಉಪಯೋಗಕ್ಕಾಗಿ ಅಧ್ಯಯನ ಮಾಡಿಕೊಂಡರು. ಬಾಂಬುಗಳ ತಯಾರಿಕೆ, ಹಾಗೂ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವಿಕೆ ಇವೆಲ್ಲವನ್ನೂ ತಿಳಿದುಕೊಂಡರು. ಜನರನ್ನು ಕ್ರಾಂತಿಮಾರ್ಗಕ್ಕೆ ಸಂಘಟಿಸಿ ಬ್ರಿಟಿಷ್ ಆಳ್ವಿಕೆಯನ್ನು ಅಂತ್ಯಗೊಳಿಸಲು ಅವಶ್ಯಕವಾದ ಅನೇಕ ಕೃತ್ಯಗಳನ್ನು ಮಾಡಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಮಾರ್ಗ ಅನುಸರಿಸಿದ ಕೆಲವು ವೀರರ ಈ ಕೃತ್ಯಗಳ ಸಂಕ್ಷಿಪ್ತ ವಿವರಣೆಯಿಂದ ಸ್ವಾತಂತ್ರ್ಯ ಸಾಧನೆಗೆ ಕ್ರಾಂತಿಕಾರರ ಕೊಡುಗೆಯನ್ನು ನಾವು ಅರ್ಥಮಾಡಿಕೊಳ್ಳಬಹುದಾಗಿದೆ.[1]

---

1. ಕ್ರಾಂತಿಕಾರಿ ಪಂಥಕ್ಕೆ ಸೇರುವ ಭಾರತದ ನಾಯಕರು ಅನೇಕರಿದ್ದಾರೆ : ವಾಸುದೇವ ಬಲವಂತ ಫಡಕೆ, ಚಂದ್ರಶೇಖರ ಆಜಾದ್, ವಿನಾಯಕ ದಾಮೋದರ ಸಾವರ್‌ಕರ್, ಶ್ಯಾಮಜಿ ಕೃಷ್ಣವರ್ಮ, ಅರವಿಂದ ಘೋಷ್, ಅಶ್ಫಾಕ್ ಉಲ್ಲಾ ಖಾನ್, ಪಂಡಿತ ರಾಮಪ್ರಸಾದ್, ತಿರುವಾಂಕೂರಿನ ಚಂಪಕರಮಣ ಪಿಳ್ಳೈ, ಗದರ್ ಪಕ್ಷ ಸ್ಥಾಪಕ ಹರದಯಾಳ್, ತಾರಕನಾಥ ದಾಸ್, ಬರಖತುಲ್ಲ,

ಶ್ರೀ ಅರವಿಂದ ಘೋಷ್ ಅವರ ಸಹೋದರ ಬರೀಂದ್ರಕುಮಾರ್ ಘೋಷ್ ಮತ್ತು ಸ್ವಾಮಿ ವಿವೇಕಾನಂದರ ಸಹೋದರ ಭೂಪೇಂದ್ರನಾಥ ದತ್ ಅವರು ಬಂಗಾಳ ಪ್ರಾಂತ್ಯದ ಕೇಂದ್ರದಿಂದ ದೇಶದ ಕ್ರಾಂತಿ ಚಳುವಳಿಯನ್ನು ನಿರ್ದೇಶಿಸಿದರು. 'ಯುಗಾಂತರ' ಎಂಬ ಪತ್ರಿಕೆಯ ಮೂಲಕ ಕ್ರಾಂತಿಸಂದೇಶಗಳನ್ನು ಅವರು ಜನತೆಗೆ ಪ್ರಚಾರ ಮಾಡಿದರು. ಬ್ರಿಟಿಷರ ಗುಲಾಮರಾಗಿರುವುದನ್ನು ಧಿಕ್ಕರಿಸಿ, ದೇಶದ ಸ್ವಾತಂತ್ರ್ಯಕ್ಕೆ ಹೋರಾಡಲು ಜನರನ್ನು ಪ್ರೇರೇಪಿಸಿದರು. ವಂದೇ ಮಾತರಂ ಮೆರವಣಿಗೆಗಳನ್ನೂ, ಸ್ವದೇಶಿ ಸಮ್ಮೇಳನಗಳನ್ನೂ, ಯುವಕರಿಗೆ ಶಸ್ತ್ರಾಸ್ತ್ರ ಉಪಯೋಗಿಸಲು ತರಬೇತಿ ಕೇಂದ್ರಗಳನ್ನೂ, ಶಸ್ತ್ರಾಸ್ತ್ರ ಸಂಗ್ರಹಣೆಯನ್ನೂ, ನಿಧಿ ಸಂಗ್ರಹಣೆಯನ್ನೂ ಇವರು ವ್ಯವಸ್ಥೆಗೊಳಿಸಿದರು. ಬಂಗಾಳದ ಯುವಕರಿಗೆ ಇವರು ನೀಡಿದ ಆದೇಶದಲ್ಲಿ ಹೀಗೆ ನುಡಿದರು : "ನಮ್ಮ ದೇಶದಲ್ಲಿ ಇರುವ ಆಂಗ್ಲೇಯರ ಸಂಖ್ಯೆ ಒಂದುವರೆ ಲಕ್ಷಕ್ಕೆ ಹೆಚ್ಚಾಗಿಲ್ಲ.... ನೀವು ಕಟ್ಟುನಿಟ್ಟಾದ ನಿರ್ಣಯ ಮಾಡಿದರೆ ಒಂದೇ ದಿವಸದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸ ಬಹುದು. ಪ್ರಾಣಾರ್ಪಣೆ ಮಾಡಿ ಆದರೆ ಮೊದಲು ಒಬ್ಬ ಆಂಗ್ಲೇಯನ ಜೀವ ತೆಗೆದುಕೊಳ್ಳಿ."[1]

ಬಿ. ಕೆ. ಘೋಷ್ ಮತ್ತು ಬಿ. ಎನ್. ದತ್ ಹಾಗೂ ಅವರ ಅನುಯಾಯಿಗಳು ಸೇರಿ ದೇಶದಲ್ಲಿ ಅನೇಕ ಕ್ರಾಂತಿಕಾರಕ ಸಂಘಗಳನ್ನು ಸ್ಥಾಪಿಸಿದರು. ಇಂಗ್ಲೀಷರ ವಿರುದ್ಧ ಹಿಂಸಾತ್ಮಕ ಕಾರ್ಯಗಳನ್ನು ನಡೆಸುವುದೇ ಇವುಗಳ ಉದ್ದೇಶವಾಗಿದ್ದಿತು. 1907ರ ಡಿಸೆಂಬರ್ 6ರಂದು ಗೌರ್ನರ್

ಸೇನಾಪತಿ ಬಾಪಟ್, ಭಗತ್ ಸಿಂಗ್, ಭೂಪೇಂದ್ರನಾಥ ದತ್, ಬರೀಂದ್ರ ಕುಮಾರ್ ಘೋಷ್, ಚಂದ್ರಕಾಂತ ಚಕ್ರವರ್ತಿ, ಹೇಮಾಂಬಾ ಲಾಲ್‌ಗುಪ್ತಾ, ಅಮೃತಸರದ ಮದನ್‌ಲಾಲ್ ಧಿಂಗ್ರ, ನೇತಾಜಿ ಸುಭಾಷ್‌ಚಂದ್ರ ಬೋಸ್ - ಇವರು ಭಾರತದ ಕ್ರಾಂತಿನಾಯಕ ವೀರಾಗ್ರಣಿಗಳಲ್ಲಿ ಕೆಲವರು ಮಾತ್ರ. ಇನ್ನೂ ನೂರಾರು ಮುಖಂಡರು ಸಹಸ್ರಾರು ಕ್ರಾಂತಿಕಾರರು ಕ್ರಾಂತಿಮಾರ್ಗದ ಚಳುವಳಿಯಲ್ಲಿ ಭಾಗವಹಿಸಿರುತ್ತಾರೆ. ಪ್ರಕೃತ ಇಲ್ಲಿ ಈ ಕ್ರಾಂತಿಮಾರ್ಗ ಚಳುವಳಿಯ ಸ್ವರೂಪವನ್ನು ತಿಳಿಯಲು ಕೆಲವು ನಾಯಕರ ಪ್ರಯತ್ನಗಳ ಸಂಕ್ಷಿಪ್ತ ವಿವರಣೆಯನ್ನು ಮಾತ್ರ ನೀಡಲಾಗಿದೆ.

1 Quoted in **V. D. Mahajan**, *op. cit.*, **P 457**

ಅವರು ಪ್ರಯಾಣ ಮಾಡುತ್ತಿದ್ದ ರೈಲ್ವೆ ಟ್ರೈನ್ ಒಂದರ ಕಡೆ ಬಾಂಬ್ ಎಸೆದುದು, ಮಿ|| ಅಲೆನ್ ಮತ್ತು ಮಿ|| ಕಿಂಗ್ಸ್‌ಫರ್ಡ್ ಎಂಬುವರನ್ನು ಗುಂಡಿಕ್ಕಿ ಕೊಲ್ಲುವ ಪ್ರಯತ್ನ ಮಾಡಿದುದು ಹಾಗೂ ಇಂತಹ ಇತರ ಅನೇಕ ಕೃತ್ಯಗಳು ಈ ಸಂಘಗಳ ಸದಸ್ಯರ ಕಾರ್ಯಗಳಲ್ಲಿ ಸೇರಿವೆ.

ಬೊಂಬಾಯಿ ಪ್ರಾಂತ್ಯದಲ್ಲಿಯೂ ಕ್ರಾಂತಿಕಾರಿ ಚಟುವಟಿಕೆಗಳು ಹತ್ತೊಂಬತ್ತನೆ ಶತಮಾನದ ಕೊನೆಯ ವೇಳೆಯಲ್ಲಿ ಬಿರುಸಾಗಿ ನಡೆಯಿತು. ಈ ಕಾರ್ಯಗಳನ್ನು ವ್ಯವಸ್ಥೆಗೊಳಿಸಿದುದು ನಾಸಿಕ್‌ನಲ್ಲಿ ಸ್ಥಾಪಿಸಲಾಗಿದ್ದ 'ಅಭಿನವ ಭಾರತ ಸಂಘ' ಹಾಗೂ ಇತರ ಕಡೆಗಳಲ್ಲಿದ್ದ ಇದರ ಶಾಖೆಗಳು. ಕ್ರೌರ್ಯ ಸ್ವಭಾವದ ಮಿ|| ರಾಂಡ್ ಎಂಬುವನನ್ನು ಶ್ಯಾಮ್‌ಜಿ ಕೃಷ್ಣ ವರ್ಮ ಎಂಬ ಈ ಸಂಘದ ಕ್ರಾಂತಿಕಾರಿಯು 1899ರಲ್ಲಿ ಕೊಲೆ ಮಾಡಿ ನಂತರ ಪೋಲಿಸರ ಕೈಗೆ ಸಿಕ್ಕದೆ ಲಂಡನ್ನಿಗೆ ಹೋಗಿ ಅಲ್ಲಿ ಅಜ್ಞಾತವಾಸದಲ್ಲಿದ್ದುಕೊಂಡು ಬ್ರಿಟಿಷ್ ವಿರೋಧಿ ಕೃತ್ಯಗಳನ್ನು ನಡೆಸಿದರು. 1909 ರಲ್ಲಿ ವೈಸರಾಯ್ ಲಾರ್ಡ್ ಮಿಂಟೊ ಅವರು ಪತ್ನಿಸಮೇತ ಅಹ್ಮದಾಬಾದಿನಲ್ಲಿ ಹೋಗುತ್ತಿದ್ದಾಗ ಅವರ ವಾಹನದ ಮೇಲೆ ಬಾಂಬ್ ಎಸೆದರು. ಆದರೆ ಇದು ಗುರಿತಪ್ಪಿತು. ಗಣೇಶ ಸಾವರ್ಕರ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದ ಜಿಲ್ಲಾ ನ್ಯಾಯಾಧೀಶರೊಬ್ಬರೂ 1909ರ ಡಿಸೆಂಬರ್ 21ರಂದು ಕ್ರಾಂತಿಕಾರಿಯ ಗುಂಡಿಗೆ ಬಲಿಯಾದರು. 1911ರಲ್ಲಿ ವಂಚಿ ಅಯ್ಯರ್ ಎಂಬ ಕ್ರಾಂತಿಕಾರಿಯು ತಿನ್ನವೆಲ್ಲಿ ಜಿಲ್ಲೆಯ ಕಲೆಕ್ಟರ್ ಆಗಿದ್ದ ಆಂಗ್ಲೇಯನನ್ನು ಗುಂಡಿಕ್ಕಿ ಕೊಂದರು.

ಅರವಿಂದ ಘೋಷ್

ಕ್ರಾಂತಿಕಾರಿ ಅರವಿಂದ ಘೋಷ ಅವರದು ಸ್ವಾರಸ್ಯಕರ ಜೀವನವಾಗಿದೆ. ಹುಟ್ಟಿದ ನಂತರ ಸುಮಾರು ಎರಡು ದಶಕಗಳು ಇಂಗ್ಲೆಂಡಿನಲ್ಲಿ ಆಂಗ್ಲೇಯ ಕುಟುಂಬವೊಂದರ ಆಶ್ರಯದಲ್ಲಿ ಬೆಳೆದು, ಪ್ರತಿಭಾಶಾಲಿಯಾದ ಬುದ್ಧಿಜೀವಿಯಾಗಿ, ಪ್ರೌಢವಯಸ್ಕನಾದ ನಂತರ ಇಂಗ್ಲೆಂಡಿನಲ್ಲಿದ್ದ ಭಾರತೀಯರನ್ನು ಒಟ್ಟುಗೂಡಿಸಿ, ಈ ಕೆಲವರ ಸಹಾಯದಿಂದ ಬ್ರಿಟಿಷರನ್ನು ಭಾರತದಿಂದ ಬಲಪೂರ್ವಕವಾಗಿ ಓಡಿಸುವ ಪ್ರಯತ್ನ ಕೈಗೊಂಡರು. ಪಿಸ್ತೂಲು ಬಾಂಬುಗಳನ್ನು ತಯಾರಿಸುವುದರಲ್ಲಿಯೂ, ಇವುಗಳನ್ನು ಉಪ

ಯೋಗಿಸುವ ವಿಧಾನದಲ್ಲಿಯೂ ತರಬೇತಿ ಪಡೆದರು. ಭಾರತಕ್ಕೆ ತಮ್ಮ 21 ನೆಯ ವಯಸ್ಸಿನಲ್ಲಿ ಬಂದು ಕ್ರಾಂತಿಕಾರಿ ಚಳುವಳಿಯಲ್ಲಿ ಪಾತ್ರ ವಹಿಸಿದರು. 'ವಂದೇ ಮಾತರಂ' ಎಂಬ ಪತ್ರಿಕೆಗೆ ಲೇಖನಗಳನ್ನು ಬರೆಯುವುದರ ಮೂಲಕ ಜನರಲ್ಲಿ ರಾಷ್ಟ್ರೀಯತಾಭಾವವನ್ನು ಬೆಳೆಸಿದರು. ಮದ್ದುಗುಂಡುಗಳನ್ನೂ, ಬಾಂಬುಗಳನ್ನೂ ಗುಪ್ತವಾಗಿ ವಿದೇಶಗಳಿಂದ ಸ್ವಂತ ಹಣದಿಂದ ತರಿಸಿ ಶೇಖರಿಸಿದರು. ಇದು ಸರ್ಕಾರದ ಗಮನಕ್ಕೆ ಬಂದಾಗ ಅವರನ್ನು ಸೆರೆಹಿಡಿಯಲು ಪೋಲೀಸರು ಪ್ರಯತ್ನಿಸಿದರು. ಆದರೆ, ತಪ್ಪಿಸಿಕೊಂಡು ಫ್ರೆಂಚರ ವಸಾಹತು ಆಗಿದ್ದ ಚಂದ್ರನಗರಕ್ಕೆ ಹೋದರು. ನಂತರ 1910ರ ಏಪ್ರಿಲ್‌ನಲ್ಲಿ ಫ್ರೆಂಚರ ಇನ್ನೊಂದು ವಸಾಹತು ಆಗಿದ್ದ ಪಾಂಡಿಚೇರಿಯಲ್ಲಿ ಯೋಗಿಯಾಗಿ ನೆಲಸಿ ರಾಜಕೀಯ ಚಳುವಳಿಯನ್ನು ತೊರೆದರು. ಆದರೂ, ತರುವಾಯ 40 ವರ್ಷಗಳೂ ಅವರು ಉಗ್ರ ರಾಷ್ಟ್ರೀಯವಾದಿಯಾಗಿಯೇ ಉಳಿದರು. ಅವರ ಅನೇಕ ಗ್ರಂಥಗಳಿಂದ ಇದು ವ್ಯಕ್ತವಾಗುವುದು.

ವಾಸುದೇವ ಬಲವಂತ ಫಡಕೆ

ಬೊಂಬಾಯಿ ಪ್ರಾಂತ್ಯದಲ್ಲಿ 1845 ರಲ್ಲಿ ಜನಿಸಿದ ವಾಸುದೇವ ಬಲವಂತ ಫಡಕೆ ಎಂಬುವರು ಪರಿಣಾಮಕಾರಿಯಾಗಿ ಕ್ರಾಂತಿಕಾರ್ಯಗಳನ್ನು ಮಾಡಿದ ಒಬ್ಬ ಗಣ್ಯವ್ಯಕ್ತಿ. ಮೊದಲು ಭಾರತ ಸೈನ್ಯವನ್ನು ಸೇರಿ ಸೇವೆ ಸಲ್ಲಿಸಿದ ಇವರು ಕ್ರಮೇಣ ಬ್ರಿಟಿಷರ ಆಳ್ವಿಕೆಯಿಂದ ದೇಶಕ್ಕೆ ಆಗುತ್ತಿದ್ದ ಸರ್ವತೋಮುಖ ಹಾನಿಗಳನ್ನು ಯೋಚಿಸಿ ಕ್ರಾಂತಿರಂಗಕ್ಕೆ ಧುಮುಕಿದರು. ನೌಕರಶಾಹಿಯ ಮೇಲೆ ದ್ವೇಷ ಹುಟ್ಟಿಸುವುದು ಹಾಗೂ ಸರ್ಕಾರವು ಕುಸಿದು ಬೀಳುವಂತೆ ಮಾಡುವ ಇತರ ಉಪಾಯಗಳನ್ನು ಫಡಕೆಯವರು ತಮ್ಮ ಭಾಷಣ, ಲೇಖನಗಳ ಮೂಲಕವೂ ಇತರರೊಡನೆ ಚರ್ಚೆ ಮಾಡುವ ಮೂಲಕವೂ ಉಪದೇಶಿಸಿದರು. ಮಹಾರಾಷ್ಟ್ರವೇ ಇವರ ಮುಖ್ಯ ಕಾರ್ಯಕ್ಷೇತ್ರವಾಗಿದ್ದಿತು. 1869ರಲ್ಲಿ ಇವರು ತಮ್ಮ ಬಂಡಾಯ ಧ್ವಜವನ್ನು ಹಾರಿಸಿ ಕೆಲವು ಗ್ರಾಮಗಳನ್ನು ಆಕ್ರಮಿಸಿಕೊಂಡರು. ಇವರ ನಾಯಕತ್ವದಲ್ಲಿ ರಾಮೋಸಿ ಎಂಬ ಜನಾಂಗದವರು ಹಳ್ಳಿಹಳ್ಳಿಗೆ ನುಗ್ಗಿ ಅಪಾರ ಹಣ ಸಂಪಾದಿಸಿದರು. ಮಹಾರಾಷ್ಟ್ರದ ಅನೇಕ ಜಿಲ್ಲೆಗಳಲ್ಲಿ

ಫಡಕೆ ಹಾಗೂ ಇವರ ಬೆಂಬಲಿಗರು ನಡೆಸಿದ ಕಾರ್ಯಾಚರಣೆಗಳು ಬ್ರಿಟಿಷ್ ಸರ್ಕಾರವನ್ನು ಎಚ್ಚರಿಸಿತು. ಆದರೆ, ಸಹ್ಯಾದ್ರಿಯ ಕಾಡುಮೇಡುಗಳಲ್ಲಿ ಅಡಗಿದ್ದು ತಮ್ಮ ಕಾರ್ಯಾಚರಣೆ ನಡೆಸುತ್ತಿದ್ದ ಫಡಕೆ ಹಾಗೂ ಇವರ ಕಡೆಯುವರನ್ನು ಸುಲಭವಾಗಿ ಭೇದಿಸಲು ಸರ್ಕಾರಕ್ಕೆ ಆಗಲಿಲ್ಲ. ಫಡಕೆ ಯವರನ್ನು ಹಿಡಿದು ಕೊಟ್ಟವರಿಗೆ ಸೂಕ್ತ ಬಹುಮಾನ ನೀಡುವುದಾಗಿ ಬೊಂಬಾಯಿನ ಗೌರ್ನರ್ ಅವರು ಘೋಷಿಸಿದರು. ಫಡಕೆಯವರು ತಮ್ಮ ಗೆರಿಲ್ಲಾ ಯುದ್ಧವನ್ನು ವಿಸ್ತರಿಸಿ ಸರ್ಕಾರಕ್ಕೆ ಸೆಡ್ಡುಹೊಡೆದರು. ಹೈದರಾಬಾದಿನ ರೋಹಿಲಾ ಜನರನ್ನೂ, ಇನ್ನೂ ಅನೇಕ ಇತರರನ್ನೂ ಜಮಾಯಿಸಿ ಪಡೆಗಳನ್ನು ಕಟ್ಟಿ ಬ್ರಿಟಿಷ್ ಸೈನ್ಯದೊಡನೆ ಹೋರಾಡಿದರು. ಈ ಹೋರಾಟದಲ್ಲಿ ಅನೇಕರು ಸಾವಿಗೀಡಾದರು. ಬ್ರಿಟಿಷರ ಕಡೆಯ ಮೇಜರ್ ಡೇನಿಯಲ್ ಎಂಬಾತನು ಫಡಕೆಯವರನ್ನು ಹಿಡಿಯಲು ತೀವ್ರ ಪ್ರಯತ್ನ ಮಾಡಿದನು. ಕೊನೆಯಲ್ಲಿ ಗಡ್ಡಧಾರಿಯಾಗಿ ವೇಷ ಬದಲಾಯಿಸಿಕೊಂಡು ಒಂದು ಗ್ರಾಮದ ಗುಡಿಯಲ್ಲಿ ಮಲಗಿದ್ದ ಸಮಯದಲ್ಲಿ ಫಡಕೆಯವರು ಮೇಜರ್ ಡೇನಿಯಲ್ ಕೈಗೆ ಸಿಕ್ಕಿಬಿದ್ದರು. ಅವರ ಮೇಲೆ ಕಳ್ಳತನ, ದರೋಡೆ, ದಂಗೆ, ರಾಜದ್ರೋಹ ಇತ್ಯಾದಿ ಆಪಾದನೆಗಳನ್ನು ಹೊರಿಸಿ ಪುಣೆಯ ನ್ಯಾಯಾಧೀಶರ ಮುಂದೆ ವಿಚಾರಣೆಗೆ 21-8-1879 ರಂದು ನಿಲ್ಲಿಸಲಾಯಿತು. ನಂತರ ವಿಚಾರಣೆ ಬೊಂಬಾಯಿನ ಶ್ರೇಷ್ಠ ನ್ಯಾಯಾಲಯದಲ್ಲಿ ಮುಂದುವರಿದು ಅವರಿಗೆ 'ಜೀವಾವಧಿ' ಶಿಕ್ಷೆ ವಿಧಿಸಿ ಭಾರತದ ಗಡಿ ದಾಟಿಸಿ ಏಡನ್ನಿನ ಸೆರೆಮನೆಯಲ್ಲಿ ಬಂಧಿಸಿಡಲಾಯಿತು. ಬಂಧನದಿಂದ ತಪ್ಪಿಸಿಕೊಂಡು ಪುನಃ ಭಾರತಕ್ಕೆ ಹೋಗಿ ತಮ್ಮ ಕಾರ್ಯ ಮುಂದುವರಿಸಲು ಆಲೋಚಿಸಿ ಒಂದು ದಿನ ಛಾವಣಿಯಲ್ಲಿದ್ದ ಕಂಡಿಯಿಂದ ಕಷ್ಟಪಟ್ಟು ಹೊರಗೆ ಬಂದು ಓಡಲಾರಂಭಿಸಿದರು. ಆದರೆ ದುರದೃಷ್ಟವಶದಿಂದ ಸೆರೆಮನೆಯ ಕಾವಲುಪೋಲೀಸರ ಕೈಗೆ ಸಿಕ್ಕಿಬಿದ್ದು ಪುನಃ ಸೆರೆಮನೆಗೆ ಎಳೆದೊಯ್ಯಲ್ಪಟ್ಟರು. ಅವರು ಸೆರೆಮನೆಯಲ್ಲಿ ಹೆಚ್ಚು ಕಾಲ ಬದುಕಲಿಲ್ಲ. 1883 ರಲ್ಲಿ ತಮ್ಮ 38ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ತಮ್ಮ ಬಲಿದಾನದಿಂದ ಅನೇಕ ಇತರ ಕ್ರಾಂತಿಕಾರರಿಗೆ ಸ್ಫೂರ್ತಿ ನೀಡಿದರು.

ಘದರ್ ಪಕ್ಷ

ಭಾರತ ಸ್ವಾತಂತ್ರ್ಯದ ಬಗ್ಗೆ ಸಹಾನುಭೂತಿಯಿದ್ದ ಕೆಲವು ವಿದೇಶಿಯರನ್ನು ಒಲಿಸಿ ಶಸ್ತ್ರಾಸ್ತ್ರಗಳನ್ನೂ ಸಮರ ಶಿಕ್ಷಣವನ್ನೂ ಪಡೆಯುವ ಯೋಚನೆಯನ್ನು ಕ್ರಾಂತಿಕಾರರಲ್ಲಿ ಒಂದು ಗುಂಪಿನವರು ಮಾಡಿದರು. ಇದರ ಫಲವಾಗಿ 1911 ರಲ್ಲಿ ಹರದಯಾಳ್ ಎಂಬ ಕ್ರಾಂತಿವೀರನು ಅಮೆರಿಕದ ಕ್ಯಾಲಿಫ್ಹೋರ್ನಿಯಾದಲ್ಲಿ 'ಘದರ್'[1] ಎಂಬ ಹೆಸರಿನ ಕ್ರಾಂತಿ ಪಕ್ಷವೊಂದನ್ನು ಸ್ಥಾಪಿಸಿದ.

ಬಂಬೋಜಿ, ಪಂಡಿತ್ ಕಾಶಿರಾಂ ಮತ್ತು ಇತರ ಕೆಲವರು ಘದರ್ ಕ್ರಾಂತಿಪಕ್ಷವನ್ನು ಬಲಗೊಳಿಸಿದರು. ಪಕ್ಷವು 'ಘದರ್ ಸೈನ್ಯ' ಒಂದನ್ನು ಕಟ್ಟಿತು. ಘದರ್ ಪತ್ರಿಕೆಯನ್ನು ಹೊರಡಿಸಿತು. ಯುಗಾಂತರವೆಂಬ ಮುದ್ರಣಾಲಯ ಸ್ಥಾಪಿಸಿತು. 'ಇಂಡಿಯ ಇಂಡಿಪೆಂಡೆನ್ಸ್ ಲೀಗ್' ಒಂದನ್ನು ಸ್ಥಾಪಿಸಿಕೊಂಡು ಬೇರೆಬೇರೆ ದೇಶಗಳಲ್ಲಿ ಇದರ ಶಾಖೆಗಳನ್ನು ಘದರ್ ಪಕ್ಷವು ಸ್ಥಾಪಿಸಿತು. ಕಾಲಕ್ರಮೇಣವಾಗಿ ಬ್ರಿಟನ್ನಿನ ಒತ್ತಡದಿಂದ ಅಮೆರಿಕವು ಘದರ್ ಸಂಘದವರನ್ನು ಬಂಧಿಸತೊಡಗಿದಾಗ ಅವರಲ್ಲಿ ಅನೇಕರು ಭಾರತಕ್ಕೆ ಬಂದು ಸೇರಿ ತಮ್ಮ ಕಾರ್ಯಾಚರಣೆಗಳನ್ನು ಮುಂದುವರಿಸಿದರು. ಪ್ರಥಮ ಯುದ್ಧ ಒದಗಿದಾಗ 'ಬ್ರಿಟನ್ನಿನ ವಿಪತ್ಕಾಲ ನಮ್ಮ ಸತ್ಕಾಲ', 'ಪರಮ ವೈರಿಯ ಶತೃಗಳು ನಮ್ಮ ಮಿತ್ರರು' ಎಂಬ ಪಲ್ಲವಿಯನ್ನು ಹಾಡಿ ಜರ್ಮನಿಯನ್ನೊಲಿಸಿಕೊಳ್ಳುವ ತಂತ್ರ ಹೂಡಿದರು. ಭಾರತದ ಪೂರ್ವಗಡಿಯಲ್ಲಿ ಜರ್ಮನಿಯ ಸಹಾಯದೊಡನೆ 'ಘದರ್' ಸೈನಿಕರು ಅಂಡಮಾನ್ ದ್ವೀಪವನ್ನು ಆಕ್ರಮಿಸಿ ಅಲ್ಲಿ ಬಂದಿಯಾಗಿದ್ದ ಸಾವರ್‌ಕರ್ ಅವರನ್ನು ಬಿಡುಗಡೆ ಮಾಡುವ ಆಲೋಚನೆ ನಡೆದಿತ್ತು. **ಆದರೆ ಅವರನ್ನು ಕರೆತರಬೇಕಾಗಿದ್ದ ಏಮಡನ್ ಎಂಬ ಜಲಾಂತರ್ಗಾಮಿ ನೌಕೆಯು [ಸಬ್‌ಮೇರಿನ್] ನಾಶವಾಯಿತು.** ಹಾಗೂ ಜರ್ಮನಿಯ ಸೋಲಿನೊಡನೆ 'ಘದರ್' ಪಕ್ಷದ ಈ ಆಕಾಂಕ್ಷೆಯು ಕೊನೆಗಂಡಿತು. ಒಟ್ಟಿನಲ್ಲಿ

1. ಘದರ್ ಕ್ರಾಂತಿಪಕ್ಷದ ಹೆಚ್ಚು ವಿವರಕ್ಕೆ ನೋಡಿ. ತಿ. ತಾ. ಶರ್ಮ, ವಿಕ್ರಾಂತ ಭಾರತ; ವಿಶ್ವ ಕನ್ನಡ ಸಮ್ಮೇಳನ, ಬೆಂಗಳೂರು 1983, ಪುಟ 140-180.

'ಘದರ್' ಪಕ್ಷದ ಕಾರ್ಯಾಚರಣೆಗಳಿಂದ ಭಾರತದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅನೇಕ ದೇಶಗಳಲ್ಲಿ ಪ್ರಚಾರ ಸಿಕ್ಕಂತಾಯಿತು.

ವಿ. ಡಿ. ಸಾವರ್‌ಕರ್

ಭಾರತದ ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರ ನೇತಾರರಲ್ಲಿ ವಿನಾಯಕ ದಾಮೋದರ ಸಾವರ್‌ಕರ್ ಅವರು ವ್ಯಾಪಕವಾದ ಕ್ರಾಂತಿ ಚಳುವಳಿ ನಡೆಸಿದ ಅತಿಮುಖ್ಯ ಕ್ರಾಂತಿ ನಾಯಕರಾಗಿದ್ದಾರೆ. 1883 ರ ಮೇ 28ರಂದು ಜನಿಸಿದ ವಿ. ಡಿ. ಸಾವರಕರ್ ಅವರು ಉನ್ನತ ವಿದ್ಯಾಭ್ಯಾಸಕ್ಕಾಗಿ 1907ರಲ್ಲಿ ಅಂದರೆ ತಮ್ಮ 23ನೇ ವರ್ಷ ವಯಸ್ಸಿನಲ್ಲಿ ಇಂಗ್ಲೆಂಡಿಗೆ ಹೋದರು. ನ್ಯಾಯಶಾಸ್ತ್ರದ ಉನ್ನತ ಪದವಿಗೆ ಸಿದ್ಧವಾಗುತ್ತಿದ್ದ ಕಾಲದಲ್ಲಿಯೂ ಇಟಲಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಲ್ಲಿನ ಕ್ರಾಂತಿವೀರರಾದ ಮಟ್ಸಿನಿ (Mazzini) ಮತ್ತು ಗಾರಿಬಾಲ್ಡಿ (Garibaldi) ಮತ್ತು ಇತರ ಐರೋಪ್ಯ ರಾಷ್ಟ್ರಗಳ ಸ್ವಾತಂತ್ರ್ಯವೀರರ ಇತಿಹಾಸದಿಂದ ಪ್ರಭಾವಿತರಾದರು. ಲಂಡನ್ನಿಗೆ ಭಾರತದ ವಿವಿಧ ಭಾಗಗಳಿಂದ ಹೋಗಿದ್ದ ಪ್ರಭಾವಶಾಲಿ ಮನೆತನಕ್ಕೆ ಸೇರಿದ್ದ ಸುಮಾರು 2000 ಜನ ಪ್ರತಿಭಾಶಾಲಿ ಭಾರತೀಯ ಯುವಕರನ್ನು ಒಟ್ಟುಗೂಡಿಸಿ ಅವರಲ್ಲಿ ಸ್ವಾತಂತ್ರ್ಯದಾಹ ಹುಟ್ಟಿಸುವುದು, ಭಾರತಸ್ವಾತಂತ್ರ್ಯಕ್ಕಾಗಿ, ಸಶಸ್ತ್ರ ಕ್ರಾಂತಿಯ ಅನಿವಾರ್ಯತೆಯನ್ನು ಅವರಿಗೆ ಮನಗಾಣಿಸುವುದು ಅವರ ಮುಖ್ಯ ಉದ್ದೇಶವಾಗಿದ್ದಿತು.

'ಸ್ವತಂತ್ರ ಭಾರತ ಸಂಘ'ವೊಂದನ್ನೂ (Free India Society) 'ಭಾರತ ಭವನ'ವನ್ನೂ ಸ್ಥಾಪಿಸಿದರು. ಪ್ರತಿ ಭಾನುವಾರವೂ ಇದರ ಆಶ್ರಯದಲ್ಲಿ ಭಾರತದ ರಾಜಕೀಯ ಸಮಸ್ಯೆಗಳನ್ನು ಕುರಿತ ಉಪನ್ಯಾಸಗಳು ಹಾಗೂ ಚರ್ಚೆಗಳು ನಡೆಯುತ್ತಿದ್ದವು. 1908ರ ಮೇ ತಿಂಗಳಲ್ಲಿ 1857ರ ಪ್ರಥಮ ಸ್ವಾತಂತ್ರ್ಯಯುದ್ಧದ ಪ್ರಾರಂಭ ದಿನೋತ್ಸವದ ಆಚರಣೆಯನ್ನು ಸಾವರ್‌ಕರ್ ಅವರು ಏರ್ಪಡಿಸಿದರು. ಈ ಕಾರ್ಯಕ್ರಮದ ಮೂಲಕ ಅಲ್ಲಿದ್ದ ಭಾರತೀಯ ತರುಣರಲ್ಲಿ ದೇಶಭಕ್ತಿ ಮತ್ತು ಸ್ವಾತಂತ್ರ್ಯ ಸ್ಫೂರ್ತಿ ತುಂಬಿದರು. ಭಾರತದ ತರುಣರೆಲ್ಲಾ ಅಂದು 1857ರ ಸ್ಮೃತಿಮುದ್ರೆಯ ಬ್ಯಾಡ್ಜ್‌ಗಳನ್ನು ಕೋಟಿನ ಮೇಲೆ ಎದ್ದು ಕಾಣುವಂತೆ ಧರಿಸಿದರು. ಇದನ್ನು

ಕಂಡು ಬ್ರಿಟಿಷರಿಗೆ ಕೋಪ ಉಕ್ಕುತ್ತಿತ್ತು. '1857 ರ ಭಾರತದ ಸ್ವಾತಂತ್ರ್ಯ ಸಮರ' ಕುರಿತ ಸ್ಫೂರ್ತಿದಾಯಕ ಗ್ರಂಥವನ್ನು ಅವರು ಬರೆದರು. ಇದನ್ನು ಫ್ರಾನ್ಸಿನಲ್ಲಿ ಅಚ್ಚುಹಾಕಿಸಿ ಈ ಪುಸ್ತಕವನ್ನು ಭಾರತೀಯರೇ ಅಲ್ಲದೆ ಐರೋಪ್ಯರೂ ಓದುವಂತೆ ಮಾಡಿದರು. ಅವರು ಅನೇಕ ಲೇಖನಗಳನ್ನು ಬರೆದು ಇವುಗಳ ಮೂಲಕ ಐರೋಪ್ಯರಿಗೆ ಭಾರತದಲ್ಲಿ ಬ್ರಿಟಿಷರು ಮಾಡುತ್ತಿದ್ದ ಅನ್ಯಾಯಗಳನ್ನು ಎತ್ತಿ ತೋರಿಸಿದರು. ಭಾರತದ ಸ್ವಾತಂತ್ರ್ಯ ಧ್ವಜದ ನಮೂನೆಯನ್ನು ರಚಿಸಿ ಧ್ವಜಗಳನ್ನು ಸಿದ್ಧಪಡಿಸಿ ತಮ್ಮ ಅನುಯಾಯಿಗಳಿಗೆಲ್ಲಾ ಹಂಚಿಕೊಟ್ಟರು. ಜರ್ಮನಿಯಲ್ಲಿ ಜರುಗಿದ 'ಅಂತರರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನ'ದಲ್ಲಿ ಅವರ ಆಪ್ತ ಬೆಂಬಲಿಗರಾದ ಶ್ರೀಮತಿ ಕಾಮಾ ಎಂಬುವರು ಭಾರತದ ಸ್ವಾತಂತ್ರ್ಯ ಧ್ವಜವನ್ನು ಹಾರಿಸಿ ಎಲ್ಲರನ್ನೂ ಚಕಿತಗೊಳಿಸಿದರು. ಭಾರತದಲ್ಲಿ ಸ್ಥಾಪಿಸಲ್ಪಟ್ಟಿದ್ದ 'ಅಭಿನವ ಭಾರತ' ಸಂಸ್ಥೆಯ ವಿವಿಧ ಕೇಂದ್ರಗಳೊಡನೆ ಸಂಪರ್ಕ ಏರ್ಪಡಿಸಿಕೊಂಡು ಕ್ರಾಂತಿ ಚಳುವಳಿಯ ಬಗ್ಗೆ ವ್ಯವಹಾರಗಳನ್ನು ಅವರೇ ರಚಿಸಿದ 'ಗುಪ್ತ ಅಂಕಲಿಪಿ'ಗಳ ಮೂಲಕ ಬೆಳೆಸಿದರು. ಅವರು ಲಂಡನ್ನಿನಲ್ಲಿ ಬಾಂಬುಗಳು, ಪಿಸ್ತೂಲುಗಳು, ಮದ್ದುಗುಂಡುಗಳು ಇತ್ಯಾದಿಗಳ ತಯಾರಿಕೆಯನ್ನು ಕಲಿತರು ಹಾಗೂ ಕೆಲವು ಇತರ ತರುಣರಿಗೂ ಕಲಿಸಿದರು. ಬೊಂಬಾಯಿಯಲ್ಲಿ ರಹಸ್ಯಬಾಂಬ್ ಕಾರ್ಖಾನೆಯೊಂದನ್ನು ಸ್ಥಾಪಿಸುವ ವ್ಯವಸ್ಥೆಯನ್ನು ತಮ್ಮ ಬೆಂಬಲಿಗರ ಸಹಾಯದ ಮೂಲಕ ಮಾಡಿದರು. ಪ್ಯಾರಿಸ್ಸಿಗೆ ಅನೇಕ ಬಾರಿ ಭೇಟಿಯಿತ್ತು ಅಲ್ಲಿಂದಲೂ ಇಂಗ್ಲೆಂಡಿನಿಂದಲೂ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಗುಪ್ತಮಾರ್ಗಗಳಲ್ಲಿ ಭಾರತದ ಕ್ರಾಂತಿಕಾರಕ ಕೇಂದ್ರಗಳಿಗೆ ರವಾನಿಸಿದರು. ಭಾರತೀಯ ಕ್ರಾಂತಿಕಾರರಿಗೆ ಲಂಡನ್, ಪ್ಯಾರಿಸ್, ನ್ಯೂಯಾರ್ಕ್, ಸ್ಯಾನ್‌ಫ್ರಾನ್ಸಿಸ್ಕೊ, ಜಿನೀವಾ, ಬರ್ಲಿನ್, ವ್ಯಾಂಕೊವಾರ್, ಕೈರೋಗಳಂತಹ ವಿದೇಶಿ ಮೂಲಗಳಿಂದ ಶಸ್ತ್ರಾಸ್ತ್ರಗಳೂ, ಸಾಹಿತ್ಯಗಳೂ ಗುಪ್ತವಾಗಿ ಬರುತ್ತಿದ್ದವು. ಸಾವರ್‌ಕರ್, ಬಿ. ಪಿ. ಕಾಲೆ ಅವರು ಲಂಡನ್ನಿನಲ್ಲೂ, ಮೇಡಂ ಕಾಮಾ, ಎನ್. ಕೆ. ವರ್ಮಾ ಫ್ರಾನ್ಸ್‌ನಲ್ಲೂ, ತಾರಕನಾಥ ದಾಸ್, ಜಾನ್. ಡಿ. ವಾಯ್ ನ್ಯೂಯಾರ್ಕಿನಲ್ಲೂ, ರಾಮನಾಥಪುರಿ ಸ್ಯಾನ್‌ಫ್ರಾನ್ಸಿಸ್ಕೊದಲ್ಲೂ, ಲಾಲಾ

ಹರದಯಾಳ್ ಮತ್ತು ವಿ. ವಿ. ಎಸ್. ಅಯ್ಯರ್ ಅವರು ಜಿನೀವಾದಲ್ಲೂ, ಸೇನಾಪತಿ ಬಾಪಟ್ ಸ್ಕಾಟ್‌ಲೆಂಡಿನಲ್ಲೂ, ಜೆ. ಡಿ. ಕುಮಾರ್ ವ್ಯಾಂಕೋವಾರ್‌ನಲ್ಲೂ, ವೀರೇಂದ್ರನಾಥ ಚಟ್ಟೋಪಾಧ್ಯಾಯ ಮತ್ತು ತಿರುಮಲಾಚಾರ್ಯ ಅವರು ಬರ್ಲಿನ್ನಿನಲ್ಲೂ ಅವಿರತವಾಗಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದ್ದರು.[1]

ಸಾವರ್‌ಕರ್ ಅವರು ತರಬೇತಿ ನೀಡಿ ಕಳಿಸಿದ ತರುಣರು ಭಾರತದ ಕ್ರಾಂತಿ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದರು. ಸಾವರ್‌ಕರ್ ಅವರ ಈ ಕ್ರಾಂತಿಕಾರ ಬೆಂಬಲಿಗರು ನಡೆಸಿದ ಒಂದೆರಡನ್ನು ದೃಷ್ಟಾಂತವಾಗಿ ಇಲ್ಲಿ ಹೇಳಬಹುದು. ಬೊಂಬಾಯಿ ಪ್ರಾಂತ್ಯದ ನಾಸಿಕವು ಕ್ರಾಂತಿ ಚಟುವಟಿಕೆಗಳ ಕೇಂದ್ರಸ್ಥಾನವಾದುದು ಸರ್ಕಾರದ ಗಮನಕ್ಕೆ ಬಂದು ಅಲ್ಲಿಗೆ ಜಾಕ್‌ಸನ್ ಎಂಬ ಒಬ್ಬ ಬಲಿಷ್ಠನನ್ನು ಕ್ರಾಂತಿಕಾರರನ್ನು ನಿರ್ಮೂಲ ಮಾಡುವುದಕ್ಕಾಗಿ ಸರ್ಕಾರವು 1907ರಲ್ಲಿ ನೇಮಿಸಿತು. ಆತನು ಅನೇಕರನ್ನು ಸೆರೆಹಿಡಿದ ಮತ್ತು ಚಿತ್ರಹಿಂಸೆಗೆ ಒಳಪಡಿಸಿದ. 1909ರಲ್ಲಿ ಕ್ರಾಂತಿಕಾರಿಯೊಬ್ಬನಾದ ಕಾನ್ಹೇರೆ ಎಂಬುವನು ಜಾಕ್‌ಸನ್ನನನ್ನು ಸಾವರ್‌ಕರ್ ಕಳಿಸಿದ್ದ ಬ್ರೌನಿಂಗ್ ಪಿಸ್ತೂಲಿನಿಂದ ಗುಂಡಿಕ್ಕಿ ಕೊಂದನು. ದಿನ ಕಳೆದಂತೆಲ್ಲ ಕ್ರಾಂತಿಕಾರರ ಬಂಧನ ಹಾಗೂ ಝಡತಿಗಳು ಹೆಚ್ಚಿದವು. ರಹಸ್ಯಗಳನ್ನು ಹೊರಗೆಡಹಲು ಅವರನ್ನು ಅಮಾನುಷ ಚಿತ್ರಹಿಂಸೆಗಳಿಗೆ ಒಳಪಡಿಸಲಾಯಿತು. ಆಜೀವಪರ್ಯಂತ ಸೆರೆಮನೆವಾಸ, 'ಕರಿನೀರು ಶಿಕ್ಷೆ'[2] ಮರಣದಂಡನೆ ಇವುಗಳು ಕ್ರಾಂತಿಕಾರರಿಗೆ ವಿಧಿಸಲಾದ ಸಾಮಾನ್ಯ ಶಿಕ್ಷೆಗಳು. ಲಂಡನ್ನಿನಲ್ಲಿಯೇ ಸಾವರ್‌ಕರ್ ಅವರ ನೇತೃತ್ವದ ಕ್ರಾಂತಿಕಾರ್ಯಗಳು ಬ್ರಿಟಿಷರ ಗಮನಕ್ಕೆ ಬಂದವು. ಇವುಗಳಲ್ಲಿ ಮುಖ್ಯವಾದುದು ಸಾವರ್‌ಕರ್ ಅವರ ವೀರಶಿಷ್ಯ ಮದನ್‌ಲಾಲ್ ಧಿಂಗ್ರ ಎಂಬಾತನು 1909 ರ ಜುಲೈ 1ರಂದು ಕರ್ಜನ್ ವಾಯಲಿ ಎಂಬ ಭಾರತ ವಿರೋಧಿ ಆಂಗ್ಲೇಯನನ್ನು ಉಪಾಯದಿಂದ ಸಭಾಂಗಣವೊಂದರಲ್ಲಿ ಧೈರ್ಯದಿಂದ ಗುಂಡಿಕ್ಕಿ

---

1. ನೋಡಿ, ಬಾಬು ಕೃಷ್ಣಮೂರ್ತಿ, ಅಜೇಯ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು 1974, ಪು. 70–71.
2. "ಕರಿನೀರು ಶಿಕ್ಷೆ" ಅಂದರೆ ಭಾರತದಿಂದ ಬಹುದೂರದಲ್ಲಿ ಸಮುದ್ರದ ಮಧ್ಯೆ ಇದ್ದ ಅಂಡಮಾನ್ ದ್ವೀಪದ ಒಂದು ವಿಶಿಷ್ಟ ಜೈಲಿನಲ್ಲಿ ಬಂಧನ.

ಕೊಂದುದು. ಧಿಂಗ್ರನ ಹೆಸರು ಲಂಡನ್ನಿನಲ್ಲಿ ಭಾರತದಲ್ಲಿ ಮನೆಮಾತಾಯಿತು. ಸಾವರ್‌ಕರ್ ಅವರೂ, ಭಾರತದ ಕ್ರಾಂತಿಕಾರರೂ ಧಿಂಗ್ರನ ಶೌರ್ಯಕ್ಕೆ ಮೆಚ್ಚಿ ಆನಂದಿಸಿದರು. ಆದರೆ ಧಿಂಗ್ರ ಪೋಲಿಸರ ವಶನಾದ. ಲಂಡನ್ನಿನ ನ್ಯಾಯಾಲಯದಲ್ಲಿ ಇವನ ವಿಚಾರಣೆಯಾಯಿತು. "ನಮ್ಮ ಪವಿತ್ರ ಮಾತೃಭೂಮಿಯನ್ನು ಅಪವಿತ್ರಗೊಳಿಸುತ್ತಿರುವ ಆಂಗ್ಲೇಯರನ್ನು ಸಂಹರಿಸುವುದು ನ್ಯಾಯಸಮ್ಮತವಾಗಿದೆ. ನನಗೆ ಮರಣದಂಡನೆ ವಿಧಿಸಿ : ಅದೇ ನನ್ನ ಆಸೆ. ಅದರಿಂದ ನನ್ನ ದೇಶಬಾಂಧವರ ಸೇಡಿನ ಕಿಡಿ ಹೆಚ್ಚು ಉಗ್ರವಾಗುತ್ತದೆ" ಎಂದು ಧಿಂಗ್ರ ನ್ಯಾಯಾಲಯದಲ್ಲಿ ತನ್ನ ಹೇಳಿಕೆಯನ್ನು ನೀಡಿದ. ಅವನಿಗೆ ಮರಣದಂಡನೆ ವಿಧಿಸಿ 1909ರ ಆಗಸ್ಟ್ 17 ರಂದು ಈ ತರುಣ ಕ್ರಾಂತಿಕಾರರನ್ನು ಗಲ್ಲಿಗೇರಿಸಲಾಯಿತು. ಮರಣಕ್ಕೆ ಮುಂಚೆ ಅವನು ಭಾರತೀಯರಿಗೆ ಸ್ಫೂರ್ತಿದಾಯಕವಾದಂತಹ ಹೇಳಿಕೆಯನ್ನು ನೀಡಿದನು. ಇದನ್ನು ಸಾವರ್‌ಕರ್ ಅವರು ಬ್ರಿಟಿಷ್ ಪತ್ರಿಕೆಗಳಿಗೂ, ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಟಲಿ ಮುಂತಾದ ರಾಷ್ಟ್ರಗಳ ಮುಖ್ಯ ಪತ್ರಿಕೆಗಳಿಗೂ ಕಳಿಸಿದರು. ಬ್ರಿಟಿಷರ ಅನ್ಯಾಯವನ್ನು ಪ್ರಪಂಚಕ್ಕೆ ಜಾಹಿರಾತು ಮಾಡುವುದು ಅವರ ಉದ್ದೇಶವಾಗಿದ್ದಿತು.

ಭಾರತದ ಕ್ರಾಂತಿಕಾರಿಗಳ ಎಲ್ಲಾ ಚಟುವಟಿಕೆಗಳಿಗೂ ಸಾವರ್‌ಕರ್ ಅವರೇ ಮೂಲ ಪ್ರಚೋದಕ ಹಾಗೂ ನಿರ್ದೇಶಕವ್ಯಕ್ತಿ ಎಂಬುದನ್ನು ಬ್ರಿಟಿಷರು ಪತ್ತೆಹಚ್ಚಿ 1910 ರಲ್ಲಿ ಅವರನ್ನು ಬಂಧಿಸಿ ಅವರ ಮೇಲೆ ಕೆಳಗಣ ಆರೋಪಗಳನ್ನು ಹೊರಿಸಲಾಯಿತು :–

1. ಭಾರತದ ಚಕ್ರವರ್ತಿಗಳ ವಿರುದ್ಧ ಯುದ್ಧ ಹೂಡಿದುದು.
2. ಭಾರತದ ಚಕ್ರವರ್ತಿಗಳ ಪ್ರಭುತ್ವ ಕೊನೆಗಾಣಿಸುವ ಒಳಸಂಚು ನಡೆಸಿದುದು.
3. ಶಸ್ತ್ರಾಸ್ತ್ರಗಳ ಶೇಖರಣೆ ಹಾಗೂ ವಿತರಣೆ ಮಾಡಿ ಜಾಕ್ಸನ್ ಅವರ ಹತ್ಯಕ್ಕೆ ನೆರವಾದುದು.
4. ಲಂಡನ್ನಿನಲ್ಲಿ ಶಸ್ತ್ರಾಸ್ತ್ರಗಳನ್ನು ಶೇಖರಿಸಿದುದು ಹಾಗೂ ಇತರ ಸ್ಥಳಗಳಿಗೆ ರವಾನಿಸಿದುದು.
5. 1906ರ ಜನವರಿಯಿಂದ ಮಾರ್ಚಿನವರೆಗೆ ಭಾರತದಲ್ಲೂ,

1908–09ರಲ್ಲಿ ಲಂಡನ್ನಿನಲ್ಲೂ ರಾಜದ್ರೋಹ ಭಾಷಣಗಳನ್ನು ಮಾಡಿದುದು.

ಮೇಲಿನ ಮೊಕದ್ದಮೆಗಳ ವಿಚಾರಣೆಗಾಗಿ ಸಾವರ್ ಕರ್ ಅವರನ್ನು ಹಡಗಿನಲ್ಲಿ ಪೋಲೀಸು ಕಾವಲಿನಲ್ಲಿ ಭಾರತಕ್ಕೆ ಕರೆದುಕೊಂಡು ಬರಲಾಯಿತು.[1] ಒಂದೂವರೆ ತಿಂಗಳು ಯರವಾಡಾ ಮತ್ತು ಬೊಂಬಾಯಿನ ಡೊಂಗ್ರಿ ಸೆರೆಮನೆಗಳ ವಾಸದ ನಂತರ ಸಾವರ್‌ಕರ್ ಅವರ ವಿಚಾರಣೆ ಸೆಪ್ಟೆಂಬರ್ 1910 ರಲ್ಲಿ ಬೊಂಬಾಯಿ ಉಚ್ಚನ್ಯಾಯಾಲಯದಲ್ಲಿ ನಡೆಯಿತು. ಸಾವರ್‌ಕರ್ ಅವರ ಪರ ವಾದಿಸಲು ಪ್ರತಿಭಾವಂತರ 'ಸಾವರ್ ಕರ್ ರಕ್ಷಣಾ ಸಮಿತಿ'ಯೊಂದು ಸ್ಥಾಪಿಸಲ್ಪಡುವುದು. ಸ್ವತಃ ಬ್ಯಾರಿಸ್ಟರ್ ಅರ್ಹತೆ ಪಡೆದಿದ್ದ ಸಾವರ್‌ಕರ್ ಅವರು ತಮ್ಮನ್ನು ಫ್ರಾನ್ಸಿನಲ್ಲಿ ಅವರು ಕಾಲಿಟ್ಟಾಗ ಬಲಾತ್ಕಾರವಾಗಿ ಎಳೆದು ತಂದುದು ಅಂತರರಾಷ್ಟ್ರೀಯ ಕಾನೂನಿಗೆ ವಿರೋಧವಾದುದೆಂದೂ, ಅವರನ್ನು ಫ್ರಾನ್ಸಿಗೆ ಹೋಗಲು ಬಿಡಬೇಕೆಂದೂ ವಾದಿಸಿದರು. 69 ದಿವಸಗಳು ನಡೆದ ಈ ದೀರ್ಘ ವಿಚಾರಣೆಯ

---

1. ಈ ಸಂದರ್ಭದಲ್ಲಿ ಸಾವರ್ ಕರ್ ಅವರ ಸಾಹಸಮಯವಾದ ರೋಮಾಂಚಕಾರಿ ಘಟನೆಯು ಈ ಅಸಾಧಾರಣ ವ್ಯಕ್ತಿಯ ಶಕ್ತಿಯನ್ನು ತೋರಿಸುವುದು.

ಲಂಡನ್ನಿನಿಂದ ಭಾರತಕ್ಕೆ ಸಾವರ್ ಕರ್ ಅವರನ್ನು ಪೋಲೀಸು ಬಂದೋಬಸ್ತಿನೊಡನೆ ಒಂದು ಹಡಗಿನಲ್ಲಿ ಕರೆದುಕೊಂಡು ಬರುತ್ತಾರೆ. ಮಾರ್ಗದಲ್ಲಿ ಫ್ರಾನ್ಸಿನ ಮಾರ್ಸೇಲ್ಸ್ ಬಳಿ ನೌಕೆಯು ಯಂತ್ರ ರಿಪೇರಿಗಾಗಿ ನಿಲ್ಲುವುದು. ಆಗ ಒಂದು ನಡುರಾತ್ರಿಯಲ್ಲಿ ತಮ್ಮನ್ನು ಕೂಡಿದ್ದ ಚಿಕ್ಕ ಕೋಣೆಯ ಮೇಲ್ಭಾಗದಲ್ಲಿದ್ದ ಸಣ್ಣದಾದ ಗವಾಕ್ಷಿಗೆ ನೆಗೆದು ಅದರ ಅಂಚನ್ನು ಹಿಡಿದು ಅತಿ ಕಷ್ಟದಿಂದ ತಮ್ಮ ಅಷ್ಟೂ ಶರೀರವನ್ನು, ಗಾಯಗಳಾಗಿ ರಕ್ತ ಚಿಮ್ಮುತ್ತಿದ್ದನ್ನು ಏನೂ ಲೆಕ್ಕಿಸದೆ, ಅದರಲ್ಲಿ ತೂರಿಸಿಕೊಂಡು ಮೇಲಿನಿಂದ ಸಮುದ್ರಕ್ಕೆ ಹಾರಿಬಿದ್ದು ಅಲ್ಲಿಂದ ದಡಕ್ಕೆ ಈಜಿಕೊಂಡು ಬರುತ್ತಾರೆ. ಅಷ್ಟರಲ್ಲಿ ಕಾವಲಿದ್ದ ಪೋಲೀಸರು ಇದನ್ನು ತಿಳಿದು ತಾವೂ ಅವರನ್ನು ಹಿಂಬಾಲಿಸಿ ಬರುತ್ತಾರೆ. ಈ ವೇಳೆಗೆ ಸಾವರ್ ಕರ್ ಅವರು ಫ್ರೆಂಚ್ ಪೋಲೀಸಿನವರ ಮೊರೆ ಹೋಗುತ್ತಾರೆ. ಆದರೆ, ಬ್ರಿಟಿಷ್ ಪೋಲೀಸರು ಸಾವರ್ ಕರ್ ಅವರನ್ನು ಬಲಾತ್ಕಾರದಿಂದ ಎಳೆದೊಯ್ದು ಅವರಿಗೆ ಚಿತ್ರಹಿಂಸೆ ನೀಡಿ, ಇನ್ನೂ ಹೆಚ್ಚು ಕಾವಲು ಏರ್ಪಾಡು ಮಾಡಿಕೊಂಡು ಅವರನ್ನು ಭಾರತಕ್ಕೆ ಕರೆದುಕೊಂಡು ಬಂದು ಬಂದೀಖಾನೆಗೆ ಸೇರಿಸುತ್ತಾರೆ.

ನಂತರ ಈ ವಾದವನ್ನು ನ್ಯಾಯಾಧೀಶರು ತಳ್ಳಿಹಾಕಿ 24-12-1910 ರಂದು ಅವರಿಗೆ ಅವರ ಆಸ್ತಿಪಾಸ್ತಿಗಳನ್ನು ಜಪ್ತಿ ಮತ್ತು 25 ವರ್ಷಗಳ ಕಠಿನೀರಿನ ಶಿಕ್ಷೆ (ಅಂಡಮಾನ್ ದ್ವೀಪದ ಜೈಲುವಾಸ) ಯನ್ನು ವಿಧಿಸಿದರು. ತರುವಾಯ ಪ್ರತ್ಯೇಕ ವಿಚಾರಣೆಗಾಗಿ ಇಟ್ಟುಕೊಂಡಿದ್ದ ಜಾಕ್‌ಸನ್ ಅವರ ಕೊಲೆಗೆ ಸಹಾಯ ಮಾಡಿದರೆಂಬ ಆಪಾದನೆಯನ್ನು ತೆಗೆದುಕೊಂಡು 20-11-1911 ರಂದು ಇನ್ನೂ 25 ವರ್ಷಗಳ ಕಠಿನೀರಿನ ಶಿಕ್ಷೆ ವಿಧಿಸಲಾಯಿತು. ಒಟ್ಟು 50 ವರ್ಷಗಳ ಕಠಿಣ ಜೈಲುವಾಸದ ಶಿಕ್ಷೆ! [1] ಇವರ ವಿಚಾರಣೆಯ ಕಾಲದಲ್ಲಿಯೇ ಅಭಿನವ ಭಾರತ ಸಂಘದ ಇನ್ನೂ ಅನೇಕ ಮುಖ್ಯ ಕ್ರಾಂತಿಕಾರರ ವಿಚಾರಣೆಯೂ ಆಗಿ ಇವರಲ್ಲಿ ಅನೇಕರಿಗೂ ಕಠಿನೀರಿನ ಶಿಕ್ಷೆ ವಿಧಿಸಲಾಯಿತು. ಸಾವರ್‌ಕರ್ ಅವರೂ, ಅವರ ಈ ಇತರ ಅನುಯಾಯಿಗಳೂ ಸಂತೋಷದಿಂದ "ಸ್ವಾತಂತ್ರ್ಯಲಕ್ಷ್ಮಿ ಕಿ ಜೈ" ಎಂಬ ಜಯಕಾರದೊಡನೆ ನ್ಯಾಯಾಧೀಶರ ಶಿಕ್ಷೆಗಳನ್ನು ಸ್ವಾಗತಿಸಿದರು. ಹೀಗೆ ನ್ಯಾಯಾಧೀಶರು ತೀರ್ಪು ಕೊಟ್ಟ ನಂತರವೂ ಸಾವರ್‌ಕರ್ ಅವರ ಆಪ್ತ ಗೆಳೆಯರಾದ ಪಂಡಿತ್ ಶಾಮಜಿ, ರಾಣಾ, ಶ್ರೀಮತಿ ಕಾಮಾ ಇತ್ಯಾದಿ ಕೆಲವರು ನಡೆಸಿದ ಫಲವಾಗಿ ಫ್ರೆಂಚ್ ಸರ್ಕಾರವು ಸಾವರ್‌ಕರ್ ಅವರನ್ನು ಫ್ರಾನ್ಸಿಗೆ ಒಪ್ಪಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿತು. ಈ ಪ್ರಶ್ನೆಯ ನ್ಯಾಯಬದ್ಧತೆಗಾಗಿ ಈ ಎರಡೂ ಸರ್ಕಾರಗಳೂ ಹೇಗ್‌ನಲ್ಲಿದ್ದ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಇದನ್ನು ಒಪ್ಪಿಸಿದರು. 1911 ರ ಫೆಬ್ರುವರಿ 24 ರಂದು ಹೇಗ್ ನ್ಯಾಯಾಲಯವು ಭಾರತದ ದುರದೃಷ್ಟದಿಂದ ಬ್ರಿಟನ್ನಿನ ಪರವಾಗಿ ತೀರ್ಪು ಕೊಟ್ಟಿತು. ಅಲ್ಲಿಗೆ ಸಾವರ್‌ಕರ್ ಅವರು ನ್ಯಾಯಾಲಯ ವಿಧಿಸಿದ ಶಿಕ್ಷೆ ಅನುಭವಿಸಲು ಅಂಡಮಾನ್ ದ್ವೀಪದ ಅತ್ಯಂತ ಕ್ರೂರ ಪರಿಸ್ಥಿತಿಯ [2] ಜೈಲುವಾಸಕ್ಕೆ ಹೋಗಬೇಕಾಯಿತು. ಸಾವರ್‌ಕರ್ ಅವರ ಮೇಲಿನ ಮೊಕದ್ದಮೆಯ ವಿಚಾರಣೆ ಹೇಗ್ ನ್ಯಾಯಾ

---

1. ಆದರೆ ಅವರು 50 ವರ್ಷಗಳು ಜೈಲಿನಲ್ಲಿ ಇರಬೇಕಾಗಿ ಬರಲಿಲ್ಲ. 11 ವರ್ಷಗಳ ಅಂಡಮಾನ್ ಜೈಲುವಾಸದ ನಂತರ ಅವರನ್ನು ಭಾರತಕ್ಕೆ ಕರೆತಂದು 1937 ರ ಜೂನ್ 17 ರ ವರೆಗೆ ಅವರನ್ನು ಸ್ಥಾನಬದ್ಧತೆಯಲ್ಲಿಡಲಾಯಿತು.

2. ಅಂಡಮಾನ್ ಜೈಲುವಾಸದ ಬಗ್ಗೆ ಅನುಬಂಧ ನೋಡಿ.

ಲಯದ ವರೆಗೆ ಹೋದುದರಿಂದ ಬ್ರಿಟಿಷರ ವಿರುದ್ಧ ಭಾರತದ ಸ್ವಾತಂತ್ರ್ಯ ಕ್ಕಾಗಿ ಕ್ರಾಂತಿಕಾರರು ನಡೆಸುತ್ತಿದ್ದ ವೀರ ಹೋರಾಟಕ್ಕೆ ಅಂತರರಾಷ್ಟ್ರೀಯ ಪ್ರಚಾರ ದೊರೆತಂತಾಯಿತು. ಇದರ ಕೀರ್ತಿ ಸಾವರ್‌ಕರ್ ಅವರಿಗೆ ಸಲ್ಲುವುದು.

ಕೈದಿಯ ಉಡುಪು ಹಾಕಿ 'ಕೈದಿ ನಂ. 2777–1960ವರೆಗೆ' ಎಂಬ ಕೈದಿಯ ಬ್ಯಾಡ್ಜು ಅವರಿಗೆ ಸಿಕ್ಕಿಸಿ, ಬಹುಮುಖ ಪ್ರತಿಭೆಯುಳ್ಳ ಈ ತರುಣ ನನ್ನು ಅಂಡಮಾನ್ ದ್ವೀಪಕ್ಕೆ ಪೋಲೀಸು ಕಾವಲಿನೊಡನೆ ಕರೆದೊಯ್ಯುವು ದನ್ನು ಊಹಿಸಿಕೊಂಡರೆ ಯಾವ ಭಾರತೀಯನಿಗಾಗಲಿ ಬ್ರಿಟಿಷರ ಮೇಲೆ ಕೋಪ ಬರದೆ ಇರದು. ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲುವಾಸ ಅನು ಭವಿಸಿದ ಸ್ವಾತಂತ್ರ್ಯವೀರರಲ್ಲಿ ಅತ್ಯಂತ ಹೆಚ್ಚುಕಾಲ ಹಾಗೂ ಅತ್ಯಂತ ಕಠಿಣ ಪರಿಸ್ಥಿತಿಗಳಿಗೆ ಒಳಪಟ್ಟು ಜೈಲುವಾಸವನ್ನೂ ದಿಟ್ಟತನದಿಂದ ಅನುಭವಿ ಸಿದವರು ವೀರ ಸಾವರ್‌ಕರ್ ಅವರೇ ಆಗಿದ್ದಾರೆ.

ಗಮನಾರ್ಹವಾದ ಒಂದು ಮುಖ್ಯ ಅಂಶವೆಂದರೆ ಜೈಲಿನೊಳಗಿದ್ದ ಸಾವರ್‌ಕರ್ ಅವರು ಭಾರತದ ಕ್ರಾಂತಿ ಚಳುವಳಿಗೆ ಪರಿಣಾಮಕಾರಿಯಾದ ಸ್ಫೂರ್ತಿ ನೀಡಿದ ಚೇತನಶಕ್ತಿಯಾಗಿದ್ದರೆಂಬುದು. ಅವರು ಜೈಲಿನಲ್ಲಿಯೂ ಸುಮ್ಮನೆ ಇದ್ದ ವ್ಯಕ್ತಿಯಲ್ಲ. ಜೈಲಿನಲ್ಲಿದ್ದವರಿಗೆ ಪರಸ್ಪರ ಸಂಪರ್ಕಕ್ಕೆ ಇದ್ದ ಅಲ್ಪಸ್ವಲ್ಪ ಅವಕಾಶವನ್ನೇ ಉಪಯೋಗಿಸಿಕೊಂಡು ಸಾವರ್‌ಕರ್ ಅವರು ಹಿಂದೂ ಸಂಘಟನೆ, ಭಾರತ ಸ್ವಾತಂತ್ರ್ಯಪ್ರೇಮ ಭಾವನೆಗಳನ್ನು ಜೈಲುವಾಸಿಗಳಲ್ಲಿ ಹುಟ್ಟಿಸಿದರು. ಜೈಲಿನಲ್ಲಿ ವಿಧಿಸಲಾಗಿದ್ದ ಅನೇಕ ಕಟ್ಟು ನಿಟ್ಟಾದ ನಿಯಮಗಳ ಬಗ್ಗೆ ಅಲ್ಲಿಯೇ ಜೈಲುವಾಸಿಗಳಿಂದ ಚಳುವಳಿ ಎಬ್ಬಿ ಸಿದರು. ಅನಕ್ಷರಸ್ಥ ಕೈದಿಗಳಿಗೆ ಓದುಬರಹ ಕಲಿಸಲು ಅವಕಾಶಕ್ಕೂ, ರಾಜಕೀಯ ಕೈದಿಗಳನ್ನು ಅಗೌರವ ಕೆಲಸಗಳಿಗೆ ನೇಮಿಸಬಾರದೆಂಬುದರ ಬಗೆಗೂ, ವರ್ತಮಾನ ಪತ್ರಿಕೆ ತರಿಸಿಕೊಳ್ಳುವ ಹಾಗೂ ಆಕ್ಷೇಪಾರ್ಹವಲ್ಲದ ಪುಸ್ತಕಗಳನ್ನು ತರಿಸಿಕೊಳ್ಳುವ ಅವಕಾಶಕ್ಕಾಗಿಯೂ ಅವರು ಜೈಲಿನಲ್ಲೇ ಚಳುವಳಿಯನ್ನು ನಡೆಸಿದರು. ಇದರ ಫಲವಾಗಿ ಕೆಲವು ಜೈಲು ಸುಧಾರಣೆ ಗಳೂ ಮಾಡಲ್ಪಟ್ಟವು. ಎಲ್ಲಕ್ಕೂ ಹೆಚ್ಚಾಗಿ ಸಾವರ್‌ಕರ್ ಅವರಂತಹ ಸರ್ವೋಚ್ಚ ಕ್ರಾಂತಿನಾಯಕರು ಜೈಲಿನಲ್ಲಿ ಕಷ್ಟಗಳನ್ನು ದಿಟ್ಟತನದಿಂದ

ಅನುಭವಿಸುತ್ತಿದ್ದುದು ಕ್ರಾಂತಿ ಚಳುವಳಿಗೆ ಮುಖ್ಯ ಸ್ಫೂರ್ತಿಯಾಯಿತು.

ಸುಮಾರು ಹನ್ನೊಂದು ವರ್ಷಗಳ ಅಂಡಮಾನ್ ಜೈಲುವಾಸದ ನಂತರ ಸಾವರ್‌ಕರ್ ಅವರನ್ನು ಸರ್ಕಾರವು ಭಾರತಕ್ಕೆ ಕರೆತಂದು ಸ್ವಲ್ಪ ಕಾಲ ಜೈಲಿನಲ್ಲಿಟ್ಟಿದ್ದು ನಂತರ ಸ್ಥಾನಬದ್ಧತೆಯಲ್ಲಿ ಇಟ್ಟಿತು. ಈ ಸ್ಥಾನ ಬದ್ಧತೆಯ ಸುಮಾರು ಹದಿನಾಲ್ಕು ವರ್ಷಗಳ ಅವಧಿಯಲ್ಲಿ ಅವರು ಅನೇಕ ಗ್ರಂಥಗಳ ರಚನೆ ಹಾಗೂ ಅಸ್ಪೃಶ್ಯತಾನಿವಾರಣೆ, ಶುದ್ಧಿಕಾರ್ಯ, ಜಾತಿ ಭೇದ ನಿರ್ಮೂಲನ, ಜಾತಿಭೇದವಿಲ್ಲದ ಸಹಭೋಜನ ಕಾರ್ಯಕ್ರಮ, ಸಾಕ್ಷರತಾಪ್ರಚಾರ, ಸ್ವದೇಶಿಪ್ರಚಾರ ಇತ್ಯಾದಿ ಮುಖ್ಯ ಸಮಾಜಕ್ರಾಂತಿ ಕಾರ್ಯಗಳಲ್ಲಿ ನಿರತರಾಗಿದ್ದರು. ಈ ಎಲ್ಲಾ ಸಾಮಾಜಿಕ ಸುಧಾರಣೆ ಕಾರ್ಯನಿರ್ವಹಣೆಗೆ ಒಂದು ಕೇಂದ್ರ ನೆಲೆಯಾಗುವಂತೆ ಅವರು ಇದ್ದ ಶಿರಗಾಂವ್ ಗ್ರಾಮದ ಹತ್ತಿರದ ರತ್ನಾಗಿರಿಯಲ್ಲಿ 'ಪತಿತಪಾವನ ಮಂದಿರ' ವೊಂದನ್ನು ಕಟ್ಟಿಸಿದರು.

1937ರ ಮೇ 10 ರಂದು ಸ್ಥಾನಬದ್ಧತೆಯಿಂದ ಬಿಡುಗಡೆ ಹೊಂದಿ ದೇಶದ ನಾನಾಭಾಗಗಳಲ್ಲಿ ಸಂಚರಿಸಿ ತಮ್ಮ ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆಗಳನ್ನು ಮುಂದುವರಿಸಿದರು.

1939 ರ ಸೆಪ್ಟೆಂಬರ್‌ನಲ್ಲಿ ಎರಡನೇ ಪ್ರಪಂಚ ಯುದ್ಧ ಪ್ರಾರಂಭ ವಾದ ನಂತರ ವೈಸ್‌ರಾಯ್ ಅವರ ಕರೆಗೆ 'ಓ'ಗೊಟ್ಟು ಸೈನಿಕೀಕರಣ ಕಾರ್ಯದಲ್ಲಿ ತೊಡಗಿದರು. ಹಿಂದೂಗಳನ್ನು ಸೈನ್ಯಕ್ಕೆ ಸೇರುವಂತೆ ಪ್ರೇರೇಪಿಸಿದರು. ಸೈನಿಕರಾಗಿ ಹೀಗೆ ಶಿಕ್ಷಣ ಪಡೆಯುವ ಭಾರತೀಯರು ಕ್ರಮೇಣ ಸ್ವದೇಶಪ್ರೇಮದಿಂದ ಸ್ವಾತಂತ್ರ್ಯಗಳಿಕೆಗೆ ಬ್ರಿಟಿಷರ ವಿರುದ್ಧ ಹೋರಾಡುವರೆಂಬುದು ಅವರ ನಂಬಿಕೆಯಾಗಿದ್ದಿತು.

1918ರ ತರುವಾಯ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಾಂತಿ ಮಾರ್ಗಕ್ಕಿಂತ ಮಹಾತ್ಮಾ ಗಾಂಧಿಯವರ ನೇತೃತ್ವದ ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಗೆ ಹೆಚ್ಚು ಪ್ರಾಧಾನ್ಯವುಂಟಾಯಿತು. ಆದರೂ ಗಾಂಧೀಜಿ ಯವರ ಮಾರ್ಗವನ್ನು ಒಪ್ಪದ ಅನೇಕ ಕ್ರಾಂತಿವೀರರು ತಮ್ಮದೇ ಆದ ಉಗ್ರಕ್ರಾಂತಿ ಮಾರ್ಗಾನುಸರಣೆಯನ್ನು ಮುಂದುವರಿಸಿದರು. ಆರ್ಯ

ಸಮಾಜಕ್ಕೆ ಸೇರಿದ ಗ್ವಾಲಿಯರ್‌ನ ಪಂಡಿತ್ ರಾಮಪ್ರಸಾದ್, ಉತ್ತರ ಪ್ರದೇಶದ ಪಠಾಣಾ ಅಶ್ಫಾಕ್ ಉಲ್ಲಾಖಾನ್, ಚಂದ್ರಶೇಖರ್ ಆಜಾದ್[1] ಇತ್ಯಾದಿ ಕ್ರಾಂತಿನಾಯಕರು ದೇಶದ ವಿವಿಧ ಭಾಗಗಳಲ್ಲಿದ್ದ ಕ್ರಾಂತಿ ಪಂಥದವರನ್ನು[2] 1920ರ ದಶಕದ ಆದಿಭಾಗದಲ್ಲಿ ಒಟ್ಟುಗೂಡಿಸಿ 'ಹಿಂದೂಸ್ತಾನ್ ರಿಪಬ್ಲಿಕನ್ ಸಂಘ' ಮತ್ತು 'ಹಿಂದೂಸ್ತಾನ್ ರಿಪಬ್ಲಿಕನ್ ಸೇನೆ'ಗಳನ್ನು ಸ್ಥಾಪಿಸಿದರು. ಈ ಸಂಘವು 1925ರಲ್ಲಿ ಹೊರಡಿಸಿದ ಪ್ರಣಾಳಿಕೆಯ ಪ್ರಕಾರ ಬ್ರಿಟಿಷರನ್ನು ಸಶಸ್ತ್ರ ಬಲದಿಂದ ಭಾರತದಿಂದ ಓಡಿಸಿ ಸಂಯುಕ್ತ ಸ್ವತಂತ್ರ ಭಾರತ ಸ್ಥಾಪಿಸುವ ಹಾಗೂ ಪರಸ್ಪರ ಶೋಷಣೆ ಇಲ್ಲದ ಸಮಾಜ ನಿರ್ಮಿಸುವ ಉದ್ದೇಶಗಳನ್ನು ಹೊಂದಿದ್ದಿತು.

ಕ್ರಾಂತಿಕಾರರು ವಿವಿಧ ಕೇಂದ್ರಗಳಿಂದ ತಮ್ಮ ಕಾರ್ಯಗಳನ್ನು ನಡೆಸಿದರು. ಶಸ್ತ್ರಾಸ್ತ್ರಗಳ ಸಂಗ್ರಹಣೆಗೂ, ತಮ್ಮ ಇತರ ಕಾರ್ಯಾಚರಣೆಗೂ ಅವಶ್ಯಕವಾದ ಹಣ ಸಂಗ್ರಹಿಸಲು ಇವರು ಲೂಟಿ, ದರೋಡೆಗಳಿಗೂ ಹಿಂಜರಿಯಲಿಲ್ಲ. ಒಮ್ಮೆ ಅಧಿಕ ಮೊತ್ತದ ಹಣವನ್ನು ದೋಚಿ

---

1. ಈತನಿಗೆ 'ಆಜಾದ್' ಎಂಬ ಹೆಸರು ಸೇರಿದುದು ಹೀಗೆ :- 1921ರ ಡಿಸೆಂಬರ್ 26ರಂದು ಕಾಶಿಯಲ್ಲಿ ಬ್ರಿಟಿಷರ ವಿರುದ್ಧದ ಪ್ರತಿಭಟನಾ ಮೆರವಣಿಗೆಯನ್ನು ಚದುರಿಸಲು ಪೋಲೀಸರು ಲಾಠಿಪ್ರಯೋಗ ಮಾಡುತ್ತಾರೆ. ಆಗ ಚಿಕ್ಕ ಬಾಲಕನಾದ ಚಂದ್ರಶೇಖರ ಶರ್ಮ ಎಂಬುವನು ಪೋಲೀಸು ಅಧಿಕಾರಿಯ ಹಣೆಗೆ ಬಲವಾಗಿ ಕಲ್ಲೇಟು ಹೊಡೆದು ತಪ್ಪಿಸಿಕೊಂಡು ಓಡಿಹೋಗುತ್ತಾನೆ. ಪ್ರಯತ್ನಪೂರ್ವಕವಾಗಿ ಪೋಲೀಸರು ಇವನನ್ನು ಹಿಡಿದು ಚಿತ್ರಹಿಂಸೆ ಮಾಡಿ ನಂತರ ನ್ಯಾಯಾಲಯಕ್ಕೆ ಒಪ್ಪಿಸುತ್ತಾರೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರು 'ನಿನ್ನ ಹೆಸರೇನು ?' ಎಂದು ಕೇಳಿದಾಗ, ಆತ ದಿಟ್ಟತನದಿಂದ 'ಆಜಾದ್' ಎಂದು ಉತ್ತರಿಸುತ್ತಾನೆ. ಅಂದಿನಿಂದ ಕಾಶಿಯ ಕಾಂಗ್ರೆಸ್ ನಾಯಕರು ಇವನನ್ನು ಚಂದ್ರಶೇಖರ ಆಜಾದ್ ಎಂದು ಕರೆಯಲಾರಂಭಿಸಿದರು. ಪ್ರಜ್ಞೆಹೀನನಾಗುವವರೆಗೂ ಕೊಟ್ಟ ಛಡಿಏಟುಗಳನ್ನು 'ಭಾರತಮಾತಾ ಕೀ ಜೈ !' 'ಮಹಾತ್ಮ ಗಾಂಧಿ ಕೀ ಜೈ !' ಎಂಬ ಘೋಷಣೆಯೊಡನೆ ಇವನು ಸಹಿಸಿಕೊಳ್ಳುತ್ತಾನೆ.
2. ರಾಜೇಂದ್ರ ಲಾಹಿರಿ, ಠಾಕೂರ್ ರೋಶನಸಿಂಹ, ಭಗವತಿಚರಣ್, ವೈಶಂಪಾಯನ, ಭಗವಾನ್ ದಾಸ್, ಭಗತ್‌ಸಿಂಗ್, ರಾಜಗುರು, ದತ್ತ, ಸುಖದೇವರಾಜ್ ಇತ್ಯಾದಿಯಾಗಿ, ನೂರಾರು ಪ್ರಮುಖ ವ್ಯಕ್ತಿಗಳು ತಂತಮ್ಮ ಬೆಂಬಲಿಗರೊಡನೆ 'ಹಿಂದೂಸ್ತಾನ್ ರಿಪಬ್ಲಿಕನ್ ಸಂಘ' ಸೇರಿದರು.

ಕೊಳ್ಳಲು ರೈಲಿನಲ್ಲಿ ಇದ್ದ ಹಣದ ಸಂದೂಕವನ್ನು ದರೋಡೆಯ ಮೂಲಕ ತಮ್ಮ ವಶಕ್ಕೆ ಸಾಹಸದಿಂದ ತೆಗೆದುಕೊಂಡರು. 1925ರ ಆಗಸ್ಟ್ 9 ರಂದು ಷಹಜಹಾನ್‌ಪುರದಿಂದ ಲಕ್ನೋವಿಗೆ ಹೋಗುತ್ತಿದ್ದ ರೈಲಿನಲ್ಲಿ ಅಶ್ಫಾಕ್ ಉಲ್ಲಾ ಖಾನ್, ಚಂದ್ರಶೇಖರ ಆಜಾದ್ ಮತ್ತು ಇತರ ಕೆಲವರು ಸೇರಿಕೊಂಡು ನಿರ್ಜನ ಪ್ರದೇಶವೊಂದರಲ್ಲಿ ಸರಪಳಿ ಎಳೆದು ರೈಲನ್ನು ನಿಲ್ಲಿಸಿದರು. ರೈಲ್ವೆಗಾರ್ಡನ್ನು, ಎಂಜಿನ್ ಚಾಲಕನನ್ನೂ, ಬೋಗಿಗಳಲ್ಲಿದ್ದ ಪ್ರಯಾಣಿಕರನ್ನೂ ಪಿಸ್ತೂಲು ತೋರಿಸಿ ಹೆದರಿಸಿ, ಗಾರ್ಡ್ ಬೋಗಿಯಲ್ಲಿದ್ದ ಹಣದ ಸಂದೂಕವನ್ನು ಹೊರಗೆ ತಳ್ಳಿ ನಂತರ ರೈಲನ್ನು ಮುಂದೆ ಹೋಗಲು ಬಿಟ್ಟರು. ಇಷ್ಟು ಕೆಲಸವನ್ನು ಕ್ಷಿಪ್ರಗತಿಯಲ್ಲಿ ಮುಗಿಸಿ ದೊರಕಿದ ಹಣವನ್ನು ಶಸ್ತ್ರಾಸ್ತ್ರಗಳಿಗೆ ಉಪಯೋಗಿಸಿದರು. ಚಂದ್ರಶೇಖರ ಆಜಾದ್ ಅವರ ಮಾರ್ಗದರ್ಶನದಲ್ಲಿ ಭಗತ್‌ಸಿಂಗ್ ಹಾಗೂ ಇತರ ಕೆಲವರು ಸೈಮನ್ ಸಮಿತಿಯು ಭಾರತಕ್ಕೆ ಬಂದಾಗ ಅದರ ಸದಸ್ಯರ ಮೇಲೆ ಬಾಂಬು ಎಸೆಯಲು ಪ್ರಯತ್ನಿಸಿದರು. ಲಾಹೋರಿನಲ್ಲಿ 1928ರ ನವೆಂಬರ್‌ನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನವನ್ನು ಚದುರಿಸಲು ಪೋಲೀಸರು ನಡೆಸಿದ ಲಾಠಿ ಪ್ರಹಾರಗಳಿಂದ ಲಾಲಾ ಲಜಪತರಾಯ್ ಎಂಬ ಜನಾದರಣೀಯ ಕ್ರಾಂತಿಕಾರರು ಅಸುನೀಗಿದರು. ಈ ಸಂದರ್ಭದಲ್ಲಿ ಪೋಲೀಸರ ಮೇಲೆ ಸೇಡು ತೀರಿಸಿಕೊಳ್ಳಲು ರಾಜಗುರು ಮತ್ತು ಭಗತ್‌ಸಿಂಗ್ ಅವರು ಸೇರಿ ಸ್ಯಾಂಡರ್ಸ್ ಎಂಬ ಪೋಲೀಸು ಅಧಿಕಾರಿಯನ್ನು 1929ರ ಸೆಪ್ಟೆಂಬರ್ 20 ರಂದು ಗುಂಡಿಕ್ಕಿ ಕೊಂದರು. ಬಟುಕೇಶ್ವರ ದತ್ತ ಮತ್ತು ಭಗತ್‌ಸಿಂಗ್ ಅವರು 1929ರ ಏಪ್ರಿಲ್ 8 ರಂದು ಆಡಳಿತ ಯಂತ್ರಕ್ಕೆ ತಮ್ಮ ವಿರೋಧ ವನ್ನು ಪ್ರದರ್ಶಿಸಲು ಕೇಂದ್ರ ಶಾಸನಸಭೆಯಲ್ಲಿ ಬಾಂಬು ಸ್ಫೋಟಿಸಿದರು. 1929ರ ಡಿಸೆಂಬರ್ 29ರ ಬೆಳಗಿನ ಝಾವ ವೈಸರಾಯ್ ಇರ್ವಿನ್ ಅವರು ರೈಲಿನಲ್ಲಿ ಡೆಲ್ಲಿಗೆ ಪ್ರಯಾಣ ಮಾಡುತ್ತಿದ್ದ ಮಾರ್ಗದಲ್ಲಿ ರೈಲು ಹಳಿಯ ಮೇಲೆ ಸ್ಫೋಟಿಸುವಂತೆ ಬಾಂಬು ಇಟ್ಟಿದ್ದರು. ಬಾಂಬು ವೈಸರಾಯ್ ಇದ್ದ ಡಬ್ಬಿಯ ಕೆಳಗೆ ಸಿಡಿಯುವುದರ ಬದಲಾಗಿ ಅವರ ಆಪ್ತಕಾರ್ಯದರ್ಶಿ ಆಗ ಇದ್ದ ಇನ್ನೊಂದು ಡಬ್ಬಿಯ ಕೆಳಗೆ ಸಿಡಿಯಿತು. ಇಂತಹ ಅನೇಕ ಕಾರ್ಯಗಳು ನಡೆದವು. ಹೀಗೆ ಕ್ರಾಂತಿಕಾರ್ಯಗಳನ್ನು ಮಾಡಿದವರನ್ನು ಸರ್ಕಾರವು ಪತ್ತೆಹಚ್ಚಿ ಅವರ ಮೇಲೆ ಮೊಕದ್ದಮೆಗಳನ್ನು ಹೂಡಿ,

ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆ ವಿಧಿಸುತ್ತಿತ್ತು. ಸಾಮಾನ್ಯವಾಗಿ ಬಹುಮಂದಿ ಕ್ರಾಂತಿಕಾರರು ತಮ್ಮ ಹೋರಾಟದ ಮಧ್ಯೆಯೇ ಹೀಗೆ ಹುತಾತ್ಮರಾದರು. ಭಾರತಮಾತೆಯನ್ನು ಸ್ವತಂತ್ರಗೊಳಿಸಲು ಉನ್ಮತ್ತದೇಶಪ್ರೇಮ, ಸರ್ವತ್ಯಾಗಕ್ಕೂ ಸಿದ್ಧತೆ, ಕಷ್ಟಸಹಿಷ್ಣುತೆ, ಸತತ ಪರಿಶ್ರಮ, ಅಸೀಮ ಸಾಹಸ ಇವೆಲ್ಲವೂ ಈ ಕ್ರಾಂತಿಕಾರರಿಂದ ಪ್ರಕಟಗೊಂಡವು.

ಹೀಗೆ ಕ್ರಾಂತಿಮಾರ್ಗ ಅನುಸರಿಸುತ್ತಿದ್ದವರನ್ನೂ, ಅವರ ಕಾರ್ಯಾಚರಣೆಗಳನ್ನೂ ಮಹಾತ್ಮಾ ಗಾಂಧಿಯವರು 'ಯಂಗ್ ಇಂಡಿಯಾ'ದಲ್ಲಿ ಪ್ರಕಟವಾದ 'ಬಾಂಬಿನ ಪಂಥ' ಎಂಬ ಲೇಖನದಲ್ಲಿ ಉಗ್ರವಾಗಿ ಖಂಡಿಸಿದರು. ಆದರೆ ಕ್ರಾಂತಿಕಾರಿಗಳು ಗಾಂಧೀಜಿಯವರ ವಾದವನ್ನು ಒಪ್ಪಲಿಲ್ಲ. ಗಾಂಧಿಯವರು ಹೇಳಿದಂತೆ ಪ್ರೀತಿಯ ಮೂಲಕ ಹೃದಯ ಪರಿವರ್ತನೆ ಮಾಡಿ ಬ್ರಿಟಿಷರಂತಹ ಶತ್ರುವನ್ನು ಜಯಿಸುವುದು ಅಸಾಧ್ಯ ಎಂಬ ತಮ್ಮ ಪ್ರತಿವಾದವನ್ನು ಚಂದ್ರಶೇಖರ ಆಜಾದ್ ಅವರ ಹೆಸರಿನಲ್ಲಿ ಕ್ರಾಂತಿಕಾರರು ಪ್ರಕಟಿಸಿದ 'ಬಾಂಬಿನ ದರ್ಶನ' ಎಂಬ ಕರಪತ್ರದಲ್ಲಿ ಸಮರ್ಥಿಸಿದರು. ಹೀಗೆ ಗಾಂಧೀಜಿಯವರ ನೇತೃತ್ವದಲ್ಲಿ ವ್ಯಾಪಕವಾಗಿ ದೇಶದ ಆದ್ಯಂತವೂ ನಡೆಯುತ್ತಿದ್ದ ಅಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿಯ ನಡುವೆ ಅಲ್ಲಲ್ಲೇ ಕ್ರಾಂತಿಕಾರರ ಉಗ್ರ ಪ್ರತಿಭಟನಾ ಕಾರ್ಯಗಳೂ ದೇಶದಲ್ಲಿ ನಡೆದವು. ಎರಡನೆ ಮಹಾಯುದ್ಧದ ಕಾಲದಲ್ಲಿ ಕ್ರಾಂತಿಮಾರ್ಗದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಪ್ರತಿಮ ವೀರ ಸುಭಾಷ್‌ಚಂದ್ರ ಬೋಸ್ ಅವರ ಸಾಹಸಮಯ ಪ್ರಯತ್ನಗಳು ಇಂತಹ ಕಾರ್ಯಗಳಲ್ಲಿ ಅತ್ಯಂತ ಮುಖ್ಯವಾದುವು. ಈ ಪ್ರಯತ್ನಗಳ ಸಂಕ್ಷಿಪ್ತ ವಿವರಣೆಯನ್ನು ಕೆಳಗೆ ಕೊಡಲಾಗಿದೆ.

ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ದಿಟ್ಟ ಪ್ರಯತ್ನ

ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ 1942ರ ವರೆಗೆ ಕಾಂಗ್ರೆಸ್ಸಿನ ಅಸಹಕಾರ ಚಳುವಳಿಯಲ್ಲಿ ಪಾತ್ರವಹಿಸಿದ ಸುಭಾಷ್‌ಚಂದ್ರ ಬೋಸ್ ಅವರು 1942–45ರ ಅವಧಿಯಲ್ಲಿ ಅಗ್ರಗಣ್ಯ ಕ್ರಾಂತಿವೀರರಾಗಿ ಬ್ರಿಟಿಷರ ವಿರುದ್ಧ ಸೈನ್ಯ ಕಟ್ಟಿ ಹೋರಾಡಿದರು. ಮಹಾಯುದ್ಧ ಪ್ರಾರಂಭವಾದಾಗಿನಿಂದಲೇ ಬೋಸ್ ಅವರು ಸ್ವಾತಂತ್ರ್ಯ ಚಳುವಳಿಯನ್ನು ಉಗ್ರರೂಪದಲ್ಲಿ

ಕೈಗೊಳ್ಳಲು ಇದು ಸುವರ್ಣ ಅವಕಾಶ ಎಂಬ ವಾದವನ್ನು ಕಾಂಗ್ರೆಸ್ಸಿನ ಮುಂದಿಟ್ಟುದುದನ್ನೂ 'ಫಾರ್ವರ್ಡ್ ಬ್ಲಾಕ್' ಸ್ಥಾಪಿಸಿದುದನ್ನೂ ಗಾಂಧೀಜಿಯವರೊಡನೆ ಇವರು ಹೊಂದಿದ್ದ ಭಿನ್ನಾಭಿಪ್ರಾಯಗಳನ್ನೂ ಮುಂದೆ ಹನ್ನೆರಡನೆಯ ಅಧ್ಯಾಯದಲ್ಲಿ ವಿವರಿಸಲಾಗುವುದು. ಅವರು 1857ರ ಪ್ರಥಮ ಸ್ವಾತಂತ್ರ್ಯಯುದ್ಧದ ವೀರರ ಮೇಲ್ಪಂಕ್ತಿಯನ್ನು ಅನುಸರಿಸಿ 1942 ರಿಂದ ತಮ್ಮದೇ ಒಂದು ಸೈನ್ಯಕಟ್ಟಿ ಬ್ರಿಟಿಷರೊಡನೆ ಹೋರಾಡಿದುದು ಅತ್ಯಂತ ಸಾಹಸಮಯ ಚರಿತ್ರೆಯಾಗಿದೆ.

1941ರ ಜನವರಿ 26ರಂದು ಬೋಸ್ ಅವರು ಭಾರತವನ್ನು ಬಿಟ್ಟು ವೇಷಮರೆಸಿಕೊಂಡು ಕಾಬೂಲು, ಮಾಸ್ಕೊ ಮುಖಾಂತರ ಬರ್ಲಿನ್ ನಗರವನ್ನು 1941ರ ಮಾರ್ಚಿ 25 ರಂದು ತಲುಪಿದರು. ಬ್ರಿಟಿಷ್ ಸಾರ್ವಭೌಮತ್ವವನ್ನು ಅಳಿಸಿ ಭಾರತವನ್ನು ಸ್ವತಂತ್ರಗೊಳಿಸಲು ಜರ್ಮನಿಯ ನಾಜಿ ಹಿಟ್ಲರ್, ಇಟಲಿಯ ಫಾಸಿಸ್ಟ್ ಮುಸೋಲಿನಿ ಮತ್ತು ಜಪಾನಿನ ಸಹಾಯ ಪಡೆಯುವುದೇ ಅವರ ಉದ್ದೇಶವಾಗಿದ್ದಿತು. ಜರ್ಮನಿಯು ಯುದ್ಧದಲ್ಲಿ ವಶಪಡಿಸಿಕೊಂಡಿದ್ದ ಪ್ರದೇಶಗಳಲ್ಲಿ ಇದ್ದ ಭಾರತೀಯರನ್ನು ಸೇರಿಸಿ ಒಂದು ಭಾರತೀಯ ಸೇನೆ ಕಟ್ಟುವ ಬಗ್ಗೆ ಹಿಟ್ಲರ್ ಅವರೊಡನೆ ಬೋಸ್ ಅವರು ಸಮಾಲೋಚನೆ ನಡೆಸಿದರು. 1941ರ ನವೆಂಬರ್‌ನಲ್ಲಿ 'ಆಜಾದ್ ಹಿಂದ್ ರೇಡಿಯೋ' ಕೇಂದ್ರವನ್ನು ಸ್ಥಾಪಿಸಿ, ಈ ಆಕಾಶವಾಣಿಯ ಮೂಲಕ ತಮ್ಮ ಅಭಿಪ್ರಾಯಗಳೆಲ್ಲವನ್ನೂ ಭಾರತದ ಜನತೆಗೆ ಪದೇ ಪದೇ ಬಿತ್ತರಿಸುತ್ತಾ ಬಂದರು. ಅನೇಕ ಭಾರತೀಯರು ಆಸಕ್ತಿಯಿಂದ ಈ ವೀರಘೋಷಣ ವಾಣಿಯನ್ನು ಕೇಳಿ ಪುಲಕಿತರಾದರು.

1942ರ ಮೊದಲ ಕೆಲವು ತಿಂಗಳುಗಳಲ್ಲಿ ಜರ್ಮನಿಯಲ್ಲಿ ಇದ್ದ ಭಾರತೀಯರನ್ನು ಸೇರಿಸಿ "ಸ್ವತಂತ್ರ ಭಾರತ ಸೇನೆಯ" (Free India Legion) ಒಂದು ತಂಡವನ್ನು (Battallion) ವ್ಯವಸ್ಥೆಗೊಳಿಸಿದರು. ಯುದ್ಧದಲ್ಲಿ ಸೆರೆಸಿಕ್ಕಿಬಿದ್ದ ಭಾರತೀಯ ಸೈನಿಕರನ್ನು ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿದರು. 1942ರ ಏಪ್ರಿಲ್ ತಿಂಗಳಲ್ಲಿ "ಸ್ವತಂತ್ರ ಭಾರತ ಕೇಂದ್ರ" (Free India Centre) ಎಂಬ ಕಛೇರಿಯನ್ನು ಸ್ಥಾಪಿಸಿ ಈ ಕೇಂದ್ರದಲ್ಲಿ ಸ್ವತಂತ್ರವಾಗಿ ಕಾರ್ಯಾಚರಣೆಗಳ ರೀತಿನೀತಿಗಳ ಬಗ್ಗೆ ಇತರ

ಸಹೋದ್ಯೋಗಿಗಳೊಡನೆ ಚರ್ಚಿಸಿ ಯೋಜನೆಗಳನ್ನು ಸಿದ್ಧಪಡಿಸಿದರು. ಜರ್ಮನಿಯಲ್ಲಿ ಬೋಸ್ ಅವರು ವ್ಯವಸ್ಥೆಗೊಳಿಸಿದ ಸೇನೆಯಲ್ಲಿ 3500 ಸೈನಿಕರು ಇದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ಅಲ್ಲಿ ಕಷ್ಟಪಟ್ಟು ಬ್ರಿಟಿಷರ ವಿರುದ್ಧ ಅವರು ಹೋರಾಡಿದರು. ಆದರೆ ಈ ಸೇನೆಯ ಗಾತ್ರದಿಂದ ಬೋಸ್ ಅವರಿಗೆ ತೃಪ್ತಿಯಾಗಲಿಲ್ಲ. ಏಷ್ಯಾದಲ್ಲಿ ಜಪಾನು ಆಕ್ರಮಿಸಿರುವ ಪ್ರದೇಶಗಳಲ್ಲಿ ಹೆಚ್ಚು ಭಾರತೀಯ ಸೈನಿಕರನ್ನು ಜಮಾಯಿಸಬಹುದೆಂದು ಅವರು ಆಲೋಚಿಸಿ, ಜರ್ಮನಿಯು ಅವರಿಗೆ ಒದಗಿಸಿದ ಜಲಾಂತರ್ಗಾಮಿ ನೌಕೆಯೊಂದರಲ್ಲಿ (Submarine) ಅವರು ದೂರ ಪ್ರಾಚ್ಯಕ್ಕೆ ತೆರಳಿದರು.

ದೂರ ಪ್ರಾಚ್ಯಕ್ಕೆ ಹೋದ ಬೋಸ್ ಅವರು ಜಪಾನ್ ಸರ್ಕಾರದೊಡನೆ ಒಂದು ಒಪ್ಪಂದ ಮಾಡಿಕೊಂಡು "ಆಜಾದ್ ಹಿಂದ್ ಫೌಜ್" ಎಂಬ ಹೆಸರಿನ ಭಾರತದ ರಾಷ್ಟ್ರೀಯ ಸೇನೆಯನ್ನು ವ್ಯವಸ್ಥೆಗೊಳಿಸಿದರು. ಮಲಯಾ ಪರ್ಯಾಯದ್ವೀಪವನ್ನು ಜಪಾನಿಯರು ವಶಪಡಿಸಿಕೊಂಡಾಗ ಸೆರೆಸಿಕ್ಕಿದ ಭಾರತೀಯ ಸೈನಿಕರನ್ನು ಈ 'ಆಜಾದ್ ಹಿಂದ್ ಫೌಜ್'ಗೆ ಸೇರಿಸಿಕೊಳ್ಳಲಾಯಿತು. ಈ ಸೇನೆಯು ಭಾರತಕ್ಕೆ ಬಂದು ಭಾರತದಲ್ಲಿನ ಬ್ರಿಟಿಷ್ ಸೇನೆಯೊಡನೆ ಯುದ್ಧಮಾಡಲಾರಂಭಿಸಿದಾಗ ಬ್ರಿಟಿಷ್ ಸೇನೆಯ ಭಾರತೀಯರೂ ಬ್ರಿಟಿಷರ ವಿರುದ್ಧ ತಮ್ಮ ಸೇನೆಯನ್ನು ಸೇರುವರೆಂದೂ, ಜನತೆಯೂ ಈ ಸೇನಾ ಕಾರ್ಯಾಚರಣೆಗೆ ಬೆಂಬಲ ನೀಡುವುದೆಂದೂ ಬೋಸ್ ಅವರು ನಿರೀಕ್ಷಿಸಿದ್ದರು. ಇದರಿಂದ ಭಾರತದಲ್ಲಿನ ಬ್ರಿಟಿಷ್ ಸರ್ಕಾರ ಕುಸಿದು ಬೀಳುವುದೆಂದೂ ಆಗ ಭಾರತವು ತನ್ನದೇ ಆದ ಸ್ವತಂತ್ರ ಸರ್ಕಾರವನ್ನು ರಚಿಸಬಹುದೆಂದೂ ಅವರು ಆಲೋಚಿಸಿದ್ದರು. ಈ ದೃಷ್ಟಿಯಿಂದ ಸಿಂಗಪುರದಲ್ಲಿ 'ಸ್ವತಂತ್ರ ಭಾರತದ ತಾತ್ಕಾಲಿಕ ಸರ್ಕಾರ'ವನ್ನು 1942ರ ಅಕ್ಟೋಬರ್ 21ರಂದು ಬೋಸ್ ಅವರು ಸ್ಥಾಪಿಸಿದರು. ಅವರೇ ಈ ಸರ್ಕಾರದ ರಾಜಕೀಯ ಹಾಗೂ ಮಿಲಿಟರಿ ಮುಖ್ಯಾಧಿಕಾರಿಯಾದರು. ಅವರು ತಮ್ಮ ಸೈನಿಕರಿಗೆ 'ಜೈ ಹಿಂದ್'[1] (Victory for India) ಎಂಬ ರಣಗರ್ಜನೆಯನ್ನು ಧ್ಯೇಯಮಂತ್ರವಾಗಿ ಉಪದೇಶಿಸಿದರು. ಜಪಾನೀ

---

1. ಸಾಮಾನ್ಯವಾಗಿ ಅನೇಕ ಸಂದರ್ಭಗಳಲ್ಲಿ ನಾವು 'ಜೈ ಹಿಂದ್' ಎಂದು ಹೇಳುವ ಇಂದಿನ ರೂಢಿಯ ಮೂಲವನ್ನು ಇಲ್ಲಿ ಕಾಣಬಹುದು.

ಸೈನಿಕರೊಡನೆ ಸೇರಿಕೊಂಡು 'ಆಜಾದ್ ಹಿಂದ್ ಫೌಜ್' ಸೈನಿಕರು ಭಾರತಕ್ಕೆ ಸ್ವಾತಂತ್ರ್ಯ ಗಳಿಸುವ ಸ್ಫೂರ್ತಿಯಿಂದ ದಿಟ್ಟತನದಿಂದ ಬ್ರಿಟಿಷರ ಮೇಲೆ ಹೋರಾಡಿದರು. ಆದರೆ 1945ರ ಏಪ್ರಿಲ್‌ನಲ್ಲಿ ಜಪಾನು ಶರಣಾಗತಿ ಯಾಗಬೇಕಾದ ಪರಿಸ್ಥಿತಿ ಒದಗಿಬಂದಿತು. ಇದರೊಡನೆ ಬೋಸ್ ಅವರ ಯೋಜನೆಯೂ ಕುಸಿಯಿತು. ನೇತಾಜಿಯವರು ಒಂದು ವಿಮಾನ ಅಪಘಾತದಲ್ಲಿ ಫಾರ್ಮೋಸಾ ಬಳಿ ಸಾವಿಗೀಡಾದರೆಂಬ ದುಃಖವಾರ್ತೆಯನ್ನು ಟೋಕಿಯೋದಿಂದ ಜಪಾನ್ ಸರ್ಕಾರವು ರೇಡಿಯೋ ಮೂಲಕ ಬಿತ್ತರಿಸಿತು. ಹೀಗೆ ನಮ್ಮ ಸ್ವಾತಂತ್ರ್ಯಯೋಧರಲ್ಲಿ ಅಗ್ರಗಣ್ಯ ವ್ಯಕ್ತಿಯೊಬ್ಬರು ಭಾರತವು ಸ್ವತಂತ್ರವಾಗುವುದಕ್ಕೆ ಮುಂಚೆಯೇ ದುರಂತ ಅಪಘಾತದಿಂದ ಕಣ್ಮರೆ ಯಾದರು. ಅತ್ಯಂತ ಪ್ರತಿಭಾಶಾಲಿ ವ್ಯಕ್ತಿಯೊಬ್ಬರ ಸೇವೆ ಸ್ವತಂತ್ರ ಭಾರತಕ್ಕೆ ಇಲ್ಲದಂತಾಯಿತು.

ಮೀರತ್ ಪಿತೂರಿ ಕೇಸು[1]

1929ರ ಮಾರ್ಚಿ ತಿಂಗಳಲ್ಲಿ ನಡೆದ ಮೀರತ್ ಪಿತೂರಿ ಕೇಸು ಎಂದು ಪ್ರಸಿದ್ಧವಾದ ಖಟ್ಲೆಯಲ್ಲಿ ಒಟ್ಟು 32 ಮುಖಂಡರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಅವರ ಮೇಲೆ ದಾವೆ ಹೂಡಿತು. ಇವರ ಪೈಕಿ ಆಂಗ್ಲೇಯರಾದ ಫಿಲಿಪ್ ಸ್ಪ್ರಾಟ್, ಬೆಂಜಮಿನ್ ಫ್ರಾನ್ಸಿಬ್ರಾಡ್ಲಿ, ಹಚಿನ್‌ಸನ್ ಅವರೂ, ಭಾರತೀಯರಲ್ಲಿ ಎಸ್. ಎ. ಡಾಂಗೆ, ಶೌಕತ್ ಉಸ್ಮಾನ್, ಮುಜಾಫರ್ ಅಹ್ಮದ್ ಮುಂತಾದವರು ಪ್ರಮುಖರು. ಕೋರ್ಟು ವಿಚಾರಣೆ ನಾಲ್ಕು ವರ್ಷಗಳವರೆಗೆ ನಡೆದು ಇವರಿಗೆ ಶಿಕ್ಷೆ ವಿಧಿಸಲಾಯಿತು.

ಚಿತ್ತಗಾಂಗ್ ಬಂಡಾಯ[1]

ಚಿತ್ತಗಾಂಗಿನ ಕ್ರಾಂತಿಯೋಧರ ರೋಮಾಂಚಕ ವೀರಗಾಥೆ ಸ್ಮರಣೀಯ.ಆಚಾರ್ಯ ಸೂರ್ಯಸೇನ್ ಹಳ್ಳಿಯ ಶಾಲೆಯೊಂದರಲ್ಲಿ ಶಿಕ್ಷಕ. ಜನಪ್ರಿಯ ಹೆಸರು 'ಮಾಸ್ತರ್‌ದಾ'. ಚಿತ್ತಗಾಂಗಿನ ನೋವಾಪಾರಾದಲ್ಲಿ 1893ರಲ್ಲಿ ಇವರ ಜನನ. ಹಿಂದುಸ್ಥಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿಯಲ್ಲಿ ಸಕ್ರಿಯ ಪಾತ್ರ ವಹಿಸಿದರು.

---

1. ಜ್ಞಾನಗಂಗೋತ್ರಿ. ಭಾರತದ ಕಥೆ, ಸಂಪುಟ-7, ಪುಟ 664.

1930ರ ಏಪ್ರಿಲ್ 18ರಂದು ರಾತ್ರಿ 9-30 ರಿಂದ 10-30ರ ವರೆಗಿನ ಸಮಯ; ದೇಶಭಕ್ತರಾದ 51 ತರುಣರ ಒಂದು ಗುಂಪು ಚಿತ್ತಗಾಂಗಿನಲ್ಲಿದ್ದ (ಈಗ ಬಾಂಗ್ಲಾದೇಶದಲ್ಲಿದೆ) ಬ್ರಿಟಿಷರ ಶಸ್ತ್ರಾಗಾರಕ್ಕೆ ಬಲವಾದ ಮುತ್ತಿಗೆ ಹಾಕಿ ಶಸ್ತ್ರಾಸ್ತ್ರಗಳನ್ನು ಲೂಟಿಮಾಡಿತು. ಟೆಲಿಫೋನು ಸಂಪರ್ಕ ಕಿತ್ತು ಹಾಕಿತು; ರೈಲು ಹಳಿ ಸಡಿಲಿಸಿತು.

ಸುಮಾರು ಮೂರು ವರ್ಷಗಳ ಕಾಲ 'ಮಾಸ್ಟರ್‌ದಾ' ಬ್ರಿಟಿಷರ ವಿರುದ್ಧ ಹೋರಾಡಿದರು. 1923 ಡಿಸೆಂಬರ್ 23 ರಂದು ಪಹರ್‌ಲಿಯ ರೈಲ್ವೇ ನಿಲ್ದಾಣದ ಕಚೇರಿಯ ಮೇಲೆ ಧಾಳಿ, ಅಸ್ಸಾಮಿನ ಚಹತೋಟಗಳಲ್ಲಿ ಅಲ್ಲಲ್ಲಿ ಕ್ರಾಂತಿಕಾರಿಗಳ ಕೇಂದ್ರಗಳ ಸ್ಥಾಪನೆ, 1930 ಏಪ್ರಿಲ್ 22 ರಂದು ಜಲಾಲಾಬಾದ್ ಗುಡ್ಡದ ಮೇಲೆ ಬ್ರಿಟಿಷ್ ಸೈನಿಕರ ವಿರುದ್ಧ ನಡೆದ ಹೋರಾಟ, ಇವೇ ಮುಂತಾದ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ 'ಮಾಸ್ಟರ್‌ದಾ' ಅವರು ಮುಖ್ಯ ಪಾತ್ರ ವಹಿಸಿದರು. ಕೊನೆಗೆ ಗೋಯಿರಾಲಾ ಗ್ರಾಮದಲ್ಲಿದ್ದಾಗ 1933ರ ಫೆಬ್ರವರಿ 16 ರಾತ್ರಿ ಸರ್ಕಾರಿ ಸೇನೆಯ ಜೊತೆಗೆ ಹೋರಾಡುತ್ತಿದ್ದಾಗಲೇ ಬಂಧನಕ್ಕೊಳಗಾದರು. ಆಗಸ್ಟ್ 14 ರಂದು ನ್ಯಾಯಾಲಯ ಅವರಿಗೆ ಮರಣದಂಡನೆ ವಿಧಿಸಿತು. 1934 ಜನವರಿ 11ರಂದು ಸೂರ್ಯಸೇನರು ಚಿತ್ತಗಾಂಗ್ ಜೈಲಿನಲ್ಲಿ ಗಲ್ಲಿಗೇರಿಸಲ್ಪಟ್ಟರು. ಚಿತ್ತಗಾಂಗ್ ಪ್ರಕರಣದಲ್ಲಿ ಸೂರ್ಯಸೇನರ ಆದರ್ಶದಲ್ಲಿ ಸಾಗಿ ಅನೇಕ ಮಂದಿ ಬಲಿದಾನ ಮಾಡಿದರು.

❖❖❖

ಅಧ್ಯಾಯ - 7

ಕಾಂಗ್ರೆಸ್ ನೇತೃತ್ವದ ಚಳುವಳಿ – 1919 ರವರೆಗೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಾಂತಿಕಾರಿಗಳು ವಹಿಸಿದ ಪಾತ್ರವನ್ನು ಸಂಕ್ಷಿಪ್ತವಾಗಿ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು ಸಶಸ್ತ್ರ ಆಂದೋಲನದಲ್ಲಿ ನಂಬಿಕೆ ಇಲ್ಲದ ಕಾಂಗ್ರೆಸ್ಸು ನೈತಿಕ ಬಲದ ಆಧಾರದ ಮೇಲೆ ಅಹಿಂಸಾತ್ಮಕವಾಗಿ ನಡೆಸಿದ ಚಳುವಳಿಯನ್ನು ಕುರಿತು ಈ ಅಧ್ಯಾಯದಲ್ಲಿ 1919 ರವರೆಗಿನ ಇತಿಹಾಸವನ್ನೂ, ಮುಂದಿನ ಅಧ್ಯಾಯ ಗಳಲ್ಲಿ 1920–1947ರ ಅವಧಿಯ ಸ್ವಾತಂತ್ರ್ಯ ಚಳುವಳಿಯನ್ನೂ ವಿವರಿಸ ಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು 1885 ರಲ್ಲಿ ಸ್ಥಾಪಿಸಲ್ಪಟ್ಟಿತು. ಸ್ವಾತಂತ್ರ್ಯ ಸಾಧನೆಯ ಚಳುವಳಿಯಲ್ಲಿ ಅಗ್ರ ಪಾತ್ರ ವಹಿಸಿದ ಈ ರಾಷ್ಟ್ರೀಯ ಸಂಸ್ಥೆಯು ಏಕ್‌ದಂ ಬ್ರಿಟಿಷರ ವಿರುದ್ಧ ಚಳುವಳಿ ಮಾರ್ಗ ಹಿಡಿಯಲಿಲ್ಲ. ಮೊದಲ ಹಂತದಲ್ಲಿ (1885-1905) ಕಾಂಗ್ರೆಸ್ ಮುಖಂಡರುಗಳು ಬ್ರಿಟಿಷರ ನ್ಯಾಯಪರತೆ ಹಾಗೂ ಧರ್ಮಗಳಲ್ಲಿ ನಂಬಿಕೆ ಇಟ್ಟಿದ್ದರು. ಮೊದಲು ಗಣ್ಯ ಆಂಗ್ಲವ್ಯಕ್ತಿ ಗಳೇ ಈ ಸಂಸ್ಥೆಯ ನಾಯಕತ್ವದಲ್ಲಿದ್ದರು. ಕಾಂಗ್ರೆಸ್ ಸ್ಥಾಪನೆಗೆ ಪ್ರಥಮ ಪ್ರಯತ್ನಮಾಡಿ ಅದನ್ನು ಸ್ಥಾಪಿಸಿದ ಆಂಗ್ಲೇಯ ಹ್ಯೂಮ್ ನಂತರ ಆಂಡ್ರೂ ಯೂಲ್ (1888), ವೆಡರ್ ಬರ್ನ್ (1889), ಆಲ್‌ಫ್ರೆಡ್ ವೆಬ್ (1894) ಎಂಬ ಪ್ರಮುಖ ಆಂಗ್ಲೇಯರು ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನಗಳ ಅಧ್ಯಕ್ಷ ರಾಗಿದ್ದರು. ಬ್ರಿಟನ್ನಿನ ಹೌಸ್ ಅಫ್ ಕಾಮನ್ಸಿನ ಸದಸ್ಯರಾಗಿದ್ದ

ಭಾರತೀಯ ದಾದಾಭಾಯಿ ನವರೋಜಿಯವರು 1886, 1893 ಮತ್ತು 1906ರ ಅಧಿವೇಶನಗಳ ಅಧ್ಯಕ್ಷರಾಗಿದ್ದರು. ಇವರುಗಳ ಹಾಗೂ ಇತರ ನಾಯಕರ[1] ನಿರ್ದೇಶನದಲ್ಲಿ ಭಾರತದ ಕಷ್ಟಗಳನ್ನು ಪರಿಹರಿಸುವಂತೆ ಬ್ರಿಟಿಷ್ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಯಿತು. ಇದರ ಜೊತೆಗೆ ಈ ಸಂಸ್ಥೆಯು ರಾಷ್ಟ್ರೀಯ ಐಕ್ಯತೆ, ರಾಷ್ಟ್ರ ಸ್ವಾತಂತ್ರ್ಯ ಭಾವನೆ, ರಾಷ್ಟ್ರೀಯತೆ ಇತ್ಯಾದಿಗಳ ಬಗ್ಗೆ ಭಾರತದ ವಿವಿಧ ಭಾಗಗಳ ಜನರಲ್ಲಿ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಮಾಡಿತು. ಇದು ಮುಖ್ಯವಾದ ಕೆಲಸವೆಂದು ಹೇಳಬಹುದು.

1906ರ ನಂತರ ಕಾಂಗ್ರೆಸ್ಸಿನ ನೀತಿಯಲ್ಲಿ ಬದಲಾವಣೆಯಾಯಿತು. ಅನೇಕ ಬಾರಿ ಸಲ್ಲಿಸಲಾದ ಕೇವಲ ಮನವಿಗಳಿಂದ ಹಾಗೂ ಪ್ರಾರ್ಥನೆಗಳಿಂದ ಬ್ರಿಟಿಷ್ ಸರ್ಕಾರವು ಭಾರತದ ಹಿತರಕ್ಷಣೆಗಾಗಿ ಯಾವ ಕ್ರಮಗಳನ್ನೂ ಕೈಗೊಳ್ಳದುದರಿಂದ ಕಾಂಗ್ರೆಸ್ ಮುಖಂಡರಿಗೆ ನಿರಾಶೆಯಾಯಿತು. ಚಳುವಳಿ ಹೂಡದೆ ಬ್ರಿಟಿಷ್ ಸರ್ಕಾರವನ್ನು ತನ್ನ ಕೇಳಿಕೆಗಳಿಗೆ ಒಪ್ಪಿಸಲು ಆಗುವುದಿಲ್ಲವೆಂಬುದು ಈ ಮುಖಂಡರಿಗೆ ಆಗ ಮನವರಿಕೆಯಾಯಿತು. ಈ ಭಾವನೆ ಬೆಳೆಯಲು ಆ ಕಾಲದ ಕೆಲವು ಘಟನೆಗಳು ಕಾರಣವಾದವು. ಇವುಗಳಲ್ಲಿ ಮುಖ್ಯವಾದವು ಇವು:

1. 1893 ರಲ್ಲಿ ಬ್ರಿಟಿಷ್ ಸರ್ಕಾರವು ಅನುಮೋದಿಸಿದ (ನೆಯ ಅಧ್ಯಾಯದಲ್ಲಿ ವಿವರಿಸಲಾದ)'ಭಾರತೀಯ ಕೌನ್ಸಿಲ್ ಮಸೂದೆಯು' ಸೌಮ್ಯವಾದಿಗಳನ್ನು (Moderates) ತೃಪ್ತಿಪಡಿಸಲಿಲ್ಲ.
2. ಮನವಿಗಳನ್ನು ಸಲ್ಲಿಸುವುದು, ಬೇಡಿಕೆಗಳ ಬಗ್ಗೆ ಪ್ರಾರ್ಥನೆಮಾಡುವ ಕ್ರಮಗಳನ್ನು ಭಾರತೀಯರ ದೌರ್ಬಲ್ಯದ ಚಿಹ್ನೆಗಳೆಂದು ಬ್ರಿಟಿಷರು ತಿಳಿದಿದ್ದಾರೆಂಬುದು ಭಾರತದ ನಾಯಕರಿಗೆ ಗೊತ್ತಾಯಿತು. "ರಾಜಕೀಯ ಹಕ್ಕುಗಳನ್ನು ಗಳಿಸಲು ಹೋರಾಡಬೇಕು....ಬಲವಾದ

---

1. ಇತರ ಈ ಕೆಲವು ನಾಯಕರ ಪರಿಚಯದ ಬಗೆಗೆ, ನೋಡಿ, Pattabhi Sitaramayya, *The History of the Congress*, Published by the Congress Working Committee, 1935, ch-VI – Our Indian Patriarchs, PP 138–195.

ಒತ್ತಡದಿಂದ ಮಾತ್ರವೇ ಇವುಗಳನ್ನು ಪಡೆಯಬಹುದು" ಎಂದು ಬಾಲಗಂಗಾಧರ ತಿಲಕರು ಹೇಳಿದುದು ಕಾಂಗ್ರೆಸ್ಸಿಗರ ಬದಲಾಯಿಸಿದ ಮನೋಭಾವವನ್ನು ಸೂಚಿಸುವುದು.

3. ಅನೇಕ ದಶಕಗಳಿಂದ ಬ್ರಿಟಿಷರು ಭಾರತೀಯರನ್ನು ಶೋಷಣೆ ಮಾಡಿದುದರ ಪರಿಣಾಮಗಳು ಹೆಚ್ಚುಹೆಚ್ಚಾಗಿ ಪ್ರಕಾಶವಾದವು. ಆರ್. ಸಿ. ದತ್, ದಾದಾಭಾಯಿ ನವರೋಜಿ, ದಿನ್‌ಷಾ ಇ. ವಾಚ ಇವರುಗಳು ಈ ಪರಿಣಾಮಗಳನ್ನು ಕುರಿತು ಬರೆದು ಪ್ರಕಟಿಸಲಾದ ವಿದ್ವತ್ಪೂರ್ಣಿತ ಗ್ರಂಥಗಳು ಭಾರತವನ್ನು ಬ್ರಿಟಿಷರು ಶೋಷಣೆ ಮಾಡುತ್ತಿದ್ದ ವಿವಿಧ ಮಾರ್ಗಗಳನ್ನು ಅಂಕಿಅಂಶಗಳೊಡನೆ ವಿವರಿಸಿದವು. 'ಭಾರತವನ್ನು ಬರಿದು ಮಾಡುವ ಸಿದ್ಧಾಂತ' (Drain Theory) ಎಂದು ಪ್ರಚಾರವಾದ ಸಿದ್ಧಾಂತವೊಂದು ಬ್ರಿಟಿಷರ ಶೋಷಣೆಗಳ ಆಧಾರದ ಮೇಲೆ ರಚಿಸಲ್ಪಟ್ಟಿತು.

4. 1892ರಲ್ಲಿ ದೇಶದಲ್ಲಿ ವ್ಯಾಪಕವಾದ ಘೋರ ಕ್ಷಾಮವು ಪ್ರಾಪ್ತವಾಗಿ ಲಕ್ಷಾಂತರ ಜನರು ಆಹಾರವಿಲ್ಲದೆ, ರೋಗರುಜಿನಗಳಿಂದ ನರಳುವ ವಿಷಮ ಪರಿಸ್ಥಿತಿಯುಂಟಾಯಿತು. ಇಂತಹ ದುರದೃಷ್ಟ ಹಾಗೂ ದಾರುಣ ಪರಿಸ್ಥಿತಿಯಲ್ಲಿ ಸರ್ಕಾರವು ವಿಕ್ಟೋರಿಯಾ ಮಹಾರಾಣಿಯವರ ಜೂಬಿಲಿ ಸಮಾರಂಭಕ್ಕಾಗಿ ಹೇರಳವಾಗಿ ವೆಚ್ಚ ಮಾಡುತ್ತಿತ್ತು. ಜನರ ದುಃಖಗಳ ಬಗ್ಗೆ ಸರ್ಕಾರದ ಉಪೇಕ್ಷೆಯನ್ನು ಇದು ಸ್ಪಷ್ಟವಾಗಿ ಸೂಚಿಸುವಂತಿತ್ತು.

5. ಬೊಂಬಾಯಿ ಪ್ರಾಂತ್ಯದಲ್ಲಿ ಪ್ಲೇಗು ಜಾಡ್ಯ ಎಲ್ಲಾ ಕಡೆಯೂ ಹರಡುತ್ತಿದ್ದುದನ್ನು ಎದುರಿಸಲು ಸರ್ಕಾರವು ಪ್ಲೇಗ್ ಕಮೀಷನರ್ ಎಂಬ ಮೇಲಧಿಕಾರಿಯನ್ನು ನೇಮಿಸಿತು. ಈತನು ಅನುಸರಿಸಿದ ನೀತಿ ಸ್ವಲ್ಪ ವಿಚಿತ್ರವಾಗಿದೆ. ಪ್ಲೇಗಿನ ಜಾಡ್ಯದ ಮೂಲವನ್ನು ಕಿತ್ತುಹಾಕುವುದಕ್ಕಾಗಿ ಪ್ಲೇಗು ಹಿಡಿದಿದ್ದ ಮನೆಗಳನ್ನು ಕೆಡವಿಸುವುದು, ಪ್ಲೇಗು ಉಂಟಾಗಿದ್ದವರ ಮನೆಗಳ ಜನರ ಹಾಸಿಗೆಗಳನ್ನೂ, ಬಟ್ಟೆಗಳನ್ನೂ ಸುಡಿಸುವುದು, ಇಂತಹ ಕಾರ್ಯಗಳನ್ನು ಬಿರುಸಿನಿಂದ ಈ ಅಧಿಕಾರಿಯು ನಡೆಸಿದನು. ಆದರೆ ಇದರಿಂದ ನಿರ್ಗತಿಕರಾದವರಿಗೆ

ಜೇರಿ ವಸತಿ, ಉಡುಪುಗಳ ಬಗ್ಗೆ ಯಾವ ವ್ಯವಸ್ಥೆಯನ್ನೂ ಇವರು ಮಾಡಲಿಲ್ಲ. ಈ ವಿಧದ ಸರ್ಕಾರದ ಪ್ಲೇಗ್ ನೀತಿಯನ್ನು ಎಲ್ಲಾ ಮುಖಂಡರುಗಳು ಖಂಡಿಸಿದರು.

6. ವೈಸ್‌ರಾಯ್ ಲಾರ್ಡ್ ಕರ್ಜನ್ ಅವರು ಅನುಸರಿಸಿದ ಭಾರತ ವಿರೋಧಿ ನೀತಿ ಹಾಗೂ ಕ್ರಮಗಳು ಭಾರತೀಯರಲ್ಲಿ ತೀವ್ರ ಅತೃಪ್ತಿಯುಂಟುಮಾಡಿದವು. ಇವುಗಳಲ್ಲಿ ಮುಖ್ಯವಾದುದು 1905 ರಲ್ಲಿ ಬಂಗಾಳವನ್ನು ಮುಸ್ಲಿಂ ಹಾಗೂ ಹಿಂದೂ ಜನರ ಬಹುಮತದ ಆಧಾರದ ಮೇಲೆ ಇಬ್ಭಾಗಮಾಡಿದುದು. ಮುಸಲ್ಮಾನರೇ ಬಹುಮತವಿರುವ ಪ್ರತ್ಯೇಕ ಪ್ರಾಂತ್ಯ ನಿರ್ಮಿಸುವ ಈ ಕುತಂತ್ರದಿಂದ ಅಲ್ಲಿನ ಜನರು ಚಳುವಳಿ ಮಾರ್ಗ ಹಿಡಿಯಬೇಕಾಯಿತು. ಬಂಗಾಳದ ವಿಭಜನೆಯ ವಿರುದ್ಧ ಹೋರಾಡಿದ ಚಳುವಳಿಗಾರರು ಬಂಕಿಂಚಂದ್ರರು ರಚಿಸಿದ್ದ 'ವಂದೇ ಮಾತರಂ'[1] ಗೀತೆಯನ್ನು ಸ್ಫೂರ್ತಿ ಗೀತೆಯಾಗಿ ಹಾಡುತ್ತಿದ್ದುದರಿಂದ ಈ ಚಳುವಳಿಯನ್ನು 'ವಂದೇ ಮಾತರಂ ಚಳುವಳಿ'ಯೆಂದು ವರ್ಣಿಸಲಾಗಿದೆ. ವಿಭಜನೆ ರದ್ದಾಗುವವರೆಗೂ ಈ ಚಳುವಳಿ ಮುಂದುವರಿಯಿತು.

7. 1904ರಲ್ಲಿ ಸರ್ಕಾರವು 'ಅಧಿಕೃತ ರಹಸ್ಯಗಳ ಮಸೂದೆ'ಯನ್ನು (Official Secrets Act) ಜಾರಿಗೆ ತಂದಿತು. ಇದರ ಪ್ರಕಾರ 'ಅಧಿಕೃತ ರಹಸ್ಯಗಳು' ಎಂಬುದರ ವ್ಯಾಪ್ತಿಗೆ ಬರುವ ವಿಷಯಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು ಮತ್ತು 'ರಾಜದ್ರೋಹ' ಎಂಬ ಪದದ ವ್ಯಾಖ್ಯೆಯನ್ನು ತಿದ್ದಿ ಇದರ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಇದರಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದ್ದ ಜನರನ್ನು ಬಂಧಿಸಲು ಸರ್ಕಾರದ ಅಧಿಕಾರವನ್ನು ಹೆಚ್ಚಿಸಿದಂತಾಯಿತು.

8. ವಿಶ್ವವಿದ್ಯಾನಿಲಯಗಳ ಮೇಲೆ ತನ್ನ ನಿಯಂತ್ರಣಾಧಿಕಾರವನ್ನು ರಕ್ಷಿಸಿಕೊಳ್ಳುವ ಸಲುವಾಗಿ 1904 ರಲ್ಲಿ ಸರ್ಕಾರವು ಭಾರತೀಯ ವಿಶ್ವವಿದ್ಯಾನಿಲಯಗಳ ಮಸೂದೆಯನ್ನು ಜಾರಿಗೆ ತಂದಿತು. ಇದರ

---

1. 'ವಂದೇ ಮಾತರಂ' ಗೀತೆಯ ಪೂರ್ಣ ಪಾಠವನ್ನು ಕೊನೆಯಲ್ಲಿ ಕೊಡಲಾಗಿದೆ.

ಪ್ರಕಾರ ವಿಶ್ವವಿದ್ಯಾನಿಲಯಗಳ ಮುಖ್ಯ ಸ್ಥಾನಗಳಿಗೆ ಹೆಚ್ಚಾಗಿ ಐರೋಪ್ಯರನ್ನು ನೇಮಿಸಲಾಯಿತು.

9. ಬ್ರಿಟಿಷ್ ವಸಾಹತುಗಳಲ್ಲಿ, ಮುಖ್ಯವಾಗಿ ದಕ್ಷಿಣ ಆಫ್ರಿಕಾದಲ್ಲಿ ಇದ್ದ ಭಾರತೀಯರನ್ನು ಬಿಳಿಯರು ಕೀಳಾಗಿ ನೋಡಿಕೊಳ್ಳುತ್ತಿದ್ದುದರ ಬಗ್ಗೆ ಭಾರತೀಯರಲ್ಲಿ ಅಸಮಾಧಾನ ಉಂಟಾಯಿತು.

10. ಕೆಲವು ಮುಖಂಡರು ಉಗ್ರವಾದಿಗಳಾಗಲು ಅಂತರರಾಷ್ಟ್ರೀಯ ರಂಗದಲ್ಲಿ ಸ್ವಾತಂತ್ರ್ಯ ಚಳುವಳಿಗಳ ಬಗ್ಗೆ ಇದ್ದ ಕೆಲವು ಅನುಭವಗಳ ಪಾಠಗಳು ಇನ್ನೊಂದು ಕಾರಣವಾಗಿದ್ದಿತು. ಉದಾಹರಣೆಗೆ, ಇಟಲಿಯ ಕ್ರಾಂತಿಕಾರಿ ಮ್ಯಾಜಿನಿ (Mazzini), ಫ್ರಾನ್ಸಿನ ಕ್ರಾಂತಿ ಕುರಿತು ಬರೆದಿದ್ದ ಎಡ್ಮಂಡ್ ಬರ್ಕ್ (Edmund Burke) ಇವರುಗಳ ಪ್ರಭಾವವನ್ನು ಆ ಕಾಲದ ಅನೇಕ ಕ್ರಾಂತಿವೀರರ ಮೇಲೆ ಕಾಣಬಹುದು. ಮ್ಯಾಜಿನಿಯ ಜೀವನಚರಿತ್ರೆ ಬರೆದ ಲಜಪತ್‌ರಾಯ್, ಮ್ಯಾಜಿನಿಯ ಬೋಧೆಗಳನ್ನು ಅನುಸರಿಸಿ ಮಾತೃಭೂಮಿಗೆ ಸೇವೆ ಸಲ್ಲಿಸುವುದಾಗಿ ತಾವೇ ಹೇಳಿರುತ್ತಾರೆ.[1] ವಿ. ಡಿ. ಸಾವರ್‌ಕರ್ ಅವರು ಮ್ಯಾಜಿನಿಯ ಆತ್ಮಚರಿತ್ರೆಯನ್ನು ಮರಾಠಿಗೂ, ಸುರೇಂದ್ರನಾಥ್ ಬ್ಯಾನರ್ಜಿಯವರು ಇದನ್ನು ಬಂಗಾಳಿಗೂ ಭಾಷಾಂತರಮಾಡಿ ಮ್ಯಾಜಿನಿಯ ತತ್ವಗಳನ್ನು ಪ್ರಚಾರಪಡಿಸಿದರು.

ಭಾರತದ ಉಗ್ರಗಾಮಿಗಳು ಐರ್‌ಲೆಂಡಿನ 'ಸಿನ್‌ಫಿನ್' (Sein Fein)[2] ಭಾವನೆಗಳಿಂದಲೂ ಪ್ರಭಾವಿತರಾದರು. 'ಬ್ರಿಟಿಷ್ ರಾಜ್'ಗಿಂತ ನಮ್ಮ 'ಸ್ವರಾಜ್ಯ'ವೇ ಮೇಲು ಎಂಬುದೇ ಐರ್‌ಲೆಂಡಿನ ಸ್ವಾತಂತ್ರ್ಯಕ್ಕೆ ಹೋರಾಡಿದ 'ಸಿನ್‌ಫಿನ್' ಮುಖಂಡ ಆರ್ಥರ್ ಗ್ರಿಫಿಕ್ಸ್‌ನ ನಂಬಿಕೆಯಾಗಿತ್ತು. ಹೀಗೆ ಇಟಲಿ, ಫ್ರಾನ್ಸ್, ಐರ್‌ಲೆಂಡ್ ಇತ್ಯಾದಿ ರಾಷ್ಟ್ರಗಳ ಜನತಾ ಚಳುವಳಿಯಿಂದ ಪ್ರಭಾವಿತ

1. Sankar Ghose, *op. cit*, P 29.

2. 'ಸಿನ್‌ಫಿನ್' ಎಂದರೆ 'ನಾವುನಾವೇ' ಎಂಬ ಅರ್ಥವಾಗುವುದು. ಇದು ನಮ್ಮ 'ಸ್ವರಾಜ್ಯ' ಪದವಿದ್ದಂತೆ ಎಂದು ಹೇಳಬಹುದು.

ರಾದ ಭಾರತೀಯ ಮುಖಂಡರಿಗೆ ಕಾಂಗ್ರೆಸ್ಸಿನ ಸೌಮ್ಯ ಧೋರಣೆ ಒಪ್ಪಿಗೆಯಾಗಲಿಲ್ಲ. ಆ ಕಾಲದ ಉಗ್ರವಾದಿಗಳಲ್ಲಿ ಬಾಲಗಂಗಾಧರ ತಿಲಕ್ (1856--1920), ಲಜಪತ್‌ರಾಯ್ (1865–1928) ಮತ್ತು ಬಿಪಿನ್‌ಪಾಲ್ ಪ್ರಮುಖರಾಗಿದ್ದರು. ಇವರು 'ಲಾಲ್–ಬಾಲ್–ಪಾಲ್' ಉಗ್ರವಾದಿ ತ್ರಿಮೂರ್ತಿಗಳೆಂದೇ ಪ್ರಚುರರಾದರು. ಬ್ರಿಟಿಷರನ್ನು ಪ್ರಾರ್ಥಿಸುವುದರಿಂದ, ದಯವಿಟ್ಟು ಕೊಡಿ ಎಂದು ಕೇಳುವುದರಿಂದ, ಕೇವಲ ಮಾತಿನ ಪ್ರತಿಭಟನೆಯಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಅವರು ಹೇಳಿದರು. ಪರಿಣಾಮ ಕಾರಿಯಾಗಬೇಕಾದರೆ ಉಗ್ರಕ್ರಮಗಳು ಅವಶ್ಯಕ ಮತ್ತು ಬ್ರಿಟಿಷ ರನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು ಎಂದು ಅವರು ಹೇಳಿದರು. "ಐರ್‌ಲೆಂಡ್, ಜಪಾನ್ ಮತ್ತು ಇಟಲಿ ರಾಜ್ಯಗಳ ದೃಷ್ಟಾಂತಗಳನ್ನು ಗಮನಿಸಿ, ಅವರು ಅನುಸರಿಸಿದ ಮಾರ್ಗವನ್ನು ಅನುಸರಿಸಿ" ಎಂದು ತಿಲಕ್ ಅವರು ಕಾಂಗ್ರೆಸಿಗರಿಗೆ ಕರೆ ಇತ್ತರು.[1]

ಮೇಲಿನ ವಿವಿಧ ಕಾರಣಗಳಿಂದ ಭಾರತದ ಕಾಂಗ್ರೆಸ್ಸು ತನ್ನ ಹಿಂದಿನ ಸೌಮ್ಯ ನೀತಿಯನ್ನು ಬಿಟ್ಟು ಬ್ರಿಟಿಷರ ಬಗ್ಗೆ ಹೋರಾಡುವ ನೀತಿಯನ್ನು 1907 ರಿಂದ ಕೈಗೊಂಡಿತು. 1906ರಲ್ಲಿ ದಾದಾಭಾಯಿ ನವರೋಜಿ ಯವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಅನುಮೋದಿಸ ಲಾದ ನಿರ್ಣಯದಲ್ಲಿ[2] (1) ಸೆಕ್ರೆಟರಿ ಆಫ್ ಸ್ಟೇಟ್ ಅವರ ಸಭೆಯಲ್ಲಿಯೂ ಗೌರ್ನರ್‌ಗಳ ಕಾರ್ಯಕಾರಿ ಸಮಿತಿಗಳಲ್ಲಿಯೂ ಭಾರತೀಯರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡುವಂತೆಯೂ, (2) ಕೇಂದ್ರ ಹಾಗೂ ಪ್ರಾಂತೀಯ ವಿಧಾನಸಭೆಗಳಲ್ಲಿ ಜನತೆಯ ಪ್ರತಿನಿಧಿಗಳಿಗೆ ಹೆಚ್ಚು ಸ್ಥಾನ ನೀಡುವಂತೆಯೂ ಹಾಗೂ ಈ ಸಭೆಗಳ ಅಧಿಕಾರ ವ್ಯಾಪ್ತಿ ಹೆಚ್ಚಿಸು ವಂತೆಯೂ (3) ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಸ್ವಾತಂತ್ರ್ಯ ನೀಡ

---

1. B. G. Tilak, *His Writings and Speeches*, P 45. Quoted in Sankar Ghose, *op. cit*, P 37

2. ನಿರ್ಣಯದ ಪೂರ್ಣ ವಿವರಣೆಗೆ ನೋಡಿ :–
Pattabhi Sitaramayya, *op. cit*, PP 141-142

ಬೇಕೆಂದೂ ಬ್ರಿಟಿಷ್ ಸರ್ಕಾರಕ್ಕೆ ಸೂಚಿಸಲಾಯಿತು. ವಿದೇಶಿ ಸರಕುಗಳ ಬಹಿಷ್ಕಾರ, ಸರ್ಕಾರಿ ನೌಕರಿಗಳನ್ನೂ, ಸರ್ಕಾರವು ನೀಡುತ್ತಿದ್ದ ಗೌರವ ಸ್ಥಾನಗಳನ್ನೂ ಹಾಗೂ ಬಿರುದುಗಳನ್ನೂ ತ್ಯಜಿಸುವುದು, ಸ್ವದೇಶಿ ಭಾವನೆ ಮತ್ತು ರಾಷ್ಟ್ರೀಯ ವಿದ್ಯಾಭ್ಯಾಸಗಳನ್ನು ಬೆಳೆಸುವುದು ಇವು ಬ್ರಿಟಿಷರೊಡನೆ ಹೋರಾಡುವ ವಿಧಾನಗಳೆಂದು ಕಾಂಗ್ರೆಸ್ಸು ಪ್ರಕಟಿಸಿತು. ಲಾಲಾ ಲಜಪತ್ ರಾಯ್, ಬಾಲಗಂಗಾಧರ ತಿಲಕ್, ಶ್ರೀ ಅರವಿಂದ್ ಘೋಷ್, ಬಿಪಿನ್‌ಚಂದ್ರ ಪಾಲ್ ಇತ್ಯಾದಿ ಅನೇಕ ಮುಖಂಡರುಗಳು ಜನತೆಯನ್ನು ಸಂಪರ್ಕಿಸಿ ಅವರಲ್ಲಿ ರಾಷ್ಟ್ರೀಯತಾ ಭಾವನೆಯನ್ನು ಹುಟ್ಟಿಸಿ ಬ್ರಿಟಿಷ್ ಆಳ್ವಿಕೆಯನ್ನು ಪ್ರತಿಭಟಿಸುವಂತೆ ಪ್ರೇರೇಪಿಸಿದರು. "ಸ್ವರಾಜ್ಯ ನನ್ನ ಆಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ಪಡೆಯುತ್ತೇನೆ" ಎಂಬ ಮೂಲ ಮಂತ್ರವನ್ನು ತಿಲಕ್ ಅವರು ಜನತೆಗೆ ಉಪದೇಶಿಸಿದರು. ಆದರೆ ತಿಲಕ್ ಅವರಿಗೆ ತಮ್ಮ ಜನತಾ ಸಂಪರ್ಕ ಕಾರ್ಯ ಮುಂದುವರಿಸಲು ಸರ್ಕಾರವು ಬಿಡಲಿಲ್ಲ. ಅದು ಅವರನ್ನು ಬಂಧಿಸಿ ಸೆರೆಮನೆಗೆ ಸೇರಿಸಿತು. ಇದರಿಂದ ಹೋರಾಟ ಚಳುವಳಿಗೆ ಮುಖ್ಯ ನಾಯಕರೊಬ್ಬರ ನಿರ್ದೇಶನವಿಲ್ಲದಾಯಿತು. ತಿಲಕ್ ಅವರು ಬಂಧನದಿಂದ 1914 ರಲ್ಲಿ ಬಿಡುಗಡೆಯಾದರು. ಗೋಪಾಲಕೃಷ್ಣ ಗೋಖಲೆಯವರು ಇವರನ್ನು ಭೇಟಿಯಾಗಿ ಕಾಂಗ್ರೆಸ್ಸಿನ ಸೌಮ್ಯವಾದಿಗಳೊಳಗೂ ಉಗ್ರವಾದಿಗಳೊಳಗೂ ಪರಸ್ಪರ ಒಮ್ಮತಕ್ಕೆ ಪ್ರಯತ್ನಿಸಿದರು. ಆದರೆ ಉಗ್ರವಾದಿಗಳು ಹೋರಾಟದ ಭಾವನೆಯನ್ನು ಬಿಡಲು ಒಪ್ಪಲಿಲ್ಲ. ಸೌಮ್ಯವಾದಿಗಳ ಪ್ರಮುಖರಾಗಿದ್ದ ಗೋಖಲೆಯವರೂ 1915 ರಲ್ಲಿ ನಿಧನರಾದರು. ಉಗ್ರವಾದಿಗಳಾದ ಬಾಲಗಂಗಾಧರ ತಿಲಕ ಹಾಗೂ ಅವರ ಅನುಯಾಯಿಗಳು ಕಾಂಗ್ರೆಸ್ಸಿನ ನೀತಿಯ ಮೇಲೆ ಹೆಚ್ಚು ಪ್ರಭಾವ ಹೊಂದಿದ್ದರು. 1914ರಲ್ಲಿ ಕಾಂಗ್ರೆಸ್ಸು ತನ್ನ ಮದರಾಸಿನ ಅಧಿವೇಶನದಲ್ಲಿಯೇ ಮುಖ್ಯವಾದ ಸ್ವರಾಜ್ಯ ನಿರ್ಣಯವನ್ನು ಅನುಮೋದಿಸಿತು.[1] 1916 ರ ಲಖ್ನೋ ಅಧಿವೇಶನವು

---

1. Pattabhi Sitaramayya, *op. cit* P 214

ಸ್ವರಾಜ್ಯ ಬೇಡಿಕೆಯನ್ನು ಒತ್ತಿಹೇಳಿತು.[1] ಅಧೀನ ರಾಷ್ಟ್ರವಾಗಿರುವ ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯದ ಇತರ ಸ್ವತಂತ್ರ ರಾಷ್ಟ್ರಗಳ ಅಂತಸ್ತಿಗೆ ಏರಿಸಬೇಕೆಂದು ಈ ನಿರ್ಣಯವು ಬ್ರಿಟಿಷ್ ಸರ್ಕಾರವನ್ನು ಕೋರಿತು.

"ಹೋಂ ರೂಲ್ ಚಳುವಳಿ" (Home Rule Movement)

ಅನಿ ಬೆಸಾಂಟ್ ಮತ್ತು ಬಿ. ಜಿ. ತಿಲಕ್ ಅವರು 1916 ರಲ್ಲಿ 'ಹೋಂರೂಲ್ ಚಳುವಳಿ'ಯನ್ನು ಪ್ರಾರಂಭಿಸಿದರು. ಲೋಕಮಾನ್ಯ ತಿಲಕ್ ಅವರು ಪ್ರಥಮ 'ಹೋಂರೂಲ್ ಲೀಗ್' ಒಂದನ್ನು 1916ರ ಏಪ್ರಿಲ್ 22 ರಂದು ಪೂನಾದಲ್ಲಿ ಸ್ಥಾಪಿಸಿದರು. ಅನಿ ಬೆಸಾಂಟ್ ಅವರು 1916ರ ಸೆಪ್ಟಂಬರ್ 1 ರಂದು ಮದ್ರಾಸಿನಲ್ಲಿ ತಮ್ಮ 'ಹೋಂರೂಲ್ ಲೀಗ್' ಸ್ಥಾಪಿಸಿದರು. "ಚಕ್ರಾಧಿಪತ್ಯದ ಜನಾಂಗಗಳಲ್ಲಿ ಭಾರತವು ಒಂದು ರಾಷ್ಟ್ರವಾಗಿ ತನ್ನ ಹಕ್ಕನ್ನು ನ್ಯಾಯಬದ್ಧವಾಗಿ ಪ್ರತಿಪಾದಿಸುತ್ತದೆ" ಎಂದು ಅನಿ ಬೆಸಾಂಟ್ ಅವರು ಘೋಷಿಸಿದರು. ಭಾರತೀಯರ ಉಪೇಕ್ಷೆ ಹಾಗೂ ಜಡತ್ವವನ್ನೂ ಹೋಗಿಸಿ ಅವರುಗಳು ತಮ್ಮನ್ನು ತಾವೇ ಆಳಿಕೊಳ್ಳಲು ಅವರಿಗಿರುವ ಹಕ್ಕನ್ನು ಅವರಿಗೆ ಜ್ಞಾಪಿಸುವುದು 'ಹೋಂರೂಲ್' ಚಳುವಳಿಯ ಉದ್ದೇಶವಾಗಿದ್ದಿತು. "ನಿದ್ರಿಸುತ್ತಿರುವ ಭಾರತೀಯರನ್ನು ಎಚ್ಚರ ಮಾಡಿ ಅವರುಗಳು ತಮ್ಮ ತಾಯ್ನಾಡಿಗಾಗಿ ದುಡಿಯುವಂತೆ ಮಾಡುವ ಒಂದು ಭಾರತೀಯ ಟಾಂಟಾಂ ಆಗಿದ್ದೇನೆ ನಾನು" ಎಂದು ಅನಿ ಬೆಸಾಂಟ್ ಅವರು ಹೇಳಿದರು.[2] ದೇಶದ ನಾನಾಭಾಗಗಳಿಂದಲೂ ಈ ಚಳುವಳಿಗೆ ಅನೇಕ ಜನರು ಸೇರಿದರು. ಸಭೆಗಳು, ಪ್ರತಿಭಟನಾ ಮೆರವಣಿಗೆಗಳು ಎಲ್ಲವೂ 1916 – 17ರಲ್ಲಿ ಬಿರುಸಾಗಿ ನಡೆದವು. ಸರ್ಕಾರವು ಚಳುವಳಿಯನ್ನು ಹತ್ತಿಕ್ಕಲು ತನ್ನ ಕ್ರಮಗಳನ್ನು ಯಥಾಪ್ರಕಾರ ಕೈಗೊಂಡಿತು. ಅನಿ ಬೆಸಾಂಟ್ ಅವರನ್ನು ಅದು ಬಂಧಿಸಿತು. ಆದರೆ, 1917ರಲ್ಲಿ ಬ್ರಿಟಿಷ್ ಸರ್ಕಾರವು ಒಂದು ಘೋಷಣೆ ಹೊರಡಿಸಿ, ಹಂತಹಂತವಾಗಿ ಭಾರತಕ್ಕೆ ಜವಾಬ್ದಾರಿ ಸರ್ಕಾರ ನೀಡುವ ಭರವಸೆ ಕೊಟ್ಟಿತು. ಅಲ್ಲದೆ 1919 ರಲ್ಲಿ ಭಾರತದ ಮಸೂದೆಯ ಮೂಲಕ ಹಿಂದೆ ಐದನೆಯ ಅಧ್ಯಾಯದಲ್ಲಿ ವಿವರಿಸ

1. *Ibid*, P. 217
2. Quoted in V. D. Mahajan, *op. cit.*, P 454

ಲಾದ ಕೆಲವು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತಂದಿತು. ಇದು "ಹೋಂ ರೂಲ್" ಚಳುವಳಿಗಾರರಿಗೆ ಒಂದು ರೀತಿಯಲ್ಲಿ ತೃಪ್ತಿ ತಂದು ಅವರು ಚಳುವಳಿಯನ್ನು ಕಡಿಮೆ ಮಾಡಿದರು. ಇಲ್ಲಿಗೆ ಕಾಂಗ್ರೆಸ್ ಸಂಸ್ಥೆಯ ಚಟುವಟಿಕೆಗಳಲ್ಲಿ ಎರಡನೆಯ ಘಟ್ಟ ಮುಗಿದು ತರುವಾಯ ಮಹಾತ್ಮಾ ಗಾಂಧಿಯವರ ಸರ್ವೋಚ್ಚ ನಾಯಕತ್ವದ ಸ್ವಾತಂತ್ರ್ಯ ಚಳುವಳಿ ಆರಂಭ ವಾಯಿತೆನ್ನಬಹುದು. 1919ರಿಂದ ಪ್ರಾರಂಭವಾಗಿ 1947ರ ಆಗಸ್ಟ್ 15 ರಲ್ಲಿ ಭಾರತವು ಸ್ವತಂತ್ರವಾಗುವವರೆಗೆ ಈ ಚಳುವಳಿಯು ಮುಂದು ವರಿದ ಬಗೆಯನ್ನು ಕುರಿತು ಮುಂದಿನ ಏಳು ಅಧ್ಯಾಯಗಳಲ್ಲಿ ವಿವರಿಸ ಲಾಗುವುದು.

✤✤✤

ಅಧ್ಯಾಯ - 8

1920ರ ದಶಕ – ರೋಲೆಟ್ ಮಸೂದೆಗಳು ಜಲಿಯನ್‌ವಾಲಾ ಬಾಗ್, ಖಿಲಾಫತ್, ಅಸಹಕಾರ ಚಳುವಳಿ ಮತ್ತು ಸ್ವರಾಜ್ಯ ಪಕ್ಷದ ಚಳುವಳಿ

1919ರಿಂದ 1947ರ ಅವಧಿಯನ್ನು ಭಾರತದ ಸ್ವಾತಂತ್ರ್ಯ ಚಳುವಳಿಯ 'ಗಾಂಧಿಯುಗ' ಎಂದು ಕರೆಯಬಹುದು. ಏಕೆಂದರೆ, ಈ ಅವಧಿಯ ಚಳುವಳಿ ಬಹುಮಟ್ಟಿಗೆ ಮಹಾತ್ಮ ಗಾಂಧಿಯವರ ಸರ್ವೋಚ್ಚ ನಾಯಕತ್ವದಲ್ಲಿ ನಡೆಯಿತು. ಮಹಾತ್ಮ ಗಾಂಧಿಯವರು ಹೀಗೆ ನಾಯಕತ್ವ ವಹಿಸಿಕೊಂಡನಂತರ ಚಳುವಳಿಗೆ ಹೊಸ ಸ್ವರೂಪ ಉಂಟಾಯಿತು. ಚಳುವಳಿ ಹೆಚ್ಚುಕಡಿಮೆ ಅಭಂಗವಾಗಿ ನಡೆಯಿತಲ್ಲದೆ ಬರುಬರುತ್ತಾ ಹೆಚ್ಚು ಹೆಚ್ಚು ತೀವ್ರವೂ ಆಗುತ್ತಾ ಬಂದಿತು.

ದಕ್ಷಿಣ ಆಫ್ರಿಕದಲ್ಲಿ ಕೆಲವು ವರ್ಷಗಳು ಅಲ್ಲಿ ನೆಲೆಸಿದ್ದ ಭಾರತೀಯರ ಹಿತಾಸಕ್ತಿಗಳಿಗಾಗಿ ಅಹಿಂಸಾತ್ಮಕ ಚಳುವಳಿಯನ್ನು ಯಶಸ್ವಿಯಾಗಿ ನಡೆಸಿದನಂತರ ಗಾಂಧಿಜಿಯವರು 1915 ರ ಜನವರಿಯಲ್ಲಿ ಭಾರತಕ್ಕೆ ವಾಪಸಾದರು. ತಾಯ್ನಾಡಿನ ಸೇವೆಯಲ್ಲಿ ತಮ್ಮ ಜೀವಮಾನವನ್ನು ಕಳೆಯುವುದಾಗಿ ಆಗ ತೀರ್ಮಾನಿಸಿಕೊಂಡರು. ಅವರ ಉನ್ನತ ನೈತಿಕ ಗುಣಶೀಲತೆ, ಭಾರತೀಯರಿಗಾಗಿ ದಕ್ಷಿಣ ಆಫ್ರಿಕದಲ್ಲಿ ಅವರು ನಡೆಸಿದ ಮಹತ್ಕಾರ್ಯಗಳು, ಅವರು ಅಲ್ಲಿ ಅನುಭವಿಸಿದ ಕಷ್ಟಗಳು ಇತ್ಯಾದಿಗಳೆಲ್ಲವೂ

ಭಾರತದಲ್ಲಿ ಸಾಕಷ್ಟು ಪ್ರಚುರವಾಗಿದ್ದುದರಿಂದ ಆ ವೇಳೆಗಾಗಲೇ ಅವರ ಬಗ್ಗೆ ಭಾರತದಲ್ಲಿ ಸಾರ್ವತ್ರಿಕ ಗೌರವಭಾವನೆ ಉಂಟಾಗಿದ್ದಿತು.

ಭಾರತಕ್ಕೆ ಬಂದನಂತರ ಅವರು ಪ್ರಥಮತಃ ಕೈಗೊಂಡ ಮುಖ್ಯ ಕಾರ್ಯವೆಂದರೆ 1915ರ ಮೇ 25ರಂದು ಅಹ್ಮದಾಬಾದಿನ ಕೋಚ್ರಾಬ್ (Kochrab) ಎಂಬಲ್ಲಿ ತಮ್ಮ "ಸತ್ಯಾಗ್ರಹ ಆಶ್ರಮ"ವನ್ನು ಸ್ಥಾಪಿಸಿದುದು. ಗಂಡಸರು, ಹೆಂಗಸರು ಸೇರಿ ಈ ಆಶ್ರಮದಲ್ಲಿ ಒಟ್ಟು ಪ್ರಥಮತಃ 25 ಜನರಿದ್ದರು. ಇವರಲ್ಲಿ 12 ಜನ ತಮಿಳರೂ, ಮಿಕ್ಕವರು ದೇಶದ ವಿವಿಧ ಭಾಗಗಳಿಂದ ಬಂದವರೂ ಆಗಿದ್ದರು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಕದಿಯದಿರುವುದು, ಜಿಹ್ವಾಚಾಪಲ್ಯ ಹತೋಟಿ, ಅಪರಿಗ್ರಹ, ಸ್ವದೇಶಿ ಮತ್ತು ಯಾವುದಕ್ಕೂ ಹೆದರದಿರುವಿಕೆ – ಈ ಮುಖ್ಯ ಅಂಶಗಳ ಬಗ್ಗೆ ಈ ಆಶ್ರಮ ನಿವಾಸಿಗಳು ಶಪಥಮಾಡಿದವರಾಗಿದ್ದರು. ದೇಶಪ್ರೇಮಿಗಳಾದ ವಾಣಿಜ್ಯೋದ್ಯಮಿಗಳೂ, ಇತರ ಹಣವಂತ ದೇಶಪ್ರೇಮಿಗಳೂ ಆಶ್ರಮ ಜೀವನಕ್ಕೆ ಬೇಕಾದ ಧನಸಹಾಯ ಒದಗಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರಿಗೆ ಬೆಂಬಲನೀಡಿದ ಅನೇಕ ಮುಖ್ಯ ಸತ್ಯಾಗ್ರಹಿ ಯೋಧರು ಈ ಆಶ್ರಮದಲ್ಲಿ ತಯಾರಾದವರಾಗಿದ್ದರು.

"ಸತ್ಯಾಗ್ರಹ ಆಶ್ರಮ" ಸ್ಥಾಪಿಸಿದನಂತರ ಗಾಂಧೀಜಿಯವರು ತಮ್ಮ ಭಾವನೆಗಳನ್ನೂ, ತಾವು ಕೈಗೊಳ್ಳಲು ಆಲೋಚಿಸಿದ್ದ ಕಾರ್ಯಕ್ರಮಗಳನ್ನೂ ಜನತೆಯ ಮುಂದಿಡಲು ದೇಶದ ವಿವಿಧ ಭಾಗಗಳಲ್ಲಿ ಸಂಚಾರಮಾಡಿದರು. ಅಲ್ಲದೆ, ಶೋಷಣೆಗೆ ಒಳಗಾಗಿದ್ದ ದೀನದಲಿತರ ಕೆಲವು ನಿರ್ದಿಷ್ಟ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ಮಗ್ನರಾದರು. ಈ ಕಾಲದಲ್ಲಿ ಪ್ರಥಮತಃ ಅವರು ಕೈಗೊಂಡುದುದು ಕಾರ್ಮಿಕರನ್ನು ಬಂಧಿಸಿಟ್ಟ ಕರಾರು ಪದ್ಧತಿ (Indenture System). ಇದರ ಪ್ರಕಾರ ಬ್ರಿಟಿಷರ ವಸಾಹತುಗಳಲ್ಲಿ ಕೆಲಸಮಾಡಲು ಭಾರತೀಯ ಕೂಲಿಯಾಳುಗಳನ್ನು ಐದುವರ್ಷಗಳ ಅವಧಿಯ ನಿರ್ಬಂಧದ ಒಪ್ಪಂದಕ್ಕೆ ಅವರನ್ನು ಒಳಪಡಿಸಿ, ಆ ಪ್ರದೇಶಗಳಲ್ಲಿ ಕೆಲಸಕ್ಕೆ ಕರೆದೊಯ್ಯಲಾಗುತ್ತಿತ್ತು. ಅಲ್ಲಿ ಕೆಲಸ ಎಷ್ಟೇ ಕಷ್ಟವಾಗಲಿ, ಕೂಲಿ ಎಷ್ಟೇ ಇರಲಿ ಮಧ್ಯೆ ಈ ಆಳುಗಳು ಬಿಟ್ಟು ಬರುವಂತಿರಲಿಲ್ಲ. ಇದು ಒಂದು ರೀತಿಯ ಪುರಾತನ ಗುಲಾಮಿ ಪದ್ಧತಿ (Slavery) ಯಂತೆಯೇ ಇದ್ದಿತು

ಈ ವಿಧದಲ್ಲಿ ಭಾರತೀಯ ಕಾರ್ಮಿಕರನ್ನು ಶೋಷಣೆ ಮಾಡುವ ನಾಚಿಕೆಗೇಡು ಪದ್ಧತಿಯನ್ನು ಕೈಬಿಡುವಂತೆ ಭಾರತೀಯ ಮುಂದಾಳುಗಳು ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬಂದಿದ್ದರು. ಗಾಂಧಿಜಿಯವರು ಈ ಪದ್ಧತಿಯನ್ನು ತೊಡೆದುಹಾಕುವ ಉದ್ದೇಶದಿಂದ ದೇಶಾದ್ಯಂತ ಚಳುವಳಿಯನ್ನು ಆರಂಭಿಸಿದರು. ಇದರ ಸಲುವಾಗಿ ಸತ್ಯಾಗ್ರಹಕ್ಕೂ ಸಿದ್ಧತೆಗಳನ್ನು ಮಾಡಲು ಉಪಕ್ರಮಿಸಿದರು. ಹೀಗೆ ಗಾಂಧಿಜಿಯವರ ನೇತೃತ್ವದಲ್ಲಿ ಪ್ರಾರಂಭವಾದ ಚಳುವಳಿಯನ್ನು ಗಮನಿಸಿ 1917 ರ ಏಪ್ರಿಲ್ 12 ರಂದು ವೈಸ್‌ರಾಯ್ ಅವರು ನಿರ್ಬಂಧ ಒಪ್ಪಂದ ಪದ್ಧತಿ ಮೂಲಕ ಭಾರತೀಯ ಕೂಲಿಯಾಳುಗಳನ್ನು ಇತರ ಸ್ಥಳಗಳಿಗೆ ಕರೆದುಕೊಂಡು ಹೋಗುವುದನ್ನು ನಿಷೇಧಿಸಿದರು. ಗಾಂಧಿಜಿ ಮುಖಂಡತ್ವದ ಈ ಚಳುವಳಿ ಹೀಗೆ ಯಶಸ್ವಿಯಾದಂತಾಯಿತು.

ಅನಂತರ ಗಾಂಧಿಜಿಯವರು ಬಿಹಾರ ಪ್ರಾಂತ್ಯದ ಚಂಪಾರನ್ ಜಿಲ್ಲೆಯಲ್ಲಿ ಐರೋಪ್ಯರ ಒಡೆತನದಲ್ಲಿದ್ದ ನೀಲಿ (Indigo) ಮತ್ತು ಕಬ್ಬಿನ ತೋಟಗಳಲ್ಲಿ ಕಾರ್ಮಿಕರ ಶೋಷಣೆಯಾಗುತ್ತಿದ್ದುದನ್ನು ತಪ್ಪಿಸುವ ಕಾರ್ಯವನ್ನು ಕೈಗೊಂಡರು. ಜೆ. ಬಿ. ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್ ಇತ್ಯಾದಿ ಮುಖಂಡರುಗಳೊಡಗೂಡಿ ಗಾಂಧಿಜಿಯವರು ಚಂಪಾರನ್‌ಗೆ ಹೋಗಿ ಪ್ಲಾಂಟೇಷನ್ನಿನ ಗೇಣಿದಾರರ ಹಾಗೂ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಪ್ಲಾಂಟರುಗಳ ಸಂಘದೊಡನೆಯೂ, ಸರ್ಕಾರಿ ಅಧಿಕಾರಿಗಳೊಡನೆಯೂ ವ್ಯವಹರಿಸಿದರು. ಅಲ್ಲದೆ ಅಲ್ಲಿನ ಬಡವರ್ಗದವರಿಗೆ ತಮ್ಮ ಸೇವಾದಳದವರಿಂದ ಶಿಕ್ಷಣದ ಏರ್ಪಾಡು ಮಾಡಿ ಜನರಲ್ಲಿ ಹೊಸ ಜಾಗೃತಿ ಉಂಟುಮಾಡಿದರು. ಸ್ಥಳೀಯ ಸಮಸ್ಯೆಗಳ ಕ್ಷಿಪ್ರ ಪರಿಹಾರದ ಜೊತೆಗೆ ಜನರನ್ನು ರಾಷ್ಟ್ರೀಯ ಚಳುವಳಿಗೆ ಸಿದ್ಧಮಾಡುವುದೂ ಗಾಂಧೀಜಿಯವರ ಉದ್ದೇಶವಾಗಿದ್ದಿತು.

1918ರ ಫೆಬ್ರವರಿಯಲ್ಲಿ ಗಾಂಧಿಜಿಯವರು ಅಹಮದಾಬಾದಿನ ಜವಳಿ ಕಾರ್ಮಿಕರ (Textile workers) ಸಮಸ್ಯೆಯನ್ನು ಪರಿಹರಿಸಿದರು. ಇದಾದ ತಕ್ಷಣವೇ ಬೊಂಬಾಯಿ ಪ್ರಾಂತ್ಯದ ಖೇಡಾ ಜಿಲ್ಲೆಯ ರೈತರ ಸಮಸ್ಯೆಗೆ ಅವರು ಹೋಗಬೇಕಾಗಿ ಬಂತು. ಅಲ್ಲಿ ಆ ವರ್ಷ ಅನಾವೃಷ್ಟಿ

ಯಿಂದ ಜಮೀನಿನಲ್ಲಿ ಏನೂ ಬೆಳೆ ಫಲಿಸದುದರಿಂದ ರೈತರು ಭೂಕಂದಾಯ ರದ್ದಿಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸರ್ಕಾರವು ಅವರ ನ್ಯಾಯ ಸಮ್ಮತವಾದ ಬೇಡಿಕೆಗಳಿಗೆ ಒಪ್ಪಲಿಲ್ಲ, ಗಾಂಧಿಜಿಯವರ ನೇತೃತ್ವದಲ್ಲಿ ಈ ಬಗ್ಗೆ ಚಳುವಳಿ ಹೂಡಿದಾಗ ಸರ್ಕಾರವು ಮಣಿಯಿತು.

ಮೇಲೆ ಹೇಳಿದಂತೆ ಗಾಂಧಿಜಿಯವರು ವಿವಿಧ ಭಾಗಗಳ ಜನರು ಅನುಭವಿಸುತ್ತಿದ್ದ ತೊಂದರೆಗಳ ಬಗ್ಗೆ ಕಾರ್ಯಮಗ್ನರಾಗಿದ್ದಾಗ 1918ರ ಏಪ್ರಿಲ್ ಕೊನೆಯಲ್ಲಿ ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫರ್ಡ್ ಅವರು ಗಾಂಧಿಜಿಯವರನ್ನು ದೆಹಲಿಯಲ್ಲಿನ ಸಮರ ಸಮ್ಮೇಳನಕ್ಕೆ ಆಹ್ವಾನಿಸಿದರು. ವೈಸ್‌ರಾಯ್ ಅವರ ಪ್ರಾರ್ಥನೆಯನ್ನು ಮನ್ನಿಸಿ, ಸೇನೆಗೆ ಜನರನ್ನು ಸೇರಿಸಿಕೊಳ್ಳುವ ಬಗ್ಗೆ ಆ ಸಮ್ಮೇಳನದಲ್ಲಿ ಮಾಡಲಾದ ಒಂದು ಠರಾವಿಗೆ ಗಾಂಧಿಜಿಯವರು ಬೆಂಬಲ ನೀಡಿದರು. ತರುವಾಯ ವೈಸ್‌ರಾಯ್ ಅವರಿಗೆ ತಮ್ಮ ಎರಡು ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿ ದೀರ್ಘಪತ್ರವೊಂದನ್ನು ಕಳಿಸಿದರು. ಈ ಪತ್ರದಲ್ಲಿ[1] ಬ್ರಿಟಿಷರು ಯುದ್ಧದಿಂದ ಕಷ್ಟದಲ್ಲಿ ಸಿಲುಕಿರುವ ಸಂದರ್ಭದಲ್ಲಿ ಬ್ರಿಟಿಷರಿಗೆ ಭಾರತೀಯರು ಸಹಾಯ ನೀಡಬೇಕಾದುದರ ಪ್ರಾಮುಖ್ಯವನ್ನೂ, ಯುದ್ಧಮುಗಿದಾಕ್ಷಣವೇ ಬ್ರಿಟಿಷರು ಭಾರತಕ್ಕೆ ಸ್ವಾಡಳಿತವನ್ನು ನೀಡುವರೆಂಬ ಆಕಾಂಕ್ಷೆಯನ್ನೂ ವಿವರಿಸಿ ಬರೆದಿದ್ದರು. ತಕ್ಷಣವೇ ಅವರು ಟೆಂಡುಲ್ಕರ್ ಅವರು ಹೇಳಿರುವಂತೆ "ಸೈನಿಕ ಉಮೇದುವಾರರನ್ನು ಸೇರಿಸಿಕೊಳ್ಳುವ ಅಧಿಕಾರಿ"[2]ಯಾಗಿ ಅತ್ಯಂತ ಉತ್ಸಾಹದಿಂದ ತಮ್ಮ ಕಾರ್ಯವನ್ನು ಪ್ರಾರಂಭಿಸಿದರು. ಈ ಅಹಿಂಸಾವಾದಿ ವ್ಯಕ್ತಿಯು ಯುದ್ಧ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಕಲಿಯುವಂತೆ ಜನರನ್ನು ಪ್ರೇರೇಪಿಸುತ್ತಾ ಸೈನ್ಯಕ್ಕೆ ಜನರನ್ನು ಸೇರಿಸುವ ಕಾರ್ಯದಲ್ಲಿ ನಿರತರಾದುದು ಒಂದು ವಿಪರ್ಯಾಸವಾಗಿ ತೋರುವುದು ಸಹಜ. ಸಾರ್ವಜನಿಕರಲ್ಲಿ ಮಾಡಿದ ಮನವಿಯೊಂದರಲ್ಲಿ ಅವರು ಹೀಗೆ ಹೇಳಿದರು, "ನಾವು ಆದಷ್ಟು ಶೀಘ್ರವಾಗಿ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವುದನ್ನು ಕಲಿಯಬೇಕಾದರೆ ನಾವು ಸೇನೆಗೆ

---

1. ಈ ಪತ್ರದ ಪೂರ್ಣ ವಿವರಣೆ ನೋಡಿ: Tendulkar, *Mahatma* vol I PP 227–229
2. *Ibid*, P. 225

ಸೇರಿಕೊಳ್ಳುವುದು ನಮ್ಮ ಕರ್ತವ್ಯ....ನಾವು ಅಂಜುಬುರುಕರೆಂದು ಪರಿಗಣಿಸಲಾಗಿದೆ. ಈ ಅಪವಾದದಿಂದ ತಪ್ಪಿಸಿಕೊಳ್ಳಬೇಕಾದರೆ ನಾವು ಶಸ್ತ್ರಾಸ್ತ್ರಗಳನ್ನು ಬಳಸುವುದನ್ನು ಕಲಿಯಬೇಕು. ಸಾಮ್ರಾಜ್ಯವನ್ನು ರಕ್ಷಿಸುವ ಕಾರ್ಯದಲ್ಲಿ ಭಾಗವಹಿಸುವುದೇ ನಾವು ಸ್ವರಾಜ್ಯ ಸಂಪಾದಿಸುವ ಅತ್ಯಂತ ಸುಲಭವೂ, ನೇರವೂ ಆದ ಮಾರ್ಗವಾಗಿದೆ. ಸಾಮ್ರಾಜ್ಯ ನಶಿಸಿದರೆ ಅದರೊಡನೆ ನಮ್ಮ ಆಕಾಂಕ್ಷೆಗಳೂ ಅಳಿಯುವುವು. ನಮ್ಮ ಹಕ್ಕುಗಳನ್ನು ಈಗಲೇ ಪಡೆಯದಿದ್ದರೆ ತರುವಾಯ ನಾವು ಮೋಸ ಹೋಗುತ್ತೇವೆಂದು ಕೆಲವರು ಹೇಳುತ್ತಾರೆ. ಸಾಮ್ರಾಜ್ಯ ರಕ್ಷಿಸಲು ನಾವು ಈಗ ಹೊಂದುವ ಶಕ್ತಿಯೇ ನಮಗೆ ಆ ಹಕ್ಕುಗಳನ್ನು ಕೊಡಿಸಬಲ್ಲದು.[1]" ಬ್ರಿಟಿಷರು ಅತ್ಯಂತ ಕಷ್ಟ ಪರಿಸ್ಥಿತಿಯಲ್ಲಿದ್ದ ಆಗಿನ ಸಂದರ್ಭದಲ್ಲಿ ಅವರ ಯುದ್ಧ ಪ್ರಯತ್ನಕ್ಕೆ ಪೂರ್ಣ ಬೆಂಬಲ ನೀಡಿದರೆ, ಯುದ್ಧ ಮುಗಿದಾಕ್ಷಣವೇ ಅವರು ಭಾರತಕ್ಕೆ ಸ್ವಾತಂತ್ರ್ಯ ನೀಡುವರೆಂಬ ನಂಬಿಕೆಯೇ ಗಾಂಧಿಜಿಯವರ ಈ ಮನಸಿಗೆ ಕಾರಣವಾಗಿದ್ದಿತೆಂಬುದು ಸ್ಪಷ್ಟ. ಇದು ಗಾಂಧಿಜಿಯವರ ಸಮಯೋಚಿತ ವಿವೇಕವನ್ನೂ (Pragmatism) ಬ್ರಿಟಿಷರ ಧರ್ಮ ಹಾಗೂ ನ್ಯಾಯ ಮನೋಭಾವದಲ್ಲಿ ಅವರಿಗೆ ಆಗ ಇದ್ದ ನಂಬಿಕೆಯನ್ನೂ ಸೂಚಿಸುವುದು. ತಮ್ಮ ವೈಯಕ್ತಿಕ ಮೂಲ ಧ್ಯೇಯಗಳನ್ನೂ ತ್ಯಜಿಸಿ ಜರ್ಮನರ ವಿರುದ್ಧ ಶಸ್ತ್ರಾಸ್ತ್ರಗಳ ಪ್ರಯೋಗದ ಮೂಲಕ ಹಿಂಸಾತ್ಮಕ ಹೋರಾಟಕ್ಕೆ ಅವರು ಸಿದ್ಧವಾಗಿದ್ದುದು ಆಶ್ಚರ್ಯವೇ ಸರಿ.[2] ಅವರ ಅಂದಿನ ನಂಬಿಕೆ ಹಾಗೂ ಆಕಾಂಕ್ಷೆ ತಪ್ಪಾದುದರಿಂದ ನೊಂದ ಮನಸ್ಸಿನಿಂದ, ತಮ್ಮ ಸ್ವಾಭಾವಿಕ ಮಾರ್ಗವಾದ ಅಹಿಂಸಾ ಚಳುವಳಿಯ ಮೂಲಕ ಬ್ರಿಟಿಷರ ಸವಾಲನ್ನು ಎದುರಿಸಲಾರಂಭಿಸಿದರು. ಇದನ್ನು ಮುಂದೆ ವಿವರಿಸಲಾಗುವುದು. ಆದರೆ,

---

1. Tendulkar *op, cit,* P. 229
2. ಕೆಲವು ವರ್ಷಗಳ ತರುವಾಯ ಇದರ ಬಗ್ಗೆ ನೀಡಿದ ಒಂದು ವಿವರಣೆಯಲ್ಲಿ ಹೀಗೆ ಹೇಳಿರುತ್ತಾರೆ: "ಆ ಕಾಲದಲ್ಲಿ ಈಗ ನಾನು ಇರುವಂತಹ ಅಹಿಂಸಾತ್ಮಕ ಹೋರಾಟಗಾರನಾಗಿದ್ದಿದ್ದರೆ, ನಿಜವಾಗಿಯೂ ನಾನು ಆ ವಿಧದಲ್ಲಿ ಸಹಾಯ ಮಾಡುತ್ತಿರಲಿಲ್ಲ; ಆದರೆ, ಅಹಿಂಸಾ ಚಳುವಳಿಯ ಮಾರ್ಗದಲ್ಲಿ ಇರುವ ಎಲ್ಲಾ ಪ್ರಯತ್ನಗಳನ್ನೂ ಅದರ ಉದ್ದೇಶವನ್ನೂ ವಿಫಲಗೊಳಿಸುತ್ತಿದ್ದೆ." (Tendulkar, *op. cit,* P 233)

ಆ ಯುದ್ಧಕಾಲದಲ್ಲಿ ಗಾಂಧೀಜಿಯವರ ಸೇವೆ ಅಮೋಘವಾಗಿದ್ದಿತು. ಅವರ ಪ್ರಚಾರದಿಂದ ಸಹಸ್ರಾರು ಭಾರತೀಯರು ಶೀಘ್ರವಾಗಿ ಸೈನ್ಯಕ್ಕೆ ಸೇರಿದರು. ಆಗ ಅವರು ತಮ್ಮ ಆರೋಗ್ಯವನ್ನೂ ಗಮನಿಸದೆ ಕೆಲಸ ಮಾಡಿದರು. ಪರಿಣಾಮವಾಗಿ ಅನೇಕ ದಿವಸಗಳವರೆಗೆ ಹಾಸಿಗೆ ಹಿಡಿದು ಮಲಗಬೇಕಾಯಿತು. 1919 ರ ಜನವರಿ 21 ರಂದು 'ಫಿಷರ್ಸ್' (Fissures)ಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಕ್ರಮೇಣ ಗುಣವಾದರು.[1]

ಯುದ್ಧ ಮುಗಿಯುತ್ತಾ ಬಂದ ಹಾಗೆ ಮತ್ತು ಬ್ರಿಟಿಷರು ಜಯಗಳಿಸಿದಾಗ ಉಂಟಾದ ಸಂದರ್ಭಗಳು ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವಂತೆ ಗಾಂಧೀಜಿಯವರನ್ನು ಪ್ರೇರೇಪಿಸಿದವು. 1918 ರಲ್ಲಿ ಬ್ರಿಟಿಷರು ನೀಡಿದ ರಾಜಕೀಯ ಸುಧಾರಣೆಗಳು ಮಾಂಟೆಗು–ಚೆಮ್ಸ್‌ಫರ್ಡ್ ಸುಧಾರಣೆಗಳ ರೂಪದಲ್ಲಿ ಹೊರಬಿದ್ದವು. ಹಿಂದೆ ಐದನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಇವು ರಾಷ್ಟ್ರೀಯ ಮುಖಂಡರಿಗೆ ತುಂಬಾ ಅತೃಪ್ತಿಕರವಾಗಿದ್ದವು. ಆ ವರ್ಷದ ಕಾಂಗ್ರೆಸ್ ಅಧಿವೇಶನವು ಈ ಸುಧಾರಣೆಗಳನ್ನು ಕೂಲಂಕಷವಾಗಿ ಚರ್ಚಿಸಿ ತನ್ನ ಅತೃಪ್ತಿ ಹಾಗೂ ಅಸಮಾಧಾನವನ್ನು ಒಂದು ಮಸೂದೆಯ ಮೂಲಕ ವ್ಯಕ್ತಪಡಿಸಿತು. "ಸಾಮ್ರಾಜ್ಯದ ಚೌಕಟ್ಟಿನಲ್ಲಿಯೇ ಸ್ವರಾಜ್ಯ ಹೊಂದಿರುವುದು ಮತ್ತು ಭಾರತವು ಸ್ವತಂತ್ರ ಹಾಗೂ ಸ್ವಾವಲಂಬಿತ ರಾಷ್ಟ್ರವಾಗಿ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ತನ್ನದೇ ಆದ ಸ್ಥಾನಮಾನಗಳನ್ನು ಪಡೆದು ಗ್ರೇಟ್‌ಬ್ರಿಟನ್ ಹಾಗೂ ಭಾರತದ ಬಾಂಧವ್ಯ ಬಲಗೊಳ್ಳುವಂತಾಗುವುದು, ಇವುಗಳನ್ನು ಬಿಟ್ಟರೆ ಬೇರೆ ಯಾವುದೂ ಭಾರತದ ಜನತೆಯನ್ನು ತೃಪ್ತಿಗೊಳಿಸುವುದಿಲ್ಲ" ಎಂದು ಕಾಂಗ್ರೆಸ್ಸು ಘೋಷಿಸಿತು. ಕೆಲವು ಅತಿ ಸೌಮ್ಯವಾದಿಗಳನ್ನು ಹೊರತು ಎಲ್ಲಾ ಕಾಂಗ್ರೆಸ್ ಮುಖಂಡರುಗಳೂ ಈ ಮಸೂದೆಯನ್ನು ಅನುಮೋದಿಸಿದರು. ಮಾಂಟೆಗು – ಚೆಮ್ಸ್‌ಫರ್ಡ್

1. ಈ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿದ್ದ ಕಾಲದಲ್ಲಿಯೇ ಗಾಂಧೀಜಿ ಮೇಕೆ ಹಾಲು ಸೇವನೆಗೆ ಒಪ್ಪಿಕೊಂಡುದುದು. ಹಿಂದೆ ಹಾಲು ಕುಡಿಯುವುದಿಲ್ಲವೆಂಬ ಶಪಥ ಮಾಡಿದ್ದರು. ಈ ಶಪಥವು ಹಸು ಅಥವಾ ಎಮ್ಮೆ ಹಾಲಿಗೆ ಅನ್ವಯಿಸುವುದೆಂಬ ಅಭಿಪ್ರಾಯವನ್ನು ಅವರ ಪತ್ನಿ ಕಸ್ತೂರಿಬಾ ಗಾಂಧೀಜಿಯವರಿಗೆ ಒತ್ತಿಹೇಳಿ ಮೇಕೆ ಹಾಲು ಕುಡಿಯಬಹುದೆಂದು ಅವರನ್ನು ಒಪ್ಪಿಸಿದರು.

ಸುಧಾರಣೆಗಳಿಂದ ಭಾರತಕ್ಕೆ ಆದ ನಿರಾಸೆಯನ್ನು ಬ್ರಿಟಿಷ್ ಜನತೆಗೆ ವ್ಯಕ್ತ ಪಡಿಸಲು ಬಾಲಗಂಗಾಧರ ತಿಲಕರು ಇಂಗ್ಲೆಂಡಿಗೆ ಹೋಗಲು ಇಚ್ಛಿಸಿದರು. ಅವರಿಗೆ ಹೀಗೆ ಹೋಗಲು ಮೊದಲು ರಹದಾರಿ ಕೊಡಲಿಲ್ಲ. ನಂತರ ಇಂಗ್ಲೆಂಡಿಗೆ ಹೋಗುವ ಅನುಮತಿ ದೊರಕಿತಾದರೂ ಅಲ್ಲಿ ಹೋದನಂತರ ಅವರನ್ನು ರಾಜದ್ರೋಹಿ ಎಂದು ಪರಿಗಣಿಸಿ ಅವರಿಗೆ ಭಾಷಣ ಮಾಡಕೂಡ ದೆಂದು ಬ್ರಿಟಿಷ್ ಸರ್ಕಾರವು ಆಜ್ಞೆ ವಿಧಿಸಿತು. ವಾಕ್‌ಸ್ವಾತಂತ್ರ್ಯದ ಬಗ್ಗೆ ಹೆಮ್ಮೆಯಿಂದ ಜಂಭಕೊಚ್ಚಿಕೊಳ್ಳುತ್ತಿದ್ದ ಬ್ರಿಟನ್ನಿನ ವರ್ತನೆ ಇದು!

ರೋಲೆಟ್ ಮಸೂದೆಗಳು (Rowlatt Acts)

ಯುದ್ಧ ಮುಗಿದಾಗ ಶಾಂತಿ ಸಮ್ಮೇಳನ ಸೇರಲಿದ್ದ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಯನ್ನು ಈ ಸಮ್ಮೇಳನಕ್ಕೆ ಸೇರಿಸಿಕೊಳ್ಳಬೇಕೆಂದು ಕಾಂಗ್ರೆಸ್ಸು ಬ್ರಿಟಿಷ್ ಸರ್ಕಾರವನ್ನು ಕೇಳಿತು. ಆದರೆ ಈ ಕೋರಿಕೆಯನ್ನು ಬ್ರಿಟಿಷ್ ಸರ್ಕಾರ ಮನ್ನಿಸಲಿಲ್ಲ. ಅಷ್ಟೇ ಅಲ್ಲ. ಯುದ್ಧಾನಂತರ ಭಾರತದ ಸ್ವಾತಂತ್ರ್ಯ ಚಳುವಳಿ ಬಗ್ಗೆ ಬ್ರಿಟಿಷರ ಧೋರಣೆಯು ಹೆಚ್ಚು ಕಠೋರ ವಾಯಿತು. ರಾಜದ್ರೋಹಿ ಸಮಿತಿಯ (Sedition Committee) ಶಿಫಾರಸುಗಳ ಆಧಾರದ ಮೇಲೆ ಸರ್ಕಾರವು ರೋಲೆಟ್ ಮಸೂದೆಗಳನ್ನು ಇಂಪೀರಿಯಲ್ ವಿಧಾನಸಭೆಯ ಮುಂದಿಟ್ಟಿತು. ರಾಷ್ಟ್ರೀಯ ಚಳುವಳಿ ಯನ್ನು ಹತ್ತಿಕ್ಕಲು ಸರ್ಕಾರಕ್ಕೆ ಈ ಮಸೂದೆಗಳು ವಿಶೇಷ ಅಧಿಕಾರಗಳನ್ನು ನೀಡಿದವು. ಕಾಂಗ್ರೆಸ್ ಮುಖಂಡರಿಗಷ್ಟೇ ಅಲ್ಲದೆ, ಸೌಮ್ಯವಾದಿ ರಾಷ್ಟ್ರೀಯ ಮುಖಂಡರಿಗೂ ಈ ಕ್ರಮದಿಂದ ಅತ್ಯಂತ ನಿರಾಶೆಯಾಯಿತು. ಕಾಹಿಲೆಯಿಂದ ಮಲಗಿದ್ದ ಮಹಾತ್ಮಾ ಗಾಂಧಿಯವರು ಈ ಸುದ್ದಿ ತಿಳಿದಾಕ್ಷಣವೇ ಈ ಕಾನೂನುಗಳನ್ನು ಅಹಿಂಸಾ ಚಳುವಳಿಯ ಮೂಲಕ ವಿರೋಧಿಸಲು ತೀರ್ಮಾನಿಸಿದರು. ಅಲ್ಲದೆ, 1919ರ ಫೆಬ್ರುವರಿ 24ರಂದು ಸತ್ಯಾಗ್ರಹ ಸಮ್ಮೇಳನವೊಂದನ್ನು ಕೂಡಿಸಿ, 'ಸತ್ಯಾಗ್ರಹ ಪ್ರತಿಜ್ಞೆ'ಯೊಂ ದನ್ನು ('Satyagraha Pledge') ಸಿದ್ಧಪಡಿಸಿ ಈ ಸಮ್ಮೇಳನದಲ್ಲಿ ಸೇರಿ ದ್ದವರಿಂದ ರುಜು ಪಡೆದರು. ಅನೇಕ ಗಣ್ಯ ವ್ಯಕ್ತಿಗಳ ಬೆಂಬಲ ಪಡೆದು ಗಾಂಧಿಜಿಯವರು ಸತ್ಯಾಗ್ರಹ ಚಳುವಳಿಯ ಆರಂಭದ ಬಗ್ಗೆ ಹೀಗೆ ನಿಶ್ಚಯಿ ಸಿದರು.

ಇಂಪೀರಿಯಲ್ ವಿಧಾನಸಭೆಯಲ್ಲಿ ರೋಲೆಟ್ ಮಸೂದೆಗಳು ಚರ್ಚೆಗೆ ಬಂದಾಗ ಆ ಸಭೆಯ ಎಲ್ಲಾ ಚುನಾಯಿತ ಸದಸ್ಯರೂ ಈ ಮಸೂದೆಗಳನ್ನು ತೀವ್ರವಾಗಿ ವಿರೋಧಿಸಿದರು. ಶ್ರೀನಿವಾಸ ಶಾಸ್ತ್ರಿ, ಜಿನ್ನಾ, ಬ್ಯಾನರ್ಜಿ ಇತ್ಯಾದಿ ಎಲ್ಲರೂ ತರ್ಕಬದ್ಧವಾಗಿ ಅತ್ಯಂತ ಶ್ಲಾಘನೀಯ ಶೈಲಿಯಲ್ಲಿ ಈ ಮಸೂದೆಗಳ ವಿರುದ್ಧ ಭಾಷಣ ಮಾಡಿದರು.[1] "........ಈ ಮಸೂದೆಯನ್ನೇನಾದರೂ ಈ ಸಭೆ ಅಂಗೀಕರಿಸಿದಲ್ಲಿ, ಚಳುವಳಿಯನ್ನು ಸೇರದಿರುವ ಮತ್ತು ಈ ಮೂಲಕ ತನ್ನ ಕರ್ತವ್ಯವನ್ನು ಪಾಲಿಸದಿರುವ ಒಬ್ಬ ವ್ಯಕ್ತಿಯೂ ಇಲ್ಲಿ ಇಲ್ಲ ಎಂದು ನಂಬುತ್ತೇನೆ", ಎಂದು ಶ್ರೀನಿವಾಸಶಾಸ್ತ್ರಿಗಳು ತಮ್ಮ ಅಮೋಘ ಭಾಷಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಅತ್ಯಂತ ಸೌಮ್ಯವಾದಿ ರಾಷ್ಟ್ರೀಯ ಮುಖಂಡರುಗಳೂ ಹೇಗೆ ಬ್ರಿಟಿಷರ ಧೋರಣೆಯಿಂದ ಅಸಮಾಧಾನಗೊಂಡಿದ್ದರೆಂಬುದನ್ನು ಇದು ಸೂಚಿಸುತ್ತದೆ. ವಿಧಾನಸಭೆಯಲ್ಲಿ ರೌಲೆಟ್ ಮಸೂದೆಗಳನ್ನು ಅಂಗೀಕರಿಸಬಾರದೆಂದು ಒತ್ತಾಯಿಸಿ ಗಾಂಧೀಜಿಯವರು ವೈಸರಾಯ್ ಅವರಿಗೆ ದೀರ್ಘವಾದ ಪತ್ರ ಬರೆದರು. ಭಾರತೀಯರ ಆತ್ಮಗೌರವಕ್ಕೆ ಪೆಟ್ಟುಕೊಡುವಂತಹ ಈ ಕಾನೂನನ್ನು ಮಾಡಬಾರದೆಂದು ಸರ್ಕಾರವನ್ನು ಒಪ್ಪಿಸಲು ಅನೇಕ ಗಣ್ಯವ್ಯಕ್ತಿಗಳು ಪ್ರಯತ್ನಿಸಿದರು. ಆದರೆ ಇಂತಹ ಪ್ರಯತ್ನಗಳೆಲ್ಲಾ ವಿಫಲವಾದವು. 1919ರ ಮಾರ್ಚಿ ತಿಂಗಳಲ್ಲಿ 'ದಿ ಇಂಡಿಯನ್ ಕ್ರಿಮಿನಲ್ ಲಾ (ಅಮೆಂಡ್‌ಮೆಂಟ್) ಬಿಲ್ ನಂ.I, 1919, ಮತ್ತು ದಿ ಕ್ರಿಮಿನಲ್ ಲಾ (ಎಮರ್ಜೆನ್ಸಿ ಪವರ್ಸ್) ಬಿಲ್ ನಂ. II, 1919' ಎಂಬೆರಡು ಮಸೂದೆಗಳು ಜಾರಿಗೆ ಬಂದವು. ರೋಲೆಟ್ ಮಸೂದೆಗಳೆಂದು ಪ್ರಚುರವಾದ ಈ ನಿಯಮಗಳು ರಾಷ್ಟ್ರೀಯ ಚಳುವಳಿಯಲ್ಲಿ ಸೇರುವವರನ್ನು ಶಿಕ್ಷಿಸಲು ಸರ್ಕಾರಕ್ಕೆ ಅತ್ಯಂತ ಹೆಚ್ಚಿನ ಅಧಿಕಾರಗಳನ್ನು ನೀಡಿದವು. ಭಾರತದ ಜನತೆಯಿಂದ ಯುದ್ಧಕ್ಕೆ ವಿಶೇಷ ಸಹಾಯವನ್ನು ಪಡೆದ ಬ್ರಿಟಿಷ್ ಸರ್ಕಾರವು ಇಂತಹ ಕಠೋರ ಮಸೂದೆಗಳನ್ನು ಅನುಮೋದಿಸಿ ಜನರ ನ್ಯಾಯಸಮ್ಮತವಾದ ಸ್ವಾತಂತ್ರ್ಯ

1. ಕಾಯಿಲೆಯಿಂದ ಇನ್ನೂ ಚೇತರಿಸಿಕೊಳ್ಳುವ ಪರಿಸ್ಥಿತಿಯಲ್ಲಿದ್ದ ಮಹಾತ್ಮಾ ಗಾಂಧಿಯವರು ಈ ವಿಧಾನಸಭೆಗೆ ಪ್ರಥಮ ಬಾರಿಗೆ ಹಾಗೂ ಕಟ್ಟಕಡೆಯ ಬಾರಿಗೆ – ಚರ್ಚೆಯನ್ನು ವೀಕ್ಷಿಸಿ ಫಲಿತಾಂಶ ತಿಳಿಯುವ ಕುತೂಹಲದಿಂದ ಹಾಜರಾದರು.

ಬೇಡಿಕೆಗಾಗಿ ನಡೆಸುತ್ತಿದ್ದ ಚಳುವಳಿಯನ್ನು ಹತ್ತಿಕ್ಕಲು ಹೊರಟಿರುವುದರ ಬಗ್ಗೆ ಇಡೀ ರಾಷ್ಟ್ರವೇ ತೀವ್ರ ಅಸಮಾಧಾನಗೊಂಡಿದ್ದಿತು.

ರಾಷ್ಟ್ರೀಯ ಮುಖಂಡರುಗಳು ಈ ಪರಿಸ್ಥಿತಿಯಲ್ಲಿ ಏನು ಮಾಡ ಬೇಕೆಂಬ ಬಗ್ಗೆ ಆಲೋಚಿಸತೊಡಗಿದರು. ಸಿ. ರಾಜಗೋಪಾಲಾಚಾರಿ ಯವರ ಆಹ್ವಾನದ ಮೇಲೆ ಗಾಂಧೀಜಿಯವರು ಮಹದೇವ್ ದೇಸಾಯಿ ಅವರ ಜೊತೆಯಲ್ಲಿ ಮದರಾಸಿಗೆ ಹೋಗಿ ಅಲ್ಲಿ ಇತರ ಮುಖಂಡರೊಡನೆ ಸಮಾ ಲೋಚಿಸಿದರು. ರೋಲೆಟ್ ಮಸೂದೆಗಳನ್ನು ಪ್ರತಿಭಟಿಸಲು ರಾಷ್ಟ್ರಾ ದ್ಯಂತ ಹರತಾಳ ಆಚರಿಸಿ, ಅಂದು ಉಪವಾಸಗಳನ್ನು ಕೈಗೊಂಡು ಪ್ರಾರ್ಥನೆ ಯಲ್ಲಿ ತೊಡಗಬೇಕೆಂದು ಗಾಂಧೀಜಿಯವರ ಸಲಹೆಯಂತೆ ನಿರ್ಧರಿಸಲಾ ಯಿತು. ಹರತಾಳ, ಆತ್ಮಶುದ್ಧಿಗಾಗಿ ಉಪವಾಸ ಹಾಗೂ ಪ್ರಾರ್ಥನೆಗ ಳೆಲ್ಲವೂ ಗಾಂಧೀಜಿಯವರ ಸತ್ಯಾಗ್ರಹದ ಅಂಗಗಳಾಗಿದ್ದವು. 1919 ರ ಏಪ್ರಿಲ್ 6ನೆಯ ದಿನಾಂಕವನ್ನು ರಾಷ್ಟ್ರೀಯ ಹರತಾಳದ ದಿನಾಂಕವನ್ನಾಗಿ ನಿಶ್ಚಯಿಸಲಾಯಿತು. ಅಂದು ದೇಶದ ನಾನಾ ಕಡೆಗಳಲ್ಲೂ ಜನರು ಸಭೆ ಸೇರಿ — ಹಳ್ಳಿಗಳಲ್ಲಿಯೂ — ರೋಲೆಟ್ ಮಸೂದೆಗಳನ್ನು ಸರ್ಕಾರವು ಹಿಂತೆಗೆದುಕೊಳ್ಳುವ ಮನವಿಯನ್ನು ಅನುಮೋದಿಸಬೇಕೆಂದು ಜನರಿಗೆ ಗಾಂಧೀಜಿಯವರು ಆದೇಶ ನೀಡಿದರು. ಮುಟ್ಟುಗೋಲು (Proscribed) ಹಾಕಿದ್ದ ಪುಸ್ತಕಗಳಾದ ಗಾಂಧೀಜಿಯವರ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯ' ಇಂತಹ ಪುಸ್ತಕಗಳನ್ನು ಬಹಿರಂಗವಾಗಿ ಮಾರಾಟ ಮಾಡಬೇಕೆಂದು ಕರೆಕೊಟ್ಟರು.

ಗಾಂಧೀಜಿಯವರ ಕರೆಗೆ ಓಗೊಟ್ಟು ಭಾರತದ ನಾನಾ ಭಾಗಗಳಲ್ಲೂ ಏಪ್ರಿಲ್ 6 ರಂದು ಹರತಾಳ ಆಚರಿಸಲಾಯಿತು. ಕೆಲವು ಸಣ್ಣಪುಟ್ಟ ಹಿಂಸಾತ್ಮಕ ಕಾರ್ಯಗಳನ್ನು ಬಿಟ್ಟರೆ ಒಟ್ಟಿನಲ್ಲಿ ಹರತಾಳವು ಶಾಂತಿಯುತ ವಾಗಿಯೇ ಆಚರಿಸಲ್ಪಟ್ಟಿತು. ಆದಾಗ್ಯೂ ಸರ್ಕಾರವು ಚಳುವಳಿಯ ವಿರುದ್ಧ ತೀವ್ರಕ್ರಮಗಳನ್ನು ಕೈಗೊಂಡಿತು. ಪಂಜಾಬಿನಲ್ಲಿ ಈ ಕ್ರಮಗಳು ಅತ್ಯಂತ ಘೋರ ಸ್ವರೂಪವನ್ನು ತಾಳಿದುವು. ಭಾರತೀಯರ ಅಮಾನುಷ ಕೊಲೆ ಜಲಿಯನ್‌ವಾಲಾಬಾಗ್ ಎಂಬಲ್ಲಿ ಸಂಭವಿಸಿತು. ಇದರ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ.

ಜಲಿಯನ್‌ವಾಲಾಬಾಗ್[1]

ಅತ್ಯಂತ ಮುಂದುವರಿದ ರಾಷ್ಟ್ರದವರೂ ಹೆಚ್ಚು ನಾಗರಿಕ ಜನಾಂಗ ಎಂದು ಪ್ರಸಿದ್ಧಿ ಪಡೆದವರೇ ಆಗಿದ್ದ ಬ್ರಿಟಿಷರು ಅತ್ಯಂತ ಅನಾಗರಿಕ ಕೊಲೆ ಪಾತಕರಾದುದರ ನಿದರ್ಶನ ಜಲಿಯನ್‌ವಾಲಾಬಾಗ್ ದುರಂತ. ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಅನೇಕ ಪ್ರಯತ್ನಗಳಲ್ಲಿ ಅಮಾಯಕ ಜನರ ಗುಂಪಿನ ಮೇಲೆ ಗುಂಡಿನ ಸುರಿಮಳೆ ಸುರಿಸಿ ಜನರ ಕೊಲೆ ಮಾಡಿದುದು ಅಕ್ಷಮ್ಯ ರಾಕ್ಷಸೀಕೃತ್ಯವೆನ್ನಬಹುದು. ಪಂಜಾಬಿನ ಲೆಫ್ಟಿನೆಂಟ್ ಗೌರ್ನರ್ ಸರ್ ಮೈಕೇಲ್ ಓಡಯರ್ ಹಾಗೂ ಸೈನ್ಯಾಧಿಪತಿ ಜನರಲ್ ಡಯರ್ ಇವರಿಬ್ಬರು ಕಟ್ಟಾ ಸಾಮ್ರಾಜ್ಯವಾದಿಗಳು. ಸಿಕ್ಕಾಪಟ್ಟೆ ಜನರನ್ನು ಕೊಂದರೆ ಭೀತಿಗೊಂಡು ಭಾರತೀಯರು ಸ್ವಾತಂತ್ರ್ಯ ಚಳುವಳಿಯನ್ನು ನಿಲ್ಲಿಸುವರೆಂದು ನಂಬಿದ್ದ ಮಹಾಶಯರು ಇವರು.

ಕಾಂಗ್ರೆಸ್ಸು 1919ರ ಏಪ್ರಿಲ್ 6 ರಂದು 'ಹರತಾಳ'ದ ಕರೆಕೊಟ್ಟಿರುವ ವಿಷಯ ತಿಳಿದಾಗ ಮೈಕೇಲ್ ಓಡಯರನು ಪಂಜಾಬ್ ಪ್ರಾಂತ್ಯದಲ್ಲಿ ಜನರು ಯಾವ ರೀತಿಯ ರಾಜಕೀಯ ಚಳುವಳಿಯನ್ನೂ ನಡೆಸಬಾರದೆಂಬ ಎಚ್ಚರಿಕೆಯನ್ನು ನೀಡಿದನು. ಈ ಎಚ್ಚರಿಕೆಯನ್ನು ಗಣನೆಗೆ ತಾರದೆ ಅಲ್ಲಿನ ಜನರು ಹರತಾಳ ಆಚರಿಸಿದಾಗ ಅವರ ಮುಖ್ಯ ಮುಖಂಡರಾದ ಡಾ. ಸತ್ಯಪಾಲ್ ಮತ್ತು ಡಾ. ಕಿಚಲು ಎಂಬುವರನ್ನು ಸೆರೆ ಹಿಡಿದರು. ಇವರುಗಳ ಬಿಡುಗಡೆಗಾಗಿ ಜನರು ಚಳುವಳಿ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ 1919ರ ಏಪ್ರಿಲ್ 13 ರಂದು ಮಧ್ಯಾಹ್ನ 4–30 ಗಂಟೆಗೆ ಸಾರ್ವಜನಿಕ ಸಭೆಯೊಂದು ಜಲಿಯನ್‌ವಾಲಾಬಾಗ್‌ನಲ್ಲಿ ಏರ್ಪಾಡಾಗಿತ್ತು. ಈ ಸಭೆಗೆ ಸುಮಾರು 20,000 ಜನ – ಗಂಡಸರು, ಹೆಂಗಸರು, ಮಕ್ಕಳು – ಸೇರಿದ್ದರೆಂದು ಅಂದಾಜುಮಾಡಲಾಗಿದೆ. ಹೀಗೆ ನೆರೆದಿದ್ದ ಜನಸ್ತೋಮವನ್ನು ಹೆದರಿಸಿ ಕಂಗಾಲುಗೊಳಿಸಲು ಜನರಲ್ ಡಯರ್ ತನ್ನ 150 ಸೈನಿಕರೊಡನೆ ನುಗ್ಗಿ ನೇರವಾಗಿ ಜನರ ಮೇಲೆ ಗುಂಡು ಹಾರಿಸುವಂತೆ ಆಜ್ಞೆ ಇತ್ತನು.

---

1. ಜಲಿಯನ್‌ವಾಲಾಬಾಗ್ ಅಮೃತಸರ ನಗರದ ಮಧ್ಯದಲ್ಲಿರುವ ಒಂದು ಭಾರಿ ಮೈದಾನ; ಇದರ ಸುತ್ತಲೂ ಗೋಡೆ: ಇದಕ್ಕೆ ಒಂದೇ ಮುಖ್ಯವಾದ ದ್ವಾರ ಮತ್ತು ಹೊರಕ್ಕೆ ಹೋಗಲು ಕೆಲವು ಸಣ್ಣ ಗೇಟುಗಳು.

ಹಠಾತ್ತಾಗಿ ಗುಂಡಿನ ಸುರಿಮಳೆಗೆ ಸಿಲುಕಿಬಿದ್ದ ಜನರು ಸ್ವಾಭಾವಿಕ ವಾಗಿಯೇ ಗಾಬರಿಯಿಂದ ಹೊರಗೆ ಓಡಲು ತೊಡಗಿದರು. ಆದರೆ ಮುಖ್ಯ ದ್ವಾರದಿಂದ ಸೇನೆ ತನ್ನ ಗುಂಡು ಹಾರಿಸುತ್ತಿತ್ತು. ಹತ್ತು ನಿಮಿಷ ಎಡೆ ಬಿಡದೆ 1750 ರೌಂಡು ಗುಂಡು ಹಾರಿಸಿ ಅಲ್ಲಿಗೆ ನಿಲ್ಲಿಸಲಾಯಿತು. ಇಷ್ಟ ರಲ್ಲಿಯೇ ನೂರಾರು ಜನರು ಮಡಿದರು ಮತ್ತು ಸಾವಿರಾರು ಜನ ತೀವ್ರ ಗಾಯಗೊಂಡರು. ಜನರ ಗೋಳನ್ನು ನಾವು ಊಹಿಸಿಕೊಳ್ಳಬಹುದೇ ವಿನಹ ವರ್ಣಿಸಲು ಆಗುವುದಿಲ್ಲ[1]. ತಾನು ಎಸಗಿದ ಸಾಹಸ ಕಾರ್ಯದ ಬಗ್ಗೆ ಹೆಮ್ಮೆಪಟ್ಟುಕೊಂಡ ಜನರಲ್ ಡಯರ್ ತನ್ನಲ್ಲಿದ್ದ ಗುಂಡಿನ ಸಾಮಗ್ರಿ ಮುಗಿಯದಿದ್ದರೆ ಗುಂಡಿನ ಸುರಿಮಳೆಯನ್ನು ಇನ್ನೂ ಮುಂದುವರಿಸುತ್ತಿದ್ದೆ ಎಂದು ಹೇಳಿದುದನ್ನು ನೆನಪಿಸಿಕೊಂಡರೆ ಭಾರತೀಯರಲ್ಲಿ ಅಥವಾ ಮಾನ ವೀಯತೆಯುಳ್ಳ ಯಾವುದೇ ಇತರ ಜನಾಂಗದವರಲ್ಲಿ ಏನು ಭಾವನೆ ಉಂಟಾಗಬಹುದು !

ಜಲಿಯನ್‌ವಾಲಾಬಾಗಿನ ಮೇಲಿನ ಘೋರ ಘಟನೆಯನ್ನು ಭಾರತೀಯ ರೆಲ್ಲಾ ತೀವ್ರವಾಗಿ ಖಂಡಿಸಿದರು. ಬ್ರಿಟಿಷರ ರಾಕ್ಷಸೀ ವರ್ತನೆಯಿಂದ ಬೇಸರ ಗೊಂಡ ಶ್ರೇಷ್ಠ ಕವಿ ರವೀಂದ್ರನಾಥ ಟಾಗೂರ್ ಅವರು ಬ್ರಿಟಿಷ್ ಸರ್ಕಾರವು ಅವರಿಗೆ ನೀಡಿದ 'ನೈಟ್‌ಹುಡ್' (Knighthood) ಗೌರವವನ್ನು ತಿರಸ್ಕರಿಸಿ ವಾಪಸುಮಾಡಿದರು. ಒಟ್ಟಿನಲ್ಲಿ ಜಲಿಯನ್‌ವಾಲಾಬಾಗಿನ ಕೊಲೆಪ್ರಕರಣದ ಹಾಗೂ ಡಯರ್ ಆಡಳಿತದ ಇತರ ಕ್ರೂರ ಕ್ರಮಗಳ ಪರಿಣಾಮವಾಗಿ ಸ್ವಾತಂತ್ರ್ಯಗಳಿಸಲು ಇನ್ನೂ ತೀವ್ರವಾಗಿ ಹೋರಾಡಬೇಕೆಂಬ ಭಾವನೆ ಭಾರತೀಯರಲ್ಲಿ ಬಲಗೊಂಡಿತು.

ಖಿಲಾಫತ್ ಚಳುವಳಿ

ಇಪ್ಪತ್ತರ ದಶಕದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯ ಮೇಲೆ ಪ್ರಭಾವ ಬೀರಿದ ಇನ್ನೊಂದು ಮುಖ್ಯ ಘಟನೆ ಶಾಂತಿಕೌಲಿನಲ್ಲಿ ಟರ್ಕಿ ದೇಶಕ್ಕೆ ಬ್ರಿಟಿಷರು ಮಾಡಿದ ಅವಮಾನಕ್ಕೆ ಸಂಬಂಧಿಸಿದೆ. ಟರ್ಕಿ ಮತ್ತು ಮಿತ್ರ ರಾಷ್ಟ್ರಗಳೊಳಗೆ 1920ರಲ್ಲಿ ಮಾಡಿಕೊಳ್ಳಲಾದ ಶಾಂತಿ

---

1. ಈ ಭೀಕರ ಕೊಲೆ ಬಗ್ಗೆ ಕೆಲವು ವಿವರಣೆಗಳಿಗೆ ಅನುಬಂಧ ನೋಡಿ.

ಒಪ್ಪಂದದಲ್ಲಿ ಟರ್ಕಿ ಸುಲ್ತಾನನ ಮತೀಯ ಅಂತಸ್ತು (Temporal Powers) ಹಾಗೂ ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಇದು ತಮ್ಮ ಮತಕ್ಕೆ ಮಾಡಿದ ದೊಡ್ಡ ಅವಮಾನನೆಂದು ಎಲ್ಲಾ ಮುಸಲ್ಮಾನರೂ – ಭಾರತೀಯ ಮುಸಲ್ಮಾನರೂ ಸೇರಿ – ಕೋಪಗೊಂಡರು. ಟರ್ಕಿ ಸಾಮ್ರಾಜ್ಯವನ್ನು ಹಾಗೂ ಖಿಲಾಫತ್ತಿನ ಮುಸ್ಲಿಂ ಮತೀಯ ಸರ್ವೋಚ್ಚ ಸಂಸ್ಥೆಯನ್ನೂ ಹಿಂದಿನಂತೆಯೇ ಉಳಿಸಿಕೊಂಡು ಬರುವ ಉದ್ದೇಶದಿಂದ 'ಖಿಲಾಫತ್ ಚಳುವಳಿ' ಆರಂಭವಾಯಿತು. ಮಹಾತ್ಮಾ ಗಾಂಧಿಯವರ ಅಭಿಪ್ರಾಯದಂತೆ ಬ್ರಿಟಿಷರ ವಿರುದ್ಧದ ಈ ಚಳುವಳಿಯಲ್ಲಿ ಭ್ರಾತೃತ್ವ ಭಾವನೆಯಿಂದ ಹಿಂದೂಗಳು ಮುಸಲ್ಮಾನರ ಜೊತೆ ಸೇರಿದರು.[1]

ಗಾಂಧಿಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಖಿಲಾಫತ್ ಸಮ್ಮೇಳನವೊಂದು 1919ರ ನವೆಂಬರ್ 14ರಂದು ಜರುಗಿತು. ಉರ್ದು ಭಾಷೆಯಲ್ಲಿ ಭಾಷಣ ಮಾಡುತ್ತಾ ಗಾಂಧಿಜಿಯವರು ಖಿಲಾಫತ್ ಚಳುವಳಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನೂ ಹಿಂದೂ – ಮುಸಲ್ಮಾನರ ಐಕ್ಯತೆಯ ಪ್ರಾಮುಖ್ಯವನ್ನೂ ಕುರಿತು ವಿವರಿಸಿ ಖಿಲಾಫತ್ ಸಮಸ್ಯೆಯನ್ನು ಮುಸಲ್ಮಾನರಿಗೆ ತೃಪ್ತಿಯಾಗುವ ರೀತಿಯಲ್ಲಿ ಬಗೆಹರಿಸಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ಮನವಿಮಾಡಿಕೊಂಡರು. ಹೀಗೆ ಸಮಸ್ಯೆಯನ್ನು ಪರಿಹರಿಸದಿದ್ದರೆ ಭಾರತೀಯರು ಸರ್ಕಾರದ ವಿರುದ್ಧ ಅಸಹಕಾರ ಚಳುವಳಿ ನಡೆಸುವರೆಂದು ಘೋಷಿಸಿದರು. 1920ರ ಜನವರಿಯಲ್ಲಿ ಹಿಂದು ಹಾಗೂ ಮುಸಲ್ಮಾನ ಮುಖಂಡರುಗಳು ಈ ವಿಷಯವಾಗಿ ವೈಸ್‌ರಾಯ್ ಅವರೊಡನೆ ಮಾತುಕತೆ ನಡೆಸಿದರು. ಮುಹಮ್ಮದ್ ಆಲಿ ನೇತೃತ್ವದಲ್ಲಿ ಇನ್ನೊಂದು ನಿಯೋಗವು ಬ್ರಿಟಿಷ್ ಮುಖ್ಯಮಂತ್ರಿ ಲಾಯ್ಡ್ ಜಾರ್ಜ್

1. ಗಾಂಧಿಜಿಯವರು ತಮ್ಮ ದೈನಂದಿನ ಪ್ರಾರ್ಥನಾಸಭೆಗಳಲ್ಲಿ "ರಘುಪತಿ ರಾಘವ ರಾಜಾರಾಮ್ । ಪತಿತಪಾವನ ಸೀತಾರಾಮ್ ॥ ಈಶ್ವರ ಅಲ್ಲಾ ತೇರೇ ನಾಮ್ । ಸಬಕೋ ಸನ್ಮತಿ ದೇ ಭಗವಾನ್ ॥" ಎಂಬುದನ್ನು ತಾವೂ ಹಾಡಿ ಸಾಮೂಹಿಕವಾಗಿ ನೆರೆಯುತ್ತಿದ್ದ ಜನಸ್ತೋಮದಿಂದಲೂ ಹಾಡಿಸುತ್ತಿದ್ದುದು ಹಿಂದೂ ಹಾಗೂ ಮುಸಲ್ಮಾನರನ್ನು ಒಟ್ಟುಗೂಡಿಸಲು ಅವರು ಮಾಡಿದ ಅನೇಕ ವಿಧದ ಪ್ರಯತ್ನಗಳಲ್ಲಿ ಒಂದು ವಿಧವಾಗಿದ್ದಿತು.

ಅವರನ್ನು ಭೇಟಿ ಮಾಡಿತು. ಆದರೆ ವೈಸ್‌ರಾಯ್ ಹಾಗೂ ಬ್ರಿಟಿಷ್ ಮುಖ್ಯಮಂತ್ರಿಗಳು ನೀಡಿದ ಪ್ರತಿಕೂಲ ಉತ್ತರದಿಂದ ಭಾರತೀಯರಿಗೆ ತುಂಬಾ ನಿರಾಶೆಯಾಯಿತು. ಈ ಪ್ರತಿಕೂಲ ಧೋರಣೆ ಪ್ರತಿಭಟಿಸಲು 1920ರ ಮಾರ್ಚ್ 19ರಂದು ಸಾರ್ವತ್ರಿಕ 'ಹರತಾಳ', ಪ್ರಾರ್ಥನೆ ಹಾಗೂ ಉಪವಾಸವ್ರತ ಆಚರಿಸಲಾಯಿತು. ಬೊಂಬಾಯಿನಲ್ಲಿ ಸೇರಿದ ಖಿಲಾಫತ್ ಸಭೆಯಲ್ಲಿ ಗಾಂಧಿಜಿಯವರು ಅಸಹಕಾರ ಚಳುವಳಿ ಕುರಿತ ಚರಿತ್ರಾರ್ಹ ಮಸೂದೆಯೊಂದನ್ನು[1] ಮಂಡಿಸಿದರು. ಬ್ರಿಟಿಷರು ಕೊಟ್ಟಿದ್ದ ಬಿರುದು ಗಳನ್ನು ಅನೇಕ ಭಾರತೀಯರು ತ್ಯಜಿಸಿದರು. ಬ್ರಿಟಿಷರು ಮುಸಲ್ಮಾನ ಪ್ರಪಂಚಕ್ಕೆ ಮಾಡಿದ ಅನ್ಯಾಯವನ್ನು ಸರಿಪಡಿಸುವಂತೆ ಅನೇಕ ಸಾರಿ ಖಿಲಾಫತ್ ಸಮಿತಿಯು ಮನವಿಮಾಡಿಕೊಂಡಿತು. ಇದ್ಯಾವುದಕ್ಕೂ ಬ್ರಿಟಿಷರು ಮಣಿಯದುದರಿಂದ ಮುಖಂಡರು ಅಸಹಕಾರ ಚಳುವಳಿ ಕೈಗೊಳ್ಳುವ ನಿರ್ಧಾರಕ್ಕೆ ಬರಬೇಕಾಯಿತು.

ಹೀಗೆ 1919–20ರ ವರ್ಷಗಳಲ್ಲಿ ರೋಲೆಟ್ ಮಸೂದೆಗಳು, ಜಲಿಯನ್‌ವಾಲಾಬಾಗ್, ಖಿಲಾಫತ್ ಇಂತಹ ಘಟನೆಗಳಿಂದ ಬ್ರಿಟಿಷರು ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ನಿರತ ರಾದುದು ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ಉಂಟುಮಾಡಿತು. ಈ ಸನ್ನಿವೇಶದಲ್ಲಿ ಮಹಾತ್ಮಾ ಗಾಂಧಿಯವರು ಅಸಹಕಾರ ಚಳುವಳಿಯನ್ನು ನಡೆಸುವ ನಿರ್ಧಾರಕ್ಕೆ ಬಂದರು. ಈ ಚಳುವಳಿಯ ಸ್ವರೂಪ ಹಾಗೂ ಮುನ್ನಡೆ ಕುರಿತು ಈ ಕೆಳಗೆ ವಿವರಿಸಲಾಗುವುದು.

ಅಸಹಕಾರ ಚಳುವಳಿ – ಪ್ರಥಮ ಹಂತ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮಾ ಗಾಂಧಿಯವರ ಸರ್ವೋಚ್ಚ ನೇತೃತ್ವದಲ್ಲಿ ನಡೆದ ಅಸಹಕಾರ ಚಳುವಳಿ ಭಾರತದ ಸ್ವಾತಂತ್ರ್ಯ ಕೇಳಿಕೆ ಬಗ್ಗೆ ಬ್ರಿಟಿಷ್ ಸರ್ಕಾರದ ಮೇಲೆ ವಿಶೇಷ ಪರಿಣಾಮ ಉಂಟು ಮಾಡಿದ ವಿಷಯವಾಗಿದೆ. ಅಮೃತಸರದಲ್ಲಿ 1919 ರ ಡಿಸೆಂಬರ್ ಕೊನೆ

1. ಈ ಮಸೂದೆಯ ಪೂರ್ಣ ಪಾಠಕ್ಕೆ ನೋಡಿ: Tendulkar vol I *op. cit*, P. 285

ಸಾರ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ[1] ಐವತ್ತು ಮಹತ್ವಪೂರಿತವಾದ ನಿರ್ಣಯಗಳು ಅನುಮೋದಿಸಲ್ಪಟ್ಟವು. ಮೈಕೇಲ್ ಓಡಯರ್ ಹಾಗೂ ಜನರಲ್ ಡಯರ್ ಅವರನ್ನು ಅಧಿಕಾರದಿಂದ ವಜಾಮಾಡುವುದು, ವೈಸ್ ರಾಯ್ ಲಾರ್ಡ್ ಚೆಮ್ಸ್‌ಫರ್ಡ್ ಅವರನ್ನು ವಾಪಸು ಕರೆಸಿಕೊಳ್ಳುವುದು, ಇಂತಹ ವಿಷಯಗಳ ಜೊತೆಗೆ ದೇಶದ ಭೂ ಕಂದಾಯ ಪದ್ಧತಿಯ ಸುಧಾರಣೆ, ಕಾರ್ಮಿಕರ ಪರಿಸ್ಥಿತಿ ಉತ್ತಮಗೊಳಿಸುವಿಕೆ, ಮೂರನೆ ತರಗತಿ ರೈಲು ಪ್ರಯಾಣಿಕರಿಗೆ ಸೌಕರ್ಯ ಕಲ್ಪಿಸುವುದು, ಸ್ವದೇಶಿ, ಪಾನನಿರೋಧ ಇವೇ ಮೊದಲಾದ ವಿವಿಧ ವಿಷಯಗಳೆಲ್ಲವನ್ನೂ ಈ ಐವತ್ತು ನಿರ್ಣಯಗಳು ಒಳಗೊಂಡಿದ್ದವು. ಸ್ವಾತಂತ್ರ್ಯ ಚಳುವಳಿಯ ಜೊತೆಗೆಯೇ ಜನರ ಕಷ್ಟಗಳು ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರವನ್ನು ಒತ್ತಾಯಿಸುವುದು ಕಾಂಗ್ರೆಸ್ ನಡೆಸುತ್ತಿದ್ದ ಹೋರಾಟದ ಮುಖ್ಯ ಅಂಶವಾಗಿದ್ದಿತೆಂಬುದನ್ನು ಇದು ತೋರಿಸುವುದು.

ಅಮೃತಸರ್ ಕಾಂಗ್ರೆಸ್ಸಿನ ಕಲಾಪಗಳಲ್ಲಿ ಗಾಂಧಿಜಿಯವರವೇ ಅತಿ ಮುಖ್ಯ ಪಾತ್ರವಾಗಿದ್ದಿತು. ಆ ವೇಳೆಗೆ ಗಾಂಧಿಜಿಯವರು ತಮ್ಮ ವೈಯಕ್ತಿಕ ಸಾಧನೆಗಳಿಂದಲೂ, ಉನ್ನತ ಧ್ಯೇಯ ಹಾಗೂ ತತ್ವಗಳಿಂದಲೂ ಕಾಂಗ್ರೆಸ್ಸಿಗ

---

1. ಈ ಅಮೃತಸರ ಕಾಂಗ್ರೆಸ್ಸಿನ ಬಗ್ಗೆ ಟೆಂಡೂಲ್ಕರ್ ಅವರು ವಾಚಕರ ಗಮನ ಸೆಳೆದಿರುವ ಒಂದು ವಿಷಯ ಇಲ್ಲಿ ಗಮನಾರ್ಹವಾಗಿದೆ. ಈ ಕಾಂಗ್ರೆಸ್ ಅಧಿವೇಶನ "ಅನೇಕರಿಗೆ ಒಂದು ಯಾತ್ರಾಸ್ಥಳವಾಗಿದ್ದಿತು. ಅಧಿವೇಶನದ ವಾರದಲ್ಲಿ ಸಾವಿರಾರು ಪ್ರೇಕ್ಷಕರು ಹಾಗೂ ಕಾಂಗ್ರೆಸ್ ಪ್ರತಿನಿಧಿಗಳು ಜಲಿಯನ್ ವಾಲಾಬಾಗಿಗೆ ಭೇಟಿ ಇತ್ತರು. ರಕ್ತ ಚೆಲ್ಲಿದ ಸ್ಥಳದ ಭೂಮಿಯನ್ನು ಕೆಲವರು ತಮ್ಮ ಹಣೆಗಳಿಂದ ಮುಟ್ಟಿದರು, ಕೆಲವರು ಆ ಸ್ಥಳದ ಸ್ವಲ್ಪ ಮಣ್ಣನ್ನು ಪವಿತ್ರಸ್ಮಾರಕವಾಗಿ ತಮ್ಮಲ್ಲಿ ಇಟ್ಟುಕೊಳ್ಳಲು ತೆಗೆದುಕೊಂಡು ಹೋದರು; ಇನ್ನು ಕೆಲವರು ಆ ಮಣ್ಣನ್ನು ತಮ್ಮ ಹಣೆಗೆ ಹಚ್ಚಿಕೊಂಡರು". (Tendulkar vol I *op. cit*, P. 276) ಅಮಾಯಕ ಜನರು ಜಲಿಯನ್‌ವಾಲಾ ಬಾಗಿನಲ್ಲಿ ಬ್ರಿಟಿಷರ ಗುಂಡಿಗೆ ಬಲಿಯಾದ ದುರಂತವು ಭಾರತೀಯರನ್ನು ಎಷ್ಟು ಮಟ್ಟಿಗೆ ಭಾವೋದ್ರೇಕಗೊಳಿಸಿತ್ತೆಂಬುದನ್ನು ಇವು ತೋರಿಸುವುವು.

ರೆಲ್ಲರಿಗೂ ಅತ್ಯಂತ ಅಚ್ಚುಮೆಚ್ಚಿನ ವ್ಯಕ್ತಿಯಾಗಿದ್ದರು.[1] ಸರ್ವೋಚ್ಚ ಮುಖಂಡಸ್ಥಾನ ಅವರಿಗೆ ಸ್ವಾಭಾವಿಕವಾಗಿಯೇ ಲಭಿಸಿ ಸ್ವಾತಂತ್ರ್ಯ ಚಳುವಳಿಯನ್ನು ನಿರ್ದೇಶಿಸುವಂತಾಯಿತು.

ಯುದ್ಧವಾದನಂತರ ಬ್ರಿಟಿಷರು ಭಾರತಕ್ಕೆ ಸ್ವರಾಜ್ಯ ನೀಡುವರೆಂದು ನಂಬಿ ಗಾಂಧಿಜಿಯವರು ಬ್ರಿಟಿಷರ ಯುದ್ಧಪ್ರಯತ್ನಕ್ಕೆ ಪ್ರತ್ಯುಪೂರ್ವಕವಾಗಿ ತಮ್ಮ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿದುದನ್ನು ಹಿಂದೆಯೇ ಹೇಳಿರುತ್ತೇವೆ. 1919 ರ ಘಟನೆಗಳು — ರೋಲೆಟ್ ಮಸೂದೆಗಳು, ಜಲಿಯನ್‌ವಾಲಾಬಾಗಿನ ಕೊಲೆ ಪ್ರಕರಣ ಹಾಗೂ ಪಂಜಾಬಿನಲ್ಲಿ ಮಿಲಿಟರೀ ಶಾಸನದ ಘೋರಕ್ರಮಗಳು, ಖಿಲಾಫತ್ ಚಳುವಳಿಗೆ ಬ್ರಿಟಿಷರ ಪ್ರತಿಕ್ರಿಯೆ ಇವೆಲ್ಲವೂ ಗಾಂಧೀಜಿಯವರನ್ನು ದಿಗ್ಭ್ರಮೆಗೊಳಿಸಿತು. ಬ್ರಿಟಿಷರ ನ್ಯಾಯಪರತೆ ಬಗ್ಗೆ ಅವರ ವಿಶ್ವಾಸ ಸಂಪೂರ್ಣವಾಗಿ ಅಳಿಸಿಹೋಯಿತು. ಕೇವಲ ಸೌಜನ್ಯ ಕೋರಿಕೆಗಳಿಂದ ಬ್ರಿಟಿಷರು ಸ್ವಾತಂತ್ರ್ಯ ನೀಡುವುದಿಲ್ಲವೆಂಬುದನ್ನು ಅವರು ಮನಗಂಡರು. ಇತರ ರಾಷ್ಟ್ರೀಯ ಮುಖಂಡರುಗಳ ಸಾರ್ವತ್ರಿಕ ಅಭಿಪ್ರಾಯವೂ ಇದೇ ಆಗಿದ್ದಿತು.

ಹೀಗೆ 1919ರ ಬದಲಾಯಿಸಿದ ಸನ್ನಿವೇಶದಲ್ಲಿ ಗಾಂಧಿಜಿಯವರು ಅಸಹಕಾರ ಚಳುವಳಿ ಬಗ್ಗೆ ತೀವ್ರವಾಗಿ ಆಲೋಚಿಸತೊಡಗಿದರು. ಮುಸಲ್ಮಾನರು ಪ್ರಾರಂಭಿಸಿದ ಖಿಲಾಫತ್ ಚಳುವಳಿಯಲ್ಲಿ ಹಿಂದೂಗಳೂ ಸಕ್ರಿಯ ಪಾತ್ರವಹಿಸುವುದರ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಸಲ್ಮಾನರೂ ಹಿಂದೂಗಳೂ ಒಂದಾಗಿ ಬ್ರಿಟಿಷರನ್ನು ಎದುರಿಸುವರೆಂದು

1. ತಮ್ಮ ಭಾವನೆಗಳನ್ನು ಜನರಲ್ಲಿ ಪ್ರಚಾರಪಡಿಸಲು ಗಾಂಧೀಜಿಯವರು 'ನವಜೀವನ್' ಎಂಬ ಗುಜರಾತಿ ಮಾಸಿಕ ಪತ್ರಿಕೆಯ, 'ಯಂಗ್ ಇಂಡಿಯ' ಎಂಬ ಇಂಗ್ಲಿಷ್ ವಾರಪತ್ರಿಕೆಯ ಪ್ರಕಾಶಕರಾಗಿ 1919ರ ಅಕ್ಟೋಬರ್‌ನಲ್ಲಿ ಕೆಲಸವನ್ನು ನಿರ್ವಹಿಸಿಕೊಂಡರು. ಜನರಿಗೆಲ್ಲ ಇವು ತಲುಪಬೇಕೆಂಬ ಉದ್ದೇಶದಿಂದ ಇವುಗಳ ಬೆಲೆ ಕೇವಲ ಒಂದು ಆಣೆ ಮಾತ್ರ ನಿಗದಿ ಮಾಡಿದ್ದರು. ತರುವಾಯ ಪ್ರಕಟಣೆ ಪ್ರಾರಂಭಿಸಲಾದ 'ಹರಿಜನ' ಎಂಬ ವಾರಪತ್ರಿಕೆಯೂ ಗಾಂಧಿಜಿಯವರ ಭಾವನೆಗಳನ್ನು ಜನರಿಗೆ ತಿಳಿಸುವ ಮುಖ್ಯ ಸಾಧನವಾಯಿತು.

ಗಾಂಧೀಜಿಯವರು ನಂಬಿ ಅಸಹಕಾರ ಚಳುವಳಿ ಪ್ರಾರಂಭಕ್ಕೆ ಅವಶ್ಯಕ ಕ್ರಮ ಕೈಗೊಳ್ಳಲಾರಂಭಿಸಿದರು.

ಅಸಹಕಾರ ಚಳುವಳಿ ಪ್ರಶ್ನೆ ವಿವೇಚಿಸಲು 1920ರ ಸೆಪ್ಟೆಂಬರ್‌ನಲ್ಲಿ ಲಾಲಾ ಲಜಪತ್‌ರಾಯ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವೊಂದು ಕಲ್ಕತ್ತದಲ್ಲಿ ಜರುಗಿತು. ಅಸಹಕಾರ ಮಸೂದೆಯನ್ನು ಗಾಂಧಿಜಿಯವರೇ ಮಂಡಿಸಿದರು. ಸಿ. ಆರ್. ದಾಸ್, ಬಿ. ಸಿ. ಪಾಲ್, ಜಿನ್ನಾ, ಮಾಳವೀಯ, ಅನಿ ಬೆಸಾಂಟ್ ಇತ್ಯಾದಿ ಕೆಲವರು ಇದನ್ನು ವಿರೋಧಿಸಿದರು. ಆದರೆ ಬಹುಮತದಿಂದ ಮಸೂದೆಯು ಅಧಿವೇಶನದಲ್ಲಿ ಅನುಮೋದಿಸಲ್ಪಟ್ಟಿತು.

ಭಾರತ ಸರ್ಕಾರದ ತಪ್ಪುಗಳನ್ನೂ, "ಪ್ರಗತಿಪರ ಹಾಗೂ ಶಾಂತಿಯುತ ಅಸಹಕಾರ ಕಾರ್ಯಕ್ರಮ"ವೊಂದನ್ನೂ ಮಸೂದೆಯು ವಿವರಿಸಿ ಈ ತಪ್ಪುಗಳನ್ನು ಬ್ರಿಟಿಷ್ ಸರ್ಕಾರವು ಸರಿಪಡಿಸುವವರೆಗೂ ಹಾಗೂ ಸ್ವರಾಜ್ಯ ಸ್ಥಾಪನೆಯಾಗುವವರೆಗೂ ಅಸಹಕಾರ ಚಳುವಳಿಯು ನಡೆಯುವುದೆಂದು ಘೋಷಿಸಿತು[1]. ಜನತೆಗೆ ನೀಡಿದ ಕರೆ ಹೀಗಿತ್ತು:

1. ಸರ್ಕಾರ ನೀಡಿದ ಬಿರುದುಗಳನ್ನು, ಗೌರವ ಪದವಿಗಳನ್ನೂ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಾಮಕರಣವಾದಂತಹ ಸದಸ್ಯತ್ವವನ್ನೂ ತ್ಯಜಿಸುವುದು.
2. ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಗೌರವಾರ್ಥ ಏರ್ಪಡಿಸಲಾಗುವ ಸಮಾರಂಭಗಳನ್ನು ಬಹಿಷ್ಕರಿಸುವುದು.
3. ಎಲ್ಲಾ ಪ್ರಾಂತ್ಯಗಳಲ್ಲಿಯೂ ರಾಷ್ಟ್ರೀಯ ಶಾಲೆಗಳನ್ನೂ, ಕಾಲೇಜುಗಳನ್ನೂ ಸ್ಥಾಪಿಸುವುದು.
4. ಬ್ರಿಟಿಷ್ ನ್ಯಾಯಾಲಯಗಳನ್ನು ಬಹಿಷ್ಕರಿಸಿ, ಜನರು ತಮ್ಮದೇ ಆದ ನ್ಯಾಯ ಪಂಚಾಯಿತಿಗಳನ್ನು ಸ್ಥಾಪಿಸಿಕೊಂಡು ತಮ್ಮ

---

1. ಮಸೂದೆಯ ಪೂರ್ಣ ಪಾಠಕ್ಕೆ ನೋಡಿ: Pattabhi Sitaramayya, *op. cit*, P. 342

ಖಾಸಗಿ ವಿವಾದಗಳನ್ನು ಬಗೆಹರಿಸಿಕೊಳ್ಳುವುದು.

5. ಸುಧಾರಿತ ವಿಧಾನಸಭೆಗಳ ಚುನಾವಣೆಯಲ್ಲಿ ಭಾಗವಹಿಸದಿರುವುದು.
6. ವಿದೇಶಿ ಸರಕುಗಳನ್ನು ಬಹಿಷ್ಕರಿಸುವುದು.
7. ಜನರಿಗೆ ಬೇಕಾಗುವ ಬಟ್ಟೆ ತಯಾರಿಸಿ ಒದಗಿಸಲು ಸ್ಥಳೀಯ ಪಟ್ಟಗಳಲ್ಲಿಯೇ ನೂಲುವುದು ಮತ್ತು ನೇಯ್ಗೆ ಕಾರ್ಯ ಕೈಗೊಳ್ಳುವುದು.
8. ಮೆಸಪೊಟೇಮಿಯದಲ್ಲಿ ಸೇವೆಸಲ್ಲಿಸಲು ಸೇನೆಗೆ ಅಭ್ಯರ್ಥಿಗಳಾಗಿ ಸೇರಲು ನಿರಾಕರಿಸುವುದು.

ಕಾಂಗ್ರೆಸ್ಸಿನ ವಿಶೇಷ ಅಧಿವೇಶನದಲ್ಲಿ ಅನುಮೋದಿಸಲಾದ ಮೇಲಿನ ಮಸೂದೆಯನ್ನು 1920 ರ ಡಿಸೆಂಬರ್‌ನಲ್ಲಿ ನಾಗಪುರದಲ್ಲಿ ಜರುಗಿದ ಮೂವತ್ತೂಲು ವಾರ್ಷಿಕ ಅಧಿವೇಶನವು ವಿಶೇಷ ಬಹುಮತದಿಂದ ಅನುಮೋದಿಸಿತು. ಮಹತ್ವಪೂರಿತವಾದ ಈ ನಿರ್ಣಯದನಂತರ ಮಹಾತ್ಮಾ ಗಾಂಧಿಯವರು ತಮ್ಮ ಅಸಹಕಾರ ಚಳುವಳಿಯ ಸ್ವರೂಪದ ವಿವರಗಳನ್ನು ಖುದ್ದಾಗಿಯೂ ಜನತೆಗೆ ತಿಳಿಸಲು ದೇಶದ ನಾನಾಭಾಗಗಳಲ್ಲಿ ಸಂಚರಿಸಿದರು. ತಾವು ರೂಪಿಸಿದ ಅಹಿಂಸಾತ್ಮಕ ಅಸಹಕಾರ ಚಳುವಳಿಯನ್ನು (non-violent non-co operation) ಜನತೆಯು ಹೃತ್ಪೂರ್ವಕವಾಗಿ, ಮನಃಪೂರ್ವಕವಾಗಿ ನಡೆಸಿದರೆ ಒಂದು ವರ್ಷದಲ್ಲಿ ಸ್ವರಾಜ್ಯ ಲಭಿಸುವುದೆಂದು ಗಾಂಧಿಜಿಯವರು ಜನತೆಗೆ ಆಶ್ವಾಸನೆ ನೀಡಿದರು. ಏನೇ ಸಂದರ್ಭ ಬಂದೊದಗಿದರೂ **ಸತ್ಯ** ಮತ್ತು **ಅಹಿಂಸೆ** ತತ್ವಗಳ ಆಚರಣೆಯನ್ನು ಬಿಡಬಾರದೆಂದು ಅವರು ಜನರಿಗೆ ಒತ್ತಿ ಒತ್ತಿ ಹೇಳಿದರು. ಅಲ್ಲದೆ ಸ್ವಾತಂತ್ರ್ಯ ಗಳಿಸುವವರೆಗೂ ಚಳುವಳಿ ನಿಲ್ಲಬಾರದೆಂದೂ ಹೇಳಿದರು. ಇವರ ಭಾವನೆಗಳ ಬಗ್ಗೆ ಜನರಿಗೆ ವಿಶೇಷ ನಂಬಿಕೆಯುಂಟಾಯಿತು. ಗಾಂಧಿಜಿಯವರು ಅತ್ಯಂತ ಜನಪ್ರಿಯ ರಾಷ್ಟ್ರೀಯ ವ್ಯಕ್ತಿಯಾದರು.

1920 ರ ನಿರ್ಣಯದ ಅನುಷ್ಠಾನ

1920ರ ಅಸಹಕಾರ ಚಳುವಳಿ ನಿರ್ಣಯದ ನಂತರ ಮೊಟ್ಟಮೊದ

ಲಿಗೆ ಗಾಂಧಿಜಿಯವರು ಅವರಿಗೆ ಬ್ರಿಟಿಷ್ ಸರ್ಕಾರ ನೀಡಿದ್ದ 'ಕೈಸರ್–ಇ–ಹಿಂದ್' ಎಂಬ ಬಿರುದನ್ನು ತ್ಯಜಿಸಿದರು. ಇವರನ್ನು ಅನುಸರಿಸಿ ದೇಶದ ಅನೇಕ ಗಣ್ಯರು ತಮಗೆ ಸರ್ಕಾರವು ನೀಡಿದ್ದ ಗೌರವ ಬಿರುದುಗಳನ್ನೂ, ಪದವಿಗಳನ್ನೂ ತ್ಯಜಿಸಿ ಬ್ರಿಟಿಷರ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ದೇಶದಲ್ಲಿ ಲಕ್ಷಾಂತರ ಜನರು ಕಾಂಗ್ರೆಸ್ ಸ್ವಯಂಸೇವಕ ರಾಗಿ ಸೇರಿದರು. ಇವರುಗಳಿಗೆಲ್ಲಾ ಶಿಸ್ತು ಹಾಗೂ ಅಹಿಂಸಾ ಮಾರ್ಗದ ಬಗ್ಗೆ ಸೂಕ್ತ ಶಿಕ್ಷಣದ ಏರ್ಪಾಡು ಮಾಡಲಾಯಿತು. ಅನೇಕ ಸಿರಿವಂತ ವಾಣಿಜ್ಯೋದ್ಯಮಿಗಳು ಕಾಂಗ್ರೆಸ್ ಚಳುವಳಿಗೆ ಬೇಕಾಗುವ ಧನಸಹಾಯ ನೀಡಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೇರುವ ಲಾಯರುಗಳು ತಮ್ಮ ವೃತ್ತಿ ಮಾಡಲಾಗದುದನ್ನು ಗಮನಿಸಿ, ಹೀಗೆ ತಮ್ಮ ಲಾಯರ್ ವೃತ್ತಿ ಯನ್ನು ತೊರೆದು ದೇಶಸೇವೆಗಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದವರಿಗೆ ವರ್ಷಕ್ಕೆ ಒಂದು ಲಕ್ಷ ರೂಪಾಯಿ ನೀಡುವುದಾಗಿ ಸೇಠ್ ಜಮ್ನಾಲಾಲ್ ಬಜಾಜ್[1] ಘೋಷಿಸಿದರು. ಕಾಂಗ್ರೆಸ್ಸಿನ ಆಶ್ರಯದಲ್ಲಿ ಕಾಶಿ ವಿದ್ಯಾಪೀಠ, ಗುಜರಾತ್ ವಿದ್ಯಾಪೀಠ, ಬಿಹಾರ ವಿದ್ಯಾಪೀಠ, ಬಂಗಾಳದ ರಾಷ್ಟ್ರೀಯ ವಿಶ್ವವಿದ್ಯಾನಿಲಯ, ಲಾಹೋರಿನ ರಾಷ್ಟ್ರೀಯ ಕಾಲೇಜು, ಅಲಿಘರ್ ರಾಷ್ಟ್ರೀಯ ಮುಸ್ಲಿಂ ವಿಶ್ವವಿದ್ಯಾನಿಲಯ, ದೆಹಲಿಯ ಜಮಿಯ ಮಿಲಿಯ, ಇತ್ಯಾದಿ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ವಿದೇಶೀ ಸರಕುಗಳನ್ನು ಬೆಂಕಿ ಹಚ್ಚಿ ಸುಡಲಾಯಿತು; ಸ್ವದೇಶಿ ಮಾಲುಗಳಿಗೆ ಉತ್ತೇಜನ ನೀಡಲಾಯಿತು. ನೂಲುವುದನ್ನು ಸಹಸ್ರಾರು ಜನರು ತಮ್ಮ ದಿನಚರಿಯಾಗಿ ಮಾಡಿ ಕೊಂಡರು. ಇವರಿಗೆಲ್ಲಾ ಚರಕಾ ನೀಡಲು ಸಾಕಷ್ಟು ಪ್ರಮಾಣದಲ್ಲಿ ಚರಕಾಗಳನ್ನು ತಯಾರಿಸಲಾಯಿತು. 1920ರ ನಿರ್ಣಯದಲ್ಲಿ ಸೂಚಿಸಿ ದಂತೆ ಅನೇಕ ಕಡೆಗಳಲ್ಲಿ ಜನರು ಸರ್ಕಾರಿ ಕೋರ್ಟುಗಳಿಗೆ ಹೋಗದೆಯೇ ತಮ್ಮ ವಿವಾದಗಳನ್ನು ಖಾಸಗಿಯಾಗಿಯೇ ಬಗೆಹರಿಸಿಕೊಳ್ಳಲಾರಂಭಿ ಸಿದರು.

---

1. ಸ್ವಾತಂತ್ರ್ಯ ಚಳುವಳಿಯಲ್ಲಿ ಉದ್ದಕ್ಕೂ ದೇಶಪ್ರೇಮಿ ಕೈಗಾರಿಕೋದ್ಯಮಿಗಳೂ, ವಾಣಿಜ್ಯೋದ್ಯಮಿಗಳೂ ಹಾಗೂ ಇತರ ಐಶ್ವರ್ಯವಂತರೂ ಹೀಗೆ ಇಂತಹ ಧನ ಸಹಾಯ ನೀಡಿದ್ದಾರೆ. ಇವರುಗಳ ದಾನಶೀಲತೆಯೂ ಸ್ಮರಣೀಯ ವಿಷಯ ವಾಗಿದೆ.

ವೇಲ್ಸ್ ರಾಜಕುಮಾರನ ಭೇಟಿ — ಜನತೆಯ ಪ್ರತಿಭಟನೆ

ಮೇಲೆ ಹೇಳಿದಂತೆ ದೇಶದಲ್ಲಿ ಅಸಹಕಾರ ಚಳುವಳಿಯು ಕಾವೇರು ತ್ತಿದ್ದ ಆ ಕಾಲದಲ್ಲಿ ವೇಲ್ಸ್ ರಾಜಕುಮಾರನು 1921ರ ನವೆಂಬರ್ - ಡಿಸೆಂಬರ್ ತಿಂಗಳುಗಳಲ್ಲಿ ಭಾರತಕ್ಕೆ ಭೇಟಿ ಇತ್ತನು. ಈ ಭೇಟಿಯ ವಿರುದ್ಧ ಪ್ರತಿಭಟಿಸುವುದೆಂದು ಕಾಂಗ್ರೆಸ್ಸು ತೀರ್ಮಾನಿಸಿತು. ಇದನ್ನು ತಿಳಿದ ವೈಸ್‌ರಾಯ್ ಅವರು ಗಾಂಧಿಜಿಯೊಡನೆಯೂ, ಕಾಂಗ್ರೆಸ್ಸಿನೊಡ ನೆಯೂ ಒಡಂಬಡಿಕೆಗೆ ಬರಲು ಸಂಧಾನವನ್ನು ನಡೆಸಿದರು. ಜೈಲಿನಲ್ಲಿದ್ದ ಆಲಿ ಸಹೋದರರ ಬಿಡುಗಡೆಯ ಷರತ್ತನ್ನು ಕಾಂಗ್ರೆಸ್ಸು ಮುಂದಿಟ್ಟಿತು; ಆದರೆ ವೈಸ್‌ರಾಯ್ ಅವರು ಈ "ರಾಜದ್ರೋಹಿ" ಮುಖಂಡರನ್ನು ಬಿಡುಗಡೆ ಮಾಡಲು ಸಿದ್ಧವಾಗಿರಲಿಲ್ಲ. ಆದುದರಿಂದ ಸಂಧಾನ ವಿಫಲವಾಯಿತು. ವೇಲ್ಸ್ ರಾಜಕುಮಾರ ಬೊಂಬಾಯಿನಲ್ಲಿ ಬಂದು ಇಳಿದ 1921ರ ನವೆಂಬರ್ 12 ರಂದು ಆ ಬೃಹತ್ ನಗರದಲ್ಲಿ ಸಂಪೂರ್ಣ 'ಹರತಾಳ' ಆಚರಿಸ ಲಾಯಿತು. ತರುವಾಯ ಅವರು ಕಲ್ಕತ್ತಾಕ್ಕೆ ಭೇಟಿ ಇತ್ತಾಗ ಆ ನಗರ ದಲ್ಲಿಯೂ ಸಂಪೂರ್ಣ 'ಹರತಾಳ' ಆಚರಿಸಲಾಯಿತು. ಭಾರತೀಯರು ಸ್ವಾತಂತ್ರ್ಯ ಸಂಪಾದಿಸಲು ನಡೆಸುತ್ತಿದ್ದ ಚಳುವಳಿಯ ತೀವ್ರತೆಯು ಈ ರಾಜಕುಮಾರ ಪ್ರವಾಸಿಯ ಗಮನಕ್ಕೆ ಬಂದಂತಾಯಿತು.

ಸರ್ಕಾರದ ದಮನ ಕಾರ್ಯಾಚರಣೆಗಳು

ಹಿಂದಿನಂತೆಯೇ ಸರ್ಕಾರವು ತನ್ನ ದಮನ ನೀತಿಯನ್ನು ಮುಂದು ವರಿಸಿ ಹೊಸ ಅಸಹಕಾರ ಚಳುವಳಿಯನ್ನು ಹತ್ತಿಕ್ಕುವ ತೀವ್ರ ಪ್ರಯತ್ನ ಮಾಡಿತು. ಚಳುವಳಿಗಾರರ ಮೇಲೆ ಲಾಠಿ ಪ್ರಯೋಗ ಬಿರುಸಿನಿಂದ ಮಾಡಿಸಿತು. ಸಭೆಗಳನ್ನು ಬಲಾತ್ಕಾರ ಪ್ರಯೋಗದಿಂದ ಚದುರಿಸಲಾಯಿತು. 1921ರಲ್ಲಿ ಗಾಂಧಿಜಿ ಹೊರತು ಮಿಕ್ಕ ಎಲ್ಲಾ ಪ್ರಮುಖ ಮುಖಂಡರು ಗಳನ್ನೂ ಸರ್ಕಾರವು ಜೈಲಿನೊಳಗೆ ಸೇರಿಸಿತು. ಸಹಸ್ರಾರು ಇತರ ಜನರನ್ನೂ ಜೈಲಿಗೆ ಹಾಕಲಾಯಿತು.[1]

---

1. ಈ ದಮನ ಕಾರ್ಯಾಚರಣೆಗಳ ಹೆಚ್ಚು ವಿವರಗಳಿಗೆ ನೋಡಿ,
Pattabhi Sitaramayya, *op. cit.* P P. 357-373

ಮಹಾತ್ಮಾ ಗಾಂಧಿಯವರು ವ್ಯಾಪಕ ಜನತಾ ಸತ್ಯಾಗ್ರಹ ಚಳುವಳಿಯನ್ನು ಪ್ರಯತ್ನಿಸಿದುದು

ನಾಗರಿಕ ಸರ್ಕಾರವು ಕೈಗೊಳ್ಳಬಾರದಂತಹ ದಮನ ಕೃತ್ಯಗಳ ಮೂಲಕ ಸರ್ಕಾರವು ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನಕ್ಕೆ ಉತ್ತರ ವಾಗಿ ಕಾಂಗ್ರೆಸ್ಸು ಅಹ್ಮದಾಬಾದಿನಲ್ಲಿ ನಡೆದ ತನ್ನ 1921ರ ಅಧಿವೇಶನದಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಸತ್ಯಾಗ್ರಹ ನಡೆಸುವುದೆಂದು ತೀರ್ಮಾನಿ ಸಿತು. ಈ ಚಳುವಳಿಯನ್ನು ನಿರ್ದೇಶಿಸಲು ಮಹಾತ್ಮ ಗಾಂಧಿಯವರನ್ನು ಏಕೈಕ ಸರ್ವೋಚ್ಚ ಅಧಿಕಾರಿಯಾಗಿ ನೇಮಿಸಿತು.

ಬರ್ಡೋಲಿ[1]ಯಲ್ಲಿ ಜನತಾ ಗುಂಪು ಸತ್ಯಾಗ್ರಹವನ್ನೂ ಗುಂಟೂರಿ[2] ನಲ್ಲಿ 'ತೆರಿಗೆ ನಿರಾಕರಣೆ' (no-tax) ಚಳುವಳಿಯನ್ನೂ ಪ್ರಾರಂಭಿಸಲು ತಾವು ನಿರ್ಧರಿಸಿರುವುದಾಗಿ ಗಾಂಧಿಜಿಯವರು 1922ರ ಫೆಬ್ರುವರಿ 1 ರಂದು ಗೌರ್ನರ್ ಜನರಲ್ ಅವರಿಗೆ ತಿಳಿಸಿದರು. ಜೈಲಿನಲ್ಲಿರುವ ರಾಜಕೀಯ ಕೈದಿಗಳೆಲ್ಲರನ್ನೂ ಬಿಡುಗಡೆ ಮಾಡಿದರೆ ಮತ್ತು ಅಹಿಂಸಾತ್ಮಕವಾದ ಸ್ವಾತಂತ್ರ್ಯ ಚಳುವಳಿಯನ್ನು ತಡೆಯಲು ಸರ್ಕಾರವು ಏನನ್ನೂ ಮಾಡದೆ ಬಿಟ್ಟರೆ ಆಗ ತಾವು ಉದ್ದೇಶಿಸಿದ್ದ ಈ ವಿಧದ ಸತ್ಯಾಗ್ರಹವನ್ನು ಆರಂಭಿಸುವು ದಿಲ್ಲವೆಂದೂ ಅವರು ತಿಳಿಸಿದರು. ಈ ಬೇಡಿಕೆಯನ್ನು ಒಪ್ಪಲು ಗೌರ್ನರ್ ಜನರಲ್‌ಗೆ ಗಾಂಧಿಜಿಯವರು ಏಳು ದಿವಸಗಳ ಅವಧಿಯನ್ನು ಕೊಟ್ಟರು.

ಹೀಗೆ ಗಾಂಧಿಜಿಯವರು ಸಾಮೂಹಿಕ ಸತ್ಯಾಗ್ರಹ ಆರಂಭಿಸುವ ತೀರ್ಮಾನ ಕೈಗೊಂಡ ಕಾಲದಲ್ಲಿಯೇ ಅನಿರೀಕ್ಷಿತವಾದ ಘೋರ ಹಿಂಸಾತ್ಮಕ ಘಟನೆಯೊಂದು ಸಂಭವಿಸಿತು. ಉತ್ತರ ಪ್ರದೇಶದ ಗೋರಖ್‌ಪುರದ ಹತ್ತಿರದ ಚೌರಿ-ಚೌರ (Chauri-Chaura) ಎಂಬಲ್ಲಿ ಕಾಂಗ್ರೆಸ್ ಏರ್ಪಡಿ ಸಿದ್ದ ಮೆರವಣಿಗೆಯೊಂದು ನಡೆಯುತ್ತಿದ್ದಾಗ, ಜನರ ಗುಂಪೊಂದು ಹಠಾತ್ತಾಗಿ 21 ಪೋಲಿಸ್ ಪೇದೆಗಳನ್ನೂ, ಒಬ್ಬ ಸಬ್-ಇನ್ಸ್‌ಪೆಕ್ಟರನ್ನೂ,

---

1. ಬರ್ಡೋಲಿ ಎಂಬುದು ಸುಮಾರು 87,000 ಜನಸಂಖ್ಯೆಯುಳ್ಳ ಸೂರತ್ ಜಿಲ್ಲೆಯ ಒಂದು ತಹಸಿಲು.

2. ಗುಂಟೂರು ಎಂಬುದು ಆಂಧ್ರ ಪ್ರದೇಶದ ಒಂದು ಜಿಲ್ಲೆ.

ಬಲಾತ್ಕಾರವಾಗಿ ಎಳೆದುಕೊಂಡು ಹೋಗಿ ಹತ್ತಿರವಿದ್ದ ಪೋಲಿಸ್ ಠಾಣೆಯೊಳಗೆ ಸೇರಿಸಿ ಆ ಠಾಣೆಗೆ ಬೆಂಕಿ ಹಚ್ಚಿದಾಗ ಒಳಗಿದ್ದವರೆಲ್ಲರೂ ಬೆಂಕಿಗೆ ಆಹುತಿಯಾಗಿ ಹೋದರು.[1] ಈ ದುರಂತ ಘಟನೆಯಿಂದ ಗಾಂಧಿಜಿಯವರಿಗೆ ಹೇಳಲಾರದಷ್ಟು ದುಃಖವಾಯಿತು. ದೇಶದ ಇತರ ಭಾಗಗಳಿಂದಲೂ ಇಂತಹುದೇ ಹಿಂಸಾತ್ಮಕ ಕೃತ್ಯಗಳ ವರದಿಗಳೂ ತಲುಪಿದವು. ಸಾಮೂಹಿಕ ಸತ್ಯಾಗ್ರಹದ ಕರೆಗೆ ಕಾಲ ಒದಗಿಬಂದಿಲ್ಲವೆಂದು ತೀರ್ಮಾನಿಸಿ ತಕ್ಷಣವೇ ಚಳುವಳಿಯನ್ನು ನಿಲ್ಲಿಸಬೇಕೆಂಬ ಆಜ್ಞೆಯನ್ನು ಅವರು ಹೊರಡಿಸಿದರು. 1922ರ ಫೆಬ್ರುವರಿ 12 ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ನಿರ್ಧಾರವನ್ನು ಅನುಮೋದಿಸಿತು. ಅಲ್ಲದೆ, ದೇಶದಲ್ಲಿ ಪೂರ್ತಿ ಅಹಿಂಸಾತ್ಮಕ ಚಳುವಳಿಗೆ ಅವಶ್ಯಕವಾದ ವಾತಾವರಣವನ್ನು ಬೆಳೆಸುವ ಉದ್ದೇಶದಿಂದ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ರಚನಾತ್ಮಕ ಕಾರ್ಯಕ್ರಮದಲ್ಲಿ (Constructive Programme) ತೀವ್ರವಾಗಿ ನಿರತರಾಗಬೇಕೆಂಬ ಆದೇಶವನ್ನೂ ಕಾಂಗ್ರೆಸ್ಸು ನೀಡಿತು. ಒಂದು ಕೋಟಿ ಜನರನ್ನು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರನ್ನಾಗಿ ಸೇರಿಸುವುದು, ಸರ್ವಧರ್ಮೀಯರ ಐಕ್ಯಮತ್ಯ, ಅಸ್ಪೃಶ್ಯತಾ ನಿವಾರಣೆ, ಚರಕ ಉಪಯೋಗಿಸುವುದನ್ನು ಜನಾದರಣೀಯಗೊಳಿಸುವುದು, ಪಾನನಿರೋಧ, ವಯಸ್ಕರ ಶಿಕ್ಷಣ, ಮಹಿಳೆಯರ ಏಳಿಗೆ, ರಾಷ್ಟ್ರೀಯ ಶಾಲೆಗಳನ್ನೂ ಹಾಗೂ ಪಂಚಾಯಿತಿಗಳನ್ನೂ ಸ್ಥಾಪಿಸುವುದು ಇತ್ಯಾದಿ ಎಲ್ಲವೂ ಗಾಂಧಿಜಿಯವರು ನೀಡಿದ ಹದಿನೆಂಟು ಅಂಶಗಳ ಪ್ರಸಿದ್ಧ ರಚನಾತ್ಮಕ ಕಾರ್ಯಕ್ರಮದಲ್ಲಿ[2] ಸೇರಿದ್ದವು.

ರಾಷ್ಟ್ರೀಯ ಹೋರಾಟದ ಬಗ್ಗೆ ಜನರು ಅತ್ಯಂತ ಉತ್ಸಾಹದಿಂದ ಇದ್ದ ಕಾಲದಲ್ಲಿ ಸಾಮೂಹಿಕ ಸತ್ಯಾಗ್ರಹ ಚಳುವಳಿಯನ್ನು ಹಠಾತ್ತಾಗಿ ಹಾಗೆ ನಿಲ್ಲಿಸಿದುದಕ್ಕೆ ಕೆಲವರು ಗಾಂಧಿಜಿಯವರನ್ನು ಆಕ್ಷೇಪಿಸಿದರು.

---

1. ನೋಡಿ : Pattabhi Sitaramayya, *op, cit,* P 397
2. ಇವುಗಳ ವಿವರಗಳಿಗೆ ಮಹಾತ್ಮ ಗಾಂಧಿಯವರ 'ಕನ್‌ಸ್ಟ್ರಕ್ಟಿವ್ ಪ್ರೋಗ್ರಾಂ, ಇಟ್ಸ್ ಮೀನಿಂಗ್ ಅಂಡ್ ಪ್ಲೇಸ್' ಎಂಬ ಕಿರುಹೊತ್ತಿಗೆಯನ್ನು ನೋಡಬಹುದು. ಇದರ ಸಾರಾಂಶಕ್ಕೆ ನೋಡಿ, ಕೆ. ಎಸ್. ನಾರಾಯಣಸ್ವಾಮಿ (ಸಂ) 'ನನ್ನ ಆದರ್ಶ ಗ್ರಾಮ – ಮಹಾತ್ಮಾ ಗಾಂಧಿ' ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು, 1984, ಅಧ್ಯಾಯ 4

ಯಾವುದೋ ಒಂದು ಸ್ಥಳದಲ್ಲಿ ಜನರು ನಡೆಸಿದ ಪಾಪಕಾರ್ಯಕ್ಕೆ ದೇಶವನ್ನೇ ಇದರಿಂದ ಶಿಕ್ಷಿಸಿದಂತಾಯಿತೆಂದು ಜವಾಹರಲಾಲ್ ನೆಹರೂ ಅವರು ವರ್ಣಿಸಿದರು. ಇದೊಂದು 'ರಾಷ್ಟ್ರೀಯ ವಿಪತ್ತು' (national calamity) ಎಂದು ಸುಭಾಷ್‌ಚಂದ್ರ ಬೋಸ್ ಅವರು ಗಾಂಧಿಜಿಯವರು ಸತ್ಯಾಗ್ರಹ ನಿಲ್ಲಿಸಿದುದರ ಬಗ್ಗೆ ತಮ್ಮ ಅಸಂತುಷ್ಟಿಯನ್ನು ವ್ಯಕ್ತಪಡಿಸಿದರು. ಆದರೆ, ಕ್ರಮೇಣ ಎಲ್ಲರೂ ಗಾಂಧಿಜಿಯವರ ನಿರ್ಧಾರವೇ ವಿವೇಕಯುತವಾದುದು ಎಂದು ಒಪ್ಪಿದರು. ಏಕೆಂದರೆ, ಆಗ ಸಂಭವಿಸಿದ ಹಿಂಸಾಘಟನೆಗಳು ದೇಶದಲ್ಲಿ ಇನ್ನೂ ಹೆಚ್ಚುವ ಸಂಭವವೇ ಹೆಚ್ಚಾಗಿದ್ದಿತು. ಹೀಗೆ ಆಗಲು ಅವಕಾಶ ಕೊಟ್ಟಿದ್ದರೆ ಬ್ರಿಟಿಷರಿಗೆ ಅತ್ಯಂತ ಕ್ರೂರ ಮಾರ್ಗಗಳನ್ನು ಅನುಸರಿಸಿ ಚಳುವಳಿಯನ್ನು ದಮನ ಮಾಡಲು ಅವಕಾಶ ನೀಡಿದಂತೆಯೂ ಆಗುತ್ತಿತ್ತು. ಭಾರತದ ಸ್ವಾತಂತ್ರ್ಯ ಹೋರಾಟ ಪೂರ್ತಿ ಅಹಿಂಸಾತ್ಮಕವಾಗಿರಬೇಕಾದುದರ ಬಗ್ಗೆ ಗಾಂಧೀಜಿಯವರು ಅಚಲ ವಿಶ್ವಾಸ ಹೊಂದಿದ್ದರು.

ಸ್ವರಾಜ್ಯ ಪಕ್ಷದ ಚಳುವಳಿ (1923–26)

ಗಾಂಧೀಜಿಯವರು ಸತ್ಯಾಗ್ರಹ ಚಳುವಳಿಯನ್ನು ನಿಲ್ಲಿಸಿದ ಮೇಲೆ ಸರ್ಕಾರವು ಅವರನ್ನು ಬಂಧಿಸಿ 'ರಾಜದ್ರೋಹ' ಚಟುವಟಿಕೆಗಳಿಗಾಗಿ ವಿಚಾರಣೆಗೆ ಗುರಿ ಮಾಡಿದರು. ಮುಂದೆ ಅವರು ಚಳುವಳಿಯಿಂದ ಯಾವುದೇ ಕಾರ್ಯಕ್ರಮವನ್ನು ಕೈಗೊಳ್ಳಲು ಅವರಿಗೆ ಅವಕಾಶ ತಪ್ಪಿಸುವುದೇ ಸರ್ಕಾರದ ಉದ್ದೇಶವಾಗಿದ್ದಿತು. ವಿಚಾರಣೆಯ ಔಪಚಾರಿಕ ಕ್ರಮಗಳನ್ನು[1] ಗಮನಿಸಿ ಅವರಿಗೆ ಜೈಲುವಾಸ ಶಿಕ್ಷೆಯನ್ನು ವಿಧಿಸ

---

1. ವಿಚಾರಣೆ ಎದುರಿಸಲು ಮಹಾತ್ಮಾ ಗಾಂಧಿಯವರು ಕೋರ್ಟಿನಲ್ಲಿ ಜಡ್ಜಿಯವರ ಸಮ್ಮುಖಕ್ಕೆ ಪ್ರವೇಶಿಸಿದಾಗ ಸರೋಜಿನಿ ದೇವಿಯವರು ವರ್ಣಿಸಿರುವಂತೆ, "ಕಾನೂನಿನ ದೃಷ್ಟಿಯಲ್ಲಿ ಒಬ್ಬ ಅಪರಾಧಿ ಮತ್ತು ಪಾತಕಿ ಆದಾಗ್ಯೂ, ಕೋರ್ಟಿನಲ್ಲಿದ್ದ ಸಮಸ್ತ ಜನರೂ ತಾವೇ ತಾವಾಗಿ ಗೌರವ ಸೂಚಿಸಲು ಎದ್ದು ನಿಂತರು." ಈ ದೃಶ್ಯ ಅಂದಿನ ವಿರೋಧಾಭಾಸ ಸ್ಥಿತಿಯನ್ನು ಸೂಚಿಸುವುದು. ಭಾರತ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದ "ತಪ್ಪಿಗಾಗಿ" ಭಾರತೀಯ ನ್ಯಾಯಾಧೀಶರಿಂದಲೇ ವಿಚಾರಣೆ.

ಲಾಯಿತು. ಗಾಂಧೀಜಿಯವರನ್ನೂ ಜೈಲಿಗೆ ಕಳಿಸಿದ ಮೇಲೆ ದೇಶದ ಪ್ರಮುಖ ಕಾಂಗ್ರೆಸ್ ಮುಖಂಡರುಗಳೆಲ್ಲರನ್ನೂ ಸರ್ಕಾರವು ಜೈಲಿನೊಳಗೆ ಸೇರಿಸಿದಂತಾಯಿತು. ಇದರಿಂದ ಜನರಿಗೆ ಹಿರಿಯ ಮುಖಂಡರ ನಾಯಕತ್ವ ಇಲ್ಲದಂತಾಯಿತು. ಹಾಗೂ ಇನ್ನೂ ಬಂಧನಗೆ ಒಳಗಾಗದ ಮುಖ್ಯ ಕಾಂಗ್ರೆಸ್ಸಿಗರು ಹೊಸ ಮಾರ್ಗ ಕುರಿತು ಆಲೋಚಿಸತೊಡಗಿದರು. ಕಾಂಗ್ರೆಸ್ ಸಂಸ್ಥೆಯೊಳಗೇ ಹೊಸ ಸ್ವರಾಜ್ಯ ಪಕ್ಷವನ್ನು ವ್ಯವಸ್ಥೆಗೊಳಿಸುವ ಯೋಜನೆಯೊಂದನ್ನು ಸಿ. ಆರ್. ದಾಸ್ ಅವರು ಸಿದ್ಧಗೊಳಿಸಿದರು. ವಿಧಾನಸಭೆಗಳಿಗೆ ಚುನಾಯಿತರಾಗಿ ಹೋಗುವುದು, ಸರ್ಕಾರವು ಮಂಡಿಸುವ ಕಾನೂನುಗಳನ್ನು ವಿಧಾನಸಭೆಯಲ್ಲಿ ವಿರೋಧಿಸುವುದು, ಸರ್ಕಾರದ ಅನ್ಯಾಯಕ್ರಮಗಳನ್ನು ಎತ್ತಿತೋರಿಸಿ ಪ್ರಪಂಚದ ಎದುರು ಸರ್ಕಾರ ವನ್ನು ಅವಮಾನ ಮಾಡುವುದು ಇಂತಹ ಕ್ರಮಗಳಿಂದ ಸರ್ಕಾರದ ಕೆಲಸಗಳಿಗೆ ಅಡ್ಡಿಆತಂಕಗಳನ್ನು ಉಂಟುಮಾಡುವುದು – ಇವೇ ಈ ಹೊಸ ಸ್ವರಾಜ್ಯಪಕ್ಷದ ಉದ್ದೇಶಗಳಾಗಿದ್ದವು. ಸರ್ಕಾರದ ಚೌಕಟ್ಟಿನೊಳಗೆ ಹೋಗಿ ಸೇರಿಕೊಂಡು ಅಲ್ಲಿಂದಲೆ ಅಸಹಕಾರ ಚಳುವಳಿಯನ್ನು ಮುಂದುವರಿ ಸುವುದೇ ಈ ಪಕ್ಷದ ಮುಖ್ಯ ಅಭಿಪ್ರಾಯವಾಗಿದ್ದಿತು. 1919ರ ರಾಜ ಕೀಯ ಸುಧಾರಣೆಗಳ ಅನ್ವಯ ವಿಧಾನಸಭೆಗಳಿಗೆ ನಡೆಸಲಾದ ಚುನಾವಣೆ ಗಳಲ್ಲಿ ಕಾಂಗ್ರೆಸ್ಸು ಭಾಗವಹಿಸದುದರಿಂದ, ಕೆಲವು ಸಮಯಸಾಧಕರು (opportunists) ಚುನಾಯಿತರಾಗಿ ವಿಧಾನಸಭೆಗಳಲ್ಲಿ ಬಂದಿದ್ದರು. ಇವರಿಂದ ದೇಶವಿರೋಧಿ ಸರ್ಕಾರಕ್ಕೆ ಅನುಕೂಲವಾಯಿತೇ ವಿನಾ ದೇಶಕ್ಕಲ್ಲ. ಆದುದರಿಂದ, ಸ್ವರಾಜ್ಯಪಕ್ಷದವರು ತಾವು ಜನರಿಂದ ಚುನಾಯಿತರಾಗಿ ಬಂದು ಸಮಯಸಾಧಕ ಸದಸ್ಯರನ್ನು ವಿಧಾನಸಭೆಗಳಿಂದ ಉಚ್ಚಾಟನೆಗೊಳಿ ಸುವುದೆಂದು ತೀರ್ಮಾನಿಸಿದರು.

ಸ್ವರಾಜ್ಯಪಕ್ಷ ಯೋಜನೆಯನ್ನು ರೂಪಿಸಿದ ಸಿ. ಆರ್. ದಾಸ್ ಅವರೇ ಅಧ್ಯಕ್ಷರಾಗಿದ್ದ 1922ರ ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವರಾಜ್ಯಪಕ್ಷದ ವಿಷಯ ಚರ್ಚೆಗೆ ಬಂದಿತು. ವಿಧಾನಸಭೆಗಳಿಗೆ ಚುನಾ ಯಿತರಾಗಿ ಹೋಗುವುದೇ ಸರಿ ಎಂಬ ನಿಲುವಿನ ಪಂಗಡದವರು ಮತ್ತು ಗಾಂಧೀಜಿಯವರ ಅಸಹಕಾರ ಚಳುವಳಿ ಮತ್ತು ರಚನಾತ್ಮಕ ಕಾರ್ಯ

ಕ್ರಮಗಳೇ ಅತ್ಯುತ್ತಮ ಮಾರ್ಗ ಎಂಬ ಅಭಿಪ್ರಾಯ ಹೊಂದಿದ್ದವರು, ಇವರುಗಳೊಂದಿಗೆ ಚರ್ಚೆಯಾಯಿತು. ಆಗ ಸ್ವರಾಜ್ಯಪಕ್ಷದ ಧೋರಣೆಗೆ ಬಹುಮತ ಸಿಗಲಿಲ್ಲ. ಆದರೆ, ಮುಂದಿನ ವರ್ಷ, 1923ರ ಸೆಪ್ಟೆಂಬರ್‌ನಲ್ಲಿ, ಮೌಲಾನಾ ಅಬುಲ್ ಕಲಾಮ್ ಅಜಾದ್ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವರಾಜ್ಯಪಕ್ಷದವರು ಗೆದ್ದರು. ಕಾಂಗ್ರೆಸ್ ಸದಸ್ಯರು ವಿಧಾನಸಭೆಗಳಿಗೆ ಚುನಾವಣೆಗೆ ನಿಲ್ಲಲೂ, ಮತದಾನ ಮಾಡಲೂ ಅನುಮತಿ ನೀಡುವ ನಿರ್ಣಯವೊಂದನ್ನು ಈ ಅಧಿವೇಶನ ಅನುಮೋದಿಸಿತು. ಈ ನಿರ್ಣಯಕ್ಕೆ ಮಹಾತ್ಮಾ ಗಾಂಧಿಯವರ ಒಪ್ಪಿಗೆಯೂ ಇತ್ತು. ಹೀಗೆ ಸ್ವರಾಜ್‌ಪಕ್ಷದ ಚಳುವಳಿಮಾರ್ಗಕ್ಕೆ ಒಪ್ಪಿಗೆ ನೀಡಿದುದರ ಜೊತೆಗೇ ಕಾಂಗ್ರೆಸ್ಸು ತನ್ನ ಹಿಂದಿನಿಂದ ನಡೆಸಿಕೊಂಡು ಬಂದ ರಚನಾತ್ಮಕ ಕಾರ್ಯ ಕ್ರಮವನ್ನೂ ಮುಂದುವರಿಸಿತು.

ಸ್ವರಾಜ್ ಪಕ್ಷದ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಅನುಮತಿ ದೊರೆತ ತಕ್ಷಣವೇ ಪಕ್ಷವು ತನ್ನ ಪ್ರಣಾಳಿಕೆಯೊಂದನ್ನು ಘೋಷಿಸಿತು. ಭಾರತ ಸರ್ಕಾರದ ಸ್ವರೂಪವನ್ನೂ, ಆಡಳಿತ ಯಂತ್ರವನ್ನೂ ರೂಪಿಸುವ ಹಕ್ಕನ್ನು ಭಾರತೀಯರಿಗೇ ಬ್ರಿಟಿಷರು ತಕ್ಷಣವೇ ನೀಡಬೇಕೆಂಬ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸುವುದು ಪ್ರಥಮ ಕರ್ತವ್ಯ ಎಂದು ಈ ಪ್ರಣಾಳಿಕೆ ಯಲ್ಲಿ ಹೇಳಲಾಯಿತು. ಹೀಗೆ ನೀಡಲು ಬ್ರಿಟಿಷರು ಒಪ್ಪದಿದ್ದಲ್ಲಿ "ವಿಧಾನ ಸಭೆಗಳ ಚುನಾಯಿತ ಪಕ್ಷದ ಸದಸ್ಯರು ಸರ್ಕಾರಿ ಆಡಳಿತ ನಡೆಯುವುದು ಸಾಧ್ಯವೇ ಆಗದಂತೆ ಅಡಚಣೆಗಳನ್ನೂ, ಆತಂಕಗಳನ್ನೂ ಎಡೆಬಿಡದೆ ತಂದೊಡ್ಡುವ ನೀತಿಯನ್ನು" ಅನುಸರಿಸಬೇಕೆಂದೂ ಇದರಲ್ಲಿ ಹೇಳಲಾಯಿತು.

ಚುನಾವಣೆಗಳನ್ನು 1923 ರಲ್ಲೇ ನಡೆಸಲಾಯಿತು. ನಿರೀಕ್ಷಿಸಿದಂತೆ ಸ್ವರಾಜ್‌ಪಕ್ಷಕ್ಕೆ ಅನೇಕ ಕಡೆಗಳಲ್ಲಿ ಬಹುಮತ ದೊರೆಯಿತು. ಬಂಗಾಳ ಮತ್ತು ಮಧ್ಯಪ್ರಾಂತಗಳಲ್ಲಿ ಈ ಪಕ್ಷ ಸ್ಪಷ್ಟ ಬಹುಮತ ಪಡೆಯಿತು. ಕೇಂದ್ರ ವಿಧಾನಸಭೆಯ 155 ಸ್ಥಾನಗಳಲ್ಲಿ ಸ್ವರಾಜ್ಯಪಕ್ಷಕ್ಕೆ 45 ಸ್ಥಾನಗಳು ದೊರಕಿದವು. ಈ ಪಕ್ಷದ ಮುಖಂಡರಾಗಿ ಮೋತಿಲಾಲ್ ನೆಹರೂ ಅವರು ಚುನಾಯಿಸಲ್ಪಟ್ಟರು. ಇತರ ಕೆಲವು ಸ್ವತಂತ್ರ ಸದಸ್ಯರೂ ಸ್ವರಾಜ್ಯ ಪಕ್ಷಕ್ಕೆ ಬೆಂಬಲ ನೀಡಿದರು.

ಹೀಗೆ ವಿಧಾನಸಭೆಗಳಲ್ಲಿ ಸ್ಥಾನಗಳನ್ನು ಪಡೆದ ಸ್ವರಾಜ್ಯಪಕ್ಷವು ಸರ್ಕಾರವು ಮಂಡಿಸಿದ ಅನೇಕ ನಿರ್ಣಯಗಳನ್ನು ವಿರೋಧಿಸಿತು. ಉದಾಹರಣೆಗೆ, 1924ರಲ್ಲಿ ಬಂಗಾಳದ ವಿಧಾನಸಭೆಯಲ್ಲಿ ಇಬ್ಬರು ಮಂತ್ರಿಗಳ ಸಂಬಳಕ್ಕೆ ಸಂಬಂಧಪಟ್ಟ ನಿರ್ಣಯವನ್ನು ತಿರಸ್ಕರಿಸಲಾಯಿತು. ಕೇಂದ್ರ ವಿಧಾನಸಭೆಯಲ್ಲಿಯೂ ಸರ್ಕಾರದ ಅನೇಕ ಮಸೂದೆಗಳ ಅನುಮೋದನೆಯನ್ನು ಸ್ವರಾಜ್‌ಪಕ್ಷವು ತಪ್ಪಿಸಲು ಯಶಸ್ವಿಯಾಯಿತು. ಸರ್ಕಾರವು ಮಂಡಿಸಿದ ವಾರ್ಷಿಕ ಹಣಕಾಸು ಆಯವ್ಯಯ ಅಂದಾಜುಗಳನ್ನು ತೋರಿಸುವ ಬಜೆಟ್ಟನ್ನು ವಿಧಾನಸಭೆಗಳು ನಿರಾಕರಿಸಿದವು. ಪೂರ್ಣ ಜವಾಬ್ದಾರಿ ಸರ್ಕಾರ ತತ್ವದ ಆಧಾರದ ಮೇಲೆ ರಚಿಸಲಾಗುವ ರಾಜ್ಯಾಂಗವೊಂದನ್ನು ಶಿಫಾರಸು ಮಾಡುವ ಸಲುವಾಗಿ ಬ್ರಿಟಿಷ್ ಸರ್ಕಾರವು ದುಂಡುಮೇಜಿನ ಸಮ್ಮೇಳನವನ್ನು ಕರೆಯಬೇಕೆಂಬ ಬೇಡಿಕೆ ಕುರಿತ ನಿರ್ಣಯವನ್ನು ಕೇಂದ್ರ ವಿಧಾನಸಭೆಯಲ್ಲಿ ಮೋತಿಲಾಲ್ ನೆಹರು ಅವರು ಮಂಡಿಸಿದರು ಹಾಗೂ ಸ್ವರಾಜ್‌ಪಕ್ಷವು ಈ ನಿರ್ಣಯಕ್ಕೆ ಆ ಸಭೆಯ ಅನುಮೋದನೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಈ ಪಕ್ಷವು ಸೂಚಿಸಿದ ರಾಜಕೀಯ ಖೈದಿಗಳ ಬಿಡುಗಡೆ ಬೇಡಿಕೆ ಕುರಿತ ನಿರ್ಣಯಗಳಿಗೂ ಅದು ವಿಧಾನಸಭೆಗಳ ಅನುಮೋದನೆ ಪಡೆಯಿತು. ಜನತೆಯ ಕ್ಷೇಮಾಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆಯೂ, ಬ್ರಿಟಿಷರ ಹಿತಾಸಕ್ತಿಗಳ ತೃಪ್ತಿಗಾಗಿ ಭಾರತದ ಸಂಪತ್ಸಾಧನಗಳನ್ನು ಹೀರುವ ಹಾಗೂ ಹಿಂಗಿಸುವ ಕಾರ್ಯಾಚರಣೆಗಳನ್ನು ತಪ್ಪಿಸುವುದರ ಬಗ್ಗೆಯೂ, ಸ್ವರಾಜ್‌ಪಕ್ಷವು ಅನೇಕ ಮಸೂದೆಗಳನ್ನು ವಿಧಾನಸಭೆಗಳಲ್ಲಿ ಮಂಡಿಸಿತು. ಒಟ್ಟಿನಲ್ಲಿ ಪಕ್ಷದ ಪ್ರಣಾಳಿಕೆಯನ್ನು ಸಾರ್ಥಕಗೊಳಿಸುವ ಪ್ರಯತ್ನವನ್ನು ಸ್ವರಾಜ್ಯಪಕ್ಷವು ಮಾಡುತ್ತಾ ಬಂದಿತು.

ಆದರೆ, ಸ್ವರಾಜ್ಯಪಕ್ಷವು ಸ್ವಾತಂತ್ರ್ಯ ಗಳಿಕೆಗೆ ಉಪಯೋಗಿಸಿದ, ಸರ್ಕಾರಕ್ಕೆ ಅಡ್ಡಿ ಆತಂಕಗಳನ್ನು ಉಂಟುಮಾಡುವ ಮೇಲೆ ಹೇಳಿದ ತರಹದ ಉಪಾಯವು ಸರ್ಕಾರದ ಕಾರ್ಯಾಚರಣೆಗೆ ಏನೂ ತೊಂದರೆಯಾಗಲಿಲ್ಲ. ಏಕೆಂದರೆ ವಿಧಾನಸಭೆಯಲ್ಲಿ ಏನೇ ಆಗಲಿ ವೈಸರಾಯ್ ಅವರೂ, ಗೌರ್ನರುಗಳೂ ತಮ್ಮ ವಿಶೇಷ ಅಧಿಕಾರವನ್ನು ಚಲಾಯಿಸಿ ತಮ್ಮ ನಿರ್ಣಯಗಳನ್ನೂ, ಮಸೂದೆಗಳನ್ನೂ ಜಾರಿಗೆ ತರುತ್ತಿದ್ದರು. ಇದರಿಂದ ಸ್ವರಾಜ್ಯಪಕ್ಷದ

ಸದಸ್ಯರು ಹತಾಶರಾಗುತ್ತಾ ಬಂದರು. ಸರ್ಕಾರವು ಈ ಪಕ್ಷದ ವಿಧಾನ ಸಭಾ ಸದಸ್ಯರನ್ನು ತನ್ನ ಕಡೆಗೆ ಆಕರ್ಷಿಸಲು ಅವರಿಗೆ ಕೆಲವು ಮುಖ್ಯ ಸಮಿತಿಗಳ ಸದಸ್ಯತ್ವವನ್ನೂ ಕೊಡುವುದಾಗಿ ಹೇಳಿದರು. 1925ರ ಜೂನ್‌ನಲ್ಲಿ ಈ ಪಕ್ಷದ ಮುಖ್ಯ ಮುಖಂಡರಾಗಿದ್ದ ಸಿ. ಆರ್. ದಾಸ್ ಅವರು ನಿಧನರಾದಾಗ ಪಕ್ಷವು ವಾಸ್ತವವಾಗಿ ದುರ್ಬಲವಾಯಿತು. 1926ರ ವೇಳೆಗೆ ಪಕ್ಷವು ಕೊನೆಗೊಂಡಿತೆಂದೇ ಹೇಳಬಹುದು.

ಒಟ್ಟಿನಲ್ಲಿ, ಸ್ವರಾಜ್ಯಪಕ್ಷದ ಧೋರಣೆ ಹಾಗೂ ಕಾರ್ಯಕ್ರಮಗಳ ಮೂಲಕ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಪ್ರಯತ್ನ ವಿಫಲವಾಯಿತು. ಆದರೆ, ಪಕ್ಷದ ಕಾರ್ಯಾಚರಣೆಗಳು ನಿಷ್ಫಲವಾದುವೆಂದು ಹೇಳಿದರೆ ತಪ್ಪಾಗುವುದು. ಜನರಲ್ಲಿ ರಾಷ್ಟ್ರೀಯತಾ ಭಾವನೆ ಬಲಗೊಳ್ಳಲು ಇವು ಸಹಾಯಕವಾದುವು. ಅಲ್ಲದೆ, ವಿಧಾನಸಭೆಗಳೊಳಗಿಂದ ಸರ್ಕಾರದ ಕಾರ್ಯಗಳನ್ನು ಸ್ಥಗಿತಗೊಳ್ಳುವಂತೆ ಮಾಡುವ ಸ್ವರಾಜ್ಯಪಕ್ಷದ ಧೋರಣೆಯು ಬ್ರಿಟಿಷ್ ಸರ್ಕಾರದ ಮೇಲೆ ಪರಿಣಾಮ ಹೊಂದಿದ್ದಿತೆಂದು ಹೇಳಬಹುದು. ಅಧಿಕಾರದ್ವಯ ಪದ್ಧತಿಯ (Dyarchy) ಪ್ರಕಾರ ನಡೆಯುತ್ತಿದ್ದ ಕಾರ್ಯಾಚರಣೆಗಳ ಅಧ್ಯಯನಕ್ಕಾಗಿ 'ಮುಡ್ಡಿಮನ್ ಸಮಿತಿ' (Muddiman Committee) ಎಂದು ಪ್ರಚುರವಾಗಿರುವ ಸಮಿತಿಯ ನೇಮಕ ಈ ಪರಿಣಾಮಗಳಲ್ಲಿ ಮುಖ್ಯವಾದುದು. ಹೆಚ್. ಎಸ್. ಬ್ರೇಲ್ಸ್‌ಫರ್ಡ್ ಎಂಬ ತಜ್ಞನು ಹೇಳಿರುವಂತೆ, "....ಅಡ್ಡಿ ಆತಂಕಗಳನ್ನೊಡ್ಡುವ ಉಪಾಯಗಳು ನ್ಯಾಯಸಮ್ಮತವಾಗಿತ್ತು. ಏಕೆಂದರೆ, ಅಧಿಕಾರದ್ವಯ ಪದ್ಧತಿಯು ಕ್ರಿಯಾಯೋಗ್ಯವಲ್ಲ ಎಂಬುದನ್ನು ಇವು ಬ್ರಿಟಿಷ್ ಕನ್‌ಸರ್‌ವೇಟೀವ್ ಸದಸ್ಯರಿಗೂ ಮುಂದಿಟ್ಟು ಮಾಡಿದವು"[1] ಅಲ್ಲದೆ ಬ್ರಿಟಿಷ್ ಸರ್ಕಾರವು ಭಾರತದ ರಾಜ್ಯಾಂಗದ ಸುಧಾರಣೆ ಬಗ್ಗೆ ಇನ್ನೊಮ್ಮೆ ಆಲೋಚಿಸತೊಡಗಿತು. ಮತ್ತು 'ಸೈಮನ್ ಆಯೋಗ' (Simon Commission) ಎಂದು ಕರೆಯಲಾಗಿರುವ ಆಯೋಗವೊಂದನ್ನು ಅದು ನೇಮಿಸಿತು. ಈ ಸಮಿತಿಯ ಕಾರ್ಯಾಚರಣೆಗಳ ವಿವರಣೆಯನ್ನು ಮುಂದಿನ ಅಧ್ಯಾಯದಲ್ಲಿ ಕೊಡಲಾಗುವುದು.

✤✤✤

---

1. Quoted in V. D. Mahajan, *op. cit*, p. 477.

ಅಧ್ಯಾಯ - 9

ಸೈಮನ್ ಆಯೋಗ (1927) ಹಾಗೂ ಮೋತಿಲಾಲ್ ನೆಹರೂ ವರದಿ (1928)

"ಸೈಮನ್ ಅವರೇ ಹಿಂತಿರುಗಿ ನಡೆಯಿರಿ" ಸೈಮನ್ ಅಧ್ಯಕ್ಷತೆಯ ಆಯೋಗವೊಂದು ಭಾರತಕ್ಕೆ ಕಾಲಿಟ್ಟಾಗ ಭಾರತೀಯರ ಸಾರ್ವತ್ರಿಕ ಪ್ರತಿಕ್ರಿಯೆಯನ್ನು ಜನತೆಯ ಈ ಘೋಷಣೆಯು ಸೂಚಿಸುವುದು. ಈ ಆಯೋಗವು ಭಾರತಕ್ಕೆ ಹೊಸ ರಾಜ್ಯಾಂಗ ಕುರಿತ ವರದಿಯೊಂದನ್ನು ಸಿದ್ಧಪಡಿಸಿದಾಗ ಇದನ್ನು ದೇಶವು ಸಂಪೂರ್ಣವಾಗಿ ನಿರಾಕರಿಸಿತು. ಆಗ ಭಾರತದ ಎಲ್ಲಾ ರಾಜಕೀಯ ಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಹೊಸ ರಾಜ್ಯಾಂಗ ಸ್ವರೂಪವನ್ನು ಭಾರತದ ರಾಜಕೀಯ ಮುಖಂಡರುಗಳು ಸಿದ್ಧಪಡಿಸಲಾರರು ಎಂದು ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಅವರು ಮೂದಲಿಕೆ ಧ್ವನಿಯಲ್ಲಿ ನುಡಿದರು. ಈ ಸವಾಲನ್ನು ಎದುರಿಸಲು ಕಾಂಗ್ರೆಸ್ಸಿನ ಮುಂದಾಳುತ್ವದಲ್ಲಿ ಭಾರತದ ಎಲ್ಲಾ ರಾಜಕೀಯ ಪಕ್ಷಗಳ ಸಮ್ಮೇಳನವೊಂದು ಸಭೆ ಸೇರಿತು. ಈ ಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯದ ಪ್ರಕಾರ ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯ ಸಮಿತಿಯು ಭಾರತದ ಹೊಸ ರಾಜ್ಯಾಂಗ ಕುರಿತ ವರದಿಯನ್ನು ಸಿದ್ಧಪಡಿಸಿತು. ಈ ಅಧ್ಯಾಯದಲ್ಲಿ ಸೈಮನ್ ಆಯೋಗದ ಭಾರತದ ಭೇಟಿ ಹಾಗೂ ಆ ಆಯೋಗದ ವರದಿಯನ್ನೂ, ಮೋತಿಲಾಲ್ ನೆಹರೂ ಸಮಿತಿಯ ವರದಿಯನ್ನೂ ಸಂಕ್ಷಿಪ್ತವಾಗಿ ವಿವರಿಸಲಾಗುವುದು.

1919 ರ ಭಾರತ ಸರ್ಕಾರದ ಮಸೂದೆಯಲ್ಲಿ ಹತ್ತು ವರ್ಷಗಳ ತರುವಾಯ ಒಂದು ಕಾನೂನುಬದ್ಧ ಆಯೋಗವನ್ನು (Statutary

Commission) ನೇಮಿಸಲು ಸೆಕ್ಷನ್ 84 (ಎ) ಪ್ರಕಾರ ಅವಕಾಶ ಮಾಡಲಾಗಿದ್ದಿತು. 1919ರ ರಾಜ್ಯಾಂಗವು ಹೇಗೆ ನಡೆದು ಬಂದಿದೆ ಎಂಬುದನ್ನೂ, ವಿದ್ಯಾಭ್ಯಾಸ ಪ್ರಗತಿಯನ್ನೂ ಪರಿಶೀಲಿಸಿ, "ಜವಾಬ್ದಾರಿ ಸರ್ಕಾರ ತತ್ವವನ್ನು ಭಾರತದಲ್ಲಿ ಅನುಸರಿಸಬಹುವೇ ಹಾಗೂ ಎಷ್ಟು ಮಟ್ಟಿಗೆ ಈ ತತ್ವವನ್ನು ಆಚರಣೆಗೆ ತರಬಹುದು ಎಂಬುದನ್ನೂ" ವರದಿ ಮಾಡಬೇಕೆಂಬ ಆದೇಶವನ್ನು ಬ್ರಿಟಿಷ್ ಸರ್ಕಾರವು ಈ ಆಯೋಗಕ್ಕೆ ನೀಡಿತ್ತು.

ಮೇಲಿನ ಆಯೋಗವನ್ನು ನೇಮಿಸಲು ಬ್ರಿಟಿಷ್ ಸರ್ಕಾರವು ಹತ್ತು ವರ್ಷಗಳವರೆಗೆ ಕಾಯದೆಯೇ ಎಂಟು ವರ್ಷಗಳ ನಂತರವೇ ಅಂದರೆ 1927 ರಲ್ಲಿಯೇ ನೇಮಿಸಿತು. 1929 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿಗೆ ಚುನಾವಣೆ ನಡೆಯಬೇಕಾಗಿದ್ದ ವರ್ಷವಾಗಿದ್ದಿತು. ಚುನಾವಣೆಯಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದರೆ ಏನಾಗುವುದೋ ಎಂಬ ಶಂಕೆಯಿಂದ 1927 ರಲ್ಲಿ ಅಧಿಕಾರದಲ್ಲಿದ್ದ ಕನ್‌ಸರ್‌ವೇಟೀವ್ ಪಕ್ಷದ ಸರ್ಕಾರವು ಹೀಗೆ ಆ ಆಯೋಗವನ್ನು ಮುಂಚೆಯೇ ನೇಮಿಸಿತೆಂದು ಹೇಳಲಾಗಿದೆ. ಹೀಗೆ ಎರಡು ವರ್ಷಗಳು ಮುಂಚೆಯೇ ಕಾನೂನುಬದ್ಧ ಆಯೋಗವನ್ನು ನೇಮಿಸಿದುದಕ್ಕೆ ಇತಿಹಾಸಜ್ಞರು ಇನ್ನೂ ಕೆಲವು ಕಾರಣಗಳನ್ನು ಕೊಟ್ಟಿರುತ್ತಾರೆ.[1] ಇವುಗಳ ಚರ್ಚೆ ಅಥವಾ ವಿವರಣೆ ಇಲ್ಲಿ ಅಪ್ರಕೃತ.

ಸರ್ ಜ್ಞಾನ್ ಸೈಮನ್ ಎಂಬ ಪ್ರಖ್ಯಾತ ಲಾಯರ್ ಅಧ್ಯಕ್ಷತೆಯಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರಾದ ಆರು ಇತರ ಸದಸ್ಯರನ್ನುಳ್ಳ ಭಾರತದ ಕಾನೂನುಬದ್ಧ ಆಯೋಗವನ್ನು (Indian Statutary Commission) ಬ್ರಿಟಿಷ್ ಸರ್ಕಾರವು 1927 ರ ನವೆಂಬರ್ 26 ರಂದು ನೇಮಿಸಿತು. ಈ ಆಯೋಗದಲ್ಲಿ ಭಾರತೀಯರನ್ನು ಸೇರಿಸದುದು ಭಾವಗರ್ಭಿತ ವಿಷಯವಾಗಿದೆ. ಭಾರತದ ರಾಜ್ಯಾಂಗ ಸುಧಾರಣೆ ಕುರಿತು ಪರಿಶೀಲನೆಯಲ್ಲಿ ಭಾರತೀಯರಿಗೂ ಸ್ಥಾನನೀಡಲು ಬ್ರಿಟಿಷ್ ಸರ್ಕಾರ ಸಿದ್ಧವಾಗಿರಲಿಲ್ಲವೆಂಬ ಅಂಶ ಇದರಿಂದ ವ್ಯಕ್ತವಾಗುವುದು. ಭಾರತೀಯರಿಗೆ ಇದರಿಂದ ಸ್ವಾಭಾವಿಕ

---

1. ಇವುಗಳ ವಿವರಗಳಿಗೆ ನೋಡಿ. D. C. Gupta, *op. cit*, PP 132-133.

ವಾಗಿಯೇ ತೀವ್ರ ಅಸಮಾಧಾನವಾಯಿತು. ಆಗ ಕಾಂಗ್ರೆಸ್ ಅಧ್ಯಕ್ಷ ರಾಗಿದ್ದ ಡಾ. ಅನ್ಸಾರಿಯವರು ಹೀಗೆ ನುಡಿದರು, "ಭಾರತದ ರಾಜಕೀಯ ಮುನ್ನಡೆಯ ಗತಿಯನ್ನೂ ಕಾಲವನ್ನೂ ನಿರ್ಣಯಿಸಲು ತಾನೇ ಏಕೈಕ ತೀರ್ಪುದಾರ ಎಂದು ಗ್ರೇಟ್‌ಬ್ರಿಟನ್ ಹೇಳಿಕೊಂಡಿರುವುದನ್ನು ಆತ್ಮಗೌರವ ವುಳ್ಳ ಯಾವ ಭಾರತೀಯನೂ ಒಪ್ಪುವುದಿಲ್ಲ"[1] "ಭಾರತದ ಸ್ವಯಂ ನಿರ್ಣ ಯಾಧಿಕಾರದ(Self - determination)ಹಕ್ಕನ್ನು ಧಿಕ್ಕರಿಸಿ" ಈ ಆಯೋಗ ವನ್ನು ಬ್ರಿಟಿಷ್ ಸರ್ಕಾರವು ನೇಮಿಸಿದೆ ಎಂಬ ನಿರ್ಣಯವನ್ನು ಕಾಂಗ್ರೆಸ್ಸು ಅನುಮೋದಿಸಿ, ಆಯೋಗದ ಕಲಾಪಗಳನ್ನು ಪ್ರತಿಯೊಂದು ಹಂತದಲ್ಲಿಯೂ, ಸರ್ವವಿಧದಲ್ಲಿಯೂ ಬಹಿಷ್ಕರಿಸಬೇಕೆಂದು ಜನತೆಗೆ ಕರೆ ನೀಡಿತು.[2] ಆಗ ಇಂಗ್ಲೆಂಡಿನಲ್ಲಿದ್ದ ಮೋತಿಲಾಲ್ ನೆಹರೂ ಅವರು ಬ್ರಿಟಿಷರು ಹಾಗೂ ಭಾರತೀಯರು ಇಬ್ಬರನ್ನೂ ಒಳಗೊಂಡ ಆಯೋಗವನ್ನು ನೇಮಿಸಬೇಕೆಂಬ ಮನವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದರು. ಎಲ್ಲಾ ಬಿಳಿಯರೇ ಇರುವ ಆಯೋಗವನ್ನು ರಚಿಸಿದುದು ತಪ್ಪೆಂದು ಭಾರತೀಯ ಲಿಬರಲ್ ಪಕ್ಷವು, ಹಿಂದೂ ಮಹಾಸಭಾ, ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದವು. ಅನೇಕ ಭಾರತೀಯ ಗಣ್ಯ ವ್ಯಕ್ತಿಗಳೂ ಬ್ರಿಟನ್ನಿನ ಈ ಧೋರಣೆಯನ್ನು ಖಂಡಿಸಿದರು. ಪಂಜಾಬಿನ ಸರ್ ಮಹಮದ್ ಷಫಿ ನೇತೃತ್ವದ ಮುಸ್ಲಿಂ ಲೀಗಿನ ಸಣ್ಣ ವಿಭಾಗವೊಂದು ಮತ್ತು ಕೆಲವು ಯುರೋಪಿಯನ್ನರು ಹಾಗೂ ಆಂಗ್ಲ – ಭಾರತೀಯರು ಮಾತ್ರ ಸೈಮನ್ ಆಯೋಗವನ್ನು ಸ್ವಾಗತಿಸಿದರು.

ಹೀಗೆ ಸೈಮನ್ ಆಯೋಗದ ಭೇಟಿ ಹಾಗೂ ಕಾರ್ಯಾಚರಣೆಗಳಿಗೆ ಸಾರ್ವತ್ರಿಕವಾಗಿ ತೀವ್ರ ವಿರೋಧವಿದ್ದುದನ್ನು ಕಡೆಗಾಣಿಸಿ ವೈಸ್‌ರಾಯ್ ಇರ್ವಿನ್ ಅವರು ತನಗೆ ವಹಿಸಿರುವ ಕಾರ್ಯವನ್ನು ನಿರ್ವಹಿಸಲು ಮುಂದು ವರಿಯುವಂತೆ ಆಯೋಗಕ್ಕೆ ಆದೇಶ ನೀಡಿದರು. 1928ರ ಫೆಬ್ರುವರಿ 3 ರಂದು ಆಯೋಗದ ಸದಸ್ಯರೆಲ್ಲರೂ ಬೊಂಬಾಯಿಗೆ ಬಂದಿಳಿದರು. ಆಗ

1. Congress Presidential Addresses [Second Series] G. A. Natesan & Co., P 841
2. Pattabhi Sitaramayya *op, cit,* Vol. I P. 318

ಜನರು ಅವರನ್ನು ಸ್ವಾಗತಿಸುವುದಿರಲಿ, ಅವರನ್ನು ಸುಮ್ಮನೆ ಹಾಗೆಯೇ ಹಿಂತಿರುಗಿ ಹೊರಡಿಸಲು "ಸೈಮನ್ ಅವರೇ ವಾಪಸು ನಡೆಯಿರಿ" ಎಂಬ ಘೋಷಣೆಯನ್ನು ಕೂಗಿದರು. ಆಯೋಗ ಬಂದಿಳಿದ ದಿವಸ ಭಾರತದಲ್ಲೆಲ್ಲಾ 'ಹರತಾಳ'ವನ್ನು ಆಚರಿಸಲಾಯಿತು. ಭಾರತದಲ್ಲಿ ಅವರು ಇದ್ದ ಅವಧಿಯಲ್ಲಿ ಅವರು ಎಲ್ಲೆಲ್ಲಿ ಹೋದರೂ ಅಲ್ಲಿನ ಜನರು ಅವರಿಗೆ ಕಪ್ಪು ಬಾವುಟ ಪ್ರದರ್ಶನ ನೀಡಿ, 'ಸೈಮನ್ ವಾಪಸು ನಡೆಯಿರಿ' ಎಂಬ ಘೋಷಣೆಯನ್ನು ಕೂಗುತ್ತಿದ್ದರು. ಇಂತಹ ಪ್ರದರ್ಶನ ನಡೆದ ಕಡೆಗಳಲ್ಲೆಲ್ಲಾ ಸರ್ಕಾರವು ಪೋಲೀಸರಿಂದ ಲಾಠಿಪ್ರಯೋಗ ಮಾಡಿಸುವುದು ಅದಕ್ಕೆ ರೂಢಿಯಾಗಿ ಬಿಟ್ಟದ್ದಿತು. ಲಾಠಿ ಪ್ರಹಾರ ಗಣ್ಯನಾಯಕರನ್ನೂ ಬಿಡಲಿಲ್ಲ. ಆದರೆ ಜನ ಇಂತಹ ಬಲ ಪ್ರದರ್ಶನಕ್ಕೆ ಬಗ್ಗಲಿಲ್ಲ. ಏಟು ತಿಂದರೂ ಅವರ ಸ್ಫೂರ್ತಿ ಕುಗ್ಗಲಿಲ್ಲ.

ಜನಗಳ ಪ್ರದರ್ಶನಗಳಿಂದ ಸ್ವಲ್ಪವೂ ಪ್ರಭಾವಿತರಾಗದೆ ಸೈಮನ್ ಸಮಿತಿಯ ಸದಸ್ಯರು ತಮ್ಮ ಸರ್ಕಾರದ ಆಜ್ಞಾಪಾಲಕರಾಗಿ ಭಾರತದಲ್ಲಿ ಸಂದರ್ಶನಕ್ಕೆ ಒಪ್ಪುವಂತಹ ಕೆಲವೇ ವ್ಯಕ್ತಿಗಳನ್ನೇ ಸಂದರ್ಶಿಸಿ ಇವರುಗಳ ಅಭಿಪ್ರಾಯಗಳೇ ಭಾರತದ ಅಭಿಪ್ರಾಯಗಳನ್ನು ಸಹಜವಾಗಿ ವ್ಯಕ್ತಪಡಿಸುವುವೋ ಎನ್ನುವಂತೆ ಮುಂದುವರಿದು ತನ್ನ ವರದಿಯನ್ನು ಸಿದ್ಧಪಡಿಸಿತು. ಈ ವರದಿಯು ಒಳಗೊಂಡಿದ್ದ ಶಿಫಾರಸುಗಳ ಸಾರಾಂಶ ಹೀಗಿದೆ :—

1. ಗೌರ್ನರನ ಸರ್ವೋಚ್ಚ ಅಧಿಕಾರವ್ಯಾಪ್ತಿಗೆ ಒಳಪಡಿಸಲಾದ ಆಂತರಿಕ ಭದ್ರತೆ ಇಂತಹ ಕೆಲವು ವಿಷಯಗಳನ್ನು ಬಿಟ್ಟರೆ ಉಳಿದ ವಿಷಯಗಳ ಬಗ್ಗೆ ಪ್ರಾಂತ್ಯಗಳಿಗೆ ಪೂರ್ಣ ಸ್ವತಂತ್ರತೆ.

2. ಬ್ರಿಟಿಷ್ ಭಾರತ ಹಾಗೂ ರಾಜರುಗಳ ರಾಜ್ಯಗಳೂ ಸೇರಿದಂತೆ ಕೇಂದ್ರದಲ್ಲಿ ಒಂದು ಫೆಡರಲ್ ಸರ್ಕಾರವಿರತಕ್ಕದ್ದು.

3. ಬ್ರಿಟಿಷ್ ಸೇನೆಗಳು ಮತ್ತು ಬ್ರಿಟಿಷ್ ಅಧಿಕಾರಿಗಳು ಇನ್ನೂ ಅನೇಕ ವರ್ಷಗಳು ಭಾರತದಲ್ಲೇ ಇರುವುದು.

4. ಪ್ರಾಂತೀಯ ವಿಧಾನಸಭೆಗಳನ್ನು ವಿಸ್ತರಿಸುವುದು.

5. ಗೌರ್ನರ್ ಜನರಲ್ ತನ್ನ ಸಚಿವ ಸಂಪುಟದ ಸದಸ್ಯರನ್ನು ತಾನೇ ಚುನಾಯಿಸಿ ನೇಮಿಸಿಕೊಳ್ಳತಕ್ಕದ್ದು.

6. ಉನ್ನತ ನ್ಯಾಯಾಲಯಗಳು (High Courts) ಭಾರತ ಸರ್ಕಾರದ ಆಡಳಿತದಲ್ಲಿರತಕ್ಕದ್ದು.

ಇವೇ ಸೈಮನ್ ಆಯೋಗದ ಮುಖ್ಯ ಶಿಫಾರಸುಗಳು.

ಸೈಮನ್ ಆಯೋಗದ ಶಿಫಾರಸುಗಳು ಭಾರತದ ಯಾವ ಪಕ್ಷಕ್ಕೂ ತೃಪ್ತಿ ನೀಡಲಿಲ್ಲ. ಭಾರತೀಯರು ಹೋರಾಡುತ್ತಿದ್ದ ಸ್ವರಾಜ್ಯ ಸ್ಥಾಪನೆಯ ಯಾವ ಮುಖ್ಯ ಅಂಶವನ್ನೂ ಈ ಶಿಫಾರಸುಗಳು ಒಳಗೊಂಡಿಲ್ಲವೆಂದು ಎಲ್ಲ ಮುಖಂಡರೂ ವರದಿಯನ್ನು ಕಟುವಾಗಿ ಟೀಕಿಸಿದರು. ಬ್ರಿಟನ್ನಿನಲ್ಲಿಯೇ ಸೈಮನ್ ವರದಿಯು ಲೇಬರ್ ಪಕ್ಷಕ್ಕೆ ತೃಪ್ತಿಕರವಾಗಲಿಲ್ಲ. ಹೀಗೆ ಭಾರತದ ರಾಜಕೀಯ ಸಮಸ್ಯೆಯನ್ನು ತಮ್ಮವರೇ ಆದ ಏಳು ವ್ಯಕ್ತಿಗಳನ್ನು ಒಳಗೊಂಡ ಆಯೋಗದ ಮೂಲಕ ಪರಿಹರಿಸುವ ಬ್ರಿಟಿಷರ ಪ್ರಯತ್ನವು ಎಲ್ಲಾ ವಿಧದಲ್ಲಿಯೂ ವಿಫಲವಾಯಿತು. ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವ ಸೈಮನ್ ಆಯೋಗದ ನಂತರದ ಘಟನೆಗಳಿಂದ ಬ್ರಿಟಿಷ್ ಸರ್ಕಾರವು ಬೇರೆ ಮಾರ್ಗ ಕುರಿತು ಆಲೋಚಿಸಬೇಕಾಯಿತು.

ಮೋತಿಲಾಲ್ ನೆಹರೂ ವರದಿ

ಸೈಮನ್ ಆಯೋಗ ಹಾಗೂ ಇದರ ವರದಿ ಬಗ್ಗೆ ಭಾರತೀಯರು ಪ್ರದರ್ಶಿಸಿದ ತೀವ್ರ ವಿರೋಧದಿಂದ ಕುಪಿತರಾದ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಬರ್ಕನ್‌ಹೆಡ್ ಅವರು, ಭಾರತದ ಎಲ್ಲಾ ಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಹೊಸ ರಾಜ್ಯಾಂಗ ರೂಪಿಸಲು ಭಾರತೀಯ ರಾಜಕಾರಣಿಗಳು ಅಸಮರ್ಥರು ಎಂದು ಮೂದಲಿಸಿದರು. ಇದು ಭಾರತದ ರಾಜಕಾರಣಿಗಳಿಗೆ ಒಂದು ಸವಾಲಾಯಿತು. ಈ ಸವಾಲನ್ನು ನೇರವಾಗಿ ಎದುರಿಸುವ ಉದ್ದೇಶದಿಂದ ಕಾಂಗ್ರೆಸ್ಸಿನ ಆರಂಭ ಪ್ರಯತ್ನದಿಂದ ಅಖಿಲ ಭಾರತ ಸರ್ವಪಕ್ಷೀಯ ಸಮ್ಮೇಳನವೊಂದು 1928ರ ಫೆಬ್ರುವರಿ - ಮಾರ್ಚಿಯಲ್ಲಿ ಸಭೆ ಸೇರಿತು. ಬ್ರಿಟಿಷರು ಭಾರತಕ್ಕೆ ಅಧಿಕಾರವನ್ನು ವಹಿಸಿಕೊಡುವ ಬಗ್ಗೆ ಒಂದು ಉತ್ತಮವಾದ ಯೋಜನೆಯನ್ನು ಸಿದ್ಧಪಡಿಸಿ ಬ್ರಿಟಿಷ್

ಸರ್ಕಾರಕ್ಕೆ ಇದನ್ನು ಸಲ್ಲಿಸುವುದೇ ಈ ಸಮ್ಮೇಳನದ ಮುಖ್ಯೋದ್ದೇಶವಾಗಿದ್ದಿತು. ಹೀಗೆ ಸೇರಿದ ಸಭೆಯು ಮೋತಿಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಜವಾಹರಲಾಲ್ ನೆಹರೂ ಅವರೇ ಇದರ ಕಾರ್ಯದರ್ಶಿ. ದೇಶದ ವಿವಿಧ ಪಕ್ಷಗಳನ್ನೂ, ಪಂಗಡಗಳನ್ನೂ ಪ್ರತಿನಿಧಿಸುವ ಎಂಟು ಜನ ಸದಸ್ಯರಿದ್ದರು;[1] ಭಾರತದ ಹೊಸ ರಾಜ್ಯಾಂಗದ ತತ್ವಗಳನ್ನು ನಿರ್ಣಯಿಸಿ ಇದರ ಬಗ್ಗೆ ಒಂದು ವರದಿ ಸಿದ್ಧಪಡಿಸುವುದೇ ಈ ಸಮಿತಿಗೆ ಒಪ್ಪಿಸಲಾದ ಕರ್ತವ್ಯವಾಗಿದ್ದಿತು.

ಮೋತಿಲಾಲ್ ನೆಹರೂ ಸಮಿತಿಯು ಅದರ ವರದಿಯನ್ನು 1928ರ ಜುಲೈನಲ್ಲಿ ಸಲ್ಲಿಸಿತು. ಸ್ವರಾಜ್ಯ ಹೊಂದಿರುವ ಡೊಮಿನಿಯನ್‌ಗಳ ರಾಜ್ಯಾಂಗದ ಮಾದರಿಯಂತೆ ಭಾರತದ ರಾಜ್ಯಾಂಗವೂ ಪೂರ್ಣ ಜವಾಬ್ದಾರಿ ಸರ್ಕಾರದ (Full Responsible Government) ಮೇಲೆ ಆಧಾರವಾಗಿರಬೇಕೆಂದೂ, ಭಾರತದ ರಾಜ್ಯಾಂಗ ಫೆಡರಲ್ ಮಾದರಿಯದಾಗಿರಬೇಕೆಂದೂ, ಬ್ರಿಟನ್ನು ಭಾರತಕ್ಕೆ ಡೊಮಿನಿಯನ್ ಅಂತಸ್ತನ್ನು ತಕ್ಷಣವೇ ನೀಡಬೇಕೆಂದೂ, ಈ ವರದಿಯಲ್ಲಿ ಸಮಿತಿಯು ಶಿಫಾರಸು ಮಾಡಿತು. ಭಾರತದ ಫೆಡರಲ್ ರಾಜ್ಯಾಂಗ ಮಾದರಿಯ ವಿವರಣೆಯನ್ನು ಇದು ಒಳಗೊಂಡಿದ್ದಿತು.[2]

ನೆಹರೂ ವರದಿಯು ಸೂಚಿಸಿದ ರಾಜ್ಯಾಂಗವನ್ನು ಸಂಪೂರ್ಣವಾಗಿ ಬ್ರಿಟಿಷ್ ಪಾರ್ಲಿಮೆಂಟು 1928ರ ಡಿಸೆಂಬರ್ 31ರ ಒಳಗೆ ಒಪ್ಪಿಕೊಂಡರೆ ರಾಷ್ಟ್ರೀಯ ಕಾಂಗ್ರೆಸ್ಸೂ ಅದನ್ನು ಒಪ್ಪುವುದೆಂದು ಅದು ನಿರ್ಣಯ ಮಾಡಿತು. ಈ ಅವಧಿಯ ಒಳಗೆ ಬ್ರಿಟಿಷ್ ಸರ್ಕಾರವು ಒಪ್ಪಿಗೆ ನೀಡದಿದ್ದರೆ, "ಅಹಿಂಸಾತ್ಮಕ ಅಸಹಕಾರ ಚಳುವಳಿ"ಯನ್ನು ವ್ಯವಸ್ಥೆಗೊಳಿಸುವುದಾಗಿ ಅದು ಘೋಷಿಸಿತು.

---

1. ಈ ಸದಸ್ಯರು ಇವರುಗಳು :— ಎಂ. ಎಸ್. ಅಣೆ, ಎಂ. ಆರ್. ಜಯಕರ್, ಸರ್ ಇಮಾಂಶುಸಬ್ ಖುರೇಶಿ, ಜಿ. ಆರ್. ಪ್ರಧಾನ್, ಸರದಾರ್ ಮಂಗಳಸಿಂಗ್, ತೇಜ್ ಬಹದೂರ್ ಸಪ್ರು ಮತ್ತು ಎನ್. ಎಂ. ಜೋಶಿ.
2. ಈ ವಿವರಣೆಗಳಿಗೆ, ನೋಡಿ. D. C. Gupta, *op. cit*, PP. 140 – 141.

ಮುಸ್ಲಿಮರ ಪ್ರತ್ಯೇಕತಾ ಭಾವನೆ ಬೆಳೆದುದು

ದುರದೃಷ್ಟವಶದಿಂದ ಮೋತಿಲಾಲ್ ನೆಹರೂ ವರದಿಯ ಕೆಲವು ಅಂಶಗಳು ಹೆಚ್. ಹೆಚ್. ದಿ ಆಗಾಖಾನ್, ಸರ್ ಮೊಹಮದ್ ಷಫಿ ಇಂತಹ ಪ್ರಭಾವಿ ಮುಸಲ್ಮಾನರಿಗೆ ಒಪ್ಪಿಗೆ ಆಗಲಿಲ್ಲ. ಇನ್ನೂ ಪಾಕಿಸ್ತಾನವಾದಿಯಾಗದಿದ್ದ ಮೊಹಮದ್ ಆಲಿ ಜಿನ್ನಾ ಇವರುಗಳನ್ನು ಒಪ್ಪಿಸುವ ಪ್ರಯತ್ನ ನಡೆಸಿದರು. 'ಕೂಡು ಚುನಾವಣಾ ಕ್ಷೇತ್ರ' (Joint Electorates) ಮುಖ್ಯವಾಗಿ ಮುಸ್ಲಿಂ ಮುಖಂಡರುಗಳಿಗೆ ಒಪ್ಪಿಗೆಯಾಗದುದನ್ನು ಅವರು ಕಂಡುಕೊಂಡರು. ಅಲ್ಲದೆ, ಈ ಸಂದರ್ಭದ ಚರ್ಚೆಗಳಲ್ಲಿ ಜಿನ್ನಾ ಅವರೇ ಸಂಪೂರ್ಣವಾಗಿ ಪರಿವರ್ತನೆಗೊಂಡು ಮುಸ್ಲಿಮರಿಗೆ ಭಾರತದಲ್ಲಿ ಪ್ರತ್ಯೇಕ ರಾಷ್ಟ್ರ ನಿರ್ಮಾಣವಾಗಬೇಕೆಂಬ ಧ್ಯೇಯವನ್ನುಒಪ್ಪಿಕೊಂಡು ಅಂದಿನಿಂದ ಈ ಧ್ಯೇಯಸಾಧನೆಗೆ ಸರ್ವೋಚ್ಚ ನಾಯಕರಾಗಿ ಹೋರಾಡತೊಡಗಿದರು. ಮುಸ್ಲಿಮರ ಹಿತಾಸಕ್ತಿಗಳ ರಕ್ಷಣೆಗೆಂದು ಹದಿನಾಲ್ಕು ಅಂಶಗಳುಳ್ಳ ಒಂದು ಹೇಳಿಕೆಯನ್ನು[1] ಅವರು ಸಿದ್ಧಪಡಿಸಿದರು.

ಒಟ್ಟಿನಲ್ಲಿ ಭಾರತದ ಸರ್ವಪಕ್ಷ ಸಮ್ಮೇಳನವು ಎಲ್ಲಾ ಪಕ್ಷಗಳು ಹಾಗೂ ಪಂಗಡಗಳಿಗೆ ಒಪ್ಪಿಗೆಯಾಗುವಂತಹ ರಾಜ್ಯಾಂಗವನ್ನು ರೂಪಿಸುವ ಉದ್ದೇಶ ವಿಫಲವಾದಂತಾಯಿತು. ಭಾರತಕ್ಕೆ ಸ್ವರಾಜ್ಯ ನೀಡುವುದನ್ನು ನಿರಾಕರಿಸಲು ಬ್ರಿಟಿಷರಿಗೆ ಒಳ್ಳೆಯ ಕಾರಣ ಸಿಕ್ಕಂತಾಯಿತು. ಹಿಂದೆ ನಾಲ್ಕನೆಯ ಅಧ್ಯಾಯದಲ್ಲಿ ಸೂಚಿಸಿದಂತೆ ಬ್ರಿಟಿಷರು ಹಿಂದೂ ಮತ್ತು ಮುಸ್ಲಿಂ ಜನತೆಯಲ್ಲಿ ಭೇದ ಹುಟ್ಟಿಸುವುದಕ್ಕಾಗಿ ಅನೇಕ ಪ್ರಯತ್ನಗಳನ್ನು ಹಿಂದಿನಿಂದಲೂ ಮಾಡಿ ಹಿಂದೂ–ಮುಸ್ಲಿಂ ಭಿನ್ನತೆಯನ್ನು ಉತ್ತೇಜಿಸುತ್ತಾ ಬಂದರು. 'ವಿಭಜಿಸಿ, ಆಳು' (Divide and Rule) ಎಂಬ ಅವರ ನೀತಿಗೆ ಅನುಸಾರವಾಗಿಯೇ ಹೀಗೆ ನಡೆದುಕೊಳ್ಳುತ್ತಾ ಬಂದರು. ಏನೇ ಆಗಲಿ, ಹಿಂದೂ–ಮುಸ್ಲಿಂ ಸಂಯುಕ್ತ ಏಕಾಭಿಪ್ರಾಯವಿಲ್ಲದಿದ್ದುದರಿಂದ ಆಗ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂಬ ಬೇಡಿಕೆಯ ಬಗ್ಗೆ ಬ್ರಿಟಿಷರ

---

1. ಜಿನ್ನಾ ಅವರ ಹದಿನಾಲ್ಕು ಅಂಶಗಳ ವಿವರಗಳಿಗೆ ನೋಡಿ. D, C. Gupta *op. cit,* PP 143–144

ಮೇಲೆ ಹೆಚ್ಚು ಒತ್ತಡ ತರುವುದು ಹೆಚ್ಚು ಕಷ್ಟವಾಗುತ್ತಾ ಬಂದಿತು. ಸ್ವಾತಂತ್ರ್ಯದ ಕೊನೆಯ ಹಂತದಲ್ಲಿಯೂ, ನಾವು ಮುಂದೆ ವಿವರಿಸುವಂತೆ, ದೇಶದ ವಿಭಜನೆಗೆ ಕಾಂಗ್ರೆಸ್ಸು ಮನಸ್ಸಿಲ್ಲದಿದ್ದರೂ ವಿಧಿ ಇಲ್ಲದೆ ಇದನ್ನು ಒಪ್ಪಿಕೊಳ್ಳುವವರೆಗೂ ಸ್ವಾತಂತ್ರ್ಯ ಪಡೆಯುವುದು ಆಗಲಿಲ್ಲ.

ಹೀಗೆ ಸೈಮನ್ ಆಯೋಗದ ವರದಿ ನಿರಾಕರಣೆ, ಸರ್ವಪಕ್ಷೀಯ ಸಮ್ಮೇಳನದಲ್ಲಿ ಮೋತಿಲಾಲ್ ನೆಹರೂ ಸಮಿತಿಯ ವರದಿಯನ್ನು ಸಿದ್ಧಪಡಿಸಿದುದು, ಮುಸ್ಲಿಮರ ಪರವಾಗಿ ಜಿನ್ನಾ ತಮ್ಮದೇ ಆದ ಹದಿನಾಲ್ಕು ಅಂಶಗಳನ್ನು ಪ್ರಕಟಿಸಿದುದು, ಮುಸ್ಲಿಮರಲ್ಲಿ ಪ್ರತ್ಯೇಕತಾಭಾವನೆ ಬೇರೂರಿದುದು – ಇವು 1928ರ ಮುಖ್ಯ ಘಟನೆಗಳಾಗಿವೆ. ಸೈಮನ್ ಆಯೋಗದ ವರದಿಯು ಭಾರತದ ರಾಜಕೀಯ ಸಮಸ್ಯೆಯನ್ನು ನಿವಾರಿಸುವುದರ ಬದಲು ರಾಜಕೀಯ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿದುದನ್ನು ಗಮನಿಸಿ ಬ್ರಿಟಿಷ್ ಸರ್ಕಾರವು ಬೇರೆ ಆಲೋಚನೆ ಮಾಡತೊಡಗಿತು. ಭಾರತೀಯ ಮುಖಂಡರನ್ನು ಆಹ್ವಾನಿಸಿ ದುಂಡುಮೇಜಿನ ಸಮ್ಮೇಳನ (Round Table Conference) ವನ್ನು ಏರ್ಪಡಿಸಿ ಭಾರತದ ರಾಜಕೀಯ ಪ್ರಶ್ನೆಯನ್ನು ಅಲ್ಲಿ ಚರ್ಚಿಸುವುದೇ ಈ ಹೊಸ ಆಲೋಚನೆಯಾಗಿದ್ದಿತು. ಈ ದುಂಡುಮೇಜಿನ ಸಮ್ಮೇಳನಗಳ ಕಾರ್ಯಕಲಾಪಗಳು ನಡೆದುದರ ಬಗೆ ಹಾಗೂ ಈ ಸಮ್ಮೇಳನಗಳ ಮುಖ್ಯ ಫಲ ಇವುಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವುದು.

✤✤✤

ಅಧ್ಯಾಯ - 10

ದುಂಡು ಮೇಜಿನ ಸಮ್ಮೇಳನಗಳು (1930)

1930ರ ದಶಕದ ರಾಷ್ಟ್ರೀಯ ಚಳುವಳಿಯಲ್ಲಿ ಎರಡು ಮುಖಗಳನ್ನು ಕಾಣಬಹುದು. ಒಂದು ದುಂಡು ಮೇಜಿನ ಸಮ್ಮೇಳನಗಳನ್ನು ಏರ್ಪಡಿಸಿ ಇವುಗಳ ಕಲಾಪಗಳ ಮೂಲಕ ಭಾರತದ ರಾಜಕೀಯ ಸಮಸ್ಯೆಗೆ ಪರಿಹಾರ ಹುಡುಕುವ ಬ್ರಿಟಿಷ್ ಸರ್ಕಾರದ ಪ್ರಯತ್ನ: ಇನ್ನೊಂದು, ಪಟ್ಟಾಭಿ ಸೀತಾ ರಾಮಯ್ಯನವರು ಯಾವುದನ್ನು 'ಅಂತಿಮ ಹೋರಾಟ' (Fight to the Finish) ಎಂದು ಕರೆದಿರುವರೋ[1] ಅಂತಹ ಸ್ವಾತಂತ್ರ್ಯ ಹೋರಾಟವನ್ನು ಕಾಂಗ್ರೆಸ್ಸು ತೀವ್ರಗೊಳಿಸಿದುದು. ಈ ಅಧ್ಯಾಯದಲ್ಲಿ ಮೊದಲನೆಯದನ್ನೂ ಮುಂದಿನ ಅಧ್ಯಾಯದಲ್ಲಿ ಎರಡನೆಯದನ್ನೂ ವಿವರಿಸಲಾಗುವುದು.

ಭಾರತದ ರಾಷ್ಟ್ರೀಯ ಚಳುವಳಿಯ ಮುಖಂಡರನ್ನು ತೃಪ್ತಿಗೊಳಿಸಲು ಬ್ರಿಟಿಷ್ ಸರ್ಕಾರವು ಮಾಡುತ್ತಿದ್ದ ಪ್ರಯತ್ನಗಳಲ್ಲಿ ದುಂಡು ಮೇಜಿನ ಸಮ್ಮೇಳನವು ತನ್ನದೇ ಆದ ಪ್ರಾಮುಖ್ಯ ಪಡೆದಿದೆ. ಭಾರತದ ರಾಜಕೀಯ ಸಮಸ್ಯೆಗೆ ಪರಿಹಾರ ಹುಡುಕುವ ಮಾತುಕತೆಗಳಿಗೆ ಪ್ರಥಮ ಬಾರಿಗೆ ಬ್ರಿಟಿಷ್ ಸರ್ಕಾರವು ಭಾರತೀಯ ಮುಖಂಡರನ್ನು ಆಹ್ವಾನಿಸಿದುದೇ ಒಂದು ಮುಖ್ಯ ವಿಷಯವಾಗಿದೆ. ಕೇವಲ ಸೈನ್ಯ ಹಾಗೂ ಪೋಲೀಸು ಬಲ ಪ್ರಯೋಗದಿಂದ ಭಾರತೀಯರ ದೇಶಪ್ರೇಮ ಭಾವನೆ ಹಾಗೂ ಸ್ವಾತಂತ್ರ್ಯ ಚಳುವಳಿಗಳನ್ನು ದಮನ ಮಾಡಲಾಗುವುದಿಲ್ಲವೆಂಬುದನ್ನು ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರು ಮನಗಂಡರು. 1929ರ ಚುನಾವಣೆಯಲ್ಲಿ ಗೆದ್ದುಬಂದ ಬ್ರಿಟಿಷ್

---

1. Pattabhi Sitaramayya, *op. cit*, P 613.

ಲೇಬರ್ ಪಕ್ಷದ ಸರ್ಕಾರವು ಭಾರತದ ಬಗ್ಗೆ ಕನ್ಸರ್ವೆಟಿವ್ ಪಕ್ಷ ಅನುಸರಿಸು ತ್ತಿದ್ದಷ್ಟು ಕಠಿಣ ಹಾಗೂ ಬಿಗಿ ಧೋರಣೆ ಹೊಂದಿರಲಿಲ್ಲ. ಬರೀ 'ಬಿಳಿಯರ ಆಯೋಗ'ವಾದ ಸೈಮನ್ ಆಯೋಗದಿಂದ ಭಾರತೀಯರ ಮನಸ್ಸು ನೊಂದಿದ್ದುದನ್ನೂ ಈ ಸರ್ಕಾರ ಗಮನಿಸಿತು. ಹೀಗೆ ನೊಂದ ಮನಸ್ಸುಗಳಿಗೆ ಸ್ವಲ್ಪ ಮಟ್ಟಿಗೆ ಸಮಾಧಾನ ಉಂಟುಮಾಡುವುದಕ್ಕೋ ಏನೋ ಎಂಬಂತೆ ಬ್ರಿಟಿಷ್ ಸರ್ಕಾರವು ದುಂಡು ಮೇಜಿನ ಸಮ್ಮೇಳನ ಏರ್ಪಡಿಸಲಿದೆ ಎಂಬ ವಿಷಯವನ್ನು ವೈಸ್‌ರಾಯ್ ಲಾರ್ಡ್ ಇರ್ವಿನ್ನರು 1929ರ ಅಕ್ಟೋಬರ್ 31 ರಂದು ಘೋಷಿಸಿದರು. ಈ ಸಮ್ಮೇಳನದಲ್ಲಿ ಬ್ರಿಟಿಷ್ ಸರ್ಕಾರದ ಜೊತೆಗೆ ಮಾತುಕತೆ ನಡೆಸಲು ಬ್ರಿಟಿಷ್ ಭಾರತ ಹಾಗೂ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳೂ ಇರುವರೆಂದೂ, ಭಾರತದ ರಾಜಕೀಯ ಸಮಸ್ಯೆಯ ಬಗ್ಗೆ ಸಾರ್ವತ್ರಿಕವಾಗಿ ಭಾರತೀಯರಿಗೆ ಒಪ್ಪಿಗೆಯಾಗುವಂತಹ ಸಲಹೆಗಳನ್ನು ಯೋಚಿಸುವುದೇ ಈ ಸಮ್ಮೇಳನದ ಮುಖ್ಯ ಕಾರ್ಯವಾಗಿರು ವುದೆಂದೂ, ಹೀಗೆ ರೂಪಿಸಲಾಗುವ ಸಲಹೆಗಳನ್ನು ಬ್ರಿಟಿಷ್ ಸರ್ಕಾರವು ಪಾರ್ಲಿಮೆಂಟಿನ ವಿವೇಚನೆಗೆ ಸಲ್ಲಿಸುವುದೆಂದೂ ಇರ್ವಿನ್ ಅವರು ವಿಶದಪಡಿ ಸಿದರು. ದುಂಡುಮೇಜಿನ ಸಮ್ಮೇಳನವು 1930ರ ನವೆಂಬರ್ 12 ರಂದು ಸಭೆ ಸೇರುವುದೆಂದು 1930ರ ಮೇ 12 ರಂದು ಪ್ರಕಟಿಸಲಾಯಿತು.

ದುಂಡು ಮೇಜಿನ ಸಮ್ಮೇಳನದ ಬಗ್ಗೆ ಮೇಲಿನಂತೆ ತೀರ್ಮಾನಿಸಿದ ತಕ್ಷಣವೇ ಸರ್ಕಾರವು ಜೈಲುಗಳಲ್ಲಿದ್ದ ಕಾಂಗ್ರೆಸ್ ಮುಖಂಡರುಗಳ ಪ್ರತಿ ಕ್ರಿಯೆ ತಿಳಿಯಲು ಅವರನ್ನು ಭೇಟಿಮಾಡಲು ಅಧಿಕಾರಿಗಳನ್ನು ಕಳಿಸಿತು. ಡೊಮಿನಿಯನ್ ಅಂತಸ್ತನ್ನು ಭಾರತಕ್ಕೆ ಯಾವಾಗ ನೀಡಲಾಗುತ್ತೆ ಎಂಬ ಪ್ರಶ್ನೆಗೆ ವೈಸ್‌ರಾಯ್ ಅವರು ಉತ್ತರ ಕೊಡಲು ಅಸಮರ್ಥರಾದುದರಿಂದ ಈ ಕಾಂಗ್ರೆಸ್ ಮುಖಂಡರುಗಳಿಗೆ ದುಂಡು ಮೇಜಿನ ಸಮ್ಮೇಳನದ ಸಲಹೆ ಒಪ್ಪಿಗೆಯಾಗಲಿಲ್ಲ. ರಕ್ಷಣೆ ಹಾಗೂ ಹಣಕಾಸು ಬಾಬುಗಳ ಮೇಲೆಯೂ ಹತೋಟಿ ಹೊಂದಿರುವ, ಜನತೆಗೆ ಜವಾಬ್ದಾರಿಯಾಗಿರುವ ರಾಷ್ಟ್ರೀಯ ಸರ್ಕಾರವನ್ನೂ ಮತ್ತು ತನಗೆ ಇಷ್ಟಬಂದಾಗ ಬ್ರಿಟಿಷ್ ಕಾಮನ್‌ವೆಲ್ತಿನಿಂದ ಹೊರಗೆ ಬರುವ ಸ್ವಾತಂತ್ರ್ಯವನ್ನೂ ಬ್ರಿಟನ್ನು ನೀಡದಿದ್ದರೆ ತಾವು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲಾಗುವುದಿಲ್ಲ ಎಂದು ಕಾಂಗ್ರೆಸ್

ಮುಖಂಡರುಗಳು 1930ರ ಆಗಸ್ಟ 15ರಂದು ಒಂದು ಹೇಳಿಕೆಯನ್ನು ಕೊಟ್ಟರು. ಬ್ರಿಟಿಷ್ ಸರ್ಕಾರವು ಈ ಷರತ್ತುಗಳಿಗೆ ಒಪ್ಪದುದರಿಂದ ಕಾಂಗ್ರೆಸ್ಸು ದುಂಡು ಮೇಜಿನ ಸಮ್ಮೇಳನಕ್ಕೆ ಸೇರುವುದಿಲ್ಲವೆಂದು ತೀರ್ಮಾನಿಸಿತು.

ಕಾಂಗ್ರೆಸು ದುಂಡುಮೇಜಿನ ಸಮ್ಮೇಳನಕ್ಕೆ ಸೇರಲು ನಿರಾಕರಿಸಿದಾಗ್ಯೂ ಬ್ರಿಟಿಷ್ ಸರ್ಕಾರವು ಈ ಸಮ್ಮೇಳನವನ್ನು ಏರ್ಪಡಿಸಿತು. ಲಂಡನ್ನಿನ ಸೆಯಿಂಟ್ ಜೇಮ್ಸ್ ಅರಮನೆಯಲ್ಲಿ 1930ರ ನವೆಂಬರ್ 12 ರಿಂದ 1931ರ ಜನವರಿ 19ರ ಅವಧಿಯಲ್ಲಿ ಈ ಸಮ್ಮೇಳನವು ಸಭೆ ಸೇರಿತು. ಬ್ರಿಟಿಷ್ ರಾಜಕೀಯ ಪಕ್ಷಗಳು, ಭಾರತೀಯ ಲಿಬರಲ್ ಫೆಡರೇಷನ್, ಮುಸ್ಲಿಂ ಲೀಗು, ಹಿಂದೂ ಮಹಾಸಭೆ, ಪರಿಶಿಷ್ಟ ವರ್ಗಗಳು ಮತ್ತು ಭಾರತದ ದೇಶೀಯ ಸಂಸ್ಥಾನಗಳು – ಇವೆಲ್ಲದರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಕಾಂಗ್ರೆಸ್ಸು ಭಾಗವಹಿಸದಿದ್ದರೆ ಮುಖ್ಯ ನಿರ್ಣಯಗಳ್ಯಾವುವನ್ನೂ ಮಾಡಲಾಗುವುದಿಲ್ಲವೆಂಬುದು ಈ ಸಭೆಗಳ ಚರ್ಚೆಯಿಂದ ಬ್ರಿಟಿಷ್ ಸರ್ಕಾರವು ಮನಗಂಡಿತು. "ಸಮ್ಮೇಳನದಲ್ಲಿ ಭಾಗವಹಿಸದಿರುವ ಪಕ್ಷಗಳ ಸಹಕಾರ ಕೋರಲು ಕ್ರಮಗಳನ್ನು ಕೈಗೊಳ್ಳಲಾಗುವುದು" ಎಂದು ಬ್ರಿಟಿಷ್ ಪ್ರಧಾನಿ ರಾಮ್ಸೆ ಮೆಕ್‌ಡೊನಾಲ್ಡ್ ಅವರು, ಸಮ್ಮೇಳನದ ಮುಕ್ತಾಯ ಭಾಷಣದಲ್ಲಿ ಘೋಷಿಸಿದರು. ಹೀಗೆ ಪ್ರಥಮ ದುಂಡು ಮೇಜಿನ ಸಮ್ಮೇಳನವು ಯಶಸ್ವಿಯಾಗಲಿಲ್ಲ.

ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮುಸ್ಲಿಂ ಲೀಗಿನ ಪ್ರತಿನಿಧಿಗಳಿಗೆ ನಿರಾಶೆಯಾಯಿತು. ಇಂಗ್ಲೆಂಡಿನಿಂದ ವಾಪಸು ಬಂದನಂತರ ಅವರೆಲ್ಲರೂ ಅಲಹಾಬಾದಿನಲ್ಲಿ ಸಭೆ ಸೇರಿದರು. ಮುಸಲ್ಮಾನರಿಗೆ ಪ್ರತ್ಯೇಕ ರಾಜ್ಯವೊಂದೇ ಹಿಂದೂ – ಮುಸಲ್ಮಾನ ಸಮಸ್ಯೆಗೆ ಪರಿಹಾರವೆಂದು ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ಮೊಹಮದ್ ಇಕ್ಬಾಲ್ ಅವರು ಘೋಷಿಸಿದುದೇ ಅಲ್ಲದೆ, ಪ್ರತ್ಯೇಕ ರಾಜ್ಯ ಕುರಿತ ತಮ್ಮ ಯೋಜನೆಯನ್ನು ಬಹಿರಂಗಪಡಿಸಿದರು. 1933ರಲ್ಲಿ ಈ ಪ್ರತ್ಯೇಕ ರಾಜ್ಯಕ್ಕೆ 'ಪಾಕಿಸ್ತಾನ್'[1]

1. ಪಂಜಾಬು, ಅಫ್ಘಾನಿಸ್ತಾನ, ಕಾಶ್ಮೀರ, ಸಿಂಧ್ ಇವುಗಳ ಪ್ರಥಮ ಅಕ್ಷರಗಳನ್ನು ಬೆಲೂಚಿಸ್ತಾನಿನ ಕೊನೆ ಮೂರಕ್ಷರಗಳನ್ನು ಇಂಗ್ಲಿಷಿನಲ್ಲಿ ಜೋಡಿಸಿ 'ಪಾಕಿಸ್ತಾನ್' (PAKISTAN) ಎಂಬ ಪದವನ್ನು ಅವರು ಸೂಚಿಸಿದರು.

ಎಂಬ ನಾಮಕರಣವನ್ನು ಚೌಧರಿ ರಹಮತ್ ಅಲಿ ಅವರು ಸೂಚಿಸಿದರು.

ಗಾಂಧಿ-ಇರ್ವಿನ್ ಒಪ್ಪಂದ

ಪ್ರಥಮ ದುಂಡು ಮೇಜಿನ ಸಮ್ಮೇಳನ ವಿಫಲಗೊಂಡನಂತರ ವೈಸರಾಯ್ ಇರ್ವಿನ್ ಅವರು ಮುಂದಿನ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕಾಂಗ್ರೆಸ್ಸಿನ ಮನವೊಲಿಸುವ ಪ್ರಯತ್ನ ಮಾಡಿದರು. ಆ ಕಾಲದಲ್ಲಿ ಮುಂದಿನ ಅಧ್ಯಾಯದಲ್ಲಿ ವಿವರಿಸುವಂತೆ, ಸ್ವಾತಂತ್ರ್ಯ ಚಳುವಳಿ ಬಿರುಸಾಗಿ ಸಾಗುತ್ತಿತ್ತು. ಆದರೂ ಕಾಂಗ್ರೆಸ್ಸನ್ನು ದುಂಡು ಮೇಜಿನ ಸಮ್ಮೇಳನಕ್ಕೆ ಬರಲು ಒಪ್ಪಿಸುವ ದೃಷ್ಟಿಯಿಂದ ಇರ್ವಿನ್ ಅವರು ಎಲ್ಲಾ ಮುಖಂಡರುಗಳನ್ನೂ ಜೈಲಿನಿಂದ ಬಿಡುಗಡೆ ಮಾಡಿದರು. ಈ ಮುಖಂಡರುಗಳು ಹಾಗೂ ವೈಸರಾಯ್ ನಡುವೆ ಸಂಧಾನಗಳು ಚುರುಕಾಗಿ ನಡೆದವು. ಇವುಗಳ ಫಲವಾಗಿ 1931ರ ಮಾರ್ಚಿ 5ರಂದು ಗಾಂಧಿ – ಇರ್ವಿನ್ ಒಪ್ಪಂದವೊಂದು ಏರ್ಪಟ್ಟಿತು. ಈ ಒಪ್ಪಂದದ ಸಾರಾಂಶ[1] ಹೀಗಿವೆ:

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪರವಾಗಿ ಮಹಾತ್ಮಾ ಗಾಂಧಿಯವರು ಅಸಹಕಾರ ಚಳುವಳಿಯನ್ನು ಮತ್ತು ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸುವುದನ್ನು ನಿಲ್ಲಿಸಲೂ, 1) ಫೆಡರೇಷನ್ 2) ಜವಾಬ್ದಾರಿ ಮತ್ತು 3) ರಕ್ಷಣೆ, ವಿದೇಶ ವ್ಯವಹಾರಗಳು, ಅಲ್ಪಸಂಖ್ಯಾತರು ಮತ್ತು ಭಾರತದ ಹಣಕಾಸಿನ ಭದ್ರತಾದೃಷ್ಟಿ ಇವುಗಳ ಆಧಾರದ ಮೇಲೆ ರಾಜ್ಯಾಂಗವನ್ನು ರೂಪಿಸಲು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲೂ ಒಪ್ಪಿಕೊಂಡರು.

ಸರ್ಕಾರದ ಪರವಾಗಿ ವೈಸರಾಯ್ ಅವರು (1) ಅಸಹಕಾರ ಚಳುವಳಿ ತಡೆಗಟ್ಟಲು ಹೊರಡಿಸಿದ್ದ ಸುಗ್ರೀವಾಜ್ಞೆಗಳನ್ನು (Ordinances) ಹಿಂತೆಗೆದುಕೊಳ್ಳಲೂ, (2) ಅಸಹಕಾರ ಚಳುವಳಿಯಲ್ಲಿ ಬಂಧಿಸಲಾಗಿದ್ದವರನ್ನು ಜೈಲಿನಿಂದ ಬಿಡುಗಡೆ ಮಾಡಲೂ, (3) ಚಳುವಳಿಯಲ್ಲಿ ಸರ್ಕಾರವು ವಶಪಡಿಸಿಕೊಂಡಿದ್ದ ಆಸ್ತಿಗಳನ್ನು ಆಯಾ ಆಸ್ತಿ ಒಡೆಯರಿಗೆ ಒಪ್ಪಿಸಲೂ

---

1 ಈ ಒಪ್ಪಂದದ ಪೂರ್ಣ ವಿವರಗಳಿಗೆ ನೋಡಿ: Pattabhi Sitaramayya, *op. cit*, PP 723-725

(4) ಸಮುದ್ರತೀರದಿಂದ ನಿರ್ದಿಷ್ಟ ದೂರದ ಒಳಗೆ ವಾಸಿಸುವ ಜನರಿಗೆ ಉಪ್ಪಿನ ತೆರಿಗೆ ವಿಧಿಸದೆ ಉಪ್ಪನ್ನು ತಯಾರಿಸಲು ಅನುಮತಿ ನೀಡಲೂ, (5) ಸೇಂದಿ ಹಾಗೂ ಅಫೀಮು ಅಂಗಡಿಗಳ ಬಳಿ ಶಾಂತಿಯುತ ಮುಷ್ಕರ ನಡೆಸಲು ಅನುಮತಿ ನೀಡಲೂ ಒಪ್ಪಿಕೊಂಡರು. ಮೇಲಿನ ಒಪ್ಪಂದವು ಪರಸ್ಪರ ಸೌಹಾರ್ದತೆಯ ಕುರುಹಾಗಿ ಕಂಡು ಬಂದಿತು. ಭಾರತದ ರಾಜಕೀಯ ಸಮಸ್ಯೆಯನ್ನು ಬಲಪ್ರಯೋಗದಿಂದ ನಿವಾರಿಸಲಾಗದೆಂದೂ, ಮುಖಂಡರ ಮನವೊಲಿಸುವ ರೀತಿಯ ರಿಯಾಯಿತಿಗಳು ಅವಶ್ಯಕವೆಂಬು ದನ್ನೂ ವೈಸರಾಯ್ ಇರ್ವಿನ್ ಮನಗಂಡರು. ಪೂರ್ಣ ಸ್ವರಾಜ್ಯವನ್ನು ತಕ್ಷಣವೇ ನೀಡಬೇಕೆಂದು ಹಟ ಹಿಡಿಯುವುದಕ್ಕಿಂತ ಈ ಗುರಿಯ ಸಾಧನೆಗೆ ಸಹಾಯಕವಾಗುವ ಸಾಧ್ಯವಾದಷ್ಟು ಸ್ವಾತಂತ್ರ್ಯದ ಅಂಶಗಳನ್ನು ಪಡೆಯು ವುದು ವಿವೇಕಮಾರ್ಗವೆಂಬುದನ್ನು ಗಾಂಧೀಜಿಯವರು ಕಂಡುಕೊಂಡರು. ಈ ಪರಸ್ಪರ ಅರಿವಿನ ಮೇಲೆ ಗಾಂಧಿ–ಇರ್ವಿನ್ ಒಪ್ಪಂದವನ್ನು ಮಾಡಿಕೊಳ್ಳ ಲಾಯಿತು.

ಗಾಂಧಿ - ಇರ್ವಿನ್ ಒಪ್ಪಂದವು ಬ್ರಿಟನ್ನಿನಲ್ಲಿ ಕನ್‌ಸರ್‌ವೆಟಿವ್ ಪಕ್ಷದ ಸದಸ್ಯರಿಗೆ ಒಪ್ಪಿಗೆಯಾಗಲಿಲ್ಲ. ಇರ್ವಿನ್ ಅವರು ಈ ಒಪ್ಪಂದದ ಮೂಲಕ ಭಾರತದಲ್ಲಿನ ಬ್ರಿಟಿಷ್ ಅಧಿಕಾರವನ್ನೆಲ್ಲಾ ನಾಶಪಡಿಸಿದರು ಎಂದು ಅವರು ದೂರಿದರು. ಭಾರತದಲ್ಲಿ ಕಾಂಗ್ರೆಸ್ಸಿನ ವಾಮಪಂಥಿಗಳಿಗೂ ಇದು ಸಮ್ಮತವಾಗಿರಲಿಲ್ಲ. ಗಾಂಧೀಜಿಯವರು ಈ ಒಪ್ಪಂದದ ಮೂಲಕ "ಭಾರತವನ್ನು ಬ್ರಿಟನ್ನಿಗೆ ಮಾರಿಬಿಟ್ಟರು" ಎಂದು ಆಕ್ಷೇಪಿಸಿದರು. ಆದರೆ, ಒಟ್ಟಿನಲ್ಲಿ ಕಾಂಗ್ರೆಸ್ಸು ಸಂಸ್ಥೆಯು ಗಾಂಧಿ–ಇರ್ವಿನ್ ಒಪ್ಪಂದವನ್ನು ಅನು ಮೋದಿಸಿತು. ಅಲ್ಲದೆ ಎರಡನೆ ದುಂಡುಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಭಾಗವಹಿಸುವಂತೆ ಗಾಂಧೀಜಿಯವರನ್ನು ಕೋರಿತು. ಕಾಂಗ್ರೆಸ್ಸಿನಿಂದ ಹೀಗೆ ಈ ಅಧಿಕಾರ ಪಡೆದ ಗಾಂಧೀಜಿಯವರು ದುಂಡು ಮೇಜಿನ ಸಮ್ಮೇಳನದ ಫಲದ ಬಗ್ಗೆ ಆಶಾಭಾವನೆಯಿಂದ, ಉತ್ಸಾಹದಿಂದ ಇದ್ದರು.

ಆದರೆ, ಬಹುಶೀಘ್ರವಾಗಿಯೇ ಗಾಂಧಿ–ಇರ್ವಿನ್ ಒಪ್ಪಂದವನ್ನು ಸರ್ಕಾರವು ತನ್ನ ದಮನ ಕಾರ್ಯಾಚರಣೆಗಳ ಮೂಲಕ ಮುರಿಯಿತು.

ಒಪ್ಪಂದಕ್ಕೆ ಸಹಿ ಆಗಿ ಹದಿನೈದು ದಿವಸಗಳಲ್ಲಿಯೇ ಸರ್ದಾರ್ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರುಗಳನ್ನು ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಅಪರಾಧಿಗಳೆಂದು ಪರಿಗಣಿಸಿ ಅವರುಗಳನ್ನು ಗಲ್ಲಿಗೇರಿಸಲಾಯಿತು. ಈ ದೇಶಭಕ್ತರನ್ನು ಕೊಲ್ಲಬಾರದೆಂದೂ, ಅವರನ್ನು ಬಿಡುಗಡೆ ಮಾಡಬೇಕೆಂದೂ ಕಾಂಗ್ರೆಸ್ ಮುಖಂಡರುಗಳು ಸರ್ಕಾರಕ್ಕೆ ಮಾಡಿಕೊಂಡ ಮನವಿಗಳೆಲ್ಲವೂ ನಿಷ್ಫಲವಾದವು. ಹೀಗೆ ದೇಶಭಕ್ತ ವೀರರನ್ನು ಗಲ್ಲಿಗೇರಿಸಿದುದು ಗಾಂಧಿ–ಇರ್ವಿನ್ ಒಪ್ಪಂದದ ಹಿಂದಿದ್ದ ಸೌಹಾರ್ದತೆಗೆ ತದ್ವಿರುದ್ಧವಾಗಿದ್ದಿತು.

1931ರ ಏಪ್ರಿಲ್ 18ರಂದು ಇರ್ವಿನ್ ಅವರ ಸ್ಥಾನಕ್ಕೆ ವಿಲ್ಲಿಂಗ್‌ಡನ್ ಎಂಬವರು ವೈಸ್‌ರಾಯ್ ಆಗಿ ಬಂದರು. ಇವರು ಗಾಂಧಿ – ಇರ್ವಿನ್ ಒಪ್ಪಂದವನ್ನು ಅನೇಕ ವಿಧಗಳಲ್ಲಿ ಭಂಗಗೊಳಿಸಿದರು. ಪೋಲೀಸರ ದೌರ್ಜನ್ಯದಿಂದ ಕಾಂಗ್ರೆಸ್ಸಿಗರ ಮನೆಗಳು, ಆಸ್ತಿಪಾಸ್ತಿಗಳು ನಷ್ಟವಾದವು. ಸಾರ್ವಜನಿಕ ಸಭೆಗಳಿಗೆ ಅಡ್ಡಿ ಹಾಕಲಾಯಿತು. ಕಾಂಗ್ರೆಸ್ ಧ್ವಜಗಳನ್ನು ಅಧಿಕಾರಿಗಳು ಸುಟ್ಟರು. ತನಿಖೆ ನಡೆಸದೆ ಹಾಗೆಯೇ ಅನೇಕರನ್ನು ಜೈಲಿನಲ್ಲಿ ಇಡಲಾಯಿತು. ಸೇಂದಿ ಅಂಗಡಿಗಳೆದುರು ಶಾಂತಿಯುತವಾದ ಮುಷ್ಕರ ನಡೆಸುವುದನ್ನೂ ನಿಷೇಧಿಸಲಾಯಿತು. ಹೀಗೆ ಗಾಂಧಿ – ಇರ್ವಿನ್ ಒಪ್ಪಂದವನ್ನು ಮುರಿದು ಅನೇಕ ಕ್ರಮಗಳನ್ನು ಸರ್ಕಾರವು ಕೈಗೊಳ್ಳುತ್ತಿದ್ದುದನ್ನು ಗಮನಿಸಿ ಗಾಂಧಿಜಿಯವರು ಈ ಗಾಂಧಿ–ಇರ್ವಿನ್ ಒಪ್ಪಂದದ ವಿರುದ್ಧವಾದ ಕ್ರಮಗಳನ್ನು ಪತ್ರಮುಖೇನ ವೈಸ್‌ರಾಯ್ ಅವರ ಗಮನಕ್ಕೆ ತಂದರು. ಗಾಂಧಿಜಿಯವರು ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಬೇಕೆಂಬುದು ಬ್ರಿಟಿಷ್ ಸರ್ಕಾರದ ಉದ್ದೇಶವಾಗಿದ್ದುದರಿಂದ ಗಾಂಧಿಜಿಯ ಪತ್ರಕ್ಕೆ ವೈಸ್‌ರಾಯ್ ಅವರು ಸಮಾಧಾನಕರವಾದ ಪತ್ರವೊಂದನ್ನು ಬರೆದರು. ಇದರಿಂದ ತೃಪ್ತರಾಗಿ ಗಾಂಧಿಜಿಯವರು ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್ನಿಗೆ ಹೋಗುವುದಾಗಿ ನಿರ್ಧರಿಸಿದರು.

ಲಂಡನ್ನಿಗೆ ಹೊರಡುವ ಮುನ್ನ ಗಾಂಧಿಜಿಯವರು ಮುಸ್ಲಿಂಲೀಗಿನ ಮುಖಂಡರುಗಳೊಡನೆ ಮಾತುಕತೆ ನಡೆಸಿದರು. ಮುಸ್ಲಿಂ ಲೀಗು ತನ್ನ ಪ್ರತ್ಯೇಕತಾ ವಾದವನ್ನು ಕೈಬಿಡುವಂತೆ ಪ್ರಭಾವ ಬೀರುವುದೇ ಅವರ

ಉದ್ದೇಶವಾಗಿದ್ದಿತು. ಆದರೆ ಮುಸ್ಲಿಂ ಮುಖಂಡರು ಗಾಂಧಿಜಿಯವರ ವಾದಗಳಿಗೆ ಒಪ್ಪಲಿಲ್ಲ. ಅವರೊಡನೆ ಒಂದು ಒಮ್ಮತಕ್ಕೆ ಬರಲು ಆಗಲಿಲ್ಲ. ಲಂಡನ್ನಿನಲ್ಲಿ ಈ ಮಾತುಕತೆಗಳನ್ನು ಮುಂದುವರಿಸಿ ಹಿಂದೂ ಮುಸ್ಲಿಂ ಬಾಂಧವ್ಯ ಸಮಸ್ಯೆಯನ್ನು ಅಲ್ಲಿ ಬಗೆಹರಿಸಬಹುದೆಂಬ ಆಶಾಭಾವನೆಯಿಂದ ಗಾಂಧಿಜಿಯವರು ಲಂಡನ್ನಿಗೆ 1931 ರ ಆಗಸ್ಟ್ 29 ರಂದು ಪ್ರಯಾಣ ಮಾಡಿದರು.

ಎರಡನೇ ದುಂಡು ಮೇಜಿನ ಸಮ್ಮೇಳನ

ಬ್ರಿಟನ್ನಿನ ಮೂರು ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಭಾರತದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ದೇಶೀಯ ರಾಜರುಗಳ ಪ್ರತಿನಿಧಿಗಳು ಈ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು. ಭಾರತದ ಭವಿಷ್ಯ ರಾಜ್ಯಾಂಗ ರಚನೆ ಮತ್ತು ಅಲ್ಪಸಂಖ್ಯಾತರ ಸಮಸ್ಯೆ ಇವೇ ಸಮ್ಮೇಳನದಲ್ಲಿ ಚರ್ಚಿಸಲಾದ ವಿಷಯಗಳು. 'ವಿಭಜಿಸು, ಆಳು' ('Divide and Rule') ಎಂಬ ನೀತಿಯನ್ನು ಮೊದಲಿನಿಂದಲೂ ಅನುಸರಿಸುತ್ತಾ ಬಂದಿದ್ದ ಬ್ರಿಟಿಷರು ಭಾರತದಲ್ಲಿ ಬಿತ್ತಿದ್ದ ವಿಭಜನೆಯ ಬೀಜಗಳು ಅಂಕುರಿಸಿ ಬೆಳೆದು ನಿಂತಿದ್ದುದು ಈ ಸಮ್ಮೇಳನದಲ್ಲಿ ನಡೆದ ಚರ್ಚೆಗಳಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿದ್ದಿತು. ಬ್ರಿಟಿಷ್ ಭಾರತ ಹಾಗೂ ದೇಶೀಯ ಸಂಸ್ಥಾನಗಳೆರಡೂ ಸೇರಿದ ಇಡೀ ಭಾರತದ ಫೆಡರೇಷನ್ನಿನ ಭಾವನೆ ಹಿಂದೂಗಳಿಗೆ ಒಪ್ಪಿಗೆಯಾಗಿದ್ದಿತು. ಆದರೆ ಮುಸ್ಲಿಂ ಲೀಗು ಇದನ್ನು ವಿರೋಧಿಸಿ ಭಾರತದ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರವೇ ಬೇಕೆಂದು ಒತ್ತಾಯಿಸಿದರು. ದೇಶೀಯ ರಾಜರುಗಳು ಐಕ್ಯಭಾರತ ಫೆಡರೇಷನ್ನಿಗೆ ಒಪ್ಪಿದರೆ ತಮ್ಮ ತಮ್ಮ ಪ್ರತ್ಯೇಕ ರಾಜ್ಯಗಳಿಗೂ, ತಮ್ಮ ರಾಜಪದವಿಗೂ ಚ್ಯುತಿಬರುವುದೆಂದು ಅವರು ಒಪ್ಪಲಿಲ್ಲ. ಐವತ್ತು ದಶಲಕ್ಷ ಪರಿಶಿಷ್ಟ ವರ್ಗದವರ ಪರವಾಗಿ ಮಾತನಾಡಿದ ಡಾ|| ಬಿ. ಆರ್. ಅಂಬೇಡ್ಕರ್ ಅವರು ಈ ವರ್ಗದವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ಹಾಗೂ ಅವರ ಹಿತಾಸಕ್ತಿಗಳ ಬಗ್ಗೆ ವಿಶೇಷ ರಕ್ಷಣೆಗಳನ್ನು ಕೇಳಿದರು. ಹೀಗೆ ದುಂಡು ಮೇಜಿನ ಸಮ್ಮೇಳನದಲ್ಲಿ ಭಾರತೀಯ ಪ್ರತಿನಿಧಿಗಳು ತೀವ್ರ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಗಾಂಧಿಜಿ

ಯುವರು ತುಂಬ ವ್ಯಥೆಪಟ್ಟರು. ಈ ಭಿನ್ನಾಭಿಪ್ರಾಯಗಳು ಬ್ರಿಟಿಷರಿಗೆ ಅನುಕೂಲವಾಯಿತು. ಭಾರತೀಯರಲ್ಲೇ ರಾಜಕೀಯ ಸಮಸ್ಯೆ ಪರಿಹಾರಕ್ಕೆ ಒಮ್ಮತದ ಪರಿಹಾರ ಉಂಟಾಗದಿದ್ದುದರಿಂದ ಅವರಿಗೆ ತಮ್ಮ ಆಡಳಿತವನ್ನೇ ಮುಂದುವರಿಸಲು ಒಳ್ಳೆಯ ನೆಪ ಸಿಕ್ಕಂತಾಯಿತು. ಗಾಂಧೀಜಿಯವರು ಬ್ರಿಟಿಷರ ಒಳ ಆಟವನ್ನು ಅರ್ಥಮಾಡಿಕೊಂಡು ಸಮ್ಮೇಳನದ ಅಲ್ಪಸಂಖ್ಯಾತರ ಉಪಸಮಿತಿಯ ಮುಂದೆ ಮಾಡಿದ ಭಾಷಣದಲ್ಲಿ ನೇರವಾಗಿ ಬ್ರಿಟಿಷರ ಧೋರಣೆಯನ್ನು ಟೀಕಿಸಿದರು. ಒಟ್ಟಿನಲ್ಲಿ ಎರಡನೆಯ ದುಂಡು ಮೇಜಿನ ಸಮ್ಮೇಳನವೂ ಭಾರತದ ದೃಷ್ಟಿಯಿಂದ ನಿಷ್ಫಲವಾದಂತಾಯಿತು.

ಬ್ರಿಟಿಷ್ ಪ್ರಧಾನಿಯ ಹೇಳಿಕೆ ಮತ್ತು 'ಮತ ಆಧಾರಿತ ಕೊಡುಗೆ' (Communal Award)

ಮೇಲೆ ಹೇಳಿದಂತೆ ನಿಷ್ಫಲವಾದ ದ್ವಿತೀಯ ದುಂಡು ಮೇಜಿನ ಸಮ್ಮೇಳನದ ಮುಕ್ತಾಯಭಾಷಣದಲ್ಲಿ ಬ್ರಿಟಿಷ್ ಪ್ರಧಾನಿ ಮೆಕ್‌ಡೊನಾಲ್ಡ್ ಅವರು ಬ್ರಿಟಿಷ್ ನೀತಿ ಕುರಿತ ಒಂದು ಹೇಳಿಕೆ ನೀಡುತ್ತಾ ಹೀಗೆ ನುಡಿದರು: ಭಾರತೀಯ ಮುಖಂಡರುಗಳು ಒಮ್ಮತಕ್ಕೆ ಬರಲಾಗದಿದ್ದುದರಿಂದ "ಪ್ರಜಾ ಪ್ರಭುತ್ವದ ತತ್ವಕ್ಕೆ ಅನುಸಾರವಾಗಿ ಬಹುಮತ ಹೊಂದುವ ಪಕ್ಷವು ತನ್ನ ಅಧಿಕಾರವನ್ನು ಅನಿರ್ಬಂಧಿತವಾಗಿಯೂ ಹಾಗೂ ದಬ್ಬಾಳಿಕೆಯಿಂದ ನಿರಂಕುಶ ರೀತಿಯಲ್ಲಿ ಉಪಯೋಗಿಸಬಹುದಾದ ಸಾಧ್ಯತೆಯಿಂದ ಅಲ್ಪ ಸಂಖ್ಯಾತರನ್ನು ರಕ್ಷಿಸುವ ದೃಷ್ಟಿಯಿಂದ ಯಾವ ತರಹದ ತಡೆಗಳನ್ನೂ, ಸಮತೂಕಗಳನ್ನೂ ರಾಜ್ಯಾಂಗವು ಹೊಂದಿರಬೇಕೆಂಬುದನ್ನು ಬ್ರಿಟಿಷ್ ಸರ್ಕಾರವೇ ಸಾಧ್ಯವಾದಷ್ಟು ವಿವೇಕದಿಂದಲೂ, ನ್ಯಾಯವಾಗಿಯೂ ತೀರ್ಮಾನಿಸಬೇಕಾಗಿದೆ." ತನ್ನ ಅಧಿಕಾರವನ್ನು ಭಾರತವನ್ನು ಶೋಷಣೆ ಮಾಡಲೂ, ರಾಷ್ಟ್ರೀಯ ಚಳುವಳಿಯನ್ನು ಹತ್ತಿಕ್ಕಲೂ, ದಬ್ಬಾಳಿಕೆಯಿಂದ ನಿರಂಕುಶರೀತಿಯಲ್ಲಿ ಉಪಯೋಗಿಸುತ್ತಿದ್ದ ಸಾಮ್ರಾಜ್ಯದಾಹಿ ಶಾಹಿ ಬ್ರಿಟನ್ನಿನ ಪ್ರಧಾನಿಯು ಪ್ರಜಾಪ್ರಭುತ್ವ ತತ್ವವನ್ನು ಭಾರತವು "ದಬ್ಬಾಳಿಕೆಯ ನಿರಂಕುಶ ರೀತಿಯಲ್ಲಿ" ಉಪಯೋಗಿಸಬಹುದೆಂಬ ಬಗ್ಗೆ ಹೇಳಿದುದು ಹಾಸ್ಯಾಸ್ಪದವಾಗಿದೆ.

ಮೆಕ್‌ಡೊನಾಲ್ಡ್ ಅವರ ಹೇಳಿಕೆಯಲ್ಲಿ ವಾಯುವ್ಯಗಡಿ ಪ್ರಾಂತ್ಯವನ್ನು ಗೌರ್‍ನರ್ ಪ್ರಾಂತ್ಯದ ಅಂತಸ್ತಿಗೆ ಏರಿಸಲಾಗುವುದೆಂದೂ, ಸಿಂಧ್ ಅನ್ನು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಲಾಗುವುದೆಂದೂ ಹೇಳಿದರು. ಇವೆರಡೂ ಪ್ರದೇಶಗಳಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿದ್ದಾರೆ. ಹೀಗೆ ಮುಸ್ಲಿಂ ಬಹುಸಂಖ್ಯಾತರಾಗಿದ್ದ ಪ್ರದೇಶಗಳನ್ನು ಪ್ರತ್ಯೇಕಿಸುವುದರ ಬ್ರಿಟಿಷರ ಅಭಿಪ್ರಾಯ ಸ್ಪಷ್ಟವಾಗಿದೆ. ಮೊದಲಿನಿಂದಲೂ ಹಿಂದೂ ಮುಸ್ಲಿಂ ಭಿನ್ನತೆಯನ್ನು ಪ್ರಚೋದಿಸಿ ಉತ್ತೇಜಿಸುತ್ತಿದ್ದ ಅವರು ಈಗ ಮುಸ್ಲಿಂ ಬಹುಸಂಖ್ಯಾತ ಪ್ರಾಂತ ನಿರ್ಮಾಣದಿಂದ ಮುಸ್ಲಿಮರು ಪ್ರತ್ಯೇಕ ರಾಷ್ಟ್ರ ಮಾಡಿಕೊಳ್ಳಲು ಕಾರ್ಯತಃ ಅನುಕೂಲಮಾಡಿಕೊಟ್ಟಂತಾಯಿತು.

ಮಹಾತ್ಮಾ ಗಾಂಧಿಯವರು ಈ ಹೇಳಿಕೆಯಿಂದ ಅತ್ಯಂತ ಅಸಮಾಧಾನಪಟ್ಟುಕೊಂಡು ಇನ್ನು ನಾವು ಬೇರೆ ಮಾರ್ಗ ಅನುಸರಿಸಬೇಕೆಂದು ಹೇಳಿ, ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸುವ ಆಲೋಚನೆಯಲ್ಲಿ ಮಗ್ನರಾದರು. ಹೀಗೆ ತೀವ್ರಗೊಳಿಸಲಾದ ಚಳುವಳಿಯ ಮುನ್ನಡೆಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವುದು. ಮುಸ್ಲಿಂ ಲೀಗಿಗೆ ಮೆಕ್‌ಡೊನಾಲ್ಡ್ ಅವರ ಹೇಳಿಕೆಯಿಂದ ತುಂಬ ಖುಷಿಯಾಯಿತು. ಅವರು ಕೇಳುತ್ತಿದ್ದ ಪ್ರತ್ಯೇಕ ಮುಸ್ಲಿಂ ರಾಷ್ಟ್ರ ಬೇಡಿಕೆಗೆ ಉತ್ತೇಜನ ನೀಡಿದಂತಾಯಿತು.

ದುಂಡುಮೇಜಿನ ಸಮ್ಮೇಳನದ ಕೊನೆಯಲ್ಲಿ ಘೋಷಿಸಿದ ನೋಲಿನ ಬ್ರಿಟಿಷ್ ನೀತಿಯನ್ನು ಅನುಸರಿಸಿ 1932ರ ಆಗಸ್ಟ್ 12 ರಂದು ರಾಮ್ಸೆ ಮೆಕ್‌ಡೊನಾಲ್ಡ್ ಅವರ ಪ್ರಖ್ಯಾತ (ಕುಖ್ಯಾತ) 'ಮತ ಆಧಾರಿತ ಕೊಡುಗೆ' (Communal Award) ಯನ್ನು ಪ್ರಕಟಿಸಿದರು. ಈ ಕೊಡುಗೆಯ ಪ್ರಕಾರ ಪ್ರಾಂತೀಯ ವಿಧಾನಸಭೆಗಳಿಗೆ ಪ್ರತಿನಿಧಿಗಳನ್ನು ಚುನಾಯಿಸುವ ಸಲುವಾಗಿ ಭಾರತದ ಜನತೆಯನ್ನು ಕೆಲವು ಭಾಗಗಳಾಗಿ ವಿಂಗಡಿಸಲಾಯಿತು. ಮುಸಲ್ಮಾನರಿಗೆ, ಐರೋಪ್ಯರಿಗೆ ಮತ್ತು ಸಿಖ್ಖರಿಗೆ ನಿರ್ದಿಷ್ಟ ಸದಸ್ಯರ ಸಂಖ್ಯೆಯನ್ನು ಗೊತ್ತುಮಾಡಲಾಯಿತು. ಈ ಒಂದೊಂದು ಮತಗಳವರದೂ ಒಂದೊಂದು ಪ್ರತ್ಯೇಕ ಮತಕ್ಷೇತ್ರವಾಯಿತು. ಈ ಕ್ಷೇತ್ರಗಳ ಮತದಾರರು ತಂತಮ್ಮ ಕ್ಷೇತ್ರದ ಪ್ರತಿನಿಧಿ

ಗಳನ್ನು ಪ್ರತ್ಯೇಕವಾಗಿ ಚುನಾಯಿಸುವರು. ಪರಿಶಿಷ್ಟವರ್ಗದವರು ಹಿಂದೂಗಳಿಗೆಂದು ನಿಗದಿ ಮಾಡಲಾದ ಸಾರ್ವತ್ರಿಕ ಮತಕ್ಷೇತ್ರಗಳ ಪ್ರತಿನಿಧಿಗಳಾಗಿ ಚುನಾವಣೆಗೆ ನಿಲ್ಲಬಹುದು. ಆದರೆ ಇವರಿಗೆಂದು ನಿರ್ದಿಷ್ಟ ಸಂಖ್ಯೆ ಸದಸ್ಯತ್ವವನ್ನು ನಿಗದಿಮಾಡಲಾಗುವುದು. ಹಾಗೂ ಇವರು ಪ್ರತ್ಯೇಕ ಮತದಾನ ಹಕ್ಕು ಪಡೆದಿರುವರು.ಭಾರತೀಯ ಕ್ರಿಶ್ಚಿಯನ್ನರಿಗೂ, ಆಂಗ್ಲ-ಭಾರತೀಯರಿಗೂ ನಿರ್ದಿಷ್ಟ ಸಂಖ್ಯೆ ಸದಸ್ಯತ್ವ ನಿಗದಿ ಮಾಡಲಾಗುವುದು. ಇವರುಗಳೂ ತಮ್ಮದೇ ಆದ ಮತಕ್ಷೇತ್ರಗಳನ್ನು ಹೊಂದಿರುವರು.[1]

ಮೇಲಿನ 'ಮತ ಆಧಾರಿತ ಕೊಡುಗೆ'ಯು ಬ್ರಿಟಿಷರು ಅನುಸರಿಸುತ್ತಾ ಬಂದಿದ್ದ 'ವಿಭಜಿಸು, ಆಳು' ('Divide and Rule') ಎಂಬ ನೀತಿಯ ಅತ್ಯಂತ ಮುಖ್ಯವಾದ ಸಾಕ್ಷಿಯಾಗಿದೆ. ತಮ್ಮ ಆಳ್ವಿಕೆಯ ಸ್ವಾರ್ಥಕ್ಕಾಗಿ ಮತೀಯ ಭಿನ್ನತೆಗಳನ್ನು ಪ್ರಚೋದಿಸಿ ಉಜ್ವಲಗೊಳಿಸುವ ಕ್ರಮಗಳಲ್ಲಿ ಇದು ಅತ್ಯಂತ ಪರಿಣಾಮಕಾರಿಯಾದುದು. ಹಿಂದು, ಮುಸಲ್ಮಾನ್, ಸಿಖ್, ಐರೋಪ್ಯರು, ಆಂಗ್ಲ-ಭಾರತೀಯರು ಇವರೊಳಗೆ ಭಿನ್ನತೆಯನ್ನು ರಾಜಕೀಯ ಕ್ಷೇತ್ರದಲ್ಲಿ ಅನುಮೋದಿಸಿದುದೇ ಅಲ್ಲದೆ ಪರಿಶಿಷ್ಟವರ್ಗಗಳಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ನಿಗದಿ ಮಾಡುವುದರ ಮೂಲಕ ಹಿಂದೂಗಳನ್ನು ಇಬ್ಭಾಗಮಾಡುವ ಕೆಲಸವನ್ನು ಈ ಮತ ಆಧಾರಿತ ಕೊಡುಗೆಯ ಮೂಲಕ ಬ್ರಿಟಿಷರು ಮಾಡಿದರು. ರಾಷ್ಟ್ರದ ಏಕತೆಗೆ ಅತ್ಯಂತ ಅಪಾಯಕಾರಿಯಾದಂತಹ ಸುಧಾರಣೆಯನ್ನು ಈ ಮೂಲಕ ಅವರು ಜಾರಿಗೆ ತಂದರು.

ಗಾಂಧೀಜಿಯವರ ಉಪವಾಸ

'ಮತ ಆಧಾರಿತ ಕೊಡುಗೆ'ಯು ಅತ್ಯಂತ ಅನ್ಯಾಯವಾದುದೆಂದು ಕಾಂಗ್ರೆಸ್ ಮುಖಂಡರುಗಳೇ ಅಲ್ಲದೆ ರವೀಂದ್ರನಾಥ ಟಾಗೂರ್ ಅಂತಹ ಮಹಾಪುರುಷರು ಅದನ್ನು ಖಂಡಿಸಿದರು. 'ಹರಿಜನರಿಗೆ' ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಬ್ರಿಟಿಷರು ಏರ್ಪಡಿಸಿದರೆ ತಾವು ಆಮರಣಾಂತ

---

1. 'ಮತ ಆಧಾರಿತ ಕೊಡುಗೆ'ಯ ಪೂರ್ಣ ವಿವರಗಳಿಗೆ ನೋಡಿ,
Pattabhi Sitaramayya *op. cit.* Appendix VI

ಉಪವಾಸ ಕೈಗೊಳ್ಳುವುದಾಗಿ ಮಹಾತ್ಮಾಗಾಂಧಿಯವರು 1932ರ ಮಾರ್ಚಿ ತಿಂಗಳಲ್ಲಿಯೇ ಸರ್ಕಾರಕ್ಕೆ ತಿಳಿಸಿದ್ದರು. ಪರಿಶಿಷ್ಟ ವರ್ಗವು ಹಿಂದೂ ಸಮಾಜದ ಅಂಗವೆಂದು ಸ್ಪಷ್ಟವಾಗಿ ಅವರು ತಿಳಿಸಿದ್ದರು. ಈ ವರ್ಗದ ವರಿಗೂ ಮೀಸಲು ಚುನಾವಣಾ ಕ್ಷೇತ್ರವನ್ನೊಳಗೊಂಡ 'ಮತ ಆಧಾರಿತ ಕೊಡುಗೆ'ಯ ಬಗ್ಗೆ ತಿಳಿದಾಕ್ಷಣವೇ ಜೈಲಿನಲ್ಲಿದ್ದ ಅವರು ಆಮರಣಾಂತ ಉಪವಾಸ ಕೈಗೊಳ್ಳಲು ನಿರ್ಧರಿಸಿದರು. ಈ ಉಪವಾಸ ಪ್ರಾರಂಭಿಸುವ ಮುನ್ನ ಅವರು ತಮ್ಮ ಈ ನಿರ್ಧಾರವನ್ನು ಬ್ರಿಟಿಷ್ ಪ್ರಧಾನಿ ಮೆಕ್‌ಡೊನಾಲ್ಡ್ ಅವರಿಗೆ ಪತ್ರದ ಮೂಲಕ ತಿಳಿಸಿ ಇದರ ಜವಾಬಿಗೆ ಕಾದರು. ಈ ಪ್ರಧಾನಿಯ ಉತ್ತರ ಮಹಾತ್ಮಾಜಿಯವರನ್ನು ಕೆರಳಿಸು ವಂತಿತ್ತು. ಗಾಂಧೀಜಿಯವರು ಪರಿಶಿಷ್ಟ ವರ್ಗದ ಹಿತಾಸಕ್ತಿಗಳ ಬಗ್ಗೆ ವಿರೋಧ ಭಾವನೆ ಹೊಂದಿರುವುದಾಗಿ ಅವರನ್ನು ಈ ಉತ್ತರದಲ್ಲಿ ಆರೋಪಿ ಸಿದ್ದರು. ಈ ಪತ್ರ ಬಂದ ನಂತರ 1932 ರ ಸೆಪ್ಟಂಬರ್ 20 ರಂದು ಗಾಂಧೀಜಿಯವರು ಜೈಲಿನಲ್ಲಿಯೇ ತಮ್ಮ ನಿರ್ಧಾರದ ಪ್ರಕಾರ ಉಪವಾಸ ವನ್ನು ಪ್ರಾರಂಭಿಸಿದರು. ಅನೇಕ ಹಿತೈಷಿಗಳು ಗಾಂಧೀಜಿಯವರನ್ನು ಆಮರಣಾಂತ ಉಪವಾಸವನ್ನು ಕೈಬಿಡುವಂತೆ ಕೇಳಿಕೊಂಡರು. ಆದರೆ ಅವರು ತಮ್ಮ ನಿರ್ಧಾರ ಬದಲಾಯಿಸಲಿಲ್ಲ.

ಪೂನಾ ಒಪ್ಪಂದ

ಗಾಂಧೀಜಿಯವರು ಉಪವಾಸ ನಿಲ್ಲಿಸಲು ಅವಶ್ಯಕವಾದ ಕ್ರಮಗಳನ್ನು ಕುರಿತು ಮುಖಂಡರುಗಳು ಆಲೋಚಿಸತೊಡಗಿದರು. ಮದನ್ ಮೋಹನ್ ಮಾಳವೀಯ ಅವರ ಆರಂಭ ಪ್ರಯತ್ನದಿಂದ ಗಣ್ಯ ಹಿಂದೂ ಮುಖಂಡರು ಗಳು ಪೂನಾದಲ್ಲಿ ಸಭೆ ಸೇರಿ ಗಾಂಧೀಜಿಯವರು ಉಪವಾಸ ಕೈಗೊಳ್ಳಲು ಕಾರಣವಾಗಿದ್ದ ಸಮಸ್ಯೆಯನ್ನು ಚರ್ಚಿಸಿ ಪರಿಶಿಷ್ಟವರ್ಗದವರೊಡನೆ ಒಂದು ಒಪ್ಪಂದಕ್ಕೆ ಬಂದರು. ಈ ಒಪ್ಪಂದದ ಪ್ರಕಾರ, **ಮೊದಲನೆಯದಾಗಿ** ಪರಿಶಿಷ್ಟವರ್ಗದವರು ಪ್ರತ್ಯೇಕ ಮೀಸಲು ಚುನಾವಣಾ ಕ್ಷೇತ್ರವನ್ನು ಬಿಟ್ಟು ಬಿಡುವುದು, **ಎರಡನೆಯದಾಗಿ**, ವಿವಿಧ ವಿಧಾನಸಭೆಗಳಿಗೆ ಮತ ಆಧಾರಿತ ಕೊಡುಗೆಯಲ್ಲಿ ನೀಡಲಾದ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ 148 ಸ್ಥಾನ

ಗಳನ್ನು ಪರಿಶಿಷ್ಟ ವರ್ಗದವರು ಪಡೆಯುವುದು – ಇವೇ ಒಪ್ಪಂದದ ಮುಖ್ಯಾಂಶಗಳಾಗಿದ್ದವು.

ಪೂನಾ ಒಪ್ಪಂದಕ್ಕೆ ಬ್ರಿಟಿಷ್ ಸರ್ಕಾರವು ಸಮ್ಮತಿಸಿತು. ಈ ಒಪ್ಪಂದ ದಿಂದ ಸಮಾಧಾನ ಪಡೆದ ಗಾಂಧೀಜಿಯವರು ತಮ್ಮ ಉಪವಾಸವನ್ನು ನಿಲ್ಲಿಸಿದರು. ಅಲ್ಲದೆ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಪರಿಶಿಷ್ಟ ವರ್ಗದ ಸಮಸ್ಯೆಯನ್ನು ಪೂನಾ ಸಭೆಯಲ್ಲಿ ಚರ್ಚಿಸಿದುದರ ಫಲವಾಗಿ ಅಸ್ಪೃಶ್ಯತಾ ನಿವಾರಣೆಗೆ ತೀವ್ರಕ್ರಮಗಳನ್ನು ಕೈಗೊಳ್ಳಲಾರಂಭ ವಾಯಿತು. 'ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಸ್ಥೆ' (All India Anti – untouchability League) ಯೊಂದು ಅಸ್ತಿತ್ವಕ್ಕೆ ಬಂದಿತು. ದೇಶದ ನಾನಾ ಭಾಗಗಳಲ್ಲಿ ಇದರ ಶಾಖೆಗಳೂ ಸ್ಥಾಪನೆಯಾದವು. ಅನೇಕ ದೇವಸ್ಥಾನಗಳಿಗೂ, ಧರ್ಮಶಾಲೆಗಳಿಗೂ, ಸಾರ್ವಜನಿಕ ಬಾವಿಗಳ ಉಪಯೋಗಿಸುವಿಕೆಗೂ ಹರಿಜನರಿಗೆ ಅವಕಾಶ ದೊರಕುವಂತಾಯಿತು.

ಐಕ್ಯತಾ ಸಮ್ಮೇಳನ (Unity Conference) 1932 ನವೆಂಬರ್ 3

ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ತಪ್ಪಿಸುವ ಸಲುವಾಗಿ ಹಿಂದೂ ಮುಖಂಡರು ಮುಸಲ್ಮಾನ ಮುಖಂಡರೊಡನೆ ಮಾತು ಕತೆ ಪ್ರಯತ್ನ ನಡೆಸಿದರು. ಪಂಡಿತ ಮಾಳವೀಯ ಮತ್ತು ಮೌಲಾನಾ ಷೌಕತ್ಆಲಿ ಅವರ ಆರಂಭಪ್ರಯತ್ನದಿಂದ ಹಿಂದೂ, ಸಿಖ್, ಮುಸಲ್ಮಾನ, ಭಾರತೀಯ ಕ್ರಿಶ್ಚಿಯನ್ನರು ಇವರೆಲ್ಲರ ಪ್ರತಿನಿಧಿಗಳು 1932ರ ನವೆಂಬರ್ 3 ರಂದು ಸಭೆ ಸೇರಿದರು. ಇದನ್ನು 'ಐಕ್ಯತಾ ಸಮ್ಮೇಳನ' ಎಂದು ಕರೆಯ ಲಾಗಿದೆ. ಈ ಸಮ್ಮೇಳನವು ಅನೇಕ ಬಾರಿ ಸಭೆ ಸೇರಿ ಪ್ರತಿನಿಧಿಗಳು ವಿಚಾರ ವಿನಿಮಯ ಮಾಡಿಕೊಂಡರು. ಆದರೆ, ದುರದೃಷ್ಟವಶದಿಂದ ಮತ್ತು ಬ್ರಿಟಿಷರ ಸೂಕ್ಷ್ಮರೂಪದ ಉತ್ತೇಜನದಿಂದ ಮುಸಲ್ಮಾನ ಮುಖಂಡರು ಬ್ರಿಟಿಷರು ಪ್ರಕಟಿಸಿದ್ದ 'ಮತ ಆಧಾರಿತ ಕೊಡುಗೆ'ಯನ್ನೇ ಒಪ್ಪುವುದೆಂದು ತೀರ್ಮಾನಿಸಿದರು. ಹಿಂದೂ ಮುಸ್ಲಿಂ ಏಕತೆಗೆ ಮಾಡಲಾದ ಮುಖ್ಯವಾದ ಐಕ್ಯತಾ ಸಮ್ಮೇಳನದ ಪ್ರಯತ್ನವು ಸಫಲವಾಗಲಿಲ್ಲ. ಬ್ರಿಟಿಷರು ನೀಡಿದ

'ಮತ ಆಧಾರಿತ ಕೊಡುಗೆ'ಯಿಂದ ಮುಸ್ಲಿಮರ ಪ್ರತ್ಯೇಕತಾವಾದ ಬೇರೂರಿದಂತಾಯಿತು.

ಮೂರನೆಯ ದುಂಡುಮೇಜಿನ ಸಮ್ಮೇಳನ (ನವೆಂಬರ್ – ಡಿಸೆಂಬರ್ 1932)

ಎರಡು ದುಂಡುಮೇಜಿನ ಸಮ್ಮೇಳನಗಳು ಹಿಂದೆ ವಿವರಿಸಿರುವಂತೆ ನಿಷ್ಫಲವಾದಾಗ್ಯೂ, ಬ್ರಿಟಿಷ್ ಸರ್ಕಾರವು ಮೂರನೆಯ ಸಮ್ಮೇಳನ ವೊಂದನ್ನು 1932ರ ನವೆಂಬರ್ 17 ರಿಂದ 1932ರ ಡಿಸೆಂಬರ್ 24 ರ ವರೆ ವಿಗೆ ನಡೆಸಿತು. ಆದರೆ, ಭಾರತದ ಕಾಂಗ್ರೆಸ್ಸು ಹಾಗೂ ಬ್ರಿಟನ್ನಿನ ಲೇಬರ್ ಪಕ್ಷಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿಲ್ಲ. ಈ ಸಂಕುಚಿತ, ಅಸಂಪೂರ್ಣ ಸಮ್ಮೇಳನದ ಕಾರ್ಯಕಲಾಪಗಳ ಆಧಾರದ ಮೇಲೆಯೇ ಬ್ರಿಟಿಷ್ ಸರ್ಕಾರವು ಭಾರತಕ್ಕೆ ಹೊಸ ರಾಜ್ಯಾಂಗ ಸ್ವರೂಪವನ್ನೊಳಗೊಂಡ 'ಶ್ವೇತಪತ್ರ' (White Paper) ವನ್ನು ಸಿದ್ಧಪಡಿಸಿತು. ಇವನ್ನು ಮಾರ್ಚಿ 1933ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಂಡಿಸಲಾಯಿತು. 'ಶ್ವೇತಪತ್ರ'ವು ಒಳಗೊಂಡಿದ್ದ ರಾಜ್ಯಾಂಗ ಯೋಜನೆಯನ್ನು 'ಭಾರತದ ರಚನಾತ್ಮಕ ಮುಖಂಡರೊಡನೆ' ಸಮಾಲೋಚಿಸಿ ಪರಿಶೀಲಿಸಲು 16 ಹೌಸ್ ಆಫ್ ಕಾಮನ್ಸ್ ಸದಸ್ಯರನ್ನೂ, 16 ಹೌಸ್ ಆಫ್ ಲಾರ್ಡ್ಸ್ ಸದಸ್ಯರನ್ನೂ ಹೊಂದಿದ್ದ ಒಂದು 'ಜಂಟಿ ಚುನಾಯಿತ ಸಮಿತಿ' (Joint Select Committee) ಯನ್ನು ನೇಮಿಸಲಾಯಿತು. ಈ ಸಮಿತಿಯು ತನ್ನ ಪರಿಶೀಲನಾ ಕಾರ್ಯಕ್ಕೆ ಹದಿನೆಂಟು ತಿಂಗಳು ಕಾಲ ತೆಗೆದುಕೊಂಡು ನಂತರ ತನ್ನ ವರದಿಯನ್ನು 1934ರ ನವೆಂಬರ್ 22ರಂದು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯಲ್ಲಿನ ಶಿಫಾರಸುಗಳ ಆಧಾರದ ಮೇಲೆ 1935ರ ಭಾರತ ಸರ್ಕಾರದ ಮಸೂದೆಯನ್ನು ಬ್ರಿಟಿಷ್ ಸರ್ಕಾರವು ಅನುಮೋದಿಸಿತು. ಈ ರಾಜಕೀಯ ಸುಧಾರಣೆಗೆ ಭಾರತದ ಮುಖಂಡರುಗಳ ಪ್ರತಿಕ್ರಿಯೆ ಏನು, ಈ ಸುಧಾರಣೆಯ ನಂತರ ಚಳುವಳಿ ಹೇಗೆ ಮುಂದುವರಿಯಿತು ಎಂಬುದನ್ನು ವಿವರಿಸುವ ಮುನ್ನ 1930ರ ದಶಕದ ಪ್ರಥಮ ಭಾಗದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ 'ಉಪ್ಪಿನ ಸತ್ಯಾಗ್ರಹ' ಮತ್ತು ಇತರ ರೂಪದ ಸ್ವಾತಂತ್ರ್ಯಚಳುವಳಿಯನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವುದು.

✤✤✤

ಅಧ್ಯಾಯ - 11

'ಅಂತಿಮ ಹೋರಾಟ'[1] 1930 ರಿಂದ
('Fight to the Finish')

1930ರ ದಶಕದ ಪ್ರಥಮಾರ್ಧದಲ್ಲಿ ಬ್ರಿಟಿಷ್ ಸರ್ಕಾರವು ದುಂಡು ಮೇಜಿನ ಸಮ್ಮೇಳನಗಳ ಮೂಲಕ ಭಾರತ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ಮಾಡಿದ ಪ್ರಯತ್ನವನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು. ಅದೇ ಕಾಲದಲ್ಲಿ ಭಾರತದ ಕಾಂಗ್ರೆಸ್ಸು ಮುಖಂಡರು ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಬೇಕಾಯಿತು. ಒಂಭತ್ತನೆಯ ಅಧ್ಯಾಯದಲ್ಲಿ ವಿವರಿಸಲಾದ ಮೋತಿಲಾಲ್ ನೆಹರೂ ವರದಿಯನ್ನು ಒಪ್ಪಿಕೊಂಡು 1929ರ ಡಿಸೆಂಬರ್ 31ರ ಒಳಗೆ 'ಡೊಮಿನಿಯನ್ ಸ್ಟೇಟಸ್' ನೀಡಬೇಕೆಂಬ ಕಾಂಗ್ರೆಸ್ಸಿನ ಮನವಿಯನ್ನು ಬ್ರಿಟಿಷ್ ಸರ್ಕಾರ ತಳ್ಳಿಹಾಕಿ, ಇದಕ್ಕೆ ಪ್ರತಿಯಾಗಿ ದುಂಡುಮೇಜಿನ ಸಮ್ಮೇಳನದ ಸಲಹೆಯನ್ನು ಮಾಡಿದುದನ್ನೂ, ಭಾರತದ ಮುಖಂಡರು ವೈಸರಾಯ್ ಅವರನ್ನು ಭೇಟಿ ಮಾಡಿದಾಗ 'ಡೊಮಿನಿಯನ್ ಸ್ಟೇಟಸ್' ನೀಡುವ ವಚನದ ಆಧಾರದ ಮೇಲೆ ಈ ಸಮ್ಮೇಳನ ಕರೆಯಲು ನಿರಾಕರಿಸಿದುದರಿಂದ ಕಾಂಗ್ರೆಸ್ಸಿಗೆ ದುಂಡುಮೇಜಿನ ಸಮ್ಮೇಳನ ಒಪ್ಪಿಗೆಯಾಗಲಿಲ್ಲವೆಂಬುದನ್ನೂ ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು. ಈ ಸಮ್ಮೇಳನವು ಕೇವಲ 'ಕಾಲಹರಣ ಮಂತ್ರ' ಎಂದು ರಾಷ್ಟ್ರೀಯ ಕಾಂಗ್ರೆಸ್ ನಾಯಕರಿಗೆ ತೋರಿತು. ಆದುದ

---

1. 1930ರಲ್ಲಿ ತೀವ್ರಗೊಳಿಸಲಾದ ಸ್ವಾತಂತ್ರ್ಯದ ಚಳುವಳಿಯನ್ನು ಪಟ್ಟಾಭಿ ಸೀತಾರಾಮಯ್ಯನವರು 'ಅಂತಿಮ ಹೋರಾಟ' ಎಂದು ಕರೆದಿದ್ದಾರೆ. Pattabhi Sitaramayya *op. cit*, P 613.

ರಿಂದ ಅವರು ಚಳುವಳಿಯನ್ನು ತೀವ್ರಗೊಳಿಸಿದರು. ಹೀಗೆ ತೀವ್ರಗೊಳಿಸಲಾದ ರಾಷ್ಟ್ರೀಯ ಚಳುವಳಿಯು 1930ರ ದಶಕದ ಪೂರ್ವಾರ್ಧದಲ್ಲಿ ಹೇಗೆ ಸಾಗಿತು ಎಂಬುದರ ವಿವರಣೆಯೇ ಈ ಅಧ್ಯಾಯದ ಉದ್ದೇಶವಾಗಿದೆ.

1930 ರಿಂದ ಆರಂಭವಾದ ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದ ಲಾಹೋರಿನಲ್ಲಿ 1929ರ ಡಿಸೆಂಬರಿನಲ್ಲಿ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ರಾಷ್ಟ್ರೀಯ ಕಾಂಗ್ರೆಸ್ಸಿನ ನಿರ್ಣಯಗಳು ಮಹತ್ವಪೂರಿತವಾದುವು. ಪೂರ್ಣ ಸ್ವಾತಂತ್ರ್ಯ ಗಳಿಸುವುದೇ ಕಾಂಗ್ರೆಸ್ಸಿನ ಗುರಿ ಎಂಬುದನ್ನು ಈ ಕಾಂಗ್ರೆಸ್ ಅಧಿವೇಶನವು ಒತ್ತಿಹೇಳಿತು. ಅನೇಕ ಸದಸ್ಯರು, ಮುಖ್ಯವಾಗಿ ನೆಹರೂ, ಬೋಸ್, ಶ್ರೀನಿವಾಸ ಅಯ್ಯಂಗಾರ್ ಇತ್ಯಾದಿ ವಾಮಪಂಥೀಯ ಕಾಂಗ್ರೆಸ್ಸಿಗರು, ಹೆಚ್ಚು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದರು. ಅನೇಕ ಅಂಶಗಳನ್ನು ಒಳಗೊಂಡ ಒಂದು ನಿರ್ಣಯವನ್ನು ಈ ಕಾಂಗ್ರೆಸ್ ಅನುಮೋದಿಸಿತು. ವಿಧಾನಸಭೆಗಳಲ್ಲಿಯೂ, ಸರ್ಕಾರವು ನೇಮಿಸಿದ್ದ ವಿವಿಧ ಸಮಿತಿಗಳಲ್ಲಿಯೂ ಇದ್ದ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಕೊಡುವಂತೆ ಅವರೆಲ್ಲರಿಗೂ ಈ ನಿರ್ಣಯದಲ್ಲಿ ಆದೇಶ ನೀಡಲಾಯಿತು. ಅಲ್ಲದೆ, ಮುಂಬರುವ ಯಾವ ಚುನಾವಣೆಗಳಲ್ಲಿಯೂ ಭಾಗವಹಿಸಕೂಡದೆಂದು ಕಾಂಗ್ರೆಸ್ಸಿಗರಿಗೂ, ರಾಷ್ಟ್ರೀಯ ಚಳುವಳಿಯಲ್ಲಿ ಪಾತ್ರವಹಿಸುವ ಇತರರಿಗೂ ಕರೆಕೊಟ್ಟಿತು. ತೆರಿಗೆ ನಿರಾಕರಣೆಯೂ ಸೇರಿದಂತಹ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವ ತೀರ್ಮಾನದ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಅಧಿಕಾರ ನೀಡಿತು. 1929ರ ಡಿಸೆಂಬರ್ 31 ರಂದು ನಡುರಾತ್ರಿ ತ್ರಿವರ್ಣ ಧ್ವಜವನ್ನು ಸ್ವಾತಂತ್ರ್ಯಧ್ವಜವೆಂದು ಹಾರಿಸಲಾಯಿತು.[1] 1930ರ ಜನವರಿ 26 ರಂದು ದೇಶದ ಆದ್ಯಂತವೂ ಈ ದಿನವನ್ನು ಸ್ವಾತಂತ್ರ್ಯದಿನವಾಗಿ ಆಚರಿಸುವುದೆಂದೂ ಘೋಷಿಸಲಾಯಿತು.[2] ಲಾಹೋರ್ ಕಾಂಗ್ರೆಸ್

---

1. ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದುದು ನಡುರಾತ್ರಿಯಲ್ಲಿಯೇ ಎಂಬುದನ್ನೂ, ಅದೇ ಹೊತ್ತಿನಲ್ಲಿ 1947ರ ಆಗಸ್ಟ್ 15 ರಂದು ನಮ್ಮ ಸ್ವಾತಂತ್ರ್ಯ ಧ್ವಜ ಹಾರಿಸಲಾಯಿತು ಎಂಬುದನ್ನೂ ಇಲ್ಲಿ ಗಮನಿಸಬಹುದು.
2. ವಾಸ್ತವವಾಗಿ ನಮಗೆ ಸ್ವಾತಂತ್ರ್ಯ ಬಂದ ನಂತರವೂ ಇದೇ ದಿನಾಂಕದಂದು –

ಅಧಿವೇಶನದ ಈ ಮುಖ್ಯ ನಿರ್ಣಯಗಳೊಡನೆ ಭಾರತದ ಸ್ವಾತಂತ್ರ್ಯ ಚಳುವಳಿಯು ತೀವ್ರಗೊಳಿಸಲಾದ ಹೋರಾಟದ ಘಟ್ಟ ಆರಂಭವಾಯಿತೆನ್ನ ಬಹುದು.

1930ರ ಜನವರಿಯಿಂದ ಜೂನ್‌ವರೆವಿಗೆ

ಲಾಹೋರ್ ಕಾಂಗ್ರೆಸ್ ಅಧಿವೇಶನವು ಘೋಷಿಸಿದ ಮೇಲಿನ ನಿರ್ಣಯ ಗಳನ್ನು ಉತ್ಸಾಹದಿಂದ ದೇಶವು ಸ್ವಾಗತಿಸಿತು. ಹೋರಾಟದ ಅಂತಿಮ ಘಟ್ಟದ ಮೊದಲ ಆರು ತಿಂಗಳುಗಳಲ್ಲಿ ಅನೇಕ ಘಟನೆಗಳು ಸಂಭವಿಸಿದವು. 1930ರ ಜನವರಿ 26 ರಂದು ದೇಶದ ಆದ್ಯಂತವೂ 'ಪೂರ್ಣ ಸ್ವರಾಜ್ಯ ದಿನ'ವನ್ನಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮಗಳಲ್ಲಿಯೂ ನಗರಗಳಲ್ಲಿಯೂ, ಸಭೆಗಳನ್ನು ಏರ್ಪಡಿಸಲಾಯಿತು. ಈ ಎಲ್ಲಾ ಸಭೆ ಗಳಲ್ಲಿಯೂ ಕಾಂಗ್ರೆಸ್ಸು ರಚಿಸಿಕೊಟ್ಟಿದ್ದ ಹೇಳಿಕೆಯೊಂದನ್ನು ಜನರೆದುರಿಗೆ ಓದಿ ಈ ಹೇಳಿಕೆಗೆ ಜನರ ಒಪ್ಪಿಗೆಯನ್ನು ಪಡೆಯಲಾಯಿತು. 'ಸ್ವಾತಂತ್ರ್ಯವು ಭಾರತ ಜನತೆಯ ಆಜನ್ಮಸಿದ್ಧ ಹಕ್ಕು' ಎಂಬುದನ್ನು ಹೇಳಿಕೆಯಲ್ಲಿ ಘೋಷಿಸಲಾಯಿತು. ಭಾರತಕ್ಕೆ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಮತೀಯ ದೃಷ್ಟಿಗಳೆಲ್ಲದರಿಂದಲೂ ಬ್ರಿಟಿಷ್ ಆಳ್ವಿಕೆಯು ಹೇಗೆ ವಿನಾಶಕಾರಿ ಯಾಗಿದೆ ಎಂಬುದನ್ನು ಇದು ವಿವರಿಸಿತು. ಭಾರತವು ಬ್ರಿಟಿಷರ ಸಂಬಂಧ ವನ್ನು ಕಡಿದುಹಾಕಿ ಪೂರ್ಣ ಸ್ವರಾಜ್ಯ ಸ್ಥಾಪಿಸಬೇಕೆಂದು ಇದು ಘೋಷಿಸಿತು.[1]

ದೇಶಾದ್ಯಂತವೂ 'ಪೂರ್ಣ ಸ್ವರಾಜ್ಯ ದಿನ'ವನ್ನು ಉತ್ಸಾಹದಿಂದ ಜನರು ಆಚರಿಸಿದುದು, ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಲು ಹಾಗೂ ಅವಶ್ಯಕವಾದ ತ್ಯಾಗಕ್ಕೆ ಸಿದ್ಧವಾಗಿದ್ದುದನ್ನು ಸೂಚಿಸಿತು. ಇದರಿಂದ ಜನತೆಯ ಬೆಂಬಲದ ಬಗ್ಗೆ ಮುಖಂಡರುಗಳಿಗೆ ವಿಶ್ವಾಸವುಂಟಾಯಿತು. ತಾವು ಆಲೋಚಿಸುತ್ತಿದ್ದ ಮಾರ್ಗದಲ್ಲಿ ಚಳುವಳಿ

ಜನವರಿ 26 – ನಾವು ಗಣರಾಜ್ಯ ದಿನಾಚರಣೆಯನ್ನು ಆಚರಿಸುತ್ತಿರುವೆವು ಎಂಬುವನ್ನು ಗಮನಕ್ಕೆ ತಂದುಕೊಳ್ಳಬಹುದು.

1. ಈ ಹೇಳಿಕೆಯ ಪೂರ್ಣ ವಿವರಣೆಗಳಿಗೆ ನೋಡಿ :
Pattabhi Sitaramayya *op. cit,* PP 615–616

ಯನ್ನು ಮುಂದುವರಿಸಲು ಅವರಿಗೆ ಧೈರ್ಯ ಹೆಚ್ಚಿತು. ಅದೇ ಕಾಲದಲ್ಲಿ ಕಾಂಗ್ರೆಸ್ಸಿಗೆ ಸಾಮಾನ್ಯ ಸದಸ್ಯರನ್ನು ನೊಂದಣಿ ಮಾಡುವ ಕಾರ್ಯವನ್ನೂ ಕೈಗೊಳ್ಳಲಾಯಿತು. ಕಾಂಗ್ರೆಸ್ಸಿನ ಕರೆಗೆ ಓಗೊಟ್ಟು ಪ್ರಾಂತೀಯ ವಿಧಾನ ಸಭೆಗಳ ಕಾಂಗ್ರೆಸ್ ಸದಸ್ಯರೆಲ್ಲರೂ ರಾಜಿನಾಮೆ ಇತ್ತರು.

ಉಪ್ಪಿನ ಸತ್ಯಾಗ್ರಹ

ಸತ್ಯಾಗ್ರಹ ಚಳುವಳಿಯನ್ನು ಯೋಜಿಸಿ, ನಿರ್ದೇಶಿಸುವಂತೆ ಕಾಂಗ್ರೆಸ್ಸು ಮಹಾತ್ಮಾ ಗಾಂಧಿಯವರನ್ನು ಕೇಳಿಕೊಂಡಿದ್ದಿತು. ಇದನ್ನು ಒಪ್ಪಿಕೊಂಡು ಗಾಂಧೀಜಿಯವರು ಪ್ರಥಮತಃ ಉಪ್ಪಿನ ಸತ್ಯಾಗ್ರಹವನ್ನು ಕೈಗೊಳ್ಳಲು ತೀರ್ಮಾನಿಸಿದರು. 'ಉಪ್ಪಿನ ಸತ್ಯಾಗ್ರಹ' ಅಂದರೆ ಸರ್ಕಾರವು ಉಪ್ಪು ತಯಾರಿಕೆ ಮೇಲೆ ವಿಧಿಸಿದ್ದ ತೆರಿಗೆ ನಿರ್ಬಂಧವನ್ನು ಮುರಿದು ಉಪ್ಪು ತಯಾರಿಸುವುದರ ಮೂಲಕ ಕಾನೂನು ಭಂಗಮಾಡುವುದು. ಸತ್ಯಾಗ್ರಹ ಚಳುವಳಿಗೆ ಗಾಂಧೀಜಿಯವರು ಉಪ್ಪಿನ ತೆರಿಗೆ ವಿರೋಧಿಸುವುದನ್ನು ಏಕೆ ಚುನಾಯಿಸಿಕೊಂಡರು ಎಂಬುದನ್ನು ತಿಳಿಯಲು ಉಪ್ಪಿನ ತೆರಿಗೆ ಯಾವಾಗ ಮತ್ತು ಏಕೆ ಸರ್ಕಾರವು ವಿಧಿಸಿತು ಎಂಬುದನ್ನು ತಿಳಿಯಬೇಕು. ಈ ಕಥೆ ಸ್ವಾರಸ್ಯವಾಗಿದೆ. 1836 ರಲ್ಲಿ ಸರ್ಕಾರವು 'ಉಪ್ಪಿನ ಆಯೋಗ' ವೊಂದನ್ನು (Salt Commission) ನೇಮಿಸಿತು. ಇಂಗ್ಲೆಂಡಿನ ಉಪ್ಪು ಭಾರತದಲ್ಲಿ ಮಾರಾಟವಾಗಲು ಸಾಧ್ಯವಾಗಬೇಕಾದರೆ ಭಾರತೀಯ ಉಪ್ಪಿನ ಮೇಲೆ ತೆರಿಗೆ ವಿಧಿಸುವುದರ ಮೂಲಕ ಇದರ ಬೆಲೆ ಹೆಚ್ಚಿಸಬೇಕಾಗುವುದೆಂದು ಅದು ಹೇಳಿ ಉಪ್ಪಿನ ತೆರಿಗೆ ವಿಧಿಸಬೇಕೆಂದು ಶಿಫಾರಸು ಮಾಡಿತು. ಇಂಗ್ಲೆಂಡಿನ ಉಪ್ಪು ಭಾರತದಲ್ಲಿ ಏಕೆ ಮಾರಾಟವಾಗುವ ಏರ್ಪಾಟು ಆಗಬೇಕು ಎಂಬುದರ ಗುಟ್ಟು ಹೀಗಿದೆ: ಭಾರತಕ್ಕೆ ಇಂಗ್ಲೆಂಡು ರಫ್ತು ಮಾಡುತಿದ್ದ ತಯಾರಿಸಿದ ಸರಕುಗಳನ್ನು ಭಾರತಕ್ಕೆ ತರಲು ಸಾಕಾಗುವಷ್ಟು ಹಡಗುಗಳು, ಭಾರತದಿಂದ ಇಂಗ್ಲೆಂಡು ತೆಗೆದುಕೊಂಡು ಹೋಗುತ್ತಿದ್ದ ಕಚ್ಚಾ ಸರಕುಗಳನ್ನು ಮತ್ತು ಆಹಾರ ಸರಕುಗಳನ್ನು ತೆಗೆದುಕೊಂಡು ಹೋಗಲು ಬೇಕಾಗುವ ಹಡಗುಗಳಿಗಿಂತ ಕಡಿಮೆಯಾಗಿದ್ದವು. ಇವುಗಳನ್ನು ತೆಗೆದುಕೊಂಡು ಹೋಗಲು ಖಾಲಿ ಹಡಗುಗಳು ಇಂಗ್ಲೆಂಡಿನಿಂದ ಭಾರತಕ್ಕೆ ಬರುವುದು ಬ್ರಿಟಿಷರಿಗೆ ತುಂಬ ನಷ್ಟವಾಗುತ್ತಿತ್ತು; ಅಲ್ಲದೆ ಖಾಲಿ ಹಡಗು

ಸಂಚಾರವೂ ಕಷ್ಟವಾಗಿದ್ದಿತು. ಆದುದರಿಂದ ಬ್ರಿಟನ್ನಿನ ಚೆಷೈರ್ ಎಂಬಲ್ಲಿ ಹೇರಳವಾಗಿ ಇದ್ದ ಉಪ್ಪನ್ನು ಈ ಹಡಗುಗಳಿಗೆ ತುಂಬಿ ಕಳಿಸಲಾಗುತ್ತಿತ್ತು. ಆದರೆ, ಈ ಉಪ್ಪಿನ ತಯಾರಿಕಾ ವೆಚ್ಚ ಭಾರತದಲ್ಲಿ ತಯಾರಾಗುತ್ತಿದ್ದ ಉಪ್ಪಿನ ವೆಚ್ಚಕ್ಕಿಂತ ಹೆಚ್ಚಾಗಿದ್ದಿತು. ಲಾಭಕರವಾಗಿ ಬ್ರಿಟಿಷರು ಭಾರತದಲ್ಲಿ ಉಪ್ಪನ್ನು ಮಾರಬೇಕಾದರೆ ಭಾರತದ ಉಪ್ಪಿನ ಬೆಲೆ ಹೆಚ್ಚಿಸಬೇಕಾಗುವುದು. ಇದಕ್ಕಾಗಿ ತೆರಿಗೆ ವಿಧಿಸುವ ಉಪಾಯ ಅವರಿಗೆ ಹೊಳೆಯಿತು, ಹಾಗೂ ಉಪ್ಪಿನ ಮೇಲೆ ತೆರಿಗೆ ವಿಧಿಸಲಾಯಿತು. ಇದರಿಂದ ಉಪ್ಪಿನ ತೆರಿಗೆಯು ಬ್ರಿಟಿಷರ ಲಾಭಕ್ಕಾಗಿ ಅವರು ಅನುಸರಿಸಿದ ಭಾರತದ ಶೋಷಣೆಯ ಮಾರ್ಗ ಎಂಬುದು ಸ್ಪಷ್ಟವಾಗುವುದು. ಈ ಕಾರಣದಿಂದಲೇ ಗಾಂಧೀಜಿಯವರು ಉಪ್ಪಿನ ಕಾನೂನನ್ನು ಮುರಿದು ತೆರಿಗೆ ನೀಡದೆ ಉಪ್ಪನ್ನು ತಯಾರಿಸುವ ಉಪ್ಪಿನ ಸತ್ಯಾಗ್ರಹವನ್ನು ಕೈಗೊಂಡರು.

ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸುವುದಕ್ಕೆ ಮೊದಲು 1930ರ ಮಾರ್ಚ್ 2 ರಂದು ಗಾಂಧೀಜಿಯವರು ವೈಸರಾಯ್ ಅವರಿಗೆ ತಮ್ಮ ಉಪ್ಪಿನ ಸತ್ಯಾಗ್ರಹದ ಯೋಜನೆಯ ಬಗ್ಗೆ ದೀರ್ಘ ಪತ್ರ ಬರೆದರು.[1] ವೈಸರಾಯ್ ಇರ್ವಿನ್ ಅವರಿಗೆ ಬರೆದ ಈ ಪತ್ರದಲ್ಲಿ ಇರ್ವಿನ್ ಅವರನ್ನು 'ಪ್ರಿಯಮಿತ್ರ' ಎಂದು ಸಂಬೋಧಿಸಿದ್ದರು. ಗಾಂಧೀಜಿಯ ಕಲ್ಪನೆಯ ಸತ್ಯಾಗ್ರಹವು ದುರಾಡಳಿತ, ಅಸತ್ಯ, ಹಿಂಸೆ, ಅಧರ್ಮ ಆಚರಣೆ ಇವುಗಳ ವಿರುದ್ಧವೇ ಹೊರತು ವೈಯಕ್ತಿಕವಾಗಿ ಇಂಗ್ಲಿಷರ ಮೇಲಲ್ಲ ಎಂಬುದನ್ನು ಈ ಸಂಬೋಧನಾ ಪದವು ಸೂಚಿಸುವುದು. ಗಾಂಧೀಜಿಯವರು ಪತ್ರವನ್ನು ಸಬರ್ಮತಿಯ ಸತ್ಯಾಗ್ರಹ ಆಶ್ರಮಕ್ಕೆ ಸೇರಿದ್ದ ಯುವಕ ಆಂಗ್ಲೇಯ ರೆಜಿನಾಲ್ಡ್ ರೆನಾಲ್ಡ್ಸ್ ಎಂಬುವರೊಡನೆ ವೈಸರಾಯ್ ಇರ್ವಿನ್ ಅವರಿಗೆ ಕಳಿಸಿದರು. ಇರ್ವಿನ್ ಅವರ ಉತ್ತರ ನಿರಾಶಾದಾಯಕವಾಗಿದ್ದುದರಿಂದ ಗಾಂಧೀಜಿಯವರು ಸತ್ಯಾಗ್ರಹವನ್ನು ಪ್ರಾರಂಭಿಸಿದರು.

ಉಪ್ಪಿನ ಸತ್ಯಾಗ್ರಹದ ಪ್ರಾರಂಭ – 1930ರ ಮಾರ್ಚ್ 12 ರಂದು

ಉಪ್ಪಿನ ತೆರಿಗೆ ವಿಧಿಸಿದ್ದ ಕಾನೂನನ್ನು ಭಂಗಮಾಡಿ ಉಪ್ಪನ್ನು

1. ಈ ಪತ್ರದ ಪೂರ್ಣ ವಿವರಕ್ಕೆ ನೋಡಿ : Pattabhi Sitaramayya *op. cit*, PP 630-637

ತಯಾರಿಸುವುದು ಹಾಗೂ ಉಪ್ಪಿನ ಮಳಿಗೆಗಳನ್ನು ಲೂಟಿ ಮಾಡುವುದು ಇವು ಉಪ್ಪಿನ ಸತ್ಯಾಗ್ರಹದ ಮುಖ್ಯ ಕಾರ್ಯಕ್ರಮಗಳು. ಸಬರ್‌ಮತಿ ಆಶ್ರಮದಿಂದ ಸಮುದ್ರತೀರದ ಗ್ರಾಮವಾಗಿದ್ದ ದಂಡಿ ಎಂಬಲ್ಲಿಗೆ ಸುಮಾರು 200 ಮೈಲಿಗಳ ದೂರ - ಕಾಲು ನಡಿಗೆಯಲ್ಲಿ ಹೋಗುವುದರಿಂದ ಈ ಸತ್ಯಾಗ್ರಹ ಪ್ರಾರಂಭಿಸುವುದೆಂದು ಗಾಂಧೀಜಿ ತೀರ್ಮಾನಿಸಿದರು. ಇವರು ಆಶ್ರಮದಲ್ಲಿ ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾರಂಭಿಸಿದಾಗ, ವಲ್ಲಭ ಭಾಯಿ ಪಟೇಲರು ದಂಡಿಗೆ ಹೋಗುವ ಮಾರ್ಗದಲ್ಲಿರುವ ಗ್ರಾಮಗಳ ನಿವಾಸಿಗಳಿಗೆ ಉಪ್ಪಿನ ಸತ್ಯಾಗ್ರಹದ ವಿಷಯ ತಿಳಿಸಿ ಅವರನ್ನು ಸಿದ್ಧಗೊಳಿಸಲು ಮುಂದೆ ಹೊರಟರು. ಆದರೆ ಹೋಗುವ ಮಾರ್ಗದಲ್ಲಿಯೇ ಸರ್ಕಾರವು ಅವರನ್ನು ಸೆರೆಹಿಡಿದು ಮೂರು ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಿತು. ಪಟೇಲರನ್ನು ಹೀಗೆ ಜೈಲಿಗೆ ಹಾಕಿದುದು ಗುಜರಾತಿನ ಜನತೆಯನ್ನು ಕೆರಳಿಸಿತು. ಸಬರ್‌ಮತಿಯ ಮೈದಾನದಲ್ಲಿ ಸುಮಾರು 75,000 ಜನರು ಸಭೆ ಸೇರಿ ಕೆಳಗಿನ ನಿರ್ಣಯವನ್ನು ಅನುಮೋದಿಸಿದರು.

> "ಅಹಮದಾಬಾದಿನ ನಾಗರಿಕರಾದ ನಾವು ವಲ್ಲಭಭಾಯಿ ನಡೆದ ಮಾರ್ಗವನ್ನೇ ಅನುಸರಿಸಿ ಹೋಗಲು ನಿಶ್ಚಯಿಸಿರುತ್ತೇವೆ ಮತ್ತು ಹೀಗೆ ಮಾಡುವುದರ ಮೂಲಕ ಪೂರ್ಣ ಸ್ವಾತಂತ್ರ್ಯವನ್ನು ಗಳಿಸುವೆವು. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಸಾಧಿಸುವವರೆಗೆ ನಾವು ಶಾಂತಿಯಿಂದ ಸುಮ್ಮನಿರೆವು ಹಾಗೂ ಸರ್ಕಾರಕ್ಕೂ ಶಾಂತಿ ನೀಡೆವು. ಭಾರತದ ಬಿಡುಗಡೆ 'ಸತ್ಯ ಮತ್ತು ಅಹಿಂಸೆ'ಗಳಿಂದಲೇ ಸಾಧ್ಯ ಎಂಬುದನ್ನು ನಾವು ಪ್ರತಿಜ್ಞಾಪೂರ್ವಕವಾಗಿ ಘೋಷಿಸುವೆವು."[1]

ಮೇಲಿನ ನಿರ್ಣಯವು ಕೇವಲ ಅಹಮದಾಬಾದಿನ ಜನರ ಮನೋಭಾವವನ್ನು ಅಲ್ಲದೆ ಇಡೀ ದೇಶದ ಸಾಮಾನ್ಯ ಜನತೆಯ ಆಗಿನ ಮನೋಭಾವವನ್ನು ಸೂಚಿಸುವುದು.

ವಲ್ಲಭಭಾಯಿ ಪಟೇಲರನ್ನು ಜೈಲಿಗೆ ಹಾಕಿದುದರಿಂದ ಗಾಂಧಿಜಿ ತಮ್ಮ ಕಾರ್ಯಕ್ರಮಗಳನ್ನು ನಿಲ್ಲಿಸಲಿಲ್ಲ. ಸುಶಿಕ್ಷಿತರಾದ, ಶಿಸ್ತುಶೀಲರಾದ

---

1. ನೋಡಿ, Pattabhi Sitaramayya. *op, cit,* P 639

ಎಪ್ಪತ್ತೊಂಬತ್ತು ಪಾದಚಾರಿಗಳೊಡನೆ ತಮ್ಮ ಚರಿತ್ರಾರ್ಹ ದಂಡಿ 'ಪಾದಯಾತ್ರೆ'ಯನ್ನು 1930ರ ಮಾರ್ಚ್ 12 ರಂದು ಪ್ರಾರಂಭಿಸಿದರು. ಇಪ್ಪತ್ತುನಾಲ್ಕು ದಿವಸಗಳ ಸುಮಾರು 200 ಮೈಲಿಗಳ ಈ ಪಾದಯಾತ್ರೆಯಲ್ಲಿ ಈ "ದಂಡಿಯಾತ್ರಿಕರು" ನೂರಾರು ಗ್ರಾಮಗಳ ಮುಖಾಂತರ ಹಾದುಹೋದರು. ಜನರು ಇವರನ್ನು ಜೈಕಾರ ಮಾಡಿ 'ಭಾರತಮಾತಾಕಿ ಜೈ' ಎಂದು ಕೂಗುತ್ತಿದ್ದರು. ಹಾಗೆ ಗಾಂಧಿಜಿ ಕೈಗೊಂಡ 'ಪಾದಯಾತ್ರೆ' ವಾಸ್ತವವಾಗಿ ಜನರನ್ನು ರಾಷ್ಟ್ರೀಯ ಚಳುವಳಿಗೆ ಹುರಿದುಂಬಿಸುವ ಉತ್ತಮ ಮಾರ್ಗವಾಗಿ ಪರಿಣಮಿಸಿತು. ಗಾಂಧಿಜಿಯವರು ತಮ್ಮ ಸತ್ಯ ಮತ್ತು ಅಹಿಂಸೆ ತತ್ವ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಈ ಮೂಲಕ ತತ್ವಗಳ ದೃಷ್ಟಿಯಿಂದ ಹೇಗೆ ನಡೆಸಬೇಕು ಎಂಬುದರ ಬಗ್ಗೆ ಜನರಿಗೆ ತಿಳಿವಳಿಕೆ ನೀಡಲು ಈ ಅವಕಾಶವನ್ನು ಉಪಯೋಗಿಸಿಕೊಂಡರು. ಬ್ರಿಟಿಷ್ ಸರ್ಕಾರದ ವಿರುದ್ಧ ಭಾರತವು ಅಹಿಂಸಾ ಸ್ವರೂಪದಲ್ಲಿ ದಂಗೆ ಎದ್ದಿವೆ ಎಂಬ ವಿಷಯವು ಗಾಂಧಿಜಿಯ ಪಾದಯಾತ್ರೆಯಿಂದ ಇತರ ದೇಶಗಳಲ್ಲಿಯೂ ಪ್ರಚಾರವಾಯಿತು. ಏಕೆಂದರೆ ವಿದೇಶೀ ಪತ್ರಿಕಾ ಬಾತ್ಮೀದಾರರೂ ಗಾಂಧಿಜಿಯವರ ಪಾದಯಾತ್ರೆಯೊಡನೆ ಇದ್ದರು.

ಐತಿಹಾಸಿಕ ಪಾದಯಾತ್ರೆಗೆ ಹೊರಡುವ ಮುನ್ನ ಗಾಂಧಿಜಿಯವರು ತಮ್ಮನ್ನು ಸರ್ಕಾರವು ಬಂಧಿಸಿದರೆ – ಹಾಗೆ ಬಂಧಿಸಲ್ಪಡುವರೆಂದು ಅವರು ನಿರೀಕ್ಷಿಸಿದ್ದರು – ಜನರು ಹೇಗೆ ನಡೆದುಕೊಳ್ಳಬೇಕೆಂಬುದರ ಬಗ್ಗೆ ಸಂದೇಶ ನೀಡಲು ಅವರು ಒಂದು ಮುಖ್ಯ ಹೇಳಿಕೆಯನ್ನು ಪ್ರಕಟಿಸಿದರು. ಏನೇ ಸಂದರ್ಭ ಒದಗಿಬಂದರೂ ಜನರು ಹಿಂಸಾಮಾರ್ಗ ಕೈಗೊಳ್ಳಬಾರದೆಂದೂ, ಸತ್ಯ ಮತ್ತು ಅಹಿಂಸೆಯ ಉಪಯುಕ್ತತೆ ಹಾಗೂ ಅಂತ್ಯ ಯಶಸ್ಸಿನ ಬಗ್ಗೆ ಸಂಪೂರ್ಣ ನಂಬಿಕೆ ಇಟ್ಟುಕೊಂಡು ಸತ್ಯಾಗ್ರಹ ಚಳುವಳಿಯನ್ನು ಮುಂದುವರಿಸುತ್ತಾ ಹೋಗಬೇಕೆಂದೂ ಜನತೆಗೆ ಅವರು ಕರೆಕೊಟ್ಟರು. ಭಾರತದಲ್ಲಿ ಪ್ರತಿಯೊಬ್ಬರೂ ಸತ್ಯಾಗ್ರಹಿ ಆಗಬೇಕೆಂದು ಅವರು ನುಡಿದರು. ದಂಡಿಯಾತ್ರೆಯೊಡನೆ ಪ್ರಾರಂಭವಾಗಿರುವ ಸತ್ಯಾಗ್ರಹ ಚಳುವಳಿಯನ್ನು ಸರ್ಕಾರವು ತಡೆಯಲಾರದೆಂದು ನುಡಿದು, ಸತ್ಯಾಗ್ರಹಿಗಳು ಚಳುವಳಿಯಲ್ಲಿ

ನಿರತರಾಗಿರಬೇಕು, ಇಲ್ಲವೆ ಸರ್ಕಾರದಿಂದ ಬಂಧಿಸಲ್ಪಟ್ಟು ಜೈಲಿನಲ್ಲಿರಬೇಕು, ಇಲ್ಲದಿದ್ದರೆ ಸ್ವರಾಜ್ಯ ಚಳುವಳಿಗೆ ಸಹಾಯಕವಾಗುವ ರಚನಾತ್ಮಕ ಕಾರ್ಯ ದಲ್ಲಿ ನಿರತರಾಗಿರಬೇಕು ಎಂದೂ ಅವರು ಹೇಳಿದರು. ಹೀಗೆ ಉಪ್ಪಿನ ಸತ್ಯಾಗ್ರಹ ಪ್ರಾರಂಭದಲ್ಲಿ ವ್ಯಾಪಕವಾದ ಆದೇಶವನ್ನು ಭಾರತದ ಜನತೆಗೆ ನೀಡಿದರು. ಉಪ್ಪಿನ ಸತ್ಯಾಗ್ರಹ ಬೃಹತ್ ಚಳುವಳಿಯ ಪ್ರಥಮ ಹಂತ ವೆಂದೂ ಸ್ವಾತಂತ್ರ್ಯ ಗಳಿಸುವವರೆಗೂ ವಿವಿಧ ರೂಪಗಳಲ್ಲಿ ಸತ್ಯಾಗ್ರಹವು ಮುಂದುವರಿಯುವುವೆಂದೂ ಗಾಂಧಿಜಿಯವರು ಹೇಳಿದರು. ಜನರಿಂದ ಈ ಸತ್ಯಾಗ್ರಹಕ್ಕೆ ಪೂರ್ಣ ಸಹಕಾರವನ್ನು ಅವರು ನಿರೀಕ್ಷಿಸಿದರು.

ಕೈಯಲ್ಲಿ ಒಂದು ಉದ್ದವಾದ ಕೋಲನ್ನು ಹಿಡಿದುಕೊಂಡು ಅಹಿಂಸಾತ್ಮಕ ಹೋರಾಟಗಾರರ ತಮ್ಮ ಸೇನೆಯೊಡನೆ ಬೇಗಬೇಗ ನಡೆದು ಕೊಂಡು ಹೋಗುತ್ತಿದ್ದ ಗಾಂಧಿಜಿಯವರು ಆಶ್ರಮದಿಂದ ಹೊರಟಾಗ ಸಹಸ್ರಾರು ಜನರು ದಂಡಿಗೆ ಹೊರಟಿದ್ದ ತಂಡಕ್ಕೆ ಜೈಕಾರ ಹಾಕುತ್ತಾ ಬಹುದೂರ ಅವರನ್ನು ಹಿಂಬಾಲಿಸಿ ಹೋದರು.[1] ಗಾಂಧಿಜಿಯ ತಂಡ ದೊಡನೆ ಭಾರತ ಹಾಗೂ ಅನೇಕ ಹೊರದೇಶಗಳ ವೃತ್ತಪತ್ರಿಕಾ ಬಾತ್ಮೀ ದಾರರೂ, ಫೋಟೋಗ್ರಾಫರುಗಳೂ, ಸಿನಿಮಾ ತಯಾರಕರೂ ತಮ್ಮ ವೃತ್ತಿಯ ಕರ್ತವ್ಯ ನಿರ್ವಹಣೆಗಾಗಿ ಹೊರಟುದುದು ಗಮನಾರ್ಹವಾಗಿದೆ. ಇವರುಗಳೆಲ್ಲರೂ ಗಾಂಧಿಜಿಯವರು ಕೈಗೊಂಡಿದ್ದ ಚಳುವಳಿ ಹಾಗೂ ಅದರ ಉದ್ದೇಶದ ಬಗ್ಗೆ ದೇಶದಲ್ಲಿಯೂ, ವಿದೇಶಗಳಲ್ಲಿಯೂ ಪ್ರಚಾರ ಮಾಡಿದರು.

ಗಾಂಧಿಜಿಯವರು ಚುರುಕಾಗಿ ಬೇಗಬೇಗ ನಡೆಯುತ್ತಾ ಮುಂದೆ ಹೋದರು. ಅವರನ್ನು ಹಿಂಬಾಲಿಸಿ ಇತರ ಸತ್ಯಾಗ್ರಹಿಗಳೂ ನಡೆದರು. ದಾರಿಯಲ್ಲಿ ಎಲ್ಲಾ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ಜನರು ಗಾಂಧಿಜಿ ಯವರಿಗೆ ತಮ್ಮ ಗೌರವ ಸೂಚಿಸಲು ಬಹು ಸಂಖ್ಯೆಯಲ್ಲಿ ನೆರೆಯುತ್ತಿದ್ದರು. 'ಗಾಂಧಿಜೀ ಕಿ ಜೈ' ಎಂಬ ಕೂಗು ಎಲ್ಲೆಲ್ಲೂ ಕೇಳಿಸ ಹತ್ತಿತು. ಹೀಗೆ

---

1. ಶ್ರೀರಾಮಚಂದ್ರನು ಸೀತೆ, ಲಕ್ಷ್ಮಣರೊಡನೆ ವಾಸ್ತವವಾಗಿ ದೈತ್ಯಸಂಹಾರ ಕ್ಕಾಗಿ ಹಾಗೂ ರಾಕ್ಷಸರ ಕುಲ ನಾಶಮಾಡುವುದಕ್ಕೆ ಅರಣ್ಯಕ್ಕೆ ಹೊರಟಾಗ ಅಯೋಧ್ಯೆಯ ಜನ ಅವರನ್ನು ಬಹುದೂರದವರೆಗೆ ಹಿಂಬಾಲಿಸಿ ಹೋದ ದೃಶ್ಯ ನೆನಪಿಗೆ ಬರುವುದು.

ಜನಸಂದಣಿ ನೆರೆದ ಕಡೆಗಳಲ್ಲಿ ಗಾಂಧಿಜಿಯವರು ಅವರ ಮುಖ್ಯ ಭಾವನೆ ಗಳಾದ ಖಾದಿ, ಪಾನನಿರೋಧ, ಅಸ್ಪೃಶ್ಯತಾ ನಿವಾರಣೆ, ರಚನಾತ್ಮಕ ಕಾರ್ಯಗಳು ಇತ್ಯಾದಿಗಳ ಬಗ್ಗೆ ಜನರಿಗೆ ವಿವರಿಸಿದರು ಮತ್ತು ಪ್ರತಿ ಯೊಬ್ಬರೂ ರಾಷ್ಟ್ರೀಯ ಚಳುವಳಿಗೆ ಸತ್ಯಾಗ್ರಹಿಗಳಾಗಿ ಸೇರಬೇಕೆಂದು ಕರೆಕೊಟ್ಟರು. ಉಪ್ಪಿನ ತೆರಿಗೆಗೆ ಸತ್ಯಾಗ್ರಹಿಗಳಾಗಿ ಸೇರಬೇಕೆಂದು ಕರೆ ಕೊಟ್ಟರು. ಉಪ್ಪಿನ ತೆರಿಗೆಯನ್ನು ಸರ್ಕಾರವು ರದ್ದುಗೊಳಿಸುವವರೆಗೆ ತಾವು ಆಶ್ರಮಕ್ಕೆ ಹಿಂತಿರುಗುವುದಿಲ್ಲವೆಂದೂ, ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಗಳಿಸುವವರೆಗೆ ಹೋರಾಟವನ್ನು ನಿಲ್ಲಿಸುವ ಯೋಚನೆ ಇಲ್ಲ ವೆಂದೂ ಅವರು ಜನರೆದುರಿಗೆ ಘೋಷಿಸಿದರು. ಅವರ ನಾಯಕತ್ವ ಅತ್ಯಂತ ಸ್ಫೂರ್ತಿದಾಯಕವಾಯಿತು. ಇಡೀ ಭಾರತವೇ ಅವರ ಕರೆಗೆ ಓಗೊಟ್ಟಿತು.

ಇಪ್ಪತ್ತನಾಲ್ಕು ದಿವಸಗಳ ಪಾದಯಾತ್ರೆಯ ನಂತರ ಗಾಂಧಿಜಿ ಮತ್ತು ಅವರ ಸಂಗಡಿಗರು 1930ರ ಏಪ್ರಿಲ್ 5 ರಂದು ದಂಡಿಯನ್ನು ತಲುಪಿದರು. ಮುಂದಾಗಿ ಹೊರಟಿದ್ದ ವಲ್ಲಭಭಾಯಿ ಪಟೇಲ್ ಮತ್ತು ಸೆನ್‌ಗುಪ್ತಾ ಅವರನ್ನು ದಾರಿಯಲ್ಲೇ ಬಂಧಿಸಿದಂತೆ, ಗಾಂಧಿ ಮತ್ತು ಅವರ ಸಂಗಡಿಗರನ್ನು ಸರ್ಕಾರವು ಬಂಧಿಸದೆ ದಂಡಿ ತಲುಪಲು ಬಿಟ್ಟಿದುದು ಆಶ್ಚರ್ಯವೇ ಸರಿ.

ಗಾಂಧಿಜಿ ಉಪ್ಪಿನ ಕಾನೂನು ಭಂಗ ಮಾಡಿದುದು

ದಂಡಿ ತಲುಪಿದ ಮರುದಿವಸ, ಅಂದರೆ 1930ರ ಏಪ್ರಿಲ್ 6 ರಂದು ಗಾಂಧಿಜಿ ಹಾಗೂ ಅವರ ಅನುಯಾಯಿಗಳೆಲ್ಲರೂ ಬೆಳಗಿನ ಪ್ರಾರ್ಥನೆಯ ನಂತರ ಉಪ್ಪಿನ ಕಾನೂನು ಮುರಿಯಲು ಸಮುದ್ರದ ತೀರದ ಬಳಿಗೆ ಹೋದರು. ಮೊದಲು, ಗಾಂಧಿಯವರು ಸಮುದ್ರತೀರದಲ್ಲಿ ಕಲೆತಿದ್ದ ಉಪ್ಪನ್ನು ಕೈಯಲ್ಲಿ ತೆಗೆದುಕೊಂಡು ಈ ಮೂಲಕ ಕಾನೂನು ಭಂಗ ಮಾಡಿದರು. ಇದಾದ ತಕ್ಷಣವೇ ಸಮಾಚಾರ ಹೇಳಿಕೆಯೊಂದನ್ನು ನೀಡಿ ದರು. ಇದರಲ್ಲಿ 'ಇನ್ನು ಉಪ್ಪಿನ ಕಾನೂನಿನ ಪ್ರಕಾರ ಬಂಧನಕ್ಕೆ ಒಳ ಪಡಲು ಹಿಂಜರಿಯದ ಯಾರು ಬೇಕಾದರೂ ಎಲ್ಲಿ ಬೇಕಾದರೂ ಮತ್ತು ಎಲ್ಲಿ ಅನುಕೂಲವೋ ಅಲ್ಲಿ ಉಪ್ಪನ್ನು ತಯಾರಿಸಬಹುದು' ಎಂದು ಘೋಷಿ

ಸಿದರು. ಜನರು ಶುದ್ಧವಾದ ಉಪ್ಪನ್ನು ತಯಾರಿಸಿ ತಾವೇ ಉಪಯೋಗಿಸ ಬಹುದು ಅಥವಾ ಇತರರಿಗೆ ಮಾರಬಹುದು ಎಂಬುವೇ ಅವರ ಆದೇಶವಾಗಿದ್ದಿತು. ಆದರೆ ಹೀಗೆ ಮಾಡುವುದು ಕಾನೂನಿನ ದೃಷ್ಟಿಯಲ್ಲಿ ಒಂದು ಅಪರಾಧ ಹಾಗೂ ಸರ್ಕಾರವು ಅವರನ್ನು ಶಿಕ್ಷಿಸಬಹುದು ಎಂಬುದನ್ನು ಅವರು ತಿಳಿದಿರಬೇಕು ಮತ್ತು ಈ ಶಿಕ್ಷೆಗೆ ಸಿದ್ಧವಾಗಿರಬೇಕು. ಇವೇ ಗಾಂಧಿಜಿಯವರು ಭಾರತದ ಜನತೆಗಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಾಗಿದ್ದವು.

ಉಪ್ಪಿನ ಕಾನೂನು ಭಂಗದ ರಾಷ್ಟ್ರೀಯ ವಾರ

1930ರ ಏಪ್ರಿಲ್ 6 ರಿಂದ 12ರ ದಿನಾಂಕದ ವರೆಗಿನ ವಾರವನ್ನು ಗಾಂಧಿಜಿಯವರು ಉಪ್ಪಿನ ಕಾನೂನು ಭಂಗದ ರಾಷ್ಟ್ರೀಯ ವಾರವಾಗಿ ಘೋಷಿಸಿದರು. ಈ ವಾರದಲ್ಲಿ ದೇಶದ ನಾನಾ ಭಾಗಗಳಲ್ಲಿ ಜನರು ಉಪ್ಪಿನ ಕಾನೂನು ವಿರೋಧಿಸಿ ಉಪ್ಪನ್ನು ತಯಾರಿಸಬೇಕೆಂದೂ, ವಿದ್ಯಾರ್ಥಿಗಳು ಶಾಲೆಗಳಿಗೂ ಕಾಲೇಜುಗಳಿಗೂ ಹೋಗಬಾರದೆಂದೂ ಕರೆ ನೀಡಿದರು. ಪ್ರಥಮ ಹಂತದ ಈ ಉಪ್ಪಿನ ಸತ್ಯಾಗ್ರಹದಲ್ಲಿ ಸ್ತ್ರೀಯರು ಭಾಗವಹಿಸಬಾರದೆಂದು ಗಾಂಧಿಜಿ ಹೇಳಿದರು. ಏಕೆಂದರೆ, ಹೆಂಗಸರನ್ನು ಬಂಧಿಸಲು ಹಾಗೂ ಶಿಕ್ಷಿಸಲು ಸರ್ಕಾರ ಸ್ವಲ್ಪ ಹಿಂಜರಿಯಬಹುದಾದುದರಿಂದ, ಇವರನ್ನು ಮುಂದೆಬಿಟ್ಟು, ಚಳುವಳಿ ನಡೆಸಿದರೆ ಪುರುಷರು ತಾವು ಕ್ಷೇಮದಿಂದಿರಬಹುದೆಂದು ಹೆಂಗಸರನ್ನು ಚಳುವಳಿಗೆ ಮುಂದೆ ಬಿಟ್ಟಿರುತ್ತಾರೆಂಬ ಅಪವಾದ ಏಳಬಹುದೆಂಬುದು ಇದಕ್ಕೆ ಕಾರಣವಾಗಿದ್ದಿತು.

ಹೀಗೆ, ಉಪ್ಪಿನ ಸತ್ಯಾಗ್ರಹ ಎಲ್ಲಾ ಕಡೆ ಹರಡಿದಾಗ ದೇಶದಲ್ಲಿ ಒಂದು ಕ್ರಾಂತಿಯ ವಾತಾವರಣವುಂಟಾಯಿತು. ದೇಶದ ನಾನಾಭಾಗಗಳಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧ ಪ್ರತಿಭಟನೆ ಸೂಚಿಸಲು ಬೃಹತ್ ಸಭೆಗಳು ಏರ್ಪಡಿಸಲ್ಪಟ್ಟವು. ಆದರೆ, ಕ್ರೂರ ಸರ್ಕಾರವು ಶಾಂತಿಯುತ ಪ್ರದರ್ಶನಗಳಾಗಿದ್ದ ಈ ಸಭೆಗಳನ್ನೂ ಚದುರಿಸಲು ಲಾಠಿಪ್ರಯೋಗ, ಗುಂಡುಹಾರಿಸುವುದು, ಇಂತಹ ಕ್ರಮಗಳನ್ನು ಕೈಗೊಂಡಿತು. ಈ ಸರ್ಕಾರದ ಇಂತಹ ಬಲಪ್ರಯೋಗದಿಂದ ಅನೇಕರು ಮಡಿದರು; ಇನ್ನೂ ಅನೇಕರು ಗಾಯಗೊಂಡರು. ಪ್ರೆಸ್ ಮಸೂದೆಗೆ ಸಂಬಂಧಿಸಿದಂತೆ ಒಂದು ಸುಗ್ರೀವಾಜ್ಞೆ

ಯನ್ನು ಹೊರಡಿಸಿ ವೈಸರಾಯ್ ಅವರು ವೃತ್ತಪತ್ರಿಕೆಗಳು ರಾಷ್ಟ್ರೀಯ ಚಳುವಳಿಗೆ ಸಹಾಯಕವಾಗದಂತೆ ಮಾಡಿದರು. ಈ ಎಲ್ಲಾ ವಿಧದ ಕ್ರಮ ಗಳನ್ನು ಅನುಸರಿಸಿದ ಸರ್ಕಾರದ ಆಳ್ವಿಕೆಯನ್ನು ಗಾಂಧಿಜಿಯವರು 'ಕಪ್ಪು ಆಡಳಿತ' 'Black Regime' ಎಂದೂ 'ಲಷ್ಕರೀಶಾಸನ'ದ ಒಂದು ರೂಪ ವೆಂದೂ ಕರೆದರು.

ಸತ್ಯಾಗ್ರಹದ ವಿಸ್ತೃತ ಕಾರ್ಯಕ್ರಮ

ಸತ್ಯಾಗ್ರಹ ಚಳುವಳಿಯನ್ನು ಹತ್ತಿಕ್ಕಲು ಸರ್ಕಾರವು ಎಷ್ಟೇ ಉಗ್ರ ಕ್ರಮಗಳನ್ನು ಕೈಗೊಂಡರೂ ಚಳುವಳಿಯು ನಿಲ್ಲದೆ ಮುಂದೆ ಸಾಗಿತು. ಅಲ್ಲದೆ ಕೇವಲ ಉಪ್ಪಿನ ಕಾನೂನು ಮುರಿಯುವುದೇ ಅಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಒಳಗೊಳ್ಳುವಂತೆ ಸತ್ಯಾಗ್ರಹವನ್ನು ವಿಸ್ತರಿಸಲಾ ಯಿತು. ಈ ವಿಸ್ತೃತ ಕಾರ್ಯಕ್ರಮದ ಅಂಗವಾಗಿ ಗಾಂಧಿಜಿಯವರು ಜನರಿಗೆ ಹೊಸ ಆದೇಶಗಳನ್ನು ನೀಡಿದರು. ಇವುಗಳಲ್ಲಿ ಕೆಲವು ಇವು. ಈಚಲ ಮರಗಳನ್ನು ಕಡಿದುಹಾಕುವುದರ ಮೂಲಕ ಹೆಂಡ ತಯಾರಿಸುವು ದನ್ನೇ ತಪ್ಪಿಸಿ ಪಾನ ನಿರೋಧ ಯಶಸ್ವಿಯಾಗುವಂತೆ ಮಾಡುವುದು ಒಂದು ಕಾರ್ಯಕ್ರಮ. ಹೀಗೆ ಈಚಲಮರ ಕಡಿದು ಹಾಕುವ ಕಾರ್ಯಕ್ರಮದ ಆರಂಭೋತ್ಸವವನ್ನು ಗಾಂಧಿಜಿಯವರೇ ಸ್ವತಃ ಈಚಲಮರ ಕಡಿಯುವುದ ರಿಂದ ಉದ್ಘಾಟಿಸಿದರು. ವಿದೇಶಿ ಬಟ್ಟೆಗಳನ್ನು ಉಪಯೋಗಿಸುವುದನ್ನು ಬಹಿಷ್ಕರಿಸುವಂತೆಯೂ ಖಾದಿ ಉತ್ಪಾದನೆ ಹಾಗೂ ಉಪಯೋಗಿಸುವಿಕೆ ಯನ್ನು ಹೆಚ್ಚಿಸುವಂತೆಯೂ ಜನರನ್ನು ಪ್ರೇರೇಪಿಸಿದರು. ತಮ್ಮ ಸಭೆಗಳಿಗೆ ಬರುವವರೆಲ್ಲರೂ 'ತಕಲಿ'[1] ಮತ್ತು ಹತ್ತಿ ತೆಗೆದುಕೊಂಡು ಬಂದು ಭಾಷಣ ಕೇಳುತ್ತಿರುವಾಗ ನೂಲು ತೆಗೆಯುವಂತೆ ಜನರಿಗೆ ಹೇಳಿದರು.

ಉಪ್ಪಿನ ಸತ್ಯಾಗ್ರಹ ತೀವ್ರಗೊಳಿಸಿದುದು ಮತ್ತು ಗಾಂಧಿಜಿಯವರ ಬಂಧನ

ಉಪ್ಪಿನ ಸತ್ಯಾಗ್ರಹವನ್ನು ಚುರುಕುಗೊಳಿಸಲು ಉಪ್ಪು ತಯಾರಿಸು ವುದರ ಜೊತೆಗೆ ಧರ್ಸನ (Dharsana) ಮತ್ತು ಛರ್ಸದ (Chharsada)

1. 'ತಕಲಿ'– ಕೈಬೆರಳುಗಳ ಸಹಾಯದಿಂದ ಸುಲಭವಾಗಿ ನೂಲು ತೆಗೆಯುವ ಒಂದು ಅತಿ ಪುಟ್ಟ ಸಾಧನ.

ಎಂಬ ಎರಡು ಮುಖ್ಯ ಉಪ್ಪು ಕಾರ್ಖಾನೆಗಳ ಮೇಲೆ ಧಾಳಿ ನಡೆಸುವುದಾಗಿ ಗಾಂಧಿಜಿಯವರು ಘೋಷಿಸಿದರು. ಈ ಕಾರ್ಯ ಕೈಗೊಳ್ಳುವ ಮುನ್ನ ಗಾಂಧಿಜಿಯವರು ವೈಸರಾಯ್ ಅವರಿಗೆ ಪತ್ರ[1]ದ ಮೂಲಕ ಈ ವಿಷಯ ವನ್ನು ಅವರಿಗೆ ತಿಳಿಸಿದರು. ಈ ಪತ್ರದಲ್ಲಿ ಹೀಗೆ ಧಾಳಿ ನಡೆಸುವುದನ್ನು ವೈಸ್‌ರಾಯ್ ಅವರು ತಪ್ಪಿಸಲು ಈ ಮೂರು ಮಾರ್ಗಗಳಿವೆ ಎಂಬುದಾಗಿ ಸ್ವಾರಸ್ಯವಾಗಿ ಸೂಚಿಸಿದರು : 1) ಉಪ್ಪಿನ ತೆರಿಗೆ ರದ್ದುಗೊಳಿಸುವುದು. 2) ನನ್ನನ್ನೂ ನನ್ನ ಅನುಯಾಯಿಗಳನ್ನೂ, ನನ್ನ ಈ ಆದೇಶದಂತೆ ನಡೆ ಯುವ ಇತರರನ್ನೂ ಬಂಧಿಸುವುದು. 3) ಗೂಂಡಾಗಿರಿಯಿಂದ ಬಲ ಪ್ರಯೋಗ ಮಾಡಿ ನಮ್ಮನ್ನು ನಿಶ್ಚೇತನಗೊಳಿಸುವುದು. ಮುಂದುವರಿದು ಗಾಂಧಿಜಿಯವರು ವೈಸರಾಯ್ ಅವರಿಗೆ ತಮ್ಮ ಸತ್ಯಾಗ್ರಹ ತಂತ್ರದ ಮೂಲಭಾವನೆಗಳನ್ನು ಹೀಗೆ ವಿಶದಪಡಿಸಿದರು: 'ಸರ್ಕಾರವು ತನ್ನ ಅಧಿ ಕಾರ ಬಲಪ್ರಯೋಗ ಹೆಚ್ಚಿಸಿದಷ್ಟೂ, ಇದಕ್ಕೆ ಬಲಿಯಾಗುವ ಸತ್ಯಾಗ್ರಹಿ ಇನ್ನೂ ಹೆಚ್ಚು ನೋವುಗಳನ್ನು ಸ್ವಾಗತಿಸುತ್ತಾನೆ. ಹೀಗೆ ಸ್ವಯಂಪ್ರೇರಣೆ ಯಿಂದ ಅತ್ಯಂತ ಕಷ್ಟಕರವಾದ ನೋವುಗಳನ್ನು ಸಹಿಸಿಕೊಳ್ಳುತ್ತಾ ಬಂದರೆ ಯಶಸ್ಸು ಖಂಡಿತ'. ಈ ಪತ್ರದ ಕೊನೆಯಲ್ಲಿ ಉಪ್ಪಿನ ತೆರಿಗೆಯನ್ನು ರದ್ದುಗೊಳಿಸಿ ಖಾಸಗಿ ಉಪ್ಪು ತಯಾರಿಕೆಯ ಮೇಲಿನ ನಿರ್ಬಂಧಗಳನ್ನು ತೆಗೆಯದಿದ್ದರೆ ತಾವು ಹಾಕಿಕೊಂಡಿರುವ ಕಾರ್ಯಕ್ರಮದಂತೆ ಉಪ್ಪಿನ ಕಾರ್ಖಾನೆಗಳ ಮೇಲೆ ಧಾಳಿಗೆ ಹೊರಡುವರೆಂಬ ಎಚ್ಚರಿಕೆ ನೀಡಿದರು.

ಮೇಲಿನ ಪತ್ರಕ್ಕೆ ನೇರವಾಗಿ ಉತ್ತರ ಕೊಡದೆ ವೈಸರಾಯ್ ಅವರು ಗಾಂಧಿಜಿಯವರನ್ನು ಬಂಧಿಸಿದರು. ಇದು ಹಗಲು ಹೊತ್ತಿನಲ್ಲಿ ಮಾಡಿದ ಧೈರ್ಯದ ಕೆಲಸವಲ್ಲ. ಮಧ್ಯರಾತ್ರಿಯ ಒಂದು ಗಂಟೆ ಸಮಯದಲ್ಲಿ ಪೊಲೀಸರು ಹಠಾತ್ತಾಗಿ ಗಾಂಧಿಜಿಯವರ ಬಿಡಾರಕ್ಕೆ ಬಂದು ಮೋಟಾರು ಲಾರಿಯಲ್ಲಿ ಅವರನ್ನು ಗುಪ್ತವಾಗಿ ಕರೆದುಕೊಂಡು ಹೋದರು. ಮರುದಿನ ಬೆಳಗ್ಗೆ – 1930ರ ಮೇ 5 ರಂದು – ಯರವಾಡ ಜೈಲಿಗೆ ಅವರನ್ನು ಸೇರಿಸಿ ದಾಗಲೇ ಗಾಂಧಿಜಿ ಬಂಧನಕ್ಕೆ ಒಳಗಾದ ವಿಷಯ ಎಲ್ಲರಿಗೂ ತಿಳಿದುದು.

---

1 ಪತ್ರದ ಪೂರ್ಣ ವಿವರಗಳಿಗೆ ನೋಡಿ : Pattabhi Sitaramayya, *op. cit*, PP 662–666

ಪೋಲೀಸರಿಂದ ಬಂಧಿಸಲ್ಪಡುವಾಗ ಗಾಂಧಿಜಿಯವರು ಭಾರತದ ಜನತೆಗೆ ಒಂದು ಸಂದೇಶವನ್ನು ಬರೆಸಿದರು. ಇದು ಹೀಗಿತ್ತು "ಭಾರತದ ಆತ್ಮಗೌರವ ಹಾಗೂ ಸರ್ವಸ್ವವೂ ಈಗ ಒಂದು ಹಿಡಿ ಉಪ್ಪಿನಲ್ಲಿ ಅಡಕವಾಗಿದೆ. ಉಪ್ಪು ಹಿಡಿದಿರುವ ಮುಷ್ಟಿಯನ್ನು ಮುರಿದಾರು ಆದರೆ ಮುಷ್ಟಿಯನ್ನು ಮಾತ್ರ ತೆರೆಯಬಾರದು. ನಾನು ಬಂಧಿಸಲ್ಪಟ್ಟನಂತರ ಜನರಾಗಲಿ ನನ್ನ ಸಹಸತ್ಯಾಗ್ರಹಿಗಳಾಗಲಿ ಧೈರ್ಯಗೆಡಬಾರದು. ಈ ಹೋರಾಟವನ್ನು ನಿರ್ದೇಶಿಸುವವನು ನಾನಲ್ಲ, ದೇವರು. ದೇವರು ಪ್ರತಿಯೊಬ್ಬರ ಹೃದಯದಲ್ಲಿಯೂ ನೆಲೆಸಿರುತ್ತಾನೆ. ನಾವು ದೇವರಲ್ಲಿ ನಂಬಿಕೆ ಇಟ್ಟುಕೊಂಡರೆ ಅವನೇ ನಮಗೆ ದಾರಿ ತೋರಿಸುವನು. ಉಪ್ಪು ತಯಾರಿಸಲು ಇಡೀ ಗ್ರಾಮಗಳು ಮುಂದೆ ಬರಬೇಕು. ವಿದೇಶಿ ಬಟ್ಟೆ, ಮದ್ಯ ಹಾಗೂ ಅಫೀಮು ಅಂಗಡಿಗಳ ಮುಂದೆ ಹೆಂಗಸರು ಮುಷ್ಕರ ಹೂಡಬೇಕು. ಪ್ರತಿಯೊಂದು ಮನೆಯಲ್ಲಿಯೂ, ಚಿಕ್ಕವರು, ದೊಡ್ಡವರು ಎಲ್ಲರೂ 'ತಕಲಿ'ಯಲ್ಲಿ ನೂಲುವುದನ್ನು ಆರಂಭಿಸಬೇಕು ಹಾಗೂ ಪ್ರತಿದಿನವೂ ಹೀಗೆ ತೆಗೆದ ನೂಲು ರಾಶಿ ರಾಶಿಯಾಗುವಷ್ಟು ಪ್ರಮಾಣದಲ್ಲಿರಬೇಕು. ವಿದೇಶಿ ಬಟ್ಟೆಗಳನ್ನು ಬೆಂಕಿಗೆ ಆಹುತಿಮಾಡಬೇಕು. ಹಿಂದೂಗಳು ಯಾರನ್ನೂ ಅಸ್ಪೃಶ್ಯರೆಂದು ಭಾವಿಸಬಾರದು. ಹಿಂದೂಗಳು, ಮುಸಲ್ಮಾನರು, ಪಾರ್ಸಿಗಳು ಮತ್ತು ಕ್ರಿಶ್ಚಿಯನ್ನರು, ಎಲ್ಲರೂ ಒಬ್ಬರನ್ನೊಬ್ಬರು ಹೃತ್ಪೂರ್ವಕವಾಗಿ ಆಲಿಂಗಿಸಬೇಕು..... ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ಬಿಟ್ಟುಬಿಡಬೇಕು ಮತ್ತು ಸರ್ಕಾರಿ ನೌಕರರು ತಂತಮ್ಮ ಕೆಲಸಗಳಿಗೆ ರಾಜಿನಾಮೆ ಇತ್ತು ಜನಸೇವೆಯಲ್ಲಿ ನಿರತರಾಗಬೇಕು"[1] ಗಾಂಧಿಜಿಯವರು ನೀಡಿದ ಈ ಸಂದೇಶವನ್ನು ಭಾರತದ ಜನತೆ ಉತ್ಸಾಹದಿಂದ ಸ್ವಾಗತಿಸಿತು. ಹಾಗೂ ಜನರು ಅವರು ಹೇಳಿದಂತೆ ಚಳುವಳಿಯನ್ನು ಮುಂದುವರಿಸಿದರು. ರಾಜಕೀಯದಲ್ಲಿ ಅತ್ಯಂತ ಉದಾತ್ತ ನೈತಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆಂದು ಗಾಂಧಿಜಿ ನೀಡಿದ ಸಂದೇಶವನ್ನು ಅನೇಕ ಭಾರತೀಯ ನಾಯಕರು ಶ್ಲಾಘಿಸಿದರು.

ಗಾಂಧಿಜಿಯವರ ಬಂಧನದ ನಂತರ

ಗಾಂಧಿಜಿಯವರನ್ನು ಜೈಲಿಗೆ ಸೇರಿಸಿದುದು ಭಾರತದಾದ್ಯಂತವೂ

---

1. Pattabhi Sitaramayya, *op. cit*, P 667.

ತೀವ್ರ ಪರಿಣಾಮಗಳನ್ನು ಉಂಟುಮಾಡಿದುದಲ್ಲದೆ, ವಿದೇಶಗಳಲ್ಲಿಯೂ ಅನೇಕರ ಆಸಕ್ತಿಯನ್ನು ಕೆರಳಿಸಿತು. ಫ್ರಾನ್ಸಿನ ವೃತ್ತಪತ್ರಿಕೆಗಳು ಗಾಂಧಿಜಿ ಹಾಗೂ ಅವರ ಚಟುವಟಿಕೆಗಳನ್ನು ದೀರ್ಘವಾಗಿ ವಿವರಿಸಿದವು. ಜರ್ಮನಿಯ ಜವಳಿ ರಫ್ತು ವ್ಯಾಪಾರಿಗಳ ಭಾರತದಲ್ಲಿನ ಏಜೆಂಟರುಗಳು ಭಾರತಕ್ಕೆ ಬಟ್ಟೆ ರಫ್ತು ಮಾಡುವುದನ್ನು ನಿಲ್ಲಿಸಬೇಕೆಂದು ಆ ವ್ಯಾಪಾರಿಗಳಿಗೆ ಬರೆದರು. ಪನಾಮ ಮತ್ತು ನೈರೋಬಿಗಳಲ್ಲಿ ಇದ್ದ ಭಾರತೀಯರು ಹರತಾಳ ಆಚರಿಸಿದರು. "ಬ್ರಿಟನ್ನಿನ, ಭಾರತದ ಹಾಗೂ ಇಡೀ ಪ್ರಪಂಚದ ಹಿತದೃಷ್ಟಿಯಿಂದ ಮತ್ತು ಮಾನವಜನಾಂಗಕ್ಕೆ ವಿನಾಶಕರವಾಗಬಹುದಾದ ಘರ್ಷಣೆಯ ದುರಂತವನ್ನು ತಪ್ಪಿಸುವ ದೃಷ್ಟಿಯಿಂದ ಭಾರತದೊಡನೆ ಒಂದು ಒಪ್ಪಂದ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿ ಮನವಿಯೊಂದನ್ನು ಬ್ರಿಟಿಷ್ ಪ್ರಧಾನಿಯವರಿಗೆ ಅಮೆರಿಕದ ಅನೇಕ ಪಾದ್ರಿಗಳೂ ಹಾಗೂ ಇತರ ಪ್ರಮುಖ ವ್ಯಕ್ತಿಗಳೂ ಸಲ್ಲಿಸಿದರು.

ಗಾಂಧಿಜಿಯನ್ನು ಬಂಧಿಸಿ ಜೈಲಿನಲ್ಲಿ ಕೂಡಿದುದರಿಂದ ಅವರ ಬಗ್ಗೆ ಸಾರ್ವತ್ರಿಕವಾಗಿ ಎಲ್ಲರೂ ಅನುಕಂಪ ವ್ಯಕ್ತಪಡಿಸಿದುವೇ ಅಲ್ಲದೆ ಅವರು ಇತ್ತ ಸಂದೇಶದಂತೆ ಸ್ವಾತಂತ್ರ್ಯ ಹೋರಾಟಕ್ಕೆ ಸಹಸ್ರಾರು ಜನ ಸಿದ್ಧವಾದರು. ಸಹಸ್ರಾರು ಮಂದಿ ಮಹಿಳೆಯರೂ ಅಹಿಂಸಾತ್ಮಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದರು. ಸರ್ಕಾರಕ್ಕೆ ಇದು ಇಕ್ಕಟ್ಟಿನ ಪರಿಸ್ಥಿತಿಯನ್ನು ಉಂಟುಮಾಡಿತು. ಏಕೆಂದರೆ, ಹೆಂಗಸರ ಮೇಲೆ ಲಾಠಿಪ್ರಹಾರ ಮಾಡುವುದಕ್ಕೂ ಗುಂಡು ಹಾರಿಸುವುದಕ್ಕೂ ಪೋಲೀಸರು ಸ್ವಲ್ಪ ಹಿಂಜರಿಯುತ್ತಿದ್ದರು. ಆದರೆ ಈ ಮೃದು ಸ್ವಭಾವ ಬಹಳ ಕಾಲ ಉಳಿಯಲಿಲ್ಲ. ಹೆಂಗಸರೆಂಬುದನ್ನು ಲಕ್ಷಿಸದೆ ತಮ್ಮ ಕ್ರೂರ ದಮನ ವಿಧಾನಗಳನ್ನು ಅವರ ಮೇಲೆಯೂ ಪ್ರಯೋಗಿಸಿದರು. ದೇಶದ ನಾನಾ ಭಾಗಗಳಲ್ಲಿ ಹರತಾಳ, ಪ್ರತಿಭಟನಾ ಸೂಚಕ ಮೆರವಣಿಗೆ, ನಾಯಕರಿಂದ ಸಾರ್ವಜನಿಕ ಸಭೆಗಳಲ್ಲಿ ಭಾಷಣ, ಕಾರ್ಮಿಕರ ಮುಷ್ಕರಗಳು, ಕೆಲವು ಕಡೆಗಳಲ್ಲಿ ಪೋಲೀಸು ಚೌಕಿಗಳನ್ನು ಸುಟ್ಟುಹಾಕುವುದು ಇಂತಹ ಹಿಂಸಾಚಾರ ಚಟುವಟಿಕೆಗಳೂ ನಡೆದವು. ಇವೆಲ್ಲವೂ ಸೇರಿ ಸ್ವಾತಂತ್ರ್ಯ ಹೋರಾಟ ದೇಶಾದ್ಯಂತ ವ್ಯಾಪಕವಾಗಿ ನಡೆದು ವಾತಾವರಣವೆಲ್ಲವೂ ಸ್ವಾತಂತ್ರ್ಯ ಸ್ಫೂರ್ತಿಯಿಂದ ತುಂಬಿ

ದಂತಾಗಿದ್ದಿತು. ಆದರೆ ಸರ್ಕಾರವು ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕಲು ಲಾಠಿಪ್ರಯೋಗ, ಗುಂಡು ಹಾರಿಸುವುದು, ಜನರನ್ನು ಬಂಧಿಸಿ ಜೈಲಿಗೆ ನೂಕುವುದು, ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವುದು, ಇತ್ಯಾದಿಗಳನ್ನು ಮುಂದುವರಿಸಿತು. ಇವುಗಳಿಂದ ಉಂಟಾದ ಸಾವುನೋವುಗಳನ್ನೂ, ಜನ ಜೀವನಕ್ಕೆ ಆದ ಕಷ್ಟನಷ್ಟಗಳನ್ನೂ ವಾಚಕರೇ ಊಹಿಸಿಕೊಳ್ಳಬಹುದು.

ಉಪ್ಪಿನ ಸತ್ಯಾಗ್ರಹ ಮುಂದುವರಿದುದು

ಗಾಂಧಿಜಿಯವರ ಬಂಧನದ ನಂತರವೂ ಉಪ್ಪಿನ ಸತ್ಯಾಗ್ರಹ ಇತರ ಮುಖಂಡರ ನೇತೃತ್ವದಲ್ಲಿ ಬಿರುಸಾಗಿ ಮುಂದುವರಿಯಿತು. ಸರ್ಕಾರವು ಮುಖಂಡತ್ವ ವಹಿಸಿದವರನ್ನು ಶೀಘ್ರವಾಗಿಯೇ ಬಂಧಿಸಿ, ಜೈಲು ಶಿಕ್ಷೆ ವಿಧಿಸುತ್ತಾ ಬಂದಿತು. ಆದರೆ ಒಬ್ಬರನ್ನು ಬಂಧಿಸಿದ ಕೂಡಲೆ ಇನ್ನೊಬ್ಬರು ನಾಯಕತ್ವ ವಹಿಸುತ್ತಾ ಬಂದರು. ಹೀಗೆ ಮುಖಂಡತ್ವ ವಹಿಸಿ ಬಂಧಿಸಲ್ಪಟ್ಟು, ಜೈಲುವಾಸ ಅನುಭವಿಸಿದವರು ಕ್ರಮವಾಗಿ ಅಬ್ಬಾಸ್ ತಯಾಬ್ಜಿ, ಸರೋಜಿನಿ ನಾಯ್ಡು, ಇಮಾಂ ಸಾಹಿಬ್, ಪ್ಯಾರೆಲಾಲ್, ಮಣಿಲಾಲ್ ಗಾಂಧಿ ಇತ್ಯಾದಿ ಇನ್ನೂ ಅನೇಕರು. ಗಾಂಧಿಜಿಯವರ ಇಚ್ಛೆಯಂತೆ ಹೀಗೆ ಉಪ್ಪಿನ ಸತ್ಯಾಗ್ರಹದ ಮುಖಂಡತ್ವ ಅಭಂಗವಾಗಿ ಮುಂದುವರೆದು ಸತ್ಯಾಗ್ರಹ ಕಾರ್ಯಾಚರಣೆಗಳೂ ತಡೆಯಿಲ್ಲದೆ ನಡೆದವು. 1930ರ ಏಪ್ರಿಲ್ ಆರರಂದು ಪ್ರಾರಂಭವಾದ ಉಪ್ಪಿನ ಸತ್ಯಾಗ್ರಹ ಚಳುವಳಿಯು 1930–31 ರಲ್ಲಿ ತುಂಬ ಬಿರುಸಾಗಿ ಸಾಗಿತು. ಹಿರಿಯ ಮುಖಂಡರುಗಳೆಲ್ಲರೂ – ಸರೋಜಿನಿ ನಾಯ್ಡು, ಕಮಲ ನೆಹರೂ (ಜವಾಹರ್‌ಲಾಲ್ ನೆಹರೂ ಅವರ ಪತ್ನಿ) ಅವರು ಸೇರಿದಂತೆ ಕೆಲವು ಮಹಿಳಾ ಮುಖಂಡರೂ ಸೇರಿದಂತೆ – ಬಂಧಿಸಲ್ಪಟ್ಟಿದ್ದರು. ಭಾರತದ ಜೈಲಿನೊಳಗೆ ಈ ಮುಖಂಡರು ಹಾಗೂ ಇತರ ಸ್ವಾತಂತ್ರ್ಯ ಚಳುವಳಿಗಾರರಿಗೆ ಇನ್ನೊಂದು ಜೈಲು !

ಉಪ್ಪಿನ ಸತ್ಯಾಗ್ರಹದಲ್ಲಿ ಅನೇಕ ಉಪ್ಪಿನ ಮಳಿಗೆಗಳು (Salt-Depots)ಧಾಳಿ ಮಾಡಲ್ಪಟ್ಟವು. ಇವುಗಳಲ್ಲಿ ಅತ್ಯಂತ ಮುಖ್ಯವಾದುವು ಧರ್ಸನ ಮತ್ತು ವಡಾಲ ಉಪ್ಪಿನ ಮಳಿಗೆಗಳು. ದೇಶದ ವಿವಿಧ ಭಾಗಗಳಿಂದ ಬಂದ ಸ್ವಯಂಸೇವಕರು ಈ ಧಾಳಿಗಳಲ್ಲಿ ಭಾಗವಹಿಸಿದರು.

ಸಾಮಾನ್ಯವಾಗಿ ಒಂದೊಂದು ಧಾಳಿಯಲ್ಲೂ ಸಾವಿರಾರು ಜನರು ಪಾತ್ರ ವಹಿಸಿದರು. ಕರ್ಣಾಟಕದ ಸನಿಕಟ ಅಂತಹ ಪ್ರಾದೇಶಿಕ ಉಪ್ಪಿನ ಮಳಿಗೆ ಗಳೂ ಜನರ ಧಾಳಿಗೆ ತುತ್ತಾದವು. ಸರ್ಕಾರವು ಧಾಳಿಕಾರರನ್ನು ಅತ್ಯಂತ ಕ್ರೂರ ಶಿಕ್ಷೆಗಳಿಗೆ ಒಳಪಡಿಸಿತು.[1] ಉಪ್ಪಿನ ಸತ್ಯಾಗ್ರಹಿಗಳನ್ನು ದಮನ ಮಾಡುತ್ತಿದ್ದ ಸರ್ಕಾರದ ಕ್ರೂರ ವಿಧಾನಗಳನ್ನು ನೋಡಿದವ ರೆಲ್ಲರೂ – ವಿದೇಶಿಯರೂ ಸೇರಿದಂತೆ – ಸರ್ಕಾರದ ಬಗ್ಗೆ ಅತ್ಯಂತ ಬೇಜಾರು ಪಟ್ಟರು. ಸತ್ಯಾಗ್ರಹಿ ಸ್ವಯಂಸೇವಕರ ಮೇಲೆ ಭಾರತ ದೇಶದವರೇ ಆದ ಅಧಿಕಾರಿಗಳು ಮತ್ತು ಪೊಲೀಸಿನವರು ಲಾಠಿಪ್ರಹಾರ ಹಾಗೂ ಗುಂಡು ಹೊಡೆಯುವುದನ್ನು ನೋಡುವುದು ಆಂಗ್ಲೇಯನಾದ ನನ್ನಂತಹವರಿಗೆ ಶುದ್ಧ ಅವಮಾನಕರವಾದುದೆಂದು ಲಂಡನ್ನಿನ ಪ್ರಮುಖ ಪತ್ರಿಕೆ 'ಡೆಯ್ಲಿ ಹೆರಾಲ್ಡ್'ನ ಬಾತ್ಮಿದಾರನು ಈ ದೃಶ್ಯಗಳನ್ನು ನೋಡಿದಾಗ ಹೇಳಿದನು. ಇನ್ನೊಂದು ಅತಿಮುಖ್ಯ ಬ್ರಿಟಿಷ್ ಪತ್ರಿಕೆಯಾದ 'ಮ್ಯಾಂಚೆಸ್ಟರ್ ಗಾರ್ಡಿ ಯನ್' ಎಂಬುದರ ಪ್ರತಿನಿಧಿಯೂ ಚಳುವಳಿಗಾರರ ಮೇಲೆ ಸರ್ಕಾರವು ನಡೆಸುತ್ತಿದ್ದ ಕ್ರೂರ ಹಾಗೂ ಅನಾಗರಿಕ ಕಾರ್ಯಗಳ ಬಗ್ಗೆ ತನ್ನ ಪತ್ರಿಕೆಗೆ ವರದಿ ಮಾಡಿದನು. ಈ ಸತ್ಪುರುಷರು ಭಾರತದ ಸ್ವಾತಂತ್ರ್ಯ ಕೇಳಿಕೆಯ ಬಗ್ಗೆ ಸಹಾನುಭೂತಿಯಿದ್ದ ಒಂದು ಗುಂಪಿನ ಆಂಗ್ಲೇಯರನ್ನು ಪ್ರತಿನಿಧಿ ಸುತ್ತಾರೆಂದು ಹೇಳಬಹುದು. ಆದರೆ, ಈ ಸಹೃದಯರ ಅಭಿಪ್ರಾಯಗಳು ಬ್ರಿಟಿಷ್ ಸರ್ಕಾರದ ಮೇಲೆ ಆಗ ಏನೂ ಪ್ರಭಾವ ಬೀರಲಿಲ್ಲ. ಸರ್ಕಾರವು ತನ್ನದೇ ಆದ ದಮನ ಕಾರ್ಯಗಳನ್ನು ಮುಂದುವರಿಸಿತು. ಆದರೆ ಭಾರ ತೀಯರು ಇವುಗಳಿಗೆ ಮಣಿಯಲಿಲ್ಲ. ಚಳುವಳಿಯನ್ನು ಮುಂದುವರಿ ಸುತ್ತಾ ಬಂದರು.

ಗಾಂಧಿಜಿ ಬಂಧನದನಂತರ ಕಾಂಗ್ರೆಸ್ಸು ಸತ್ಯಾಗ್ರಹವನ್ನು ವಿಸ್ತರಿಸಿದುದು

ಉಪ್ಪಿನ ಸತ್ಯಾಗ್ರಹಕ್ಕೆ ಪ್ರಾಧಾನ್ಯ ನೀಡಿ ಗಾಂಧಿಜಿಯವರು ಆರಂಭಿ

---

1. ಉಪ್ಪಿನ ಮಳಿಗೆ ಧಾಳಿಕಾರರ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳ ವಿವರಣೆಗೆ ಅನುಬಂಧ ನೋಡಿ.

ಸಿದ ಸತ್ಯಾಗ್ರಹದ ವಿಸ್ತೃತ ಕಾರ್ಯಕ್ರಮವನ್ನು[1] ಗಾಂಧಿಜಿಯವರ ಬಂಧನದ ನಂತರ ಕಾಂಗ್ರೆಸ್ಸು ಅನುಮೋದಿಸಿತು. ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಈ ಸಂಬಂಧದಲ್ಲಿ ಅನುಮೋದಿಸಿದ ದೀರ್ಘ ನಿರ್ಣಯವು, ವಿದೇಶಿ ಬಟ್ಟೆಗಳನ್ನು ಸುಡುವುದು, ವಿದೇಶಿ ಬಟ್ಟೆಗಳ ಹಾಗೂ ಹೆಂಡದ ಅಂಗಡಿಗಳ ಮುಂದೆ ಮುಷ್ಕರ ಹೂಡುವುದು, ಬ್ರಿಟಿಷರ ಬ್ಯಾಂಕು, ವಿಮೆ, ನೌಕೆ ಹಾಗೂ ಇತರ ಬ್ರಿಟಿಷ್ ಸಂಸ್ಥೆಗಳನ್ನು ಬಹಿಷ್ಕರಿಸುವುದು, ಅರಣ್ಯ ಕಾನೂನುಗಳನ್ನು ಮುರಿಯುವುದು, ಭೂಕಂದಾಯ ಕೊಡಲು ನಿರಾಕರಿಸುವುದು, ಪ್ರೆಸ್ ಸುಗ್ರೀವಾಜ್ಞೆಯನ್ನು ಧಿಕ್ಕರಿಸುವುದು ಇತ್ಯಾದಿ ಕಾರ್ಯಕ್ರಮಗಳೆಲ್ಲವನ್ನೂ ಒಳಗೊಂಡಿದ್ದಿತು. ಈ ಮುಖ್ಯವಾದ ನಿರ್ಣಯದ ಮೂಲಕ ಕಾಂಗ್ರೆಸ್ಸು ಜನತೆಗೆ ನೀಡಿದ ಕರೆಗೆ ಪ್ರತಿಕ್ರಿಯೆಯಾಗಿ ದೇಶದಲ್ಲಿ ಹಿಂದೆ ಎಂದೂ ನಡೆಯದಿದ್ದಷ್ಟು ಬ್ರಿಟಿಷರ ವಿರುದ್ಧದ ಪ್ರತಿಭಟನಾ ಸೂಚಕ ಚಟುವಟಿಕೆಗಳು ನಡೆದವು. ಇವುಗಳ ವಿವರಣೆ ಒಂದು ದೀರ್ಘ ಕಥೆಯಾಗುವುದು. ಪ್ರಕೃತ ಸಂಕ್ಷಿಪ್ತವಾಗಿ ಇಷ್ಟು ಹೇಳಬಹುದು. ಪ್ರತಿಯೊಂದು ಪ್ರಾಂತ್ಯದ ಮತ್ತು ಸಂಸ್ಥಾನದ ಜನರೂ ಈ ಮೇಲೆ ಹೇಳಿದ ರೂಪಗಳ ಸತ್ಯಾಗ್ರಹವನ್ನು ಬಹುಮಟ್ಟಿಗೆ ಗಾಂಧಿಜಿಯವರ ಆದೇಶದಂತೆ ಅಹಿಂಸಾ ರೂಪದಲ್ಲಿ ನಡೆಸಿದರು. ಇವರುಗಳು ಸರ್ಕಾರದ ಕ್ರಮಗಳಿಂದ ಅನುಭವಿಸಿದ ಕಷ್ಟನಷ್ಟಗಳೂ ಒಂದೇ ತರಹದ್ದಾಗಿದ್ದಿತು. ಲಾಠಿಪ್ರಹಾರ, ಗುಂಡಿಗೆ ಬಲಿಯಾಗುವುದು, ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವುದು, ಬಂಧನಕ್ಕೆ ಒಳಗಾಗಿ ಜೈಲುವಾಸ ಅನುಭವಿಸುವುದು, ಇತ್ಯಾದಿಗಳೆಲ್ಲವನ್ನೂ ಈ ಚಳುವಳಿಯಲ್ಲಿ ಜನರು ಧೈರ್ಯ ಸ್ಥೈರ್ಯಗಳಿಂದ ಸಹಿಸಿದರು.

ಬ್ರಿಟಿಷ್ ಸರ್ಕಾರದ ದುಂಡು ಮೇಜಿನ ಸಮ್ಮೇಳನದ ಸಲಹೆ

ಮೇಲೆ ವಿವರಿಸಿರುವಂತೆ ಭಾರತದ ಆದ್ಯಂತವೂ ಸತ್ಯಾಗ್ರಹ ಚಳುವಳಿಯು ಅತ್ಯಂತ ಬಿರುಸಾಗಿ ನಡೆಯುವುದನ್ನು ಗಮನಿಸಿದ ಬ್ರಿಟಿಷ್ ಸರ್ಕಾರವು ದುಂಡು ಮೇಜಿನ ಸಮ್ಮೇಳನದ ಮೂಲಕ ಭಾರತದ ರಾಜಕೀಯ

---

1. ಈ ವಿಸ್ತೃತ ಕಾರ್ಯಕ್ರಮದ ಪೂರ್ಣ ವಿವರಗಳಿಗೆ ನೋಡಿ: Pattabhi Sitaramayya *op. cit.* PP 671-673

ಸಮಸ್ಯೆಯನ್ನು ಬಗೆಹರಿಸುವ ಆಲೋಚನೆ ಮಾಡಿತು. ಕಾಂಗ್ರೆಸ್ಸನ್ನು ಅಲಕ್ಷಿಸಿ ಮೊದಲ ದುಂಡು ಮೇಜಿನ ಸಮ್ಮೇಳನ ನಡೆಸಿದುದು ನಿಷ್ಫಲವಾದುದನ್ನು ನೋಡಿ, ಎರಡನೆ ಸಮ್ಮೇಳನಕ್ಕೆ ಕಾಂಗ್ರೆಸ್ಸಿನ ಮನವೊಲಿಸಿದುದನ್ನೂ, ಗಾಂಧಿಜಿಯವರು ಕಾಂಗ್ರೆಸ್ಸಿನ ಪರವಾಗಿ ಲಂಡನ್ನಿನಲ್ಲಿ ನಡೆದ ಈ ಸಮ್ಮೇಳನಕ್ಕೆ ಹೋಗಿ ಸಕ್ರಿಯವಾಗಿ ಭಾಗವಹಿಸಿದುದನ್ನೂ, ಆದರೆ ಈ ಸಮ್ಮೇಳನವೂ ವಿಫಲವಾದುದನ್ನೂ ಮತ್ತು ದುಂಡು ಮೇಜಿನ ಸಮ್ಮೇಳನಗಳ ಇತರ ವಿವರಣೆಗಳನ್ನೂ ಹಿಂದಿನ ಅಧ್ಯಾಯದಲ್ಲಿ ಕೊಡಲಾಗಿದೆ.

ಎರಡನೆ ದುಂಡು ಮೇಜಿನ ಸಮ್ಮೇಳನದ ತರುವಾಯ

ಎರಡನೆ ದುಂಡು ಮೇಜಿನ ಸಮ್ಮೇಳನವು ವಿಫಲವಾದನಂತರ ಇದರಲ್ಲಿ ಭಾಗವಹಿಸಿದ್ದ ಮಹಾತ್ಮಾ ಗಾಂಧಿಯವರು ಅತ್ಯಂತ ದುಃಖಿತರಾಗಿ ಹಿಂತಿರುಗಿದರು. ಮುಸಲ್ಮಾನ ಮುಖಂಡರು ಪ್ರತ್ಯೇಕತಾವಾದವನ್ನು ಬಿಡದುದು ಮತ್ತು ಬ್ರಿಟಿಷರ 'ವಿಭಜಿಸು, ಆಳು' (Divide and Rule) ಮನೋಭಾವ ಅವರ ಈ ದುಃಖಕ್ಕೆ ಕಾರಣವಾಗಿದ್ದವು. ಕಾಂಗ್ರೆಸ್ ಮುಖಂಡರುಗಳೆಲ್ಲರಿಗೂ ಬ್ರಿಟಿಷರು ಏರ್ಪಡಿಸಿದ್ದ ದುಂಡು ಮೇಜಿನ ಸಮ್ಮೇಳನದ ಬಗ್ಗೆ ತೀವ್ರ ಅಸಮಾಧಾನವಾಯಿತು. ಈ ಸನ್ನಿವೇಶದಲ್ಲಿ ಕಾಂಗ್ರೆಸ್ಸು ತನ್ನ ಸತ್ಯಾಗ್ರಹ ಚಳುವಳಿಯನ್ನು ಇನ್ನೂ ತೀವ್ರಗೊಳಿಸಿತು. ಉತ್ತರ ಪ್ರದೇಶದಲ್ಲಿ ಜಮೀನ್ದಾರರ ವಿರುದ್ಧ 'ಗೇಣಿ ಕೊಡುವುದಿಲ್ಲ' ('No-Rent') ಎಂಬ ಚಳುವಳಿ ಭರದಿಂದ ಸಾಗಿತು. ಈ ಚಳುವಳಿಯಲ್ಲಿ ಸರ್ಕಾರವು ಜಮೀನ್ದಾರರನ್ನು ಬೆಂಬಲಿಸಿತು. ವಾಯುವ್ಯಗಡಿ ಪ್ರಾಂತದಲ್ಲಿ ಡಾ. ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಡಾ. ಖಾನ್ ಸಾಹಿಬ್ ಎಂಬ ಹಿರಿಯ ಮುಖಂಡರು 'ಖುದೈಖಿದ್‌ಮತ್‌ಗಾರ್ಸ್' ಎಂಬ 'ಕೆಂಪು ಶರ್ಟಿನ' (Red Shirts) ಸ್ವಯಂಸೇವಕರ ತಂಡವೊಂದನ್ನು ಚೆನ್ನಾಗಿ ವ್ಯವಸ್ಥೆಗೊಳಿಸಿ ಇವರುಗಳು ಗಾಂಧೀಜಿಯವರ ನೇತೃತ್ವದ ಸತ್ಯಾಗ್ರಹ ಚಳುವಳಿಗೆ ತುಂಬ ನೆರವಾದರು.

ಸತ್ಯಾಗ್ರಹ ಚಳುವಳಿ ಹೀಗೆ ಇನ್ನೂ ಹೆಚ್ಚು ತೀವ್ರಗೊಂಡಂತೆ ಸರ್ಕಾರದ ದಮನಕಾರ್ಯಗಳೂ ಇನ್ನೂ ಕಠೋರವಾದವು. ಭಾರತೀಯ ರಾಷ್ಟ್ರೀಯ ಚಳುವಳಿಗಾರರನ್ನು ನಿಸ್ಸತ್ವ ಮಾಡುವುದೇ ವೈಸರಾಯ್

ಲಾರ್ಡ್ ವಿಲಿಂಗ್‌ಡನ್ ಅವರ ಉದ್ದೇಶವಾಗಿದ್ದಿತು. ಇದಕ್ಕಾಗಿ ಸರ್ಕಾರಕ್ಕೆ ವಿಶೇಷ ಅಧಿಕಾರ ನೀಡುವ ಕೆಲವು ಸುಗ್ರೀವಾಜ್ಞೆಗಳನ್ನು[1] (Ordinances) ಹೊರಡಿಸಿದರು. ಈ ಸುಗ್ರೀವಾಜ್ಞೆಗಳಿಂದ ಸರ್ಕಾರದ ಸರ್ವಾಧಿಕಾರದ ದಮನ ಯಂತ್ರವು ಪರಿಪೂರ್ಣವಾಯಿತು. ಯಾರನ್ನು ಹೇಗೆ ಬೇಕಾದರೂ ಶಿಕ್ಷಿಸಬಹುದಾಗಿತ್ತು. ಈ ಅಧಿಕಾರದ ಉಪಯೋಗದಿಂದ (ದುರುಪಯೋಗದಿಂದ!) ಸತ್ಯಾಗ್ರಹ ಚಳುವಳಿಯ ಯಾವುದೇ ರೂಪದಲ್ಲಿ ಎಷ್ಟೇ ಅಹಿಂಸಾತ್ಮಕವಾಗಿ ನಿರತರಾಗಿದ್ದವರನ್ನೂ ಸರ್ಕಾರವು ದೌರ್ಜನ್ಯದಿಂದ ಅನಾಗರಿಕ ಪದ್ಧತಿಯಿಂದ ಹಿಂಸೆಗೂ, ನೋವಿಗೂ, ಶಿಕ್ಷೆಗೂ ಒಳಪಡಿಸಿತು. ಮಹಾತ್ಮಾ ಗಾಂಧಿಯವರೇ ಆದಿಯಾಗಿ ಎಲ್ಲಾ ರಾಷ್ಟ್ರೀಯ ಮುಖಂಡರನ್ನೂ, ಅನೇಕ ಪ್ರಾದೇಶಿಕ ಮುಖಂಡರನ್ನೂ, ಸಾವಿರಾರು ಇತರ ಕಾಂಗ್ರೆಸ್ಸಿನವರನ್ನೂ ಸರ್ಕಾರವು ಜೈಲಿಗೆ ಸೇರಿಸಿತು. ಖಾನ್ ಅಬ್ದುಲ್ ಗಫಾರ್‌ಖಾನ್ ಅವರ 'ಕೆಂಪು ಶರ್ಟಿನ' ಸ್ವಯಂಸೇವಕರ ವ್ಯವಸ್ಥೆಯನ್ನು ಕಾನೂನುಬಾಹಿರವೆಂದು ಘೋಷಿಸಲಾಯಿತು. ಕಾಂಗ್ರೆಸ್ ಕಚೇರಿಗಳನ್ನೂ ಆಶ್ರಮಗಳನ್ನೂ ಸರ್ಕಾರವು ತನ್ನ ವಶಪಡಿಸಿಕೊಂಡಿತು. ಚಳುವಳಿಯಲ್ಲಿ ಭಾಗವಹಿಸುತ್ತಿದ್ದವರ ಮನೆಗಳನ್ನೂ, ಆಸ್ತಿಪಾಸ್ತಿಗಳನ್ನೂ ಮುಟ್ಟುಗೋಲು ಹಾಕಿ ವಶಪಡಿಸಿಕೊಂಡಿತು; ಅನೇಕರ ಆಸ್ತಿಯನ್ನು ನಾಶಪಡಿಸಲಾಯಿತು. ಸತ್ಯಾಗ್ರಹಕ್ಕಾಗಿ ಗುಂಪು ಸೇರಿದವರನ್ನು ಬಲಪ್ರಯೋಗದಿಂದ ಚದುರಿಸಲಾಯಿತು.

ಮೇಲಿನಂತಹ ಅತ್ಯಂತ ಕಠಿಣವಾದ ಕ್ರಮಗಳನ್ನು ಸರ್ಕಾರವು ಕೈಗೊಂಡಾಗ್ಯೂ ಚಳುವಳಿಯನ್ನು ನಿಲ್ಲಿಸದೆ ಸ್ಥಿರಮನಸ್ಸಿನಿಂದ ಭಾರತದ ಜನತೆಯು ಮುಂದುವರಿಸಿದುದು ಶ್ಲಾಘನೀಯ ವಿಷಯವಾಗಿದೆ. 'ಏಳಿ, ಎದ್ದೇಳಿ, ಗುರಿ ತಲುಪುವವರೆಗೆ ನಿಲ್ಲದಿರಿ' ('Arise, Awake, Stop

---

1. ಸುಗ್ರೀವಾಜ್ಞೆಗಳಲ್ಲಿ ಕೆಲವು ಇವು :

ದಿ ಎಮರ್ಜೆನ್ಸಿ ಪವರ್ಸ್ ಆರ್ಡಿನೆನ್ಸ್

ಅನ್‌ಲಾಫುಲ್ ಇನ್‌ಸ್ಟಿಗೇಷನ್ ಆರ್ಡಿನೆನ್ಸ್

ಅನ್‌ಲಾಫುಲ್ ಅಸೋಷಿಯೇಶನ್ ಆರ್ಡಿನೆನ್ಸ್

ಪ್ರಿವೆನ್‌ಷನ್ ಆಫ್ ಮೊಲ್‌ಸ್ಟೇಷನ್ ಅಂಡ್ ಬಾಯ್‌ಕಾಟ್ ಆರ್ಡಿನೆನ್ಸ್

not till the Goal is Reached') ಎಂಬ ಸ್ವಾಮಿ ವಿವೇಕಾನಂದ ವಾಣಿಯ ವಾಸ್ತವ ಪ್ರಯೋಗವು ಇವರ ಸಂಕಲ್ಪಿತ ಗುರಿಸಾಧನೆಯ ಪ್ರಯತ್ನದಲ್ಲಿ ಪ್ರತಿಬಿಂಬಿತವಾಗುವುದು. ಸಭೆಗಳನ್ನೂ ಪ್ರತಿಭಟನಾ ಮೆರವಣಿಗೆಗಳನ್ನೂ ಏರ್ಪಡಿಸುವುದು, ತೆರಿಗೆ ನಿರಾಕರಿಸುವುದೂ, ಕಾನೂನು ಭಂಗ ಮಾಡಿ ಉಪ್ಪು ತಯಾರಿಸುವುದೂ, ವಿದೇಶಿ ಬಟ್ಟೆಗಳ ಮತ್ತು ಹೆಂಡದ ಅಂಗಡಿಗಳ ಮುಂದೆ ಮುಷ್ಕರ ಹೂಡುವುದೂ, ಸರ್ಕಾರಿ ಕಟ್ಟಡಗಳ ಮೇಲೆ ರಾಷ್ಟ್ರೀಯ ಧ್ವಜ ಏರಿಸುವುದೂ ಇತ್ಯಾದಿಗಳೆಲ್ಲವನ್ನೂ ಭಾರತದ ಜನತೆ ಮುಂದುವರಿಸುತ್ತಾ ಬಂದಿತು. ರಾಷ್ಟ್ರೀಯ ಮುಸಲ್ಮಾನ ಪಕ್ಷ (Nationalist Muslims), ಜಮಾಯಿತ್-ಉಲ್-ಉಲೇಮಾ ಹಿಂದ್ ಪಕ್ಷವೂ ಕಾಂಗ್ರೆಸ್ಸಿನೊಡನೆ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದವು.

ಸರ್ಕಾರವು ಕಾಂಗ್ರೆಸ್ಸಿನ ಪ್ರಚಾರಕಾರ್ಯಗಳಿಗೆ ಅಡ್ಡಿ ಅಡಚಣೆಗಳನ್ನು ಉಂಟುಮಾಡಿದುದಲ್ಲದೆ ಕಾಂಗ್ರೆಸ್ಸಿನ ವಿರುದ್ಧ ಅಪಪ್ರಚಾರವನ್ನೂ ನಡೆಸಿತು. ಈ ಅಪಪ್ರಚಾರಕ್ಕೆ ಒಂದು ನಿದರ್ಶನ ಕೊಡಬಹುದು. 1930ರ ದಶಕದ ಆದಿಭಾಗದಲ್ಲಿ ಪ್ರಪಂಚದ ಎಲ್ಲಾ ಕಡೆಯೂ ಬೆಲೆಗಳು ಕುಸಿದಂತೆ ಭಾರತದಲ್ಲಿಯೂ ಬೆಲೆಗಳು ತೀವ್ರವಾಗಿ ಇಳಿದವು. ಆದರೆ, ರೈತವರ್ಗದವರಿಗೆ ಕಷ್ಟನಷ್ಟಗಳನ್ನು ಉಂಟುಮಾಡಿದ ಈ ಬೆಲೆಗಳ ಕುಸಿತಕ್ಕೆ ಕಾಂಗ್ರೆಸ್ಸೇ ಕಾರಣ ಎಂಬ ಆಶ್ಚರ್ಯಕರ ತಪ್ಪು ಸಮಾಚಾರವನ್ನು ಒಳಗೊಂಡ ಭಿತ್ತಿಪತ್ರಗಳನ್ನು ಸರ್ಕಾರವು ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ವಿಸ್ತಾರವಾಗಿ ಹಂಚಿತು. ಇದರಿಂದ ಕಾಂಗ್ರೆಸ್ಸಿನ ಪ್ರಭಾವ ಕಡಿಮೆಯಾಗುವುದೆಂಬುದೇ ಸರ್ಕಾರದ ಆಕಾಂಕ್ಷೆಯಾಗಿದ್ದಿತು[1].

ಮೇಲೆ ಹೇಳಿರುವಂತೆ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಾಗ ಸರ್ಕಾರವು, ಒಂದು ಕಡೆ ಈ ಚಳುವಳಿಯನ್ನು ಬಲಪ್ರಯೋಗದಿಂದ ಹತ್ತಿಕ್ಕುವ ಪ್ರಯತ್ನ ಮಾಡಿತು. ಇನ್ನೊಂದು ಕಡೆ ರಾಜಕೀಯ ಸಮಸ್ಯೆಗೆ ಪರಿಹಾರ ನೀಡುವ ದೃಷ್ಟಿಯಿಂದ ಪುನಃ ದುಂಡುಮೇಜಿನ ಸಮ್ಮೇಳನವನ್ನೇ ಸಮಾವೇಶಗೊಳಿಸಿತು. ಭಾರತದ ಹಾಗೂ ಬ್ರಿಟಿಷ್

1. Jawaharlal Nehru, *Autobiography*, P 331

ಪಕ್ಷಗಳಿಲ್ಲದರ ಪೂರ್ಣ ಪ್ರಾತಿನಿಧ್ಯವಿಲ್ಲದ ಈ ಮೂರನೆಯ ಅಸಂಪೂರ್ಣ ದುಂಡುಮೇಜಿನ ಸಮ್ಮೇಳನಕ್ಕೆ ಬ್ರಿಟಿಷ್ ಸರ್ಕಾರವು ಒಂದು ಪೂರ್ಣತೆಯ ಆಕಾರ ಕೊಟ್ಟುದುದನ್ನೂ ತರುವಾಯ 'ಭಾರತ ಸರ್ಕಾರದ ಮಸೂದೆ' ಯೊಂದನ್ನು 1935 ರಲ್ಲಿ ಅನುಮೋದಿಸಿದುದನ್ನೂ ಹಿಂದಿನ ಅಧ್ಯಾಯ ದಲ್ಲಿಯೇ ವಿವರಿಸಲಾಗಿದೆ. 1935ರ ಈ ರಾಜಕೀಯ ಸುಧಾರಣೆ ಮಸೂದೆಯ ನಂತರ 1942 ರವರೆಗೆ ಸ್ವಾತಂತ್ರ್ಯ ಚಳುವಳಿ ಹೇಗೆ ಸಾಗಿತು ಎಂಬುದರ ವಿವರಣೆಯನ್ನು ಮುಂದಿನ ಅಧ್ಯಾಯದಲ್ಲಿ ಕೊಡಲಾಗುವುದು.

ಅಧ್ಯಾಯ - 12

1930ರ ದಶಕದ ಉತ್ತರಾರ್ಧದ ಸ್ವಾತಂತ್ರ್ಯ ಚಳುವಳಿ

ಪ್ರಾಂತ್ಯಗಳಲ್ಲಿ ಸಚಿವ ಪದವಿಗಳನ್ನು ಸ್ವೀಕರಿಸಿ ಈ ಸ್ಥಾನಬಲವನ್ನು ಸ್ವಾತಂತ್ರ್ಯ ಚಳುವಳಿಯನ್ನು ಬಲಗೊಳಿಸಲು ಉಪಯೋಗಿಸಲು ಕಾಂಗ್ರೆಸ್ಸು ಸಂಸ್ಥೆ ಪ್ರಯತ್ನಿಸಿದುದು, ಸುಭಾಷ್‌ಚಂದ್ರ ಬೋಸ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ಸಿಗರ ಒಂದು ಗುಂಪು ರಾಷ್ಟ್ರೀಯ ಹೋರಾಟಕ್ಕೆ ಹೆಚ್ಚು ಉಗ್ರ ಕ್ರಮಗಳಿಗೆ ಪ್ರಯತ್ನಿಸಿದುದು, ಕಾಂಗ್ರೆಸ್ಸು ಮುಸ್ಲಿಂ ಲೀಗು ಇವೆರಡರ ನಡುವಣ ಭಿನ್ನಾಭಿಪ್ರಾಯಗಳು ಹೆಚ್ಚು ತೀವ್ರ ಸ್ವರೂಪ ಹೊಂದಿ ಪಾಕಿಸ್ತಾನ ಭಾವನೆ ಜನ್ಮತಾಳಿದುದು, ಸಮಾಜವಾದಿ ಪದ್ಧತಿಯ ಧೋರಣೆ ಅನುಸಾರವಾಗಿ ರಾಜಕೀಯ ಚಟುವಟಿಕೆಗಳನ್ನು ಎಂ. ಎನ್. ರಾಯ್ ಅವರು ವ್ಯವಸ್ಥೆಗೊಳಿಸಿದುದು, 1939 ರಲ್ಲಿ ದ್ವಿತೀಯ ಪ್ರಪಂಚ ಯುದ್ಧ ಸ್ಫೋಟಿಸಿ ಭಾರತದ ಸ್ವಾತಂತ್ರ್ಯ ಚಳುವಳಿಯ ಮೇಲೆ ಅದರಿಂದ ಆದ ಪ್ರಭಾವ ಮತ್ತು ಪರಿಣಾಮಗಳನ್ನು ಉಂಟುಮಾಡಿದುದು - ಇವು 1930ರ ದಶಕದ ಉತ್ತರಾರ್ಧದ ಭಾರತದ ಸ್ವಾತಂತ್ರ್ಯ ಚಳುವಳಿ ಇತಿಹಾಸದ ಮುಖ್ಯ ಘಟನೆಗಳು. ಇವುಗಳ ಸಂಕ್ಷಿಪ್ತ ವಿವರಣೆ ಈ ಅಧ್ಯಾಯದ ಉದ್ದೇಶವಾಗಿದೆ.

ದುಂಡುಮೇಜಿನ ಸಮ್ಮೇಳನಗಳ ಸುದೀರ್ಘ ಕಲಾಪಗಳ ನಂತರ ಬ್ರಿಟಿಷ್ ಸರ್ಕಾರವು ಭಾರತದ ಸರ್ಕಾರದ ಮಸೂದೆ, 1935ರ ಮೂಲಕ ಭಾರತಕ್ಕೆ ಹೊಸ ಸಂವಿಧಾನವನ್ನು ಜಾರಿಗೆ ತಂದುದನ್ನು ಹಿಂದೆಯೇ ಹೇಳಲಾಗಿದೆ. ಈ ಸಂವಿಧಾನವು ತಂದ ರಾಜಕೀಯ ಸುಧಾರಣೆಗಳಿಂದ ಭಾರತದ

ಯಾವ ಪ್ರಮುಖ ರಾಜಕೀಯ ಪಕ್ಷಕ್ಕೂ ತೃಪ್ತಿಯುಂಟಾಗದಿದ್ದರೂ, ಈ ಸುಧಾರಣೆಗಳ ಪ್ರಕಾರ 11 ಪ್ರಾಂತ್ಯಗಳ ವಿಧಾನಸಭೆಗಳಿಗೆ 1937ರ ಫೆಬ್ರುವರಿಯಲ್ಲಿ ನಡೆಸಲಾದ ಚುನಾವಣೆಗಳಲ್ಲಿ ಎಲ್ಲ ಪಕ್ಷಗಳೂ ಭಾಗವಹಿಸಿದ್ದವು. ಉತ್ತರ ಪ್ರದೇಶ, ಕೇಂದ್ರ ಪ್ರಾಂತ್ಯ, ಮದ್ರಾಸು, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತ ಪಡೆಯಿತು. ಬೊಂಬಾಯಿ, ಬಂಗಾಳ, ಅಸ್ಸಾಂ ಮತ್ತು ವಾಯುವ್ಯಗಡಿ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸೇ ಅತ್ಯಂತ ಹೆಚ್ಚು ಸದಸ್ಯರನ್ನುಳ್ಳ ಪಕ್ಷವಾಗಿದ್ದಿತು. ಆದರೆ, ಪಂಜಾಬ್ ಹಾಗೂ ಸಿಂಧ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಲ್ಪಸಂಖ್ಯಾತ ಪಕ್ಷವಾಗಿದ್ದಿತು. ಬಹುಮತ ಗಳಿಸಿರುವ ಪಕ್ಷಗಳನ್ನು ಮಂತ್ರಿಮಂಡಲ ರಚಿಸುವಂತೆ ಆಯಾ ಪ್ರಾಂತ್ಯದ ಗೌರ್ನರುಗಳು ಪಕ್ಷಗಳ ಮುಖಂಡರುಗಳನ್ನು ಆಹ್ವಾನಿಸಿದರು. ಇದರಂತೆ ಬಹುಮತ ಹೊಂದಿದ್ದ ಕಾಂಗ್ರೆಸ್ ಪಕ್ಷದ ಮುಖಂಡರುಗಳನ್ನೂ ಮಂತ್ರಿಮಂಡಲ ರಚಿಸಲು ಆಹ್ವಾನಿಸಲಾಯಿತು. ಆದರೆ, ಹೀಗೆ ಮಂತ್ರಿಮಂಡಲ ರಚಿಸಲು ಒಪ್ಪಿದರೆ, 1935ರ ರಾಜಕೀಯ ಸುಧಾರಣೆಗಳನ್ನು ಒಪ್ಪಿಕೊಂಡಂತೆ ಆಗುವುದರಿಂದ ಮಂತ್ರಿಮಂಡಲ ರಚಿಸಬಾರದೆಂದು ಕಾಂಗ್ರೆಸ್ಸಿನ ಕೆಲವು ಮುಖಂಡರು ವಾದಿಸಿದರು. ಈ ಬಗ್ಗೆ ದೀರ್ಘ ಚರ್ಚೆ ನಡೆಯಿತು. ಕೊನೆಯಲ್ಲಿ, ಮಂತ್ರಿಮಂಡಲ ರಚಿಸುವುದರಿಂದ ದೊರಕುವ ಅಧಿಕಾರವನ್ನು 1935ರ ಮಸೂದೆಯನ್ನು ವಿಧಾನಸಭೆಗಳ ಮೂಲಕ ಖಂಡಿಸಲೂ, ರಾಜ್ಯಾಂಗ ರಚನೆಗೆ ಒಂದು ಸರ್ವಪಕ್ಷೀಯ ಸಂವಿಧಾನ ರಚನಾ ಸಭೆಯನ್ನು (Constituent Assembly) ರಚಿಸಲೂ ಮತ್ತು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲೂ ಉಪಯೋಗಿಸಲು ಸಾಧ್ಯವಾಗಬಹುದೆಂಬ ಅಭಿಪ್ರಾಯದಿಂದ ಮಂತ್ರಿಮಂಡಲ ರಚಿಸುವುದೆಂದು ಕಾಂಗ್ರೆಸ್ಸು ತೀರ್ಮಾನಿಸಿತು. ಹೀಗೆ ಮಂತ್ರಿಮಂಡಲ ರಚಿಸುವ ಮುನ್ನ ಗೌರ್ನರುಗಳು ತಮ್ಮ ವಿಶೇಷ ಅಧಿಕಾರಗಳನ್ನು ನಿರಂಕುಶವಾಗಿ ಮನಸ್ಸು ಬಂದ ಹಾಗೆ ಉಪಯೋಗಿಸುವುದಿಲ್ಲವೆಂಬ ಭರವಸೆಯನ್ನು ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೌ ಅವರಿಂದ ಪಡೆಯಲಾಯಿತು. ಈ ಭರವಸೆಯನ್ನು ಗಾಂಧೀಜಿಯವರು ವೈಸರಾಯ್ ಅವರನ್ನು ಭೇಟಿಮಾಡಿ ಅವರಿಬ್ಬರು ಪರಸ್ಪರ ಮಾಡಿಕೊಂಡ ಒಂದು 'ಸಭ್ಯರ

ಒಪ್ಪಂದ'ದ (Gentleman's Agreement) ಮೂಲಕ ಪಡೆಯಲಾಯಿತು.

1937ರಲ್ಲಿ ಕಾಂಗ್ರೆಸ್ಸು ಉತ್ತರ ಪ್ರದೇಶ, ಕೇಂದ್ರಪ್ರಾಂತ್ಯ, ಬಿಹಾರ, ಒರಿಸ್ಸ, ವಾಯುವ್ಯ ಗಡಿ ಪ್ರಾಂತ್ಯ, ಬೊಂಬಾಯಿ ಹಾಗೂ ಮದ್ರಾಸು ಪ್ರಾಂತ್ಯಗಳಲ್ಲಿ ಮಂತ್ರಿಮಂಡಲ ರಚಿಸಿಕೊಂಡು ಅಧಿಕಾರಕ್ಕೆ ಬಂದಿತು. ಅಸ್ಸಾಂನಲ್ಲಿ 1938ರ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ಸು ಮಂತ್ರಿಮಂಡಲ ರಚಿಸಿತು. ಸಿಂಧ್ ಪ್ರಾಂತದಲ್ಲಿ ಸಚಿವ ಸಂಪುಟಕ್ಕೆ ಕಾಂಗ್ರೆಸ್ ಬೆಂಬಲ ನೀಡಿತು. ಬಂಗಾಳದಲ್ಲಿ 1941ರ ಡಿಸೆಂಬರ್ ನಂತರ ಕಾಂಗ್ರೆಸ್ಸು ಮಂತ್ರಿಮಂಡಲಕ್ಕೆ ಸೇರಿತು. ಪಂಜಾಬಿನಲ್ಲಿ ಯೂನಿಯನಿಸ್ಟ್ ಪಕ್ಷದ ಸರ್ ಸಿಕಂದರ್ ಹಯಾತ್ ಖಾನ್ ಅವರು ಸಚಿವ ಸಂಪುಟವನ್ನು ರಚಿಸಿದರು. ಹೀಗೆ 1935ರ ಭಾರತ ಸರ್ಕಾರದ ಮಸೂದೆಯನ್ನು ಅನುಮೋದಿಸಿದ ಕೆಲವು ವರ್ಷಗಳ ನಂತರ ಜನತಾ ಸರ್ಕಾರಗಳು ಬ್ರಿಟಿಷ್ ಭಾರತದ ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿಕೊಂಡವು. ಇದರಲ್ಲಿ ಮೇಲೆ ಹೇಳಿರುವಂತೆ ಕಾಂಗ್ರೆಸ್ ಪಕ್ಷದ ಪಾಲು ಅಧಿಕವಾಗಿದ್ದಿತು.

ಹೀಗೆ ದೊರಕಿದ ಅಧಿಕಾರವನ್ನು ಕಾಂಗ್ರೆಸ್ಸು ಸ್ವರಾಜ್ಯದತ್ತ ಸಾಗಲು ತನ್ನ ಯೋಜನೆಗಳನ್ನೂ, ಸಾಮಾಜಿಕ–ಆರ್ಥಿಕ ಸುಧಾರಣೆಗಳನ್ನೂ ಜಾರಿಗೆ ತರುವುದಕ್ಕೆ ಉಪಯೋಗಿಸಲು ಆರಂಭಿಸಿತು. ಮುಖ್ಯವಾಗಿ ಭೂಸುಧಾರಣೆಗಳು, ಗೇಣಿಪದ್ಧತಿಯ ಸುಧಾರಣೆ, ಕೃಷಿಕರ ಸಾಲ ಪರಿಹಾರ, ಕಾರ್ಮಿಕ ಕಾನೂನುಗಳು ಮತ್ತು ಫ್ಯಾಕ್ಟರಿ ಮಸೂದೆಗಳು, ಜೈಲು ಸುಧಾರಣೆ, ಪೋಲೀಸು ಸುಧಾರಣೆ, ಕಾರ್ಮಿಕ ಸಂಘಗಳಿಗೆ ಸೂಕ್ತವಾದ ಸ್ಥಾನಮಾನಗಳು, ಕಾರ್ಮಿಕ ಯೋಗಕ್ಷೇಮ ಯೋಜನೆಗಳು, ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಕ್ಕೆ ಬೆಂಬಲ – ಇವೆಲ್ಲವೂ ಕಾಂಗ್ರೆಸ್ ಸಚಿವ ಸಂಪುಟಗಳು ಹಾಕಿಕೊಂಡ ಕಾರ್ಯಕ್ರಮಗಳಲ್ಲಿ ಸೇರಿದ್ದವು. ಆದರೆ ಅವು ಇವುಗಳನ್ನು ಜಾರಿಗೆ ತರಲು ಆರಂಭಿಸಿದಾಗ ಗೌರ್ನರುಗಳು ಅಡಚಣೆಗಳನ್ನು ಒಡ್ಡಿದರು. ಗಾಂಧಿ–ಲಿನಲಿತ್‌ಗೌ ಅವರ 'ಸಭ್ಯರ ಒಪ್ಪಂದ'ಕ್ಕೆ ವಿರೋಧವಾಗಿ ಅವರು ತಮ್ಮ ವಿಶೇಷ ಅಧಿಕಾರವನ್ನು ನಿರಂಕುಶವಾಗಿ ಉಪಯೋಗಿಸತೊಡಗಿದರು. ಹಾಗೂ ದಿನದಿನದ ಆಡಳಿತ ವಿಷಯಗಳಲ್ಲಿಯೂ ಪ್ರವೇಶಿಸುತ್ತಿದ್ದರು.

ಕಾಂಗ್ರೆಸ್ ಮಂತ್ರಿಮಂಡಲಗಳು ಜೈಲಿನಲ್ಲಿದ್ದ ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರನ್ನು ಬಿಡುಗಡೆ ಮಾಡಲು ಉದ್ದೇಶಿಸಿ ಈ ಬಗ್ಗೆ ಆಜ್ಞೆಗಳನ್ನು ಹೊರಡಿಸಿದಾಗ ಗೌರ್ನರುಗಳು ಈ ಆಜ್ಞೆಗಳಿಗೆ ತಮ್ಮ ಸಮ್ಮತಿ ನೀಡಲಿಲ್ಲ. ಅವರ ಸಮ್ಮತಿ ಇಲ್ಲದೆ ಆಜ್ಞೆಗಳು ಜಾರಿಗೆ ಬರುವಂತಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಗೌರ್ನರುಗಳು ಕೆಲವು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿದ್ದಾಗ್ಯೂ, ಗೌರ್ನರ್-ಜನರಲ್‌ನು ಹೀಗೆ ಅವರನ್ನು ಬಿಡುಗಡೆ ಮಾಡುವುದು ದೇಶದ ಶಾಂತಿಗೆ ಭಂಗ ಉಂಟುಮಾಡುವುದೆಂದು ಆಜ್ಞೆಗಳನ್ನು ರದ್ದುಗೊಳಿಸಿದರು. ಒಟ್ಟಿನಲ್ಲಿ ಕಾಂಗ್ರೆಸ್ಸು ವಿಧಾನ ಸಭೆಗಳಿಗೆ ಸೇರಿ ಮಂತ್ರಿ ಪದವಿಗಳನ್ನು ರಚಿಸಿದುದರ ಉದ್ದೇಶ ಸಫಲವಾಗದೆ ಮಂತ್ರಿಮಂಡಲಗಳು ರಾಜಿನಾಮೆ ಕೊಡುವ ಪರಿಸ್ಥಿತಿ ಉಂಟಾಯಿತು. ಹೀಗೆ ಬ್ರಿಟಿಷ್ ಪ್ರಾಂತ್ಯಗಳಲ್ಲಿ ರಚಿಸಲಾದ ಜನತಾ ಸರ್ಕಾರಗಳು ಕೇವಲ ಅಲ್ಪಾವಧಿಯ ಒಂದು ಪ್ರಯೋಗ ಮಾತ್ರವಾದಂತಾಯಿತು.

ಕಾಂಗ್ರೆಸ್ಸಿನೊಳಗೆ ಉಗ್ರವಾದಿಗಳ ಬಲ ಹೆಚ್ಚಿದುದು

ದುಂಡು ಮೇಜಿನ ಸಮ್ಮೇಳನ ಬ್ರಿಟಿಷರು ಏರ್ಪಡಿಸಿದ್ದ ಕಾಲಹರಣ ಉಪಾಯ ಮಾತ್ರವೆಂಬ ಭಾವನೆಯಿಂದಲೂ, ಭಾರತದ ಸ್ವರಾಜ್ಯ ಕೇಳಿಕೆಗೆ ಬ್ರಿಟಿಷರ ತಾತ್ಸಾರ ಧೋರಣೆಯಿಂದಲೂ, ಭಾರತ ಸರ್ಕಾರದ 1935ರ ಮಸೂದೆಯ ಅತೃಪ್ತಿಕರ ರಾಜಕೀಯ ಸುಧಾರಣೆಗಳಿಂದಲೂ ಜುಗುಪ್ಸೆಗೊಂಡ ಅನೇಕ ಕಾಂಗ್ರೆಸ್ಸಿನವರು – ಮುಖ್ಯವಾಗಿ ಯುವಕರ ಗುಂಪಿನವರು ನಮ್ಮ ನ್ಯಾಯವಾದ ಕೇಳಿಕೆಗಳಿಗೆ ಬ್ರಿಟಿಷರು ಒಪ್ಪುವಂತೆ ಮಾಡಲು ಹೆಚ್ಚು ಪರಿಣಾಮಕಾರಿಯಾದ ತೀವ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ವಾದಿಸಿದರು.

1930ರ ದಶಕದ ಮಧ್ಯದಲ್ಲಿ ಯೂರೋಪಿನಲ್ಲಿ ಬ್ರಿಟಿಷರ ವಿರುದ್ಧದ ಘಟನೆಗಳು ಬೆಳೆಯುತ್ತಿದ್ದವು. ಇಟಲಿಯ ಫಾಸಿಸ್ಟ್ ಸರ್ವಾಧಿಕಾರಿ ಮುಸೊಲಿನಿ ಹಾಗೂ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಇವರುಗಳ ಪ್ರಾಬಲ್ಯ ಹೆಚ್ಚಿದುದೇ ಅಲ್ಲದೆ ಬ್ರಿಟಿಷರ ವಿರುದ್ಧ ಇವರು ಯುದ್ಧ ಘೋಷಿಸುವ ಸೂಚನೆಗಳು ತಲೆದೋರಿದವು. ರಷ್ಯಾದಲ್ಲಿ 'ಕಮ್ಯೂನಿಸಂ' ಬೆಳೆ

ದುದೂ, ಜಪಾನು ತನ್ನ ಅಂತರರಾಷ್ಟ್ರೀಯ ರಾಜಕೀಯ ಸಮಸ್ಯೆಗಳ ಇತ್ಯರ್ಥಕ್ಕೆ ಮಿಲಿಟರಿ ಧೋರಣೆಯನ್ನು ಅನುಸರಿಸುತ್ತಿದ್ದುದು ಅಂತರ ರಾಷ್ಟ್ರೀಯ ರಂಗದಲ್ಲಿ ಕೆಲವು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರೋಧಿ ಅಂಶ ಗಳಾಗಿದ್ದವು. ಮೇಲೆ ಹೇಳಿರುವ ಆಂತರಿಕ ಹಾಗೂ ಅಂತರರಾಷ್ಟ್ರೀಯ ಅಂಶಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ಸಿನ ಉಗ್ರವಾದಿಗಳು, ಸುಭಾಷ್‌ಚಂದ್ರ ಬೋಸ್ ಅವರ ನೇತೃತ್ವದಲ್ಲಿ 'ಕಾಂಗ್ರೆಸ್ ಸಮಾಜವಾದಿ ಪಕ್ಷ'ವನ್ನು (Congress Socialist Party) 1934ರಲ್ಲಿ ಸ್ಥಾಪಿಸಿದರು. ಸಾಮ್ರಾಜ್ಯ ಶಾಹಿ ರಾಷ್ಟ್ರಗಳ ಹಿಡಿತಕ್ಕೆ ಸಿಕ್ಕಿಬಿದ್ದಿರುವ ಇತರ ಜನಾಂಗಗಳೊಡನೆ ತಮ್ಮ ಏಕತೆಯನ್ನು ಈ ಪಕ್ಷವು ವ್ಯಕ್ತಪಡಿಸಿತು. 1933 ರಲ್ಲಿ ಕಾಂಗ್ರೆಸ್ಸು ಪಕ್ಷವು ಪ್ರಾಂತೀಯ ವಿಧಾನಸಭೆಗಳ ಚುನಾವಣೆಯಲ್ಲಿ ಬಹುಮತ ಗಳಿಸಿದ ಸಂದರ್ಭದಲ್ಲಿ ಮಂತ್ರಿಮಂಡಲ ರಚಿಸುವುದನ್ನು ಈ ಪಕ್ಷ ತೀವ್ರವಾಗಿ ವಿರೋಧಿಸಿತು. ತರುವಾಯ ಮೇಲೆ ವಿವರಿಸಿದಂತೆ ಕಾಂಗ್ರೆಸ್ ಮಂತ್ರಿ ಮಂಡಲಗಳ ಆಡಳಿತ ಕಾರ್ಯಕ್ರಮಗಳಿಗೆ ಗೌರ್ನರ್ ಮತ್ತು ಗೌರ್ನರ್-ಜನರಲ್ಲರು ಅಡಚಣೆಗಳನ್ನು ಒಡ್ಡಿದಾಗ ಕಾಂಗ್ರೆಸ್ಸಿನಲ್ಲಿ ಈ ಉಗ್ರವಾದಿ-ವಾಮವಾದಿ (Left-wing) ಪಕ್ಷದ ಪ್ರಭಾವ ಹೆಚ್ಚಿತು. 1938ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸುಭಾಷ್‌ಚಂದ್ರ ಬೋಸರನ್ನು ಹರಿಪುರ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.[1] 1938ರ ಫೆಬ್ರುವರಿಯಲ್ಲಿ ಸಮಾವೇಶಗೊಂಡ ಕಾಂಗ್ರೆಸ್ಸು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಂಬಂಧಿಸಿದಂತೆ ಕೆಲವು ನಿರ್ಣಯಗಳನ್ನು ಅನುಮೋದಿಸಿತು. ಈ ನಿರ್ಣಯಗಳು 1935ರ ಮಸೂದೆಯ ಜನವಿರೋಧಿ, ರಾಷ್ಟ್ರವಿರೋಧಿ ಅಂಶಗಳನ್ನು ಎತ್ತಿ ಹಿಡಿದು ತೋರಿಸಿದುವಲ್ಲದೆ ಸ್ವತಂತ್ರ ಭಾರತ ರಚನೆಗೆ ಸರ್ವ ಪಕ್ಷೀಯ ಸಭೆಯೊಂದನ್ನು ಏರ್ಪಡಿಸಬೇಕೆಂದೂ, ಎಲ್ಲಾ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದೂ, ರಾಷ್ಟ್ರೀಯ ಚಳುವಳಿಯನ್ನು

---

1. ಮಹಾತ್ಮಾ ಗಾಂಧಿಯವರನ್ನು ಎದುರಿಸಿ ಧೈರ್ಯವಾಗಿ ತಮ್ಮ ಮಾರ್ಗದಲ್ಲಿ ವಿಶ್ವಾಸಹೊಂದಿದ ಬೋಸರು ಕ್ರಾಂತಿಕಾರರಾಗಿ, ಎರಡನೆಯ ಯುದ್ಧ ಪ್ರಾರಂಭವಾದೊಡನೆ ಜರ್ಮನಿ ಹಾಗೂ ಜಪಾನಿನೊಡನೆ ನಿಂತು ನಡೆಸಿದ ಹೋರಾಟವನ್ನು ಹಿಂದೆ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಹತ್ತಿಕ್ಕುವ ಕ್ರಮಗಳೆಲ್ಲವನ್ನೂ ಕೈಬಿಡಬೇಕೆಂದೂ ಸರ್ಕಾರವನ್ನು ಒತ್ತಾಯಿಸಿದವು.

ಕಾಂಗ್ರೆಸ್ಸಿನ ಮೇಲಿನ ನಿರ್ಣಯಗಳಿಗೆ ಸರ್ಕಾರದ ಪ್ರತಿಕ್ರಿಯೆ ಅನುಕೂಲಕರವಾಗಲಿಲ್ಲ. ಇದರಿಂದ ಕಾಂಗ್ರೆಸ್ಸಿನ ಉಗ್ರವಾದಿಗಳ ಬಲ ಹೆಚ್ಚಿತು. ಅಲ್ಲದೆ, ಕಾಂಗ್ರೆಸ್ಸಿನ ಚೌಕಟ್ಟಿನೊಳಗೆಯೇ 'ಫಾರ್‌ವರ್ಡ್ ಬ್ಲಾಕ್' (Forward Bloc) ಎಂಬ ಉಪಪಕ್ಷವೊಂದನ್ನು ಸುಭಾಷ್ ಚಂದ್ರ ಬೋಸ್ ಅವರು ಸ್ಥಾಪಿಸಿದರು. ಹೀಗೆ 'ಕಾಂಗ್ರೆಸ್ ಸಮಾಜವಾದಿ ಪಕ್ಷ' 'ಫಾರ್‌ವರ್ಡ್ ಬ್ಲಾಕ್' ಅಂತಹ ಉಪಪಕ್ಷಗಳು ಅಸ್ತಿತ್ವಕ್ಕೆ ಬಂದುದು ಕಾಂಗ್ರೆಸ್ ಸಂಸ್ಥೆಯ ಆಂತರಿಕ ಭಿನ್ನಾಭಿಪ್ರಾಯಗಳ ತೀವ್ರತೆಯನ್ನು ತೋರಿಸುವುದು. ಗಾಂಧೀಜಿಯವರಿಗೆ ಇದು ಸಮಸ್ಯೆಯೇ ಆಯಿತು. ವಿಧಿ ಇಲ್ಲದೆ ಸುಭಾಷ್‌ಚಂದ್ರ ಬೋಸ್ ಅವರನ್ನು ಅಶಿಸ್ತಿನ ಕಾರ್ಯಕ್ಕಾಗಿ ಕಾಂಗ್ರೆಸ್ ಸಂಸ್ಥೆಯಿಂದ ಹೊರಗೆ ಹಾಕಲಾಯಿತು. ಆಗ ಬೋಸ್ ಮತ್ತು ಅವರ ಹಿಂಬಾಲಕರೆಲ್ಲರೂ ಸೇರಿದ್ದ 'ಫಾರ್‌ವರ್ಡ್ ಬ್ಲಾಕ್' ಪ್ರತ್ಯೇಕ ರಾಜಕೀಯ ಪಕ್ಷವಾಯಿತು.

ಸರ್ಕಾರವು ಕಾನೂನುಬಾಹಿರ ಎಂದು ಘೋಷಿಸಿದ್ದ 'ಕಮ್ಯೂನಿಸ್ಟ ಪಕ್ಷ', 'ಕಿಸಾನ್ ಪಕ್ಷ' ಇವುಗಳು ಇತರ ಉಗ್ರವಾದಿ ಪಕ್ಷಗಳಾಗಿದ್ದವು. ಈ ಕೆಲವು ಉಗ್ರವಾದಿಗಳ – ವಾಮಪಂಥೀಯ ಪಕ್ಷಗಳೆಲ್ಲವೂ ಒಟ್ಟಾಗಿ ಸೇರಿ ಕಾರ್ಯ ನಡೆಸದುದರಿಂದ ಇವುಗಳ ಪರಿಣಾಮ ಹೆಚ್ಚಾಗಲಿಲ್ಲ. ಆದರೆ, ಕಾಂಗ್ರೆಸ್ಸಿಗರಲ್ಲಿ ಒಡಕು ಉಂಟಾಗಿ ಕೆಲವು ಉಪಪಕ್ಷಗಳು ಹುಟ್ಟಿದುದು ಕಾಂಗ್ರೆಸ್ಸಿನ ನಿರ್ದೇಶನದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿ ಸ್ವಲ್ಪ ಮಟ್ಟಿಗೆ ದುರ್ಬಲವಾದಂತಾಯಿತು.

ಹಿಂದೂ ಮುಸ್ಲಿಂರ ನಡುವಣ ಭಿನ್ನತೆ ತೀವ್ರಗೊಂಡುದುದು

ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗು, ಹಿಂದೂಗಳು ಮತ್ತು ಮುಸಲ್ಮಾನರು ಇವರುಗಳ ನಡುವಣ ಭಿನ್ನತೆಗಳು ಹೆಚ್ಚಿದುದು 1930ರ ದಶಕದ ಉತ್ತರಾರ್ಧದ ಇನ್ನೊಂದು ಮುಖ್ಯ ಬೆಳವಣಿಗೆಯಾಗಿದೆ. ಆಗ ವಿ. ಡಿ. ಸಾವರ್‌ಕರ್ ಅವರ ಅಧ್ಯಕ್ಷತೆಯಲ್ಲಿ ಹಿಂದೂ ಮಹಾಸಭೆಯೂ

ಆರ್ಯ ಸಮಾಜವೂ 'ಹಿಂದೂರಾಜ್' 'ಹಿಂದೂ ಸಂಸ್ಕೃತಿ' 'ಹಿಂದೂ ನಾಗರಿಕತೆ'ಗಳ ಪ್ರಾಮುಖ್ಯವನ್ನೇ ಒತ್ತಿಹೇಳುತ್ತಿದ್ದುದೂ, 'ಹಿಂದೂ ರಾಷ್ಟ್ರ'ದ ಗತವೈಭವವನ್ನು ನೆನಪಿಸುತ್ತಿದ್ದುದೂ ಮುಸಲ್ಮಾನರಿಗೆ ಸರಿಬೀಳ ಲಿಲ್ಲ. ಕಾಂಗ್ರೆಸ್ ಪಕ್ಷ ಹಿಂದೂಗಳ ರಾಜಕೀಯ ಪಕ್ಷ ಎಂಬ ಭಾವನೆಯೂ ಮುಸ್ಲಿಂಲೀಗ್ ವಲಯಗಳಲ್ಲಿ ಬೇರೂರಿತು. ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರಾಂತ್ಯಗಳನ್ನು ಒಂದುಗೂಡಿಸಿ ಇದನ್ನು ಪ್ರತ್ಯೇಕ ಮುಸ್ಲಿಂ ರಾಷ್ಟ್ರವಾಗಿ ಮಾಡುವುದೊಂದೇ ಭಾರತದ ಮುಸಲ್ಮಾನರ ಹಿತಾಸಕ್ತಿಗಳ ದೃಷ್ಟಿಯಿಂದ ಅತ್ಯುತ್ತಮ ಮಾರ್ಗ ಎಂಬ ಭಾವನೆ ಪ್ರಮುಖ ಮುಸಲ್ಮಾನ ನಾಯಕರಲ್ಲಿ ಬೇರೂರಿತು.

ಹಿಂದೂ ಮಹಾಸಭೆ ಮತ್ತು ಮುಸ್ಲಿಂ ಲೀಗು ಇವುಗಳ ನಿಲುವುಗಳು ಮತೀಯ ಭಾವನೆಗಳನ್ನು ಕೆರಳಿಸಿ ಪೋಷಿಸಿದವು. ಹೋಳಿ, ಗಣೇಶನ ಹಬ್ಬ, ಮೊಹರಂ ಇಂತಹ ಹಬ್ಬದ ದಿನಗಳಂದು ಹಿಂದೂ–ಮುಸ್ಲಿಂರೊಳಗೆ ಘರ್ಷಣೆಗಳು ಉಂಟಾದವು. ಹೀಗೆ ಹಿಂದೂ ಮುಸ್ಲಿಂ ಭಿನ್ನತೆ ಬೆಳೆದುದು ಹಿಂದೂ ಮುಸ್ಲಿಂ ಐಕ್ಯತಾ ಭಾವನೆಯ ಆಧಾರದ ಮೇಲೆ ಸ್ವಾತಂತ್ರ್ಯ ಚಳುವಳಿ ನಡೆಸುತ್ತಿದ್ದ ಕಾಂಗ್ರೆಸ್ಸಿಗೆ ಅತಿ ದೊಡ್ಡ ಪೆಟ್ಟಾಯಿತು. ಕಾಂಗ್ರೆಸ್ ಮುಖಂಡರು ಜಿನ್ನಾ ಹಾಗೂ ಇತರ ಮುಸ್ಲಿಂ ಲೀಗ್ ನಾಯಕರೊಡನೆ ಸಂಧಾನಗಳನ್ನೂ ನಡೆಸಿದರು. ಆದರೆ ಇವು ಏನೂ ಪ್ರಯೋಜನವಾಗಲಿಲ್ಲ. ಈ ಮುಸ್ಲಿಂ ಲೀಗಿನ ನಾಯಕರು ತಮ್ಮ ಪ್ರತ್ಯೇಕ ಮುಸ್ಲಿಂರಾಷ್ಟ್ರ ಬೇಡಿಕೆಯನ್ನೇ ಪುನರುಚ್ಚರಿಸುತ್ತಾ ಬಂದರು.

ಕಾಂಗ್ರೆಸ್ಸಿಗೆ ಬೆಂಬಲ ನೀಡಿದ ಮುಸ್ಲಿಂ ಸಂಸ್ಥೆಗಳು

ಆಗ ಭಾರತದ ಎಲ್ಲಾ ಮುಸಲ್ಮಾನರೂ ಮುಸ್ಲಿಂಲೀಗಿನ ಭಾವನೆಯನ್ನು ಒಪ್ಪಿರಲಿಲ್ಲ. ಅನೇಕ ಹಿರಿಯ ಮುಖಂಡರೂ ಸೇರಿದಂತೆ ಅನೇಕ ಮುಸಲ್ಮಾನರು ಕಾಂಗ್ರೆಸ್ ಸಂಸ್ಥೆಯ ಸದಸ್ಯರಾಗಿದ್ದರು. ಅಲ್ಲದೆ ಮುಸ್ಲಿಂ ಲೀಗ್ ಬಿಟ್ಟು ಇತರ ಕೆಲವು ಮುಸ್ಲಿಂ ಸಂಸ್ಥೆಗಳು ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಚಳುವಳಿಗೆ ಬೆಂಬಲ ನೀಡಿದವು. 1919 ರಲ್ಲಿ ಮೌಲಾನ ಮೊಹಮ್ಮದ್–ಉಲ್–ಹಸನ್ ಎಂಬ ಪ್ರಮುಖ ಮುಸ್ಲಿಂ ಮೌಲ್ವಿಯು ಸ್ಥಾಪಿಸಿದ್ದ ಜಮಾಯತ್–ಉಲ್–ಉಲೇಮ–ಇ–ಹಿಂದ್ ಸಂಸ್ಥೆಯು

ಉದ್ದಕ್ಕೂ ಖಿಲಾಫತ್ ಚಳುವಳಿಯಲ್ಲಿ ಭಾಗವಹಿಸಿದುದರ ಜೊತೆಗೆ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗಳಲ್ಲಿ ಕಾಂಗ್ರೆಸ್ಸಿನೊಡನೆ ಭಾಗವಹಿಸಿತು. ಪಂಜಾಬಿನಲ್ಲಿ 'ಅಹ್ರಾರ್ಸ್' (Ahrars) ಬಡ ನೇಯ್ಗೆಯವರ ಸಂಸ್ಥೆಯಾದ 'ಮೊಮಿನ್ಸ್' (Momins) ಷಿಯಾ ಮುಸಲ್ಮಾನರ ಸಂಸ್ಥೆ, ಬಂಗಾಳ ಮುಸಲ್ಮಾನ ಕಿಸಾನರ 'ಕೃಷಕ ಸಭಾ' (Krishak Sabha) ಇವು ಕಾಂಗ್ರೆಸ್ಸಿನೊಡನೆ ಚಳುವಳಿಗೆ ಸೇರಿದ ಕೆಲವು ಇತರ ಮುಸ್ಲಿಂ ಸಂಸ್ಥೆಗಳು. ಜಮಾಯತ್-ಉಲೇಮ ಸಂಸ್ಥೆಯು ಇಂತಹ ಅನೇಕ ಮುಸಲ್ಮಾನ ಸಂಸ್ಥೆಗಳೆಲ್ಲವನ್ನೂ 1939 ರಲ್ಲಿ ಒಟ್ಟುಗೂಡಿಸಿ ಅಜಾದ್ ಮುಸ್ಲಿಂ ಸಮ್ಮೇಳನ ಎಂದು ಕರೆಯಲಾದ ಕೂಡು ಸಂಸ್ಥೆಯನ್ನು ಸ್ಥಾಪಿಸಿಕೊಂಡು ಮುಸ್ಲಿಂ ಲೀಗಿನ ಧೋರಣೆಯನ್ನು ವಿರೋಧಿಸಿದವು. ಈ ಮುಸ್ಲಿಂ ಸಂಸ್ಥೆಗಳು ಕಾಂಗ್ರೆಸ್ಸಿನ ದೇಶದ ಐಕ್ಯತಾ ಭಾವನೆಯನ್ನೂ, ಅದು ನಡೆಸುತ್ತಿದ್ದ ಸ್ವಾತಂತ್ರ್ಯ ಚಳುವಳಿಯನ್ನೂ ಬೆಂಬಲಿಸಿದವು. ಆದರೆ, ಮುಸ್ಲಿಂಲೀಗಿನ ಪ್ರಭಾವವೇ ಒಟ್ಟನಲ್ಲಿ ಹೆಚ್ಚಾಗಿದ್ದಿತು. ಈ ಸಂಸ್ಥೆಯ ಪ್ರತ್ಯೇಕತಾ ಧೋರಣೆಗೆ ಬ್ರಿಟಿಷರು ಅನೇಕ ಸೂಕ್ಮರೀತಿಯಲ್ಲಿ ಉತ್ತೇಜನ ಕೊಟ್ಟರು. ಹೀಗೆ ಉತ್ತೇಜನ ನೀಡುವುದು ಅವರ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಸಹಾಯಕವಾಗಿದ್ದಿತು. ಮುಸ್ಲಿಂಲೀಗಿನ ಪ್ರತ್ಯೇಕತಾ ಧೋರಣೆಯು ಬ್ರಿಟಿಷರ ವಿರುದ್ಧ ಕಾಂಗ್ರೆಸ್ಸು ನಡೆಸುತ್ತಿದ್ದ ರಾಷ್ಟ್ರೀಯ ಚಳುವಳಿಯನ್ನು ಸ್ವಲ್ಪ ಮಟ್ಟಿಗೆ ದುರ್ಬಲಗೊಳಿಸಿತು. ಬ್ರಿಟಿಷ್‌ರೊಡನೆ ಹೋರಾಡುವುದರ ಜೊತೆಗೆ ಆಂತರಿಕವಾಗಿ ಕಾಂಗ್ರೆಸು ಮುಸ್ಲಿಂಲೀಗಿನ ಪ್ರತ್ಯೇಕತಾ ಸಮಸ್ಯೆಯನ್ನು ಎದುರಿಸಬೇಕಾಯಿತು.

ಎಂ. ಎನ್. ರಾಯ್ ಅವರ ಸಮಾಜವಾದಿ ಪಕ್ಷ

ಸುಪ್ರಸಿದ್ಧ ಸಮಾಜವಾದಿ ಎಂ. ಎನ್. ರಾಯ್ ಅವರು ಸಮಾಜವಾದಿ ಪಕ್ಷ ರಚಿಸಿ ತಮ್ಮದೇ ಆದ ಸ್ವಾತಂತ್ರ್ಯ ಹೋರಾಟ ನಡೆಸಿದುದು ಗಮನಾರ್ಹ ವಿಷಯವಾಗಿದೆ. ಇವರದು ಕ್ರಾಂತಿಕಾರಿ ಮಾರ್ಗ. ಎಂ. ಎನ್. ರಾಯ್ ಅವರು 1915ರಲ್ಲಿ ಜಾವಕ್ಕೆ ಹೋಗಿ ಭಾರತದಲ್ಲಿ ಕ್ರಾಂತಿ ಉಂಟುಮಾಡಲು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಅಲ್ಲಿ ಇದ್ದ ಜರ್ಮನ್

ಏಜೆಂಟುಗಳನ್ನು ಸಂಪರ್ಕಿಸಿದರು. ಆದರೆ ಅವರ ಯೋಜನೆಗಳು ಸಫಲವಾಗಲಿಲ್ಲ. ತರುವಾಯ 1917ರ ಅಕ್ಟೋಬರ್‌ನಲ್ಲಿ ಅವರು ಮಾಸ್ಕೋಗೆ ಪ್ರಯಾಣ ಬೆಳೆಸಿದರು. ಅಲ್ಲಿ ಬಾಲ್‌ಷೆವಿಸ್ಟ್ ಕ್ರಾಂತಿ ನಡೆಯುತ್ತಿದ್ದ ಆ ಕಾಲದಲ್ಲಿ, ರಷ್ಯದ ಕಮ್ಯೂನಿಸ್ಟ್ ಮುಖಂಡ ಲೆನಿನ್ ಅವರ ವಿಶ್ವಾಸವನ್ನು ಗಳಿಸಿಕೊಂಡರು. ಹೊಸದಾಗಿ ಸ್ಥಾಪಿಸಲಾಗಿದ್ದ 'ಅಂತರರಾಷ್ಟ್ರೀಯ ಕಮ್ಯೂನಿಸಂ' (Communist International) ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಲೆನಿನ್ ಅವರು ಎಂ. ಎನ್. ರಾಯ್ ಅವರನ್ನು ನೇಮಿಸಿದರು. ರಷ್ಯಾದ ಚಾಷ್ಕೆಂಟ್ ಎಂಬಲ್ಲಿಗೆ ಕ್ರಾಂತಿಕಾರಿ ಚಳುವಳಿ ಸಿದ್ಧತೆಗಾಗಿ ಭಾರತದಿಂದ ಹೋಗಿದ್ದ ಕೆಲವು ಭಾರತೀಯರನ್ನು ಸೇರಿಸಿ ಅವರಿಗೆ ರಾಯ್ ಅವರು ಸೂಕ್ತ ಶಿಕ್ಷಣ ನೀಡಿದರು. ನಂತರ 1927ರಲ್ಲಿ ಚೈನಾದಲ್ಲಿ ಸ್ವಲ್ಪ ಕಾಲ ಕಳೆದರು. 1929ರಲ್ಲಿ ಭಾರತಕ್ಕೆ ಹಿಂತಿರುಗಿದರು. ಇವರ ಕ್ರಾಂತಿಕಾರಿ ಸಿದ್ಧತೆಗಳನ್ನು ತಿಳಿದಿದ್ದ ಸರ್ಕಾರವು ಇವರನ್ನು ಬಂಧಿಸಿ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಜೈಲಿನಲ್ಲಿ ಇವರ ಆರೋಗ್ಯ ಹದಗೆಟ್ಟಿತು. 1935ರಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಸಮಾಜವಾದಿ ಪಕ್ಷವೊಂದನ್ನು ರಚಿಸಿದರು. ಈ ಪಕ್ಷಕ್ಕೆ ಅನೇಕ ಯುವಕರು ಸೇರಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಪಕ್ಷವು ತನ್ನದೇ ಆದ ಪಾತ್ರ ವಹಿಸಿತು.

ಎರಡನೆ ಪ್ರಪಂಚಯುದ್ಧ ಸ್ಫೋಟಿಸಿದುದು ಹಾಗೂ ಭಾರತದ ಚಳುವಳಿಯ ಮೇಲೆ ಅದರ ಪರಿಣಾಮ

ಜರ್ಮನಿಯ ಮೇಲೆ ಯುದ್ಧಕ್ಕೆ ಬ್ರಿಟನ್ನು ಭಾರತವನ್ನು ಎಳೆದುದು

1939ರಲ್ಲಿ ಪ್ರಾರಂಭವಾದ ದ್ವಿತೀಯ ಮಹಾಯುದ್ಧವು ಭಾರತದ ಮೇಲೆ ತೀವ್ರ ಪರಿಣಾಮ ಹೊಂದಿದ್ದಿತು. ಈ ಯುದ್ಧದ ಬಗ್ಗೆ ಪ್ರಥಮ ಸೂಚನೆಗಳು ಜರ್ಮನಿಯಲ್ಲಿ ನಾಸಿ ಹಿಟ್ಲರ್ ಅಧಿಕಾರಕ್ಕೆ ಬಂದಾಗಿನಿಂದಲೇ ಕಾಣುತ್ತಿತ್ತು. ಏಕೆಂದರೆ, ಪ್ರಥಮ ಪ್ರಪಂಚದ ಯುದ್ಧಾನಂತರ 1919ರ ಶಾಂತಿಕೌಲಿನ ಪ್ರಕಾರ ಜರ್ಮನಿಯ ಮೇಲೆ ವಿಧಿಸಿದ ಷರತ್ತುಗಳು ಜರ್ಮ

ನಿಗೆ ಅವಮಾನಕರವಾಗಿದ್ದು ಬ್ರಿಟನ್ನಿನ ಮೇಲೆ ಈ ಷರತ್ತುಗಳ ವಿರುದ್ಧ ಸೇಡು ತೀರಿಸಿಕೊಳ್ಳುವುದು ಹಿಟ್ಲರ್ ಅವರ ಮುಖ್ಯ ಉದ್ದೇಶವಾಗಿದ್ದಿತು. ಸರ್ವ ಸಿದ್ಧತೆಗಳನ್ನು ಮಾಡಿಕೊಂಡು 1939ರ ಮಾರ್ಚಿನಲ್ಲಿ ಹಿಟ್ಲರನು ಜೆಕೊಸ್ಲೊವೋಕಿಯವನ್ನು ನುಗ್ಗಿ ಜರ್ಮನಿಯಿಂದ 1919 ರಲ್ಲಿ ಕಸಿದು ಕೊಂಡಿದ್ದ ಮೆಮಲಾಂಡ್ (Memalland) ಎಂಬ ಭಾಗವನ್ನು ವಶಪಡಿಸಿ ಕೊಂಡನು. ಇಟಲಿಯ ಫಾಸಿಸ್ಟ್ ಸರ್ವಾಧಿಕಾರಿ ಮುಸ್ಸೋಲಿನಿ ಹಿಟ್ಲರ್‌ಗೆ ಸಹಾಯಕನಾದನು. ಜಪಾನ್ ಕೂಡ ಸೈನಿಕ ಬಲವನ್ನು ಹೆಚ್ಚಿಸಿಕೊಂಡಿ ದ್ದಿತು ಮತ್ತು ಜರ್ಮನಿಯೊಡನೆ ಸೇರಿತು. ಈ ಮೂರು ರಾಷ್ಟ್ರಗಳು ಸೇರಿ 'ಆಕ್ಸಿಸ್ ರಾಷ್ಟ್ರಗಳು' ಎಂದು ಪ್ರಚಾರವಾದವು. 1939ರ ಸೆಪ್ಟೆಂಬರ್ 3 ರಂದು ಇಂಗ್ಲೆಂಡ್ ಮತ್ತು ಫ್ರಾನ್ಸ್ ಸರ್ಕಾರಗಳು ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸಿದವು. ಅದೇ ದಿವಸ ಭಾರತದ ಪರವಾಗಿ ವೈಸ್ ರಾಯ್ ಅವರೂ ಜರ್ಮನಿಯ ಮೇಲೆ ಯುದ್ಧ ಘೋಷಿಸಿದರು. ಘೋಷಣೆ ಮಾಡುವ ಮುನ್ನ ಕೇಂದ್ರ ವಿಧಾನಸಭೆಯೊಡನಾಗಲಿ ಭಾರತೀಯ ಮುಖಂಡ ರೊಡನಾಗಲಿ ಸಮಾಲೋಚಿಸುವ ಸೌಜನ್ಯವನ್ನು ಅವರು ತೋರಿಸಲಿಲ್ಲ. ಹೀಗೆ ವೈಸ್‌ರಾಯ್ ಅವರು ತಮ್ಮ ಅಧಿಕಾರವನ್ನು ನಿರಂಕುಶವಾಗಿ ಚಲಾ ಯಿಸಿ ಜರ್ಮನಿಯ ಮೇಲೆ ಬ್ರಿಟನ್ನು ಮಾಡಬೇಕಾಗಿ ಬಂದ ಯುದ್ಧಕ್ಕೆ ಭಾರತವನ್ನು ತಕ್ಷಣವೇ ಎಳೆದರು.

ಭಾರತವನ್ನು ಜರ್ಮನಿಯ ಮೇಲಿನ ಯುದ್ಧಕ್ಕೆ ಹೀಗೆ ಎಳೆದೊಯ್ದು ದ್ದರಿಂದ ಭಾರತಕ್ಕೆ ತುಂಬ ಕಷ್ಟನಷ್ಟಗಳಾದವು. ಯುದ್ಧ ಕಾರ್ಯಾಚರಣೆ ಗಳನ್ನು ನಡೆಸಲು ಒಂದು ಯೋಜನೆ ಸಿದ್ಧಪಡಿಸಲಾಯಿತು. ಇದರ ಪ್ರಕಾರ ಅನೇಕ ಕ್ರಮಗಳನ್ನು ಸರ್ಕಾರವು ಕೈಗೊಂಡಿತು. ಮಧ್ಯಪ್ರಾಚ್ಯ ಹಾಗೂ ಸಿಂಗಪುರಗಳಿಗೆ ಭಾರತದ ಸೇನೆಗಳನ್ನು ಕಳಿಸಲಾಯಿತು. 1935ರ ಭಾರತ ಸರ್ಕಾರದ ಮಸೂದೆಗೆ ತಿದ್ದುಪಾಡುಗಳನ್ನು ಮಾಡುವುದರ ಮೂಲಕ ಕೇಂದ್ರ ಸರ್ಕಾರಕ್ಕೆ ಮೇಲಧಿಕಾರ ನೀಡಲಾಯಿತು; ಇದರಿಂದ 1935ರ ಮಸೂದೆಯು ಮೊದಲು ನೀಡಿದ್ದ ಸ್ವಲ್ಪ ಮಟ್ಟಿನ ಪ್ರಾಂತೀಯ ಸ್ವಾತಂತ್ರ್ಯ ವನ್ನೂ ಕೇಂದ್ರ ಸರ್ಕಾರವು ಕಸಿದುಕೊಂಡಂತಾಯಿತು. ಆಂತರಿಕ ಗಲಭೆ ಗಳನ್ನು ತಡೆಯಲು ಸುಗ್ರೀವಾಜ್ಞೆಗಳ ಮೂಲಕ ಸರ್ಕಾರಕ್ಕೆ ವಿಶೇಷ

ಅಧಿಕಾರವನ್ನು ನೀಡಲಾಯಿತು. ಈ ಕ್ರಮಗಳನ್ನು ತೆಗೆದುಕೊಂಡ ನಂತರ ಬ್ರಿಟಿಷರ ಯುದ್ಧಕಾರ್ಯದಲ್ಲಿ ಭಾರತೀಯ ಮುಖಂಡರ ಸಹಕಾರಕ್ಕಾಗಿ ಅವರೊಡನೆ ವೈಸ್‌ರಾಯ್ ಅವರು ಮಾತುಕತೆ ನಡೆಸಿದರು.

ಭಾರತವನ್ನು ಯುದ್ಧಕ್ಕೆ ಎಳೆದುದಕ್ಕೆ ಭಾರತದ ರಾಜಕೀಯ ಪಕ್ಷಗಳ ಪ್ರತಿಕ್ರಿಯೆಗಳು

ನಿರಂಕುಶವಾಗಿ ಭಾರತವನ್ನು ಯುದ್ಧದ ದಾರಿಗೆ ಎಳೆದು ಮೇಲಿನ ಕ್ರಮಗಳನ್ನು ಕೈಕೊಂಡುದುದನ್ನು ಕಾಂಗ್ರೆಸ್ಸು ಕಾರ್ಯಕಾರಿ ಸಮಿತಿಯು 1939ರ ಸೆಪ್ಟೆಂಬರ್ 14 ರಂದು ಪ್ರತಿಭಟಿಸುವ ನಿರ್ಣಯವನ್ನು ಅನುಮೋದಿಸಿತು. "ಸಾರ್ವಭೌಮತ್ವದ ಆಳ್ವಿಕೆಯನ್ನೂ, ಪಸಾಹತುಗಳನ್ನೂ, ವಿಶೇಷ ಹಕ್ಕುಗಳನ್ನೂ ಒಳಗೊಂಡು ಇರತಕ್ಕ ಪ್ರಕೃತ ಪರಿಸ್ಥಿತಿಯನ್ನೇ ರಕ್ಷಿಸಿಕೊಳ್ಳುವುದೇ ಈ ಯುದ್ಧದ ಉದ್ದೇಶವಾಗಿರುವುದಾದರೆ ಭಾರತಕ್ಕೆ ಇದರಲ್ಲಿ ಏನೂ ಆಸಕ್ತಿ ಇರದು. ಆದರೆ, ಪ್ರಜಾಸತ್ತೆ ಹಾಗೂ ಪ್ರಜಾಸತ್ತೆಯ ಆಧಾರದ ಮೇಲೆ ನವಪ್ರಪಂಚ ನಿರ್ಮಾಣವು ಅದರ ಉದ್ದೇಶವಾದರೆ ಭಾರತಕ್ಕೆ ಇದರಲ್ಲಿ ತುಂಬ ಆಸಕ್ತಿ ಇರುವುದು" ಎಂದು ಕಾಂಗ್ರೆಸ್ಸು ತನ್ನ ನಿರ್ಣಯದಲ್ಲಿ ಹೇಳಿತು. ಬ್ರಿಟನ್ನು "ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ವಿಸ್ತರಣೆಗಾಗಿ ಹೋರಾಡುತ್ತಿರುವುದಾದರೆ ಅದು ತಾನು ಆಳುತ್ತಿರುವ ದೇಶಗಳಲ್ಲೆಲ್ಲ ಸಾರ್ವಭೌಮತ್ವವನ್ನು ಮುಕ್ತಾಯಗೊಳಿಸಬೇಕು ಹಾಗೂ ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕು" ಎಂದೂ ನಿರ್ಣಯವು ಸಾರಿತು. "ಹೊರಗಡೆಯವರ ಯಾವ ರೀತಿಯ ಪ್ರವೇಶವೂ ಇಲ್ಲದೆ" ಭಾರತವು ತನ್ನ ರಾಜ್ಯಾಂಗವನ್ನು ರೂಪಿಸಿಕೊಳ್ಳಲು ಅದಕ್ಕೆ ಇರುವ ಹಕ್ಕನ್ನು ಅದು ಒತ್ತಿಹೇಳಿತು. "ಪ್ರಜಾಪ್ರಭುತ್ವ ಹಾಗೂ ಸಾರ್ವಭೌಮತ್ವ ಇವುಗಳಿಗೆ ಸಂಬಂಧಪಟ್ಟ ಯುದ್ಧದ ಉದ್ದೇಶಗಳನ್ನು ಮತ್ತು ಇವುಗಳನ್ನು ಭಾರತಕ್ಕೆ ಹೇಗೆ ಅನ್ವಯಿಸಲಾಗುವುದು ಹಾಗೂ ತಕ್ಷಣವೇ ಜಾರಿಗೆ ತರಲಾಗುವುದು" ಎಂಬುದನ್ನೂ ಸ್ಪಷ್ಟಪಡಿಸಬೇಕೆಂದು ಬ್ರಿಟಿಷ್ ಸರ್ಕಾರವನ್ನು ಆಗ್ರಹಪಡಿಸಿತು. ಸ್ವತಂತ್ರ ಭಾರತವು ಯುದ್ಧ ಕಾರ್ಯಾಚರಣೆಗಳಲ್ಲಿ ಹೆಚ್ಚು ಆಸಕ್ತಿ ವಹಿಸಿ ಪಾತ್ರವಹಿಸುವುದೆಂದು

ವಾದಿಸಿ, ಬ್ರಿಟಿಷರು ತಕ್ಷಣವೇ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂದೂ ಬ್ರಿಟಿಷ್ ಸರ್ಕಾರವನ್ನು ಕಾಂಗ್ರೆಸು ಕೇಳಿತು.

ಯುದ್ಧದ ಸನ್ನಿವೇಶವನ್ನು ಉಪಯೋಗಿಸಿಕೊಂಡು ಮುಸ್ಲಿಂ ಲೀಗು ತನ್ನ ಸ್ವತಂತ್ರ ಪಾಕಿಸ್ತಾನ ಬೇಡಿಕೆಯನ್ನು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿತು. ಭಾರತದ ಮುಸ್ಲಿಂಲೀಗು ಮಾತ್ರವೇ ಭಾರತದ ಮುಸ್ಲಿಂರ ಪರವಾಗಿ ಮಾತನಾಡಬಲ್ಲ ಏಕೈಕ ಸಂಸ್ಥೆಯಾಗಿದೆ ಎಂಬುದನ್ನು ಜಿನ್ನಾ ಅವರು ಬ್ರಿಟಿಷರಿಗೆ ಮನವರಿಕೆ ಮಾಡಿದರು. ಬ್ರಿಟಿಷರು ಯುದ್ಧವನ್ನು ಯಶಸ್ವಿಯಾಗುವಂತೆ ನಡೆಸಬೇಕಾದರೆ ಮುಸ್ಲಿಂ ಲೀಗಿನ ಕೇಳಿಕೆಯನ್ನು ಒಪ್ಪಬೇಕೆಂದು 1939ರ ಸೆಪ್ಟೆಂಬರ್ 7 ರಂದು ಜಿನ್ನಾ ಅವರು ಘೋಷಿಸಿದರು.

ಭಾರತವನ್ನು ಯಾವುದೇ ದೇಶದ ಮಿಲಿಟರಿ ಧಾಳಿಯಿಂದ ರಕ್ಷಿಸುವುದು ಬ್ರಿಟಿಷ್ ಸರ್ಕಾರದ ಮತ್ತು ಭಾರತೀಯರ ಸಾಮಾನ್ಯ ಹಿತದ ಪ್ರಶ್ನೆಯಾಗಿದೆ ಎಂಬುದನ್ನು ಬ್ರಿಟಿಷರ ಗಮನಕ್ಕೆ ತಂದು ಬ್ರಿಟನ್ನಿನ ಯುದ್ಧ ಪ್ರಯತ್ನದಲ್ಲಿ ಹಿಂದೂಗಳ ಪರಿಣಾಮಕಾರಿ ಸಹಕಾರವನ್ನು ಪಡೆಯಬೇಕಾದರೆ ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಪ್ರಜಾಪ್ರತಿನಿಧಿ ಸರ್ಕಾರವನ್ನು ಏರ್ಪಡಿಸಬೇಕೆಂದೂ 'ಮತ ಆಧಾರಿತ ಮತಕ್ಷೇತ್ರಗಳನ್ನು' (Communal Award) ರದ್ದುಪಡಿಸಬೇಕೆಂದೂ ಹಿಂದೂ ಮಹಾಸಭೆಯು ಬ್ರಿಟಿಷರನ್ನು ಕೇಳಿತು.

ಬೇಷರತ್ತಾಗಿ ಬ್ರಿಟಿಷರ ಯುದ್ಧ ಪ್ರಯತ್ನಗಳಿಗೆ ಬೆಂಬಲ ನೀಡಿದ ಸಂಸ್ಥೆಗಳು ಹಾಗೂ ವ್ಯಕ್ತಿಗಳಲ್ಲಿ ಲಿಬರಲ್ ಫೆಡರಲ್ ಪಕ್ಷ, ಅಖಿಲ ಭಾರತ ಕ್ರಿಶ್ಚಿಯನ್ ಸಮ್ಮೇಳನ ಹಾಗೂ ದೇಶೀಯ ಸಂಸ್ಥಾನಗಳ ರಾಜರುಗಳು ಸೇರಿದ್ದರು.

ಒಟ್ಟಿನಲ್ಲಿ ಎರಡನೆ ಮಹಾಯುದ್ಧ ಆರಂಭವಾದುದು ಭಾರತದ ರಾಜಕೀಯ ಸಮಸ್ಯೆ ಕುರಿತ ಚಿಂತನೆಗೆ ಹೊಸ ವಾತಾವರಣವನ್ನು ಕಲ್ಪಿಸಿತು. ಸ್ವಾತಂತ್ರ್ಯ ನೀಡಲು ಮನಸ್ಸಿಲ್ಲದ ಬ್ರಿಟಿಷರು ತಮ್ಮ ಯುದ್ಧ ಪ್ರಯತ್ನಗಳಿಗೆ ಭಾರತೀಯರ ಸಹಕಾರ ಹಾಗೂ ಸಹಾಯಕ್ಕೆ ಹವಣಿಸಬೇಕಾಯಿತು. ಭಾರತದ ರಾಜಕೀಯ ಪಕ್ಷಗಳು ತಂತಮ್ಮ ಬೇಡಿಕೆಗಳ ಬಗ್ಗೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸುವ ಅವಕಾಶವನ್ನು ಉಪಯೋಗಿಸಿ

ಕೊಂಡವು. ಈ ಒಲವುಗಳ ನಿವ್ವಳ ಫಲಿತಾಂಶ ಏನಾಯಿತು ಎಂಬುದನ್ನು ಮುಂದೆ ವಿವರಿಸಲಾಗುವುದು.

ವೈಸರಾಯ್ ಅವರು ಯುದ್ಧಕ್ಕೆ ಭಾರತೀಯ ಮುಖಂಡರ ಸಹಾಯ ಪ್ರಯತ್ನಿಸಿದುದು

ಹಿಂದೆ ಹೇಳಿದಂತೆ ಯುದ್ಧವನ್ನು ಘೋಷಿಸಿ ಯುದ್ಧ ಸಿದ್ಧತೆಗಳಿಗೆ ಸರ್ಕಾರಕ್ಕೆ ಬೇಕಾದ ವಿಶೇಷ ಅಧಿಕಾರಗಳೆಲ್ಲವನ್ನೂ ಸುಗ್ರೀವಾಜ್ಞೆಗಳ ಮೂಲಕ ಪಡೆದು ನಂತರ ವೈಸ್‌ರಾಯ್ ಅವರು ಗಾಂಧಿಜಿ, ಜವಾಹರ್ ಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ಸುಭಾಷ್‌ಚಂದ್ರ ಬೋಸ್, ವೀರ ಸಾವರ್‌ಕರ್, ಜಿನ್ನಾ, ಅಂಬೇಡ್‌ಕರ್ ಅವರನ್ನು ಭೇಟಿಮಾಡಿ ಯುದ್ಧ ಪ್ರಯತ್ನಗಳಲ್ಲಿ ಅವರುಗಳು ಸಹಕರಿಸಬೇಕೆಂದು ಕೇಳಿದರು. ಈ ಮಾತುಕತೆಗಳ ಅಂತ್ಯದಲ್ಲಿ 1939ರ ಅಕ್ಟೋಬರ್ 17 ರಂದು ಅವರು ಒಂದು ಹೇಳಿಕೆಯನ್ನು ನೀಡಿದರು. ಭಾರತಕ್ಕೆ 'ಡೊಮಿನಿಯನ್ ಅಂತಸ್ತು' ನೀಡುವುದು ಬ್ರಿಟಿಷ್ ನೀತಿಯ ಗುರಿ ಆಗಿದೆಯೆಂದೂ, ಈ ದೃಷ್ಟಿಯಿಂದ ಭಾರತೀಯರ ಹಾಗೂ ಅಲ್ಪಸಂಖ್ಯಾತರ ಅಭಿಪ್ರಾಯಗಳನ್ನು ಗಣನೆಗೆ ತಂದುಕೊಂಡು ಭಾರತ ಸರ್ಕಾರದ 1935ರ ಮಸೂದೆಯನ್ನು ತಿದ್ದುಪಡಿ ಮಾಡಲಾಗುವುದೆಂದು ಈ ಹೇಳಿಕೆಯಲ್ಲಿ ಅವರು ತಿಳಿಸಿದರು. ತಕ್ಷಣದಲ್ಲಿ, "ಯುದ್ಧ ಕಾರ್ಯನಿರ್ವಹಣೆಯಲ್ಲಿ ಭಾರತೀಯ ಸಾರ್ವಜನಿಕ ಅಭಿಪ್ರಾಯವನ್ನು ಗಮನಿಸಲು ಭಾರತವನ್ನು ಪ್ರತಿನಿಧಿಸುವ ಒಂದು 'ಸಲಹಾಸಭೆ' (Advisory Council) ಯೊಂದನ್ನು ರಚಿಸಲಾಗುವುದೆಂದೂ" ಅವರು ಘೋಷಿಸಿದರು. ಲಂಡನ್ನಿನಲ್ಲಿ ಇದೇ ತರಹದ ಹೇಳಿಕೆಯೊಂದನ್ನು, ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ, ಲಾರ್ಡ್ ಜೆಟ್‌ಲೆಂಡ್ ಅವರು ನೀಡಿದರು.

ಮೇಲಿನ ಹೇಳಿಕೆಗಳು ಕಾಂಗ್ರೆಸ್ಸಿಗೂ, ಮುಸ್ಲಿಂಲೀಗಿಗೂ ನಿರಾಶೆ ಯುಂಟುಮಾಡಿದವು. ಮುಸ್ಲಿಂಲೀಗು ತನ್ನ ಪಾಕಿಸ್ತಾನ ನಿರ್ಮಾಣ ಕುರಿತ ಪ್ರಚಾರವನ್ನು ತೀವ್ರಗೊಳಿಸಿತು. ಕಾಂಗ್ರೆಸ್ಸು, ಒಂದು ಕಡೆ, ಪ್ರತ್ಯೇಕ ಮುಸಲ್ಮಾನ ರಾಷ್ಟ್ರ ಅನಪೇಕ್ಷಣೀಯ ಎಂಬುದನ್ನು ಜಿನ್ನಾ ಹಾಗೂ ಇತರ ಮುಸ್ಲಿಂಲೀಗಿನ ಮುಖಂಡರುಗಳಿಗೆ ಮನವರಿಕೆಮಾಡಲು

ಪ್ರಯತ್ನಿಸಿತು. ಇನ್ನೊಂದು ಕಡೆ, ಭಾರತಕ್ಕೆ ತಕ್ಷಣವೇ ಪೂರ್ಣ ಸ್ವಾತಂತ್ರ್ಯ ನೀಡುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿತು. ಒಟ್ಟಿನಲ್ಲಿ, ಬ್ರಿಟಿಷ್ ಸರ್ಕಾರವೂ, ಭಾರತದ ಪ್ರಮುಖ ರಾಜಕೀಯ ಪಕ್ಷಗಳೆರಡೂ ಒಮ್ಮತಕ್ಕೆ ಬರಲು ಆಗಲಿಲ್ಲ.

ಭಾರತ ಸರ್ಕಾರ ತನ್ನದೇ ಆದ ಮಾರ್ಗದಲ್ಲಿ ಯುದ್ಧಕ್ಕೆ ಸಹಾಯ ನೀಡಿದುದು

ಮೇಲೆ ಹೇಳಿದ ಸಂದರ್ಭದಲ್ಲಿ ಭಾರತ ಸರ್ಕಾರವು ಬ್ರಿಟಿಷರ ಯುದ್ಧಕ್ಕೆ ಆದಷ್ಟು ಸಹಾಯ ಮಾಡುವ ದೃಷ್ಟಿಯಿಂದ ತನ್ನದೇ ಆದ ಮಾರ್ಗಗಳಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿತು. ಯುದ್ಧ ನೀತಿಯನ್ನು ಜಾರಿಗೆ ತರುವಂತೆ ಪ್ರಾಂತ್ಯ ಸರ್ಕಾರಗಳಿಗೆ ವೈಸ್‌ರಾಯ್ ಅವರು ಆಜ್ಞೆ ಇತ್ತರು. ಇದರ ಪರಿಣಾಮವಾಗಿ ಈ ಸರ್ಕಾರಗಳು ಕೇಂದ್ರ ಸರ್ಕಾರದ ಕೇವಲ ಒಂದೊಂದು ಇಲಾಖೆಯಾಗಿ ಪರಿಣಮಿಸಿದವು. ಈ ಪರಿಸ್ಥಿತಿಯಿಂದ ಜುಗುಪ್ಸೆಗೊಂಡ ಕಾಂಗ್ರೆಸ್ಸು ವಿವಿಧ ಪ್ರಾಂತಗಳಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ರಾಜೀನಾಮೆ ಕೊಡುವಂತೆ ಆದೇಶ ನೀಡಿತು ಹಾಗೂ 1939ರ ಅಕ್ಟೋಬರ್ ಅಂತ್ಯದ ವೇಳೆಗೆ ಕಾಂಗ್ರೆಸ್ ಮಂತ್ರಿಮಂಡಲಗಳೆಲ್ಲವೂ ರಾಜಿನಾಮೆ ಇತ್ತಿದ್ದವು.

1940–41ರಲ್ಲಿ, ಯುದ್ಧ ನಡೆಯುತ್ತಿದ್ದಾಗ, ಭಾರತೀಯ ನಾಯಕರು ಯುದ್ಧ ಪ್ರಯತ್ನಕ್ಕೆ ಹೃತ್ಪೂರ್ವಕ ಬೆಂಬಲ ನೀಡಬೇಕೆಂಬ ಬೇಡಿಕೆಗಳನ್ನು ಬ್ರಿಟಿಷ್ ಸರ್ಕಾರವು ಪುನರುಚ್ಚರಿಸಿತು. ಇದಕ್ಕೆ ಉತ್ತರವಾಗಿ ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗು ತಂತಮ್ಮ ಬೇಡಿಕೆಗಳನ್ನು ಪುನರುಚ್ಚರಿಸಿದವು. 1940 ರಲ್ಲಿ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳುವಳಿಯ ಗತಿ ನಿಧಾನವಾಯಿತು. ಬ್ರಿಟಿಷರು ತಮ್ಮ ಜೀವನ – ಮರಣ ಪ್ರಶ್ನೆಯಾಗಿದ್ದ ಮಹಾಯುದ್ಧದಲ್ಲಿ ತೊಡಗಿದ್ದಾಗ ಮತ್ತು ಜರ್ಮನಿಯ ಧಾಳಿಯೇ ಹೆಚ್ಚು ಯಶಸ್ವಿಯಾಗುತ್ತಾ ಇದ್ದಾಗ, ಸತ್ಯಾಗ್ರಹ ಹೂಡುವುದು ಭಾರತದ ಗೌರವಕ್ಕೆ ತಕ್ಕುದಲ್ಲ ಎಂಬುದು ಕಾಂಗ್ರೆಸ್ ವರಿಷ್ಠರ ಅಭಿಪ್ರಾಯವಾಗಿದ್ದಿತು. ಇದು ನಮ್ಮ ದೇಶದ ಸುಸಂಸ್ಕೃತಿಯನ್ನು ವ್ಯಕ್ತಪಡಿಸುವುದು.

ಅಟ್ಲಾಂಟಿಕ್ ಪ್ರಣಾಳಿಕೆ (Atlantic Charter)
ಚರ್ಚಿಲ್ ಅವರ ವಿಚಿತ್ರ ತರ್ಕ

1941 ರ ಮಧ್ಯಭಾಗದ ಒಂದು ಆಸಕ್ತಿಯುತ ಬೆಳವಣಿಗೆಯು ಭಾರತದ ಬಗ್ಗೆ ವಿನ್‌ಸ್ಟನ್ ಚರ್ಚಿಲ್ ಅವರು ಹೊಂದಿದ್ದ ತೀವ್ರ ಪ್ರತಿಗಾಮಿ [ಕನ್ಸರ್‌ವೆಟಿವ್] ಧೋರಣೆಯನ್ನೂ ಅವರ ವಿಚಿತ್ರ ತರ್ಕವನ್ನೂ ತೋರಿಸುವುದು. ಹಿಟ್ಲರನವೇ ಯುದ್ಧದಲ್ಲಿ ಮೇಲುಗೈ ಆಗುತ್ತಾ ಬಂದುದರಿಂದ ಮುಖ್ಯವಾಗಿ 1940 ರ ತರುವಾಯ ಬ್ರಿಟನ್ನಿನ ರಕ್ಷಣೆಗೆ ಚರ್ಚಿಲ್‌ರು ಅಮೆರಿಕ ಅಧ್ಯಕ್ಷ ರೂಸ್‌ವೆಲ್ಟ್ ಅವರ ಸಹಾಯವನ್ನು ಕೋರಿದರು. ಇವರೀರ್ವರ ಮಾತುಕತೆಯ ಫಲವಾಗಿ ಅಟ್ಲಾಂಟಿಕ್ ಸಾಗರದ ಮಧ್ಯದಲ್ಲಿ ಒಮ್ಮೆ ಭೇಟಿಯಾದಾಗ ಅವರು 1941ರ ಆಗಸ್ಟ್ 14 ರಂದು ಒಂದು ಹೇಳಿಕೆಯನ್ನಿತ್ತರು. ಇದು 'ಅಟ್ಲಾಂಟಿಕ್ ಪ್ರಣಾಳಿಕೆ' (Atlantic Charter) ಎಂದು ಪ್ರಚುರವಾಗಿದೆ. ಜನರು ತಾವು ಯಾವ ಮಾದರಿಯ ಸರ್ಕಾರ ಹೊಂದಲು ಬಯಸುತ್ತಾರೋ, ಅದನ್ನು ಹೊಂದುವ ಹಕ್ಕನ್ನು ಗೌರವಿಸುವುದಾಗಿಯೂ, ಈ ಹಕ್ಕನ್ನು ಬಲಪ್ರಯೋಗದಿಂದ ಕಸಿದುಕೊಂಡಿರುವ ಜನಾಂಗಗಳಿಗೆ ಅವುಗಳು ತಮ್ಮ ಪರಮಾಧಿಕಾರ ಹಾಗೂ ಸ್ವಆಡಳಿತವನ್ನು ಪುನಃ ಸ್ಥಾಪನೆ ಮಾಡಿಕೊಳ್ಳಲು ಸಹಾಯ ಮಾಡುವುದೂ ತಮ್ಮ ಆಸಕ್ತಿಯಾಗಿದೆ ಎಂಬುದಾಗಿ ಈ ಹೇಳಿಕೆಯಲ್ಲಿ ರೂಸ್‌ವೆಲ್ಟ್ ಮತ್ತು ಚರ್ಚಿಲ್ ಅವರು ಘೋಷಿಸಿದರು. ಹೀಗೆ ಯುದ್ಧದ ಪ್ರಜಾಪ್ರಭುತ್ವ ಪರವಾದ ಗುರಿಗಳನ್ನು ಸ್ಪಷ್ಟಪಡಿಸಿದ ಈ ಜಂಟಿ ಹೇಳಿಕೆಯು ಭಾರತದ ಮುಖಂಡರಲ್ಲಿ ಆಸೆ ಹುಟ್ಟಿಸಿತು.

ಅಟ್ಲಾಂಟಿಕ್ ಪ್ರಣಾಳಿಕೆಯಲ್ಲಿ ಘೋಷಿಸಲ್ಪಟ್ಟ ಪ್ರಜಾಪ್ರಭುತ್ವ ಗುರಿ ಸಹಜವಾದುದಾದರೆ, ಈ ಪ್ರಣಾಳಿಕೆಯನ್ನು ಬ್ರಿಟಿಷ್ ಸರ್ಕಾರವು ಭಾರತಕ್ಕೆ ತಕ್ಷಣವೇ ಅನ್ವಯಿಸಿ, ಭಾರತದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಬೇಕೆಂದು ಕಾಂಗ್ರೆಸ್ಸು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿತು. ಇದಕ್ಕೆ ಉತ್ತರವಾಗಿ ಅಟ್ಲಾಂಟಿಕ್ ಪ್ರಣಾಳಿಕೆಯ ತತ್ವಗಳು ಐರೋಪ್ಯ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವುವು; ಇವು ಬ್ರಿಟಿಷ್ ಸಾಮ್ರಾಜ್ಯದೊಳಗಣ ದೇಶಗಳಲ್ಲಿ ಸ್ವಆಡಳಿತ ವಿಕಾಸವಾಗುವುದಕ್ಕೆ ಅನ್ವಯಿಸುವುದಿಲ್ಲ ಎಂದು ಬ್ರಿಟಿಷ್

ಪ್ರಧಾನಿ ಚರ್ಚಿಲ್ ಅವರು ಹೇಳಿದರು. ಚರ್ಚಿಲ್ ಅವರ ವಿಚಿತ್ರ ತರ್ಕವು, ಭಾರತದ ರಾಷ್ಟ್ರೀಯ ಮುಖಂಡರಲ್ಲಿ ಅಂಕುರಿಸಿದ್ದ ಆಶಾಕಿರಣ ವನ್ನು ಅಳಿಸಿತು. ಎಲ್ಲಾ ಪಕ್ಷಗಳ ಮುಖಂಡರ ಪ್ರತಿಕ್ರಿಯೆಯೂ ತೀಕ್ಷ್ಣ ವಾಗಿದ್ದಿತು. ಭಾರತೀಯರು ಬ್ರಿಟಿಷರ ಯುದ್ಧದಲ್ಲಿ ಏಕೆ ಭಾಗವಹಿಸ ಬೇಕೆಂಬ ಅಭಿಪ್ರಾಯ ಅಲೆಯಲೆಯಾಗಿ ದೇಶದಲ್ಲಿ ಹರಡಿತು. ಭಾರತದ ಸಹಕಾರವಿಲ್ಲದಿದ್ದರೆ ಯುದ್ಧ ಕಾರ್ಯಾಚರಣೆಗಳು ಬಲವಾಗಲಾರವೆಂದು ತಿಳಿದಿದ್ದ ಬ್ರಿಟಿಷ್ ಪ್ರಧಾನಿಯವರು ಆಗ ಭಾರತೀಯರನ್ನು ಸಮಾಧಾನ ಗೊಳಿಸುವ ಆಲೋಚನೆ ಮಾಡಿದರು. ಈ ಆಲೋಚನೆಯ ಫಲವಾಗಿ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅವರ ನಾಯಕತ್ವದ ನಿಯೋಗವೊಂದನ್ನು ಭಾರತಕ್ಕೆ ಕಳಿಸಲಾಯಿತು. ಈ ನಿಯೋಗ ಕುರಿತ ವಿವರಣೆಯನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗುವುದು.

✤✤✤

ಅಧ್ಯಾಯ - 13

ಕ್ರಿಪ್ಸ್ ನಿಯೋಗ (Cripps' Mission)
ಮಾರ್ಚ್ 1942

ಹಿಂದೆಯೇ ಹೇಳಿರುವಂತೆ 1940-43ರ ಅವಧಿಯಲ್ಲಿ ಭಾರತದ ರಾಜಕೀಯ ಸಮಸ್ಯೆಗೆ ಪರಿಹಾರ ಹುಡುಕುವ ಬ್ರಿಟಿಷ್ ಸರ್ಕಾರದ ಪ್ರಯತ್ನಗಳಿಗೆ ಆಗ ನಡೆಯುತ್ತಿದ್ದ ಮಹಾಯುದ್ಧವೇ ತಕ್ಷಣದ ಒಂದು ಮುಖ್ಯ ಕಾರಣವಾಗಿದ್ದಿತು. ಜರ್ಮನಿಯ ಹಿಟ್ಲರನು ಯೂರೋಪ್, ರಷ್ಯಾಗಳಲ್ಲಿ, ಜಯದಿಂದ ಜಯಗಳಿಸುತ್ತಾ ಮುಂದುವರೆದು ಬ್ರಿಟನ್ ದೇಶವನ್ನು ಆಕ್ರಮಿಸುವ ಸನ್ನಾಹದಲ್ಲಿದ್ದನು. ಜಪಾನ್ ಸೇನೆಗಳು ಬರ್ಮಾ ಹಾಗೂ ಭಾರತದ ಕಡೆ ಮುನ್ನುಗ್ಗಿ ನಡೆಯುತ್ತಿದ್ದವು. ಚರ್ಚಿಲ್‌ರು ಅಟ್ಲಾಂಟಿಕ್ ಪ್ರಣಾಳಿಕೆಯು ಭಾರತಕ್ಕೆ ಅನ್ವಯಿಸದೆಂದು ಹೇಳಿದುದರಿಂದ ನಿರಾಶರಾದ ಕಾಂಗ್ರೆಸು ಮುಖಂಡರು ಚಳುವಳಿ ತೀವ್ರಗೊಳಿಸುವುದರಲ್ಲಿ ಮಗ್ನರಾಗಿದ್ದರು. ಪ್ರತ್ಯೇಕ ಮುಸ್ಲಿಂ ರಾಜ್ಯ ಪಾಕಿಸ್ತಾನಕ್ಕೆ ಬ್ರಿಟಿಷರು 'ಅಸ್ತು' ಎಂದಿರಲಿಲ್ಲವಾದುದರಿಂದ ಮುಸ್ಲಿಂಲೀಗು ಬ್ರಿಟಿಷರ ಯುದ್ಧ ಪ್ರಯತ್ನಕ್ಕೆ ಬೆಂಬಲ ನೀಡಲು ಸಿದ್ಧವಿರಲಿಲ್ಲ. ಆರನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಸುಭಾಷ್‌ಚಂದ್ರ ಬೋಸ್ ಅವರು ಜರ್ಮನಿಗೆ ಮತ್ತು ಜಪಾನ್‌ಗಳಿಗೆ ಹೋಗಿ ಭಾರತೀಯರ ಸೈನ್ಯ ಕಟ್ಟಿಕೊಂಡು ಜರ್ಮನಿಗೆ ಬೆಂಬಲವಾಗಿ ನಿಂತು ಅವರನ್ನು ಗೆಲ್ಲಿಸಿ ಭಾರತಕ್ಕೆ ಸ್ವಾತಂತ್ರ್ಯಗಳಿಸಲು ಬದ್ಧಕಂಕಣರಾಗಿದ್ದರು. ಈ ಪರಿಸ್ಥಿತಿಗಳೆಲ್ಲವೂ ಬ್ರಿಟಿಷರ ಯುದ್ಧಕಾರ್ಯಾಚರಣೆಗೆ ಉತ್ತೇಜನಕರವಾಗಿರಲಿಲ್ಲ. ಆದುದರಿಂದ ಬ್ರಿಟಿಷ್ ಸರ್ಕಾರವು

ಭಾರತೀಯರ ಸಹಕಾರ ಸಂಪಾದಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲೇ ಬೇಕಾಯಿತು.

1941ರ ಡಿಸೆಂಬರ್ 4 ರಂದು ಚರ್ಚಿಲ್ ಅವರು ನೆಹರೂ, ಆಜಾದ್ ಇತ್ಯಾದಿ ಅನೇಕ ಕಾಂಗ್ರೆಸ್ ನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಬ್ರಿಟಿಷ್ ಸರ್ಕಾರವು ಚೀನಾದ ಅಧ್ಯಕ್ಷ ಚಿಯಾಂಗ್–ಕೈ–ಶೇಕ್ ಅವರ ಮೂಲಕ ಭಾರತೀಯರನ್ನು ಯುದ್ಧಪ್ರಯತ್ನಕ್ಕೆ ಒಲಿಸಲು ಪ್ರಯತ್ನಿಸಿತು. ಚಿಯಾಂಗ್–ಕೈ–ಶೇಕ್ ಅವರು ಪತ್ನಿ ಸಮೇತರಾಗಿ ಭಾರತಕ್ಕೆ 1942ರ ಫೆಬ್ರವರಿಯಲ್ಲಿ ಆಗಮಿಸಿ ಭಾರತೀಯ ಮುಖಂಡರೊಡನೆ ಭಾರತಕ್ಕೆ ಜಪಾನಿನ ಆಕ್ರಮಣದ ಬಗ್ಗೆ ಚರ್ಚಿಸಿ ಇದನ್ನು ತಪ್ಪಿಸಲು ಬ್ರಿಟಿಷ್ ಸರ್ಕಾರದೊಡನೆ ಒಪ್ಪಂದಕ್ಕೆ ಬರಬೇಕೆಂದು ಸೂಚಿಸಿದರು. ಈ ಸಮಯದಲ್ಲಿ ಜಪಾನಿಯರು ಆಗಲೇ ಮಲಯ ಹಾಗೂ ಸಿಂಗಪೂರಗಳನ್ನು ವಶಪಡಿಸಿಕೊಂಡು ರಂಗೂನ್ ಮತ್ತು ಭಾರತದ ಪೂರ್ವತೀರದ ಕಡೆಗೆ ಧಾವಿಸುತ್ತಿದ್ದರು. ಜಪಾನು ಭಾರತದ ಮೇಲೆ ನೇರವಾಗಿ ಬರುವಂತಹ ಸ್ಥಿತಿ ಉಂಟಾದುದು ಚರ್ಚಿಲ್ ಅವರಿಗೆ ತುಂಬ ಕಳವಳವನ್ನು ಉಂಟು ಮಾಡಿತು. ಜಪಾನಿಯರು ಅಮೆರಿಕದ ಹಡಗೊಂದನ್ನು ಬಾಂಬ್ ಧಾಳಿಗೆ ಈಡುಮಾಡಿದುದು ಅಮೆರಿಕಕ್ಕೂ ಆತಂಕವಾಯಿತು. ಭಾರತೀಯರು ಸ್ವಯಂಪ್ರೇರಿತ ಸಹಕಾರ ನೀಡುವಂತೆ ಬ್ರಿಟಿಷರು ಪ್ರಯತ್ನ ಮಾಡಬೇಕೆಂಬುದು ಅಮೆರಿಕದ ಸಾರ್ವಜನಿಕ ಅಭಿಪ್ರಾಯವಾಗಿದ್ದಿತು. ಸ್ವಯಂ ಆಡಳಿತದತ್ತ ಹೆಜ್ಜೆಯಾಗುವಂತಹ ಸುಧಾರಣೆಯನ್ನು ನೀಡಿ ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಿಸಿ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಅವರು ಚರ್ಚಿಲ್‌ಗೆ ಪತ್ರ ಬರೆದರು.

ಮೇಲಿನ ಘಟನೆಗಳೆಲ್ಲವನ್ನೂ ಗಮನಕ್ಕೆ ತಂದುಕೊಂಡು ಯುದ್ಧ ಮುಗಿದನಂತರ ಭಾರತಕ್ಕೆ ಡೊಮಿನಿಯನ್ ಅಂತಸ್ತು ನೀಡುವುದಾಗಿ ಬ್ರಿಟಿಷ್ ಸರ್ಕಾರವು ಘೋಷಿಸಿತು. ಈ ಸಂದರ್ಭದಲ್ಲಿ ಚರ್ಚಿಲ್ ಅವರು ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ನಿಯೋಗವನ್ನು 1942ರ ಮಾರ್ಚ್ 11 ರಂದು ನೇಮಿಸಿದರು. ಭಾರತದ [illegible] ಮುಖಂಡರುಗಳ ಪರಿಚಯ ಹೊಂದಿದ್ದ ಕ್ರಿಪ್ಸ್ ಅವರನ್ನು ಭಾರತಕ್ಕೆ ಭೇಟಿ ಇತ್ತು ಭಾರತದ ಎಲ್ಲಾ ಪಕ್ಷಗಳ

ಮತ್ತು ಮತಗಳ ಮುಖಂಡರುಗಳೊಡನೆ ನೇರವಾಗಿ ಚರ್ಚಿಸಿ ವರದಿ ಸಲ್ಲಿಸು ವಂತೆ ಬ್ರಿಟಿಷ್ ಸರ್ಕಾರವು ಕೋರಿತು.

ಕ್ರಿಪ್ಸ್ ಅವರ ಸಲಹೆಗಳು

ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅವರು ಭಾರತಕ್ಕೆ 1942 ರ ಮಾರ್ಚಿ 22 ರಂದು ಬಂದು ಏಪ್ರಿಲ್ 12ರ ವರೆಗೆ ಇದ್ದು ವಿವಿಧ ರಾಜಕೀಯ ಪಕ್ಷಗಳ ಮುಂಖಡರುಗಳೊಡನೆಯೂ, ಕೆಲವು ಪ್ರಮುಖ ವ್ಯಕ್ತಿಗಳೊಡನೆಯೂ ಸಂಧಾನ ನಡೆಸಿ ತಮ್ಮ ಸಲಹೆಗಳನ್ನು ಮಂಡಿಸಿದರು. ಈ ಸಲಹೆಗಳ ಸಾರಾಂಶ ಹೀಗಿದೆ :

1. ಯುದ್ಧ ಮುಗಿದಾಕ್ಷಣವೇ ಚುನಾಯಿತ ರಾಜ್ಯಾಂಗ ರೂಪಿಸುವ ಸಭೆ (Constituent Assembly) ಯೊಂದನ್ನು ಸ್ಥಾಪಿಸ ತಕ್ಕದ್ದು ;

2. ಈ ಸರ್ವಪಕ್ಷೀಯ ಸಭೆಯು ರಚಿಸುವ ರಾಜ್ಯಾಂಗವನ್ನು ಬ್ರಿಟಿಷ್ ಸರ್ಕಾರವು ಒಪ್ಪತಕ್ಕದ್ದು; ಆದರೆ, ಯಾವುದೇ ಬ್ರಿಟಿಷ್ ಭಾರತದ ಪ್ರಾಂತ್ಯವು ಈ ಹೊಸ ಸಂವಿಧಾನವನ್ನು ಒಪ್ಪದಿದ್ದಲ್ಲಿ ಅದು ತನ್ನ ಪ್ರಸಕ್ತ ಸ್ಥಿತಿಯನ್ನೇ ಹೊಂದಿರತಕ್ಕದ್ದು. ಈ ಷರತ್ತು ಮತೀಯ ಸಮಸ್ಯೆ ದೃಷ್ಟಿಯಿಂದ ಮಾಡಿದುದಾಗಿ ಹೇಳಲಾಗಿದೆ.

3. ತಕ್ಷಣದಲ್ಲಿ ಅಂದರೆ ಯುದ್ಧದ ಕಾಲದಲ್ಲಿ, ಭಾರತೀಯ ರಾಜಕೀಯ ಪಕ್ಷಗಳ ಮುಖಂಡರನ್ನು ಒಳಗೊಂಡಂತೆ ವೈಸ್‌ರಾಯ್ ಅವರ ಕಾರ್ಯಕಾರಿ ಸಭೆಯನ್ನು (Executive Council) ಪುನರ‍್ರಚಿಸ ಲಾಗುವುದು.

4. ವೈಸ್‌ರಾಯ್ ಅವರು ಈವರೆಗೆ ಹೊಂದಿರುವ ಅಧಿಕಾರಗಳನ್ನೆಲ್ಲಾ ಮುಂದೆಯೂ ಹೊಂದಿರುವರು. ಅಂದಮೇಲೆ, ಭಾರತೀಯ ಸದಸ್ಯರನ್ನೊಳಗೊಂಡ ಹೊಸದಾಗಿ ರಚಿಸುವ ವೈಸ್‌ರಾಯ್ ಅವರ ಕಾರ್ಯಕಾರಿ ಸಭೆಗೆ ನಿರ್ಣಯ ಕೈಕೊಳ್ಳಲು ಅನಿರ್ಬಂಧಿತ ಪೂರ್ಣ ಸ್ವಾತಂತ್ರ್ಯವಿದ್ದಂತಾಗಲಿಲ್ಲ.

ಕ್ರಿಪ್ಸ್ ಸಲಹೆಗಳಿಗೆ ಭಾರತದ ಪ್ರತಿಕ್ರಿಯೆ

ಮೇಲೆ ಹೇಳಿರುವ ಕ್ರಿಪ್ಸ್ ಸಲಹೆಗಳು ಭಾರತದ ಯಾವ ಪಕ್ಷಕ್ಕೂ ತೃಪ್ತಿ ಉಂಟುಮಾಡಲಿಲ್ಲ. ಕ್ರಿಪ್ಸ್ ಯೋಜನೆಯಲ್ಲಿ ಕಾರ್ಯಾಂಗವು (Executive) ಶಾಸಕಾಂಗಕ್ಕೆ (Legislature) ಜವಾಬ್ದಾರಿಯಾಗದುದು ಕಾಂಗ್ರೆಸ್ಸು, ಕಾರ್ಮಿಕ ಸಂಸ್ಥೆಗಳು ಮತ್ತು ಭಾರತೀಯ ಕ್ರಿಶ್ಚಿಯನ್ನರಿಗೆ ಸಮಾಧಾನವಾಗಲಿಲ್ಲ. ಭಾರತದಲ್ಲಿ ಬ್ರಿಟಿಷ್ ಅಧಿಕಾರವು ಎಷ್ಟೇ ಸ್ವಲ್ಪ ಹತೋಟಿಯನ್ನು ಹೊಂದಿದ್ದರೂ, ಅಂತಹ ಸುಧಾರಣೆಯನ್ನು ಕಾಂಗ್ರೆಸ್ಸು ಒಪ್ಪಲು ಸಾಧ್ಯವೇ ಇಲ್ಲ ಎಂದು ಕಾಂಗ್ರೆಸ್ಸು ಹೇಳಿತು. ಪ್ರಾಂತ್ಯಗಳು ಭಾರತ ಒಕ್ಕೂಟ ತ್ಯಜಿಸುವ ಸ್ವಾತಂತ್ರ್ಯದ ಬಗ್ಗೆ ಕ್ರಿಪ್ಸ್ ಯೋಜನೆಯು ಸ್ಪಷ್ಟವಾಗಿಲ್ಲದುದರಿಂದ ಇದು ಮುಸ್ಲಿಂಲೀಗಿಗೆ ಒಪ್ಪಿಯಾಗಲಿಲ್ಲ. ಹಿಂದೂಗಳನ್ನು ಯಾವುದೇ ರೀತಿಯಲ್ಲಿ ಒಡೆಯುವ ಭಾವನೆಯೇ ಹಿಂದೂ ಮಹಾಸಭಾಕ್ಕೆ ಸಹಿಸಲಾಗಲಿಲ್ಲ. ಪರಿಶಿಷ್ಟ ವರ್ಗದವರು ಈ ಯೋಜನೆಯಲ್ಲಿ ತಮ್ಮ ಜನಾಂಗದ ಹಿತರಕ್ಷಣೆಗೆ ಸಾಕಷ್ಟು ಭರವಸೆ ಕ್ರಿಪ್ಸ್ ಸಲಹೆಗಳಲ್ಲಿ ಇಲ್ಲ ಎಂದು ಈ ವರ್ಗದವರು ಅತೃಪ್ತರಾಗಿದ್ದರು. ದೇಶೀಯ ಸಂಸ್ಥಾನಗಳ ಜನತೆಯು ಕ್ರಿಪ್ಸ್ ಅವರು ತಮ್ಮನ್ನು ಗಣನೆಗೂ ತಂದುಕೊಂಡಿಲ್ಲವಲ್ಲ ಎಂದು ಅಸಂತುಷ್ಟರಾಗಿದ್ದರು. ಹೀಗೆ ಕ್ರಿಪ್ ಅವರು ನೀಡಿದ ಸಲಹೆಗಳಿಂದ ಭಾರತದ ಜನತೆಗೆ ಸಾರ್ವತ್ರಿಕವಾಗಿ ನಿರಾಶೆಯಾಯಿತು.

ಭಾರತದ ಪರವಾಗಿ ಚರ್ಚಿಲ್ ಅವರಿಗೆ ರೂಸ್‌ವೆಲ್ಟ್ ಅವರ ಪತ್ರ

ಭಾರತಕ್ಕೆ ಕ್ರಿಪ್ಸ್ ಸಲಹೆಗಳು ತಿರಸ್ಕೃತವಾದ ಸಂದರ್ಭ ಅಂತರರಾಷ್ಟ್ರೀಯ ದೃಷ್ಟಿಯಿಂದ ತುಂಬ ಭಾವಗರ್ಭಿತವಾದ ವಿಷಯವಾಗಿದ್ದಿತು. ಏಕೆಂದರೆ, ಅದೇ ಸಮಯದಲ್ಲಿ ಜಪಾನೀಯರು ಜಯಗಳಿಸುತ್ತಾ ಬಂದು ಶೀಘ್ರವಾಗಿ ಭಾರತದ ಮೇಲೆ ಧಾಳಿ ನಡೆಸುವ ಸಂಭವ ಹೆಚ್ಚಾಗಿದ್ದಿತು. ಚರ್ಚಿಲ್ ಅವರಿಗೆ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಅವರು ಬರೆದ ಪತ್ರದಲ್ಲಿ ಭಾರತದ ಸ್ವನಿರ್ಣಯ ಹಕ್ಕನ್ನು ಒಪ್ಪಿಕೊಳ್ಳುವಂತೆ ಚರ್ಚಿಲ್‌ರನ್ನು ಒತ್ತಾಯಿಸಿದ್ದರು. "ಪ್ರಶಸ್ತ ಸಂಧಾನಗಳು ಕುಸಿದುಬಿದ್ದು, ಜಪಾನೀಯರು ಭಾರತವನ್ನು ಯಶಸ್ವಿಯಾಗಿ ಆಕ್ರಮಿಸಿಕೊಂಡರೆ ಹಾಗೂ ಇದರೊಡ

ಗೂಡಿ ಬರುವ ನಮ್ಮ ಕಡೆಗೆ ಮಿಲಿಟರಿ ಮತ್ತು ನೌಕಾ ಕ್ಷೇತ್ರಗಳಲ್ಲಿ ಸೋಲು ಗಳುಂಟಾದರೆ, ಅಮೆರಿಕದ ಸಾರ್ವಜನಿಕ ಅಭಿಪ್ರಾಯ ಬ್ರಿಟಿಷರಿಗೆ ತುಂಬ ವಿರುದ್ಧವಾಗುವುದು" ಎಂದು ಆ ಪತ್ರದಲ್ಲಿ ಚರ್ಚಿಲ್ ಅವರಿಗೆ ಒಂದು ರೀತಿಯ ಎಚ್ಚರಿಕೆ ನೀಡಿದರು. ಭಾರತದ ಸ್ವಾತಂತ್ರ್ಯ ಚಳುವಳಿಯು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅನುಕೂಲಕರ ಪ್ರತಿಕ್ರಿಯೆಯನ್ನು ಹುಟ್ಟಿಸಿದ್ದಿತು ಎಂಬುದನ್ನು ಅಧ್ಯಕ್ಷ ರೂಸ್‌ವೆಲ್ಟ್ ಅವರ ಮೇಲಿನ ಅಭಿಪ್ರಾಯವು ಸೂಚಿಸುವುದು.

ಚರ್ಚಿಲ್ ಅವರು ರೂಸ್‌ವೆಲ್ಟ್ ಅವರ ಹಿತವಾದವನ್ನು ಗಮನಿಸುವ ವ್ಯಕ್ತಿಯಾಗಿರಲಿಲ್ಲ. ಅವರವೇ ಬೇರೆ ವಾದವಾಗಿದ್ದಿತು. ಜಪಾನಿನ ಸೇನೆಗಳು ಭಾರತದ ಬಾಗಿಲಿನಲ್ಲಿರುವ ಸಂದರ್ಭದಲ್ಲಿ ರೂಸ್‌ವೆಲ್ಟ್ ಅವರ ಸಲಹೆಯನ್ನು ಒಪ್ಪಿಕೊಂಡರೆ ಭಾರತದ ಉಪಖಂಡದಲ್ಲೆಲ್ಲ ಅಸ್ತವ್ಯಸ್ತ ಸ್ಥಿತಿ ಉಂಟಾಗುವುದು ಎಂದು ಅವರು ವಾದಿಸಿದರು. ಅಲ್ಲದೆ "ಬ್ರಿಟಿಷ್ ಸಾಮ್ರಾಜ್ಯ ಅಳಿಯುವುದಕ್ಕೆ ನಾನೆಂದಿಗೂ ಕಾರಣನಾಗಲಾರೆ" ಎಂಬ ಹಟೋಕ್ತಿಯನ್ನು ಪ್ರಚುರಪಡಿಸಿದರು. ಮಹಾತ್ಮಾ ಗಾಂಧಿಜಿಯವರ ಬಗ್ಗೆ ಅವರು ಗೌರವ ಹೊಂದಿದ್ದಂತೆ ಕಾಣಲಿಲ್ಲ. "ಅರೆ ಉಡುಪಿನ ಫಕೀರ" (Half-naked Fakir) ಎಂದು ಅವರನ್ನು ಅಲ್ಲಗಳೆದರು. ಇಂತಹ ಅಪ್ಪಟ ಕನ್‌ಸರ್‌ವೆಟೀವ್ ಬ್ರಿಟಿಷ್ ಪ್ರಧಾನಿಯ ಎದುರು ಭಾರತೀಯರು ಸ್ವಾತಂತ್ರ್ಯಹೋರಾಟ ನಡೆಸಬೇಕಾಯಿತು. ಕ್ರಿಪ್ಸ್ ಸಲಹೆಗಳು ತಿರಸ್ಕೃತವಾದನಂತರ 'ಕ್ವಿಟ್' ಇಂಡಿಯ ಚಳುವಳಿ ಪ್ರಾರಂಭವಾಯಿತು. ಚಳುವಳಿಯ ಈ ಅಂತಿಮ ಘಟ್ಟದ ವಿವರಣೆಯನ್ನು ಮುಂದಿನ ಅಧ್ಯಾಯದಲ್ಲಿ ನೀಡಲಾಗುವುದು.

✤✤✤

ಅಧ್ಯಾಯ - 14

"ಭಾರತ ಬಿಟ್ಟು ಹೊರಡಿ" ("Quit India")
ಭಾರತದ ಸ್ವಾತಂತ್ರ್ಯ ಚಳುವಳಿಯ ಅಂತಿಮ ಘಟ್ಟ

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ನಾನಾ ಕಾರಣಗಳಿಂದ ಕ್ರಿಪ್ಸ್ ಸಲಹೆಗಳು ಭಾರತದ ಯಾವ ಪಕ್ಷಕ್ಕೂ ತೃಪ್ತಿಯುಂಟಾಗಲಿಲ್ಲ. ಬಿಗಿ ಮುಷ್ಟಿಯ ಬ್ರಿಟಿಷ್ ಕನ್ಸರ್‌ವೆಟಿವ್ ಪ್ರಧಾನಿ ಚರ್ಚಿಲ್ ಅವರಿಂದ ಕ್ರಿಪ್ಸ್ ಸಲಹೆಗಳಿಗಿಂತ ಹೆಚ್ಚು ಅಪೇಕ್ಷಣೀಯವಾದ ಯಾವುದೇ ಸುಧಾರಣೆಯನ್ನು ಭಾರತೀಯರು ನಿರೀಕ್ಷಿಸುವಂತಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಅಂತ್ಯವನ್ನು ಕಾಣಲು ನಾನು ಬ್ರಿಟನ್ನಿನ ಪ್ರಧಾನಿಯಾಗಿಲ್ಲ ಎಂದು ಸ್ಪಷ್ಟವಾಗಿ ನುಡಿದಿದ್ದರು. ಅದೇ ಕಾಲದಲ್ಲಿ ಯುದ್ಧದಲ್ಲಿ ಜಪಾನೀಯರು ಜಯಗಳಿಸಿ ಭಾರತದ ಕಡೆ ನುಗ್ಗುತ್ತಿದ್ದರು. ಇದರಿಂದ ಭಾರತದ ರಾಜಕೀಯ ಸಮಸ್ಯೆಯಲ್ಲಿ ಬ್ರಿಟಿಷರ ಮಿತ್ರ ರಾಷ್ಟ್ರಗಳೂ ಪ್ರವೇಶಿಸಬೇಕಾಗಿ ಬಂತು ಯುದ್ಧದ ಒತ್ತಡ, ಮಿತ್ರರಾಷ್ಟ್ರಗಳ ಭಾರತದ ಪರವಾದ ಹಿತವಚನಗಳು ಬ್ರಿಟಿಷ್ ಸರ್ಕಾರದ ಮೇಲೆ ತಮ್ಮದೇ ಆದ ಪ್ರಭಾವವನ್ನು ಹೊಂದಿದ್ದವು. ಭಾರತದ ಮುಖಂಡರುಗಳು ಈ ಸನ್ನಿವೇಶದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಯಾವ ಮಾರ್ಗ ಅನುಸರಿಸಬೇಕೆಂಬ ಬಗ್ಗೆ ಚಿಂತಿಸತೊಡಗಿದರು.

ಅಂತಿಮವಾಗಿ 1942 ರ ಜುಲೈನಲ್ಲಿ 'ಭಾರತ ಬಿಟ್ಟು ಹೊರಡಿ' ಘೋಷಣೆಯ ಚಳುವಳಿಯನ್ನು ಆರಂಭಿಸುವುದೆಂದು ಕಾಂಗ್ರೆಸ್ ನಾಯಕರು ತೀರ್ಮಾನಿಸಿದರು. ಸುದೀರ್ಘ ಸ್ವಾತಂತ್ರ್ಯ ಚಳುವಳಿಯ ಈ ಅಂತಿಮ ಘಟ್ಟದ ಐದು ವರ್ಷಗಳ ಆಗುಹೋಗುಗಳ ವಿವರಣೆಯೇ ಈ

ಅಧ್ಯಾಯದ ವಿಷಯವಾಗಿದೆ. ಇದೇ ಕಾಲದಲ್ಲಿ ಸುಭಾಷ್‌ಚಂದ್ರ ಬೋಸ್ ಅವರು ಜರ್ಮನಿ ಹಾಗೂ ಜಪಾನ್‌ಗಳ ಜೊತೆ ಸೇರಿ ಭಾರತದ ಸೇನೆ ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದುದರ ಪ್ರಯತ್ನಗಳನ್ನು ಹಿಂದೆ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಬ್ರಿಟಿಷರು ಭಾರತದ ಮೇಲಿನ ರಾಜಕೀಯ ಹಿಡಿತವನ್ನು ಬಿಟ್ಟು ಸ್ವಾತಂತ್ರ್ಯ ನೀಡಲು ಏನೇನು ತಕ್ಷಣದ ಒತ್ತಡಗಳು ಕಾರಣವಾದವು ಎಂಬುದನ್ನು ಈ ಅಧ್ಯಾಯದಲ್ಲಿ ತಿಳಿಯುತ್ತೇವೆ.

ಮುಂದೇನು ಎಂಬುದರ ಚರ್ಚೆ

ಸ್ವಾತಂತ್ರ್ಯ ಚಳುವಳಿಯನ್ನು ಹೇಗೆ ಮುಂದುವರಿಸಬೇಕೆಂಬುದರ ಬಗ್ಗೆ ಕಾಂಗ್ರೆಸ್ ಮುಖಂಡರುಗಳು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ನಾಲ್ಕು ಮುಖ್ಯವಾದುವು. ಜವಾಹರ್‌ಲಾಲ್ ನೆಹರೂ ಅವರ ಮತ ಹೀಗಿತ್ತು. ಬ್ರಿಟನ್ನು ಭಾರತದ ಸ್ವಾತಂತ್ರ್ಯವನ್ನು ತಕ್ಷಣವೇ ಒಪ್ಪಿಕೊಂಡು ಪ್ರಮುಖ ಭಾರತೀಯ ಪಕ್ಷಗಳನ್ನೊಳಗೊಂಡ ತಾತ್ಕಾಲಿಕ ಸರ್ಕಾರ (Provisional government) ರಚಿಸುವಂತೆ ಬ್ರಿಟಿಷ್ ಸರ್ಕಾರವನ್ನು ಕೇಳಬೇಕು. ವಿಶ್ವಸಂಸ್ಥೆಯ ಯುದ್ಧ ಘೋಷಣೆಗೆ[1] ಸೇರಿ ಯುದ್ಧ ಪ್ರಯತ್ನಗಳಿಗೆ ಭಾರತವು ಹೇಗೆ ಬೆಂಬಲ ನೀಡಬೇಕು ಎಂಬುದನ್ನು ಈ ತಾತ್ಕಾಲಿಕ ಭಾರತ ಸರ್ಕಾರವು ಬ್ರಿಟನ್ನಿನೊಡನೆ ಸಮಾಲೋಚಿಸಬೇಕು. ಭಾರತದ ಮೇಲೆ ಬೀಳಲಿದ್ದ ಜಪಾನೀಯರನ್ನು ಅಹಿಂಸಾತ್ಮಕ ಅಸಹಕಾರದ ಮೂಲಕ ಎದುರಿಸಬೇಕು. ಇವು ನೆಹರೂ ಅವರ ಅಭಿಪ್ರಾಯವಾಗಿದ್ದಿತು.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಮ್ ಆಜಾದ್ ಅವರು ಬ್ರಿಟನ್ನು ಭಾರತಕ್ಕೆ ಸ್ವಾತಂತ್ರ್ಯ ನೀಡುವುದಾಗಿ ವಚನ ನೀಡಿ, ಈ ವಚನ ಪಾಲನೆ ಬಗ್ಗೆ ವಿಶ್ವಸಂಸ್ಥೆಯಾಗಲಿ, ಅಮೆರಿಕದ ಅಧ್ಯಕ್ಷರಾಗಲಿ ಒಪ್ಪಿಗೆ ನೀಡಿದರೆ ಸಾಕೆಂದೂ; ಇಂತಹ ಭರವಸೆಯಿದ್ದ ವಚನವನ್ನು

---

1. ಅಮೆರಿಕಾ, ಇಂಗ್ಲೆಂಡ್, ರಷ್ಯಾ, ಚೀನಾಗಳೂ ಸೇರಿದಂತೆ 26 ರಾಷ್ಟ್ರಗಳ ಪ್ರತಿನಿಧಿಗಳು 'ಆಕ್ಸಿಸ್ ಪವರ್ಸ್' (Axis Powers) ಅಂದರೆ ಜರ್ಮನಿ, ಇಟಲಿ, ಜಪಾನ್ ವಿರುದ್ಧಕ್ಕೆ ಪರಮಾವಧಿ ಸಹಾಯ ನೀಡುವುದಾಗಿ 1942 ಜನವರಿ 1 ರಂದು ಒಂದು ಪ್ರಮಾಣಪತ್ರಕ್ಕೆ ತಮ್ಮ ರುಜು ಹಾಕಿದ್ದವು. ಇದೇ ವಿಶ್ವಸಂಸ್ಥೆಯ ಘೋಷಣೆ.

ಬ್ರಿಟಿಷ್ ಸರ್ಕಾರವು ನೀಡಿದರೆ, ಯುದ್ಧಪ್ರಯತ್ನಗಳಿಗೆ ಭಾರತವು ತನ್ನ ಪೂರ್ತಿ ಸಹಕಾರ ನೀಡಬಹುದೆಂದು ಅಭಿಪ್ರಾಯಪಟ್ಟರು.

ಮಹಾತ್ಮಾ ಗಾಂಧಿಯವರ ಚಿಂತನೆ ಬೇರೆಯಾಗಿತ್ತು. ಭಾರತವು ಬ್ರಿಟಿಷರಿಗೆ ಸೇರಿರುವುದರಿಂದ ಮಾತ್ರವೇ ಜಪಾನು ಭಾರತವನ್ನು ಆಕ್ರಮಿಸಲು ಉದ್ದೇಶಿಸಿದೆಯೆಂದೂ, ಹೀಗೆ ಮುನ್ನುಗ್ಗಿ ಬಂದರೆ ಸಿಂಗಪುರ, ಮಲಯ, ಬರ್ಮಾಗಳಲ್ಲಿ ಆದಂತೆ ಬ್ರಿಟಿಷರು ಭಾರತದಲ್ಲೂ ಜಪಾನೀಯರಿಗೆ ಶರಣಾಗತರಾಗಬೇಕಾಗುವುದೆಂದೂ ಅವರು ಹೇಳಿದರು. ತಕ್ಷಣವೇ, ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದರೆ, ಆಗ ಜಪಾನೀಯರು ಭಾರತದ ಆಕ್ರಮಣದ ಯೋಚನೆಯನ್ನು ಬಿಡುವರೆಂದೂ ಮಹಾತ್ಮಾ ಗಾಂಧಿಯವರು ಅಭಿಪ್ರಾಯಪಟ್ಟರು. ಒಂದುವೇಳೆ ಜಪಾನೀಯರು ಭಾರತಕ್ಕೆ ನುಗ್ಗಿ ಬಂದರೆ, ಸ್ವತಂತ್ರ ಭಾರತವು ಸಂಪೂರ್ಣ ಅಸಹಕಾರ ಚಳುವಳಿ ಮೂಲಕ ಅವರನ್ನು ಎದುರಿಸಬಲ್ಲದು ಎಂದೂ ಅವರು ಹೇಳಿದರು. ಆದುದರಿಂದ, 'ಭಾರತವನ್ನು ಬಿಟ್ಟು ಹೊರಡಿ' 'ದೇಶವನ್ನು ದೇವರ ಇಚ್ಛೆಗೆ ಬಿಡಿ'[1] ಎಂದು ಬ್ರಿಟಿಷರನ್ನು ಕೇಳಬೇಕೆಂಬುದು ಗಾಂಧಿಜಿಯವರ ಸ್ಪಷ್ಟ ಅಭಿಪ್ರಾಯವಾಗಿದ್ದಿತು.

ಸಿ. ರಾಜಗೋಪಾಲಾಚಾರಿಯವರದ್ದು – ರಾಜಾಜಿ ಎಂದು ಕರೆಯಲ್ಪಡುತ್ತಿದ್ದವರದು – ನಾಲ್ಕನೆಯ ಅಭಿಪ್ರಾಯವಾಗಿದ್ದಿತು. 1942ರ ಬೇಸಿಗೆಯಲ್ಲಿ ಜಪಾನಿಯರು ವಿಶಾಖಪಟ್ಟಣ, ಕೋಕನಾಡ ಇತ್ಯಾದಿ ನಗರಗಳ ಮೇಲೆ ಬಾಂಬ್ ಧಾಳಿ ನಡೆಯುತ್ತಿದ್ದುದನ್ನೂ ಸರ್ಕಾರ ಪೂರ್ವ ತೀರದ ನಗರಗಳು ಹಾಗೂ ಗ್ರಾಮಗಳ ಜನರನ್ನು ಸ್ಥಳಾಂತರ ಮಾಡುವಂತೆ ಎಚ್ಚರಿಸಿದುದನ್ನೂ, ಹಾಗೂ ಒಟ್ಟಿನಲ್ಲಿ ಬಾಂಬ್ ಧಾಳಿ ನಿರೀಕ್ಷಿಸಿ ಜನರೆಲ್ಲ ಗಾಬರಿಗೊಂಡುದುದನ್ನೂ ಅವರು ಗಮನಿಸಿದರು. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗು ಎರಡೂ ಸಂಯುಕ್ತವಾಗಿ ಬ್ರಿಟಿಷರಿಗೆ ಬೇಡಿಕೆ ಸಲ್ಲಿಸಿದರೆ, ಸ್ವಾತಂತ್ರ್ಯವು ಸಿಗುವುದೆಂದು ಅವರು ನಂಬಿದ್ದರು. ಈ ದೃಷ್ಟಿಯಿಂದ ಅವರು ಮುಸ್ಲಿಂಲೀಗಿನ ಪಾಕಿಸ್ತಾನ ಬೇಡಿಕೆಗೆ ಕಾಂಗ್ರೆಸ್ಸು ಒಪ್ಪಿಕೊಂಡು ಈ ಎರಡೂ ಸಂಸ್ಥೆಗಳು ಬ್ರಿಟಿಷ್ ಸರ್ಕಾರಕ್ಕೆ ಸ್ವಾತಂತ್ರ್ಯವನ್ನು ತಕ್ಷಣ ನೀಡಬೇಕೆಂದು ತಮ್ಮ ಬೇಡಿಕೆಯನ್ನು ಸಲ್ಲಿಸಬೇಕೆಂದೂ ರಾಜಾಜಿಯವರು ಸಲಹೆ ಮಾಡಿದರು.

---

1. *Harijan,* 10th May 1942

ಮೇಲಿನ ಅಭಿಪ್ರಾಯಗಳು ದೇಶದಲ್ಲಿ ಅನೇಕ ಗಣ್ಯ ಕಾಂಗ್ರೆಸ್ಸಿಗರಿಂದ ಚರ್ಚಿಸಲ್ಪಟ್ಟವು. ಅತ್ಯಂತ ತುರ್ತಾಗಿ ಒಂದು ನಿರ್ಧಾರಕ್ಕೆ ಬರಲೇಬೇಕಾಗಿದ್ದಿತು. ಜಪಾನೀಯರು ಭಾರತದ ಹತ್ತಿರ ಬಂದಂತೆ ದೇಶವು ಯುದ್ಧ ಭೂಮಿಯಾಗುತ್ತಿದ್ದಿತು. ಇದೇ ಸಮಯದಲ್ಲಿ ಸುಭಾಷ್ ಚಂದ್ರ ಬೋಸ್ ಅವರು ಬರ್ಲಿನ್‌ನಿಂದ (ಜರ್ಮನಿಯಲ್ಲಿನ) ಆಕಾಶವಾಣಿಯ ಮೂಲಕ ಜನತೆಗೆ ತಮ್ಮ ಸಂದೇಶವನ್ನು ಬಿತ್ತರಿಸುತ್ತಾ, ಜಪಾನಿ ಸೈನಿಕರನ್ನು ಬ್ರಿಟಿಷರ ಬಂಧನದಿಂದ ವಿಮೋಚನೆಗೊಳಿಸುವವರಂತೆ ಸ್ವಾಗತಿಸಬೇಕೆಂದು ಪ್ರೇರೇಪಿಸಿ ಕರೆನೀಡುತ್ತಿದ್ದರು. ಅನೇಕ ಭಾರತೀಯರು ಇದರಿಂದ ಪ್ರಭಾವಿತರಾಗುತ್ತಿದ್ದರು. ಕಾಂಗ್ರೆಸ್ಸಿಗೆ ಈ ಮಾರ್ಗ ಸರಿ ತೋರಲಿಲ್ಲ. ಒಂದು ನಿರ್ಧಾರಕ್ಕೆ ಬರಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಸಮಾವೇಶಗೊಂಡು ಚರ್ಚಿಸಿದವು. ಇವು ಮಹತ್ವಪೂರಿತವಾದ ಚರ್ಚೆಗಳಾಗಿದ್ದವು. ಎಲ್ಲಾ ಗಣ್ಯ ಕಾಂಗ್ರೆಸ್ ನಾಯಕರೂ ತಂತಮ್ಮ ನಿಲುವುಗಳನ್ನು ಸಮರ್ಥಿಸಿಕೊಂಡರು. ಆದರೆ ಸೌಹಾರ್ದಯುತವಾಗಿ ನಡೆದ ಈ ಚರ್ಚೆಗಳ ಫಲವಾಗಿ ಅಂತಿಮವಾಗಿ ಮಹಾತ್ಮಾ ಗಾಂಧಿಯವರ ವಾದ ಎಲ್ಲರಿಗೂ ಒಪ್ಪಿಗೆಯಾಯಿತು. ಜಪಾನೀಯರು ಭಾರತದಲ್ಲಿ ಒಂದು ಕಾಲಿಟ್ಟಿರುವ ಅಪಾಯಕರ ಯುದ್ಧ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರವು ಭಾರತದ ಜನತೆಯ ಸಾಮೂಹಿಕ ಚಳುವಳಿಯನ್ನು ಎದುರಿಸಲಾರದೆ ಸ್ವಾತಂತ್ರ್ಯ ಕೋರಿಕೆಗೆ ಅದು ಒಪ್ಪುವುದೆಂದೂ, ಆದುದರಿಂದ 'ಭಾರತ ಬಿಟ್ಟು ಹೊರಡಿ' ಎಂದು ಬ್ರಿಟಿಷರನ್ನು ಒತ್ತಾಯಿಸುವ ಸಾಮೂಹಿಕ ಚಳುವಳಿಗೆ ಇದೇ ಸರಿಯಾದ ಕಾಲವಾಗಿದೆ ಎಂದು ಮಹಾತ್ಮಾ ಗಾಂಧಿ ಅವರು ಸ್ಪಷ್ಟಪಡಿಸಿದರು. ಮುಸ್ಲಿಂ ಲೀಗಿನ ಧೋರಣೆಯಿಂದಾಗಿ ಮತೀಯ ಸಮಸ್ಯೆಯನ್ನು ಭಾರತದಲ್ಲಿ ಬ್ರಿಟಿಷರು ಇರುವವರೆಗೂ ಬಿಡಿಸಲಾಗುವುದಿಲ್ಲವೆಂದೂ ಅವರು ವಿಷದಪಡಿಸಿದರು.[1] ಈ ಚರ್ಚೆಗಳಲ್ಲಿ ಮಹಾತ್ಮಾ ಗಾಂಧಿಯವರ ಸರ್ವೋಚ್ಚ ನಾಯಕತ್ವಕ್ಕೆ ಜಯವಾಗಿ 1942ರ ಜುಲೈ 14 ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು "ಭಾರತ ಬಿಟ್ಟು ಹೊರಡಿ" (Quit India 'ಭಾರತ್ ಚೆ

---

1. Pattabhi Sitaramayya, vol II *op. cit.* P 337

ಚಲೆಜಾವ್') ಎಂಬ ನಿರ್ಣಯವನ್ನು ಅನುಮೋದಿಸಿತು. 1942ರ ಆಗಸ್ಟ್ 8 ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಇದನ್ನು ಒಪ್ಪಿತು. ಈ ನಿರ್ಣಯದ ಸಾರಾಂಶ ಹೀಗಿದೆ :

1. ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಮುಂದುವರೆಯುವುದು ಭಾರತಕ್ಕೂ ಒಳ್ಳೆಯದಲ್ಲ "ವಿಶ್ವಸಂಸ್ಥೆಯ (United Nations) ಜಯಕ್ಕೂ ಒಳ್ಳೆಯದಲ್ಲ."

2. ಭಾರತವು ಧಾಳಿಯನ್ನು ಪ್ರತಿಭಟಿಸಿ ಎದುರಿಸಬೇಕಾದರೆ, ಜನರ ಎಲ್ಲಾ ಪ್ರಮುಖ ಪಂಗಡಗಳನ್ನೂ ಪ್ರತಿನಿಧಿಸುವ ಒಂದು ತಾತ್ಕಾಲಿಕ ಸರ್ಕಾರ (Provisional Government) ರಚಿಸಲ್ಪಡಬೇಕು.

3. ಈ ತಾತ್ಕಾಲಿಕ ಸರ್ಕಾರವು ರಾಜ್ಯಾಂಗ ರೂಪಿಸುವ ಸಭೆ (Constituent Assembly) ಯನ್ನು ಕರೆಯಲು ಯೋಜನೆಯೊಂದನ್ನು ತಯಾರಿಸುವುದು. ಸ್ವತಂತ್ರ ಭಾರತದ ಮತ್ತು ಗ್ರೇಟ್‌ಬ್ರಿಟನ್ನಿನ ಪ್ರತಿನಿಧಿಗಳು ಒಟ್ಟಿಗೆ ಸೇರಿ ಈ ಎರಡು ರಾಷ್ಟ್ರಗಳ ಪರಸ್ಪರ ಭವಿಷ್ಯ ಸಂಬಂಧಗಳನ್ನೂ, ಶತ್ರುವಿನ ಧಾಳಿ ಎದುರಿಸುವ ಕಾರ್ಯದಲ್ಲಿ ಎರಡೂ ರಾಷ್ಟ್ರಗಳು ಹೇಗೆ ಸಹಕರಿಸಬೇಕೆಂಬುದನ್ನೂ ನಿರ್ಧರಿಸುವರು.

4. ಭಾರತವು ಸ್ವಾತಂತ್ರ್ಯದ ಬೆಳಕನ್ನು ಅನುಭವಿಸಿದಾಗ ಮಾತ್ರ, ಭಾರತವು ಬ್ರಿಟನ್ನಿನ ಮೇಲೆ ಹೊಂದಿರುವ ದ್ವೇಷವನ್ನು ತಪ್ಪಿಸಿ ಸ್ನೇಹವನ್ನು ಕಾಂಗ್ರೆಸ್ಸು ಬೆಳೆಸಬಲ್ಲದು.

5. ಬ್ರಿಟಿಷರು ಅನುಸರಿಸುತ್ತಾ ಬಂದಿರುವ 'ವಿಭಜಿಸು, ಆಳು' (Divide and Rule) ಎಂಬ ನೀತಿಯಿಂದ ಭಾರತದ ಮತೀಯ ಸಮಸ್ಯೆಯನ್ನು ಪರಿಹರಿಸಲಾಗುತ್ತಿಲ್ಲ. ಬ್ರಿಟಿಷರ ಆಳ್ವಿಕೆ ಕೊನೆಗೊಂಡರೆ ಈ ಸಮಸ್ಯೆ ಸುಲಭವಾಗಿ ಪರಿಹಾರವಾಗುವುದು.

6. ಬ್ರಿಟಿಷರು 'ಭಾರತದ ಆಳ್ವಿಕೆ'ಯನ್ನು ಕೊನೆಗಾಣಿಸಬೇಕೆಂದು ಕೇಳುತ್ತಿರುವುದು ಬ್ರಿಟಿಷರನ್ನಾಗಲೀ ಅಥವಾ ಮಿತ್ರರಾಷ್ಟ್ರಗಳನ್ನಾಗಲೀ ಅವುಗಳ ಯುದ್ಧ ಕಾರ್ಯಾಚರಣೆಯನ್ನು ನಡೆಸುವುದರಲ್ಲಿ ಪೇಚಿಗೆ

ಸಿಕ್ಕಿಸುವ ಉದ್ದೇಶ ಕಾಂಗ್ರೆಸ್ಸಿಗೆ ಖಂಡಿತ ಇಲ್ಲ. ಜಪಾನಾಗಲೀ ಅಥವಾ ಆಕ್ಸಿಸ್ ಗುಂಪಿನ (Axis Groups) ಇತರ ರಾಷ್ಟ್ರವಾಗಲೀ ಭಾರತದ ಮೇಲೆ ಮಾಡುವ ಧಾಳಿಗೆ ಉತ್ತೇಜನ ನೀಡುವ ಉದ್ದೇಶವೂ ಕಾಂಗ್ರೆಸ್ಸಿಗೆ ಇಲ್ಲ.

7. ಭಾರತದ ಹಾಗೂ ಬ್ರಿಟನ್ನಿನ ಹಿತಾಸಕ್ತಿಗಳ ದೃಷ್ಟಿಯಿಂದಲೂ ಮತ್ತು ವಿಶ್ವಸಂಸ್ಥೆಯು ಸ್ವಾತಂತ್ರ್ಯದ ಪರವಾಗಿ ನೀಡಿರುವ ಘೋಷಣೆಯ ಅನ್ವಯ ದೃಷ್ಟಿಯಿಂದಲೂ ಅತ್ಯಂತ ನ್ಯಾಯಸಮ್ಮತ ವಾದ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಸಲಹೆಯನ್ನು ಬ್ರಿಟನ್ನು ಒಪ್ಪಬೇಕೆಂದು ಕಾಂಗ್ರೆಸ್ಸು ವಾದಿಸಿತು.

8. ಬ್ರಿಟಿಷರು ಭಾರತದ ಮೇಲಿನ ಅಧಿಕಾರವನ್ನು ತ್ಯಜಿಸಲು ನಿರಾಕರಿಸಿದರೆ, ಅಹಿಂಸೆಯನ್ನು ತನ್ನ ನೀತಿಯ ಒಂದು ಅಂಗವಾಗಿ 1920 ರಲ್ಲಿ ಘೋಷಿಸಿದ ಕಾಲದಿಂದಲೂ ಭಾರತವು ಬೆಳೆಸಿಕೊಂಡಿರುವ ಸರ್ವಸ್ವ ಅಹಿಂಸಾಬಲವನ್ನೂ, ಅದು ತನ್ನ ರಾಜಕೀಯ ಹಕ್ಕುಗಳನ್ನೂ ಮತ್ತು ಸ್ವಾತಂತ್ರ್ಯವನ್ನೂ ಪಡೆಯಲು ಕಾಂಗ್ರೆಸ್ಸು ಪ್ರಯೋಗಿಸಲೇ ಬೇಕಾಗುತ್ತದೆ ಹಾಗೂ ಗಾಂಧಿಜಿಯವರ ನಾಯಕತ್ವದಲ್ಲಿ ಅಹಿಂಸಾ ಮಾರ್ಗದ ಸಾಮೂಹಿಕ ಚಳುವಳಿಯನ್ನು ಆರಂಭಿಸಲಾಗುತ್ತದೆ ಎಂದು ಕಾಂಗ್ರೆಸ್ಸು ನಿರ್ಣಯಿಸಿತು.

ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಮೇಲಿನ 'ಭಾರತ ಬಿಟ್ಟು ಹೊರಡಿ' ನಿರ್ಣಯವು ಅತ್ಯಂತ ಪ್ರಾಮುಖ್ಯವುಳ್ಳ ನಿರ್ಣಯವಾಗಿದೆ. ಈ ಚಳುವಳಿಯ ಅಂತಿಮ ಐದು ವರ್ಷಗಳ ಅವಧಿಯ ಯಶಸ್ವಿ ಘಟ್ಟದ ಆರಂಭವನ್ನು ಈ ನಿರ್ಣಯವು ಸೂಚಿಸುವುದು.

ಬ್ರಿಟಿಷರಿಗೆ ಕಟ್ಟಕಡೆಯ ಎಚ್ಚರಿಕೆ

1942 ರ ಜುಲೈ 14 ರಂದು ಮೇಲೆ ಹೇಳಿದ 'ಭಾರತ ಬಿಟ್ಟು ಹೊರಡಿ' ನಿರ್ಣಯವನ್ನು ಕಾಂಗ್ರೆಸ್ಸು ಅನುಮೋದಿಸಿದ ನಂತರ ಈ ನಿರ್ಣಯವನ್ನು ಖುದ್ದಾಗಿ ವಿಶದಪಡಿಸಲು ಮಹಾತ್ಮಾ ಗಾಂಧಿಯವರ ಪರವಾಗಿ ಮೀರಾಬೆನ [1] ಎಂಬ ಒಬ್ಬ ಗಾಂಧಿಜಿಯವರ ಆಪ್ತ ಶಿಷ್ಯೆಯಾದವ

ಳನ್ನು ವೈಸರಾಯ್ ಅವರನ್ನು ಭೇಟಿಮಾಡಲು ಕಳುಹಿಸಲಾಯಿತು. ಆದರೆ, ಕಾಂಗ್ರೆಸ್ಸು ಕ್ರಾಂತಿಮಾರ್ಗ ಹಿಡಿದಿರುವುದರಿಂದ ಕಾಂಗ್ರೆಸ್ಸಿನ ಯಾವ ಪ್ರತಿನಿಧಿಯನ್ನೂ ಭೇಟಿ ಮಾಡಲು ಅವರು ಸಿದ್ಧವಿಲ್ಲ ಎಂದು ವೈಸರಾಯ್ ಅವರು ಮೀರಾಬೆನ್ ಅವರಿಗೆ ಭೇಟಿಯ ಅವಕಾಶ ನೀಡಲಿಲ್ಲ. ಆಗ ಕಾಂಗ್ರೆಸ್ಸು ಬ್ರಿಟಿಷ್ ಸರ್ಕಾರಕ್ಕೆ ತನ್ನ ನಿರ್ಣಯವನ್ನು ತಲುಪಿಸಿ ತನ್ನೊಡನೆ ರಾಜಕೀಯ ಒಪ್ಪಂದಕ್ಕೆ ಬರಲು ಬ್ರಿಟಿಷ್ ಸರ್ಕಾರಕ್ಕೆ 24 ದಿವಸಗಳ ಅವಧಿಯನ್ನು ನೀಡಿತು. ಇದು ಬ್ರಿಟಿಷ್ ಸರ್ಕಾರಕ್ಕೆ ನೀಡಿದ ಅಂತಿಮ ಎಚ್ಚರಿಕೆಯಾಗಿದ್ದಿತು (ultimatum).

ರೂಸ್‌ವೆಲ್ಟ್ ಹಾಗೂ ಚಿಯಾಂಗ್–ಕೈ–ಷೆಕ್ ಅವರಿಗೆ ಗಾಂಧಿಜಿಯವರು ಪತ್ರ ಬರೆದುದು

ಬ್ರಿಟನ್ನಿನ ಮಿತ್ರ ರಾಷ್ಟ್ರವಾದ ಅಮೆರಿಕದ ಜನತೆಯೂ ಜಪಾನಿನ ವಿರೋಧಿ ಚೀಣಾದ ಜನತೆಯೂ ತಮ್ಮದೇ ಆದ ಕಾರಣಗಳಿಂದಾಗಿ ಭಾರತದ ಸ್ವಾತಂತ್ರದ ಪರ ಅಭಿಪ್ರಾಯ ಹೊಂದಿದ್ದುದನ್ನು ಗಮನಿಸಿ ಮಹಾತ್ಮಾ ಗಾಂಧಿಯವರು ಈ ಎರಡೂ ರಾಷ್ಟ್ರಗಳ ಅಧ್ಯಕ್ಷರುಗಳಿಗೆ "ಭಾರತ ಬಿಟ್ಟು ಹೊರಡಿ" ನಿರ್ಣಯವನ್ನು ಕಾಂಗ್ರೆಸ್ಸು ಅನುಮೋದಿಸುವ ಸಂದರ್ಭದಲ್ಲಿ ಪತ್ರ ಬರೆದರು. ಇದರಲ್ಲಿ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೂ ಅಧ್ಯಕ್ಷ ಚಿಯಾಂಗ್ - ಕೈ - ಷೆಕ್ ಅವರಿಗೂ ಸ್ಪಷ್ಟಪಡಿಸಿ ಅವರುಗಳು ಭಾರತದ ಪರವಾಗಿ ಬ್ರಿಟಿಷ್ ಸರ್ಕಾರದ ಮೇಲೆ ಪ್ರಭಾವ ಬೀರಬೇಕೆಂದು ಸೂಚಿಸಿದರು. ಯುದ್ಧದಲ್ಲಿ ಭಾರತದ ಜನರು ಪೂರ್ಣ ಮನಸ್ಸಿನಿಂದ ಸಹಕರಿಸಬೇಕಾದರೆ ಸ್ವಾತಂತ್ರ್ಯ ನೀಡಿಕೆ ಅವಶ್ಯಕ ವೆಂದು ಅವರು ಸ್ಪಷ್ಟಪಡಿಸಿದರು. ಇದು ಸಹಜವಾದ ಅಭಿಪ್ರಾಯವೆಂದು ಈ ಇಬ್ಬರೂ ವಿಶ್ವದ ಹಿರಿಯ ರಾಜಕಾರಣಿಗಳಿಗೆ ತೋರಿತು. ಇವರುಗಳು ಚರ್ಚಿಲ್ ಅವರಿಗೆ ಭಾರತೀಯ ಸಮಸ್ಯೆಯನ್ನು ತಕ್ಷಣವೇ ಪರಿಹರಿಸ

1. ಮೀರಾಬೆನ್ ಎಂಬುವಳು ಬ್ರಿಟಿಷ್ ಅಡ್ಮಿರಲ್ ಒಬ್ಬರ ಮಗಳು. ಗಾಂಧಿಜಿಯವರ ತತ್ವಗಳಿಂದ ಆಕರ್ಷಿತಳಾಗಿ ಭಾರತಕ್ಕೆ ಬಂದು ಗಾಂಧಿಜಿಯವರ ಶಿಷ್ಯೆಯಾಗಿ ನೆಲೆಸಿದಳು. ಅವಳ ಮೊದಲಿನ ಹೆಸರು ಮಿಸ್ ಸ್ಲೇಡ್.

ಬೇಕೆಂದು ಸೂಚಿಸಿದರು. ಆದರೆ, ಶುದ್ಧ ಕನ್ಸರ್ವೇಟಿವ್ ಸಾಮ್ರಾಜ್ಯವಾದಿ ವಿನ್ಸ್‌ಟನ್ ಚರ್ಚಿಲ್ ಅವರು ಈ ವಿಶ್ವ ಗಣ್ಯವ್ಯಕ್ತಿಗಳ ಮಾತಿಗೆ ಏನೂ ಬೆಲೆ ಕೊಡಲಿಲ್ಲ. ಭಾರತಕ್ಕೆ ಸಧ್ಯದ ಪರಿಸ್ಥಿತಿಯಲ್ಲಿ ನೀಡಬಹುದಾದ ರಾಜಕೀಯ ಸುಧಾರಣೆಗಳೆಲ್ಲವನ್ನೂ ಆಗಲೇ ಭಾರತಕ್ಕೆ ನೀಡಲಾಗಿದೆ, ಹೆಚ್ಚು ಏನನ್ನೂ ಮಾಡಲಾಗುವುದಿಲ್ಲವೆಂದೂ ಅವರು ತಮ್ಮ ಉತ್ತರದಲ್ಲಿ ರೂಸ್‌ವೆಲ್ಟ್ ಮತ್ತು ಚಿಯಾಂಗ್-ಕೈ-ಶೆಕ್ ಅವರಿಗೆ ತಿಳಿಸಿದರು. ಈ ಪ್ರತಿಕ್ರಿಯೆ ಗಾಂಧಿಜಿಯವರಿಗೂ, ಕಾಂಗ್ರೆಸ್ಸಿಗೂ ತುಂಬಾ ನಿರಾಶೆ ಉಂಟು ಮಾಡಿತು. ನ್ಯಾಯ ಹಾಗೂ ಅಂದಿನ ವಸ್ತುಸ್ಥಿತಿಗಳನ್ನು ಗುರುತಿಸದ ಬ್ರಿಟಿಷ್ ಸರ್ಕಾರದ ಎದುರಿಗೆ ತಾವು ಮಾಡಿದ ಪ್ರಯತ್ನಗಳೆಲ್ಲವೂ ವಿಫಲ ವಾದುದರಿಂದ ಕಾಂಗ್ರೆಸ್ಸಿನ ನಾಯಕರು "ಭಾರತ ಬಿಟ್ಟು ಹೊರಡಿ" ಚಳುವಳಿ ಅನಿವಾರ್ಯ ಎಂಬ ತೀರ್ಮಾನಕ್ಕೆ ಬಂದರು. ಬ್ರಿಟಿಷರಿಗೆ ಕೊಟ್ಟಿದ್ದ 24 ದಿವಸಗಳ ಅವಧಿ ಮುಗಿದ ದಿನ ಅಂದರೆ 1942 ರ ಆಗಸ್ಟ್ 8 ರಂದು ಅಖಿಲ ಭಾರತದ ಕಾಂಗ್ರೆಸ್ ಸಮಿತಿಯು, ಮುಂಚೆಯೆ ಅಂದರೆ 1942ರ ಜುಲೈ 14 ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅನು ಮೋದಿಸಿದ್ದ "ಭಾರತ ಬಿಟ್ಟು ಹೊರಡಿ" ನಿರ್ಣಯವನ್ನು ಒಪ್ಪಿತು. ಆ ನಿರ್ಣಯದಲ್ಲಿ ಸೂಚಿಸಿದಂತೆ ಮಹಾತ್ಮಾಗಾಂಧಿಯವರು ಈ ಹೊಸ ಸಾಮೂಹಿಕ ಚಳುವಳಿಯ ಮುಖಂಡತ್ವವನ್ನು ವಹಿಸಿಕೊಂಡರು.

'ಭಾರತ ಬಿಟ್ಟು ಹೊರಡಿ' ನಿರ್ಣಯದ ಬಗ್ಗೆ ಬ್ರಿಟಿಷ್ ಸರ್ಕಾರ ಕೋಪಗೊಂಡುದುದು

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು 'ಭಾರತ ಬಿಟ್ಟು ಹೊರಡಿ' ನಿರ್ಣಯವನ್ನು 1942 ರ ಆಗಸ್ಟ್ 8ರ ಸಾಯಂಕಾಲ ಅನುಮೋದಿಸಿದಾಗ ವಿಶ್ವಸಂಸ್ಥೆ ರಾಷ್ಟ್ರಗಳಲ್ಲಿ ಮುಖ್ಯವಾಗಿದ್ದ ಅಮೆರಿಕ ಸರ್ಕಾರಕ್ಕೆ ಈ ನಿರ್ಣ ಯದ ಉದ್ದೇಶಗಳನ್ನು ವಿಶದಪಡಿಸುವುದಕ್ಕೆ ಮರುದಿವಸ ಬೆಳಿಗ್ಗೆ ಜವಾಹರ ಲಾಲ್ ನೆಹರೂ ಅವರು ಅಮೆರಿಕಕ್ಕೆ ಹೊರಡುವುದೆಂದು ನಿರ್ಧರಿಸ ಲಾಗಿದ್ದಿತು. ಆದರೆ, ಈ ನಿರ್ಣಯದಿಂದ ಕೋಪಗೊಂಡಿದ್ದ ಬ್ರಿಟಿಷ್ ಸರ್ಕಾರವು ಅತ್ಯಂತ ಜರೂರು ಕ್ರಮಗಳನ್ನು ಕೈಗೊಂಡು ಅಂದು ಬೆಳಗಾಗುವುದರ ಒಳಗೆ ಗಾಂಧಿಜಿ, ನೆಹರೂ, ಆಜಾದ್, ಪಟೇಲ್,

ರಾಜೇಂದ್ರ ಪ್ರಸಾದ್, ಕೃಪಲಾನಿ, ಅಸಫ್ ಅಲಿ, ಸರೋಜಿನಿ ನಾಯ್ಡು ಇತ್ಯಾದಿ ಎಲ್ಲಾ ಮುಖಂಡರನ್ನೂ ದಸ್ತಗಿರಿಮಾಡಿ ಜೈಲಿಗೆ ಕಳಿಸಿತು. ಇದಾದ ನಂತರ ರಾಷ್ಟ್ರಾದ್ಯಂತವೂ ಕಾಂಗ್ರೆಸ್ ಪಕ್ಷದ ನೂರಾರು ಕಾರ್ಯಕರ್ತರನ್ನೂ ಬಂಧಿಸಲಾಯಿತು. ಹೀಗೆ ಒಟ್ಟಾರೆಯಾಗಿ ಮುಖಂಡರುಗಳನ್ನೂ, ಸಾವಿರಾರು ಕಾರ್ಯಕರ್ತರನ್ನೂ ಬಂಧಿಸಿದರೆ ಚಳುವಳಿ ತಣ್ಣಗಾಗುವುದೆಂದು ಬ್ರಿಟಿಷ್ ಸರ್ಕಾರವು ನಿರೀಕ್ಷಿಸಿದ್ದಿತು. ಆದರೆ, ಅನೇಕ ದಶಕಗಳಿಂದ ಚಳುವಳಿಗೆ ಸಿದ್ಧಪಡಿಸಲಾಗಿದ್ದ ಭಾರತದ ಜನತೆಯನ್ನು ಬ್ರಿಟಿಷ್ ಸರ್ಕಾರದ ಈ ಕ್ರಮಗಳು ತಾವೇ ಈ ಹೊಸ ರೂಪದ ಚಳುವಳಿಯನ್ನು ಆರಂಭಿಸುವಂತೆ ಪ್ರೇರೇಪಿಸಿದುವು. ಮುಖಂಡರುಗಳಿಂದ ಈ ಹೊಸ ಚಳುವಳಿಯನ್ನು ಹೇಗೆ ನಡೆಸಬೇಕೆಂಬ ಬಗ್ಗೆ ಈ ಜನತೆಗೆ ನಿರ್ದೇಶನಗಳಿರಲಿಲ್ಲ; ಹೀಗೆ ನಿರ್ದೇಶನ ನೀಡಲು ಬ್ರಿಟಿಷ್ ಸರ್ಕಾರ, ಮುಖಂಡರಿಗೆ ಕಾಲಾವಕಾಶವನ್ನೇ ಕೊಡದೆ ಅವರೆಲ್ಲರನ್ನೂ ಜೈಲಿಗೆ ಹಾಕಿದ್ದಿತು. ಆದುದರಿಂದ ಜನರು ತಮಗೆ ತೋಚಿದಂತೆ ಪ್ರತಿಭಟನಾ ಕ್ರಮಗಳನ್ನು ಕೈಗೊಳ್ಳಲಾರಂಭಿಸಿದರು. ಬ್ರಿಟಿಷರನ್ನು 'ಭಾರತ ಬಿಟ್ಟು ಹೊರಡಿ' ಎಂದು ಕಾಂಗ್ರೆಸ್ ನೀಡಿದ ಕರೆ ಜನತೆಗೆ ಸಾಕಷ್ಟು ನಿರ್ದೇಶನವಾಯಿತು. ಸರ್ಕಾರದ ಆಡಳಿತವನ್ನು ಸ್ತಂಭಿತಗೊಳಿಸಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸಲು ತಮಗೆ ತೋಚಿದುದನ್ನೆಲ್ಲಾ ಮಾಡಲಾರಂಭಿಸಿದರು.

ದಂಗೆ ಎದ್ದ ಭಾರತ

ಎಲ್ಲಾ ಮುಖಂಡರುಗಳನ್ನೂ, ಸಹಸ್ರಾರು ಇತರ ಕಾಂಗ್ರೆಸ್ಸಿಗರನ್ನೂ ಬಂಧನಕ್ಕೆ ಒಳಪಡಿಸಿದುದರಿಂದ ಇಡೀ ರಾಷ್ಟ್ರವೇ ದಂಗೆ ಎದ್ದಿತು. ನೆಹರೂ ಅವರು ಹೇಳಿರುವಂತೆ "1857 ರ ನಂತರ ಮೊದಲ ಬಾರಿಗೆ ಅಸಂಖ್ಯಾತ ಭಾರತೀಯರು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಬಲಪ್ರಯೋಗದಿಂದ (ಆದರೆ ಶಸ್ತ್ರಾಸ್ತ್ರಗಳಿಲ್ಲದ ಬಲಪ್ರಯೋಗದಿಂದ) ಪ್ರತಿಭಟಿಸಲು ಎದ್ದು ನಿಂತರು." ಪ್ರತಿಭಟನೆ ಅನೇಕ ರೂಪಗಳನ್ನು ತಾಳಿತು. ವಿದ್ಯುಚ್ಛಕ್ತಿ ಹಾಗೂ ಟೆಲಿಫೋನ್ ತಂತಿಗಳನ್ನು ಕಡಿದುಹಾಕಲಾಯಿತು; ಸಂಪರ್ಕ ವ್ಯವಸ್ಥೆ ಕುಸಿಯಿತು. ರೈಲ್ವೆ ಬೋಗಿಗಳಿಗೆ ಬೆಂಕಿ ಹಚ್ಚಲಾಯಿತು; ಮಿಲಿಟರಿ ವಾಹನಗಳನ್ನು ನಾಶಪಡಿಸಲಾಯಿತು. ವಿದ್ಯಾ

ಸಂಸ್ಥೆಗಳ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಪ್ರತಿಭಟನೆಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಅನೇಕ ವಿಶ್ವವಿದ್ಯಾನಿಲಯಗಳೂ, ಶಾಲೆಗಳೂ ಮುಚ್ಚಲ್ಪಟ್ಟವು. ಗಿರಣಿಗಳ ಕಾರ್ಮಿಕರು ಸಂಪು ಹೂಡಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಹಿಂಸಾತ್ಮಕ ಪ್ರತಿಭಟನೆಗಳೂ ನಡೆದವು. ಹೀಗೆ ತಮ್ಮ ನೆಚ್ಚಿನ ನಾಯಕರನ್ನು ಬಂಧಿಸಿದುದರಿಂದ ಜನರೆಲ್ಲರೂ ಉದ್ರೇಕಗೊಂಡಿದ್ದರು.

'ಭಾರತ ಬಿಟ್ಟು ಹೊರಡಿ' ನಿರ್ಣಯಕ್ಕೆ ಕಾಂಗ್ರೆಸ್ಸೇತರ ನಾಯಕರ ಹಾಗೂ ಅಂತರರಾಷ್ಟ್ರೀಯ ಪ್ರತಿಕ್ರಿಯೆ

ಲಿಬರಲ್ ಪಕ್ಷದ ನಾಯಕರಾಗಿದ್ದ ಟಿ. ಬಿ. ಸಪ್ರು, ಪರಿಶಿಷ್ಟವರ್ಗದ ಮುಖಂಡ ಬಿ. ಆರ್. ಅಂಬೇಡ್ಕರ್, ಮುಸ್ಲಿಂ ಲೀಗಿನ ಜಿನ್ನಾ, ಹಿಂದೂ ಮಹಾಸಭಾ ಅಧ್ಯಕ್ಷ ಸಾವರ್‌ಕರ್, ಮತ್ತು ಸಿಖ್ ಜನಾಂಗ ಇವರೆಲ್ಲರೂ ನಾನಾ ಕಾರಣಗಳಿಗಾಗಿ ಕಾಂಗ್ರೆಸ್ಸಿನ 'ಭಾರತ ಬಿಟ್ಟು ಹೊರಡಿ' ಚಳುವಳಿಯನ್ನು ಸಮರ್ಥಿಸಲಿಲ್ಲ.

ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಮೇಲಿನ ನಿರ್ಣಯದ ಬಗ್ಗೆ ವಿವಿಧ ಪ್ರತಿಕ್ರಿಯೆ ಪ್ರಕಟವಾಯಿತು. ಕ್ಲಿಮೆಂಟ್ ಆಟ್ಲೀ ಅಂತಹ ಮುಖಂಡರು ಯುದ್ಧ ಮುಗಿದ ನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದು ಖಂಡಿತ. ಆದುದರಿಂದ ಅಲ್ಲಿಯವರೆಗೆ ಕಾಂಗ್ರೆಸು ಕಾಯಬಹುದಿತ್ತು ಎಂದರು. ಅಮೇರಿಕದಲ್ಲಿ ಅಲ್ಲಿನ ಉಪಾಧ್ಯಕ್ಷ ಹೆನ್ರಿ ವೆಲೇಸ್, ಲಿನ್ ಯುಟಾಂಗ್, ಪರ್ಲ್‌ಬಕ್, ವೆಂಡೆಲ್ ವಿಲ್ಕೀ ಅಂತಹ ಗಣ್ಯರು ಅಧೀನ ಭಾರತದ ಚಳುವಳಿ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದರು. ಆದರೆ ಅಲ್ಲಿನ ಕೆಲವು ಮುಖ್ಯ ವೃತ್ತಪತ್ರಿಕೆಗಳು ಚಳುವಳಿಯು ಅರಾಜಕೀಯತೆ ಹಾಗೂ ಹಿಂಸಾತ್ಮಕ ಕಾರ್ಯಗಳಿಗೆ ಮಾರ್ಗವಾಗಿದೆ ಎಂದು ಚಳುವಳಿಯನ್ನು ಖಂಡಿಸಿದವು. ಭಾರತದ ಪರ ತುಂಬಾ ಆಸಕ್ತಿ ವಹಿಸಿದ ಅಂತರರಾಷ್ಟ್ರೀಯ ವ್ಯಕ್ತಿ ಚೀನಾದ ಅಧ್ಯಕ್ಷ ಚಿಯಾಂಗ್-ಕೈ-ಷೆಕ್ ಅವರು, ಬ್ರಿಟಿಷ್ ಸರ್ಕಾರವು ಹಠಾತ್ತಾಗಿ ಎಲ್ಲಾ ಮುಖಂಡರನ್ನೂ, ಸಾವಿರಾರು ಮಂದಿ ಕಾಂಗ್ರೆಸ್ಸಿಗರನ್ನೂ ಬಂಧಿಸಿದುದನ್ನು ವಿರೋಧಿಸಿ ಅವರು ಅಮೇರಿಕ ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೆ ಪತ್ರ ಬರೆದರು. ರೂಸ್‌ವೆಲ್ಟ್ ಅವರು ಈ ಪತ್ರವನ್ನು ಬ್ರಿಟಿಷ್ ಪ್ರಧಾನಿ

ಚರ್ಚಿಲ್ ಅವರಿಗೆ ರವಾನಿಸಿದರು. ಈ ಪತ್ರ ಓದಿದ ಚರ್ಚಿಲ್ ಅವರು ಚಿಯಾಂಗ್–ಕೈ–ಷೆಕ್ ಅವರಿಗೆ ಅವರು ಈ ರೀತಿ ಬರೆದಿರುವುದು ಬ್ರಿಟಿಷ್ ಸಾಮ್ರಾಜ್ಯದ ಆಂತರಿಕ ವಿಷಯಗಳಲ್ಲಿ ಪ್ರವೇಶಿಸಿದಂತಾಗಿದೆ, ಇದು ತಪ್ಪು; ಮತ್ತು ಚಿಯಾಂಗ್–ಕೈ–ಷೆಕ್ ಅವರು 'ತಮ್ಮ ಕರ್ತವ್ಯ ವಷ್ಟನ್ನೇ ನೋಡಿಕೊಳ್ಳಲಿ ಸಾಕು' ('Let him mind his own business') ಎಂಬ ಕಟುವಾದ ಉತ್ತರ ಕೊಟ್ಟರು.

ಬ್ರಿಟಿಷ್ ಸರ್ಕಾರ ಸ್ವಾತಂತ್ರ್ಯ ಚಳುವಳಿಯ ದಮನಕಾರ್ಯ ಮುಂದುವರಿಸಿದುದು

ಬ್ರಿಟಿಷರನ್ನು "ಭಾರತ ಬಿಟ್ಟು ಹೊರಡಿ" ಎಂದು ಹೇಳುವ ನಿರ್ಣಯ ದಿಂದ ಕೋಪಗೊಂಡು ತಕ್ಷಣವೇ ಪ್ರತೀಕಾರ ಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಂಡುದುದನ್ನು ಹಿಂದೆಯೂ ಸೂಚಿಸಿರುತ್ತೇವೆ. ಮುಖಂಡರ ಬಂಧನದ ನಂತರ ಜನರು ಆರಂಭಿಸಿದ ಸಾಮೂಹಿಕ ಚಳುವಳಿಯನ್ನು ಸಂಪೂರ್ಣವಾಗಿ ಹತ್ತಿಕ್ಕಲು ಈ ಸರ್ಕಾರವು ತನ್ನ ಕ್ರೂರ ಕಾರ್ಯಾಚರಣೆ ಯನ್ನು ಅನಿರ್ಬಂಧಿತವಾಗಿ ಮುಂದುವರಿಸಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಇವೆಲ್ಲವೂ ಕಾನೂನುಬಾಹಿರ ಸಂಸ್ಥೆಗಳಾಗಿ ಘೋಷಿಸಲ್ಪಟ್ಟವು. ಪ್ರಾಂತೀಯ ಸರ್ಕಾರಗಳು ಅನೇಕ ಸ್ಥಳೀಯ ಕಾಂಗ್ರೆಸ್ ಸಂಸ್ಥೆಗಳನ್ನು ಕಾನೂನುಬಾಹಿರವೆಂದು ಘೋಷಿಸಿದವು. 1942ರ ಕೊನೆಯ ನಾಲ್ಕು ತಿಂಗಳುಗಳಲ್ಲಿ ಪೊಲೀಸರು 538 ಕಡೆಗಳಲ್ಲಿ ಜನರ ಮೇಲೆ ಗುಂಡು ಹಾರಿಸಿದರು. ಕೆಲವು ಕಡೆಗಳಲ್ಲಿ 'ಮೆಷಿನ್‌ಗನ್'ಗಳನ್ನು ಅವರು ಉಪಯೋಗಿಸಿದರು. ಇವುಗಳ ಪರಿಣಾಮವಾಗಿ ಅನೇಕರು ಮರಣಹೊಂದಿದರು: ಇನ್ನೂ ಕೆಲವರು ಗಾಯ ಗೊಂಡರು: ಸುಮಾರು 26,000 ಜನರ ಮೇಲೆ ರಾಜದ್ರೋಹದ ಮೊಕದ್ದಮೆ ಹೂಡಲಾಯಿತು. ಸುಮಾರು ಎರಡೂವರೆ ಕೋಟಿ ರೂಪಾಯಿ ಗಳನ್ನು ಇವರಿಂದ ದಂಡವಾಗಿ ವಸೂಲು ಮಾಡಲಾಯಿತು.[1] ಪೊಲೀಸರು ಹಾಗೂ ಮಿಲಿಟರಿಯವರ ಧಾಳಿಯಿಂದ ಸಹಸ್ರಾರು ಜನರು ತಮ್ಮ ಮನೆ ಗಳನ್ನು ಕಳೆದುಕೊಂಡರು. ಈ ನಾಲ್ಕು ತಿಂಗಳ ಅವಧಿಯಲ್ಲಿ ಸರ್ಕಾರವು

1. Pattabhi Sitaramayya, vol II *op. cit.* PP 374-378

ಜನರ ಚಳುವಳಿಯನ್ನು ಅಡಗಿಸಲು ನಡೆಸಿದ ಘೋರ ಕೃತ್ಯಗಳಿಂದ ಭಾರತದಲ್ಲಿ ಎಲ್ಲರೂ ಅತ್ಯಂತ ಜಿಗುಪ್ಸೆಗೊಂಡರು. ವೈಸರಾಯ್ ಅವರ ಕಾರ್ಯಕಾರಿ ಸಭೆಯ ಭಾರತೀಯ ಸದಸ್ಯರಾಗಿದ್ದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್, ಟಿ. ಬಿ. ಸಪ್ರು, ಎಸ್.ಪಿ. ಸಿನ್ಹಾ ಮತ್ತು ಶಂಕರನ್ ನಾಯರ್ ಅವರುಗಳು ಬ್ರಿಟಿಷ್ ಸರ್ಕಾರದ ಈ ಕ್ರಮಗಳ ವಿರುದ್ಧ ಪ್ರತಿಭಟನೆ ಸೂಚಿಸಲು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. 1942ರ ಅಂತ್ಯದ ವೇಳೆಗೆ ಸರ್ಕಾರದ ಬಿರುಸಾದ ಬಲಪ್ರಯೋಗದ ಪರಿಣಾಮವಾಗಿ ಚಳುವಳಿಗಾರರು ಹಾಗೂ ಕ್ರಾಂತಿಕಾರರು ಸ್ವಲ್ಪಕಾಲ ಸುಮ್ಮನಿರಬೇಕಾಯಿತು. ಕೆಲವರು ಅಜ್ಞಾತವಾಸ ಕೈಗೊಂಡು (went underground) ಗುಪ್ತವಾಗಿ ಸರ್ಕಾರದ ವಿರುದ್ಧ ಕಾರ್ಯಾಚರಣೆ ನಡೆಸುತ್ತಾ ಬಂದರು. ಮೇಲ್ನೋಟಕ್ಕೆ ಚಳುವಳಿ ನಿಂತಂತೆ ಕಂಡುಬಂದುದರಿಂದ, ಸರ್ಕಾರವು ತನ್ನ ಕಾರ್ಯಾಚರಣೆಗಳ ಬಗ್ಗೆ ಹೆಮ್ಮೆಪಟ್ಟುಕೊಂಡು ಸಂತೋಷಪಟ್ಟಿತು.

1943 – ಗಾಂಧೀಜಿಯವರ 21 ದಿವಸಗಳ ಉಪವಾಸ ಸತ್ಯಾಗ್ರಹ

ಬ್ರಿಟಿಷ್ ಸರ್ಕಾರವು ಚಳುವಳಿಯನ್ನು ಬಲಪ್ರಯೋಗದಿಂದ ತಡೆಹಿಡಿದರಾದರೂ ಭಾರತೀಯರ ಆತ್ಮಶಕ್ತಿಗೆ ಸ್ವಲ್ಪವೂ ಕುಂದು ಉಂಟಾಗಲಿಲ್ಲ. ಅವರ ಅಂತಃಸ್ಫೂರ್ತಿ ಎಂದಿನಂತೆಯೇ ಇದ್ದು ಅವರು ಚಳುವಳಿಯನ್ನು ಮುಂದುವರಿಸುವ ಹೊಸ ಮಾರ್ಗಾನ್ವೇಷಣೆಯಲ್ಲಿದ್ದರು. ಜೈಲಿನೊಳಗಿದ್ದ ಮುಖಂಡರುಗಳಿಗೆ ಚಳುವಳಿಯ ಬಗ್ಗೆ ವರ್ತಮಾನ ತಲುಪುತ್ತಿತ್ತು. ಹಿಂಸಾತ್ಮಕ ಕಾರ್ಯಾಚರಣೆಗಳ ಬಗ್ಗೆ ಅವರು ತುಂಬ ನೊಂದುಕೊಂಡರು. ಮೇಲೆ ಮೇಲೆ ಅಹಿಂಸೆಯನ್ನು ಬೋಧಿಸುತ್ತಾ ವಾಸ್ತವವಾಗಿ ಕಾಂಗ್ರೆಸು ಹಿಂಸಾತ್ಮಕ ಚಳುವಳಿಯನ್ನು ಯೋಜಿಸಿ ಜನರಿಂದ ಇದನ್ನು ನಡೆಸಿತು ಎಂದು ಸರ್ಕಾರವು ಭಾರತದಲ್ಲೂ, ವಿದೇಶಗಳಲ್ಲೂ ಪ್ರಚಾರ ಮಾಡಿತು. ಜನರು ಹಿಂಸಾತ್ಮಕ ಕೃತ್ಯಗಳನ್ನು ನಡೆಸುತ್ತಿದ್ದುದು ಗಾಂಧಿಜಿಯವರ ಗಮನಕ್ಕೆ ಬಂದಾಕ್ಷಣ ಅವರು ಈ ಹಿಂಸಾಕೃತ್ಯಗಳನ್ನು ಖಂಡಿಸಿ ವೈಸರಾಯ್ ಅವರಿಗೆ ಪತ್ರ ಬರೆದರು. ಈ ಪತ್ರವು ಜನರಿಗೆ ಹಿಂಸೆ ಮಾಡ

ಬಾರದೆಂದು ಆದೇಶವಾಗುವುದೆಂಬುದು ಅವರ ನಿರೀಕ್ಷೆಯಾಗಿದ್ದಿತು. ಆದರೆ, ವೈಸ್‌ರಾಯ್ ಅವರು ಈ ಪತ್ರವನ್ನು ಜನತೆಗೆ ಪ್ರಕಟಿಸಲಿಲ್ಲ. ಇದರಿಂದ ಗಾಂಧಿಜಿಯವರ ಮನಸ್ಸಿಗೆ ತುಂಬ ನೋವು ಉಂಟಾಯಿತು. ಲಿನ್‌ಲಿತ್‌ಗೌ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸುವ ಸಲುವಾಗಿಯೂ ಮತ್ತು ಆತ್ಮಪರಿಶುದ್ಧತೆಯ ಕ್ರಮವಾಗಿಯೂ ಗಾಂಧಿಜಿಯವರು ಇಪ್ಪತ್ತೊಂದು ದಿವಸಗಳ ಉಪವಾಸ ಕೈಗೊಳ್ಳಲು ನಿರ್ಧರಿಸಿದರು. ಈ ತಮ್ಮ ನಿರ್ಧಾರವನ್ನು ಪತ್ರದ ಮೂಲಕ ವೈಸರಾಯ್ ಅವರಿಗೆ ತಿಳಿಸಿದರು. ಗಾಂಧಿಜಿಯವರು ಈ ದೀರ್ಘ ಅವಧಿಯ ಉಪವಾಸ ಮಾಡಿ ಮರಣ ಹೊಂದಿದರೆ ಇದಕ್ಕೆ ಬ್ರಿಟಿಷ್ ಸರ್ಕಾರವೇ ಹೊಣೆ ಎಂಬ ಸಾರ್ವತ್ರಿಕ ಅಭಿಪ್ರಾಯವನ್ನು ಹುಟ್ಟಿಸಲು ಇದು ಅವರು ಯೋಚಿಸಿರುವ ಒಂದು ಉಪಾಯವಾಗಿದೆ ಎಂದು ವೈಸ್‌ರಾಯ್ ಅವರೂ ಲಂಡನ್ನಿನ ಅಧಿಕಾರಿಗಳೂ ಗಾಂಧಿಜಿಯ ಮೇಲೆ ಆರೋಪ ಹೊರಿಸಿದರು. ಉಪವಾಸದ ನಿರ್ಧಾರವನ್ನು ಕೈಬಿಡಬೇಕೆಂದು ಗಾಂಧಿಜಿಯವರನ್ನು ಪ್ರೇರೇಪಿಸುವ ಬದಲಾಗಿ, ಮೌಲಾನಾ ಅಬುಲ್ ಕಲಾಮ್ ಅಜಾದ್ ಅವರು ಹೇಳಿರುವಂತೆ[1] ಇಪ್ಪತ್ತೊಂದು ದಿವಸ ಉಪವಾಸದ ಪರಿಣಾಮವಾಗಿ ಗಾಂಧಿಜಿಯವರ ಮರಣ ಖಂಡಿತ ಎಂಬ ನಂಬಿಕೆಯಿಂದ ಸರ್ಕಾರವು ಗಾಂಧಿಜಿಯವರ ಅಂತ್ಯ ಸಂಸ್ಕಾರಕ್ಕೆ ಕೂಡ ಪೂರ್ಣ ಸಿದ್ಧತೆಗಳನ್ನು ವ್ಯವಸ್ಥೆ ಮಾಡಿತು. ಬ್ರಿಟಿಷ್ ಅಧಿಕಾರಿಗಳ ಈ ವಿಚಿತ್ರ ವರ್ತನೆಯು ಅವರ ಮನೋಗತವನ್ನು ತೋರಿಸುತ್ತದೆ.

1943 ರ ಫೆಬ್ರವರಿ 10 ರಂದು ಗಾಂಧಿಜಿಯವರು 21 ದಿವಸಗಳ ಉಪವಾಸವನ್ನು ಪ್ರಾರಂಭಿಸಿದರು. 9–10 ದಿನಗಳ ನಂತರ ಅವರ ದೇಹ ಸ್ಥಿತಿ ತುಂಬ ಕೆಟ್ಟಿತು. ದೇಶದಲ್ಲಿ ಎಲ್ಲರೂ ತುಂಬ ಆತಂಕಗೊಂಡಿದ್ದರು. ಆದರೆ ಸರ್ಕಾರಕ್ಕೆ ಏನೂ ಆತಂಕವಾಗಲಿಲ್ಲ. ವೈಸರಾಯ್ ಅವರ ಕಾರ್ಯಕಾರಿ ಸಮಿತಿಯಲ್ಲಿ ಇದ್ದ ಹೆಚ್. ಪಿ. ಮೋದಿ, ಎಂ. ಎಸ್. ಅಣೆ ಮತ್ತು ಎನ್. ಆರ್. ಸರ್ಕಾರ್ ಅವರುಗಳು ತಮ್ಮ ಸ್ಥಾನಗಳಿಗೆ ರಾಜೀ

1. Abul kalam Azad, *India Wins Freedom*. Bombay, 1959, P, 91

ನಾನೆ ಇತ್ತರು. ಫೆಬ್ರುವರಿ 19ರಂದು – ಅಂದರೆ ಗಾಂಧೀಜಿ ಉಪವಾಸ ಆರಂಭವಾಗಿ 9 ದಿವಸಗಳ ನಂತರ – ಟಿ. ಬಿ. ಸಪ್ರು ಅವರ ಅಧ್ಯಕ್ಷತೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಒಟ್ಟು 150 ಮುಖಂಡರುಗಳು ಸಭೆ ಸೇರಿ ಮಹಾತ್ಮಾ ಗಾಂಧಿಯವರನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡ ಬೇಕೆಂದು ವೈಸರಾಯ್ ಅವರನ್ನು ಒತ್ತಾಯಿಸುವ ನಿರ್ಣಯವನ್ನು ಮಾಡಿದರು. ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅವರಿಗೂ, ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನ ಕೆಲವು ನಾಯಕರುಗಳಿಗೂ ಗಾಂಧೀಜಿಯವರನ್ನು ಸೆರೆಮನೆಯಿಂದ ಬಿಡುವಂತೆ ಕೇಬಲ್ ಮೂಲಕ ಕೇಳಿಕೊಂಡರು. ಇನ್ನಿದ ರಿಂದ ಏನೂ ಪ್ರಯೋಜನವಾಗಲಿಲ್ಲ.

ಗಾಂಧೀಜಿಯವರ ಆತ್ಮಶಕ್ತಿ, ಆತ್ಮವಿಶ್ವಾಸ, ಮನಸ್ಥೈರ್ಯ ಅಸಾ ಧಾರಣವಾದುದು. ಅವರು ಕೈಗೊಂಡಿದ್ದ 21 ದಿವಸಗಳ ಉಪವಾಸ ಸತ್ಯಾಗ್ರಹವನ್ನು ಯಶಸ್ವಿಯಾಗಿ ಪೂರೈಸಿದರು. ಮುಖ್ಯವಾಗಿ ಬ್ರಿಟಿಷರಿಗೆ ಗಾಂಧೀಜಿಯವರ ಈ ಅಸಾಧಾರಣ ಸಾಹಸ ಕಾರ್ಯದಿಂದ ಅತ್ಯಂತ ಆಶ್ಚರ್ಯವಾಯಿತು. ಗಾಂಧೀಜಿಯವರು ಉಪವಾಸ ಪೂರೈಸಿದುದರಿಂದ ಭಾರತದಲ್ಲಿ ಸಾರ್ವತ್ರಿಕ ಸಮಾಧಾನ ವಾತಾವರಣ ಉಂಟಾಯಿತು. ಅವರ ಬಗ್ಗೆ ಜನತೆಯ ಪೂಜ್ಯಭಾವನೆ ಇಮ್ಮಡಿಯಾಗಿ ಹೆಚ್ಚಿತು.

ಅಧ್ಯಕ್ಷ ರೂಸ್‌ವೆಲ್ಟ್ ಅವರ ಪ್ರತಿನಿಧಿಯ ರಾಯಭಾರ

ಗಾಂಧೀಜಿಯವರ ಉಪವಾಸ ಮುಕ್ತಾಯವಾದ ಸಂದರ್ಭದಲ್ಲಿಯೇ ಅನೇಕ ಭಾರತೀಯ ಮುಖಂಡರುಗಳೂ, ಭಾರತದಲ್ಲಿದ್ದ ಬ್ರಿಟಿಷ್ ಪಾದ್ರಿಗಳೂ ಎಲ್ಲಾ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಬೇಕೆಂದು ವೈಸರಾಯ್ ಅವರನ್ನು ಕೇಳಿಕೊಂಡರು. ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್ ಅವರ ಖಾಸಗಿ ಪ್ರತಿನಿಧಿಯಾಗಿದ್ದ ವಿಲಿಯಂ ಫಿಲಿಪ್ಸ್ ಎಂಬವರು ಗಾಂಧೀಜಿಯವರನ್ನೂ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು ಗಳನ್ನೂ ಜೈಲಿನಲ್ಲಿ ಭೇಟಿಮಾಡಲು ವೈಸರಾಯ್ ಅವರ ಅನುಮತಿಯನ್ನು ಕೋರಿದರು. ಆದರೆ, ಅವರಿಗೆ ಅನುಮತಿಯನ್ನು ಕೊಡಲಿಲ್ಲ. ನಂತರ ವಿಲಿಯಂ ಫಿಲಿಪ್ಸ್ ಅವರು ಬ್ರಿಟಿಷ್ ಸರ್ಕಾರದ ಧೋರಣೆಯನ್ನು ಟೀಕಿಸಿ ಅಧ್ಯಕ್ಷ ರೂಸ್‌ವೆಲ್ಟ್ ಅವರಿಗೆ ಪತ್ರ ಬರೆದು ಭಾರತ ಹಾಗೂ ಬ್ರಿಟನ್ನು

ರಾಜಕೀಯ ಸಮಸ್ಯೆ ಬಗ್ಗೆ ಏನಾದರೂ ಒಂದು ಒಪ್ಪಂದಕ್ಕೆ ಬರುವಂತೆ ಪ್ರಯತ್ನಿಸಬೇಕೆಂದು ರೂಸ್‌ವೆಲ್ಟ್ ಅವರನ್ನು ಕೇಳಿಕೊಂಡರು. ಆಗ ರೂಸ್‌ವೆಲ್ಟ್ ಅವರು ವಿಲಿಯಂ ಫಿಲಿಪ್ಸ್ ಮತ್ತು ಚರ್ಚಿಲ್ ಅವರ ಭೇಟಿಗೆ ಏರ್ಪಾಡು ಮಾಡಿದರು. ಈ ಭೇಟಿಯಲ್ಲಿ ಭಾರತದ ಪ್ರಶ್ನೆ ಪೂರ್ತಿಯಾಗಿ ಬ್ರಿಟನ್ನಿಗೆ ಸಂಬಂಧಿಸಿದ ವಿಷಯವೆಂದೂ, ಇದರಲ್ಲಿ ಅಮೆರಿಕವು ಮಧ್ಯ ಪ್ರವೇಶಿಸುವುದನ್ನು ತಾವು ಸಹಿಸುವುದಿಲ್ಲವೆಂದೂ ಚರ್ಚಿಲ್ ಅವರು ವಿಲಿಯಂ ಫಿಲಿಪ್ಸ್ ಅವರಿಗೆ ಕಂಠೋಕ್ತವಾಗಿ ಸ್ಪಷ್ಟಪಡಿಸಿದರು. ಇದರಿಂದ ವಿಲಿಯಂ ಫಿಲಿಪ್ಸ್ ಅವರಿಗೆ ನಿರಾಶೆಯಾಯಿತು.

ಯುದ್ಧದ ಪರಿಸ್ಥಿತಿಯು ಬ್ರಿಟನ್ನಿಗೆ ತುಂಬಾ ಆತಂಕಕಾರಿಯಾಗುತ್ತಾ ಬಂದಿದ್ದಿತು. ಯೂರೋಪಿನಲ್ಲಿ ಜರ್ಮನಿಯೂ, ಪೂರ್ವದಲ್ಲಿ ಜಪಾನೂ ಅನೇಕ ಪ್ರದೇಶಗಳನ್ನು ತಮ್ಮ ವಶಪಡಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಭಾರತದ ಮೇಲೆ ತಮ್ಮ ರಾಜಕೀಯ ಹಿಡಿತವನ್ನು ಸಡಿಲಗೊಳಿಸಲು ಬ್ರಿಟಿಷ್ ಸರ್ಕಾರವು ಸ್ವಲ್ಪವೂ ಸಿದ್ಧವಿರಲಿಲ್ಲ. ವಿಶ್ವಸಂಸ್ಥೆಯ ಕ್ಷೇಮಕ್ಕೆ ಭಾರತದ ಮೇಲಿನ ಹಿಡಿತ ಅತಿಮುಖ್ಯವಾದುದೆಂಬುದು ಬ್ರಿಟಿಷ್ ಸರ್ಕಾರದ ಅಭಿಪ್ರಾಯವಾಗಿದ್ದಿತು. ಇದರಿಂದ ಎಲ್ಲಾ ಕಡೆಗಳಿಂದಲೂ ಭಾರತ ಪರವಾಗಿ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ಪ್ರಾರ್ಥನೆಗಳೆಲ್ಲವೂ ನಿಷ್ಫಲ ವಾದವು.

ಕಾಂಗ್ರೆಸ್ಸಿನ ವಿರುದ್ಧ ಸರ್ಕಾರದ ದೂರು

"1942–43ರ ತೊಂದರೆಗಳಿಗೆ ಕಾಂಗ್ರೆಸ್ಸಿನ ಹೊಣೆ" ಎಂಬ ಪುಸ್ತಿಕೆಯನ್ನು ಸರ್ಕಾರವು 1943ರ ಫೆಬ್ರುವರಿಯಲ್ಲಿ ಪ್ರಚಾರಕ್ಕಾಗಿ ಪ್ರಕಟಿಸಿತು. ಈ ಪುಸ್ತಿಕೆಯ ಬಗ್ಗೆ ಒಬ್ಬ ಪತ್ರಿಕಾ ಪ್ರತಿನಿಧಿಯು ಗಾಂಧೀಜಿಯವರನ್ನು ಪ್ರಶ್ನಿಸಿದಾಗ ಪುಸ್ತಿಕೆಯಲ್ಲಿನ ಪ್ರತಿಯೊಂದು ಅಂಶಕ್ಕೂ "ಸಂಪೂರ್ಣವಾದ ಖಚಿತವಾದ ಉತ್ತರಗಳನ್ನು" ನೀಡಬಲ್ಲೆನೆಂದು ಅವರು ತಿಳಿಸಿದರು. ಇದನ್ನು ಕುರಿತು ಭಾರತ ಸರ್ಕಾರಕ್ಕೆ ಗಾಂಧೀಜಿಯವರು ಸುದೀರ್ಘ ಪತ್ರ ಬರೆದರು. ಕೆಲವು ತಿಂಗಳುಗಳಾದನಂತರ ಈ ಪತ್ರಕ್ಕೆ ಉತ್ತರವಾಗಿ ಗೃಹಶಾಖೆಯ ಕಾರ್ಯದರ್ಶಿಯವರು ಸರ್ಕಾರದ ಪರವಾಗಿ ಗಾಂಧೀಜಿಯವರು ಬರೆದುದನ್ನೂ

ಸರಿಯಾಗಿ ಓದಿಕೊಳ್ಳದೆ ಅವರನ್ನು ಅವಮಾನ ಮಾಡುವ ಭಾಷೆಯಲ್ಲಿ ಪತ್ರ ಬರೆದರು.

1943ರ ಅಕ್ಟೋಬರ್ 18ರಂದು ಏಳೂವರೆ ವರ್ಷಗಳ ಕಾಲ ವೈಸರಾಯ್ ಆಗಿದ್ದ ಲಿನ್‌ಲಿತ್‌ಗೌ ಅವರ ಸ್ಥಾನದಲ್ಲಿ ಭಾರತದ ಪ್ರಮುಖ ದಂಡನಾಯಕರಾಗಿದ್ದ ಸರ್ ಆರ್ಚಿಬಾಲ್ಡ್ ವೇವಲ್ (Sir Archibald wavel) ಎಂಬುವರು ವೈಸರಾಯ್ ಆಗಿ ಅಧಿಕಾರ ವಹಿಸಿಕೊಂಡರು. ಇವರು ಮೊದಮೊದಲು ನೀಡಿದ ಹೇಳಿಕೆಗಳನ್ನು ಗಮನಿಸಿದರೆ ಹಿಂದಿನ ವೈಸರಾಯ್‌ಗಿಂತ ಇವರು ಭಾರತದ ಆಶೋತ್ತರಗಳ ಬಗ್ಗೆ ಹೆಚ್ಚು ಸಹಾನುಭೂತಿ ಹೊಂದಿದ್ದವರೆಂದು ತೋರಿತು. ಆದರೆ, ಇವರ ಮೇಲಧಿಕಾರ ಸ್ಥಾನದಲ್ಲಿದ್ದ ಭಾರತದ ಸೆಕ್ರಟರಿ ಆಫ್ ಸ್ಟೇಟ್ ಅವರು ಈ ಸಹಾನುಭೂತಿ ತಪ್ಪೆಂದು ವೇವೆಲ್ ಅವರಿಗೆ ಸೂಚನೆ ಇತ್ತರು. ಅನಂತರ ವೇವೆಲ್ ಅವರೂ ಬ್ರಿಟಿಷ್ ಸರ್ಕಾರ ಭಾರತ ಬಗ್ಗೆ ಹೊಂದಿದ್ದ ಬಿಗಿ ನೀತಿಯನ್ನೇ ಮುಂದುವರಿಸಿದರು. ಕ್ರಿಪ್ಸ್ ಸಲಹೆಗಳೇ ಅಂತಿಮ, ಇದಕ್ಕೆ ಹೆಚ್ಚನ್ನು ನೀಡಲಾಗುವುದಿಲ್ಲವೆಂಬ ಬ್ರಿಟಿಷ್ ಸರ್ಕಾರದ ಅಭಿಪ್ರಾಯವನ್ನು ಇವರು ಪುನರುಚ್ಚರಿಸುತ್ತಾ ಬಂದರು.

ವೇವಲ್ ಅವರೂ ಅನುಸರಿಸಿದ ಬಿಗಿ ಧೋರಣೆಗೆ ಎರಡು ಮುಖ್ಯ ನಿದರ್ಶನಗಳನ್ನು ಕೊಡಬಹುದು. 1943 ರ ಅಕ್ಟೋಬರ್‌ನಲ್ಲಿ ಹೊಸ ವೈಸ್‌ರಾಯ್ ಅವರಿಗೆ ಗಾಂಧೀಜಿಯವರು ಅವರಿದ್ದ ಜೈಲಿನಿಂದ ಪತ್ರ ಬರೆದು, ಇದರಲ್ಲಿ ರಾಜಕೀಯ ಸಮಸ್ಯೆ ಬಗ್ಗೆ ಜೈಲಿನಲ್ಲೇ ಇದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೊಡನೆ ಸಮಾಲೋಚಿಸಲು ಅನುಮತಿ ಕೋರಿದರು. ಅನೇಕ ಬಾರಿ ಹೀಗೆ ಕೇಳಿಕೊಂಡರೂ ಅವರಿಗೆ ಈ ಅನುಮತಿಯನ್ನು ವೈಸರಾಯ್ ಅವರು ಕೊಡಲಿಲ್ಲ.

ಗಾಂಧಿಜಿಯವರು ಮುಸ್ಲಿಂ ಲೀಗಿನ ಧೋರಣೆ ಕುರಿತು ಜಿನ್ನಾ ಅವರೊಡನೆ ಮಾತುಕತೆ ಇನ್ನೊಮ್ಮೆ ನಡೆಸಲು ಜಿನ್ನಾ ಅವರಿಗೆ ಪತ್ರವೊಂದನ್ನು ಬರೆದರು. ಆದರೆ ಈ ಪತ್ರವನ್ನು ಜಿನ್ನಾ ಅವರಿಗೆ ತಲುಪಿಸಲೇ ಇಲ್ಲ. "ಕಾನೂನುಬಾಹಿರವಾದ ಸಾಮೂಹಿಕ ಚಳುವಳಿಯನ್ನು" ಆರಂಭಿಸಿದ ಮತ್ತು ಯುದ್ಧದ ವಿಷಮ ಹಂತದಲ್ಲಿ ಭಾರತದ ಯುದ್ಧ

ಪ್ರಯತ್ನಗಳಿಗೆ ಅಡ್ಡಿ ಆತಂಕಗಳನ್ನು ತಂದೊಡ್ಡಿದ ಗಾಂಧೀಜಿಯವರಿಗೆ ರಾಜಕೀಯ ವ್ಯವಹಾರ ನಡೆಸುವ ಅನುಕೂಲತೆಗಳನ್ನು ಕೊಡಲು ಸಾಧ್ಯವಿಲ್ಲ ಎಂಬುದೇ ಸರ್ಕಾರದ ಧೋರಣೆಯಾಗಿದ್ದಿತು. ಹೀಗೆ, ಜೈಲಿನೊಳಗೆ ಬಂಧಿಸಲ್ಪಟ್ಟಿದ್ದ ಮುಖಂಡರುಗಳು ತಂತಮ್ಮೊಳಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶವಾಗಲಿಲ್ಲ.

ಪಾಕಿಸ್ತಾನ ಬೇಡಿಕೆ ಚಳುವಳಿ ತೀವ್ರವಾದುದು

ಪಾಕಿಸ್ತಾನ ಪರವಾದ ಮುಸಲ್ಮಾನರ ಚಳುವಳಿ ತೀವ್ರವಾಗುತ್ತಾ ಬಂದುದು 1943ರ ಇನ್ನೊಂದು ಗಮನಿಸಬೇಕಾದ ಬೆಳವಣಿಗೆಯಾಗಿದೆ. 1943ರ ಮಾರ್ಚಿ 3ರಂದು ಸಿಂಧ್ ಪ್ರಾಂತ್ಯದ ವಿಧಾನಸಭೆಯು ಪಾಕಿಸ್ತಾನ ಬೇಡಿಕೆಯನ್ನು ಕುರಿತ ನಿರ್ಣಯವನ್ನು ಅನುಮೋದಿಸಿತು. ಇದು ಪಾಕಿಸ್ತಾನದ ಬಗ್ಗೆ ಪ್ರಥಮ ಅಧಿಕೃತ ಬೇಡಿಕೆಯಾಗಿದೆ. ಮುಸ್ಲಿಂ ಲೀಗ್‌ನ ಸಿಂಧ್ ಸಚಿವ ಸಂಪುಟವು ಅನೇಕ ಹಿಂದೂ ವಿರೋಧಿ ಕ್ರಮಗಳನ್ನು ಕೈಗೊಂಡಿತು. ಉದಾಹರಣೆಗೆ **"ಸತ್ಯಾರ್ಥಪ್ರಕಾಶ"** ಎಂಬ ಆರ್ಯ ಸಮಾಜದವರ ಪೂಜ್ಯಗ್ರಂಥದ ಒಂದು ಅಧ್ಯಾಯವನ್ನೇ ಅದು ಅಳಿಸಿ ಹಾಕುವಂತೆ ಆಜ್ಞಾಪಿಸಿತು. ವಿ. ಡಿ. ಸಾವರ್‌ಕರ್ ಅವರು ವೈಸ್‌ರಾಯ್ ಅವರಿಗೆ ಈ ಬಗ್ಗೆ ಪ್ರತಿಭಟನೆ ಸೂಚಿಸಿ ಪತ್ರ ಬರೆದರು. ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಹೀಗೆಯೇ ಸಿಂಧ್ ಪ್ರಾಂತ್ಯದ ಮುಸ್ಲಿಂ ಲೀಗು 'ಮುಸಲ್ಮಾನರಿಂದಲೇ ಕೊಳ್ಳಿರಿ' ಎಂಬ ಪ್ರಚಾರ ಕೈಗೊಂಡಿತು. ಇದು ಸಿಂಧ್‌ನ ಇತರ ಮತೀಯ ವಾಣಿಜ್ಯೋದ್ಯಮಿಗಳ ಹಿತಕ್ಕೆ ಧಕ್ಕೆಯಾಯಿತು.[1] ಈ ಹಿಂದೂ ವಿರೋಧಿ ಕಾರ್ಯಾಚರಣೆಗಳು 1943ರ ತರುವಾಯ ಹೆಚ್ಚಾಗುತ್ತಲೇ ಬಂದವು. ಕಾಂಗ್ರೆಸ್ಸು ಒಂದು ಕಡೆ ಬ್ರಿಟಿಷರ ವಿರುದ್ಧ ಹೋರಾಡಬೇಕಾಗಿತ್ತು. ಇನ್ನೊಂದು ಕಡೆ ಮುಸ್ಲಿಂ ಲೀಗಿನ ಈ ಧೋರಣೆಯನ್ನು ಬಿಡಿಸುವ ಪ್ರಯತ್ನ ನಡೆಸಬೇಕಾಗಿತ್ತು.

---

1 ನೋಡಿ : Seshadri, H. V. *The Tragic Story of Partition*, Jagarana Prakashana, Bangalore 1932, P 148.

1944

1944ನೆ ವರ್ಷಾರಂಭದಲ್ಲಿ ಯುದ್ಧ ಪರಿಸ್ಥಿತಿ ಬ್ರಿಟನ್ನಿಗೆ ಹೆಚ್ಚಿನ ಆತಂಕವುಂಟುಮಾಡುವ ಹಂತ ತಲುಪಿತು. ಅದೇ ಸಮಯದಲ್ಲಿ ಗಾಂಧೀಜಿಯವರ ದೇಹಸ್ಥಿತಿ ಹದಗೆಟ್ಟಿತು. ಆಗ ಬ್ರಿಟಿಷ್ ಸರ್ಕಾರವು ಗಾಂಧೀಜಿಯವರನ್ನೂ ಕೆಲವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ 1944ರ ಮೇ 6ರಂದು ಜೈಲಿನಿಂದ ಬಿಡುಗಡೆ ಮಾಡಿತು. ಗಾಂಧೀಜಿಯವರು ಜೈಲಿನಲ್ಲೇ ಇದ್ದ ಇತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಭೇಟಿ ಮಾಡಲು ಸರ್ಕಾರದ ಅನುಮತಿ ಕೇಳಿದರು. ಸತ್ಯಾಗ್ರಹವನ್ನು ಕೂಡಿ ಯುದ್ಧದ ಈ ವಿಷಮ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಆತಂಕ ಹೆಚ್ಚು ಮಾಡುವ ಉದ್ದೇಶ ತಮಗೆ ಇಲ್ಲವೆಂಬುದನ್ನೂ, ಸಧ್ಯದಲ್ಲಿ ಮಿಲಿಟರಿ ಬಿಟ್ಟು ಇತರ ಬಾಬುಗಳ ಮೇಲೆ ಪೂರ್ಣ ಹತೋಟಿ ಇರುವ ರಾಷ್ಟ್ರೀಯ ಸರ್ಕಾರ ರಚಿಸಿದರೆ ಅವರು ತೃಪ್ತಿಪಟ್ಟುಕೊಳ್ಳುವರೆಂದೂ, ಮಿತ್ರ ರಾಷ್ಟ್ರಗಳ ಯುದ್ಧಪ್ರಯತ್ನಗಳಿಗೆ ಸಹಾಯಕವಾಗುವುದೇ ಅವರ ಇಚ್ಛೆಯಾಗಿದೆಯೆಂದೂ ಗಾಂಧೀಜಿಯವರು ಸರ್ಕಾರಕ್ಕೆ ಸ್ಪಷ್ಟಪಡಿಸಿದರು.[1] ಆದರೆ ಬ್ರಿಟಿಷ್ ಸರ್ಕಾರವು ಭಾರತಕ್ಕೆ ರಾಷ್ಟ್ರೀಯ ಸರ್ಕಾರ ರಚಿಸಲು ಅನುಮತಿ ನೀಡಲು ಸಿದ್ಧವಾಗಿರಲಿಲ್ಲ. ಭವಿಷ್ಯ ರಾಜ್ಯಾಂಗವು ಯಾವ ತತ್ವಗಳ ಆಧಾರದ ಮೇಲೆ ರಚಿತವಾಗಬೇಕೆಂಬುದರ ಹಾಗೂ ಇದನ್ನು ರಚಿಸಲು ಯಾವ ಕ್ರಮಗಳನ್ನು ಅನುಸರಿಸಬೇಕೆಂಬುದರ ಬಗ್ಗೆ ಭಾರತದ ಮುಖ್ಯ ಪಂಗಡಗಳೂ ಅಲ್ಪಸಂಖ್ಯಾತರೂ ಒಮ್ಮತಕ್ಕೆ ಬಂದರೆ ಮಾತ್ರ ಒಂದು ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು (Provisional National Government) ಸ್ಥಾಪಿಸಬಹುದೆಂದು ವೈಸ್‌ರಾಯ್ ಅವರು ಹೇಳಿದರು. ಮುಸ್ಲಿಂ ಲೀಗು ಕಾಂಗ್ರೆಸ್ಸು ಒಮ್ಮತಕ್ಕೆ ಬರುವುದಿಲ್ಲವೆಂಬುದು ಅವರಿಗೆ ಗೊತ್ತಿತ್ತು. 'ವಿಭಜಿಸು, ಆಳು' (Divide and Rule) ಎಂಬ ನೀತಿಯ ಪ್ರಕಾರ ಮುಸ್ಲಿಮರಲ್ಲಿ ಪ್ರತ್ಯೇಕತಾ ಭಾವನೆಯನ್ನು ಹುಟ್ಟುಹಾಕಿ, ಉತ್ತೇಜನ ನೀಡಿ ಇದನ್ನು ಪೋಷಿಸಿದವರೇ ಬ್ರಿಟಿಷರು ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿರುತ್ತೇವೆ. "ಭಾರತವನ್ನು ಬಿಟ್ಟು ಹೊರಡಿ"

---

1. Pattabhi Sitaramayya, Vol II *op. cit.* pp 620 – 621

ಎಂಬ ಕೂಗನ್ನು ಜನತೆಗೆ ಕಾಂಗ್ರೆಸ್ಸು ನೀಡಿದಾಗ ಮುಸ್ಲಿಂಲೀಗು "ವಿಭಜಿಸಿ ಹೊರಡಿ" ಎಂಬ ಪ್ರತಿಕೂಗನ್ನು ಮುಸ್ಲಿಂ ಜನತೆಗೆ ಹೇಳಿಕೊಟ್ಟಿತು.

ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ರಚಿಸಲು ಬ್ರಿಟಿಷ್ ಸರ್ಕಾರವು ಹಾಕಿದ ಷರತ್ತು ಕಾಂಗ್ರೆಸ್ಸಿಗೆ ಕಷ್ಟವಾಯಿತು. ಜಿನ್ನಾ ಅವರನ್ನು ಪಾಕಿಸ್ತಾನ ಬೇಡಿಕೆಯನ್ನು ಕೈಬಿಡುವಂತೆ ಅವರ ಮನವೊಲಿಸಲೂ, ಭಾರತಕ್ಕೆ ಬೇಷರತ್ತಾಗಿ ರಾಷ್ಟ್ರೀಯ ಸರ್ಕಾರ ರಚಿಸಲೂ ಅನೇಕ ಪ್ರಯತ್ನಗಳು ನಡೆದವು. ಆದರೆ ಹಿರಿಯ ಕಾಂಗ್ರೆಸ್ ನಾಯಕರೊಬ್ಬರಾದ ಸಿ. ರಾಜಗೋಪಾಲಾಚಾರಿಯವರು 1943ರಲ್ಲೇ ವಿಭಜನೆ ತತ್ವವನ್ನು ಒಪ್ಪಿ ವಿಭಜನೆಗೆ ತಮ್ಮದೇ ಆದ ಸೂತ್ರವೊಂದನ್ನು ರಚಿಸಿದ್ದುದು ಜಿನ್ನಾ ಅವರಿಗೆ ತುಂಬ ಉತ್ತೇಜನ ನೀಡಿದ್ದಿತು. ವಿಭಜನೆಗೆ ಬ್ರಿಟಿಷರ ಬೆಂಬಲ ಮೊದಲಿನಿಂದಲೂ ಇತ್ತು. ಅವರೇಕೆ ಪಾಕಿಸ್ತಾನ ಬೇಡಿಕೆಯನ್ನು ಈ ಹಂತದಲ್ಲಿ ಕೈಬಿಟ್ಟಾರು; ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ಮೊದಲು ರಚಿಸಿ ಯುದ್ಧಾನಂತರ ಸಾವಧಾನವಾಗಿ ಪಾಕಿಸ್ತಾನದ ಭಾಗಗಳನ್ನು ತೀರ್ಮಾನಿಸಬಹುದೆಂಬ ಸಲಹೆಯನ್ನು ಏಪ್ರಿಲ್ 1944ರಲ್ಲಿ ರಾಜಗೋಪಾಲಾಚಾರಿಯವರು, ಗಾಂಧಿಜಿಯವರ ಒಪ್ಪಿಗೆಯನ್ನೂ ಪಡೆದು, [1] ಜಿನ್ನಾ ಅವರಿಗೆ ತಿಳಿಸಿದರು. ಗಾಂಧೀಜಿಯವರೂ ವಿಭಜನೆಗೆ ಒಪ್ಪಿದುದಕ್ಕಾಗಿ ಜಿನ್ನಾ ಅವರಿಗೆ ಖುಷಿ ಆಯಿತಾದರೂ ಅವರು ತಮ್ಮ ನಿಲುವನ್ನು ಬಿಡಲಿಲ್ಲ. ಮೊದಲು ಪಾಕಿಸ್ತಾನ ಪ್ರತ್ಯೇಕಿಸುವುದರ ಕಾರ್ಯ, ನಂತರ ಸ್ವಾತಂತ್ರ್ಯ. ಬ್ರಿಟಿಷರು ಭಾರತದಿಂದ ಹೊರಡುವ ಮುನ್ನವೇ ಪಾಕಿಸ್ತಾನದ ರಚನೆಯಾಗಬೇಕೆಂಬುದು ಅವರ ಅಚಲವಾದ ಹಟ ಆಗಿದ್ದಿತು. ಗಾಂಧೀಜಿಯವರು 1944ರ ಮೇನಲ್ಲಿ ಜೈಲಿನಿಂದ ಬಿಡುಗಡೆಯಾದನಂತರ ಜಿನ್ನಾ ಅವರಿಗೆ ನಯವಾದ ಭಾಷೆಯಲ್ಲಿ ಅವರನ್ನು ಸಹೋದರ ಎಂದು ಸಂಬೋಧಿಸಿ, ತಾವು ಮುಸಲ್ಮಾನರ ಹಿತೈಷಿಗಳಾಗಿರುವುದನ್ನು ಜಿನ್ನಾ ಅವರ ಗಮನಕ್ಕೆ ತಂದು, ಅವರನ್ನು ಕ್ವಾಯಿದ್ – ಎ – ಆಜಾಮ್ (Quad - e - Azam) ಎಂದು ಹೊಗಳಿ ಅವರೊಡನೆ ಸಂಧಾನ ನಡೆಸಿದರು. ಪತ್ರವ್ಯವಹಾರದ ನಂತರ 1944 ಸೆಪ್ಟೆಂಬರ್ 9ರಿಂದ 23ರ ಅವಧಿಯಲ್ಲಿ ಜಿನ್ನಾ ಅವರನ್ನು ಖುದ್ದಾಗಿ

---

1. Pattabhi Sitaramayya, Vol, II *op. cit,* P 631

ಭೇಟಿ ಮಾಡಿ ಅವರೊಡನೆ ಚರ್ಚಿಸಿದರು. ಮತದ ಆಧಾರದ ಮೇಲೆ ಭಾರತವು ಎರಡು ರಾಷ್ಟ್ರಗಳು ಎಂಬುದು ಸರಿಯಲ್ಲವೆಂದು ಗಾಂಧಿಜಿಯವರು ಜಿನ್ನಾ ಅವರಿಗೆ ತಿಳಿಸಿದರು. ಮತಾಂತರಗೊಂಡ ಜನರೂ ಹಾಗೂ ಅವರ ಅನುವಂಶೀಯರೂ ತಮ್ಮ ಮಾತೃ ಜನಾಂಗದಿಂದ ಬೇರೆಯಾಗಿ ತಾವುಗಳೇ ಸೇರಿ ಒಂದು ಪ್ರತ್ಯೇಕ ರಾಷ್ಟ್ರ ಎಂಬ ಈ ಬೇಡಿಕೆಗೆ ಇತಿಹಾಸದಲ್ಲಿ ಯಾವ ಸದೃಶ ನಿದರ್ಶನವೂ ಇಲ್ಲವೆಂದೂ, ಇಸ್ಲಾಂ ಭಾರತಕ್ಕೆ ಬರುವುದಕ್ಕೆ ಮುಂಚೆ ಭಾರತವು ಏಕರಾಷ್ಟ್ರವಾಗಿದ್ದುದು, ನಂತರ ಅದರ ಮಕ್ಕಳಲ್ಲಿ ಗಣನೀಯ ಸಂಖ್ಯೆಯ ಮಕ್ಕಳು ಮತಾಂತರಗೊಂಡಿರುವುದಾದರೂ ಅದು ಏಕರಾಷ್ಟ್ರವಾಗಿಯೇ ಉಳಿಯಬೇಕೆಂದು ಗಾಂಧಿಜಿಯವರು ಜಿನ್ನಾ ಅವರೊಡನೆ ವಾದಿಸಿದರು.[1] ಆದರೆ, ಬಲೂಚಿಸ್ತಾನ್, ಸಿಂಧ್, ವಾಯುವ್ಯ ಗಡಿಪ್ರಾಂತ್ಯ, ಪಂಜಾಬು, ಬಂಗಾಳ ಹಾಗೂ ಅಸ್ಸಾಂಗಳಲ್ಲಿರುವ ಮುಸಲ್ಮಾನರು ಪ್ರತ್ಯೇಕ ರಾಷ್ಟ್ರವಾಗಬಯಸಿದರೆ, ಇದನ್ನು ಒಂದು ಜನಾಭಿಪ್ರಾಯ ಮತದ (Plebiscite) ಮೂಲಕ ಸಮರ್ಥಿಸಿ ತದನಂತರ ಈ ಭಾಗಗಳನ್ನು ಸೇರಿಸಿ ಪ್ರತ್ಯೇಕ ರಾಷ್ಟ್ರವನ್ನು ಭಾರತ ಸ್ವಾತಂತ್ರ್ಯವಾದ ಮೇಲೆ ಮಾಡಬಹುದು ಎಂದೂ ಗಾಂಧಿಜಿಯವರು ಜಿನ್ನಾ ಅವರಿಗೆ ಹೇಳಿದರು. ಹೀಗೆ ಹೇಳುವುದರಿಂದ ಗಾಂಧಿಜಿಯವರು ತಮ್ಮ ಭಾರತದ ಐಕ್ಯರಾಷ್ಟ್ರ ಭಾವನೆಯನ್ನು ಶಿಥಿಲಗೊಳಿಸಿದಂತಾಯಿತು ಎಂದು ಹೇಳಬಹುದು. ಜಿನ್ನಾ ಅವರಿಗೆ ಗಾಂಧೀಜಿಯವರ ಸಲಹೆಯೂ ಒಪ್ಪಿಗೆಯಾಗಲಿಲ್ಲ. ಬ್ರಿಟಿಷರು ಭಾರತ ಬಿಡುವ ಮುಂಚೆಯೇ ಪಾಕಿಸ್ತಾನ, ಭಾರತ ಎಂಬ ಎರಡು ರಾಷ್ಟ್ರಗಳಾಗಿ ಭಾರತದ ಉಪಖಂಡವು ವಿಭಜಿಸಲ್ಪಡಬೇಕೆಂಬುದು ಅವರು ಹಿಡಿದ ಪಟ್ಟು. ರಾಜಾಜಿಯವರೂ ಗಾಂಧೀಜಿಯವರೂ ಜಿನ್ನಾ ಅವರ ಮನವೊಲಿಸುವ ಪ್ರಯತ್ನದಲ್ಲಿ ಅಗೋಚರವಾಗಿ ಜಿನ್ನಾ ಅವರ ಪ್ರತ್ಯೇಕತಾ ವಾದಕ್ಕೆ "ಅಸ್ತು" ಎಂದಂತಾಗಿದ್ದಿತು. ಜಿನ್ನಾ ಅವರನ್ನು ಭಾರತದ ಮುಸ್ಲಿಮರ ಏಕೈಕ ಪ್ರತಿನಿಧಿ ಎಂದೂ ಅವರು ಒಪ್ಪಿಕೊಂಡಂತಾಗಿದ್ದಿತು. ಒಟ್ಟಿನಲ್ಲಿ ರಾಜಗೋಪಾಲಾಚಾರಿಯ ಜೊತೆ ಗಾಂಧೀಜಿಯವರೂ ಪ್ರತ್ಯೇಕತಾ ತತ್ವಕ್ಕೆ ಒಪ್ಪಿಕೊಂಡ ಮೇಲೆ ಕಾಂಗ್ರೆಸ್ಸಿನ ಅನೇಕ ಇತರ ನಾಯಕರೂ ಎಷ್ಟೇ

---

1. Tendulkar D. G., *Mahatma*, Vol VI, P. 345

ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಪಾಕಿಸ್ತಾನ ಭಾವನೆಗೆ ಒಪ್ಪಿಕೊಂಡರು. ದೇಶದ ವಿಭಜನೆಯನ್ನು ಬಲವಾಗಿ ವಿರೋಧಿಸುತ್ತಿದ್ದ ಕಾಂಗ್ರೆಸ್ಸಿನ ಧೋರಣೆಯಲ್ಲಿ ಇದು ಅತಿ ಮುಖ್ಯವಾದ ಬದಲಾವಣೆಯಾಯಿತು.

1945 – ದೇಸಾಯಿ – ಲಿಯಾಕತ್ ಒಪ್ಪಂದದ ಪ್ರಯತ್ನ

ಮುಸ್ಲಿಂಲೀಗಿನ ಅಧ್ಯಕ್ಷ ಜಿನ್ನಾ ಅವರೊಡನೆ ರಾಜಗೋಪಾಲಾಚಾರಿಯವರೂ, ಮಹಾತ್ಮಾ ಗಾಂಧಿಯವರೂ 1944 ರಲ್ಲಿ ನಡೆಸಿದ ಸಂಧಾನ ವಿಫಲವಾದುದನ್ನು ಹಿಂದೆಯೇ ತಿಳಿಸಲಾಯಿತು. 1945 ರಲ್ಲಿ ಕೇಂದ್ರ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಭುಲ್ಲಾಭಾಯಿ ದೇಸಾಯಿಯವರು ಅದೇ ಸಭೆಯ ಮುಸ್ಲಿಂಲೀಗಿನ ನಾಯಕ ಲಿಯಾಕತ್ ಅಲಿಖಾನ್ ಅವರೊಡನೆ ಎರಡೂ ಪಕ್ಷಗಳೊಳಗೆ ಒಮ್ಮತ ಉಂಟುಮಾಡಲು ಪ್ರಯತ್ನಿಸಿದರು. ದೇಸಾಯಿ ಅವರು ಸೂಚಿಸಿದ ಯೋಜನೆಯ ಪ್ರಕಾರ ಕೇಂದ್ರ ವಿಧಾನಸಭೆಯಲ್ಲಿಯೂ, ತಾತ್ಕಾಲಿಕ ರಾಷ್ಟ್ರೀಯ ಸರ್ಕಾರದ ಸಚಿವ ಸಂಪುಟದಲ್ಲಿಯೂ ಕಾಂಗ್ರೆಸ್ಸಿಗೆ ಎಷ್ಟು ಸ್ಥಾನಗಳಿರುವುವೋ ಅಷ್ಟೇ ಸ್ಥಾನಗಳು ಮುಸ್ಲಿಂಲೀಗಿಗೂ ಇರುವುವು ಎಂಬ ಈ 'ಕಾಂಗ್ರೆಸ್–ಲೀಗ್‌ಗಳ ಸಮಾನತೆ ಸೂತ್ರ'ವನ್ನು ದೇಸಾಯಿಯವರು ಸೃಜಿಸಿ ಮುಸ್ಲಿಂಲೀಗನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದರು. ಈ ರಿಯಾಯಿತಿ ಸಹಜವಾಗಿ ತರ್ಕಬದ್ಧವಾಗಿ ಕಾಣುವುದಿಲ್ಲ. ಮುಸ್ಲಿಂಲೀಗು ಭಾರತದ ಜನಸಂಖ್ಯೆಯ ಸುಮಾರು ಶೇಕಡ 25ರಷ್ಟನ್ನು ಪ್ರತಿನಿಧಿಸುತ್ತದೆ. ಕಾಂಗ್ರೆಸ್ಸು ಇಡೀ ಭಾರತವನ್ನು ಪ್ರತಿನಿಧಿಸುವ ಸಂಸ್ಥೆಯಾಗಿದ್ದಿತು. ಹೀಗಿರುವಾಗ, ವಿಧಾನ ಸಭೆಗಳಲ್ಲಿಯೂ ಸಚಿವ ಸಂಪುಟದಲ್ಲಿಯೂ ಸಮಾನ ಸಂಖ್ಯೆಯನ್ನು ಲೀಗಿಗೆ ದೇಸಾಯಿ ಅವರು ಕೊಡುವ ವಾಗ್ದಾನ ಮಾಡಿದುದು ಸ್ವಲ್ಪ ವಿಚಿತ್ರವಾಗಿ ಕಾಣುತ್ತದೆ. ಆದರೆ ಜಿನ್ನಾ ಅವರಿಗೆ ಈ ದೇಸಾಯಿ ಯೋಜನೆಯೂ ಒಪ್ಪಿಗೆಯಾಗಲಿಲ್ಲ. ದೇಸಾಯಿ ಅವರ ಯೋಜನೆಯು ಒಳಗೊಂಡಿದ್ದ ಸಮಾನತೆ ಸೂತ್ರ ಲೀಗಿನ ಸಂಬಂಧದಲ್ಲಿ ಕಾಂಗ್ರೆಸ್ಸಿನ ಸಂಧಾನಶಕ್ತಿಯನ್ನು ಇನ್ನೂ ದುರ್ಬಲಗೊಳಿಸಿದಂತೆ ಕಾಣುತ್ತದೆ. ಒಟ್ಟಿನಲ್ಲಿ ಬ್ರಿಟಿಷರ ಗುಪ್ತ ಉತ್ತೇಜನ ಹಾಗೂ ಕೆಲವು ಹಿರಿಯ ಕಾಂಗ್ರೆಸ್ ಮುಖಂಡರ ಸಮಾಧಾನ

ಪಡಿಸುವ ನೀತಿ ಇವುಗಳಿಂದ ಜಿನ್ನಾ ಅವರು ಸ್ವಾತಂತ್ರ್ಯಕ್ಕೆ ಮುಂಚೆಯೇ ಪಾಕಿಸ್ತಾನ ನಿರ್ಮಾಣದ ಬಗ್ಗೆ ನಿರ್ಧಾರವಾಗಲೇಬೇಕೆಂಬ ತಮ್ಮ ದೃಢ ನಿಲುವನ್ನು ಸ್ವಲ್ಪವೂ ಬಿಡದಂತೆ ಮುಂದುವರೆಸಿಕೊಂಡು ಬಂದರು.

1945 — ಇತರ ಘಟನೆಗಳು

1945ರ ಅಂತರರಾಷ್ಟ್ರೀಯ ಘಟನೆಗಳೂ, ಬ್ರಿಟನ್ನಿನಲ್ಲಿನ ಕೆಲವು ಬದಲಾವಣೆಗಳೂ ಸೈನಿಕ ಪೋಲಿಸ್ ದಳಗಳ ನಿಷ್ಠೆ ಕಡಿಮೆಯಾದುದೂ ಭಾರತದ ರಾಜಕೀಯ ಪ್ರಶ್ನೆಗೆ ಇನ್ನೊಂದು ತಿರುವು ಕೊಟ್ಟಿತು. 1944ರ ಬೇಸಿಗೆಯಿಂದಲೇ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಹಿಟ್ಲರನ ಮೇಲೆ ಜಯ ಗಳಿಸಲಾರಂಭಿಸಿದವು. ಕೊನೆಗೆ 1945ರ ಏಪ್ರಿಲ್ 30 ರಂದು ಹಿಟ್ಲರನು ಆತ್ಮಹತ್ಯೆ ಮಾಡಿಕೊಂಡನು ಹಾಗೂ 1945ರ ಮೇ 7 ರಂದು ಜರ್ಮನರು ಮಿತ್ರರಾಷ್ಟ್ರಗಳಿಗೆ ಬೇಷರತ್ತಾಗಿ ಶರಣಾಗತರಾದರು. ಹೀಗೆ ವಿಶ್ವಸಂಸ್ಥೆಯು ಯೂರೋಪಿನ ಯುದ್ಧದಲ್ಲಿ ಜಯಗಳಿಸಿದ ನಂತರ ಬ್ರಿಟನ್ನಿನಲ್ಲಿಯೂ ಅಮೆರಿಕಾದಲ್ಲಿಯೂ ಭಾರತದ ಸ್ವಾತಂತ್ರ್ಯದ ಬಗ್ಗೆ ಸಹಾನುಭೂತಿಯ ಒಲವು ಉಂಟಾಯಿತು. ಭಾರತದ ರಾಜಕೀಯ ಸಮಸ್ಯೆಯ ಬಗ್ಗೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅವರು ಅನುಸರಿಸಿದ ರೀತಿನೀತಿಗಳ ಬಗ್ಗೆ ಬ್ರಿಟಿಷ್ ಸಾರ್ವಜನಿಕರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಲೇಬರ್ ಪಕ್ಷದವರೆಲ್ಲರೂ ಭಾರತೀಯ ಮುಖಂಡರನ್ನೆಲ್ಲಾ ಜೈಲಿನಲ್ಲಿ ಇಟ್ಟಿದುದನ್ನು ಖಂಡಿಸಿದರು. ಜಪಾನನ್ನು ಗೆದ್ದ ತಕ್ಷಣ ಭಾರತಕ್ಕೆ ಸ್ವಾತಂತ್ರ್ಯ ನೀಡಲಾಗುವುದೆಂದು ಘೋಷಿಸಬೇಕೆಂದು ಪ್ರಖ್ಯಾತ ತತ್ವಜ್ಞಾನಿ ಬರ್ಟ್ರೆಂಡ್ ರಸೆಲ್ ಹಾಗೂ ಇತರ ಬುದ್ಧಿಜೀವಿಗಳು ಬ್ರಿಟಿಷ್ ಸರ್ಕಾರ ವನ್ನು ಒತ್ತಾಯಿಸಿದರು. ಸುಪ್ರಸಿದ್ಧ ಆಂಗ್ಲ ಸಾಹಿತಿ ಬರ್ನಾರ್ಡ್ ಷಾ ಅವರು ಯುದ್ಧದಲ್ಲಿ ಬ್ರಿಟನ್ನು ಗಳಿಸಿದ ಜಯವನ್ನು ಆಚರಿಸುವುದಿಲ್ಲ ವೆಂದರು. ಲಕ್ಷಾಂತರ ಜನರು ಅನ್ಯಾಯ, ಶೋಷಣೆ, ದಬ್ಬಾಳಿಕೆಗಳಿಗೆ ಒಳಪಟ್ಟಿರುವುದರಿಂದ ತಾವು ಬ್ರಿಟನ್ನಿನ ವಿಜಯೋತ್ಸವದಲ್ಲಿ ಭಾಗಿಯಾಗಲು ಸುಪ್ರಸಿದ್ಧ ಆಂಗ್ಲ ಸಾಹಿತಿ ಬರ್ನಾರ್ಡ್ ಷಾ ಅವರು ನಿರಾಕರಿಸಿದರು.

ಜರ್ಮನಿಯನ್ನು ಯುದ್ಧದಲ್ಲಿ ಸೋಲಿಸಿದ ನಂತರ ಅಮೆರಿಕದ ಸಾರ್ವಜನಿಕ ಅಭಿಪ್ರಾಯವು ಶೀಘ್ರವಾಗಿ ಭಾರತಕ್ಕೆ ಸ್ವಾತಂತ್ರ್ಯ

ದೊರಕಿಸುವ ಪರ ಆಯಿತು. 1945ರ ಏಪ್ರಿಲ್ 12 ರಂದು ರೂಸ್‌ವೆಲ್ಟ್ ಅವರು ನಿಧನರಾದ ನಂತರ ಹ್ಯಾರಿ. ಎಸ್. ಟ್ರೂಮನ್ ಅಮೆರಿಕದ ಅಧ್ಯಕ್ಷರಾದರು. ಸ್ವತಂತ್ರ ಭಾರತವು ಜಪಾನಿನ ಮೇಲೆ ಇನ್ನೂ ನಡೆಯುತ್ತಿದ್ದ ಯುದ್ಧದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸುವುದೆಂಬ ಅಂಶವನ್ನು ಅವರು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅವರಿಗೆ ಸೂಚಿಸಿ, ತಕ್ಷಣವೇ ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸಬೇಕೆಂದು ಅವರನ್ನು ಒತ್ತಾಯಿಸಿದರು.

ಭಾರತದಲ್ಲಿ ಸಂಭವಿಸಿದ ಇನ್ನೊಂದು ಘಟನೆಯೂ ಬ್ರಿಟಿಷರಿಗೆ ಎಚ್ಚರಿಕೆ ನೀಡುವಂತಾಯಿತು. ಬೊಂಬಾಯಿನ 'ರಾಯಲ್ ನೇವಿ'ಯ ಸುಮಾರು 3000 ನೌಕಾಸೇನೆಯ ಉದ್ಯೋಗಿಗಳು (Ratings) ತಮ್ಮ ದಂಡನಾಯಕರು ಭಾರತೀಯರ ರಾಷ್ಟ್ರೀಯ ಗುಣದ ಬಗ್ಗೆ ಮಾಡಿದ ಕೆಲವು ಅವಮಾನಕರ ಮಾತುಗಳಿಂದಲೂ, ತಮಗೂ ಬ್ರಿಟಿಷ್ ಉದ್ಯೋಗಿಗಳಿಗೂ ತೋರಿಸುತ್ತಿದ್ದ ತಾರತಮ್ಯಗಳಿಂದಲೂ ಅತೃಪ್ತಿಗೊಂಡು 1946ರ ಫೆಬ್ರವರಿ 18ರಂದು ದಂಗೆ ಎದ್ದರು. ಇತರ ನೌಕಾಕೇಂದ್ರಗಳಿಗೂ ಸೈನ್ಯ ಹಾಗೂ ವಾಯುಪಡೆಗಳಿಗೂ ಈ ದಂಗೆಯು ಹರಡಿತು. ಪೋಲೀಸ್ ಪಡೆಗಳೂ ಇದಕ್ಕೆ ಹೊರತಾಗಲಿಲ್ಲ. ಇದೇ ವೇಳೆಗೆ ಹಿಂದೆ ವಿವರಿಸಲಾದ ಸುಭಾಷ್ ಚಂದ್ರ ಬೋಸ್ ಅವರು ನಿರ್ಮಿಸಿದ್ದ 'ಅಜಾದ್ ಹಿಂದ್ ಫೌಜ' ಬಗ್ಗೆಯೂ ದೇಶದಲ್ಲಿ ಸಾಕಷ್ಟು ಪ್ರಚಾರವಾಗಿದ್ದಿತು. ಭಾರತ ಸೈನ್ಯದ ಸೈನಿಕರೂ ಇದರಿಂದ ಪ್ರಭಾವಿತವಾಗುವ ಪರಿಸ್ಥಿತಿ ಉಂಟಾಗಿದ್ದಿತು. ಈ ಬೆಳವಣಿಗೆಯು ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಂತಾಯಿತು. ಅವರಿಗೆ ಭಾರತದ ಚಳುವಳಿಯನ್ನು ಅಡಗಿಸಲು ಭಾರತದ ಸೈನಿಕರು, ಪೋಲೀಸರು, ಆಡಳಿತ ಸಿಬ್ಬಂದಿ ಇವರುಗಳ ಮೇಲೆ ವೈಸರಾಯ್ ಅವರು ಅವಲಂಬನೆಯಾಗಿದ್ದರು. ಈ ವಿಭಾಗಗಳ ಭಾರತೀಯರಲ್ಲಿಯೂ ರಾಷ್ಟ್ರೀಯ ಚಳುವಳಿಯ ಭಾವನೆ ಮೂಡಿದ ನಂತರ ಸೈನಿಕ, ಪೋಲೀಸ್ ದಳಗಳ ಹಾಗೂ ಆಡಳಿತವರ್ಗದವರ ನಿಷ್ಠೆಯನ್ನು ನಂಬಿ ತಮ್ಮ ದಬ್ಬಾಳಿಕೆ ನಡೆಸುವುದು ಕಷ್ಟವೆಂಬುದು ವೈಸರಾಯ್ ಅವರಿಗೆ ಮನವರಿಕೆಯಾಯಿತು.[1]

---

1. *Vide*, V. P. Menon, *The Transfer of Power*, P. 231,

ಮೇಲೆ ಹೇಳಿದಂತೆ ಬ್ರಿಟನ್ನಿನ ಆಂತರಿಕ ಸಾರ್ವಜನಿಕ ಅಭಿಪ್ರಾಯ ಹಾಗೂ ಅಮೆರಿಕದ ಒತ್ತಡಗಳು ಮತ್ತು ಸೈನಿಕ, ಪೋಲೀಸ್ ಹಾಗೂ ಆಡಳಿತವರ್ಗದ ನಿಷ್ಠೆ ಕಡಿಮೆಯಾದುದು, ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಅವರು ವೈಸರಾಯ್ ಅವರ ಕಾರ್ಯಕಾರಿ ಸಮಿತಿಯಲ್ಲಿ ವೈಸರಾಯ್ ಹಾಗೂ ಪ್ರಧಾನ ದಂಡನಾಯಕರನ್ನು ಬಿಟ್ಟು ಉಳಿದವರೆಲ್ಲಾ ಭಾರತೀಯರೇ ಇರುವಂತಹ ವೈಸರಾಯ್ ಅವರ ಕಾರ್ಯಕಾರಿ ಸಮಿತಿ ಯನ್ನು ಸ್ಥಾಪಿಸುವ ಸಲಹೆಯನ್ನು ಒಳಗೊಂಡ ಶ್ವೇತಪತ್ರ (White Paper) ವನ್ನು 1945ರ ಜೂನ್ 14ರಂದು ಪ್ರಕಟಿಸಿದರು. ಈ ಸಲಹೆಯ ವಿವರಗಳು ಹೀಗಿವೆ :—

1. ಮುಖ್ಯ ಮತಗಳಿಗೆ ಸಮತೂಕವಿರುವ ಪ್ರಾತಿನಿಧ್ಯವಿರುವಂತೆಯೂ, ಮುಸಲ್ಮಾನರು ಮತ್ತು ಸವರ್ಣೀಯ ಹಿಂದುಗಳಿಗೂ (Caste Hindus) ಸಮಾನ ಪ್ರಾತಿನಿಧ್ಯವಿರುವಂತೆಯೂ ವೈಸರಾಯ್ ಅವರ ಕಾರ್ಯಕಾರಿ ಸಮಿತಿಗೆ ವೈಸರಾಯ್ ಅವರು ನಾಮಕರಣ ಮಾಡತಕ್ಕದ್ದು.

2. ಮೇಲಿನಂತೆ ನಾಮಕರಣ ಮಾಡಲು ವೈಸರಾಯ್ ಅವರು ಪ್ರಮುಖ ಭಾರತೀಯರ ಸಮ್ಮೇಳನವೊಂದನ್ನು ಕರೆದು ಅಲ್ಲಿ ಅವರಿಂದ ತಮಗೆ ಚುನಾಯಿಸಲು ಕೆಲವರ ಹೆಸರುಗಳ ಪಟ್ಟಿಗಳನ್ನು ತೆಗೆದುಕೊಳ್ಳ ತಕ್ಕದ್ದು.

3. ವೈಸರಾಯ್ ಅವರ ಕಾರ್ಯಕಾರಿ ಸಮಿತಿಯಲ್ಲಿ ವೈಸರಾಯ್ ಮತ್ತು ಪ್ರಧಾನ ದಂಡನಾಯಕ ಇವರಿಬ್ಬರ ಹೊರತು ಮಿಕ್ಕ ಎಲ್ಲಾ ಸದಸ್ಯರೂ ಭಾರತೀಯರಾಗಿರತಕ್ಕದ್ದು.

4. ವಿದೇಶ ವ್ಯವಹಾರಗಳು ಭಾರತೀಯ ಸಚಿವರ ಕೈಯಲ್ಲಿರುವುದು, ಆದರೆ ಭಾರತದ ಹೊರರಕ್ಷಣೆಯು ಬ್ರಿಟಿಷರ ಹೊಣೆಯಾಗಿರುವ ವರೆಗೂ ಪ್ರಧಾನ ದಂಡನಾಯಕನೇ ಯುದ್ಧ ಮಂತ್ರಿಯಾಗಿ ರುವರು.

5. ಬ್ರಿಟಿಷ್ ಸಾಮ್ರಾಟರ ಪ್ರತಿನಿಧಿಯಾಗಿ ವೈಸರಾಯ್ ಅವರ

ಮೂಲಕ ಬ್ರಿಟಿಷ್ ಸರ್ಕಾರವು ದೇಶೀಯ ಸಂಸ್ಥಾನಗಳೊಡನೆ ಹೊಂದಿರುವ ಸಂಬಂಧಗಳು ಬದಲಾಯಿಸುವುದಿಲ್ಲ.

ಸಿಮ್ಲಾ ಸಮ್ಮೇಳನ

ಮೇಲೆ ಹೇಳಿದ ಸಲಹೆಗಳನ್ನು ಒಳಗೊಂಡ ಶ್ವೇತಪತ್ರ ಹೊರಡಿಸಿದ ನಂತರ ವೈಸರಾಯ್ ಅವರು ಜವಾಹರ್‌ಲಾಲ್ ನೆಹರೂ, ವಲ್ಲಭಬಾಯಿ ಪಟೇಲ್, ಅಬುಲ್ ಕಲಾಮ್ ಅಜಾದ್ ಹಾಗೂ ಹಿಂದೆ ಕಾಂಗ್ರೆಸ್ಸಿನ ಅಧ್ಯಕ್ಷರುಗಳಾಗಿದ್ದವರೆಲ್ಲರನ್ನೂ ಸೆರೆಮನೆಯಿಂದ ಬಿಡುಗಡೆ ಮಾಡಿದರು. ಅಲ್ಲದೆ, ಅನೇಕ ಭಾರತೀಯ ಮುಖಂಡರುಗಳನ್ನು[1] 1945 ರ ಜೂನ್ 25 ರಂದು ಸಮ್ಮೇಳನದಲ್ಲಿ ಭಾಗವಹಿಸಲು ವೈಸರಾಯ್ ಅವರು ಆಹ್ವಾನಿಸಿದರು.

ಸಮ್ಮೇಳನದಲ್ಲಿ ವೈಸರಾಯ್ ಅವರ ಕಾರ್ಯಕಾರಿ ಸಮಿತಿಗೆ ಭಾರತೀಯರನ್ನು ವೈಸರಾಯ್ ಅವರು ನಾಮಕರಣ ಮಾಡಿ ಸೇರಿಸಿಕೊಳ್ಳುವ ಪ್ರಶ್ನೆ ಚರ್ಚೆಯಾಯಿತು. ಗಾಂಧಿಜಿಯವರು 'ಸವರ್ಣೀಯ ಹಿಂದೂಗಳು' (Caste Hindus) ಎಂಬ ಪದಕ್ಕೂ, ಹಿಂದೂ ಸದಸ್ಯರು ಮತ್ತು ಮುಸ್ಲಿಂ ಸದಸ್ಯರು ಸಮಸಂಖ್ಯೆಯಲ್ಲಿ ಇರಬೇಕೆಂಬ ಸಲಹೆಗೂ ತಮ್ಮ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದರು. ದೀರ್ಘ ಚರ್ಚೆಯ ಫಲವಾಗಿ, ಹೊಸ ತಾತ್ಕಾಲಿಕ ಸರ್ಕಾರದಲ್ಲಿ ಒಟ್ಟು 14 ಮಂತ್ರಿಗಳು ಇರುವುದೆಂದೂ ಇವರಲ್ಲಿ ಏಳು ಜನ ಮುಸಲ್ಮಾನರು, ಇಬ್ಬರು ಸವರ್ಣೀಯ ಹಿಂದೂಗಳು, ಇಬ್ಬರು ಪರಿಶಿಷ್ಟ ವರ್ಗದವರು, ಸಿಖ್, ಪಾರ್ಸಿ ಮತ್ತು ಕ್ರಿಶ್ಚಿಯನ್ನರಲ್ಲಿ ಒಬ್ಬೊಬ್ಬರು ಇರುವುದೆಂದೂ ತೀರ್ಮಾನಿಸಲಾಯಿತು. ಇಂತಹ ಮತ ಆಧಾರಿತ ವಿತರಣೆಯುಳ್ಳ ತಾತ್ಕಾಲಿಕ ಸರ್ಕಾರವು ಕ್ರಮೇಣ ಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಮಾರ್ಗ ಮಾಡಿಕೊಡುವುದೆಂಬುದು ಬ್ರಿಟಿಷ್

---

1. ಈ ಮುಖಂಡರುಗಳು ಕಾಂಗ್ರೆಸ್ಸು, ಮುಸ್ಲಿಂಲೀಗು, ಸಿಖ್ ಜನತೆ, ರಾಷ್ಟ್ರೀಯತಾ ಪಕ್ಷ, ವಿಧಾನಸಭೆಯ ಐರೋಪ್ಯರ ಗುಂಪು ಮತ್ತು ಭಾರತದ ಪ್ರಾಂತ್ಯಗಳ ಮುಖ್ಯಮಂತ್ರಿಗಳ ಪ್ರತಿನಿಧಿಗಳಾಗಿದ್ದರು. ಹೀಗೆ ಆಹ್ವಾನಿಸಲ್ಪಟ್ಟವರಲ್ಲಿ ಹಿಂದೂ ಮಹಾಸಭಾ ಸೇರಿರಲಿಲ್ಲ. ಕಾಂಗ್ರೆಸ್ಸು ಹಿಂದೂಗಳನ್ನು ಪ್ರತಿನಿಧಿಸುವ ಸಂಸ್ಥೆ ಎಂಬುದು ಸರ್ಕಾರದ ನಿಲುವು ಎಂಬುದನ್ನು ಇದು ಸೂಚಿಸುವುದೆಂದು ತಿಳಿಯಬಹುದು.

ಸರ್ಕಾರದ ಭಾವನೆ. ಆದರೆ ಇದು ಎಷ್ಟು ಅಸಮರ್ಥನೀಯ ಎಂಬುದು ಸುಸ್ಪಷ್ಟವಾಗಿದೆ. ಗಾಂಧೀಜಿಯವರು ಹೇಳಿದಂತೆ ಹಿಂದೂ ಸದಸ್ಯರು ಮತ್ತು ಮುಸ್ಲಿಂ ಸದಸ್ಯರು ಸಮಸಂಖ್ಯೆಯಲ್ಲಿರಬೇಕೆಂಬುದು ಯಾವ ತರ್ಕಕ್ಕೂ ನಿಲುಕದು. ಆದಾಗ್ಯೂ ಕೊನೆಗೆ ಜಿನ್ನಾ ಅವರೇ ಭಾರತೀಯರೇ ಇರುವ ವೈಸರಾಯ್ ಅವರ ಕಾರ್ಯಕಾರಿ ಸಭೆ ರಚಿಸಲು ಅಡ್ಡಿ ತಂದರು. ಕಾಂಗ್ರೆಸ್ಸು ಕೊಟ್ಟ ಐದು ಜನರ ಹೆಸರಿನಲ್ಲಿ ಕಾಂಗ್ರೆಸ್ಸಿಗರೇ ಆಗಿದ್ದ ಮುಸ್ಲಿಂ ಒಬ್ಬರು ಇದ್ದುದು ಜಿನ್ನಾ ಅವರಿಗೆ ಸರಿಬೀಳಲಿಲ್ಲ. ವೈಸರಾಯ್ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಮುಸ್ಲಿಂಲೀಗು ತನ್ನ ಪ್ರತಿನಿಧಿಗಳನ್ನು ಸೂಚಿಸಲು ಎರಡು ಷರತ್ತುಗಳನ್ನು ಹಾಕಿದರು. ಕಾರ್ಯಕಾರಿ ಸಮಿತಿಗೆ ಮುಸ್ಲಿಂ ಸದಸ್ಯರನ್ನು ಸೂಚಿಸುವ ಏಕೈಕ ಹಕ್ಕು ಮುಸ್ಲಿಂ ಲೀಗಿಗೆ ಮಾತ್ರವೇ ಇರಬೇಕೆಂಬುದು ಮೊದಲನೆಯ ಷರತ್ತು. ಇದರಿಂದ ಅವರ ಪ್ರಕಾರ ಕಾಂಗ್ರೆಸ್ಸಿನಲ್ಲಿದ್ದ ಹಿರಿಯ ಮುಸ್ಲಿಂ ನಾಯಕರಿಗೂ ಅಲ್ಲಿ ಸ್ಥಾನ ನೀಡಲು ಅವಕಾಶವಿರದು. ಮುಸ್ಲಿಮರು ಅಂತಹ ಪದವಿಗೆ ಬರಬೇಕಾದರೆ ಅವರು ಮುಸ್ಲಿಂಲೀಗಿಗೆ ಸೇರಬೇಕೆಂದು ಅವರು ಹೇಳಿದಂತಾಯಿತು. ಅಲ್ಲದೆ ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆ ಅಲ್ಲ ಕೇವಲ ಹಿಂದೂಗಳ ಸಂಸ್ಥೆ ಎಂದೂ ಅವರು ಹೇಳಿದಂತಾಯಿತು. ಕಾಂಗ್ರೆಸ್ಸಿನಲ್ಲಿ ಅಬ್ದುಲ್ ಕಲಾಂ ಅಜಾದ್, ಖಾನ್ ಅಬ್ದುಲ್ ಗಫಾರ್ ಖಾನ್ ಅಂತಹ ಹಿರಿಯ ನಾಯಕರೂ ಇನ್ನೂ ಸಾವಿರಾರು ಇತರ ಮುಸ್ಲಿಂ ಕಾರ್ಯಕರ್ತರೂ ಇದ್ದ ಕಾಂಗ್ರೆಸ್ಸನ್ನು ಕೇವಲ ಹಿಂದೂಗಳ ಸಂಸ್ಥೆ ಎಂದು ಹೇಳಿದುದು ಕಾಂಗ್ರೆಸ್ಸಿಗೂ ತುಂಬ ಅಸಮಾಧಾನವಾಯಿತು. ಜಿನ್ನಾ ಅವರ ಎರಡನೆಯ ಷರತ್ತು, ಕಾರ್ಯಕಾರಿ ಸಭೆಯು ಬಹುಮತದಿಂದ ಕೈಗೊಳ್ಳುವ ಯಾವುದೇ ನಿರ್ಣಯವನ್ನು ಮುಸ್ಲಿಂ ಸದಸ್ಯರು ವಿರೋಧಿಸಿದರೆ ಆ ನಿರ್ಣಯವನ್ನು ವೈಸರಾಯ್ ಅವರು ತಮ್ಮ ವಿಶೇಷ ಅಧಿಕಾರ ಚಲಾಯಿಸಿ ಆ ನಿರ್ಣಯವನ್ನು ಜಾರಿಗೆ ತರುವುದಿಲ್ಲವೆಂದು ವೈಸರಾಯ್ ಅವರು ಭರವಸೆ ನೀಡಬೇಕೆಂಬುದು. ಒಟ್ಟು ಹದಿನಾಲ್ಕು ಸಚಿವರಿರುವ ವೈಸರಾಯ್ ಕಾರ್ಯಕಾರಿ ಸಭೆಯಲ್ಲಿ ಮುಸ್ಲಿಂಲೀಗಿಗೆ ಐದು ಸ್ಥಾನ ಮಾತ್ರ ಇದ್ದುದರಿಂದ ಮಿಕ್ಕ ಮತೀಯ ಸದಸ್ಯರುಗಳು ಒಟ್ಟಾಗಿ ಮುಸ್ಲಿಂಲೀಗಿಗೆ ಇಷ್ಟವಿಲ್ಲದಿದ್ದ

ನಿರ್ಣಯುವನ್ನು ಕೈಗೊಳ್ಳಬಹುದಾದ ಸಂದರ್ಭವನ್ನು ಊಹಿಸಿಕೊಂಡು ಈ ಷರತ್ತನ್ನು ಜಿನ್ನಾ ಅವರು ಹಾಕಿದರು. ಒಟ್ಟಿನಲ್ಲಿ ಸಿಮ್ಲಾ ಸಮ್ಮೇಳನ ಜಿನ್ನಾ ಅವರ ಮೇಲಿನ ವರ್ತನೆಯಿಂದ ನಿಷ್ಫಲವಾಯಿತು. ಅದೇ ಸಂದರ್ಭ ದಲ್ಲಿ ಜಿನ್ನಾ ಅವರು ಕಾಂಗ್ರೆಸ್ಸಿನಲ್ಲಿದ್ದ ಮುಸ್ಲಿಮರನ್ನೂ ಲೀಗಿಗೆ ಸೆಳೆದುಕೊಳ್ಳುವ ಪ್ರಯತ್ನ ಮಾಡಿ ಪಂಜಾಬ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಇಫ್ತಿಕಾರ್ – ಉದ್ದೀನ್, ವಾಯುವ್ಯ ಗಡಿ ಪ್ರಾಂತ್ಯದ ಕಾಂಗ್ರೆಸ್ ನಾಯಕ ಅಬ್ದುಲ್ ಖಯೂಮ್ ಖಾನ್ ಇಂತಹವರನ್ನೂ ಲೀಗಿಗೆ ಸೇರಿಸಿ ಕೊಳ್ಳಲು ಯಶಸ್ವಿಯಾದರು.

ಬ್ರಿಟನ್ನಿನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದುದು– ಜುಲೈ 1945

ಯೂರೋಪಿನ ಯುದ್ಧದಲ್ಲಿ ಜಯಗಳಿಸಿದ ನಂತರ 1945 ರ ಜುಲೈ 5 ರಂದು ಬ್ರಿಟಿಷ್ ಪಾರ್ಲಿಮೆಂಟಿಗೆ ಚುನಾವಣೆ ನಡೆಯಿತು. ಇದರಲ್ಲಿ ಲೇಬರ್ ಪಕ್ಷವು ವಿಜಯಿಯಾಗಿ ಚರ್ಚಿಲ್ ಅವರ ಸ್ಥಾನದಲ್ಲಿ ಲೇಬರ್ ಪಕ್ಷದ ನಾಯಕ ಕ್ಲಿಮೆಂಟ್ ಅಟ್ಲೀ ಅವರು ಬ್ರಿಟಿಷ್ ಪ್ರಧಾನಿಯಾದರು. ಭಾರತದ ಸ್ವಾತಂತ್ರ್ಯ ಬೇಡಿಕೆ ಬಗ್ಗೆ ಕನ್ಸರ್ವೇಟಿವ್ ಪಕ್ಷಕ್ಕಿಂತ ಹೆಚ್ಚು ಸಹಾನುಭೂತಿ ಹೊಂದಿದ್ದ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದುದು ಭಾರತದ ಸ್ವಾತಂತ್ರ್ಯ ಚಳುವಳಿ ದೃಷ್ಟಿಯಿಂದ ಮುಖ್ಯವಾದ ರಾಜಕೀಯ ಬೆಳವಣಿಗೆಯಾಗಿದೆ.

ಜಪಾನ್ ಶರಣಾಗತವಾದುದು (1945 ರ ಆಗಸ್ಟ್ 14)

ಹಿಟ್ಲರನ ನಿಧನ ಹಾಗೂ ಜರ್ಮನಿಯ ಶರಣಾಗತಿಯಿಂದ ಜಪಾನಿಗೆ ಯುದ್ಧ ಬೆಂಬಲ ಕಡಿಮೆಯಾಯಿತು. ಅಲ್ಲದೆ ಶೀಘ್ರವಾಗಿ ಯುದ್ಧವನ್ನು ಮುಕ್ತಾಯಗೊಳಿಸಲು ಅಮೆರಿಕಾವು 1945 ರ ಆಗಸ್ಟ್ 6 ರಂದು ಅಣು ಬಾಂಬನ್ನು ಹಿರೋಷಿಮಾ ಮೇಲೂ, 1945 ರ ಆಗಸ್ಟ್ 9 ರಂದು ಇನ್ನೊಂದು ಅಣುಬಾಂಬನ್ನು ನಾಗಸಾಕಿಯ ಮೇಲೂ ಸ್ಫೋಟಿಸಿ ಅವುಗಳ ಮೂಲಕ ಜಪಾನನ್ನು ನಿರ್ಜೀವಗೊಳಿಸಿತು. ವಿಧಿ ಇಲ್ಲದೆ

ಜಪಾನು 1945 ರ ಆಗಸ್ಟ್ 14 ರಂದು ಬೇಷರತ್ತಾಗಿ ಮಿತ್ರ ರಾಷ್ಟ್ರಗಳಿಗೆ ಶರಣಾಗತವಾಯಿತು.

ಯುದ್ಧದಲ್ಲಿ ಸಂಪೂರ್ಣವಾಗಿ ಜಯಗಳಿಸಿದ ನಂತರ ಬ್ರಿಟನ್ನಿನ ಹೊಸದಾಗಿ ಚುನಾಯಿತವಾದ ಲೇಬರ್ ಪಕ್ಷದ ಕ್ಲಿಮೆಂಟ್ ಅಟ್ಲೀ ಅವರ ಸರ್ಕಾರವು ಭಾರತದ ರಾಜಕೀಯ ಸಮಸ್ಯೆಯ ಪರಿಹಾರಕ್ಕೆ ಹೊಸ ಪ್ರಯತ್ನ ಮಾಡಿತು. ಭಾರತೀಯರು ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಳ್ಳಲು ಸಂವಿಧಾನ ರಚನಾ ಮಂಡಳಿಯನ್ನು ಸ್ಥಾಪಿಸುವುದು ಅತ್ಯಂತ ಜರೂರು ವಿಷಯವೆಂದೂ, "ಬ್ರಿಟಿಷ್ ಕಾಮನ್‌ವೆಲ್ತ್‌ನೊಳಗೆ ಸ್ವತಂತ್ರ ರಾಷ್ಟ್ರವಾಗಿ ತನಗೆ ಸಲ್ಲತಕ್ಕ ಸ್ಥಾನವನ್ನು ಭಾರತವು ಶೀಘ್ರವಾಗಿ ಹೊಂದಬೇಕೆಂದೂ"[1] ಬ್ರಿಟಿಷ್ ಸರ್ಕಾರವು ಪರಿಗಣಿಸಿದೆ ಎಂದು ಹೊಸ ಸೆಕ್ರೆಟರಿ ಆಫ್ ಸ್ಟೇಟ್ ಆದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರು ಘೋಷಿಸಿದರು. ಹೊಸ ಲೇಬರ್ ಸರ್ಕಾರದ ಈ ಆಶಾದಾಯಕ ಘೋಷಣೆಯ ನಂತರ ಭಾರತದ ಸ್ವಾತಂತ್ರ್ಯ ಸಂಬಂಧವಾಗಿ 1946-47 ರಲ್ಲಿ ಜರುಗಿದ ಮುಂದಿನ ಘಟನೆಗಳನ್ನು ಈ ಕೆಳಗೆ ವಿವರಿಸಲಾಗುವುದು.

1946

ವಿಧಾನಸಭೆಗಳಿಗೆ ಚುನಾವಣೆ

1946ರಲ್ಲಿ ಭಾರತದ ಸ್ವಾತಂತ್ರ್ಯ ಸಾಧನೆಯ ಬಗ್ಗೆ ಘಟನೆಗಳು ಹಿಂದಿಗಿಂತ ಚುರುಕಾದವು. ಯುದ್ಧದ ಪೆಸೆಯಿಂದ ಕೇಂದ್ರ ಹಾಗೂ ಪ್ರಾಂತೀಯ ವಿಧಾನಸಭೆಗಳಿಗೆ ತಡೆಹಿಡಿದಿದ್ದ ಚುನಾವಣೆಗಳನ್ನು 1945 ರ ಡಿಸೆಂಬರ್‌ನಲ್ಲಿ ನಡೆಸಲಾಗುವುದೆಂದು ವೈಸರಾಯ್ ವೇವೆಲ್ ಅವರು 1945ರ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಿದ್ದರು. ಎಲ್ಲಾ ಪಕ್ಷಗಳೂ ಈ ಚುನಾವಣೆಗಳಲ್ಲಿ ಭಾಗವಹಿಸಿದವು.

ಚುನಾವಣೆಗಳ ಮುನ್ನ ನಡೆದ ಒಂದು ಮುಖ್ಯ ಘಟನೆ ಇಲ್ಲಿ ಗಮನಿಸುವುದು ಉಚಿತವಾಗುವುದು. ಯುದ್ಧದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಸುಭಾಷ್‌ಚಂದ್ರ ಬೋಸ್ ಅವರ ಆಜಾದ್ ಹಿಂದ್

1. Quoted in D. G. Gupta, *op-cit.* P 253

ಫೌಜ್‌ನ ಸುಮಾರು 20,000 ವೀರಯೋಧರ ಮೇಲೆಯೂ ರಾಜದ್ರೋಹ ಆಪಾದನೆ ಹೊರಿಸಿ ಅವರನ್ನು ಬ್ರಿಟಿಷ್ ಸರ್ಕಾರವು ವಿಚಾರಣೆಗೆ ಗುರಿ ಮಾಡಿತು. ಇದು ದೇಶಾದ್ಯಂತ ಸರ್ಕಾರದ ವಿರುದ್ಧ ಪ್ರತಿಭಟನಾ ಸಭೆ, ಹಾಗೂ ಮೆರವಣಿಗೆಗಳಿಗೆ ಕಾರಣವಾಯಿತು. ಪೋಲೀಸರು ಯಥಾ ಪ್ರಕಾರ ಲಾಠಿ, ಗುಂಡು ಇವುಗಳ ಬಲಪ್ರಯೋಗ ಮಾಡಿ ಜನರನ್ನು ಹಿಂಸಿಸಿದರು. ಆದರೆ, ಕೊನೆಗೆ ಸರ್ಕಾರವು ಆ ವೀರಯೋಧರ ಮೇಲಿನ ವಿಚಾರಣೆಯನ್ನು ಕೈಬಿಡಬೇಕಾಯಿತು. ಆಗ ಜನರು ಇವರನ್ನು ಸಂಭ್ರಮದಿಂದ 'ಜೈ ಹಿಂದ್' ಜಯಕಾರದೊಡನೆ ಸ್ವಾಗತಿಸಿದರು. ಹೀಗೆ ಹುಟ್ಟಿದ ಹೊಸ ಸ್ಫೂರ್ತಿ ಕಾಂಗ್ರೆಸ್ಸಿಗೆ ಚುನಾವಣೆಯಲ್ಲಿಯೂ ಸಹಾಯ ವಾಯಿತೆಂದು ಹೇಳಬಹುದು.

ಆಗ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಸಾಮಾನ್ಯ ಮತಗಳ (General Votes) ಸುಮಾರು 9/10 ರಷ್ಟು ಭಾಗವನ್ನೂ, ಮುಸ್ಲಿಂ ಲೀಗು ಮುಸ್ಲಿಂ ಮತಗಳಲ್ಲಿ 8/10 ರಷ್ಟು ಭಾಗವನ್ನೂ ಪಡೆಯಿತು. ಎಂಟು ಪ್ರಾಂತ್ಯಗಳ ವಿಧಾನಸಭೆಗಳಲ್ಲಿ – ಅಸ್ಸಾಂ, ಬಿಹಾರ, ಬೊಂಬಾಯಿ, ಕೇಂದ್ರ ಪ್ರಾಂತ್ಯಗಳು, ಮದ್ರಾಸು, ವಾಯುವ್ಯ ಗಡಿ ಪ್ರಾಂತ್ಯ, ಒರಿಸ್ಸ ಹಾಗೂ ಸಂಯುಕ್ತ ಗಡಿ ಪ್ರಾಂತ್ಯಗಳು – ಕಾಂಗ್ರೆಸ್ಸು ಸ್ಪಷ್ಟ ಬಹುಮತ ಪಡೆಯಿತು. ಪಂಜಾಬಿನಲ್ಲಿ ಕಾಂಗ್ರೆಸ್ಸು, ಯೂನಿಯನಿಸ್ಟ್ ಪಕ್ಷ ಹಾಗೂ ಅಕಾಲಿಗಳು ಸೇರಿ ಸಮ್ಮಿಶ್ರ ಸಚಿವ ಸಂಪುಟ ರಚಿಸಿದರು. ಸಿಂಧ್ ಮತ್ತು ಬಂಗಾಳಗಳಲ್ಲಿ ಮುಸ್ಲಿಂ ಲೀಗು ಕೆಲವು ಸ್ವತಂತ್ರರೊಡನೆ ಮತ್ತು ಕೆಲವು ಇತರ ಪಂಗಡಗಳೊಡನೆ ಸೇರಿಕೊಂಡು ಅಧಿಕಾರಕ್ಕೆ ಬಂದಿತು. ಹೀಗೆ, ಮುಸ್ಲಿಂಲೀಗು ತನ್ನ ಕಲ್ಪನೆಯ ಪಾಕಿಸ್ತಾನಕ್ಕೆ ಸೇರಿಸಿಕೊಂಡಿದ್ದ ಐದು ಪ್ರಾಂತ್ಯಗಳ ಪೈಕಿ ಎರಡರಲ್ಲಿ ಮಾತ್ರ ಸಚಿವ ಸಂಪುಟ ರಚಿಸುವ ಸ್ಥಿತಿ ಯಲ್ಲಿದ್ದಿತು. ಕಾಂಗ್ರೆಸ್ಸು ದೇಶದ ಬಹುಭಾಗದಲ್ಲಿ ಆಡಳಿತ ವಹಿಸಿ ಕೊಂಡಿತು. ಚುನಾವಣೆಯು ಈ ಎರಡು ಸಂಸ್ಥೆಗಳ ಬಲಾಬಲಗಳನ್ನು ಸ್ಪಷ್ಟಪಡಿಸಿತು. ರಾಷ್ಟ್ರೀಯ ಕಾಂಗ್ರೆಸ್ಸಿನ ಸಹಜ ರಾಷ್ಟ್ರೀಯ ಬಲವನ್ನು ಅದು ಸ್ಥಿರಪಡಿಸಿತು.

ಬ್ರಿಟಿಷ್ ಪಾರ್ಲಿಮೆಂಟ್ ನಿಯೋಗದ ಭೇಟಿ

1946ರ ಜನವರಿ 6 ಹಾಗೂ ಫೆಬ್ರವರಿ 8ರ ಅವಧಿಯಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರುಗಳ ನಿಯೋಗವು ಭಾರತಕ್ಕೆ ಭೇಟಿ ನೀಡಿದುದು 1946ರ ಇನ್ನೊಂದು ಭಾವಗರ್ಭಿತ ವಿಷಯವಾಗಿದೆ. ಭಾರತದ ರಾಜಕೀಯ ಪರಿಸ್ಥಿತಿ ಹಾಗೂ ಪ್ರಚಲಿತ ಅಭಿಪ್ರಾಯಗಳನ್ನು ಖುದ್ದಾಗಿ ತಿಳಿಯುವುದೇ ಈ ನಿಯೋಗದ ಪಾರ್ಲಿಮೆಂಟ್ ಸದಸ್ಯರ ಉದ್ದೇಶವಾಗಿದ್ದಿತು. ಅವರು ಭಾರತವನ್ನು ಬಿಡುವ ಮುನ್ನ ವೃತ್ತಪತ್ರಿಕೆಗಳಿಗೆ ಒಂದು ಹೇಳಿಕೆ ಇತ್ತು, ವಿವಿಧ ಪಕ್ಷಗಳ ಭಿನ್ನಾಭಿಪ್ರಾಯಗಳಿಲ್ಲದೆ ಸ್ವಾತಂತ್ರ್ಯ ಬೇಡಿಕೆಗಳ ಬಗ್ಗೆ ಅವುಗಳೆಲ್ಲದರಲ್ಲಿಯೂ ಐಕ್ಯತೆ ಇದ್ದುದು ತಮಗೆ ಮನವರಿಕೆಯಾಗಿದೆ ಎಂದು ಘೋಷಿಸಿದರು. ಭಾರತದ ಸ್ವಾತಂತ್ರ್ಯ ಸಂಬಂಧದ ಮಸೂದೆಯನ್ನು ಅನುಮೋದಿಸಬೇಕಾದ ಪಾರ್ಲಿಮೆಂಟಿನ ಸದಸ್ಯರುಗಳಾಗಿದ್ದವರು ಈ ಅಭಿಪ್ರಾಯ ವ್ಯಕ್ತಪಡಿಸಿದುದು ಮುಖ್ಯವಾದುದು.

ಬ್ರಿಟಿಷ್ ಸಚಿವ ಸಂಪುಟದವರ ನಿಯೋಗದ ಭೇಟಿ

ಪಾರ್ಲಿಮೆಂಟ್ ಸದಸ್ಯರ ನಿಯೋಗದ ಖುದ್ದು ಭೇಟಿಯ ನಂತರ ಬ್ರಿಟಿಷ್ ಪ್ರಧಾನಿ ಅಟ್ಲೀ ಅವರು ಪಾರ್ಲಿಮೆಂಟಿನಲ್ಲಿ ನೀಡಿದ ಹೇಳಿಕೆಯಿಂದ ಬ್ರಿಟಿಷರು ಭಾರತ ಬಿಟ್ಟು ಹೊರಡಲು ನಿರ್ಧರಿಸಿದರು ಎಂಬುದು ಸ್ಪಷ್ಟವಾಯಿತು. ಇದಕ್ಕೆ ಪೂರ್ವಭಾವಿ ಕ್ರಮವಾಗಿ ಬ್ರಿಟಿಷ್ ಸಚಿವ ಸಂಪುಟದ ಸೆಕ್ರೆಟರಿ ಆಫ್ ಸ್ಟೇಟ್ ಪೆಥಿಕ್ ಲಾರೆನ್ಸ್, ದಿ ಫಸ್ಟ್ ಲಾರ್ಡ್ ಆಫ್ ಅಡ್ಮಿರಾಲಿಟಿ ಎ. ವಿ. ಅಲೆಕ್ಸಾಂಡರ್ ಮತ್ತು ಪ್ರೆಸಿಡೆಂಟ್ ಆಫ್ ದಿ ಬೋರ್ಡ್ ಆಫ್ ಟ್ರೇಡ್ ಸರ್ ಸ್ಟಾಫರ್ಡ್ ಕ್ರಿಪ್ಸ್ ಇವರನ್ನು ಒಳಗೊಂಡ ನಿಯೋಗವನ್ನು ಕಳಿಸುವ ತೀರ್ಮಾನವನ್ನು ಪ್ರಧಾನಿಯವರು ಕೈಗೊಂಡರು. ಈ ಅತ್ಯುನ್ನತ ಬ್ರಿಟಿಷ್ ಅಧಿಕಾರಿ ವ್ಯಕ್ತಿಗಳ ನಿಯೋಗವನ್ನು ನೇಮಿಸುವ ಸಂದರ್ಭದಲ್ಲಿ ಬ್ರಿಟಿಷ್ ಪ್ರಧಾನಿ ಅಟ್ಲೀ ಅವರು ಎರಡು ಮುಖ್ಯ ಅಂಶಗಳನ್ನು ಬಹಿರಂಗಗೊಳಿಸಿದರು. **ಮೊದಲನೆಯದಾಗಿ** ಭಾರತವು ಅದರ ಭವಿಷ್ಯ ರಾಜ್ಯಾಂಗ ಹೇಗಿರಬೇಕೆಂಬುದನ್ನು ಅದೇ ನಿರ್ಧರಿಸಿಕೊಳ್ಳಬೇಕು. **ಎರಡನೆಯದಾಗಿ** ಪ್ರಪಂಚದಲ್ಲಿ ಅದರ ಸ್ಥಾನಮಾನಗಳನ್ನು ಅದೇ ನಿರ್ಧರಿಸಿಕೊಳ್ಳಬೇಕು. ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿಯೇ ಅದು

ಉಳಿಯುವುದೆಂಬ ಆಕಾಂಕ್ಷೆಯನ್ನೂ ಅವರು ಪ್ರಕಟಿಸಿದರು. ಇದರ ನಿರ್ಧಾರವೂ ಭಾರತಕ್ಕೇ ಸೇರಿದ ವಿಷಯವಾಗಿದೆ ಎಂದೂ ಅವರು ಹೇಳಿದರು.

ಮೇಲಿನ ಬ್ರಿಟಿಷರ ಧೋರಣೆಯನ್ನು ಭಾರತವು ಸ್ವಾಗತಿಸಿತು. ಈ ಧೋರಣೆಯ ಪ್ರಕಾರ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಭಾರತಕ್ಕೆ 1946ರ ಮಾರ್ಚಿ 23 ರಂದು ಆಗಮಿಸಿದ ಬ್ರಿಟಿಷ್ ಸಚಿವ ಸಂಪುಟದ ನಿಯೋಗವನ್ನು ಭಾರತದ ಜನತೆ ಆಸಕ್ತಿಯುತ ನಿರೀಕ್ಷೆಯಿಂದ ಸ್ವಾಗತಿಸಿತು. ನಿಯೋಗವು ವಿವಿಧ ಪಕ್ಷಗಳ ನಾಯಕರುಗಳೊಡನೆ ಸಮಾಲೋಚನೆ ನಡೆಸಿದ ನಂತರ 1946 ರ ಮೇ 16 ರಂದು ಯೋಜನೆಯೊಂದನ್ನು ಸಿದ್ಧಪಡಿಸಿತು. ಈ ಯೋಜನೆಯ ಮುಖ್ಯಾಂಶಗಳು ಇವು :

1. ಇದು ಭಾರತದ ಭವಿಷ್ಯದ ಬಗ್ಗೆ ವಿವಿಧ ಪಕ್ಷಗಳು ಒಮ್ಮತಕ್ಕೆ ಬರಲು ಅನುಕೂಲ ಮಾಡಿಕೊಡಲು ಸಹಾಯಕವಾಗುವ ಕರಡು ಯೋಜನೆಯಾಗಿದೆ.

2. ಬ್ರಿಟಿಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳೆಲ್ಲವನ್ನೂ ಒಳಗೊಂಡ ಒಂದು ಭಾರತದ ಒಕ್ಕೂಟವಿರುವುದು. (Union of India)

3. ಒಕ್ಕೂಟದ ಕೇಂದ್ರ ಸರ್ಕಾರವು ವಿದೇಶಿ ವ್ಯವಹಾರಗಳು, ರಕ್ಷಣೆ, ಸಂಪರ್ಕ ಮಾಧ್ಯಮಗಳು ಇವುಗಳನ್ನು ನೋಡಿಕೊಳ್ಳುವುದು. ಇದಕ್ಕೆ ಅವಶ್ಯಕವಾದ ಹಣ ಎತ್ತುವ ಅಧಿಕಾರವನ್ನು ಅದು ಹೊಂದಿರುವುದು. ಮಿಕ್ಕ ಎಲ್ಲಾ ವಿಷಯಗಳೂ ಬಾಬುಗಳೂ ಪ್ರಾಂತ್ಯಗಳ ಅಥವಾ ದೇಶೀಯ ಸಂಸ್ಥಾನಗಳ ಹೊಣೆ ಆಗಿರುವುವು.

4. ಪ್ರಾಂತ್ಯಗಳನ್ನು ಹಿಂದೂ ಬಹುಮತವಿರುವ ಪ್ರಾಂತ್ಯಗಳು ಮತ್ತು ಮುಸಲ್ಮಾನ ಬಹುಮತಗಳಿರುವ ಪ್ರಾಂತ್ಯಗಳಾಗಿ ವಿಂಗಡಿಸಲಾಗುವುದು. ಕೇಂದ್ರ ವಿಧಾನಸಭೆಯಲ್ಲಿ ಈ ಎರಡು ಗುಂಪಿನ ಪ್ರಾಂತ್ಯಗಳೂ ಸಮಸಂಖ್ಯೆಯ ಪ್ರಾತಿನಿಧ್ಯ ಹೊಂದಿರುವುವು.

5. ಸ್ವತಂತ್ರ ಭಾರತಕ್ಕೆ ರಾಜ್ಯಾಂಗವನ್ನು ರೂಪಿಸಲು ಪ್ರಾಂತೀಯ ವಿಧಾನಸಭೆಗಳ ಹಾಗೂ ಸಂಸ್ಥಾನಗಳ ಪ್ರತಿನಿಧಿಗಳನ್ನು ಒಳಗೊಂಡ

'ರಾಜ್ಯಾಂಗ ನಿರ್ಮಾಣ ಸಭೆ'ಯನ್ನು (Constituent Assembly) ರಚಿಸಬೇಕು.

ಬ್ರಿಟಿಷರ ಸಚಿವ ಸಂಪುಟದ ನಿಯೋಗದ ಮೇಲಿನ ಯೋಜನೆಯು ಕಾಂಗ್ರೆಸ್ಸಿಗಾಗಲಿ ಮುಸ್ಲಿಂಲೀಗಿಗಾಗಲೀ ತೃಪ್ತಿಯುಂಟುಮಾಡಲಿಲ್ಲ. ಕಾಂಗ್ರೆಸ್ಸು ಮುಸ್ಲಿಂಲೀಗು ಇವುಗಳಿಗೆ ಸಮಾನ ಪ್ರಾತಿನಿಧ್ಯದ ಅಂಶವು ಕಾಂಗ್ರೆಸ್ಸಿಗೆ ಒಪ್ಪಿಗೆಯಾಗಲಿಲ್ಲ. ಯೋಜನೆಯು ಪ್ರತ್ಯೇಕ ಪಾಕಿಸ್ತಾನ ನಿರ್ಮಾಣವನ್ನು ಒಳಗೊಂಡಿಲ್ಲದುದು ಜಿನ್ನಾ ಅವರ ಮುಸ್ಲಿಂಲೀಗಿಗೆ ಸಮಾಧಾನವಾಗಲಿಲ್ಲ. ಹಿಂದೂ ಬಹುಮತವಿರುವ ಪ್ರಾಂತ್ಯಗಳು ಮುಸ್ಲಿಂ ಬಹುಮತವಿರುವ ಪ್ರಾಂತ್ಯಗಳು ಎಂಬ ವಿಂಗಡಣೆಯು ವಿವಾದಕ್ಕೆ ಎಡೆ ಮಾಡಿಕೊಟ್ಟಿತು. ಅಲ್ಲದೆ ಈ ಯೋಜನೆ ಅಂತ್ಯ ತೀರ್ಮಾನಕ್ಕೆ ಕೇವಲ ಒಂದು ಕರಡು ಯೋಜನೆಯಾದುದರಿಂದ ಕಾಂಗ್ರೆಸ್ಸು ಮುಸ್ಲಿಂಲೀಗು ತನ್ನದೇ ಆದ ವ್ಯಾಖ್ಯಾನ ನೀಡಲು ಅವಕಾಶವಾಯಿತು. ಈ ಪರಿಸ್ಥಿತಿಯಲ್ಲಿ ಈ ಯೋಜನೆ ಪ್ರಕಟವಾದ ನಂತರದ 5–6 ತಿಂಗಳುಗಳಲ್ಲಿ ಎರಡು ಮಾರ್ಗ ಗಳಲ್ಲಿ ಘಟನೆಗಳು ಸಂಭವಿಸಿದವು. ವೈಸರಾಯ್ ಅವರ ಪ್ರಯತ್ನದಿಂದ ಒಂದು ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ರಚಿಸಿ ನಡೆಸುವುದು ಹಾಗೂ 'ರಾಜ್ಯಾಂಗ ನಿರ್ಮಾಣ ಸಭೆ'ಯನ್ನು ರಚಿಸುವುದು ಒಂದು ಮಾರ್ಗದ ಘಟನೆಗಳು. ಮುಸ್ಲಿಂಲೀಗು ತನ್ನ ಬೇಡಿಕೆಯನ್ನು ಬಲಪೂರ್ವಕವಾಗಿ ದೇಶವು ಒಪ್ಪುವಂತೆ ಮಾಡಲು ಎಬ್ಬಿಸಿದ ಹಿಂಸಾತ್ಮಕ ದಾಂಧಲೆ ಹಾಗೂ ಇದರ ಪ್ರತಿಕ್ರಿಯೆಯಾಗಿ ಸಂಭವಿಸಿದ ಘಟನೆಗಳು ಇನ್ನೊಂದು ಮಾರ್ಗದ ಆಗುಹೋಗುಗಳು. ಇವೆರಡನ್ನು ಸ್ಥೂಲವಾಗಿ ಈ ಕೆಳಗೆ ವಿವರಿಸಲಾಗು ವುದು.

ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ರಚನೆ

ಬ್ರಿಟಿಷ್ ಸಚಿವ ಸಂಪುಟ ನಿಯೋಗದ ಯೋಜನೆಯನ್ನು ಆಧರಿಸಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ರಚಿಸುವ ಉದ್ದೇಶದಿಂದ ವೈಸರಾಯ್ ವೇವಲ್ ಅವರು ಕಾಂಗ್ರೆಸ್ ಅಧ್ಯಕ್ಷ ಜವಾಹರ್‌ಲಾಲ್ ನೆಹರೂ ಅವರನ್ನೂ, ಮುಸ್ಲಿಂಲೀಗ್ ಅಧ್ಯಕ್ಷ ಜಿನ್ನಾ ಅವರನ್ನೂ ತಾತ್ಕಾಲಿಕ

ಸರ್ಕಾರ ರಚಿಸಲು ತಮಗೆ ಸಹಾಯ ಮಾಡಲು 1946ರ ಆಗಸ್ಟ್ 6 ರಂದು ಆಹ್ವಾನಿಸಿದರು. ಈ ಸರ್ಕಾರದಲ್ಲಿ 6 ಕಾಂಗ್ರೆಸ್ ಮಂತ್ರಿಗಳೂ, 5 ಮುಸ್ಲಿಂಲೀಗ್ ಮಂತ್ರಿಗಳೂ, 3 ಇತರ ಅಲ್ಪಸಂಖ್ಯಾತರ ಪ್ರತಿನಿಧಿಗಳೂ ಇರುವರೆಂದೂ ವೇವೆಲ್ ಅವರು ಇವರಿಗೆ ತಿಳಿಸಿದರು. ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯಗಳಿಗೆ ತಾವುಗಳು ಒಕ್ಕೂಟವನ್ನು ಬಿಟ್ಟು ಪ್ರತ್ಯೇಕವಾಗುವ ಹಕ್ಕನ್ನು ಕೊಡಲು ಬ್ರಿಟಿಷ್ ಸರ್ಕಾರವು ಮತ್ತು ಕಾಂಗ್ರೆಸ್ಸು ಒಪ್ಪಿದರೆ ಮಾತ್ರ ತಾತ್ಕಾಲಿಕ ಸರ್ಕಾರಕ್ಕೆ ತಾವು ಸೇರುವುದಾಗಿ ಜಿನ್ನಾ ಅವರು ಮುಸ್ಲಿಂಲೀಗಿನ ಪರವಾಗಿ ಹೇಳಿದರು. ಇದಕ್ಕೆ ಕಾಂಗ್ರೆಸ್ಸು ಮತ್ತು ಬ್ರಿಟಿಷರು ಸಿದ್ಧವಿರಲಿಲ್ಲ. ಆದುದರಿಂದ ಮುಸ್ಲಿಂಲೀಗು ತಾತ್ಕಾಲಿಕ ಸರ್ಕಾರವನ್ನು ನಿರಾಕರಿಸಿತಲ್ಲದೆ ರಾಜ್ಯಾಂಗ ರಚನಾ ಸಭೆಗೂ ತಾನು ಸೇರುವುದಿಲ್ಲವೆಂದಿತು.

ಈ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಸುಮ್ಮನೆ ಕುಳಿತಿರಲಾಗುತ್ತಿರಲಿಲ್ಲ. ವೈಸರಾಯ್ ವೇವೆಲ್ ಅವರು ಕಾಂಗ್ರೆಸ್ ಅಧ್ಯಕ್ಷ ಜವಾಹರ್ ಲಾಲ್ ನೆಹರೂ ಅವರನ್ನು ತಾತ್ಕಾಲಿಕ ಸರ್ಕಾರ ರಚಿಸಲು ಆಹ್ವಾನಿಸಿದರು. ಕಾಂಗ್ರೆಸ್ಸು ಒಬ್ಬ ಮುಸಲ್ಮಾನನನ್ನು ಸಚಿವ ಸಂಪುಟಕ್ಕೆ ಸೇರಿಸುವುದೆಂಬ ಕೇಳಿಕೆಗೆ ವೈಸರಾಯ್ ಅವರು ಒಪ್ಪಿದರು. ಇದರ ಪ್ರಕಾರ ಮೂರು ಮುಸ್ಲಿಮರನ್ನೂ ಸೇರಿಸಿಕೊಂಡು ನೆಹರೂ ಅವರು 15 ಸದಸ್ಯರ ಸಚಿವ ಸಂಪುಟವನ್ನು 1946ರ ಸೆಪ್ಟೆಂಬರ್ 7 ರಂದು ರಚಿಸಿದರು. ಅಲ್ಲದೆ, ಮುಸ್ಲಿಂಲೀಗಿನ ಪ್ರತಿನಿಧಿಗಳನ್ನು ಸೇರಿಸುವಂತೆ ಜಿನ್ನಾ ಅವರನ್ನು ಒಪ್ಪಿಸುವ ಪ್ರಯತ್ನವನ್ನೂ ವೈಸರಾಯ್ ಮತ್ತು ನೆಹರೂ ಅವರು ಮುಂದುವರಿಸಿದರು.

ಜಿನ್ನಾ ಅವರ ಪ್ರತಿಕ್ರಿಯೆ

ಮುಸ್ಲಿಂ ಲೀಗನ್ನು ಬಿಟ್ಟು ವೈಸರಾಯ್ ಅವರು ತಾತ್ಕಾಲಿಕ ಸರ್ಕಾರ ರಚಿಸುವುದೇ ಇಲ್ಲ ಎಂದು ನಂಬಿದ್ದ ಜಿನ್ನಾ ಅವರಿಗೆ ನೆಹರೂ ಅವರು ಸರ್ಕಾರ ರಚಿಸಿದುದು ಆತಂಕಕ್ಕೆ ಕಾರಣವಾಯಿತು. ನೆಹರೂ ಅವರ ನಾಯಕತ್ವದ ತಾತ್ಕಾಲಿಕ ಸರ್ಕಾರ ಅಧಿಕಾರ ವಹಿಸುವ ದಿನ ಮುಸ್ಲಿಮರೆಲ್ಲಾ ಕಪ್ಪು ಬಾವುಟ ಹಾರಿಸುವಂತೆ ಅವರು ಮುಸ್ಲಿಂ ಜನತೆಗೆ ಕರೆ ಕೊಟ್ಟರು. ಕಾಂಗ್ರೆಸ್ಸಿನ ಸದಸ್ಯರಾಗಿ ಸಚಿವ ಪದವಿಗೆ ಮುಸ್ಲಿಮರು

ಯಾರೂ ಬರಕೂಡದೆಂದು ಎಚ್ಚರಿಕೆ ನೀಡುವ ಸಲುವಾಗಿ ಕಾಂಗ್ರೆಸ್ಸು ಸೂಚಿಸಿದ್ದ ಷಫಾತ್ ಅಹ್ಮದ್ ಖಾನ್ ಎಂಬವರನ್ನು ಕೊಲೆ ಮಾಡಲಾಯಿತು.[1] ನೆಹರೂ ಸಂಪುಟ ಅಧಿಕಾರದಲ್ಲಿ ಮುಂದುವರಿದರೆ ತಮ್ಮ ಭವಿಷ್ಯ ಯೋಜನೆಗಳಿಗೆಲ್ಲಾ ಹಾನಿಯಾಗುವುದೆಂದು ಭಾವಿಸಿ ಜಿನ್ನಾ ಅವರು ವೈಸರಾಯ್ ಅವರಿಗೆ 1946ರ ಅಕ್ಟೋಬರ್ 13ರಂದು ಪತ್ರವನ್ನು ಬರೆದು ಕೇಂದ್ರ ಸರ್ಕಾರದ ಆಡಳಿತವನ್ನು ಕಾಂಗ್ರೆಸ್ಸಿನ ಕೈಗೆ, ಭಾರತದ ಮುಸ್ಲಿಂ ಜನಾಂಗದವರ ಮೇಲೆ ವಿಶ್ವಾಸವಿಲ್ಲದವರ ಮೇಲೆ ಬಿಡುವುದು ತುಂಬಾ ಅನಪೇಕ್ಷಣೀಯವಾಗಿರುವುದರಿಂದಲೂ, ಹಾಗೂ ಇತರ ಕೆಲವು ಕಾರಣಗಳಿಂದಲೂ ತಾವು ಮುಸ್ಲಿಂ ಲೀಗಿನ ಪರವಾಗಿ ತಾತ್ಕಾಲಿಕ ಸರ್ಕಾರದ ಸದಸ್ಯತ್ವಕ್ಕೆ ಐದು ಜನರನ್ನು ನಾಮಕರಣ ಮಾಡುವುದಾಗಿ ತಿಳಿಸಿದರು.[2] ಹೀಗೆ ಮುಸ್ಲಿಂ ಲೀಗು ಕಾಂಗ್ರೆಸ್ಸಿನ ಜೊತೆ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು 1946ರ ಅಕ್ಟೋಬರ್ 24ರಂದು ಸೇರಿತು. ಆದರೆ, ಅದು ಸದ್ಭಾವನೆಯಿಂದ ಸೇರಿದುದಲ್ಲ ಎಂಬುದು ಮುಸ್ಲಿಂಲೀಗ್ ಮುಖಂಡರ ಹೇಳಿಕೆಯಿಂದಲೂ, ಸರ್ಕಾರ ಸೇರಿದವರ ವರ್ತನೆಯಿಂದಲೂ ಸುಸ್ಪಷ್ಟವಾಯಿತು. ಮುಸ್ಲಿಂಲೀಗು ನಡೆಸುತ್ತಿದ್ದ ಹಿಂಸಾತ್ಮಕ ಚಳುವಳಿಯನ್ನು (Direct Action) ಹಿಂತೆಗೆದುಕೊಳ್ಳಲು ಅದು ಒಪ್ಪಲಿಲ್ಲ. ಈ ಸರ್ಕಾರಕ್ಕೆ ಸೇರಿರುವುದು ಅಲ್ಲಿನ ಸ್ಥಾನಬಲವನ್ನೂ ಪಾಕಿಸ್ತಾನ ಗಳಿಸಲು ಉಪಯೋಗಿಸುವುದಕ್ಕಾಗಿಯೇ ಹೊರತು ಬೇರೆ ಅಲ್ಲ ಎಂದು ಮುಸ್ಲಿಂಲೀಗಿನ ಪ್ರತಿನಿಧಿಯಾಗಿ ಸಚಿವ ಸಂಪುಟ ಸೇರಿದ ಘಸ್ನಫರ್ ಅಲಿಖಾನ್ ಎಂಬವರು ಮುಸ್ಲಿಮರಿಗೆ ಆಶ್ವಾಸನೆ ನೀಡಿದರು.[3] ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗುಗಳೆರಡೂ ಸೇರಿ ಹೊಂದಾಣಿಕೆಯಿಂದ ಸರ್ಕಾರವನ್ನು ನಡೆಸಲಾಗುವುದಿಲ್ಲ ಎಂಬುದನ್ನು ಬ್ರಿಟಿಷ್ ಸರ್ಕಾರಕ್ಕೆ ತೋರಿಸಿಕೊಡುವುದೂ ಮುಸ್ಲಿಂಲೀಗಿನ ಇನ್ನೊಂದು ಉದ್ದೇಶವಾಗಿದ್ದಿತೆಂಬುದನ್ನು ತಾತ್ಕಾಲಿಕ ಸರ್ಕಾರವು ಕಾರ್ಯ

---

1. *Vide*. Seshadri, H. V. *op. cit*, P 177
2. Manserg N. and Moon, P(Eds) *The Transfer of Power*, Vol. IX, P. 709 Quoted in, *Ibid*. P. 177
3. Nagarkar, V.V., *Genesis*, P 450, Quoted in Seshadri H. V., *op. cit.*, P 178.

ನಿರ್ವಹಿಸಿದುದರ ಅನುಭವಗಳಿಂದ ಗೊತ್ತಾಗುವುದು. ಎಲ್ಲ ಮುಸ್ಲಿಂಲೀಗಿನ ಮಂತ್ರಿಗಳೂ ಸರ್ಕಾರದ ಕಾರ್ಯಸಾಗಣೆಗೆ ಅಡ್ಡಿಯಾಗುತ್ತಾ ಬಂದರು. ಲಿಯಾಖತ್ ಅಲಿಖಾನ್ ಅವರಿಗೆ ಅತ್ಯಂತ ಮುಖ್ಯವಾದ ಹಣಕಾಸಿನ ಶಾಖೆಯ ನಿರ್ವಹಣೆಯನ್ನು ನೆಹರೂ ಅವರು ವಹಿಸಿದ್ದರು. ಇದನ್ನು ಖಾನ್ ಅವರು ದುರುಪಯೋಗಪಡಿಸಿಕೊಂಡರು. ಪ್ರತಿಯೊಂದು ಇಲಾಖೆಯ ಪ್ರತಿಯೊಂದು ಸಲಹೆಯೂ ಈ ಹಣಕಾಸಿನ ಶಾಖೆಯ ಪರಿಶೀಲನೆಗೆ ಒಳಪಟ್ಟಿದ್ದಿತು. ಮೌಲಾನಾ ಅಜಾದ್ ಅವರು ಬರೆದಿರುವಂತೆ "ಯಾವ ಶಾಖೆಯಲ್ಲಿಯೂ ಲಿಯಾಕತ್ ಅಲಿಖಾನ್ ಅವರ ಶಾಖೆಯ ಮಂಜೂರಾತಿ ಇಲ್ಲದೆ ಒಬ್ಬ ಚಪ್ರಾಸಿಯನ್ನೂ ನೇಮಕಮಾಡಲಾಗುತ್ತಿರ ಲಿಲ್ಲ."[1] ಲಿಯಾಕತ್ ಆಲಿಖಾನ್ ಅವರು ಬೇಕಾಗಿಯೇ ಇತರ ಸಚಿವ ಶಾಖೆಗಳಿಗೆ ಕಿರುಕುಳ ಕೊಡುತ್ತಿದ್ದರು. ಅವರು ಸಿದ್ಧಪಡಿಸಿದ ವಾರ್ಷಿಕ ಆಯವ್ಯಯ ಪಟ್ಟಿ (Budget) ಯು ಒಳಗೊಂಡ ತೆರಿಗೆಗಳು ಬಹುಮಂದಿ ಹಿಂದೂಗಳು ಹೊಂದಿದ್ದ ಕೈಗಾರಿಕೆಗಳು ಹಾಗೂ ವಾಣಿಜ್ಯವ್ಯವಹಾರಗಳಿಗೆ ತೊಂದರೆ ಕೊಡುವಂತಹವಾಗಿದ್ದವು. ಒಟ್ಟಿನಲ್ಲಿ ಒಂದೆರಡು ತಿಂಗಳುಗಳ ಅನುಭವದಿಂದಲೇ ಕಾಂಗ್ರೆಸ್ಸಿಗೂ, ಬ್ರಿಟಿಷ್ ಸರ್ಕಾರಕ್ಕೂ, ಮುಸ್ಲಿಂ ಲೀಗನ್ನು ಕಟ್ಟಿಕೊಂಡು ಸರ್ಕಾರ ಕಾರ್ಯ ನಿರ್ವಹಿಸುವುದು ಸಾಧ್ಯವೇ ಇಲ್ಲ ಎಂಬುದು ಮನವರಿಕೆಯಾಯಿತು. ಅಲ್ಲದೆ, 1946ರ ಆಗಸ್ಟ್ 16 ರಂದು ಮುಸ್ಲಿಂಲೀಗು ಆರಂಭಿಸಿದ 'ನೇರಕ್ರಿಯೆ' (Direct Action) ಚಳು ವಳಿಯನ್ನು ಸರ್ಕಾರಕ್ಕೆ ಸೇರಿದ್ದ ಲೀಗಿನ ಸಚಿವರ ಬೆಂಬಲದಿಂದಲೇ ಹೆಚ್ಚು ಬಿರುಸಾಗಿ ನಡೆಸಲಾಯಿತು. ಈ ನೇರಕ್ರಿಯೆಯ ಸ್ವರೂಪ ಹಾಗೂ ಪರಿಣಾಮಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ಕೊಡಲಾಗುವುದು.

ಮುಸ್ಲಿಂಲೀಗಿನ 'ನೇರಕ್ರಿಯೆ' (Direct Action) ಚಳುವಳಿ (ಆಗಸ್ಟ್ 1946)

ಬ್ರಿಟಿಷ್ ಸಚಿವ ಸಂಪುಟದ ನಿಯೋಗವು ರಚಿಸಿದ ಯೋಜನೆಯಲ್ಲಿ ಮುಸ್ಲಿಂ ಬಹುಮತವಿರುವ ಪ್ರಾಂತಗಳನ್ನು ಒಂದು ಗುಂಪಾಗಿ ಪ್ರತ್ಯೇಕಿಸಿ

1. Abdul Kalam Azad, *op. cit.*, P 167.

ದುದರಲ್ಲಿ ಪಾಕಿಸ್ತಾನದ ಭಾವನೆ ಅಡಗಿದೆ ಎಂದೂ, ರಾಜ್ಯಾಂಗ ರೂಪಿಸುವ ಸಭೆಯಲ್ಲಿ ವಾಸ್ತವವಾಗಿ ಇವುಗಳನ್ನು ಪ್ರತ್ಯೇಕಿಸಿ, ಪಾಕಿಸ್ತಾನ ರಾಷ್ಟ್ರವಾಗಿ ನಿರ್ಮಿಸುವ ಅವಕಾಶವಿದೆಯೆಂದೂ ಜಿನ್ನಾ ಅವರು ಮೊದಲು ಊಹಿಸಿದ್ದರು. ಆದರೆ ನೆಹರೂ ಅವರು ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ನೀಡಿದ ಹೇಳಿಕೆಯಲ್ಲಿ ದೇಶದ ವಿಭಜನೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಬ್ರಿಟಿಷ್ ಸಚಿವ ಸಂಪುಟದ ಯೋಜನೆ ಅಂತಿಮವಾದುದಲ್ಲ, ಅದನ್ನು ಅವಶ್ಯಕವಾಗುವಂತೆ ಬದಲಾಯಿಸಲು ಅವಕಾಶವಿದೆ ಎಂದು ಹೇಳಿದುದು ಮುಸ್ಲಿಂಲೀಗ್ ವಲಯಗಳಲ್ಲಿ ಆತಂಕ ಉಂಟುಮಾಡಿತು ಮತ್ತು ಜಿನ್ನಾ ಅವರು ಇದಕ್ಕೆ ಬ್ರಿಟಿಷ್ ಸಚಿವ ಸಂಪುಟದ ನಿಯೋಗದ ಸದಸ್ಯರ ಬಳಿಗೆ ತಮ್ಮ ಪ್ರತಿಭಟನೆಯನ್ನು ಸಲ್ಲಿಸಿದರು. ನಿಯೋಗದ ಸದಸ್ಯರು ನೀಡಿದ ವಿವರಣೆಯಿಂದ ಜಿನ್ನಾ ಅವರಿಗೆ ತೃಪ್ತಿಯುಂಟಾಗಲಿಲ್ಲ. ಅಖಿಲ ಭಾರತ ಮುಸ್ಲಿಂಲೀಗಿನ ಸಭೆಯು 1946ರ ಜುಲೈ 27 ರಂದು ಭಾರತದ ಮುಸಲ್ಮಾನರು ಪೂರ್ಣ ಸ್ವತಂತ್ರ ಪಾಕಿಸ್ತಾನವನ್ನು ತಕ್ಷಣವೇ ಸ್ಥಾಪನೆ ಮಾಡಲು 'ನೇರಕ್ರಿಯೆ' ಆರಂಭಿಸುವ ಕಾಲ ಈಗ ಒದಗಿದೆ ಎಂದು ಘೋಷಿಸಿ, 1946ರ ಆಗಸ್ಟ್ 16 ರಂದು 'ನೇರಕ್ರಿಯೆಯ ದಿನ' (Direct Action Day) ವನ್ನಾಗಿ ಆಚರಿಸಬೇಕೆಂದು ಭಾರತ ಮುಸ್ಲಿಂ ಜನತೆಗೆ ಅದು ಕರೆ ನೀಡಿತು. ಆ ದಿವಸ ಮುಸಲ್ಮಾನರು ಬ್ರಿಟಿಷರು ನೀಡಿದ್ದ ಗೌರವಪದವಿಗಳನ್ನೂ ಹಾಗೂ ಬಿರುದುಗಳನ್ನೂ ತ್ಯಜಿಸುವುದು, ಪ್ರತಿಭಟನಾ ಸಭೆಗಳನ್ನೂ, ಮೆರವಣಿಗೆಗಳನ್ನೂ ಏರ್ಪಡಿಸುವುದು, ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸುವುದು ಹಿಂದೂ 'ಕಾಫಿರರ' (Kafirs) ಮೇಲೆ 'ಜೆಹದ್' (Jehad) ಕ್ರಮಗಳನ್ನು ಕೈಗೊಳ್ಳುವುದು – ಇತ್ಯಾದಿಗಳೆಲ್ಲವೂ ನೇರಕ್ರಿಯೆಯ ಕಾರ್ಯಕ್ರಮಗಳಾಗಿದ್ದವು. ಬಂಗಾಳ ಮತ್ತು ಸಿಂಧ್‌ಗಳಲ್ಲಿ ಇದ್ದ ಮುಸ್ಲಿಂಲೀಗಿನ ಸಚಿವ ಸಂಪುಟಗಳು ಆಗಸ್ಟ್ 16 ರಂದು ರಜೆ ಘೋಷಿಸಿದವು. ಬ್ರಿಟಿಷರು ಕೇಂದ್ರದ ಅಧಿಕಾರವನ್ನು ಕಾಂಗ್ರೆಸ್ಸಿಗೆ ವಹಿಸಿಕೊಟ್ಟರೆ ತಾವು ಬಂಗಾಳವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸುವುದಾಗಿ ಅಲ್ಲಿನ ಮುಖ್ಯಮಂತ್ರಿ ಸುಹ್ರವಾರ್ದಿಯವರು ಬ್ರಿಟಿಷ್ ಸರ್ಕಾರಕ್ಕೆ ಬೆದರಿಕೆ ಹಾಕಿದರು. ಅಲ್ಲದೆ ಅವರು ಮುಸ್ಲಿಮರನ್ನು ಹಿಂಸಾಮಾರ್ಗಕ್ಕೆ ಪ್ರಚೋದಿಸಿದರು. ಉದಾತ್ತ ಧ್ಯೇಯಸಾಧನೆಗಾಗಿ ರಕ್ತಪಾತ ಮಾಡುವುದಾಗಲಿ, ಗೊಂದಲ

ಎಬ್ಬಿಸುವುದಾಗಲೀ ಕೆಟ್ಟದೇನಲ್ಲ; ಈಗ ಮುಸ್ಲಿಮರಿಗೆ ಪಾಕಿಸ್ತಾನ ಬಿಟ್ಟರೆ ಬೇರೆ ಯಾವುದೂ ಹೆಚ್ಚು ಉದಾತ್ತವಾದ, ಪ್ರಿಯವಾದ ಧ್ಯೇಯವಿಲ್ಲ ಎಂದು ಸುಹ್ರವಾರ್ದಿಯವರು ಪತ್ರಿಕಾ ಹೇಳಿಕೆಯೊಂದರಲ್ಲಿ ಪ್ರಕಟಿಸಿದರು.[1] "ಬಲದಿಂದ ನಾವು ಪಾಕಿಸ್ತಾನ ಪಡೆಯುವೆವು : ಭಾರತವು ವಿಭಜಿಸಲ್ಪಡಲೇ ಬೇಕು" *Larke Leinge Pakistan : Bunt Ke Rahega Hindustan*) ಎಂಬ ಸಾಮೂಹಿಕ ಕೂಗನ್ನು ಅವರು ಹಾಗೂ ಅವರ ಮುಸ್ಲಿಂ ಅನುಯಾಯಿಗಳು ಮುಸ್ಲಿಂ ಜನರಿಗೆ ನೀಡಿ ಅವರನ್ನು ದೇಶದಲ್ಲಿ ದಾಂಧಲೆ ಎಬ್ಬಿಸಲು ಪ್ರೇರೇಪಿಸಿದರು.

ಜವಾಹರಲಾಲ್ ನೆಹರೂ ಮತ್ತು ಅನೇಕ ಇತರ ರಾಷ್ಟ್ರೀಯ ನಾಯಕರು "ನೇರಕ್ರಿಯೆ" ಆಚರಿಸುವುದನ್ನು ಬಿಡುವಂತೆ ಜಿನ್ನಾ ಅವರ ಮನವೊಲಿಸಲು ಪ್ರಯತ್ನಿಸಿದರು. ಆದರೆ ಜಿನ್ನಾ ಅವರು ಯಾವುದಕ್ಕೂ ಒಪ್ಪಲಿಲ್ಲ. 1946 ರ ಆಗಸ್ಟ್ 16 ರಂದು ಅನೇಕ ಮುಖ್ಯ ನಗರಗಳಲ್ಲಿ ಮುಸಲ್ಮಾನರು ಮುಸ್ಲಿಂಲೀಗಿನ ಆದೇಶದಂತೆ ಅನೇಕ ಕಾರ್ಯಗಳನ್ನು ನಡೆಸಿದರು. ಇವುಗಳ ಸಂಕ್ಷಿಪ್ತ ವಿವರಣೆಯನ್ನು ಕೆಳಗೆ ಕೊಡಲಾಗಿದೆ.

ಕಲ್ಕತ್ತಾದ ಹತ್ಯಾಕಾಂಡ

ಅಂದು ನಡೆದ ಹಿಂಸಾಕೃತ್ಯಗಳ ಪರಿಣಾಮವಾಗಿ ಮುಖ್ಯವಾಗಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಸಾವಿರಾರು ಹಿಂದೂ ಹಾಗೂ ಮುಸಲ್ಮಾನ ಕುಟುಂಬಗಳು ಎಲ್ಲಾ ರೀತಿಯ ಹಿಂಸೆಗಳನ್ನೂ ಅನುಭವಿಸಿದವು. ಆಗಸ್ಟ್ 16 ರಂದು ಕಲ್ಕತ್ತದಲ್ಲಿ ಬೆಳಗಿನ ಜಾವ ಮುಸಲ್ಮಾನರ ಗುಂಪುಗಳು ಗೂಂಡಾಗಳೊಡನೆ ಆಯುಧಪಾಣಿಗಳಾಗಿ ಹಿಂದೂಗಳನ್ನು ಹುಚ್ಚಾಪಟ್ಟೆಯಾಗಿ ಕೊಲ್ಲಲಾರಂಭಿಸಿದರು. ದೊಡ್ಡವರು, ಚಿಕ್ಕಮಕ್ಕಳು, ಗಂಡಸರು, ಹೆಂಗಸರು, ಎಲ್ಲರೂ ಈ ಹುಚ್ಚು ಕೊಲೆಗಡುಕತನಕ್ಕೆ ಬಲಿಯಾದರು. ಹಿಂದುಗಳ ಮನೆಗಳಿಗೆ ಬೆಂಕಿ ಹಚ್ಚಿದರು. ಹಿಂದೂಗಳ ಆಸ್ತಿ

---

1. Suhrawardy's Statement in 'The Statesman' of Calcutta of 5th August 1946, Quoted in Leonard Mosley. *The Last Days of the British Raj*, London, 1961, n 4, 32.

ಪಾಸ್ತಿಗಳನ್ನೂ, ಅಂಗಡಿಗಳನ್ನೂ ಲೂಟಿ ಮಾಡಿದರು. ಹಿಂದೂಗಳನ್ನು ಚೂರಿ ಹಾಕಿ ಕೊಲ್ಲುವುದು, ಬಲಾತ್ಕಾರವಾಗಿ ಹಿಂದೂಗಳನ್ನು ಮತಾಂತರಗೊಳಿಸಿ ಅವರನ್ನು ಮುಸಲ್ಮಾನರನ್ನಾಗಿ ಮಾಡುವುದು, ಹೆಂಗಸರನ್ನು ಹೊತ್ತುಕೊಂಡು ಹೋಗಿ ಅವರ ಮೇಲೆ ಅತ್ಯಾಚಾರ ಮಾಡುವುದು ಇವೆಲ್ಲವೂ ಮುಸ್ಲಿಂ ಹಿಂಸಾ ಚಳುವಳಿಯ ಕೃತ್ಯಗಳಾಗಿದ್ದವು. ಈ ಕೃತ್ಯಗಳೆಲ್ಲವೂ ಕಲ್ಕತ್ತಾದಲ್ಲಿ ಮೂರು ದಿವಸಗಳು ತಡೆಬಿಡದೆ ನಡೆದವು. ಪೋಲಿಸರು ಮುಸ್ಲಿಮರ ಕಡೆಯವರಾಗಿದ್ದರು. ಪೋಲೀಸು ಠಾಣೆಗಳಿಗೆಲ್ಲಾ ಮುಸಲ್ಮಾನರನ್ನು ಮುಖ್ಯ ಅಧಿಕಾರಿಗಳಾಗಿ ಸುಹ್ರವಾರ್ದಿ ಸರ್ಕಾರ ವ್ಯವಸ್ಥೆ ಮಾಡಿದ್ದಿತು. ಹೀಗೆ ಸರ್ಕಾರದ ಬೆಂಬಲದಿಂದ ಕಲ್ಕತ್ತಾ ನಗರದ ಮುಸಲ್ಮಾನರು ಹಿಂದುಗಳ ಮೇಲೆ ಅತ್ಯಂತ ಘೋರವಾದ ಕೊಲೆಪಾತಕ ಕೃತ್ಯಗಳನ್ನೂ ಹಿಂಸಾಕೃತ್ಯಗಳನ್ನೂ ನಡೆಸಿದರು. ಇದಕ್ಕೆ ಪ್ರತಿಯಾಗಿ ಹಿಂದೂಗಳೂ ಮುಸ್ಲಿಮರ ಮೇಲೆ ಹಿಂಸಾಚಾರ ನಡೆಸಲಾರಂಭಿಸಿದಾಗ ಶಾಂತಿ ಸ್ಥಾಪನೆಗೆ ಸಹಾಯ ಮಾಡಲು ಸುಹ್ರವಾರ್ದಿಯವರು ಮಿಲಿಟರಿಯನ್ನು ಕರೆಸಿಕೊಂಡರು.

ಕಲ್ಕತ್ತಾ ನಗರದಲ್ಲಿ ನಡೆದಂತಹ ಹಿಂಸಾಕೃತ್ಯಗಳು ನವಖೋಲಿ, ತಿಪ್ಪೆರಾಹ್ ಇತ್ಯಾದಿ ಬಂಗಾಳ ಪ್ರಾಂತ್ಯದ ಇತರ ಮುಸ್ಲಿಂ ಬಹುಸಂಖ್ಯಾತ ನಗರಗಳಲ್ಲಿಯೂ ನಡೆದವು. ಇದರಿಂದ ಅನೇಕ ಹಿಂದೂ ಕುಟುಂಬಗಳು ಬಂಗಾಳವನ್ನು ಬಿಟ್ಟು ಪಕ್ಕದ ಬಿಹಾರಕ್ಕೆ ಹೋದವು. ಈ ನಗರಗಳಲ್ಲಿ ನಡೆದ ಕ್ರೂರಕೃತ್ಯಗಳ ಪ್ರತಿಕ್ರಿಯೆ ಮೊದಲು ಬಿಹಾರದಲ್ಲಿ ಆರಂಭವಾಯಿತು. ಬಂಗಾಳದಲ್ಲಿ ಹಿಂದೂಗಳು ಅನುಭವಿಸಿದ ಹಿಂಸೆಗಳನ್ನು ಬಿಹಾರದ ಅನೇಕ ನಗರಗಳ ಮುಸಲ್ಮಾನರು ಅನುಭವಿಸಬೇಕಾಯಿತು. ಆದರೆ, ಬಿಹಾರ ಸರ್ಕಾರವು ಬಂಗಾಳ ಸರ್ಕಾರ ಮಾಡಿದಂತೆ ಹಿಂಸಾಕೃತ್ಯಗಳಿಗೆ ಉತ್ತೇಜನ ನೀಡಲಿಲ್ಲ. ಸರ್ಕಾರದ ಅಧಿಕಾರಿಗಳೂ, ಕಾಂಗ್ರೆಸ್ಸಿನ ಮುಖಂಡರೂ ಹಿಂದೂಗಳನ್ನು ಸಮಾಧಾನಗೊಳಿಸಿ ಮುಸ್ಲಿಮರ ಮೇಲೆ ನಡೆಯಲಾರಂಭಿಸಿದ್ದ ಹಿಂಸಾಕೃತ್ಯಗಳನ್ನು ತಡೆಗಟ್ಟಿ ಶಾಂತಿಸ್ಥಾಪನೆಗೆ ಪ್ರಯತ್ನಿಸಿದರು. ಆದರೂ, ಮುಸ್ಲಿಂಲೀಗು ಪ್ರಾರಂಭಿಸಿದ್ದ ಗಲಭೆಯು ದೇಶದ ಇತರ ಎಲ್ಲಾ ಭಾಗಗಳಿಗೂ ಹರಡಿತು. ಮುಸಲ್ಮಾನರು ಮತ್ತು

ಹಿಂದುಗಳು 'ಮುಯ್ಯಿಗೆ ಮುಯ್ಯಿ' ಅನ್ನುವ ರೀತಿಯಲ್ಲಿ ಪರಸ್ಪರವಾಗಿ ವರ್ತಿಸತೊಡಗಿದರು. ಇದರ ಪರಿಣಾಮವಾಗಿ ದೇಶದಲ್ಲಿ ಭೀಕರ ಪರಿಸ್ಥಿತಿ ಯುಂಟಾಯಿತು. ಬ್ರಿಟಿಷರಿಂದ ಸ್ವಾತಂತ್ರ್ಯಗಳಿಸಲು ಮಹಾತ್ಮಾ ಗಾಂಧಿಜಿಯವರ ಸರ್ವೋಚ್ಚ ನಾಯಕತ್ವದಲ್ಲಿ ಕಾಂಗ್ರೆಸ್ಸು ಅಹಿಂಸಾತ್ಮಕ ವಾಗಿ ಚಳುವಳಿ ನಡೆಸಿದರೆ, ಭಾರತದ ವಿಭಜನೆಗಾಗಿ ಜಿನ್ನಾ ಅವರ ನಾಯಕತ್ವದಲ್ಲಿ ಮುಸ್ಲಿಂಲೀಗು ಈ ರೀತಿಯ ಭೀಕರ ಹಿಂಸಾತ್ಮಕ ಚಳುವಳಿ ಯನ್ನು ನಡೆಸಿತು.

ಮುಸ್ಲಿಂಲೀಗಿನ ಹಿಂಸಾತ್ಮಕ ಚಳುವಳಿಯು ದೇಶದಲ್ಲಿ ಹಿಂದೆ ಎಂದೂ ಇಲ್ಲದ ಹೊಸ ಪರಿಸ್ಥಿತಿಯನ್ನು ಉಂಟುಮಾಡಿತು. ಇದರಿಂದ ಹಿಂದೂ ಮುಸ್ಲಿಂ ಪರಸ್ಪರ ವೈಷಮ್ಯ ಬೆಳೆಯುವಂತಾಯಿತು. ಇದು ದುರದೃಷ್ಟದ ಬೆಳವಣಿಗೆಯಾಗಿದೆ. ಮಹಾತ್ಮಾ ಗಾಂಧಿಯವರೂ ಜವಾಹರಲಾಲ್ ಅವರೂ, ಶಾಮಪ್ರಸಾದ ಮುಖರ್ಜಿಯವರೂ ಇನ್ನೂ ಅನೇಕ ನಾಯಕರು ಗಲಭೆ ನಡೆದ ಪೂರ್ವ ಬಂಗಾಳದ ಹಾಗೂ ಬಿಹಾರದ ಸ್ಥಳಗಳಿಗೆ ಭೇಟಿ ಇತ್ತು ಮತೀಯ ಸೌಹಾರ್ದತೆಯನ್ನು ಪುನರ್‌ಸ್ಥಾಪಿ ಸುವ ಪ್ರಯತ್ನ ಮಾಡಿದರು. ಆದರೆ ಮುಸ್ಲಿಂಲೀಗಿನ ನಿರೀಕ್ಷೆಯಂತೆ ದೇಶಾದ್ಯಂತ ಮುಸಲ್ಮಾನರಲ್ಲಿ ಪಾಕಿಸ್ತಾನವನ್ನು ಆದಷ್ಟು ಶೀಘ್ರವಾಗಿ ಪಡೆಯಬೇಕೆಂಬ ಮನೋಭಾವ ಬೇರೂರಿತು. 1946 ರ ಕೊನೆಯ ಮೂರು ತಿಂಗಳುಗಳಲ್ಲಿ ಮುಸ್ಲಿಂಲೀಗು ತನ್ನ ಪಾಕಿಸ್ತಾನ ಚಳುವಳಿಯನ್ನು ತೀವ್ರಗೊಳಿಸಿತು.

ಹಿಂದೂ – ಮುಸ್ಲಿಂ ಗಲಭೆಗಳಿಗೆ ಬ್ರಿಟಿಷರ ಪ್ರತಿಕ್ರಿಯೆ

ಮುಸ್ಲಿಂಲೀಗು ಆರಂಭಿಸಿದ ಹಿಂಸಾತ್ಮಕ ಚಳುವಳಿಯು ಬ್ರಿಟಿಷರ ಮನಸ್ಸನ್ನೂ ಕದಲಿಸಿತು. ದೇಶದಲ್ಲಿ ನಡೆಯುತ್ತಿದ್ದ ಹಿಂಸಾತ್ಮಕ ಘಟನೆ ಗಳ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿ ವೈಸರಾಯ್ ವೇವೆಲ್ ಅವರು ಬ್ರಿಟಿಷ್ ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿದರು. ಬ್ರಿಟಿಷ್ ಸಚಿವ ಸಂಪುಟದ ಯೋಜನೆಯ ಪ್ರಕಾರ ರಚಿಸಲಾಗಿದ್ದ ರಾಜ್ಯಾಂಗ ನಿರ್ಮಾಣ ಸಭೆ (Constituent Assembly) ಯನ್ನು 1946 ರ ನವೆಂಬರ್ 14 ರಂದು ಮುಸ್ಲಿಂಲೀಗು ಬಹಿಷ್ಕರಿಸುವ ನಿರ್ಣಯವನ್ನು ಕೈಗೊಂಡಿತು.

ಪ್ರತ್ಯೇಕ ಪಾಕಿಸ್ತಾನ ನಿರ್ಮಾಣವೊಂದೇ ಭಾರತದ ರಾಜಕೀಯ ಸಮಸ್ಯೆಗೆ ಪರಿಹಾರವಾಗಿದೆ ಎಂದು ಜಿನ್ನಾ ಅವರು ಪುನರುಚ್ಚರಿಸಿದರು. ಈ ಪರಿಸ್ಥಿತಿಯಲ್ಲಿ ಬ್ರಿಟಿಷ್ ಪ್ರಧಾನಿ ಅಟ್ಲೀ ಅವರು ಭಾರತಕ್ಕೆ ಅಧಿಕಾರವನ್ನು ವರ್ಗಾಯಿಸಲು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿ 1946 ರ ನವೆಂಬರ್ 30 ರಂದು ಜವಾಹರಲಾಲ್ ನೆಹರೂ, ಜಿನ್ನಾ, ಲಿಯಾಕತ್ ಅಲಿಖಾನ್ ಮತ್ತು ಬಲದೇವಸಿಂಗ್ ಅವರನ್ನು ಸಮ್ಮೇಳನ ಒಂದರಲ್ಲಿ ಸೇರಲು ಆಹ್ವಾನಿಸಿದರು. ಇವರೆಲ್ಲರೂ ವೈಸರಾಯ್ ವೇವೆಲ್ ಅವರೊಡನೆ ಲಂಡನ್ನಿಗೆ ತೆರಳಿದರು. 1946ರ ಡಿಸೆಂಬರ್ 3 ರಿಂದ 6ರ ವರೆಗೆ ಈ ಸಮ್ಮೇಳನದಲ್ಲಿ ಚರ್ಚೆಗಳು ನಡೆದವು. ಆದರೆ ಕಾಂಗ್ರೆಸ್ಸು ಮತ್ತು ಮುಸ್ಲಿಂಲೀಗುಗಳೊಳಗೆ ಒಮ್ಮತ ಏರ್ಪಡಿಸಲು ಸಾಧ್ಯವಾಗಲಿಲ್ಲ. ಮುಸ್ಲಿಂ ಬಹುಮತವಿರುವ ಪ್ರಾಂತ್ಯಗಳು ಬೇರೆಯಾಗುವುದರ ತೀರ್ಮಾನ ಹೇಗೆ ಆಗಬೇಕು ಎಂಬುದರ ಬಗ್ಗೆ ನೆಹರೂ ಅವರೂ, ಜಿನ್ನಾ ಅವರೂ ಹೊಂದಿದ್ದ ಭಿನ್ನಾಭಿಪ್ರಾಯಗಳನ್ನು ಹೋಗಲಾಗಿಸಲಿಲ್ಲ. ಸಮ್ಮೇಳನ ಸಫಲವಾಗಲಿಲ್ಲ. ನೆಹರೂ ಮತ್ತು ಬಲದೇವಸಿಂಗ್[1] ಅವರು ಭಾರತಕ್ಕೆ ತಕ್ಷಣವೇ ವಾಪಸಾದರು. ಜಿನ್ನಾ ಮತ್ತು ಲಿಯಾಕತ್ ಅಲಿಖಾನ್ ಅವರು ಲಂಡನ್ನಿನಲ್ಲೇ ಉಳಿದರು. ಪಾಕಿಸ್ತಾನ ನಿರ್ಮಾಣದ ಪರವಾಗಿ ಬ್ರಿಟಿಷ್ ಸಾರ್ವಜನಿಕರ ಅಭಿಪ್ರಾಯದ ಬೆಂಬಲವನ್ನು ಗಳಿಸುವುದೇ ಅವರ

1. ಇದೇ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಸಿಖ್ ಜನತೆಯನ್ನೂ ಹಿಂದೂಗಳಿಂದ ಬೇರ್ಪಡಿಸುವ ಪ್ರಯತ್ನವನ್ನು ಗುಪ್ತವಾಗಿ ನಡೆಸಿದುದು ಬಯಲಾಗಿದೆ. ಬ್ರಿಟಿಷ್ ಸಚಿವ ಸಂಪುಟದ ಕೆಲವು ಪ್ರಭಾವಶಾಲಿ ವ್ಯಕ್ತಿಗಳು ಸರ್ದಾರ ಬಲದೇವಸಿಂಗ್ ಅವರನ್ನು ಸಂಪರ್ಕಿಸಿ ಸಿಖ್ ಜನಾಂಗವು ತನ್ನದೇ ಆದ ರಾಜ್ಯ ಹೊಂದುವ ವ್ಯವಸ್ಥೆ ಮಾಡುವ ಬಗ್ಗೆ ಅವರೊಡನೆ ಸಮಾಲೋಚಿಸುವ ಅಭಿಲಾಷೆಯನ್ನು ಅವರಿಗೆ ತಿಳಿಸಿದರು. ಆದರೆ, ಬಲದೇವಸಿಂಗ್ ಅವರು ಈ ವಿಷಯವನ್ನು ನೆಹರೂ ಅವರಿಗೆ ತಿಳಿಸಿ, ತಮ್ಮ ಜನತೆಯು ಕಾಂಗ್ರೆಸ್ಸಿನೊಡನೆ ವ್ಯವಹರಿಸಿ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ತೃಪ್ತಿಪಡಿಸಿಕೊಳ್ಳುವುದು ಎಂದು ಪ್ರಕಟಿಸಿ ನೆಹರೂ ಅವರೊಡನೆಯೇ ಭಾರತಕ್ಕೆ ವಾಪಸಾದರು ಎಂಬ ವಿಷಯವನ್ನು ದೇವಿಂದರ್‌ಸಿಂಗ್ ದುಗ್ಗಾಲ್ ಎಂಬವರು ಬಹಿರಂಗ ಪಡಿಸಿರುತ್ತಾರೆ. (See, *Indian Express* dated 21-5-1982 Reproduced in Seshadri, H. V. *op. cit.* P 180

ಉದ್ದೇಶವಾಗಿದ್ದಿತು. ಈ ದೃಷ್ಟಿಯಿಂದ ಅಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳ ಮೂಲಕ ಪಾಕಿಸ್ತಾನದ ಬಗ್ಗೆ ಬಿರುಸಾಗಿ ಪ್ರಚಾರ ಮಾಡಿದರು. ಚರ್ಚಿಲ್ ಅವರ ಕಾಲದಿಂದಲೂ ಜಿನ್ನಾ ಅವರ ಪ್ರತ್ಯೇಕತಾ ಭಾವನೆಗೆ ಬ್ರಿಟಿಷ್ ಸರ್ಕಾರದ ಬೆಂಬಲವಿತ್ತೆಂಬುದನ್ನು ಷರೀಫುದ್ದೀನ್ ಪಿರ್‌ಜಾಡ[1] ಮತ್ತು ಖಾಲಿಖುಜಮಾನ್ ಅವರು ನೀಡಿರುವ ಸಾಕ್ಷಿಗಳಿಂದ ವ್ಯಕ್ತವಾಗುತ್ತದೆ.[2]

1947 – ನಿರ್ಣಾಯಕ ಘಟ್ಟ

1857ರಲ್ಲಿ ಪ್ರಾರಂಭವಾದ ಭಾರತದ ಸ್ವಾತಂತ್ರ್ಯ ಹೋರಾಟ ಹಿಂದೆ ವಿವರಿಸಿರುವ ಅನೇಕ ಘಟನೆಗಳ ಮೂಲಕ 1947 ರಲ್ಲಿ ಅಂತಿಮ ಘಟ್ಟವನ್ನು ತಲುಪಿತು. ಬ್ರಿಟಿಷ್ ಪ್ರಧಾನಿ ಅಟ್ಲಿ ಅವರು ಬ್ರಿಟಿಷ್ ಸರ್ಕಾರವು 1948ರ ಜೂನ್ ಒಳಗೆ ಭಾರತದ ರಾಜಕೀಯ ಅಧಿಕಾರವನ್ನು "ಜವಾಬ್ದಾರಿಯುತ ಭಾರತೀಯರ ಕೈಗೆ" ವರ್ಗಾಯಿಸುವುದೆಂದು 1947ರ ಫೆಬ್ರವರಿ 20 ರಂದು ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರಕಟಿಸಿದರು. ಬ್ರಿಟಿಷ್ ಸರ್ಕಾರದ ಈ ನಿರ್ಣಯಕ್ಕೆ ಅನೇಕ ಕಾರಣಗಳನ್ನು ಕೊಡಬಹುದು.

1. ಸುಮಾರು ಒಂಬತ್ತು ದಶಕಗಳಲ್ಲಿ ಅನೇಕ ಬಾರಿ ಬಲಪ್ರಯೋಗ ಹಾಗೂ ದಬ್ಬಾಳಿಕೆಯಿಂದ ಮತ್ತು 'ವಿಭಜಿಸು, ಆಳು' ಎಂಬ ಉಪಾಯದಿಂದ ಭಾರತೀಯರ ಸ್ವಾತಂತ್ರ್ಯ ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿದಾಗ್ಯೂ ಸ್ವಾತಂತ್ರ್ಯ ಗಳಿಕೆಯ ಬಗ್ಗೆ ಭಾರತೀಯರು ದೃಢ ನಿಶ್ಚಯ ಹೊಂದಿದ್ದುದು ಮತ್ತು ಅವರ ನೈತಿಕ ಬಲ ಯುದ್ಧಾನಂತರದ ಅಂತರರಾಷ್ಟ್ರೀಯ ವಾತಾವರಣದಲ್ಲಿ ಎಂದಿಗಿಂತಲೂ ಮೇಲ್ಮಟ್ಟದಲ್ಲಿದ್ದುದು;

---

1. See, *Deccan Herald*, Bangalore, dated 27–4–1981. Quoted in Seshadri H. V. *Ibid* P. 181.
2. Khaliquzzaman, *Pathway*, P 372. Quoted in Seshadri H. V. *Ibid*

2. ಸ್ವಾತಂತ್ರ್ಯ ಚಳುವಳಿಯ ಸ್ಫೂರ್ತಿ ಸೈನಿಕರಿಗೂ, ಪೋಲಿಸ್ ಸಿಬ್ಬಂದಿಗೂ ಹರಡಲಾರಂಭಿಸಿದುದರಿಂದ ಮುಂಜೆ ಭಾರತದ ಚಳುವಳಿಯನ್ನು ಈ ಸೈನ್ಯಬಲ ಮತ್ತು ಪೋಲಿಸ್ ಬಲಗಳಿಂದ ಹಾಗೂ ಆಡಳಿತ ವರ್ಗದ ಸಹಾಯದಿಂದ ದಮನ ಮಾಡುವುದು ಆಗುವುದಿಲ್ಲವೆಂಬುದನ್ನು ಬ್ರಿಟಿಷ್ ಅಧಿಕಾರಿಗಳು ಗಮನಿಸಿದುದು.

3. ಮಹಾಯುದ್ಧದಿಂದ ಬ್ರಿಟಿಷರ ಆರ್ಥಿಕತೆ ದುರ್ಬಲವಾಗಿದ್ದಿತು ಸಾಧನ ಸಂಪತ್ತುಗಳು, ಸರಕುಗಳು ಮೊದಲಾದುವುಗಳ ಅಭಾವ ದಿಂದ ಬ್ರಿಟನ್ನು ಬೃಹತ್ ಪ್ರಮಾಣದಲ್ಲಿ ಅಮೆರಿಕದ ಸಹಾಯ ವನ್ನು ಪಡೆಯಬೇಕಾಗಿದ್ದಿತು. ಭಾರತದ ಸಮಸ್ಯೆಯನ್ನು ಬ್ರಿಟನ್ನು ಶೀಘ್ರವಾಗಿ ಇತ್ಯರ್ಥಗೊಳಿಸಬೇಕೆಂಬ ಅಭಿಪ್ರಾಯ ಅಮೆರಿಕಾದ ಸಾರ್ವಜನಿಕರಲ್ಲಿ ಬಲವಾಗಿದ್ದಿತು. ಪರ್ಲ್‌ಬಕ್, ಲೂಯಿ ಫಿಷರ್, ಲಿನ್ ಯು ಟಾಂಗ್, ನಾರ್ಮನ್ ಥಾಮಸ್ ಇತ್ಯಾದಿ ಪ್ರಭಾವಿ ಅಮೆರಿಕನ್ನರೂ, ಅಮೆರಿಕಾದ ಸರ್ಕಾರವೂ ಭಾರತಕ್ಕೆ ಸ್ವಆಡಳಿತಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದುದನ್ನು ಬ್ರಿಟನ್ನು ಆಗಿನ ಸಂದರ್ಭದಲ್ಲಿ ಗಮನಿಸದೆ ಇರಲು ಸಾಧ್ಯವಿರಲಿಲ್ಲ.

4. ಸೋವಿಯತ್ ರಷ್ಯಾ ಹಾಗೂ ಪಾಶ್ಚಾತ್ಯ ರಾಷ್ಟ್ರಗಳೊಳಗೆ ಬೆಳೆಯ ಲಾರಂಭಿಸಿದ್ದ 'ಶೀತಲ ಯುದ್ಧವು' (Cold war) ಭಾರತವನ್ನು ಬಿಟ್ಟು ಹೊರಡುವಂತೆ ಬ್ರಿಟಿಷರನ್ನು ಪ್ರೇರೇಪಿಸಿದ ಇನ್ನೊಂದು ಮುಖ್ಯ ಕಾರಣವೆಂದು ಹೇಳಬಹುದು. ಯುದ್ಧದಲ್ಲಿ ಸೋವಿಯತ್ ರಷ್ಯಾವು ಬ್ರಿಟನ್ನು ಹಾಗೂ ಅಮೆರಿಕಾಗಳೊಡನೆ ಸೇರಿ ಜರ್ಮನಿಯ ಮೇಲೆ ಯುದ್ಧ ಮಾಡಿದುದಾದರೂ, ಯುದ್ಧ ಮುಗಿದ ನಂತರ ಇವರುಗಳೊಳಗೆ ಭಿನ್ನತೆ ಬೆಳೆಯಿತು. ಕಮ್ಯೂನಿಸಂ ಪದ್ಧತಿಯನ್ನು ಪ್ರಪಂಚದ ಇತರ ಭಾಗಗಳಿಗೆ ಹರಡುವುದು ರಷ್ಯಾದ ಸ್ಟಾಲಿನ್ ಅವರ ಯೋಜನೆಯಾಗಿದ್ದಿತು. ಸಾಮ್ರಾಜ್ಯಶಾಹಿ (Imperialism), ವಸಾಹತುಶಾಹಿ (Colonialism) ಮತ್ತು ಬಂಡವಾಳಶಾಹಿ (Capitalism) ಇವುಗಳನ್ನು ಪ್ರತ್ಯಕ್ಷವಾಗಿ ಖಂಡಿಸಿ, ಆಫ್ರಿಕ ಹಾಗೂ ಏಷ್ಯಾದ ರಾಷ್ಟ್ರಗಳ ಸ್ವಾತಂತ್ರ್ಯ ಚಳುವಳಿಗೆ ಸ್ಟ್ಯಾಲಿನ್

ಅವರು ಬೆಂಬಲ ನೀಡಿದರು. ಭಾರತವು ರಷ್ಯಾದ ಪ್ರಭಾವಕ್ಕೆ ಒಳಗಾಗುವುದನ್ನು ತಪ್ಪಿಸುವ ಸಮಸ್ಯೆ ಬ್ರಿಟಿಷರನ್ನು ಕಾಡಹತ್ತಿತ್ತು. ಸ್ವಾತಂತ್ರ್ಯ ನೀಡಿ ಭಾರತೀಯರ ಸ್ನೇಹ ಸಂಪಾದಿಸುವುದೊಂದೇ ಕಾರ್ಯತಃ ವಿವೇಕಯುತ ಮಾರ್ಗವೆಂದು ಹೊಸ ಬ್ರಿಟಿಷ್ ಸರ್ಕಾರವು ತೀರ್ಮಾನಿಸಿತು.

5. ಸ್ಥಾಪಿಸಲ್ಪಟ್ಟಿದ್ದ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರದಲ್ಲಿ ಕಾಂಗ್ರೆಸ್ಸು ಹಾಗೂ ಲೀಗುಗಳೊಳಗೆ ಹೊಂದಾಣಿಕೆಯ ಬದಲು ತೀವ್ರ ಭಿನ್ನತೆ ಉಂಟಾದುದು.

6. ಮುಸ್ಲಿಂಲೀಗು ರಾಜ್ಯಾಂಗ ರಚನಾ ಸಭೆ (Constituent Assembly) ಯನ್ನು ಬಹಿಷ್ಕರಿಸಿದುದು ಹಾಗೂ ಈ ಕಾರಣದಿಂದ ಈ ಸಭೆಯ ಆವರೆಗಿನ ಕಲಾಪಗಳು ಅರ್ಥಹೀನವಾದುದು.

7. ಲಂಡನ್ ಸಮ್ಮೇಳನದಲ್ಲಿಯೂ ಕಾಂಗ್ರೆಸ್ಸು ಹಾಗೂ ಮುಸ್ಲಿಂಲೀಗುಗಳೊಳಗೆ ಒಮ್ಮತ ಏರ್ಪಡಿಸಲು ಆಗದಿದ್ದುದು.

8. ಭಾರತೀಯರ ಕೈಗೆ ಜವಾಬ್ದಾರಿಯನ್ನು ವರ್ಗಾಯಿಸಿದರೆ, ಕಾಂಗ್ರೆಸ್ಸು ಮುಸ್ಲಿಂಲೀಗುಗಳೊಳಗೆ ಭಿನ್ನತೆಯು ಪರಿಹಾರವಾಗ ಬಹುದೆಂಬ ಬ್ರಿಟಿಷ್ ಪ್ರಧಾನಿ ಅಟ್ಲೀ ಅವರ ನಂಬಿಕೆ.

9. ಹಿಂದೂ ಮುಸ್ಲಿಂ ಗಲಭೆಗಳಿಗೆ ಮೂಲಕಾರಣ ಬ್ರಿಟಿಷ್ ಸರ್ಕಾರವು ಅನುಸರಿಸಿದ "ವಿಭಜಿಸು, ಆಳು" (Divide and Rule) ಎಂಬ ನೀತಿಯೇ ಕಾರಣ ಎಂಬ ಕಾಂಗ್ರೆಸ್ಸಿನ ಆರೋಪದಿಂದ ತಮ್ಮ ಸರ್ಕಾರ ವನ್ನು ಮುಕ್ತಗೊಳಿಸುವ ಪ್ರಧಾನಿ ಅಟ್ಲೀ ಅವರ ಅಪೇಕ್ಷೆ.

10. ಮುಸ್ಲಿಂಲೀಗಿನ ಪಾಕಿಸ್ತಾನ ಬೇಡಿಕೆಯನ್ನು ಅನಿವಾರ್ಯವಾಗಿಯಾದರೂ, ಒಪ್ಪಲೇಬೇಕಾಗಿ ಬಂದಿದೆ ಎಂದು ಕಾಂಗ್ರೆಸ್ ನಾಯಕರು ಮನಗಂಡುದುದು.

11. ಬ್ರಿಟನ್ನು ವಿಶ್ವಸಂಸ್ಥೆಯ ಪ್ರನಾಳಿಕೆಯನ್ನು ಗೌರವಿಸಿ ಅದು ಒಳಗೊಂಡಂತಹ "ಮಾನವನ ಮೂಲಭೂತ ಹಕ್ಕುಗಳನ್ನೂ", ಒಂದು ರಾಷ್ಟ್ರದ ಆಂತರಿಕ ವಿಷಯಗಳಲ್ಲಿ ಬೇರೆ ರಾಷ್ಟ್ರವು ಪ್ರವೇಶಿಸಬಾರದೆಂಬ

ತತ್ವವನ್ನೂ, ಭಾರತಕ್ಕೆ ಅನ್ವಯಿಸುವುದರ ಮೂಲಕ ಪ್ರಪಂಚದ ದೃಷ್ಟಿಯಲ್ಲಿ ಬ್ರಿಟನ್ನಿನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸುವುದು ಬ್ರಿಟಿಷ್ ಲೇಬರ್ ಪಕ್ಷದ ಪ್ರಧಾನಿ ಅಟ್ಲಿ ಅವರ ಅಭಿಲಾಷೆಯಾಗಿದ್ದಿತು. ಹೀಗೆ, ಅನೇಕ ಅಂಶಗಳು ಭಾರತದ ಸ್ವಾತಂತ್ರ್ಯಕ್ಕೆ ಅನುಕೂಲವಾಗಿ ಬ್ರಿಟಿಷ್ ಸರ್ಕಾರವು ಭಾರತವನ್ನು ಬಿಟ್ಟುಹೊರಡುವ ಅಂದಿನ ನಿರ್ಧಾರಕ್ಕೆ ಕಾರಣವಾದವು ಎಂದು ಹೇಳಬಹುದು. ವಿವೇಕಯುತ ರಾಜಕಾರಣಿಯಾಗಿ ಅಟ್ಲಿ ಅವರು ಭಾರತಕ್ಕೆ ಸ್ವಾತಂತ್ರ್ಯ ನೀಡಿ ಅದರೊಡನೆ ಸೌಹಾರ್ದಯುತ ಸಂಬಂಧದ ಪ್ರಯೋಜನಗಳನ್ನು ಪಡೆಯಲೂ, ಪ್ರಪಂಚದ ದೃಷ್ಟಿಯಲ್ಲಿ ಬ್ರಿಟನ್ನು ನ್ಯಾಯಪರ ರಾಷ್ಟ್ರವೆಂಬ ಹೆಸರು ಗಳಿಸಲೂ ತೀರ್ಮಾನಿಸಿದರು.

ಬ್ರಿಟಿಷ್ ಪ್ರಧಾನಿ ಅಟ್ಲೀ ಅವರ ಭಾರತ ಬಿಟ್ಟು ಹೊರಡುವ ಘೋಷಣೆಯಿಂದ ವೈಸರಾಯ್ ವೇವೆಲ್ ಅವರಿಗೆ ಆಶ್ಚರ್ಯವಾಯಿತು. ಹಠಾತ್ತಾಗಿ ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಕೊಡುವುದಕ್ಕಿಂತ ಭಾರತದ ಮತೀಯ ಪ್ರಶ್ನೆಯನ್ನು ಇತ್ಯರ್ಥಗೊಳಿಸಿ ನಂತರ ಸಾವಧಾನವಾಗಿ ಅಧಿಕಾರವನ್ನು ಭಾರತೀಯರಿಗೆ ವಹಿಸುವುದು ಉತ್ತಮ ಎಂದು ಅವರು ಅಭಿಪ್ರಾಯಪಟ್ಟು ತಮ್ಮದೇ ಆದ ಯೋಜನೆಯನ್ನು ಪ್ರಧಾನಿ ಅಟ್ಲೀಯವರಿಗೆ ಸಲ್ಲಿಸಿದರು. ಆದರೆ, ಅಟ್ಲಿ ಅವರು ಅಂತಿಮ ತೀರ್ಮಾನ ಕೈಗೊಂಡಿದ್ದರು. ಅವರು ವೇವೆಲ್ ಅವರನ್ನು ನಿವೃತ್ತಿಗೊಳಿಸಿ, ಅವರ ಸ್ಥಾನಕ್ಕೆ ಲಾರ್ಡ್ ಮೌಂಟ್‌ಬ್ಯಾಟನ್[1] ಅವರನ್ನು ಬ್ರಿಟಿಷರು ಭಾರತ ಬಿಟ್ಟು ಹೊರಡುವ ಕಾರ್ಯವನ್ನು ಶೀಘ್ರಗೊಳಿಸಬೇಕೆಂಬ ಆದೇಶದೊಡನೆ ವೈಸರಾಯ್ ಆಗಿ ಕಳಿಸಿದರು. ಮೌಂಟ್ ಬಾಟನ್ ಅವರು 1947 ರ ಮಾರ್ಚಿ 22 ರಂದು ಭಾರತಕ್ಕೆ ಆಗಮಿಸಿದರು. ಭಾರತಕ್ಕೆ ಬಂದ ಕೂಡಲೆ ಪ್ರಧಾನಿ ಅಟ್ಲೀಯವರು ವಹಿಸಿದ್ದ ಕಾರ್ಯನಿರ್ವಹಣೆಗಾಗಿ ಶೀಘ್ರವಾಗಿಯೇ ಗಾಂಧೀಜಿ, ಜಿನ್ನಾ, ಜವಾಹರ್‌ಲಾಲ್ ನೆಹರೂ, ಪಟೇಲ್ ಮತ್ತು ಕಾಂಗ್ರೆಸ್ಸಿನ, ಮುಸ್ಲಿಂಲೀಗಿನ, ಸಿಖ್ ಜನತೆಯ ಮುಖಂಡರುಗಳೊಡನೆಯೂ

1. ಮೌಂಟ್‌ಬ್ಯಾಟನ್ ಅವರು ಇಂಗ್ಲೀಷ್ ರಾಜಮನೆತನಕ್ಕೆ ಸೇರಿದವರೂ, ನೌಕಾ ದಂಡನಾಯಕರಾಗಿ ಯುದ್ಧದಲ್ಲಿ ಸೇವೆಸಲ್ಲಿಸಿದವರೂ, ಜವಾಹರ್‌ಲಾಲ್ ನೆಹರೂ ಅವರ ಸ್ನೇಹ ಸಂಪಾದಿಸಿಕೊಂಡವರೂ ಆಗಿದ್ದವರು.

ಸಮಾಲೋಚನೆ ಮಾಡಿದರು.[1] ವಿವಿಧ ಪಕ್ಷಗಳೊಡನೆ ಇದ್ದ ತೀವ್ರ ಭಿನ್ನಾಭಿಪ್ರಾಯಗಳ ಪೆಸೆಯಿಂದ ಈ ಸಂಧಾನ ಕಾರ್ಯ ಸುಲಭವಾದ ಕೆಲಸ ವಾಗಿರಲಿಲ್ಲ. ಸುಮಾರು ಎರಡು ತಿಂಗಳುಗಳ ಸಂಧಾನದಿಂದ ಮೌಂಟ್ ಬ್ಯಾಟನ್ ಅವರು ವಿಭಜನೆಯ ತತ್ವದ ಆಧಾರದ ಮೇಲಿನ ತಮ್ಮ ಯೋಜನೆ ಯನ್ನು ಪ್ರಕಟಿಸಿದರು. ವಿಭಜನೆಯನ್ನು ಕಾರ್ಯಗತ ಮಾಡಲು ಕೆಳಗಣ ಸೂತ್ರವನ್ನು ಅವರು ತಮ್ಮ ಯೋಜನೆಯಲ್ಲಿ ಸಲಹೆ ಮಾಡಿದರು.

1. ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳ ವಿಧಾನಸಭೆಗೆ ಸದಸ್ಯ ರನ್ನು ಎರಡು ಗುಂಪಾಗಿ (ಐರೋಪ್ಯರನ್ನು ಬಿಟ್ಟು) ವಿಂಗಡಿಸಲ್ಪಡು ವುದು ; ಒಂದು ಗುಂಪಿನ ಸದಸ್ಯರು ಮುಸಲ್ಮಾನರು ಬಹುಸಂಖ್ಯಾತ ರಾಗಿರುವ ಜಿಲ್ಲೆಗಳನ್ನೂ, ಇನ್ನೊಂದು ಗುಂಪಿನ ಸದಸ್ಯರು ಪ್ರಾಂತ್ಯದ ಮಿಕ್ಕ ಎಲ್ಲಾ ಜಿಲ್ಲೆಗಳನ್ನೂ ಪ್ರತಿನಿಧಿಸುವರು. ಒಂದು ಜಿಲ್ಲೆಯು ಈ ಎರಡು ಗುಂಪಿನಲ್ಲಿ ಯಾವ ಗುಂಪಿಗೆ ಸೇರುವುದು ಎಂಬುದನ್ನು ನಿರ್ಧರಿಸಲು 1941 ರ ಜಾನೆಷುಮಾರಿ (Census) ಸಂಖ್ಯೆಗಳು ಆಧಾರವಾಗಿರತಕ್ಕದ್ದು.

2. ಮೇಲಿನ ಎರಡು ಗುಂಪುಗಳು ಪ್ರತ್ಯೇಕವಾಗಿ ಸಭೆ ಸೇರಿ ತಮ್ಮ ಪ್ರಾಂತ್ಯವು ವಿಭಜಿಸಲ್ಪಡಬೇಕೇ ಇಲ್ಲವೇ ಎಂಬುದನ್ನು ಸದಸ್ಯರ ಮತದಾನದ ಮೂಲಕ ನಿರ್ಣಯಿಸುವುದು, ಎರಡು ಗುಂಪಿನಲ್ಲಿ ಯಾವ ಒಂದು ಗುಂಪಿನ ಸದಸ್ಯರಾದರೂ ಸರಿ ಅವರು ಹಾಗೆ ವಿಭಜಿ ಸಲ್ಪಡಬೇಕೆಂದು ಬಹುಮತದಿಂದ ತೀರ್ಮಾನಿಸಿದರೆ, ಪ್ರಾಂತ್ಯವು ಹಾಗೆ ವಿಭಜಿಸಲ್ಪಡುವುದು.

3. ಸಿಂಧ್ ಪ್ರಾಂತ್ಯವು ಪ್ರಸಕ್ತ ಭಾರತದ ಒಕ್ಕೂಟ ಬಿಟ್ಟು ಹೋಗುವ ತೀರ್ಮಾನವನ್ನು ಸಿಂಧ್ ಪ್ರಾಂತ್ಯದ ವಿಧಾನಸಭೆಯ ನಿರ್ಣಯಕ್ಕೆ ಬಿಡಲಾಗುವುದು.

---

1. ಈ ಮಾತುಕತೆಗಳ ವಿವರಣೆಗೆ ನೋಡಿ,
Allan Campbell – Johnson. *Mission with Mountbatten*

4. ವಾಯುವ್ಯಗಡಿ ಪ್ರಾಂತ್ಯ ಮತ್ತು ಬಲೂಚಿಸ್ತಾನಗಳು ಭಾರತದಲ್ಲಿ ಇರುವುದೇ ಅಥವಾ ಪಾಕಿಸ್ತಾನಕ್ಕೆ ಸೇರುವುದೇ ಎಂಬುದರ ತೀರ್ಮಾನವನ್ನು ಜನಮತಗಣನೆಯ (Referendum) ಆಧಾರದ ಮೇಲೆ ಮಾಡತಕ್ಕದ್ದು.

5. ಅಸ್ಸಾಂ ಪ್ರಾಂತ್ಯದಲ್ಲಿ ಮುಸ್ಲಿಂ ಬಹುಸಂಖ್ಯಾತರಿದ್ದ ಸಿಲ್ಹಟ್ ಜಿಲ್ಲೆಯು ಭಾರತದಲ್ಲೇ ಉಳಿಯುವುದೇ ಅಥವಾ ಪಾಕಿಸ್ತಾನವನ್ನು ಸೇರುವುದೇ ಎಂಬುದನ್ನು ಜನಮತಗಣನೆ ಮೂಲಕ ನಿರ್ಣಯಿಸತಕ್ಕದ್ದು.

ಈ ಯೋಜನೆಯನ್ನು ಅದು ಇದ್ದ ಹಾಗೇ ಕಾಲವಿಳಂಬ ಮಾಡದೆ ಒಪ್ಪುವಂತೆ ಮೌಂಟ್‌ಬೇಟನ್ ಅವರು ಕಾಂಗ್ರೆಸ್ಸನ್ನೂ ಮುಸ್ಲಿಂಲೀಗನ್ನೂ ಕೇಳಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅದೇ ದಿವಸ ಸಭೆ ಸೇರಿ (1947ರ ಜೂನ್ 2 ರಂದು) ಮುಸ್ಲಿಂಲೀಗು ಯಾವ ಷರತ್ತನ್ನೂ ಹಾಕದೆ ಯೋಜನೆಯನ್ನು ಒಪ್ಪಿದರೆ ಈ ಯೋಜನೆಗೆ ಕಾಂಗ್ರೆಸ್ಸಿನ ಒಪ್ಪಿಗೆ ಇದೆ ಎಂದು ತೀರ್ಮಾನಿಸಿತು. ಅಂದೇ ರಾತ್ರಿ ಮೌಂಟ್‌ಬೇಟನ್ ಅವರು ಜಿನ್ನಾ ಅವರನ್ನು ಭೇಟಿ ಮಾಡಿದರು. ಜಿನ್ನಾ ಅವರನ್ನು ಒಪ್ಪಿಸಲು ಮೌಂಟ್‌ಬೇಟನ್ ಅವರು ತಮ್ಮ ಚತುರತೆಯನ್ನೆಲ್ಲಾ ಉಪಯೋಗಿಸಬೇಕಾಯಿತು.[1] ಮುಸ್ಲಿಂ ಲೀಗಿನ ಅಖಿಲ ಭಾರತ ಸಭೆಯ ಒಪ್ಪಿಗೆ ಪಡೆಯಲು ತಮಗೆ ಒಂದು ವಾರ ಕಾಲವಾದರೂ ಬೇಕೆಂದು ಜಿನ್ನಾ ಅವರು ಹೇಳಿದರು. ಆದರೆ ಮೌಂಟ್‌ಬೇಟನ್ ಅವರು ಅಂದೇ ತೀರ್ಮಾನವಾಗಬೇಕೆಂದು ಒತ್ತಾಯಿಸಿ, ಜಿನ್ನಾ ಅವರ ಒಪ್ಪಿಗೆಯನ್ನು ಪಡೆದರು. ಮರು ದಿವಸ ಅಂದರೆ, 1947ರ ಜೂನ್ 3 ರಂದು ವಿವಿಧ ಮುಖಂಡರುಗಳ ಸಭೆ ಏರ್ಪಡಿಸಿ ಔಪಚಾರಿಕವಾಗಿ ತಮ್ಮ ಯೋಜನೆಗೆ ಅವರೆಲ್ಲರ ಅನುಮತಿಯನ್ನು ಪಡೆದರು. ಅಂದೇ ಬ್ರಿಟಿಷ್ ಪ್ರಧಾನಿ ಅಟ್ಲಿ ಅವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ "ಅಧಿಕಾರ ವರ್ಗಾವಣೆಯ" ಈ ಹೊಸ ಯೋಜನೆಯನ್ನು ಪ್ರಕಟಿಸಿದರು. 1947ರ ಜೂನ್ 3ರ ಈ ಯೋಜನೆಯು ಕೆಳಗಣ ಎರಡು ಅಂಶಗಳನ್ನು ಒಳಗೊಂಡಿದ್ದಿತು.

---

1. ವಿವರಗಳಿಗೆ ನೋಡಿ : Allan Campbell-Johnson *op–cit.* P 87.

1. ಆಗಲೇ ಸ್ಥಾಪಿಸಲ್ಪಟ್ಟಿದ್ದ ರಾಜ್ಯಾಂಗ ರಚನಾ ಸಭೆಯು (Constituent Assembly) ರೂಪಿಸುವ ಸಂವಿಧಾನವು (Constitution) ದೇಶದ ಯಾವ ಭಾಗಗಳು ಇದನ್ನು ಒಪ್ಪಲು ಸಿದ್ಧವಿಲ್ಲವೋ ಆ ಭಾಗಗಳಿಗೆ ಅನ್ವಯಿಸುವುದಿಲ್ಲ.

2. ಬಂಗಾಳ, ಪಂಜಾಬು, ಸಿಂಧ್, ಬ್ರಿಟಿಷ್ ಬೆಲೂಚಿಸ್ತಾನ್‌ಗಳ ಪ್ರತಿನಿಧಿಗಳು ಸ್ಥಾಪಿತವಾದ ರಾಜ್ಯಾಂಗ ರಚನಾ ಸಭೆಯನ್ನು ಸೇರಿರದಿದ್ದುದರಿಂದ ಈ ಪ್ರಾಂತ್ಯಗಳು ತಮಗೆ ಅನ್ವಯಿಸುವ ಸಂವಿಧಾನವನ್ನೂ ಪ್ರಸಕ್ತ ಸ್ಥಾಪಿತವಾಗಿದ್ದ ರಾಜ್ಯಾಂಗ ರಚನಾ ಸಭೆಯೇ ರೂಪಿಸಬಹುದೋ ಅಥವಾ ಈ ಸಭೆಗೆ ಸೇರಿರದ ಪ್ರಾಂತ್ಯಗಳ ಪ್ರತಿನಿಧಿಗಳನ್ನುಳ್ಳ ಪ್ರತ್ಯೇಕವಾದ ರಾಜ್ಯಾಂಗ ರಚನಾ ಸಭೆಯು ರೂಪಿಸುವುದೋ ಎಂಬುದನ್ನು ತೀರ್ಮಾನಿಸತಕ್ಕದ್ದು.

ಮೇಲಿನ ಯೋಜನೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೀಡಿದ್ದ ಒಪ್ಪಿಗೆಯನ್ನು ಜೂನ್ 14–15 ರಂದು ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಯಿತು. ಒಪ್ಪಿಗೆ ನಿರ್ಣಯವನ್ನು ಗೋವಿಂದ ವಲ್ಲಭ್ ಪಂತ್ ಅವರು ಸೂಚಿಸಿದರು. ಚರ್ಚೆಯಲ್ಲಿ ಎಲ್ಲಾ ಅಭಿಪ್ರಾಯಗಳೂ ಸೂಚಿತವಾದವು. ದೇಶದ ವಿಭಜನೆಗೆ ಒಪ್ಪಬಾರದೆಂದು ಕೆಲವರು ವಾದಿಸಿದರು. ಒದಗಿಬಂದ ಪರಿಸ್ಥಿತಿಯಲ್ಲಿ ವಿಭಜನೆ ತಾತ್ಕಾಲಿಕವಾಗಿಯಾದರೂ ಅನಿವಾರ್ಯವಾಗಿದೆ ಎಂದು ಕೆಲವರು ವಾದಿಸಿದರು. ಯಾರಿಗೂ ವಿಭಜನೆ ಇಷ್ಟವಿರಲಿಲ್ಲವೆಂಬುದು ಸ್ಪಷ್ಟವಾಗಿದ್ದಿತು. ಆದರೆ, ಸ್ವಾತಂತ್ರ್ಯಕ್ಕೆ ಈ ಷರತ್ತು ಅನಿವಾರ್ಯವಾಗಿ ಸೇರಿಸಲ್ಪಟ್ಟಿತ್ತು. ಮಹಾತ್ಮಾ ಗಾಂಧಿಯವರೂ ಈ ನಿರ್ಣಯವನ್ನು ಒಪ್ಪಬೇಕೆಂಬ ಸಲಹೆ ಮಾಡಿದ ನಂತರ ಇತರರೂ ಸುಮ್ಮನಾದರು. ನಿರ್ಣಯವು ಬಹುಮತದಿಂದ ಅನುಮೋದಿಸಲ್ಪಟ್ಟಿತು. ಸಿಖ್ ಜನತೆಗೂ ಯೋಜನೆ ಒಪ್ಪಿಗೆಯಾಯಿತು. ಜಿನ್ನಾ ಅವರ ಮುಸ್ಲಿಂಲೀಗಿಗೆ ತಮ್ಮ ಇಷ್ಟಾರ್ಥ ಫಲಿಸಿದುದಕ್ಕಾಗಿ ಅತ್ಯಂತ ಸಂತೋಷವಾಯಿತು.

ಸ್ವತಂತ್ರ ಭಾರತ ಹಾಗೂ ಸ್ವತಂತ್ರ ಪಾಕಿಸ್ತಾನಗಳ ಉದಯ

ಹೀಗೆ ಭಾರತದ ಪ್ರಮುಖ ಪಕ್ಷಗಳಿಗೆ ಜೂನ್ 3 ರ ಯೋಜನೆ ಒಪ್ಪಿಗೆಯಾದ ನಂತರ, ಬ್ರಿಟಿಷ್ ಸರ್ಕಾರವು ಸಿದ್ಧಪಡಿಸಿದ 'ಭಾರತದ ಸ್ವಾತಂತ್ರ್ಯ ಮಸೂದೆ, 1947'ಕ್ಕೆ 1947ರ ಜುಲೈ 18 ರಂದು ಬ್ರಿಟಿಷ್ ಸಾಮ್ರಾಟರ ಔಪಚಾರಿಕ ಒಪ್ಪಿಗೆಯಾಯಿತು. 1947ರ ಆಗಸ್ಟ್ 14–15ರ ಮಧ್ಯರಾತ್ರಿ 12 ಗಂಟೆಗೆ ಸರಿಯಾಗಿ ಅಧಿಕೃತವಾಗಿ ಆ ಕ್ಷಣ ದಿಂದ ಅಸ್ತಿತ್ವಕ್ಕೆ ಬಂದ ಸ್ವತಂತ್ರ ಭಾರತ ಮತ್ತು ಸ್ವತಂತ್ರ ಪಾಕಿಸ್ತಾನಕ್ಕೆ ಔಪಚಾರಿಕವಾಗಿ ಬ್ರಿಟಿಷ್ ಸರ್ಕಾರವು ತನ್ನ ರಾಜಕೀಯ ಅಧಿಕಾರವನ್ನು ವರ್ಗಾಯಿಸಿತು. ಬ್ರಿಟಿಷ್ ಸಾಮ್ರಾಟರ ಕಿರೀಟದ ಅತ್ಯಂತ ಪ್ರಕಾಶಮಾನ ವಾದ ವಜ್ರದಂತಿದ್ದ ಭಾರತವನ್ನು ಸುಮಾರು ಒಂದು ಶತಮಾನದ ಸ್ವಾತಂತ್ರ್ಯ ಚಳುವಳಿಯ ನಂತರ ಬ್ರಿಟಿಷರು ಬಿಟ್ಟು ಹೊರಟಂತಾಯಿತು.

ದೇಶೀಯ ಸಂಸ್ಥಾನಗಳು ಭಾರತಕ್ಕೆ ಸೇರಿದುದು

1947ರ ಜುಲೈ 18 ರ ಸ್ವಾತಂತ್ರ್ಯ ಮಸೂದೆಯು ಭಾರತದ ಸುಮಾರು 600 ದೊಡ್ಡ, ಸಣ್ಣ ದೇಶೀಯ ಸಂಸ್ಥಾನಗಳಿಗೂ ಅನ್ವಯಿಸಿತು. ಆದರೆ ಇವುಗಳ ರಾಜರುಗಳು ಭಾರತ ಅಥವಾ ಪಾಕಿಸ್ತಾನವನ್ನು ಸೇರ ಬೇಕಾಯಿತು. ಎಲ್ಲಾ ರಾಜರುಗಳ ಸಂಸ್ಥಾನಗಳನ್ನೂ ಭಾರತ ಒಕ್ಕೂಟಕ್ಕೆ ಸೇರಿಸಿದ ಕಾರ್ಯವನ್ನು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ತಮ್ಮ ಸಹಾಯಕರಾದ ಸಂಸ್ಥಾನಗಳ ಕಾರ್ಯದರ್ಶಿ ವಿ. ಪಿ. ಮೆನನ್ ಅವರ ಸಹಾಯದಿಂದ ಕ್ಷಿಪ್ರವಾಗಿಯೂ, ಯಶಸ್ವಿಯಾಗಿಯೂ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.[1] ಭಾರತದ ಇತರ ಭಾಗಗಳಿಗೂ ಸಂಸ್ಥಾನಗಳಿಗೂ ಮೂಲತಃ ಇರುವ ಐಕ್ಯತೆಯ ಕಲ್ಪನೆಯು ಸಾಂಸ್ಕೃತಿಕ, ತಾತ್ವಿಕ, ಸಾಮಾಜಿಕ ಹಾಗೂ ಇತರ ಅಂಶಗಳನ್ನೂ ಬ್ರಿಟಿಷರು ಹೊರಟ ನಂತರ ಸಂಸ್ಥಾನಗಳು ಪ್ರತ್ಯೇಕವಾಗಿಯೇ ಉಳಿಯುವುದರ ಅಸಂಬದ್ಧತೆ ಯನ್ನೂ ಅಪಾಯಗಳನ್ನೂ ವಿವರಿಸಿ 1947ರ ಜುಲೈ 4 ರಂದು ಸರ್ದಾರ್

---

1. ದೇಶೀಯ ಸಂಸ್ಥಾನಗಳು ಭಾರತದ ಒಕ್ಕೂಟವನ್ನು ಸೇರಿದುದರ ವಿವರಣೆಗೆ ನೋಡಿ: Menon V. P., *The story of Integration of the Indian States.*

ಪಟೇಲ್ ಅವರು ಒಂದು ಮನವಿಯನ್ನು ಎಲ್ಲಾ ರಾಜರುಗಳಿಗೂ ಕಳಿಸಿದರು. ವೈಸರಾಯ್ ಮೌಂಟ್‌ಬೇಟನ್ ಅವರೂ ಪಟೇಲರ ಮನವಿಗೆ ಬೆಂಬಲವಿತ್ತು ರಾಜರುಗಳ ಒಕ್ಕೂಟದಲ್ಲಿ ಭಾಷಣ ಮಾಡುತ್ತಾ 1947ರ ಆಗಸ್ಟ್ 15ರ ಒಳಗೆ ಎಲ್ಲಾ ರಾಜರುಗಳೂ ಪಾಕಿಸ್ತಾನ ಅಥವಾ ಭಾರತಕ್ಕೆ ಸೇರಬೇಕೆಂದು ತಿಳಿಸಿದರು. ಆ ವೇಳೆಗೆ ಜುನಾಗಢ, ಹೈದರಾಬಾದು ಮತ್ತು ಕಾಶ್ಮೀರ ಹೊರತು ಎಲ್ಲಾ ಮುಖ್ಯ ಸಂಸ್ಥಾನಗಳೂ ಭಾರತಕ್ಕೆ ಸೇರಿದವು. ಮುಸಲ್ಮಾನ ನವಾಬರುಗಳನ್ನು ಹೊಂದಿದ್ದ ಭೋಪಾಲ್, ಜುನಾಗಢ್, ಹಿಂದೂ ಬಹುಸಂಖ್ಯಾತರಿದ್ದ ಹೈದರಾಬಾದ್ ಸಂಸ್ಥಾನಗಳನ್ನು ಮುಸ್ಲಿಂ ಬಹುಸಂಖ್ಯಾತರಾಗಿದ್ದ ಆದರೆ ಹಿಂದೂ ಮಹಾರಾಜರಿದ್ದ ಜಮ್ಮು ಹಾಗೂ ಕಾಶ್ಮೀರವನ್ನೂ ಸೇರಿಸುವುದು ಸ್ವಲ್ಪ ಕಷ್ಟದ ಕೆಲಸವಾಯಿತು. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಲು ಮೌಂಟ್‌ಬೇಟನ್ ಅವರೂ ಪ್ರಯತ್ನಿಸಿದರೆಂದು ಹೇಳಲಾಗಿದೆ.[1] ಅಲ್ಲದೆ ಪಾಕಿಸ್ತಾನವು ಸೈನ್ಯ ಕಾರ್ಯಾಚರಣೆಗಳ ಮೂಲಕ ಕಾಶ್ಮೀರದ ಒಂದು ಭಾಗವನ್ನು ಬಲಪೂರ್ವಕವಾಗಿ ತನ್ನ ವಶಪಡಿಸಿಕೊಂಡಿತು. ಜವಾಹರಲಾಲ್ ನೆಹರೂ ಮತ್ತು ಸರ್ದಾರ್ ಪಟೇಲ್ ಅವರ ಪ್ರಯತ್ನದಿಂದ ಜಮ್ಮು ಮತ್ತು ಕಾಶ್ಮೀರದ ಮಹಾರಾಜ ಹರಿಸಿಂಘ್ ಅವರು ಭಾರತದ ಒಕ್ಕೂಟಕ್ಕೆ ಸೇರಲು "ಸೇರ್ಪಡೆಯ ಒಪ್ಪಂದಕ್ಕೆ" (Instrument of Accession) 1947ರ ಅಕ್ಟೋಬರ್ 26 ರಂದು ತಮ್ಮ ಸಹಿ ಹಾಕಿದರು.

ಜುನಾಗಢದ ನವಾಬರು ಪಾಕಿಸ್ತಾನವನ್ನು ಸೇರಿದರು. ಆದರೆ ಬಹುಸಂಖ್ಯಾತರಾಗಿದ್ದ ಅಲ್ಲಿನ ಹಿಂದೂ ಪ್ರಜೆಗಳು ಈ ತೀರ್ಮಾನಕ್ಕೆ ಒಪ್ಪದೆ ಚಳುವಳಿ ಹೂಡಿದರು. ಆಗ ಅಲ್ಲಿನ ನವಾಬರು ಪಾಕಿಸ್ತಾನಕ್ಕೆ ಹೋಗಿಬಿಟ್ಟರು. ಆಗ ಅಲ್ಲಿನ ದಿವಾನರು ಭಾರತ ಸರ್ಕಾರವನ್ನು ಸಂಸ್ಥಾನದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರಾರ್ಥಿಸಿದರು. 1948 ರ ಫೆಬ್ರುವರಿಯಲ್ಲಿ ಜನಮತ ಗಣನೆಯನ್ನು ಏರ್ಪಡಿಸಿದಾಗ ಜುನಾಗಢವು ಭಾರತಕ್ಕೆ ಸೇರುವ ತೀರ್ಮಾನವಾಯಿತು.

ಹೈದರಾಬಾದಿನ ನೈಜಾಮರು ಹೈದರಾಬಾದು ಸ್ವತಂತ್ರ ಸಂಸ್ಥಾನ

1. Menon V. P., *op. cit*, P 376

ವಾಗಿ ಉಳಿಯುವುದೆಂಬ ಘೋಷಣೆ ಹೊರಡಿಸಿದರು. ಈ ಸಂಸ್ಥಾನದಲ್ಲಿ ಜನಸಂಖ್ಯೆಯ ಶೇ. 85 ಕ್ಕೂ ಹೆಚ್ಚು ಭಾಗ ಹಿಂದೂಗಳಾಗಿದ್ದರೂ ಆಡಳಿತ ವರ್ಗ, ಪೋಲಿಸು ಮತ್ತು ಸೈನ್ಯಗಳಲ್ಲೆಲ್ಲಾ ಬಹುಭಾಗ ಮುಸಲ್ಮಾನರೇ ಇದ್ದರು. ಒಟ್ಟಿನಲ್ಲಿ ಅಲ್ಲಿನ ಹಿಂದೂ ಜನತೆ ಮುಸಲ್ಮಾನರ ಆಡಳಿತದಲ್ಲಿದ್ದರು. ಇದಕ್ಕೂ ಹೆಚ್ಚಾಗಿ ಕಾಸಿಂ ರಜ್ವಿ ಎಂಬ ಮುಖಂಡರ ನಾಯಕತ್ವದಲ್ಲಿ 'ರಜಕಾರ್' ಎಂಬ ಹೆಸರಿನ ಕಟ್ಟಾ ಮುಸ್ಲಿಂ ಪಂಗಡವೊಂದು ಸಶಸ್ತ್ರವಾಗಿ ಹಿಂದೂಗಳ ಮೇಲೆ ಧಾಳಿ ಆರಂಭಿಸಿತು. ಹಿಂದೂಗಳ ಕೊಲೆ, ಅವರ ಆಸ್ತಿಪಾಸ್ತಿಯ ಲೂಟಿ, ಹಿಂದೂ ಸ್ತ್ರೀಯರ ಮಾನಭಂಗ, ಮತಪರಿವರ್ತನೆ ಇವೆಲ್ಲವೂ ಅವರ ಕಾರ್ಯಾಚರಣೆಗಳಲ್ಲಿ ಸೇರಿದ್ದವು. ಭಾರತದ ಒಕ್ಕೂಟ ಸೇರಬೇಕೆಂಬ ಮನವಿಯನ್ನು ಹೈದರಾಬಾದಿನ ನೈಜಾಮರು ತಿರಸ್ಕರಿಸಿ ತಾವು ಭಾರತಮೊಡನೆ ಈ ವಿವಾದವನ್ನು ಪರಿಹರಿಸಲು ವಿಶ್ವಸಂಸ್ಥೆಯ ನೆರವನ್ನು ಕೋರುವುದಾಗಿ ಪ್ರಕಟಿಸಿದರು. ಆದರೆ ಸರ್ದಾರ್ ಪಟೇಲರು 1948 ರ ಸೆಪ್ಟೆಂಬರ್ 13 ರಂದು ಭಾರತದ ಸೇನೆಯನ್ನು ಹೈದರಾಬಾದಿಗೆ ಕಳಿಸಿ, ಹೈದರಾಬಾದಿನ ಸೇನೆಯು ಶರಣಾಗತವಾಗುವಂತೆಯೂ, ನೈಜಾಮರು ಭಾರತ ಒಕ್ಕೂಟವನ್ನು ಸೇರುವಂತೆಯೂ ಮಾಡಿದರು.

ಭೋಪಾಲಿನ ನವಾಬರೂ, ಇಂದೂರಿನ ಮಹಾರಾಜರೂ ತಮ್ಮ ಸಂಸ್ಥಾನಗಳು ಸ್ವತಂತ್ರವಾಗಿಯೇ ಇದ್ದು ಪಾಕಿಸ್ತಾನ ಹಾಗೂ ಭಾರತಗಳೊಡನೆ ಒಪ್ಪಂದದ ಮೂಲಕ ಸಂಬಂಧ ಹೊಂದುವ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಂಡರು. ಇವರೊಡನೆ ಕೆಲವು ಮುಸ್ಲಿಂ ರಾಜರುಗಳಿದ್ದ ಸಂಸ್ಥಾನಗಳ ನವಾಬರುಗಳೂ ಸೇರಿಕೊಂಡರು. ಆದರೆ, ಸರ್ದಾರ್ ಪಟೇಲರು ಇವರೆಲ್ಲರೊಡನೆ ಸಮರ್ಥವಾಗಿ ಕಾರ್ಯ ನಿರ್ವಹಿಸಿ ಎಲ್ಲಾ ಸಂಸ್ಥಾನಗಳನ್ನೂ ಭಾರತಕ್ಕೆ ಸೇರಿಸಿದರು.

ಭಾರತಕ್ಕೆ ದೇಶೀಯ ಸಂಸ್ಥಾನಗಳನ್ನು ಸೇರಿಸಿದುದು ಮಹತ್ಕಾರ್ಯವಾದಂತಾಯಿತು. ಶತಮಾನಗಳಿಂದ ದೇಶದಲ್ಲಿ ಅನೇಕ ಸಣ್ಣ ಪುಟ್ಟ ರಾಜ್ಯಗಳಿದ್ದ ಪರಿಸ್ಥಿತಿ ಬದಲಾಯಿಸಿ, ಪಾಕಿಸ್ತಾನ ಭಾಗವನ್ನು ಬಿಟ್ಟರೆ ಭಾರತದ

ಒಕ್ಕೂಟವು ಉಪಖಂಡದ ಬಹುಭಾಗವನ್ನು ಒಳಗೊಂಡ ಸ್ವತಂತ್ರ ರಾಷ್ಟ್ರವಾಗಿ ಉದಯಿಸಿತು.

ಭಾರತದಲ್ಲಿ ಫ್ರೆಂಚ್ ಸರ್ಕಾರದ ವಸಾಹತುಗಳಾಗಿದ್ದ ಪಾಂಡಿಚೇರಿ, ಮಾಹೆ, ಕರೈಕಲ್ ಪ್ರದೇಶಗಳು 1954 ರಲ್ಲೂ ಪೋರ್ಚುಗೀಸ್ ಸರ್ಕಾರದ ವಸಾಹತುಗಳಾಗಿದ್ದ ಗೋವಾ, ಡಾಮನ್ ಮತ್ತು ಡಯು ಹಾಗೂ ದಾದ್ರ, ನಗರ್‌ಹವೇಲಿ ಪ್ರದೇಶಗಳು 1961 ರಲ್ಲಿಯೂ, ಭಾರತವನ್ನು ಸೇರಿದವು. ಇವುಗಳಿಂದ ಭಾರತದ ನೆಲದ ಮೇಲೆ ಪರಕೀಯರ ಅಧಿಕಾರ ಸಂಪೂರ್ಣವಾಗಿ ಹೋದಂತಾಯಿತು.

❖❖❖

ಅಧ್ಯಾಯ - 15

ಉಪಸಂಹಾರ (Epilogue)

1857 ರ ಭಾರತದ ಮೊದಲ ಸ್ವಾತಂತ್ರ್ಯ ಯುದ್ಧದಿಂದ ಒಂಬತ್ತು ದಶಕಗಳವರೆಗೆ ನಡೆದ ಭಾರತದ ಸ್ವಾತಂತ್ರ್ಯ ಚಳುವಳಿಯನ್ನೂ, ಅಂತಿಮವಾಗಿ ಭಾರತದ ಉಪಖಂಡದಲ್ಲಿ ಭಾರತ ಹಾಗೂ ಪಾಕಿಸ್ತಾನಗಳು ಎರಡು ಸ್ವತಂತ್ರ ರಾಷ್ಟ್ರಗಳಾಗಿ ಉದಯಿಸಿದುದನ್ನೂ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಯಿತು. ಈ ವಿಭಜನೆಯಿಂದ ಬ್ರಿಟಿಷರಿಗೆ ಲಭಿಸಿದ ಪ್ರಯೋಜನ, ಸ್ವಾತಂತ್ರ್ಯ ಘೋಷಣೆಯ ತರುಣದಲ್ಲಿ ದೇಶದ ಕೆಲಭಾಗಗಳ ಹಿಂದೂಗಳ ಮತ್ತು ಮುಸ್ಲಿಮರ ಭವಿಷ್ಯದ ಬಗ್ಗೆ ಇದ್ದ ಅನಿಶ್ಚಯತೆ ಮತ್ತು ಇದರ ಪರಿಣಾಮವಾಗಿ ಹುಟ್ಟಿದ ನಿರಾಶ್ರಿತರ ಸಮಸ್ಯೆ, ವಿಭಜನೆಯೊಡನೆ ಕೂಡಿ ಬಂದ ಹತ್ಯಾಕಾಂಡ ಹಾಗೂ ಹಿಂಸಾಚಾರ, ವಿಭಜನೆಯಿಂದ ಹುಟ್ಟಿದ ಇತರ ಕೆಲವು ಸಮಸ್ಯೆಗಳು - ಇವುಗಳನ್ನು ಈ ಉಪಸಂಹಾರದಲ್ಲಿ ಸ್ಥೂಲವಾಗಿ ವಿವರಿಸಲಾಗುವುದು.

ಬ್ರಿಟನ್ನು ಹಾಗೂ ವಿಭಜಿತ ಭಾರತ

ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ ಪಾಕಿಸ್ತಾನ ನಿರ್ಮಾಣ ಮಾಡಿದುದು ಅವರ ರಾಜತಾಂತ್ರಿಕ ಗೆಲುವು ಎಂದು ಹೇಳಬಹುದು. ಅಂತೆಯೇ ಅದು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯದ ಸೋಲು. ಅಲಿಘರ್ ವಿಶ್ವವಿದ್ಯಾನಿಲಯ ಸ್ಥಾಪನೆಯ ಕಾಲದಿಂದಲೂ ಭಾರತದ ಮುಸಲ್ಮಾನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಬ್ರಿಟಿಷರು ಸೂಕ್ಷ್ಮವಾಗಿ ಮಾಡಿದ ಪ್ರಯತ್ನಗಳನ್ನೂ, 'ವಿಭಜಿಸು, ಆಳು'

('Divide and Rule') ಎಂಬ ನೀತಿಯು ಹಾಗೂ ಇತರ ಕೆಲವು ಕಾರಣಗಳ ಪರಿಣಾಮವಾಗಿ ಪಾಕಿಸ್ತಾನ ಭಾವನೆ ಬೆಳೆದುದನ್ನೂ, ಹಿಂದಿನ ಅಧ್ಯಾಯ ಗಳಲ್ಲಿ ವಿಶದಪಡಿಸಲಾಯಿತು. ಭಾರತದ ಉಪಖಂಡವನ್ನು ಒಡೆದು ಎರಡು ರಾಷ್ಟ್ರಗಳನ್ನು ನಿರ್ಮಾಣ ಮಾಡಿದುದು ಬ್ರಿಟಿಷರ ರಾಜಕೀಯ ಹಾಗೂ ಮಿಲಿಟರಿ ಹಿತಾಸಕ್ತಿಗಳಿಗೆ ಪೋಷಣೆಯಾಯಿತು. ಪಾಕಿಸ್ತಾನ ನಿರ್ಮಾ ಣಕ್ಕೆ ಬೆಂಬಲ ನೀಡಿದ ಬ್ರಿಟಿಷರಿಗೆ ಕೃತಜ್ಞತಾ ಮನೋಭಾವವುಳ್ಳ ಪಾಕಿ ಸ್ತಾನವು ಬ್ರಿಟಿಷರಿಗೆ ಶಾಶ್ವತವಾದ ಮಿತ್ರರಾಷ್ಟ್ರವೊಂದು ಈ ಉಪಖಂಡದಲ್ಲಿ ಇರುವಂತಾಯಿತು. ಸ್ವತಂತ್ರ ಅಖಂಡ ಭಾರತವು ಹೊಂದಿರುತ್ತಿದ್ದ ರಾಜ ಕೀಯ ಹಾಗೂ ಆರ್ಥಿಕ ಬಲಕ್ಕೆ ಹೋಲಿಸಿದರೆ ವಿಭಜಿತ ಭಾರತವನ್ನು ವಿಭಜನೆಯು ದುರ್ಬಲಗೊಳಿಸಿದಂತೆಯೂ ಆಯಿತು. ಐಕ್ಯ ಭಾರತವೇ ಇದ್ದಿದ್ದರೆ ಬ್ರಿಟನ್ನು ತನ್ನ ಆರ್ಥಿಕ ಹಾಗೂ ಕೈಗಾರಿಕಾ ಚಟುವಟಿಕೆ ಗಳನ್ನು ಮುಂದುವರಿಸಿಕೊಳ್ಳುವುದು ಕಷ್ಟವಾಗುತ್ತಿದ್ದಿತೆಂದೂ, ನೆರೆರಾಷ್ಟ್ರ ವಾಗಿ ಪಾಕಿಸ್ತಾನವು ಬ್ರಿಟಿಷರ ಪರವಾದ ಹಾಗೂ ಭಾರತಕ್ಕೆ ವಿರೋಧವಾದ ಪ್ರವೃತ್ತಿ ಹೊಂದಿರುವುದರಿಂದ ಬ್ರಿಟಿಷರ ಈ ಆರ್ಥಿಕ ಹಿತಾಸಕ್ತಿಗಳಿಗೂ ಭಾರತವು ಗಮನ ಕೊಡಬೇಕಾಗಿ ಬಂದಿತೆಂದೂ ಅಬುಲ್ ಕಲಾಂ ಅಜಾದ್ ಅವರು ಹೇಳಿರುವುದರಲ್ಲಿ[1] ವಾಸ್ತವತೆ ಇದೆ. ಒಟ್ಟಿನಲ್ಲಿ ಉಪಖಂಡದ ವಿಭಜನೆಯು ಬ್ರಿಟನ್ನಿನ ರಾಜಕೀಯ ಹಾಗೂ ರಾಜತಾಂತ್ರಿಕ ಬಲದ ದೃಷ್ಟಿಯಿಂದ ಮತ್ತು ಆರ್ಥಿಕ ದೃಷ್ಟಿಯಿಂದ ಅದಕ್ಕೆ ಅನುಕೂಲ ವಾಯಿತು.

ಮೌಂಟ್‌ಬ್ಯಾಟನ್ ಯೋಜನೆ ಪ್ರಕಟವಾದ ಕಾಲವಲ್ಲಿಯೇ ಭಾರತದ ಕಮ್ಯೂನಿಸ್ಟ್ ಪಾರ್ಟಿಯು ಹೀಗೆ ಘೋಷಿಸಿದ್ದಿತು: "ಮೌಂಟ್ ಬ್ಯಾಟನ್ ಯೋಜನೆಯು ಸಹಜವಾಗಿಯೂ 'ಭಾರತದಿಂದ ಹೊರಡಿ' ('Quit India') ಯೋಜನೆಯಾಗಿಲ್ಲ: ಅದು ಸಾಧ್ಯವಾದಷ್ಟು ಆರ್ಥಿಕ ಹಾಗೂ ಮಿಲಿಟರಿ ಹತೋಟಿಗಳನ್ನು ಬ್ರಿಟಿಷರ ಕೈಯಲ್ಲಿಯೇ ಉಳಿಸಿ ಕೊಳ್ಳುವ ಯೋಜನೆಯಾಗಿದೆ."[2] ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಕ್ಷೇತ್ರ

---

1. Abul Kalam Azad, *op. cit.*, n 6 pp 191-2
2. Palme Dutt R., *India Today*. People's Publishing House Ltd., Bombay, 1949, P 560

ದಲ್ಲಿಯೂ ಇಂತಹುದೇ ಅಭಿಪ್ರಾಯ ವ್ಯಕ್ತವಾಯಿತು. ಸೋವಿಯತ್ ಒಕ್ಕೂಟದ ಜ್ಯೂಕೋವ್ (Zhukov) ಅವರ ಮಾತುಗಳಲ್ಲಿ ಇದು ಹೀಗಿದೆ: "ಅಮೆರಿಕದ ಇತಿಹಾಸದಿಂದ ಒಂದು ಅಂಶವನ್ನು ಗ್ರಹಿಸಿ, ಫಿಲಿಪೈನ್ಸ್ ಬಗ್ಗೆ ಆ ದೇಶವು ಅನುಸರಿಸಿದ ನೀತಿಯನ್ನು ಬ್ರಿಟನ್ನು ಭಾರತದ ಬಗ್ಗೆ ಅನುಸರಿಸಿದಂತಾಗಿದೆ — ನೆಪಮಾತ್ರದ, ಸಹಜವಲ್ಲದ ಸ್ವಾತಂತ್ರ್ಯ ಕೊಡುವುದು ಅಂದರೆ ಬಿಟ್ಟು ಹೊರಟು ಹೋದಂತೆ ತೋರಿಸುವುದು, ಆದರೆ ಇಲ್ಲೇ ಇರುವುದು!"

ಬ್ರಿಟಿಷ್ ಸಾಮ್ರಾಜ್ಯದ ಬದಲಾಗಿ ಬ್ರಿಟಿಷ್ ಕಾಮನ್‌ವೆಲ್ತ್ ಬಂದುದು

ಭಾರತದ ಉಪಖಂಡಕ್ಕೆ ಸ್ವಾತಂತ್ರ್ಯ ನೀಡಿದ ಸಮಯದಲ್ಲಿಯೇ ಬ್ರಿಟಿಷರ ರಾಜತಾಂತ್ರಿಕ ಕೌಶಲ್ಯವು ಅವರ ಇನ್ನೊಂದು ಕ್ರಮದಿಂದ ವ್ಯಕ್ತವಾಗುವುದು. ಆವರೆಗೆ ಸಾಮ್ರಾಜ್ಯಶಾಹಿ ರಾಷ್ಟ್ರವಾಗಿ ಅನೇಕ ಅಧೀನ ರಾಷ್ಟ್ರಗಳನ್ನೂ, ವಸಾಹತುಗಳನ್ನೂ ಹೊಂದಿದ್ದ ಬ್ರಿಟಿಷ್ ಸಾಮ್ರಾಜ್ಯವನ್ನು (British Empire) ಬ್ರಿಟಿಷ್ ಸರ್ಕಾರವು 'ಬ್ರಿಟಿಷ್ ಕಾಮನ್‌ವೆಲ್ತ್' ಎಂಬುದಾಗಿ ಪರಿವರ್ತಿಸಿದರು. ಕಾಮನ್‌ವೆಲ್ತ್ ರಾಷ್ಟ್ರಗಳ ಪರಸ್ಪರ ಸಂಬಂಧಗಳನ್ನು ನೋಡಿಕೊಳ್ಳಲು 1947ರ ಜುಲೈನಲ್ಲಿ ಕಾಮನ್‌ವೆಲ್ತ್ ರಿಲೇಷನ್ಸ್ ಕಛೇರಿಯೊಂದನ್ನು ಬ್ರಿಟಿಷ್ ಸರ್ಕಾರವು ಸ್ಥಾಪಿಸಿತು. 'ಸಾಮ್ರಾಜ್ಯ ಮೃತವಾಯಿತು; ಕಾಮನ್‌ವೆಲ್ತ್ ದೀರ್ಘಾಯುವಾಗಲಿ' ಎಂಬುದು ಬ್ರಿಟಿಷರ ಹೊಸ ಘೋಷಣೆಯಾಯಿತು. ಬ್ರಿಟಿಷ್ ಕಾಮನ್‌ವೆಲ್ತ್ ಎಂಬುದು ಪ್ರಗತಿಗೆ ಪರಸ್ಪರ ಸಹಾಯ ನೀಡುವ ಧ್ಯೇಯದಿಂದ ವಿವಿಧ ಬುಡಕಟ್ಟುಗಳ, ವಿವಿಧ ನಂಬಿಕೆಗಳುಳ್ಳ ಸಂಪೂರ್ಣವಾಗಿ ಸ್ವತಂತ್ರವಾಗಿರುವ ರಾಷ್ಟ್ರಗಳು ಸ್ವಯಂಪ್ರೇರಣೆಯಿಂದ ಒಂದುಗೂಡಿರುವ ರಾಷ್ಟ್ರ ಸಮುದಾಯವಾಗಿದೆ. ಸ್ವತಂತ್ರ ಭಾರತ ಹಾಗೂ ಸ್ವತಂತ್ರ ಪಾಕಿಸ್ತಾನಗಳೂ ಈ ಸಮುದಾಯವನ್ನು ಸೇರುವುವೆಂಬ ಆಕಾಂಕ್ಷೆಯನ್ನು ಅಟ್ಲೀಯವರು ತಮ್ಮ ಭಾರತ ಸ್ವಾತಂತ್ರ್ಯ ಘೋಷಣೆಯಲ್ಲಿಯೇ ವ್ಯಕ್ತಪಡಿಸಿದ್ದರು. ಹಿಂದೆ ಅಧೀನ ರಾಷ್ಟ್ರವಾಗಿದ್ದಂತಹ ಭಾರತದಂತಹ ರಾಷ್ಟ್ರಗಳು ಬ್ರಿಟನ್ನಿನ ಬಗ್ಗೆ

ಸದಭಿಪ್ರಾಯ ಹೊಂದಿರುವಂತೆ ಮಾಡಲು ಬ್ರಿಟಿಷರ ಈ ಹೊಸ ವ್ಯವಸ್ಥೆ ಸಹಾಯಕವಾಗಿದೆ.

ನಿರಾಶ್ರಿತರ ಸಮಸ್ಯೆ ಹುಟ್ಟಿದುದು ಮತ್ತು ಹತ್ಯಾಕಾಂಡ ಹಾಗೂ ಹಿಂಸಾಚಾರ ಪ್ರಕರಣ

1947ರ ಮೇ ತಿಂಗಳಲ್ಲಿ ಪ್ರಕಟವಾದ ಮೌಂಟ್‌ಬ್ಯಾಟನ್ ಯೋಜನೆ ಹಾಗೂ 'ಜೂನ್ 3ರ' ಬ್ರಿಟಿಷ್ ಸರ್ಕಾರದ ಯೋಜನೆಗಳಿಂದ ಭಾರತವು ಸ್ವಾತಂತ್ರವಾಗುವುದರೊಡನೆಯೇ ದೇಶವು ಇಬ್ಭಾಗವಾಗುವು ದೆಂಬುದೂ ಸ್ಪಷ್ಟವಾಗಿದ್ದಿತು. ಆದರೆ, ದೇಶದ ಕೆಲಭಾಗಗಳ ಜನರು ತಾವು ಯಾವ ದೇಶಕ್ಕೆ ಸೇರುವರೆಂಬುದರ ಬಗ್ಗೆ ಅವರಿಗೆ ತಿಳಿಯಲು ತುಂಬ ಕಾಲವಾಯಿತು. ಮೋಸ್ಲೆ ಎಂಬುವರು ಹೇಳಿರುವಂತೆ, "ಮೇನಲ್ಲಿ ವಿಭಜನೆ, ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ಆದರೆ ಜನರು ತಾವು ಯಾವ ದೇಶಕ್ಕೆ ಸೇರಿರುವರು ಎಂಬುದರ ಬಗ್ಗೆ ಸ್ವಾತಂತ್ರ್ಯದ ನಂತರ ಎರಡು ದಿನಗಳವರೆಗೂ ಅವರಿಗೆ ಈ ಬಗ್ಗೆ ತಿಳುವಳಿಕೆ ನೀಡಲಿಲ್ಲ."[1] ಪಂಜಾಬು, ಬಂಗಾಳ ಹಾಗೂ ಅಸ್ಸಾಂ ಪ್ರಾಂತ್ಯದ ಸಿಲ್ಹೆಟ್ ಜಿಲ್ಲೆಗಳಲ್ಲಿ ಯಾವ ಯಾವ ಭಾಗ ಪಾಕಿಸ್ತಾನಕ್ಕೆ ಸೇರಬೇಕೆಂಬುದನ್ನು, ನಿರ್ಣಯಿಸಲು ಪಂಜಾಬಿಗೆ ಒಂದು, ಬಂಗಾಳಕ್ಕೆ ಇನ್ನೊಂದು, ಎರಡು ಗಡಿ ನಿರ್ಧಾರ ಸಮಿತಿಗಳು ನೇಮಿಸಲ್ಪಟ್ಟಿದ್ದವು. ಸಿರಿಲ್ ರಾಡ್‌ಕ್ಲಿಫ್ ಎಂಬುವರು ಎರಡೂ ಸಮಿತಿಯ ಅಧ್ಯಕ್ಷರೂ, ಒಂದೊಂದು ಸಮಿತಿಯಲ್ಲಿಯೂ ಇಬ್ಬರು ಹಿಂದೂಗಳು, ಇಬ್ಬರು ಮುಸ್ಲಿಮರು ಸದಸ್ಯರಾಗಿದ್ದರು. ಈ ಸದಸ್ಯರೆಲ್ಲಾ ಹೈಕೋರ್ಟುಗಳ ನ್ಯಾಯಾಧೀಶರಾಗಿದ್ದವರಾಗಿದ್ದರು. ಈ ಸಮಿತಿಯು ತನ್ನ ವರದಿಯನ್ನು ಆಗಸ್ಟ್ 17 ರಂದು – ಭಾರತದ ಸ್ವಾತಂತ್ರ್ಯ ಘೋಷಣೆಯಾದ ಎರಡು ದಿನಗಳ ಮೇಲೆ ಸಲ್ಲಿಸಿತು. ಈ ಅನಿಶ್ಚಿತ ಪರಿಸ್ಥಿತಿಯು ಲಕ್ಷಾಂತರ ಹಿಂದೂಗಳಿಗೂ, ಮುಸ್ಲಿಮರಿಗೂ ಸಿಖ್ಖರಿಗೂ ತುಂಬಾ ಪೇಚು ಉಂಟುಮಾಡಿತು.

ಪಾಕಿಸ್ತಾನ ಹಾಗೂ ಭಾರತಗಳ ನಡುವಣ ಗಡಿಯನ್ನು, ಗಡಿ ನಿರ್ಧಾರ ಸಮಿತಿಯು ನಿರ್ಧರಿಸುವುದಕ್ಕೆ ಮುಂಚೆಯೇ ಏಕೆ ಬ್ರಿಟಿಷರು

1. Mosley, *The British Raj*, PP 283 – 284

ಭಾರತದ ಮೇಲಿನ ಅಧಿಕಾರ ತ್ಯಜಿಸಿದರು, ಎಂಬ ಪ್ರಶ್ನೆ ಏಳುವುದು. ಬ್ರಿಟಿಷ್ ಸರ್ಕಾರವು ಅಧಿಕಾರ ತ್ಯಜಿಸುವ ನಿರ್ಧಾರಕ್ಕೆ ಬಂದಾಗ 1948ರ ಜೂನ್ ಒಳಗೆ ಬ್ರಿಟಿಷ್ ಸರ್ಕಾರವು ಭಾರತಕ್ಕೆ ಅಧಿಕಾರ ಬಿಟ್ಟುಕೊಡುವು ವೆಂದು ಅಟ್ಲಿಯವರು ಘೋಷಿಸಿದ್ದನ್ನು ಹಿಂದೆಯೇ ಹೇಳಿರುತ್ತೇವೆ. ಹೀಗೆ ಎಷ್ಟು ಕಾಲಾವಕಾಶವಿದ್ದರೂ 1947ರ ಆಗಸ್ಟ್‌ನಲ್ಲಿಯೇ ಏಕೆ ಬಿಟ್ಟರು ಎಂಬುದಕ್ಕೆ ಈ ವಿಷಯ ಕುರಿತು ಸೂಕ್ಷ್ಮವಾಗಿ ವಿವೇಚಿಸಿರುವ ಮೋಸ್ಲೆ (Mosley) ಎಂಬುವರು ಹೇಳಿರುವುದು ಅರ್ಥಗರ್ಭಿತವಾಗಿಯೇ ಇವೆ. ಅವರ ಪ್ರಕಾರ ಈ ತೀರ್ಮಾನಕ್ಕೆ ವೈಸರಾಯ್ ಮೌಂಟ್‌ಬೇಟನ್ ಅವರೇ ಕಾರಣರು. ತೀವ್ರ ಚರ್ಚೆ ನಡೆಸಿದ ನಂತರ ಭಾರತದ ಪ್ರಮುಖ ಪಕ್ಷಗಳು ಜೂನ್ 3ರ ಯೋಜನೆಗೆ ಒಪ್ಪಿಗೆ ಕೊಟ್ಟುದುದನ್ನು, ಹೆಚ್ಚು ಕಾಲಾವಕಾಶ ಕೊಟ್ಟರೆ ಎಲ್ಲಿ ಮುಸ್ಲಿಂಲೀಗು ಮತ್ತು ಕಾಂಗ್ರೆಸ್ಸು ತಮ್ಮ ನಿರ್ಧಾರಗಳನ್ನು ಬದಲಿಸುವುವೋ ಎಂಬ ಭೀತಿ ಮೌಂಟ್‌ಬೇಟನ್ ಅವರಿಗೆ ಇತ್ತು ಎಂಬುದು ಮೋಸ್ಲೆ ಅಭಿಪ್ರಾಯವಾಗಿದೆ. ಅವರು ಹೀಗೆ ಹೇಳಿರುತ್ತಾರೆ : "ಕಾಂಗ್ರೆಸ್ಸಾಗಲೀ, ಮುಸ್ಲಿಂಲೀಗಾಗಲೀ ದೇಶದ ವಿಭಜನೆಯ ಬಗ್ಗೆ ಪುನರಾಲೋಚನೆ ಮಾಡಲೂ, ಈ ವಿಭಜನೆಗೆ ಪರಿಣಾಮಕಾರಿಯಾದ ವಿರೋಧ ಬೆಳೆಯಲೂ ಕಾಲಾವಕಾಶವಿಲ್ಲದ ಹಾಗೆ ಮಾಡಿ ವಿಭಜನೆಯನ್ನು ನುಗ್ಗಿಸಿಬಿಡುವುದೇ ಅವರ ಉದ್ದೇಶವಾಗಿದ್ದಿತು."[1]

ದೇಶದ ವಿಭಜನೆ ಕುರಿತು ಘೋಷಣೆ ಹೊರಟಾಗಿನಿಂದಲೇ ಅಲ್ಪ ಸಂಖ್ಯಾತ ಹಿಂದೂಗಳೂ, ಮುಸಲ್ಮಾನರೂ, ಸುರಕ್ಷಿತ ಪ್ರದೇಶಗಳಿಗೆ ವಲಸೆ ಹೊರಡಲಾರಂಭಿಸಿದರು. ಪರಸ್ಪರ ದ್ವೇಷ ಭಾವನೆಯಿಂದ ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಪರಸ್ಪರ ಹಿಂಸಾಚಾರ ನಡೆಯಿತು. 1947 ರ ಆಗಸ್ಟ್ 15 ಭಾರತದ ಉಪಖಂಡದಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆಯ ಸಂತೋಷ ಸಮಾರಂಭಗಳು ನಡೆದ ದಿನ; ಆದರೆ ಜನರ ಈ ಸಂತೋಷವು ಅದೇ ಸಂದರ್ಭದಲ್ಲಿ ನಡೆದ ಘೋರ ಹಿಂಸಾಕೃತ್ಯಗಳ ದುಃಖದಲ್ಲಿ ಮುಳುಗಿ ಹೋಯಿತು. ಭಾರತದಲ್ಲೂ, ಪಾಕಿಸ್ತಾನದಲ್ಲೂ, ಕ್ರೂರ ಮತೀಯ ವಾದಿಗಳು ಏನೂ ತಪ್ಪು ಮಾಡದ ಸಾಮಾನ್ಯ ಜನರನ್ನು ಕೊಲೆ

1. Mosley *op. cit.*, P 118.

ಮಾಡಿದರು. ಸಹಸ್ರಾರು ಜನರು ತಮ್ಮ ಮನೆಗಳನ್ನೂ, ಆಸ್ತಿಪಾಸ್ತಿಗಳನ್ನೂ ಕಳೆದುಕೊಂಡರು. ಸರ್ಕಾರವು ಜನರಿಗೆ ರಕ್ಷಣೆ ನೀಡಲು ಅಸಮರ್ಥವಾಯಿತು. ಕಾನೂನು ವ್ಯವಸ್ಥೆ ಕುಸಿದು ಬಿದ್ದಿತು. ಯಾವ ರಕ್ತಪಾತಕ್ಕೂ ಎಡೆಗೊಡದಂತೆ ವಿಭಜನೆಯನ್ನು ನಡೆಸಿಕೊಡುವುದಾಗಿಯೂ, 50,000 ಬಲದ ಸೈನ್ಯದ ಸೇವೆಯನ್ನು ಈ ಉದ್ದೇಶಕ್ಕಾಗಿ ತಾವು ಉಪಯೋಗಿಸುವುದಾಗಿಯೂ ಮೌಂಟ್‌ಬೇಟನ್ ಅವರು ಘೋಷಿಸಿದ್ದರು. ಇದು ಸುಳ್ಳಾಯಿತು. ಆ ಸಂದರ್ಭದಲ್ಲಿ ನಡೆದ ಕೊಲೆ, ಅತ್ಯಾಚಾರ, ಲೂಟಿ ಇತ್ಯಾದಿಗಳು ಹಿಂದೆ ಎಂದೂ ನಡೆದಿರದಷ್ಟು ಪ್ರಮಾಣದಲ್ಲಿ ಆಯಿತು. ಈ ಪರಸ್ಪರ ದ್ವೇಷದ ಪರಿಣಾಮವಾಗಿ ಪಾಕಿಸ್ತಾನದಿಂದ ಹಿಂದೂಗಳು ಭಾರತಕ್ಕೆ ಬರಲಾರಂಭಿಸಿದರು; ಮುಸಲ್ಮಾನರು ಪಾಕಿಸ್ತಾನಕ್ಕೆ ಹೋಗಲಾರಂಭಿಸಿದರು. ಜೆ. ಬಿ. ಕೃಪಲಾನಿ ಅವರು ಹೇಳುವಂತೆ, "ಯಾವ ಜನರ ಪರಸ್ಪರ ವರ್ಗಾವಣೆಯನ್ನು ಗಾಂಧಿಜಿಯವರೂ ಮತ್ತು ಇತರ ನಾಯಕರು ತಪ್ಪಿಸಲು ಉದ್ದೇಶಿಸಿದ್ದರೋ ಆ ವರ್ಗಾವಣೆಯು ಪಂಜಾಬು, ಗಡಿನಾಡು ಹಾಗೂ ಸಿಂಧ್‌ಗಳ ವಿಷಯದಲ್ಲಿ ಈ ಹೊಸ ಹಿಂಸಾಕೃತ್ಯಗಳಿಂದ ತಾನೇತಾನಾಗಿ ಸಂಭವಿಸಿತು. ನಾವು ಇದನ್ನು ನಿರೀಕ್ಷಿಸಿರಲಿಲ್ಲ. ಈ ಸ್ಥಳಗಳಿಂದ ಹಿಂದೂ ನಿರಾಶ್ರಿತರು (Refugees) ಭಾರತಕ್ಕೆ ಅಧಿಕ ಸಂಖ್ಯೆಯಲ್ಲಿ ಬಂದರು. ದಾರಿಯಲ್ಲಿ ಇವರುಗಳು ಕೊಲ್ಲಲ್ಪಟ್ಟರು ಅಥವಾ ದರೋಡೆಗೆ ಒಳಗಾದರು. ಭಾರತದಿಂದ ಪಾಕಿಸ್ತಾನಕ್ಕೆ ಹೊರಟ ಮುಸಲ್ಮಾನರಿಗೂ ಇದೇ ಗತಿಯಾಯಿತು."[1] ನಿರಾಶ್ರಿತರ ಸಮಸ್ಯೆ ಊಹಿಸಲಾರದಷ್ಟು ಕಷ್ಟತರವಾಯಿತು. ಪಾಕಿಸ್ತಾನದಿಂದ ಡೆಲ್ಲಿಗೆ ಬಂದ ನಿರಾಶ್ರಿತರೇ ಆಗಿನ ಡೆಲ್ಲಿಯ ಜನಸಂಖ್ಯೆಯ ಕಾಲುಭಾಗದಷ್ಟು ಆದರು. ಭಾರತದ ಇತರ ಭಾಗಗಳಿಗೂ ನಿರಾಶ್ರಿತರು ಬಂದು ಸೇರಿದರು. ಇದರಿಂದ ರಾಜಧಾನಿಯಲ್ಲಿಯ ಮತ್ತು ದೇಶದ ಸಾಮಾಜಿಕ ರಾಜಕೀಯ, ಹಾಗೂ ಆರ್ಥಿಕ ವಾತಾವರಣ, ಹೊಸ ಸ್ವತಂತ್ರ ಸರ್ಕಾರಕ್ಕೆ ಪ್ರಥಮ ಭಾರಿ ಸಮಸ್ಯೆಯಾಯಿತು.[2] ಈ ಸಂದರ್ಭದಲ್ಲಿ ಹಿಂದೂ – ಮುಸ್ಲಿಂ ಸೌಹಾ

1. Kripalani, J. B. *Gandhi*, P. 291.

2. ವಿವರಗಳಿಗೆ ನೋಡಿ, Kripalani, J. B. *Ibid.* P P 292–293

ರ್ದತೆಯ ಪುನಃಸ್ಥಾಪನೆಯ ದೃಷ್ಟಿಯಿಂದ ಗಾಂಧಿಜಿಯವರು 1948ರ ಜನವರಿ 12ರಂದು ಅನಿರ್ದಿಷ್ಟ ಕಾಲದ ಉಪವಾಸ ಕೈಗೊಳ್ಳುವ ತಮ್ಮ ತೀರ್ಮಾನವನ್ನು ಬಹಿರಂಗಗೊಳಿಸಿದರು. ಉಪವಾಸ ಕೈಗೊಳ್ಳದಂತೆ ಅನೇಕ ನಾಯಕರು ಗಾಂಧಿಜಿಯವರನ್ನು ಪ್ರಾರ್ಥಿಸಿದರು. ಅವರು ಉಪವಾಸ ನಿಲ್ಲಿಸಲು ಹಾಕಿದ ಷರತ್ತುಗಳು ಇವು: ಸಿಖ್ ಹಾಗೂ ಹಿಂದೂಗಳು ಮುಸ್ಲಿಮರ ಮೇಲಿನ ಎಲ್ಲಾ ತರಹದ ಧಾಳಿಯನ್ನು ತಕ್ಷಣವೇ ನಿಲ್ಲಿಸಬೇಕು. ಭಾರತದಲ್ಲಿ ತಮಗೆ ರಕ್ಷಣೆ ಇಲ್ಲವೆಂಬ ಕಾರಣದಿಂದ ಒಬ್ಬ ಮುಸಲ್ಮಾನನೂ ಭಾರತ ಬಿಟ್ಟು ಹೋಗುವಂತಾಗಬಾರದು. ಮನೆಮಠಗಳನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋಗಿರುವವರನ್ನು ಹಿಂದಿರುಗಿ ಕರೆದುಕೊಂಡು ಬಂದು ಅವರನ್ನು ಸರಿಯಾಗಿ ನೆಲಸುವಂತೆ ಮಾಡಬೇಕು. ಬಿಟ್ಟು ಹೋದ ಮುಸಲ್ಮಾನರು ಖಾಲಿ ಮಾಡಿದ ಮಸೀದಿಗಳೆಲ್ಲವನ್ನೂ ಪುನಃ ಮುಸಲ್ಮಾನರ ವಶಕ್ಕೆ ವಹಿಸಿಕೊಡಬೇಕು. ಅನೇಕ ಹಿಂದೂ ಹಾಗೂ ಸಿಖ್ ಮುಖಂಡರುಗಳು ಈಷರತ್ತುಗಳನ್ನು ತಾವು ಪಾಲಿಸುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದ ಮೇಲೆ ಗಾಂಧಿಜಿಯವರು ಉಪವಾಸವನ್ನು ಮುಕ್ತಾಯಗೊಳಿಸಿದರು. ಆದರೆ, ಸಮಸ್ಯೆ ಅಷ್ಟು ಸುಲಭವಾಗಿ ಪರಿಹಾರವಾಗಲಿಲ್ಲ. ಪಾಕಿಸ್ತಾನದಲ್ಲಿ ಹಿಂದೂಗಳ ಮೇಲಿನ ಕ್ರೌರ್ಯ ಕಾರ್ಯಚರಣೆಗಳು ನಡೆಯುತ್ತಿದ್ದಾಗ ಹೇಗೆ ತಾನೆ ಭಾರತದ ಹಿಂದೂಗಳು ಹಾಗೂ ಸಿಖ್ ಜನತೆ ಸುಮ್ಮನಿದ್ದಾರು; ಈ ಸಮಸ್ಯೆ ಅನೇಕ ತಿಂಗಳುಗಳ ನಂತರವೇ ಒಂದು ಶಾಂತಸ್ಥಿತಿಗೆ ಬರುವಂತಾಯಿತು.

ವಿಭಜನೆಯಿಂದ ಉಂಟಾದ ಇತರ ಸಮಸ್ಯೆಗಳು

ಸೈನ್ಯ ಹಾಗೂ ಸೈನಿಕ ಆಸ್ತಿಪಾಸ್ತಿಗಳು, ಪೋಲೀಸು, ಆಡಳಿತ ಸಿಬ್ಬಂದಿ, ರೈಲ್ವೆ ಬಂಡವಾಳ ಮತ್ತು ಇತರ ಆಸ್ತಿಗಳ ಮತ್ತು ಹೊಣೆಗಾರಿಕೆಗಳನ್ನೂ ಭಾರತ ಪಾಕಿಸ್ತಾನಗಳೊಳಗೆ ಹಂಚುವುದು ಪ್ರಪಂಚದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಉದ್ಭವಿಸಿದ ಒಂದು ಸೂಕ್ಷ್ಮವಾದ ಹಾಗೂ ಕ್ಲಿಷ್ಟವಾದ ಸಮಸ್ಯೆಯಾಯಿತು.

ವಿಭಜನೆಯು ಉಪಖಂಡದ ಆರ್ಥಿಕತೆಯನ್ನೂ ಒಂದು ರೀತಿಯಲ್ಲಿ ಅಲ್ಲೋಲಕಲ್ಲೋಲಗೊಳಿಸಿತು. ಒಂದೂವರೆ ಶತಮಾನದ ಬ್ರಿಟಿಷರ

ಆಳ್ವಿಕೆಯು ಭಾರತದ ಉಪಖಂಡದ ಶ್ರೀಸಾಮಾನ್ಯನನ್ನು ಕಡುಬಡವನನ್ನಾಗಿ ಮಾಡಿದ್ದಿತು. ದೇಶದ ಸಂಪತ್ತನ್ನು ಬ್ರಿಟಿಷರ ಲಾಭಕ್ಕೆ ಉಪಯೋಗಿಸಿಕೊಳ್ಳಲಾಗಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಸ್ವತಂತ್ರ ಭಾರತವು ಶೀಘ್ರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಮಹಾಕಾರ್ಯವನ್ನು ನಿರ್ವಹಿಸಬೇಕಾಯಿತು. ವಿಭಜನೆಯಿಂದ ಆಹಾರಪದಾರ್ಥಗಳ, ಕಚ್ಚಾ ಸಾಮಗ್ರಿಗಳ ಮತ್ತು ಗಿರಣಿ ವಸ್ತುಗಳ ಒದಗಣೆ ಇತ್ಯಾದಿಗಳಲ್ಲಿ ಭಾರತ ಪಾಕಿಸ್ಥಾನಗಳೊಳಗೆ ತೀವ್ರ ಅಸಮತೋಲನ ಉಂಟಾಯಿತು.[1] ಅಲ್ಲದೆ ಭಾರತವು ತನ್ನ ಗಡಿ ರಕ್ಷಣೆಗಾಗಿ ರಕ್ಷಣಾವೆಚ್ಚವನ್ನು ಹೆಚ್ಚಿಸಿಕೊಳ್ಳಬೇಕಾಯಿತು. ಪಾಕಿಸ್ತಾನವೂ ಹೀಗೆಯೇ ತನ್ನ ರಕ್ಷಣಾ ವೆಚ್ಚವನ್ನು ಹೆಚ್ಚಿಸಿಕೊಳ್ಳಬೇಕಾಯಿತು. ಬಾಂಗ್ಲಾದೇಶವೂ ಪಾಕಿಸ್ತಾನದಿಂದ ಪ್ರತ್ಯೇಕವಾದ ನಂತರ ಈ ದೇಶವೂ ಪ್ರತ್ಯೇಕವಾಗಿ ರಕ್ಷಣಾವೆಚ್ಚ ಮಾಡಬೇಕಾಯಿತು. ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳ ಗಡಿ ಭದ್ರತೆಗಾಗಿ ಭಾರತವು ರಕ್ಷಣಾವೆಚ್ಚ ಮಾಡಬೇಕಾಗಿಲ್ಲದಿದ್ದ ಸಂದರ್ಭವಿದ್ದಿದ್ದರೆ - ಅಂದರೆ - ಅಖಂಡ ಭಾರತವೇ ಇದ್ದಿದ್ದರೆ – ಭಾರತದ ರಾಷ್ಟ್ರೀಯ ವರಮಾನ ಈಚೆಗೆ ಆಗಿರುವುದಕ್ಕಿಂತ ವರ್ಷಕ್ಕೆ ಶೇಕಡ 3½ ಯಿಂದ 4 ರಷ್ಟು ಹೆಚ್ಚು ಪ್ರಮಾಣದಲ್ಲಿ ಆಗಿರುತ್ತಿತ್ತೆಂದೂ ಪಾಕಿಸ್ತಾನ, ಬಾಂಗ್ಲಾದೇಶಗಳೂ ಈ ಹೆಚ್ಚುವರಿಯಲ್ಲಿ ಭಾಗ ಹೊಂದಿರುತ್ತಿದ್ದುವೆಂದೂ ರಕ್ಷಣಾ ಅಧ್ಯಯನ ಕುರಿತ ಅಂತರರಾಷ್ಟ್ರೀಯ ಸಂಸ್ಥೆಯು 1970ರ ದಶಕದ ತನ್ನ ವರದಿಯಲ್ಲಿ ಹೇಳಿರುವುದು.[2] ವಿಭಜನೆಯಿಂದ ಭಾರತದ ಆರ್ಥಿಕಾಭಿವೃದ್ಧಿ ಸಮಸ್ಯೆ ಹೆಚ್ಚು ಕಷ್ಟವಾಯಿತಾದರೂ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಮ್ಮ ವೀರನಾಯಕರು ಆಧುನಿಕ ಭಾರತನಿರ್ಮಾಣ ಕಾರ್ಯದಲ್ಲಿಯೂ ತಮ್ಮ ದಕ್ಷತೆಯನ್ನು ತೋರಿಸಿದರು. ದೇಶಕ್ಕೆ ಉತ್ತಮವಾದ ಸಂವಿಧಾನ ರಚನೆಯ ಕಾರ್ಯದಲ್ಲಿ ಬಿ. ಆರ್. ಅಂಬೇಡ್ಕರ್ ಹಾಗೂ ಸಹೋದ್ಯೋಗಿಗಳೂ, ಶೀಘ್ರ ಆರ್ಥಿಕಾಭಿವೃದ್ಧಿಗೆ ಯೋಜನಾ ವಿಧಾನವನ್ನು ಆರಂಭಿಸುವುದರಲ್ಲಿ ಜವಾಹರ್‌ಲಾಲ್

---

1. ವಿಭಜನೆಯ ಈ ವಿಧದ ಪರಿಣಾಮಗಳ ವಿವರಣೆಗೆ ನೋಡಿ: Vakil, C.N., *Economic Consequences of Divided India.* Vora, Bombay, 1950.
2. Quoted in Seshadri, H. V., *op. cit.*, P 263

ನೆಹರೂ ಹಾಗೂ ಅವರ ಮಂತ್ರಿಮಂಡಲ ವರ್ಗದವರೂ ಯಶಸ್ವಿಯಾಗಿರುತ್ತಾರೆ. ಆರ್ಥಿಕ ಸಮಸ್ಯೆಗಳು ಸ್ವಾತಂತ್ರ್ಯ ಚಳುವಳಿಯ ವೀರರಿಗೆ ಹೊಸದಾಗಿರಲಿಲ್ಲ. ಯೋಜನೆಯ ಬಗ್ಗೆಯೂ ಕಾಂಗ್ರೆಸ್ಸು ರಚಿಸಿದ್ದ ರಾಷ್ಟ್ರೀಯ ಯೋಜನಾ ಸಮಿತಿಯು ಆಳವಾದ ಅಧ್ಯಯನ ನಡೆಸಿ ತನ್ನ ವರದಿಗಳನ್ನು ಹಿಂದೆಯೇ ಸಿದ್ಧಪಡಿಸಿದ್ದಿತು. ಈ ಸಮಿತಿಯ ಅಧ್ಯಕ್ಷರಾಗಿದ್ದ ಜವಾಹರ್‌ಲಾಲ್ ನೆಹರೂ ಅವರು ಯೋಜನೆಗಳ ಸಮಸ್ಯೆಗಳನ್ನು ಚೆನ್ನಾಗಿ ಅರಿತಿದ್ದರು. ರಾಜ್ಯಾಂಗ ರಚನಾ ಸಮಿತಿಯು ಸಿದ್ಧಪಡಿಸಿದ ಹೊಸ ಭಾರತದ ಗಣರಾಜ್ಯ ಸಂವಿಧಾನವನ್ನು 1950ರ ಜನವರಿ 26ರಂದು ಜಾರಿಗೆ ತರಲಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು 1951ರಲ್ಲಿ ಪ್ರಾರಂಭಿಸಲಾಯಿತು.

ಸಮಾಪ್ತಿ

ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸವು ಉಪಖಂಡದ ವಿಭಜನೆಯಲ್ಲಿ ಪರ್ಯವಸಾನ ಆದುದು ಭಾರತ ಹಾಗೂ ಪಾಕಿಸ್ತಾನಗಳೆರಡರ ದೃಷ್ಟಿಯಿಂದಲೂ ವಾಸ್ತವವಾಗಿ ದುರದೃಷ್ಟಕರವೆಂದು ಹೇಳಬಹುದು. ಈ ಎರಡೂ ರಾಷ್ಟ್ರಗಳ ಜನತೆಯ ಕ್ಷೇಮಾಭ್ಯುದಯವು ಈ ರಾಷ್ಟ್ರಗಳ ಪರಸ್ಪರ ಸ್ನೇಹ ಹಾಗೂ ಪರಿಣಾಮಕಾರಿ ಪರಸ್ಪರ ಆರ್ಥಿಕ ಸಹಕಾರಗಳನ್ನು ಅವಲಂಬಿಸಿದೆ. ಇವುಗಳ ಇಂದಿನ ರಾಜಕೀಯ ಪ್ರತ್ಯೇಕತೆಯನ್ನು ಅಳಿಸಿ ಪುನಃ ಇವೆರಡೂ – ಬಾಂಗ್ಲಾದೇಶವೂ ಸೇರಿದಂತೆ – ಒಂದೇ ರಾಷ್ಟ್ರವಾಗುವುದನ್ನು ನಾವು ನಿರೀಕ್ಷಿಸಲಾಗುವುದಿಲ್ಲವಾದರೂ,[1] ಎರಡನೇ ಯುದ್ಧೋತ್ತರ ಕಾಲದಲ್ಲಿ ಯೂರೋಪ್, ದಕ್ಷಿಣ ಅಮೆರಿಕ, ಆಫ್ರಿಕ ಇಂತಹ ಪ್ರಪಂಚ ಭಾಗಗಳಲ್ಲಿ ಕೆಲಕೆಲವು ನೆರೆಹೊರೆಯ ರಾಷ್ಟ್ರಗಳು ನಿರಾತಂಕ ವ್ಯಾಪಾರ ಕ್ಷೇತ್ರ (Free Trade Area), ಹೊರ ಸುಂಕ ಒಕ್ಕೂಟ (Costoms Union), ಸಾರ್ವ

---

1. ಭಾರತ ಪಾಕಿಸ್ತಾನಗಳು ಪುನಃ ಒಂದಾಗಿ ಅಖಂಡ ಭಾರತದ ಪುನರ್ಜನ್ಮವಾಗುವುದೆಂದು ನಂಬಿರುವ ಗಣ್ಯವ್ಯಕ್ತಿಗಳೂ ಇದ್ದಾರೆ. ಉದಾಹರಣೆಗೆ, ಮಹಾಯೋಗಿ ಅರವಿಂದೊ ಘೋಷ್. ನೋಡಿ : Sri Arobindo, *Complete Works, Vol, 26* PP 404-405

ತ್ರಿಕ ಮಾರುಕಟ್ಟೆ (Common Market) [1] ಇತ್ಯಾದಿ ಏರ್ಪಾಡುಗಳ ಮೂಲಕ ಪರಸ್ಪರ ಆರ್ಥಿಕ ಸಂಘಟನೆ ವ್ಯವಸ್ಥೆಗಳನ್ನು ಮಾಡಿಕೊಂಡಿರುವಂತೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಬರ್ಮಾ, ಥಾಯಿಲೆಂಡ್, ಮಲೇಶಿಯಾ, ಅಫ್ಘಾನಿಸ್ತಾನ, ಶ್ರೀಲಂಕಾ ಇತ್ಯಾದಿ ರಾಷ್ಟ್ರಗಳು ಸೇರಿ ಯಾವುದಾದರೊಂದು ಮಾದರಿಯ ಆರ್ಥಿಕ ಸಂಘಟನಾ ವ್ಯವಸ್ಥೆ ಮಾಡಿಕೊಂಡರೆ ಇವೆಲ್ಲಾ ರಾಷ್ಟ್ರಗಳ ದೃಷ್ಟಿಯಿಂದಲೂ ಅತ್ಯುತ್ತಮ ಆರ್ಥಿಕ ಏರ್ಪಾಡು ಆದಂತೆ ಆಗುವುದಲ್ಲದೆ ಪ್ರಪಂಚದ ರಾಜಕೀಯ ದೃಷ್ಟಿಯಿಂದಲೂ ಅತ್ಯಂತ ಭಾವಗರ್ಭಿತವಾದ ಬೆಳವಣಿಗೆಯಾಗುವುದು.

1985ರ ಕೊನೆಯಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಭೂತಾನ, ನೇಪಾಳ, ಮಾಲ್ಡೈವ್ಸ್ ಹಾಗೂ ಶ್ರೀಲಂಕಾ ರಾಷ್ಟ್ರಗಳ ಮುಖಂಡರುಗಳು ಸಭೆ ಸೇರಿ 'ಪ್ರಾದೇಶಿಕ ಸಹಕಾರಕ್ಕೆ ದಕ್ಷಿಣ ಏಷ್ಯಾ ಸಂಘ' (ಪ್ರಾಸದಏಸಂ) South Asian Association for Regional Cooperation - (SAARC) ಎಂಬ ಸಂಸ್ಥೆಯನ್ನು ಸ್ಥಾಪಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ತರುವಾಯ 1986 ರ ನವೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ 'ಪ್ರಾಸದಏಸಂ'ನ ಶೃಂಗಸಭೆಯಲ್ಲಿ

---

೧. 'ನಿರಾತಂಕ ವ್ಯಾಪಾರ ಕ್ಷೇತ್ರ'ದಲ್ಲಿ ಒಟ್ಟುಗೂಡುವ ರಾಷ್ಟ್ರಗಳು ತಂತಮ್ಮೊಳಗೆ ಅನಿರ್ಬಂಧಿತವಾಗಿ ಆಮದು ರಫ್ತು ವ್ಯಾಪಾರ ನಡೆಸಬಹುದು. ಆದರೆ, ಇತರ ರಾಷ್ಟ್ರಗಳೊಡನೆ ವ್ಯಾಪಾರ ನಡೆಸುವಾಗ, ಒಂದೊಂದು ಸದಸ್ಯ ರಾಷ್ಟ್ರವೂ ತನ್ನದೇ ಆದ ಹೊರ ವ್ಯಾಪಾರ ಸುಂಕವನ್ನು ಹೊಂದಿರುವುದು. ಹೊರವ್ಯಾಪಾರ ಸುಂಕ ಒಕ್ಕೂಟದಲ್ಲಿ ಸದಸ್ಯರಾಷ್ಟ್ರಗಳು ತಂತಮ್ಮೊಳಗೆ ನಿರಾತಂಕವಾಗಿ ಆಮದು ರಫ್ತು ವ್ಯಾಪಾರ ಮಾಡುವುದರ ಜೊತೆಗೆ ಇತರ ರಾಷ್ಟ್ರಗಳೊಡನೆ ನಡೆಸುವ ವ್ಯಾಪಾರಕ್ಕೆ ಎಲ್ಲಾ ಸದಸ್ಯ ರಾಷ್ಟ್ರಗಳೂ ಏಕರೂಪದ ಆಮದು ರಫ್ತು ಸುಂಕವನ್ನು ಹೊಂದಿರುವುವು. 'ಸಾರ್ವತ್ರಿಕ ಮಾರುಕಟ್ಟೆ ಏರ್ಪಾಡಿನಲ್ಲಿ' ಸದಸ್ಯರಾಷ್ಟ್ರಗಳೊಳಗೆ ಸರಕುಗಳ ನಿರಾತಂಕ ವ್ಯಾಪಾರದ ಜೊತೆಗೆಯೇ ಉತ್ಪಾದನಾಂಗಗಳಿಗೂ (Factors of Production) ನಿರಾತಂಕವಾಗಿ ಸದಸ್ಯರಾಷ್ಟ್ರಗಳೊಳಗೆ ಚಲಿಸುವ ಅವಕಾಶವಿರುವುದು. [ಅಂತರರಾಷ್ಟ್ರೀಯ ಆರ್ಥಿಕ ಸಂಘಟನೆಗಳ ವಿವರಣೆಗೆ ಈ ಲೇಖಕನ ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗಳು, ಮೈಸೂರು ವಿಶ್ವವಿದ್ಯಾನಿಲಯ ಅಧ್ಯಾಯ ೧೪ ನೋಡಬಹುದು.]

ಅನುಮೋದಿಸಲಾದ ಉದ್ದೇಶಗಳನ್ನು ಕುರಿತ ಘೋಷಣೆಯೂ, 1987ರ ಜನವರಿಯಲ್ಲಿ ನೇಪಾಳದ ಖಟ್ಮಂಡುವಿನಲ್ಲಿ ಸ್ಥಾಪನೆಯಾದ ಖಾಯಂ ಕಛೇರಿಯೂ ಈ ಪ್ರಾದೇಶಿಕ ಸಂಘಕ್ಕೆ ಭದ್ರ ತಳಪದಿ ಹಾಕಿದಂತಾಗಿದೆ. ಅಲ್ಲದೆ, ಈ ಸಂಘದ ಸದಸ್ಯ ರಾಷ್ಟ್ರಗಳೆಲ್ಲವೂ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಪರಸ್ಪರ ಸಂಬಂಧಗಳನ್ನು ನಿಕಟಗೊಳಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲು ಒಪ್ಪಿವೆ.[1] ಹೀಗೆ ಬೆಳೆಯಲಾರಂಭಿಸಿರುವ ಸ್ನೇಹಪರತೆ ಮತ್ತು ವಿಶ್ವಾಸಯುತ ಭಾವನೆಗಳಿಂದ ಉಂಟಾಗುವ ಪ್ರಯೋಜನಗಳು ಎಲ್ಲಾ ಸದಸ್ಯ ರಾಷ್ಟ್ರಗಳ ಜನತೆಗೂ ಲಭಿಸುವುವು. 'ಪ್ರಾಸದವಿಸಂ' ಉದ್ದೇಶಗಳು ಸಫಲವಾಗುತ್ತಾ ಬಂದರೆ, ಕಾಲಕ್ರಮೇಣವಾಗಿ, ಈ ಸಂಘದ ರಾಷ್ಟ್ರಗಳೂ, 'ಏಸಿಯನ್' (ASEAN) ರಾಷ್ಟ್ರಗಳೂ[2] ಪರಸ್ಪರ ಹತ್ತಿರ ಬರುವಂತಾಗಿ ಪ್ರಪಂಚದ ಈ ಭಾಗದಲ್ಲಿ ಹೆಚ್ಚು ವಿಸ್ತಾರವಾದ ಅಂತರ ರಾಷ್ಟ್ರೀಯ ಸಂಘಟನೆ ಏರ್ಪಡಬಹುದೆಂದು ನಿರೀಕ್ಷಿಸಬಹುದು.

---

1. For full details of these measures, *See* 1) *The SAARC CHARTER* and *ii) The Bangalore Declaration of the SAARC* (C M 2/5/ Rev 1/CORR/ Annex IV)

2. Member countries of the Association of the South-East Asian Nations (ASEAN) are Indonesia, Malaysia, the Philippines, Singapore and Thailand.

ಅ ನು ಬಂ ಧ

ಮೈಕೇಲ್ ಓಡಯರ್‌ನ ಪಂಜಾಬ್ ಆಳ್ವಿಕೆಯ ಘೋರ ದುಷ್ಕೃತ್ಯಗಳು (1919)

ಉಪ್ಪಿನ ಸತ್ಯಾಗ್ರಹಿಗಳ ಹಾಗೂ ಇತರ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಪೋಲೀಸರ ದೌರ್ಜನ್ಯ,

ಜೈಲುಗಳಲ್ಲಿ ಸ್ವಾತಂತ್ರ್ಯ ಹೋರಾಟದ ವೀರರು ಅನುಭವಿಸಿದ ಕಠಿಣ ಪರಿಸ್ಥಿತಿಗಳು –

ಇವುಗಳ ಸ್ಥೂಲ ಪರಿಚಯ ಕೊಡಲು ಈ ಅನುಬಂಧ ದಲ್ಲಿ ಪ್ರಯತ್ನಿಸಲಾಗಿದೆ.

ಮೈಕೇಲ್ ಓಡಯರ್‌ನ ಪಂಜಾಬ್ ಆಳ್ವಿಕೆಯ ಘೋರ ದುಷ್ಕೃತ್ಯಗಳು – 1919.

1919ರ ಏಪ್ರಿಲ್ 15ರಂದು ಪಂಜಾಬಿನಲ್ಲಿ ಲಷ್ಕರಿ ಶಾಸನವನ್ನು (Martial Law) ಜಾರಿಗೆ ತರಲಾಯಿತು. ಪ್ರಾಂತ್ಯದಿಂದ ಹೊರಗೆ ಹೋಗುವುದರ ಮೇಲೆಯೂ, ಪ್ರಾಂತ್ಯಕ್ಕೆ ಬರುವವರ ಮೇಲೆಯೂ, ವೃತ್ತ ಪತ್ರಿಕೆಗಳು ಸ್ವತಂತ್ರವಾಗಿ ಸಮಾಚಾರಗಳನ್ನು ಪ್ರಕಟಿಸುವುದರ ಮೇಲೆಯೂ ಕಟ್ಟುನಿಟ್ಟಾದ ನಿರ್ಬಂಧಗಳನ್ನು ವಿಧಿಸಲಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಯಾವುದೇ ವಿಧದಲ್ಲಿ ಭಾಗವಹಿಸಿದವರನ್ನು ಚಿತ್ರಹಿಂಸೆಗೆ ಒಳಪಡಿಸಲಾಯಿತು. ಓಡಯರ್ ಅವರ ಕಾಲದ ಕಾರ್ಯಗಳ ಸಾರಾಂಶ ವನ್ನು ಅಖಿಲ ಭಾರತ ಸೌಮ್ಯವಾದಿಗಳ (Moderates) ಸಮ್ಮೇಳನದ ಅಧ್ಯಕ್ಷರಾದ ಸರ್. ಪಿ. ಎಸ್. ಶಿವಸ್ವಾಮಿಯವರು ಹೀಗೆ ವರ್ಣಿಸಿರುತ್ತಾರೆ.

"ಜಲಿಯನ್‌ವಾಲಾ ಬಾಗ್‌ನಲ್ಲಿ ನೆರೆದಿದ್ದ ಜನಸ್ತೋಮಕ್ಕೆ ಚದರಿ ಹೋಗುವ ಅವಕಾಶವನ್ನು ನೀಡದೆ ನಿಶ್ಯಸ್ತ್ರರಾಗಿದ್ದ ನೂರಾರು ಜನರನ್ನು ಒಟ್ಟೊಟ್ಟಾಗಿ ಕೊಲೆ ಮಾಡಿದುದು, ಚದುರಿಹೋಗಲು ಪ್ರಯತ್ನಿಸಿ ಓಡಿ ಹೋಗುತ್ತಿದ್ದ ಜನರ ಮೇಲೆ ಮೆಷೀನ್‌ಗನ್ನನ್ನು ಪ್ರಯೋಗಿಸಿ ಇದರಿಂದ ಸತ್ತವರ ಹಾಗೂ ಗಾಯಗೊಂಡವರ ಪರಿಸ್ಥಿತಿಯನ್ನು ಸ್ವಲ್ಪವೂ ಗಮನಕ್ಕೆ ತಂದುಕೊಳ್ಳದಂತೆ ಜನರಲ್ ಡಯರ್ ಅವರು ಉಪೇಕ್ಷೆಯಿಂದ ಇದ್ದುದು, ಜನರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಛಡಿಏಟುಗಳನ್ನು ಕೊಡುವುದು, ಸಹಸ್ರಾರು ವಿದ್ಯಾರ್ಥಿಗಳನ್ನು ಪ್ರತಿ ದಿನವೂ ಹದಿನಾರು ಮೈಲಿ ದೂರ ನಡೆದು ಬಂದು ಅಲ್ಲಿ ತಮ್ಮ ಹಾಜರಿಯನ್ನು ಗುರುತು ಹಾಕಿಸುವ ಆಜ್ಞೆ ಮಾಡಿದುದು, 500 ವಿದ್ಯಾರ್ಥಿಗಳನ್ನೂ, ಪ್ರಾಧ್ಯಾಪಕರನ್ನೂ ಬಂಧಿಸಿಟ್ಟು ದುದು, 5 ರಿಂದ 7 ವರ್ಷ ವಯೋಗುಂಪಿನ ಮಕ್ಕಳನ್ನು ಬ್ರಿಟಿಷ್ ಬಾವುಟಕ್ಕೆ ಸಲಾಮು ಹಾಕುವಂತೆ ನಿರ್ಬಂಧಿಸಿದುದು. ಲಷ್ಕರಿ ಶಾಸನಕ್ಕೆ ಸಂಬಂಧಿಸಿದ ಜಾಹಿರಾತು ಪತ್ರಗಳನ್ನು ಅಂಟಿಸಿದ್ದ ಮನೆಗಳವರು ಈ ಪತ್ರ ಗಳನ್ನು ಯಾರೂ ಕೀಳದಂತೆ, ಕೆಡಿಸದಂತೆ ನೋಡಿಕೊಳ್ಳಬೇಕೆಂಬ ನಿಯಮ ಜಾರಿಗೆ ತಂದುದು. ವಿವಾಹೋತ್ಸವದಲ್ಲಿ ತೊಡಗಿದ್ದ ಇಡೀ ಗುಂಪಿನವ ರನ್ನೂ ಥಳಿಸಿದುದು, ಅಂಚೆ ಮೂಲಕ ಬರುವ ಪತ್ರಗಳನ್ನು ಒಡೆದು

ನೋಡಿ ಇವುಗಳನ್ನು ಪರೀಕ್ಷಿಸುವುದು, ಬಾದ್‌ಶಾಹಿ ಮಸೀದಿಯನ್ನು ಆರು ವಾರಗಳು ಮುಚ್ಚಿದುದು, ನಿಷ್ಕಾರಣವಾಗಿ ಜನರನ್ನು ಬಂಧಿಸಿದುದು, ಇಸ್ಲಾಮಿಕ್ ಶಾಲೆಯಲ್ಲಿನ ಆರು ಅತ್ಯಂತ ದೊಡ್ಡ ಹುಡುಗರನ್ನು ಥಳಿಸಿದುದು, ಬಂಧಿಸಲ್ಪಟ್ಟ ಜನರನ್ನು ಕೂಡಿಸಲು ಎಲ್ಲರೂ ನೋಡಲು ಬರುವಂತಹ ಒಂದು ಪಂಜರವನ್ನು ನಿರ್ಮಿಸಿದುದು, ತೆವಳುವುದು, ನೆಗೆಯುವುದು, ಕೈಗೆ ಬೇಡಿಹಾಕಿ ಜನರನ್ನು ಒಟ್ಟಿಗೆ ಹಗ್ಗದಲ್ಲಿ ಕಟ್ಟಿ ಅವರನ್ನು ಹದಿನೈದು ಗಂಟೆಗಳ ಕಾಲ ತೆರೆದ ಟ್ರಕ್ಕುಗಳಲ್ಲಿಟ್ಟುದುದು, ನಿಶ್ಶಸ್ತ್ರ ಜನರ ಮೇಲೆ ಗುಂಡು ಹಾರಿಸಿದುದು, ಜನರ ಆಸ್ತಿಯನ್ನು ನಾಶಮಾಡುವುದು, ಹಿಂದೂ ಮುಸ್ಲಿಂ ಐಕ್ಯತೆಯಿಂದ ಏನಾಗುವುದೆಂಬುದನ್ನು ಪ್ರದರ್ಶಿಸಲು ಒಬ್ಬ ಹಿಂದೂ ಒಬ್ಬ ಮುಸ್ಲಿಂ ಹೀಗೆ ಇಬ್ಬಿಬ್ಬರನ್ನು ಜೋಡಿಸಿ ಅವರ ಕೈಗಳಿಗೆ ಬೇಡಿಗಳನ್ನು ಹಾಕಿದುದು, ಭಾರತೀಯರ ಮನೆಗಳಿಗೆ ವಿದ್ಯುಚ್ಛಕ್ತಿ ಹಾಗೂ ನೀರು ಸರಬರಾಯಿಯನ್ನು ನಿಲ್ಲಿಸಿದುದು, ಭಾರತೀಯರ ಮನೆಗಳಲ್ಲಿದ್ದ ವಿದ್ಯುಚ್ಛಕ್ತಿ ಬೀಸಣಿಗೆಗಳನ್ನು ತೆಗೆದು ಐರೋಪ್ಯರ ಉಪಯೋಗಕ್ಕಾಗಿ ಕೊಟ್ಟುದುದು, ಭಾರತೀಯರು ಹೊಂದಿದ್ದ ವಾಹನಗಳನ್ನು ವಶಪಡಿಸಿಕೊಂಡು ಇವುಗಳನ್ನು ಐರೋಪ್ಯರ ಉಪಯೋಗಕ್ಕೆ ಕೊಟ್ಟುದುದು, ಲಷ್ಕರಿ ಶಾಸನದ ಅವಧಿ ಮುಗಿಯುವುದರ ಒಳಗೆ ಇದ್ದ ಮೊಕದ್ದಮೆಗಳೆಲ್ಲವನ್ನೂ ಆತುರ ಆತುರವಾಗಿ ತೀರ್ಮಾನಿಸಿದುದು, ಇವು ಪಂಜಾಬಿನಲ್ಲಿ ಸಾರ್ವಜನಿಕರನ್ನು ಚಕಿತಗೊಳಿಸಿದ ಭಯಂಕರ ಲಷ್ಕರಿ ಶಾಸನ ಆಡಳಿತದ ಅನೇಕ ಕೃತಗಳಲ್ಲಿ ಕೆಲವು ಮಾತ್ರವಾಗಿವೆ."

(ನೋಡಿ Tendulkar, D. G., *Mahatma*, Vol I PP 258-259)

ಉಪ್ಪಿನ ಸತ್ಯಾಗ್ರಹಿಗಳ ಮೇಲೆ ಪೋಲೀಸರ ದೌರ್ಜನ್ಯ ಕುರಿತ ಕೆಲವು ವಿಷಯಗಳು

11ನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಗಾಂಧಿಜಿಯವರು ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದ ನಂತರ ಸ್ವಯಂಸೇವಕರೂ ಇತರರೂ ಗುಂಪುಗುಂಪಾಗಿ ಸೇರಿಕೊಂಡು ಉಪ್ಪು ತಯಾರಿಕಾ ಕೇಂದ್ರಗಳ ಮೇಲೆ ಧಾಳಿ ನಡೆಸಿದರು. ಇದನ್ನು ನೋಡಲು ಸಾವಿರಾರು ಜನ ಪ್ರೇಕ್ಷಕರು ಸೇರುತ್ತಿದ್ದರು. ಉದಾಹರಣೆಗೆ 1930ರ ಜೂನ್‌ನಲ್ಲಿ ವಡಾಲ ಉಪ್ಪು ತಯಾರಿಕಾ ಕೇಂದ್ರ ಮುತ್ತಿಗೆಯಲ್ಲಿ 15000 ಜನರು ಪಾಲ್ಗೊಂಡಿದ್ದರು.

ಕರ್ನಾಟಕದ ಸಾನಿಕಟ್ಟ ಉಪ್ಪುತಯಾರಿಕಾ ಕೇಂದ್ರದ ಮೇಲಿನ 1930 ಹಾಗೂ 1932ರ ಧಾಳಿಗಳಲ್ಲಿ ಸುಮಾರು 10000 – 15000 ಜನರು ಭಾಗವಹಿಸಿ ಸಹಸ್ರಾರು ಮಣಗಳ ಉಪ್ಪನ್ನು ಅಲ್ಲಿಂದ ತೆಗೆದುಕೊಂಡು ಹೋದರು. ಇಂತಹ ಸಂದರ್ಭಗಳಲ್ಲಿ ಸರ್ಕಾರದ ಆದೇಶದ ಪ್ರಕಾರ ಪೋಲೀಸು ಹಾಗೂ ಮಿಲಿಟರಿ ದಳಗಳು ಹೇಗೆ ವರ್ತಿಸಿದುವೆಂಬುದನ್ನು ಕೆಳಗಿನ ಕೆಲವು ಗಣ್ಯವ್ಯಕ್ತಿಗಳ ವಿವರಣೆಯಿಂದ ತಿಳಿಯಬಹುದು.

"………. ಸತ್ಯಾಗ್ರಹಿಗಳನ್ನು ಚದುರಿಸಿ ಓಡಿಸಿದನಂತರ ಐರೋಪ್ಯ ಕುದುರೆಸವಾರರು ಕೈಯಲ್ಲಿ ಲಾಠಿಗಳನ್ನು ಹಿಡಿದುಕೊಂಡು ಧಾಳಿಗೆ ಬಂದಿದ್ದವರ ಗ್ರಾಮದಿಂದ ಧಾಳಿ ನಡೆಸಿದ ಸ್ಥಳದವರೆಗೂ ಕುದುರೆಯನ್ನು ಜೋರಾಗಿ ಓಡಿಸಿಕೊಂಡು ದಾರಿಯಲ್ಲಿ ಸಿಕ್ಕಿಸಿಕ್ಕಿದವರನ್ನೆಲ್ಲಾ ಹೊಡೆಯು ತ್ತಿದ್ದರು. ಅಷ್ಟೇ ಅಲ್ಲದೆ ಗ್ರಾಮದ ರಸ್ತೆಗಳಲ್ಲಿಯೂ ಗಂಡಸರು, ಹೆಂಗಸರು, ಮಕ್ಕಳು ಎಲ್ಲರನ್ನೂ ಚದುರಿಸಿದರು. ಇವರೆಲ್ಲರೂ ಓಡಿ ಹೋಗಿ ಮನೆಗಳಲ್ಲಿ ಅವಿತುಕೊಂಡರು. ತಪ್ಪಿಸಿಕೊಳ್ಳಲಾರದವರನ್ನು ಲಾಠಿಗಳಿಂದ ಹೊಡೆದರು".

(ಮಿ|| ಹುಸೇನ್, ಬೊಂಬಾಯಿ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಮತ್ತು ಜಿ. ಕೆ. ದೇವಧರ್, ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿ ಅಧ್ಯಕ್ಷರು,

(ನೋಡಿ : Pattabhi Sitaramayya, *op, cit*, P 676)

ದರ್‌ಸನಾ ಉಪ್ಪಿನ ತಯಾರಿಕಾ ಕೇಂದ್ರದ ಧಾಳಿ ಕಾಲದ ಘೋರ ದೃಶ್ಯಗಳನ್ನು ಕುರಿತು 'ನ್ಯೂಫ್ರೀಮನ್' ಎಂಬ ಪತ್ರಿಕೆಗೆ ಬರೆಯುತ್ತಾ ಮಿ. ವೆಬ್ ಮಿಲ್ಲರ್ ಎಂಬುವರು ಬರೆದುದು ಹೀಗಿದೆ :

"ಹದಿನೆಂಟು ವರ್ಷಗಳಲ್ಲಿ ಇಪ್ಪತ್ತೆರಡು ರಾಷ್ಟ್ರಗಳಲ್ಲಿ ಸಂಭವಿಸಿದ ಗಲಭೆಗಳು, ರಸ್ತೆಜಗಳಗಳು, ದಂಗೆಗಳು ಇವುಗಳ ಬಗ್ಗೆ ನಾನು ವರದಿ ಮಾಡಿರುತ್ತೇನೆ; ಆದರೆ ಅಲ್ಲೆಲ್ಲೂ ದರ್‌ಸಾನದಲ್ಲಿನಂತಹ ಭೀಕರ ದೃಶ್ಯ ಗಳನ್ನು ಕಂಡಿಲ್ಲ. ಈ ದೃಶ್ಯಗಳು ಕೆಲವು ವೇಳೆ ಎಷ್ಟು ಭೀಕರ ಹಾಗೂ ಮನೋವೇದಕವಾಗಿತ್ತೆಂದರೆ ತಕ್ಷಣವೇ ನಾನು ಅವುಗಳನ್ನು ನೋಡಲಾಗದೆ ತಿರುಗಬೇಕಾಗಿದ್ದಿತು, ಸ್ವಯಂಸೇವಕರ ಶಿಸ್ತು ಮಾತ್ರ ಆಶ್ಚರ್ಯಕರ

ವಿಷಯವಾಗಿದ್ದಿತು. ಅವರಲ್ಲಿ ಗಾಂಧಿಯವರ ಅಹಿಂಸಾತತ್ವ ಸಂಪೂರ್ಣವಾಗಿ ತುಂಬಿದ್ದಿದಂತೆ ಕಾಣುತ್ತಿತ್ತು."

(ನೋಡಿ : Pattabhi Sitaramayya, *op. cit.*, P 677)

ಕೆಲವು ಉಪ್ಪು ತಯಾರಿಕಾ ಕೇಂದ್ರಗಳ ಮುತ್ತಿಗೆಗಳ ಪ್ರೇಕ್ಷಕರಾಗಿದ್ದ 'ಡೆಯ್ಲಿ ಹೆರಾಲ್ಡ್' ಪತ್ರಿಕೆಯ ಜಾರ್ಜ್ ಸ್ಲೊಕೊಂಬೆ (George Slocombe) ಯ ವರದಿ ಇದು :

"ವಡಾಲಾ ಸಮೀಪದ ಜೆಟ್ಟವೊಂದರ ಬಂಡೆ ಮೇಲಿನಿಂದ ನಡೆಯುತ್ತಿದ್ದ ಘಟನೆಗಳನ್ನು ವೀಕ್ಷಿಸಿದೆ. ನಿಷ್ಠಾವಂತರೂ, ಸ್ನೇಹಪರರೂ ಮತ್ತು ದೇಶಪ್ರೇಮದಿಂದ ತುಂಬಿದ್ದವರೂ ಆಗಿದ್ದ ಸ್ವಯಂಸೇವಕರ ಹಾಗೂ ಅವರ ಬಗ್ಗೆ ಸಹಾನುಭೂತಿ ಹೊಂದಿದ್ದವರ ಜನರ ಮಧ್ಯೆ ನಿಂತು ದೇಶದ ಆಡಳಿತದ ಪ್ರತಿನಿಧಿಗಳು ಎಸಗುತ್ತಿದ್ದ ಅವಹೇಳನಕರವಾದ ಕಾರ್ಯಗಳನ್ನು ವೀಕ್ಷಿಸುವುದು ನನ್ನಂತಹ ಆಂಗ್ಲೇಯನಿಗೆ ಅವಮಾನಕರವಾಗಿದ್ದಿತು"

(ನೋಡಿ : Pattabhi Sitaramayya *Ibid*)

ಇತರ ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಪೋಲೀಸರ ದೌರ್ಜನ್ಯ

ಸತ್ಯಾಗ್ರಹಿಗಳ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯಗಳನ್ನು ಕುರಿತು ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಉದ್ಗ್ರಂಥದಲ್ಲಿ (ಹಿಂದೆ ಹೇಳಿದ ಗ್ರಂಥ) ಕೊಟ್ಟಿರುವ ವಿವರಗಳಿಂದ ಕೆಲವು ಭಾಗಗಳನ್ನು ಆಯ್ದು ಕೆಳಗೆ ಕೊಡಲಾಗಿದೆ.

"ದೌರ್ಜನ್ಯಗಳ ವಿವಿಧ ಮುಖಗಳ ವಿವರಣೆ ನಿಜವಾಗಿ ಕಷ್ಟ. ಸತ್ಯಾಗ್ರಹ ಚಳುವಳಿಯಂತೆಯೇ ಇದನ್ನು ದಮನ ಮಾಡಲು ಕೈಗೊಳ್ಳಲಾದ ಈ ದೌರ್ಜನ್ಯಗಳು ನಾನಾ ಬಗೆಯಾಗಿದ್ದವು" (ಪು. 682)

"ಚಳುವಳಿಯ ಆರಂಭಕಾಲದಲ್ಲಿ ಕಲ್ಕತ್ತಾದ ಸಾರ್ವಜನಿಕ ಪಾರ್ಕ್‌ವೊಂದರಲ್ಲಿ ಸೇರಿದ್ದ ಜನರೆಲ್ಲರನ್ನೂ ಅಲ್ಲೇ ಕೂಡಿ ಹಾಕಿಕೊಂಡು

ಅನಾಗರಿಕ ರೀತಿಯಲ್ಲಿ ಥಳಿಸಲಾಯಿತು. ಹೊರಗೆ ಹೋಗುವ ಗೇಟ್‌ಗಳಿಗೆ ಬೀಗ ಹಾಕಿ ಅಲ್ಲಿ ಪಹರೆ ಏರ್ಪಡಿಸಲಾಗಿದ್ದಿತು." (ಪು. 682)

"ಖಾದಿ ಧರಿಸಿದ ಅಥವಾ ಗಾಂಧಿಟೋಪಿ ಹಾಕಿದ ಜನರು ಪೇಟೆಗಳಲ್ಲಿ ವ್ಯಾಪಾರಕ್ಕಾಗಿ ಓಡಾಡುತ್ತಿದ್ದಾಗ ಅವರನ್ನು ಸುಮ್ಮನೆ ಹೊಡೆಯಲಾಯಿತು." (ಪು. 682)

ಇಂಗ್ಲೆಂಡಿನ ಅತಿ ಮುಖ್ಯ ಪತ್ರಿಕೆಗಳಲ್ಲಿ ಒಂದಾದ 'ಮ್ಯಾಂಚೆಸ್ಟರ್ ಗಾರ್ಡಿಯನ್'' ಎಂಬುದರ ಪ್ರತಿನಿಧಿಯಾಗಿದ್ದ ಮಿ. ಬ್ರೈಲ್ಸ್‌ಫರ್ಡ್ 1930 ರಲ್ಲಿ ಭಾರತದ ವಿವಿಧ ಗುಂಪುಗಳ ಚಳುವಳಿಯನ್ನೂ ಪೋಲೀಸರ ಕಾರ್ಯಾಚರಣೆಗಳನ್ನೂ ವೀಕ್ಷಿಸಿ ತಮ್ಮ ಪತ್ರಿಕೆಗೆ ದೀರ್ಘ ಲೇಖನವೊಂದನ್ನು ಬರೆದರು. ಈ ಲೇಖನದಿಂದ ಕೆಲವು ಆಯ್ದ ಭಾಗಗಳು ಹೀಗಿವೆ:

"ನಿಷೇಧಿಸಲಾದ ಸಭೆಗಳನ್ನು ಚದುರಿಸುವಾಗ ಪೋಲೀಸರು ಅನುಸರಿಸಿದ ಕಾರ್ಯದ ಬಗ್ಗೆ ಎಲ್ಲೆಲ್ಲೂ ದೂರುಗಳು ಕೇಳಿಬರುತ್ತಿವೆ. ಈ ಸಭೆಗಳನ್ನು ಅಧಿಕಾರಿಗಳು ನಿಷೇಧಿಸಿದುದೇ ತಪ್ಪು ಎಂಬುದು ನನ್ನ ಸ್ಪಷ್ಟ ಅಭಿಮತವಾಗಿದೆ. ಸೌಮ್ಯ ಭಾಷೆಯಲ್ಲಿ ಮಾಡಲಾದ ಈ ಭಾಷಣಗಳು ರಾಜ್ಯದ್ರೋಹವೆನ್ನಿಸಿಕೊಳ್ಳುವ ವಿಷಯಗಳನ್ನು ಹೇಳಿದುವಾದರೂ ಹಿಂಸೆಯನ್ನು ಇವು ಖಂಡಿಸಿದವು. ಇಂತಹ ಸಭೆಗಳನ್ನು ನಿಷೇಧಿಸದಿದ್ದರೆ ಯಾವ ಗಲಭೆಯೂ ಸಂಭವಿಸುತ್ತಿರಲಿಲ್ಲ .... ಆದರೆ, ವಾಸ್ತವವಾಗಿ ಒರಟು ಕ್ರಮಗಳಿಂದ ಸಭೆಗಳನ್ನು ಚದುರಿಸುವ ನೀತಿಯು, ಮುಖ್ಯವಾಗಿ ಬೊಂಬಾಯಿಯಲ್ಲಿ ನಗರದ ಜನರೆಲ್ಲರನ್ನೂ ಕೋಪಗೊಳಿಸಿತು. ಲಾಠಿಪೆಟ್ಟು ತಿನ್ನುವುದೇ ಜನರಿಗೆ ಒಂದು ಗೌರವದ ಪ್ರಶ್ನೆಯಾಯಿತು: ನೂರಾರು ಜನರು ಸ್ವಯಂಸೇವಕರು ಬಲಿದಾನ ಮಾಡುವ ಮನೋಭಾವ ತಾಳಿ ಲಾಠಿ ಏಟು ತಿನ್ನಲು ಮುಂದೆ ಬಂದರು............ ಕಲ್ಕತ್ತಾದಲ್ಲಿ ಶಾಂತಿಯುತ ಪ್ರತಿಭಟನಾ ಮೆರವಣಿಗೆಯಲ್ಲಿದ್ದವರನ್ನು ಪೋಲೀಸರು ಸಿಕ್ಕಕಡೆ ಹೊಡೆಯುತ್ತಿದ್ದುದನ್ನು ವಿಶ್ವವಿದ್ಯಾನಿಲಯದ ಕಟ್ಟಡದ ಮೇಲೆ ನಿಂತು ನೋಡುತ್ತಿದ್ದ ವಿದ್ಯಾರ್ಥಿಗಳು ಪೋಲೀಸರನ್ನು "ಹೇಡಿಗಳು" ಎಂದು ಕೂಗಿದರು. ಎರಡು ಗಂಟೆಯ ನಂತರ ಪೋಲೀಸರು ಒಬ್ಬ

ಆಂಗ್ಲ ಮೇಲಧಿಕಾರಿಯೊಡನೆ ವಿಶ್ವವಿದ್ಯಾನಿಲಯದ ಕ್ಲಾಸ್ ರೂಮು ಗಳನ್ನು ಪ್ರವೇಶಿಸಿ ಅಲ್ಲಿ ಕುಳಿತಿದ್ದ ವಿದ್ಯಾರ್ಥಿಗಳನ್ನು ರೂಮಿನ ಗೋಡೆಯೆಲ್ಲವೂ ರಕ್ತಮಯವಾಗುವಂತೆ ಸಿಕ್ಕಾಪಟ್ಟೆ ಹೊಡೆದರು. ವಿಶ್ವವಿದ್ಯಾನಿಲಯವು ಇದನ್ನು ಪ್ರತಿಭಟಿಸಿತು ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲ...........ಇಂತಹುದೇ ಘಟನೆಯು ಲಾಹೋರಿನಲ್ಲಿ ಸಂಭವಿಸಿತು. ಪೋಲೀಸರು ಒಂದು ಕಾಲೇಜನ್ನು ಮುತ್ತಿ ಅಲ್ಲಿಯ ಒಂದು ರೂಮಿನಲ್ಲಿದ್ದ ಬರೀ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ ಪ್ರಾಧ್ಯಾಪಕರನ್ನೂ ಹೊಡೆದರು...........ಬಂಗಾಳದ ಕಾಂಟೈ ಎಂಬ ಗ್ರಾಮದಲ್ಲಿ ಏನೂ ತೊಂದರೆ ಮಾಡದ ಜನರ ಒಂದು ಗುಂಪನ್ನು ಚದುರಿಸುವ ಸಂದರ್ಭದಲ್ಲಿ ಐದು ಜನ ಗ್ರಾಮಸ್ಥರು ಕೆರೆಗೆ ತಳ್ಳಲ್ಪಟ್ಟು ಅದರಲ್ಲೆ ಮುಳುಗಿ ಹೋದರು. ಮೀರತ್‌ನಲ್ಲಿ ಪೋಲೀಸರು ಚದುರಿಸಿದ ಸಭೆಯಲ್ಲಿ ಭಾಷಣಕಾರರಾಗಿದ್ದ ಪ್ರಮುಖ ಲಾಯರ್ ಒಬ್ಬರನ್ನು ಭೇಟಿ ಮಾಡಿದೆ. ಇವರನ್ನು ಬಂಧಿಸಿದಾಗ ಪೋಲೀಸರು ಇವರನ್ನು ಹೊಡೆದುದಲ್ಲದೆ ಆ ಸ್ಥಿತಿಯಲ್ಲಿ ಅವರನ್ನು ಗುಂಡಿನಿಂದ ಹೊಡೆದಾಗ ಇವರ ಕೈ ಕತ್ತರಿಸಬೇಕಾಯಿತು.......... ಗುಜರಾತಿನ ಬರ್ದೋಲಿ ಮತ್ತು ಕೈರಾ ಜಿಲ್ಲೆಗಳಲ್ಲಿ ರೈತವರ್ಗದವರು ಪ್ರತಿಯೊಬ್ಬರೂ ಭೂಕಂದಾಯ ಕೊಡಲು ನಿರಾಕರಿಸಿದರು. ಇದಕ್ಕಾಗಿ ಸರ್ಕಾರವು ಇವರ ಜಮೀನು, ಎಮ್ಮೆಗಳು, ನೀರಾವರಿ ಪಂಪುಗಳು ಇತ್ಯಾದಿ ಎಲ್ಲವನ್ನೂ ವಶಪಡಿಸಿಕೊಂಡು ಕೇವಲ ಅತ್ಯಲ್ಪ ಬೆಲೆಗಳಿಗೆ ಮಾರಲಾಯಿತು. ಕೇವಲ 40 ರೂಪಾಯಿ ತೆರಿಗೆಗಾಗಿ ಇವರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡಂತಾಯಿತು .... ಒಂದು ಗ್ರಾಮದಲ್ಲಿ ಮರಗಳ ಹಾಗೂ ಮನೆಗಳ ಮೇಲೆ ಹಾರಿಸಲಾಗಿದ್ದ ರಾಷ್ಟ್ರಧ್ವಜಗಳನ್ನೂ, ಕಾಂಗ್ರೆಸ್ ಅಂಟಿಸಿದ್ದ ಜಾಹಿರಾತುಗಳನ್ನೂ ಹರಿದು ಹಾಕಲಾಯಿತು. ಈ ಗುರುತುಗಳ ಪಕ್ಕದ ಮನೆಗಳಲ್ಲಿದ್ದ ಎಂಟು ಜನ ರೈತರನ್ನು ಥಳಿಸಲಾಯಿತು. ಇನ್ನೆರಡು ಕಡೆಗಳಲ್ಲಿ ಹಾಕಿದ್ದ ಗಾಂಧಿಟೋಪಿಯನ್ನು ತೆಗೆದು ಹಾಕುವವರೆಗೂ ಅವರನ್ನು ಹೊಡೆಯಲಾಯಿತು. ಇನ್ನೊಂದು

ಸಂದರ್ಭದಲ್ಲಿ ಒಬ್ಬಾತನನ್ನು ಅವನು ಏಳು ಸಾರಿ ಪೋಲೀಸರಿಗೆ ಸಲಾಮು ಹಾಕುವವರೆಗೂ ಹೊಡೆಯಲಾಯಿತು. (ಹನ್ನೆರಡು ಲಾಠಿ ಪ್ರಹಾರಗಳು.)

"ನಿನಗೆ ಸ್ವರಾಜ್ಯ ಬೇಕೇ? ಹಾಗಾದರೆ ಇಲ್ಲಿದೆ ತಗೋ" ಎಂದು ಹೇಳುತ್ತಾ ಲಾಠಿಯಲ್ಲಿ ಹೊಡೆಯುವುದು, ಪೋಲೀಸರು ಸಾಮಾನ್ಯವಾಗಿ ಮಾಡುತ್ತಿದ್ದ ತಮಾಷೆಯಾಗಿದ್ದಿತು.......... .....ಬೋರ್‌ಸಾದ್ ಎಂಬಲ್ಲಿ ಒಬ್ಬ ಭಾರತೀಯ ಅಧಿಕಾರಿಯು ವಿಚಾರಣೆಗೆ ಒಳಪಡಿಸಲಾಗಿದ್ದ ಬಂದಿಗಳನ್ನು ಒಂದು ಪಂಜರದಲ್ಲಿ ಇಟ್ಟಿದ್ದುದನ್ನು ನಾನು ನೋಡಿದೆ. ಜೂನಲ್ಲಿ ಪ್ರಾಣಿಗಳನ್ನು ಇಡುವಂತಹ ಕಬ್ಬಿಣದ ಸರಳುಗಳುಳ್ಳ ಮೂವತ್ತು ಚದುರ ಅಡಿ ವಿಸ್ತೀರ್ಣದ ಈ ಪಂಜರಮೊಳಗೆ ಹದಿನೆಂಟು ಜನ ಬಂದಿಗಳು ಹಗಲೂರಾತ್ರಿ ಕಳೆಯಬೇಕಿದ್ದಿತು....................ಇಂತಹ ಪಂಜರದಿಂದ ಬಂದಿಗಳನ್ನು ದಿನಕ್ಕೆ ಒಂದು ಸಾರಿ ಕಕ್ಕಸುಗಳಿಗೆ ಹೋಗುವುದು ಇತ್ಯಾದಿಗಳಿಗೆ ಮುಕ್ಕಾಲು ಗಂಟೆ ಮಾತ್ರ ಇದರಿಂದ ಹೊರಗೆ ಬಿಡಲಾಗಿದ್ದಿತು."

(**ವಿ. ಸೂ :** ಮೇಲೆ ಹೇಳಿರುವುದರ ಜೊತೆಗೆ ಇನ್ನೂ ಹೆಚ್ಚು ವಿವರಗಳನ್ನು ಒಳಗೊಂಡಿರುವ ಮಿ. ಬ್ರೈಲ್ಸ್‌ಫರ್ಡ್ ಅವರ ಪೂರ್ಣ ಲೇಖನ ಹಿಂದೆ ಹೇಳಿರುವ ಪಟ್ಟಾಭಿಸೀತಾರಾಮಯ್ಯನವರ ಪುಸ್ತಕದಲ್ಲಿ ಪುಟ 687–691ರಲ್ಲಿ ಕೊಡಲಾಗಿದೆ.)

".......80 ವರ್ಷಗಳ ವಯಸ್ಸು ಮೀರಿದ್ದ ವಲ್ಲಭಭಾಯಿ ಪಟೇಲರ ತಾಯಿಯವರು ಅಡಿಗೆ ಮಾಡುತ್ತಿದ್ದಾಗ ಪೋಲೀಸರು ಕುದಿಯುತ್ತಿದ್ದ ನೀರಿನ ಬೋಸಿಯನ್ನು ಉರುಳಿಸಿದರು." ಬಡ ಗ್ರಾಮಸ್ಥರನ್ನು ದೈಹಿಕವಾಗಿ ಹಿಂಸಿಸುವುದರ ಜೊತೆಗೆ ಅವರು ಉಪಯೋಗಿಸಲು ಇಟ್ಟುಕೊಂಡಿದ್ದ ಅಕ್ಕಿಗೆ ಪೋಲೀಸರು ಕಲ್ಲು. ಮರಳು, ಸೀಮೆಎಣ್ಣೆಗಳನ್ನು ಬೆರೆಸಿದರು". (ಪು. 701)

"ಕಾನೂನುವಿರುದ್ಧವಾದ ಸಭೆಗಳನ್ನು ಸೇರಿಸುವವರ ಬಗ್ಗೆ ಪೋಲೀಸರು ಹೊಸ ಮಾರ್ಗವೊಂದನ್ನು ಅನುಸರಿಸಿ, ಬೇರೆಬೇರೆ

ಕೇಂದ್ರಗಳ ಇಂತಹ ಜನರನ್ನು ಒಟ್ಟುಗೂಡಿಸಿ ಅವರೊಡನೆ ಸ್ವಲ್ಪ ಹಣವೂ ಇಲ್ಲದಂತೆ ನೋಡಿಕೊಂಡು ಅವರೆಲ್ಲರನ್ನೂ ಲಾರಿಗಳಲ್ಲಿ ತುಂಬಿಕೊಂಡು ನಗರದಿಂದ ದೂರ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವರನ್ನು ಹಾಗೇ ಇಳಿಸಿಬರುತ್ತಿದ್ದರು." (ಪು. 700)

ಪೋಲೀಸರು ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ನಡೆಸಿದ ಕ್ರೌರ್ಯವನ್ನು ಕುರಿತು, ಜವಾಹರಲಾಲ್ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿರುವುದರ ಕೆಲವು ಭಾಗಗಳನ್ನು ಕೆಳಗೆ ಉದ್ಧರಿಸಲಾಗಿದೆ.

ಸೈಮನ್ ಸಮಿತಿ ಭೇಟಿಯ ವಿರುದ್ಧ ಪ್ರದರ್ಶನ ಮೆರವಣಿಗೆಯ ಮುಂದಾಳತ್ವ ವಹಿಸಿದ್ದ ನೆಹರೂ ಅವರನ್ನು ಪೋಲೀಸು ಸವಾರನೊಬ್ಬನು ಹೊಡೆದುದರ ಬಗ್ಗೆ "ಅವನು ನನ್ನ ಬೆನ್ನಿನ ಮೇಲೆ ಅತ್ಯಂತ ಬಲವಾದ ಲಾಠಿ ಏಟನ್ನು ಕೊಟ್ಟನು. ನಾನು ಚಕಿತನಾದೆ. ನನ್ನ ಶರೀರವೆಲ್ಲಾ ಕಂಪಿಸತೊಡಗಿತು." ಎಂದು ಹೇಳಿಕೊಂಡಿದ್ದಾರೆ (ಪುಟ 178). ಇದಾದ ಮರುದಿವಸ ಅದೇ ಸಂದರ್ಭದ "ಸೈಮನ್ ವಾಪಸು ಹೊರಡಿರಿ" ಎಂಬುದರ ಪ್ರದರ್ಶನ ಮೆರವಣಿಗೆ ಹೊರಟಾಗ ನಡೆದುದನ್ನು ನೆಹರೂ ಅವರು ವರ್ಣಿಸಿರುವುದರ ಒಂದು ಭಾಗ ಹೀಗಿದೆ :

"ಧಾವಿಸಿ ಬರುತ್ತಿದ್ದ ಗುಂಪೊಂದು ಹಠಾತ್ತಾಗಿ ನಮ್ಮ ಕಣ್ಣಿಗೆ ಕಾಣಿಸಿತು. ಎರಡು ಅಥವಾ ಮೂರು ಪಂಕ್ತಿಯಲ್ಲಿ ಪೋಲೀಸರು ಕುದುರೆಗಳನ್ನು ನಾಗಾಲೋಟದಿಂದ ಓಡಿಸಿಕೊಂಡು ಮೈದಾನದಲ್ಲಿ ಸೇರಿದ್ದವರನ್ನು ಹೊಡೆಯುತ್ತಾ, ಕುದುರೆಗಳಿಂದ ತುಳಿಸುತ್ತಾ ನಮ್ಮ ಕಡೆಗೆ ಬಂದರು. ಈ ಸವಾರರು ನಾಗಾಲೋಟದಿಂದ ಸವಾರಿ ಮಾಡಿಕೊಂಡು ಜನರನ್ನು ಹೊಡೆಯುತ್ತಾ ಬರುತ್ತಿದ್ದುದು ಒಂದು ದೃಶ್ಯವಾಗಿದ್ದಿತು. ಆದರೆ ಇದರಿಂದ ನಮ್ಮ ಮೆರವಣಿಗೆ ವೀಕ್ಷಿಸಲು ಬಂದಿದ್ದ ಪ್ರೇಕ್ಷಕರು ಕುದುರೆಗಳ ಕಾಲ್ಕೆಳಗೆ ಸಿಕ್ಕು ದುರಂತಕ್ಕೆ ಒಳಗಾದರು. ಸವಾರರೆಲ್ಲ ಮುನ್ನುಗ್ಗಿ ಬಂದಮೇಲೆ ಈ ಪ್ರೇಕ್ಷಕರಲ್ಲಿ ಅನೇಕರು ಚಲಿಸಲು ಅಸಮರ್ಥರಾಗಿ ನೆಲದ ಮೇಲೆ ಬಿದ್ದಿದ್ದರು. ಕೆಲವರು ಯಾತನೆಯಿಂದ ನರಳುತ್ತಿದ್ದರು. ಮೈದಾನವೆಲ್ಲಾ ಒಂದು ಯುದ್ಧಭೂಮಿಯನ್ನು ಹೋಲುತ್ತಿತ್ತು. ನಾವು ಕದಲಲಿಲ್ಲ

ನಾವು ಹೀಗೆ ಜಗ್ಗದುದರಿಂದ ನಮ್ಮ ಕಡೆ ಬಂದ ಸವಾರರ ಕುದುರೆಗಳು ತಮ್ಮ ಹಿಂದಿನ ಕಾಲಿನ ಮೇಲೆ ಆಸರೆಯಾಗಿ ನಿಂತು ಮುಂದಿನ ಕಾಲುಗಳನ್ನು ನಮ್ಮ ತಲೆಗಳ ಮೇಲುಗಡೆ ಆಡಿಸುತ್ತಾ ನಿಂತವು. ಆಗ ನಮ್ಮ ಮೇಲೆ ಸವಾರರಿಂದಲೂ ನಡೆದು ಬಂದ ಪೋಲೀಸರಿಂದಲೂ ಲಾಠಿ ಪ್ರಹಾರ ಆರಂಭವಾಯಿತು. ಇದು ಅತ್ಯಂತ ಘೋರ ಪ್ರಹಾರವಾಗಿದ್ದಿತು. ಏಟುಗಳಿಂದ ನಾನು ಅರ್ಧ ಕುರುಡನಾದಂತಾದೆ...... ನನ್ನ ಮೈಯಲ್ಲೆಲ್ಲಾ ನೋವುಂಟಾಯಿತು; ತುಂಬ ಸುಸ್ತಾಯಿತು. ಶರೀರದ ಎಲ್ಲಾ ಭಾಗಗಳೂ ಪೆಟ್ಟು ತಿಂದಿದ್ದವು. ಗಾಯಗಳು ಏಟುಗಳ ಗುರುತುಗಳೂ ಮೈಯ್ಯಲ್ಲೆಲ್ಲಾ ಕಾಣುತ್ತಿದ್ದವು. ಆದರೆ ಅದೃಷ್ಟವಶದಿಂದ ಗುಪ್ತಾಂಗಗಳಿಗೆ ಏಟು ತಗುಲಿರಲಿಲ್ಲ. ಅನೇಕ ಸಹಚರರು ಹೆಚ್ಚಿನ ಪೆಟ್ಟು ತಿಂದಿದ್ದರು. ನನ್ನ ಪಕ್ಕದಲ್ಲಿದ್ದ ಗೋವಿಂದ ವಲ್ಲಭ ಪಂತ್ ಅವರು ಆರು ಅಡಿಗೂ ಮೀರಿದ ಆಳಾದುದರಿಂದ ಏಟುಗಳಿಗೆ ಹೆಚ್ಚು ಸುಲಭವಾಗಿ ನಿಲುಕುವಂತಿದ್ದರು. ಅಂದು ಅವರು ಅನುಭವಿಸಿದ ಪೆಟ್ಟುಗಳಿಂದ ಅವರಿಗೆ ಬಹುಕಾಲದವರೆಗೆ ಬೆನ್ನು ನೆಟ್ಟಗೆ ಮಾಡಿಕೊಳ್ಳಲೂ ಆಗಲಿಲ್ಲ...... ಜೋರು ಹೊಡೆತಗಳೆಲ್ಲವನ್ನೂ ಐರೋಪ್ಯ ಸಾರ್ಜೆಂಟುಗಳು ಕೊಟ್ಟಿದ್ದರು. ಪೋಲೀಸು ದಳದ ಭಾರತೀಯರು ಅಷ್ಟು ಜೋರಾಗಿ ಹೊಡೆಯುತ್ತಿರಲಿಲ್ಲ" (ಪು. 179–180)

ಪೋಲೀಸರ ದೌರ್ಜನ್ಯದಿಂದ ಭಾರತದ ಅನೇಕ ಮಹಿಳೆಯರೂ ಬೇಕಾದಷ್ಟು ಕಷ್ಟ ಅನುಭವಿಸಿದರು. ಜವಾಹರ್‌ಲಾಲ್ ನೆಹರೂ ಅವರು ತಮ್ಮ ಆತ್ಮಕಥನದಲ್ಲಿ (Autobiography) ಹೇಳಿರುವಂತೆ, ರಾಷ್ಟ್ರೀಯ ಹೋರಾಟದಲ್ಲಿ ಸ್ತ್ರೀಯರ ಪಾತ್ರ ಅತ್ಯಂತ ಗಮನಾರ್ಹವಾಗಿದ್ದಿತು. ತಂತಮ್ಮ ಮನೆಗಳ ಪ್ರತ್ಯೇಕತೆಯಿಂದ ಅನೇಕಾನೇಕ ಸ್ತ್ರೀಯರು ಹೊರಗೆ ಬಂದು, ಸಾರ್ವಜನಿಕ ಚಟುವಟಿಕೆಗಳಲ್ಲಿ ಯಾವ ಅನುಭವವೂ ಇಲ್ಲದಿದ್ದಾಗ್ಯೂ ರಾಷ್ಟ್ರೀಯ ಚಳುವಳಿಗೆ ಧುಮುಕಿದರು. ವಿದೇಶಿ ಬಟ್ಟೆ ಮತ್ತು ಮದ್ಯ ಅಂಗಡಿಗಳ ಮುಂದೆ ಮುಷ್ಕರ ಹೂಡುವುದು ಬಹು ಮಟ್ಟಿಗೆ ಭಾರತದ ಸ್ತ್ರೀಯರ ಕಾರ್ಯವಾಗಿದ್ದಿತು. ಎಲ್ಲಾ ನಗರಗಳಲ್ಲಿಯೂ ಬರೀ

ಹೆಂಗಸರುಗಳೇ ಇದ್ದ ಪ್ರತಿಭಟನಾ ಮೆರವಣಿಗೆಗಳು ಜರುಗಿದವು. ಇವರುಗಳ ಧೋರಣೆ ಪುರುಷರ ಧೋರಣೆಗಿಂತಲೂ ಹೆಚ್ಚು ಬಿಗಿಯಾಗಿದ್ದಿತು. (ಪು. 214–215)

ಆದರೆ ಸರ್ಕಾರವು ಸ್ತ್ರೀಚಳುವಳಿಗಾರರನ್ನು ಪುರುಷ ಚಳುವಳಿಗಾರರಂತೆಯೇ ಶಿಕ್ಷಿಸಿತು. ಅಲ್ಲಿಯೂ ಗಣ್ಯವ್ಯಕ್ತಿಗಳು ಸಾಮಾನ್ಯರು ಎಂಬ ಭೇದ ಸರ್ಕಾರಕ್ಕೆ ಇರಲಿಲ್ಲ. ಒಮ್ಮೆ 1931ರಲ್ಲಿ ಜವಹರ್‌ಲಾಲ್ ಅವರ ತಾಯಿಯನ್ನು ಶಿಕ್ಷಿಸಿದುದನ್ನು ನೆಹರೂ ಅವರು ಹೀಗೆ ವಿವರಿಸಿದ್ದಾರೆ :

"ಅಲಹಾಬಾದಿನಲ್ಲಿ ನನ್ನ ಮಾತೆ ಭಾಗವಹಿಸಿದ್ದ ಮೆರವಣಿಗೆಯೊಂದನ್ನು ಪೋಲೀಸರು ತಡೆದು ತರುವಾಯ ಲಾಠಿ ಪ್ರಹಾರ ಮಾಡಿದರು. ಮೆರವಣಿಗೆಯನ್ನು ತಡೆದಾಗ ಒಬ್ಬರು ನನ್ನ ತಾಯಿಗೆ ಒಂದು ಕುರ್ಚಿ ತಂದರು; ಮೆರವಣಿಗೆಯ ಮುಂದಾಳಾಗಿ ಹಾಗೆ ರಸ್ತೆಯಲ್ಲಿ ಅವರು ಕುಳಿತುಕೊಂಡರು. ಅವರ ರಕ್ಷಣೆಗಾಗಿ ಇದ್ದ ಕೆಲವರನ್ನು– ನನ್ನ ಕಾರ್ಯದರ್ಶಿಯೂ ಸೇರಿದಂತೆ – ಪೋಲೀಸರು ಬಂಧಿಸಿ ಕರೆದೊಯ್ದರು. ನಂತರ ಲಾಠಿಪ್ರಹಾರ ಆರಂಭಿಸಿದರು. ನನ್ನ ತಾಯಿಯನ್ನು ಕುರ್ಚಿಯಿಂದ ಉರುಳಿಸಿ ಬೆತ್ತಗಳಿಂದ ಪುನಃ ಪುನಃ ತಲೆಯ ಮೇಲೆ ಹೊಡೆದರು. ತಲೆಯಲ್ಲಿ ಆದ ಒಂದು ಗಾಯದಿಂದ ರಕ್ತ ಸುರಿಯಿತು; ಅವರು ಪ್ರಜ್ಞಾಹೀನರಾಗಿ ರಸ್ತೆ ಪಕ್ಕದಲ್ಲೇ ಬಿದ್ದರು. ಆಗ ಮೆರವಣಿಗೆಯಲ್ಲಿದ್ದವರೆಲ್ಲರನ್ನೂ ಸೇರಿದ್ದ ಸಾರ್ವಜನಿಕರನ್ನೂ ಪೋಲೀಸರು ಚದುರಿಸಿದ್ದರು. ಸ್ವಲ್ಪ ಕಾಲದನಂತರ ನನ್ನ ತಾಯಿಯನ್ನು ಒಬ್ಬ ಪೋಲೀಸು ಅಧಿಕಾರಿಯು ಕಾರಿನಲ್ಲಿ ಕರೆದುಕೊಂಡು ಹೋಗಿ 'ಆನಂದ ಭವನ'ಕ್ಕೆ ಬಿಟ್ಟರು". (ಪು. 335)

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮುಖಂಡರುಗಳೂ ಇತರರೂ ಪೋಲೀಸರ ದೌರ್ಜನ್ಯದಿಂದ ಅನುಭವಿಸಿದ ಕಷ್ಟಗಳನ್ನು ಮೇಲಿನ ಕೆಲವು ನಿದರ್ಶನಗಳು ಸ್ಥೂಲವಾಗಿ ಸೂಚಿಸುವುವು. ಆದರೆ, ಅನೇಕ ಸ್ವಾತಂತ್ರ್ಯವೀರರು ಜೈಲುಗಳ ವಾಸವನ್ನೂ, ಜೈಲುಗಳಲ್ಲಿನ ಕಠಿಣ ನಿಯಮಗಳನ್ನೂ, ಅನುಭವಿಸಿದುದನ್ನು ಗಮನಿಸಿದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಅನೇಕರು ಎಷ್ಟೆಷ್ಟು ಕಷ್ಟಗಳನ್ನು ಸಹಿಸಿದರೆಂಬುದನ್ನು

ತಿಳಿಯಬಹುದು. ಜೈಲುವಾಸ ಅನುಭವಿಸಿದವರಲ್ಲಿ ಸಾಮಾನ್ಯವಾಗಿ ಎಲ್ಲಾ ರಾಜಕೀಯ ಮುಖಂಡರೂ, ಸಹಸ್ರಾರು ಸ್ವಯಂಸೇವಕರೂ ಹಾಗೂ ಭಾಗವಹಿಸಿದ ಸಾರ್ವಜನಿಕರೂ ಸೇರಿದ್ದಾರೆ. ಇವರೆಲ್ಲರೂ ಅನುಭವಿಸಿದ ಹಿಂಸೆಗಳನ್ನು ಸೂಚ್ಯವಾಗಿ ತಿಳಿಸಲು ಜವಾಹರ್‌ಲಾಲ್ ನೆಹರೂ ಅವರ ಆತ್ಮಕಥೆಯಿಂದ ಆಯ್ದ ಕೆಲವು ಭಾಗಗಳನ್ನು ಮುಂದೆ ಕೊಡಲಾಗುವುದು. ಇದಕ್ಕೆ ಮೊದಲು ಕೆಲವು ಸಾಮಾನ್ಯ ಅಂಶಗಳನ್ನೂ ಕ್ರಾಂತಿಕಾರರಲ್ಲಿ ಅಗ್ರಗಣ್ಯ ವ್ಯಕ್ತಿಯಾಗಿದ್ದ ಸಾವರ್ಕರ್ ಅವರ ಅನುಭವಗಳನ್ನೂ ಸಂಕ್ಷಿಪ್ತವಾಗಿ ತಿಳಿಸಲಾಗುವುದು.

ರಾಜಕೀಯ ಬಂದಿಗಳನ್ನು 'ಎ' 'ಬಿ' 'ಸಿ' ಎಂಬ ಮೂರು ವರ್ಗಗಳಾಗಿ ಸರ್ಕಾರದ ಆಜ್ಞೆಯು[1] ವಿಂಗಡಿಸಿತ್ತು. ಗುಣವಂತರೂ, ಜೈಲುಸೇರುವುದೇ ಅಭ್ಯಾಸಮಾಡಿಕೊಂಡಿಲ್ಲದ, ಸಾಮಾಜಿಕ ಅಂತಸ್ತು, ವಿದ್ಯಾಭ್ಯಾಸ, ಇತ್ಯಾದಿಗಳಿಂದ ಮೇಲ್ಮಟ್ಟದ ಜೀವನ ಮಟ್ಟಕ್ಕೆ ರೂಢಿಯಾಗಿರುವ ಮತ್ತು ಕ್ರೌರ್ಯ, ಹಿಂಸಾತ್ಮಕ ರಾಜದ್ರೋಹ, ಸ್ಫೋಟಿಸುವ ಹಾಗೂ ಅಪಾಯಕರ ಆಯುಧಗಳನ್ನು ಹೊಂದಿರುವುದು, ಹಿಂಸಾತ್ಮಕ ಅಪರಾಧಗಳನ್ನು ಪ್ರಚೋದಿಸುವುದು ಇಂತಹ ಅಪರಾಧಗಳಿಗೆ ಒಳಪಡದಂತಹವರು 'ಎ' ತರಗತಿಗೆ ಸೇರುವ ಬಂದಿಗಳು. ಜೈಲು ಸೇರುವುದನ್ನು ಅಭ್ಯಾಸವಾಗಿ ಬೆಳೆಸಿಕೊಂಡಿದ್ದು, ಮೇಲಿನ ಇತರ ಅಂಶಗಳೆಲ್ಲವನ್ನೂ ಹೊಂದಿರುವವರು 'ಬಿ' ತರಗತಿಗಳಿಗೆ ಸೇರುವ ಬಂದಿಗಳು. 'ಎ' ಮತ್ತು 'ಬಿ'ಗೆ ಒಳಪಡದವರೆಲ್ಲಾ 'ಸಿ' ತರಗತಿ ಬಂದಿಗಳು. ಉಡುಪು, ವಸತಿಸ್ಥಳ, ಊಟ ತಿಂಡಿ, ಸ್ನಾನ, ಶೌಚ ಇತ್ಯಾದಿಗಳಿಗೆ, ಇತರರ ಭೇಟಿ, ವೃತ್ತಪತ್ರಿಕೆಗಳಿಗೆ ಅವಕಾಶ ಇತ್ಯಾದಿ ಅನೇಕ ಅಂಶಗಳ ಬಗ್ಗೆ ಈ ಮೂರು ವರ್ಗದವರಲ್ಲಿ ವ್ಯತ್ಯಾಸಗಳಿದ್ದವು.

ಸಾಮಾನ್ಯವಾಗಿ ಜವಾಹರಲಾಲ್ ನೆಹರೂ ತಮ್ಮ ಆತ್ಮಕಥೆಯಲ್ಲಿ (ಪುಟ 343) ಅವರು ಹೇಳಿರುವಂತೆ 'ಎ; ಬಿ; ಸಿ; ' ವರ್ಗೀಕರಣ ಅರ್ಥಹೀನವಾಗಿದ್ದಿತು....ಜೈಲಿನಲ್ಲಿ ರಾಜಕೀಯ ಬಂದಿಗಳ ಸ್ಥಿತಿ ಸಾಮಾನ್ಯ ಅಪರಾಧಿ

---

1. ಈ ಆಜ್ಞೆಯ ಪೂರ್ಣ ವಿವರಗಳಿಗೆ ನೋಡಿ. : Pattabhi Sitaramayya, *op. cit,* Appendix IV P P XIX - XXII

ಗಿಂತಲೂ ಕೀಳಾಗಿರುವಂತೆ ಮಾಡುವುದೇ ಸರ್ಕಾರದ ಆಲೋಚಿತ ನೀತಿಯಾಗಿದ್ದಂತೆ ಕಾಣುತ್ತದೆ. ಸತ್ಯಾಗ್ರಹಿ ಬಂದಿಗಳನ್ನು "ತುಂಬ ಕಟ್ಟುನಿಟ್ಟಾಗಿ ಶಿಕ್ಷಿಸುವಂತೆ" ಸೂಚಿಸಿ 1932 ರ ಜೂನ್ 30 ರಲ್ಲಿ ಸುತ್ತೋಲೆಯೊಂದನ್ನು ಗುಪ್ತವಾಗಿ ಎಲ್ಲಾ ಜೈಲುಗಳಿಗೂ ಜೈಲುಗಳ ಇನ್ಸ್‌ಪೆಕ್ಟರ್ - ಜನರಲ್ ಅವರೊಬ್ಬರು ಕಳಿಸಿದ್ದರು. (ಪು. 343).

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರಲ್ಲಿ ಅತ್ಯಂತ ಕ್ರೂರ ಹಾಗೂ ಅತ್ಯಂತ ಅನಾಗರಿಕ ಶಿಕ್ಷೆಗಳನ್ನು ಅನುಭವಿಸಿದವರು ಕ್ರಾಂತಿಕಾರಿ ಹೋರಾಟಗಾರರು. ಅಧ್ಯಾಯ ಆರರಲ್ಲಿ ವಿವರಿಸಲಾದ ಎಲ್ಲಾ ಕ್ರಾಂತಿವೀರರೂ ಇದರಲ್ಲಿ ಸೇರುತ್ತಾರೆ. ವೀರ ಸಾವರ್‌ಕರ್ ಅವರಂತಹ ಅತ್ಯಂತ ಪ್ರತಿಭಾಶಾಲಿ ವ್ಯಕ್ತಿಯನ್ನೂ ಬ್ರಿಟಿಷ್ ಸರ್ಕಾರವು ಕೇವಲ ಸಾಮಾನ್ಯ ಕೈದಿಯಂತೆ ಪರಿಗಣಿಸಿತು. ಅತ್ಯಂತ ಹೊಲಸು ಜೀವನ ಪರಿಸ್ಥಿತಿಯನ್ನು ಅಂಡಮಾನ್ ಜೈಲಿನಲ್ಲಿ ಅವರು ಅನುಭವಿಸಬೇಕಾಯಿತು. ಸಾಮಾನ್ಯ ಕೈದಿಯ ಉಡುಪು, ಕೈದಿ ಸಂಖ್ಯೆ ತೋರಿಸುವ ಬ್ಯಾಡ್ಜ್ ಧರಿಸಬೇಕಾಯಿತು. ಎತ್ತುಗಳಂತೆ ಎಣ್ಣೆಗಾಣಕ್ಕೆ ಅವರನ್ನು ಕಟ್ಟಿ ಅವರು ಸುಸ್ತಾಗುವವರೆಗೂ ಅವರಿಂದ ಗಾಣವನ್ನು ತಿರುಗಿಸುತ್ತಿದ್ದರು. ಆಹಾರ, ಪಾನೀಯ ಎಲ್ಲವೂ ತುಂಬ ಕೆಳದರ್ಜೆಯದು. ಕೊಟ್ಟಷ್ಟನ್ನು ಅದು ಎಷ್ಟೇ ಸೇರದಿರುವಂತಿದ್ದರೂ ಅಷ್ಟನ್ನೂ ತಿನ್ನಲೇಬೇಕು; ಹೆಚ್ಚು ಕೇಳುವಹಾಗಿಲ್ಲ. ಜೈಲು ಅಧಿಕಾರಿಗಳು ಗೊತ್ತುಮಾಡಿದ ಸ್ವಲ್ಪ ವೇಳೆಯಲ್ಲಿ ಮಾತ್ರ ದೈನಂದಿನ ಶೌಚ ಕಾಲಪ್ರವೃತ್ತಿಗಳನ್ನು ಮಾಡಿಕೊಳ್ಳಬೇಕಿತ್ತು. ಸಾವರ್‌ಕರ್ ಅವರ ಸಹೋದರರೂ ಹಾಗೂ ಇನ್ನೂ ಅನೇಕ ಕ್ರಾಂತಿಕಾರಿಗಳೂ ಅಂಡಮಾನ್ ಜೈಲಿನ ಇಂತಹ ಅಸಹ್ಯಕರ ಜೀವನವನ್ನು ಸಹಿಸಬೇಕಾಯಿತು. ಬಂಧುಗಳು ಆಗಿಂದಾಗ್ಗೆ ಬಂದು ಭೇಟಿಮಾಡಲು ಅವಕಾಶವಿರಲಿಲ್ಲ.

ಹಿಂಸಾಮಾರ್ಗವನ್ನನುಸರಿಸದ ರಾಜಕೀಯ ಅಪರಾಧಿಗಳನ್ನು ಅಂಡಮಾನಿಗೆ ಕಳಿಸಲಿಲ್ಲ. ಅಹಿಂಸಾತ್ಮಕ ಚಳುವಳಿಯಲ್ಲಿ ಬಂಧಿತರಾದ ಮಹಾತ್ಮಾ ಗಾಂಧಿ, ಮೋತಿಲಾಲ್ ನೆಹರೂ, ಜವಾಹರ್‌ಲಾಲ್ ನೆಹರೂ ಇತ್ಯಾದಿ ಗಣ್ಯವ್ಯಕ್ತಿಗಳನ್ನು 'ಎ' ತರಗತಿಯ ಬಂಧಿಗಳಾಗಿ ಪರಿಗಣಿಸಲಾಯಿತು. ಇತರ ಎಲ್ಲಾ ಸಾಮಾನ್ಯ ಸ್ವಯಂಸೇವಕರು ಮತ್ತು ಇತ

ಚಳುವಳಿಗಾರರೂ 'ಸಿ' ತರಗತಿಯಲ್ಲಿಡಲ್ಪಡುತ್ತಿದ್ದರು. ಗಣ್ಯ ಮುಖಂಡರುಗಳ ಜೈಲುವಾಸದ ಕಷ್ಟಗಳನ್ನು ಜವಾಹರಲಾಲ್ ಅವರು ತಮ್ಮ ಆತ್ಮಕಥನದಲ್ಲಿ ನೀಡಿರುವ ವಿವರಣೆಯು ಸೂಚಿಸುವುದೆಂದು ತಿಳಿಯಬಹುದು. ಇತರ ಬಂದಿಗಳ ಜೈಲು ಜೀವನವನ್ನೂ ಅವರು ವಿವರಿಸಿರುತ್ತಾರೆ. ಈ ವಿವರಣೆಗಳ ಕೆಲವು ಆಯ್ದ ಭಾಗಗಳನ್ನು ಕೆಳಗೆ ಕೊಡಲಾಗಿದೆ :—

ನೆಹರೂ ಲಖ್ನೊ ಜಿಲ್ಲಾ ಜೈಲಿನಲ್ಲಿದ್ದಾಗ.[1]

"ನನ್ನನ್ನು ಇಡಲಾಗಿದ್ದ ಬ್ಯಾರಕ್‌ನಲ್ಲಿ (Barrack) ಕೊನೆ ಪಕ್ಷ ಐವತ್ತು ಜನರಾದರೂ ಇದ್ದೆವು. ನಮ್ಮ ಹಾಸಿಗೆಗಳು ಇಬ್ಬಬ್ಬರ ನಡುವೆ ಸುಮಾರು 3–4 ಅಡಿಗಳಷ್ಟು ಜಾಗವಿತ್ತು..........ನನಗೆ ಹಗಲೂ ರಾತ್ರಿ ಸ್ವಲ್ಪವೂ ಗೋಪ್ಯ ಸ್ಥಳವಿಲ್ಲದುದು ಸಹಿಸಲು ಹೆಚ್ಚು ಹೆಚ್ಚು ಕಷ್ಟವಾಯಿತು. ಯಾವಾಗಲೂ ಅದೇ ಜನಜಂಗುಳಿ ನೋಡುವುದು, ಅದವೇ ಸಣ್ಣ ಸಣ್ಣ ಮುಜುಗರಗಳು ಹಾಗೂ ಸಮಾಧಾನದಿಂದ ಒಂದು ಕೆಲಸ ಮಾಡಲು ಇವುಗಳಿಂದ ಬಿಡುಗಡೆಯಿಲ್ಲ. ಸ್ನಾನ, ಬಟ್ಟೆ ಒಗೆದು ಕೊಳ್ಳುವುದು ಎಲ್ಲವೂ ಬಹಿರಂಗದಲ್ಲಿ. ವ್ಯಾಯಾಮಕ್ಕೆ ಬ್ಯಾರಕ್ಕಿನ ಸುತ್ತಲೂ ಓಡುವುದು.........ನಮ್ಮೆಲ್ಲರಿಗೂ ಇವೆಲ್ಲವೂ ತುಂಬ ಮಾನಸಿಕ ಶ್ರಮವಾಗಿದ್ದಿತು; ಅನೇಕ ವೇಳೆ ನಾನು ಏಕಾಂತವನ್ನು ಬಯಸುತ್ತಿದ್ದೆ. ನನ್ನ ಜೈಲುವಾಸದ ಕೊನೆಯ ವರ್ಷಗಳಲ್ಲಿ ಈ ಏಕಾಂತ ನಾಕಷ್ಟು ಎನ್ನುವಷ್ಟು ಇದ್ದಿತು. ಜೈಲು ಅಧಿಕಾರಿಯನ್ನು ಬಿಟ್ಟು ಬೇರೆ ಯಾರನ್ನೂ ನಾನು ಕೆಲವು ತಿಂಗಳುಗಳು ನೋಡುವಂತಿರಲಿಲ್ಲ. ಆಗಲೂ ಒಂದು ವಿಧವಾದ ಮಾನಸಿಕ ಶ್ರಮವಾಗುತ್ತಿತ್ತು; ಆಗ ನಾನು ಅಪೇಕ್ಷಣೀಯ ಜೊತೆಗಾರರನ್ನು ಬಯಸುತ್ತಿದ್ದೆ." (ಪು. 92–93)

ಸ್ವಲ್ಪಕಾಲಾನಂತರ ಒಂದು ಸಣ್ಣ ಕೋಣೆಗೆ ಅವರನ್ನು ವರ್ಗಾಯಿಸಿದಾಗ ನೆಹರೂ ಅವರು ಹೀಗೆ ಹೇಳಿದ್ದಾರೆ :

1. ಈ ವಿಭಾಗದಲ್ಲಿ ಕಂಸದಲ್ಲಿ ಕೊಟ್ಟಿರುವ ಪುಟಗಳ ಸಂಖ್ಯೆ, Jawaharlal – Nehru – An Autobiography, Allied Publishers, Bombay, 1962. ಎಂಬ ಪುಸ್ತಕದ್ದು.

"ಜೈಲಿನ ನನ್ನ ಇತರ ಬಂದಿಗಳಿಂದಲೂ ಹೊರ ಪ್ರಪಂಚದಿಂದಲೂ ಸಂಪೂರ್ಣವಾಗಿ ಬೇರ್ಪಡಿಸಿದಂತಾಗಿತ್ತು. ರಾಜಕೀಯ ಬಂದಿಗಳಿಗೆಲ್ಲಾ ವೃತ್ತಪತ್ರಿಕೆಗಳು ಬರುವುದನ್ನು ನಿಲ್ಲಿಸಲಾಗಿದ್ದಿತು.

ವೃತ್ತಪತ್ರಿಕೆಗಳು ಬರದಿದ್ದರೂ, ಹೊರಗಡೆಯ ಸಮಾಚಾರಗಳು ಅಲ್ಪಸ್ವಲ್ಪ ಹೇಗೋ ನಮ್ಮ ಕಿವಿಗೆ ಬೀಳುತ್ತಿತ್ತು. ಇಂತಹುದು ಜೈಲಿನಲ್ಲಿ ಆಗುತ್ತಲೇ ಇರುವುದು. ತಿಂಗಳಿಗೊಮ್ಮೆ ನಮಗೆ ನೀಡಲಾಗಿದ್ದ ಭೇಟಿಯ ಅವಕಾಶವೂ, ಪತ್ರಗಳೂ ಒಂದೊಂದು ಸಮಾಚಾರವನ್ನೂ ನಮಗೆ ತರುತ್ತಿದ್ದವು. (ಪು. 94)

"ಇಲ್ಲಿ ವ್ಯಾಯಾಮಕ್ಕೆ ಸಣ್ಣ ಒಳ ಅಂಗಳದಲ್ಲೇ ಸುತ್ತಸುತ್ತ ಓಡುತ್ತಿದ್ದೆವು. ಇಲ್ಲದಿದ್ದರೆ, ಇಬ್ಬಿಬ್ಬರು ಸೇರಿಕೊಂಡು, ನೊಗಕ್ಕೆ ಹಾಕಿದ ಎರಡು ಎತ್ತುಗಳಂತೆ, ಕಪಿಲೆ ಬಾವಿಯಿಂದ ಚರ್ಮದ ಬಕೆಟ್ಟಿನಲ್ಲಿ ನೀರು ಎಳೆಯುತ್ತಿದ್ದೆವು. ಈ ನೀರನ್ನು ತರಕಾರಿ ಬೆಳೆಯಲು ಸಣ್ಣ ಮಡಿ ಯೊಂದಕ್ಕೆ ಹಾಯಿಸುತ್ತಿದ್ದೆವು. ನಮ್ಮಲ್ಲಿ ಅನೇಕರು ದಿನವಹಿ ಸ್ವಲ್ಪ ಹೊತ್ತು ನೂಲು ತೆಗೆಯುತ್ತಿದ್ದೆವು. ಆದರೆ, ಓದುವುದು ನನ್ನ ಮುಖ್ಯ ಹವ್ಯಾಸವಾಗಿದ್ದಿತು." (ಪು. 95)

"ಜೈಲಿನಲ್ಲಿ ಬಂದಿಗೆ ಕೊಡುತ್ತಿದ್ದ ಕೆಲಸಗಳ ಉದ್ದೇಶ ಅವನನ್ನು ಗೋಳು ಹುಯ್ಯುಕೊಳ್ಳುವುದೇ ಆಗಿದ್ದಿತು. ಇದರಿಂದ ಅವನು ಹೆದರಿ ಬೆದರಿ ಸುಮ್ಮನೆ ತಲೆಬಾಗುವಂತಾಗಬೇಕು. ಜೈಲು ಜೀವನದ ಹೆದರಿಕೆ ಯಿಂದ ಆ ಜೈಲಿಗೆ ಪುನಃ ಬರದಿರುವಂತೆ ಅಪರಾಧ ಮಾಡುವುದನ್ನು ಬಿಡುವಂತಾಗಬೇಕು." (ಪು. 96–97)

"ರಾಜಕೀಯ ಬಂದಿಗಳಲ್ಲಿ ಬಹುಸಂಖ್ಯಾತ ಬಂದಿಗಳು ಸಾಮಾನ್ಯ ಬಂದಿಗಳಂತೆ ನೋಡಿಕೊಳ್ಳಲ್ಪಡುತ್ತಿದ್ದರು. ಅವರಿಗೆ ಯಾವ ರೀತಿಯ ವಿಶೇಷ ಹಕ್ಕುಗಳನ್ನೂ ಕೊಟ್ಟಿರಲಿಲ್ಲ. ಆದರೆ, ಇವರುಗಳು ಬುದ್ಧಿಜೀವಿ ಗಳೂ, ಹೋರಾಟಗಾರರೂ ಆಗಿದ್ದುದರಿಂದ ಇವರನ್ನು ಸುಲಭವಾಗಿ ಶೋಷಣೆ ಮಾಡಲಾಗುತ್ತಿರಲಿಲ್ಲ. ಇವರಿಂದ ಹಣ ಪಡೆಯಲೂ ಆಗುತ್ತಿರಲಿಲ್ಲ. ಇವರುಗಳ ಜೈಲು ಶಿಸ್ತನ್ನು ಉಲ್ಲಂಘಿಸಿದ ಸಂದರ್ಭಗಳು

ಉಂಟಾದಾಗ ಇವರನ್ನು ಕ್ರೂರವಾಗಿ ಶಿಕ್ಷಿಸಲಾಗುತ್ತಿದ್ದಿತು. ಒಮ್ಮೆ ಆಜಾದ್ ಎಂಬ 15–16 ವರ್ಷದ ಬಾಲಕನು ಶಿಸ್ತನ್ನು ಮೀರಿದಾಗ ಅವನನ್ನು ಥಳಿಸಲಾಯಿತು. ಬರಿಮೈಯಲ್ಲಿ ಅವನನ್ನು ಛಡಿ ಏಟು ತಿನ್ನುವ ಕಂಬಕ್ಕೆ ಕಟ್ಟಿ ಥಳಿಸಿದರು. ಆ ಹುಡುಗನ ಮಾಂಸಖಂಡವನ್ನು ಕೊಯ್ಯುವಂತಹ ಒಂದೊಂದು ಏಟು ಬಿದ್ದಾಗಲೂ ಅವನು 'ಮಹಾತ್ಮಾ ಗಾಂಧಿಕಿ ಜೈ' ಎಂಬ ಜಯಕಾರವನ್ನು ಕೂಗುತ್ತಿದ್ದನು. ಅವನು ಪ್ರಜ್ಞಾಹೀನನಾಗುವವರೆಗೂ ಅವನನ್ನು ಹೀಗೆ ಹೊಡೆಯಲಾಯಿತು." (ಪು. 97).

"ಛಡಿ ಏಟು ಕೊಡುವುದು ಸಾಮಾನ್ಯವಾದ ಜೈಲುಶಿಕ್ಷೆಯಾಗಿದ್ದಿತು............ನಮ್ಮವರಿಗೆ ಅತ್ಯಂತ ಕಷ್ಟಕರವಾದ ಕೆಲಸಗಳನ್ನು ಕೊಡಲಾಗುತ್ತಿದ್ದಿತು. – ಮಿಲ್ಲುಗಳು, ಎಣ್ಣೆಗಾಣ ಇತ್ಯಾದಿ. ಅವರು ಕ್ಷಮಾರ್ಪಣೆ ಕೋರಿ ಸರ್ಕಾರಕ್ಕೆ ಲಿಖಿತ ಪಶ್ಚಾತ್ತಾಪ ಪತ್ರ ಬರೆದು ಕೊಡುವಂತೆ ಮಾಡಲು ಜೈಲಿನಲ್ಲಿ ಅವರ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ಅಸಹನೀಯಗೊಳಿಸಲಾಯಿತು." (ಪು. 343–344)

"ರಾಜಕೀಯ ಬಂದಿಗಳನ್ನು 1932 – 33 ರಲ್ಲಿ ನೋಡಿಕೊಳ್ಳುತ್ತಿದ್ದುದು ಇದಕ್ಕೆ ಎರಡು ವರ್ಷಗಳ ಮುಂಚೆ 1930ರಲ್ಲಿ ನೋಡಿಕೊಳ್ಳುತ್ತಿದ್ದುದಕ್ಕಿಂತಲೂ ಹೆಚ್ಚು ಕಠಿಣತರವಾದ್ದಾಗಿದ್ದಿತು." (ಪು. 344)

"ವಿಶೇಷ ಕ್ರೂರತನದಿಂದಲೂ, ನಿರ್ದಾಕ್ಷಿಣ್ಯವಾಗಿಯೂ ಇದ್ದಂತಹ ಜೈಲು ಅಧಿಕಾರಿಗಳಿಗೆ ಬಡ್ತಿಯನ್ನೂ, ಗೌರವ ಪ್ರಶಸ್ತಿಗಳನ್ನೂ ನೀಡಲಾಗುತ್ತಿದ್ದಿತು." (ಪು. 345)

ನೆಹರೂ ಅವರು ಅಲಿಪೂರ ಜೈಲಿನಲ್ಲಿದ್ದಾಗ, ಅಲ್ಲಿನ ಬಂದಿಗಳು ಜೈಲಿನ ಮೇಲಧಿಕಾರಿಗಳು ಬಂದಾಗೆಲ್ಲ "ಸರ್ಕಾರ್ ಸಲಾಮ್" ಎಂದು ಕೂಗಬೇಕಾಗಿದ್ದ ಕಟ್ಟಳೆಯ ಬಗ್ಗೆ ಹೀಗೆ ಹೇಳಿರುತ್ತಾರೆ: "ಈ ರೀತಿಯಾಗಿ ಬಂದಿಗಳು ಕೂಗುತ್ತಿದ್ದುದು ನನಗೆ ದಿನದಲ್ಲಿ ಅನೇಕ ವೇಳೆ ಕೇಳಿಸುತ್ತಿತ್ತು...........'ಸರ್ಕಾರ'ದ ಅಧಿಕಾರವನ್ನೂ ಬಲಾತ್ಕಾರ ಪೂರ್ವಕವಾಗಿ ಈ ರೀತಿಯ ಕೂಗು ಹಾಕುವ ಮೂಲಕ ಅಭಿನಂದಿಸುವುದು ತುಂಬ ಅವಮಾನಕರವಾದುದೆಂದು ನನಗೆ ಅನ್ನಿಸಿತು." (ಪು. 496–497)

ಬಂದಿಗಳ ಭೇಟಿಗೆ ಒಮ್ಮೊಮ್ಮೆ ಬರುತ್ತಿದ್ದ ಜನರನ್ನು ಜೈಲು ಅಧಿಕಾರಿಗಳು ಅನೇಕ ವೇಳೆ ಅವಮಾನಗೊಳಿಸಿ ಬೇಗ ಬೇಗ ವಾಪಸು ಕಳಿಸುತ್ತಿದ್ದರು. ಇದರ ಬಗ್ಗೆ ನೆಹರೂ ಅವರು ಹೇಳಿರುವುದು ಹೀಗಿದೆ :–

"ನನ್ನ ತಾಯಿ, ಕಮಲ ಮತ್ತು ನನ್ನ ಮಗಳು ಇಂದಿರ ಅಲಹಾಬಾದ್ ಜಿಲ್ಲಾ ಜೈಲಿಗೆ ನನ್ನ ಭಾವ ರಣಜಿತ್ ಪಂಡಿತ್ ಅವರನ್ನು ಭೇಟಿಮಾಡಲು ಹೋಗಿದ್ದಾಗ ಅವರು ಯಾವ ತಪ್ಪು ಮಾಡದಿದ್ದರೂ ಅವರನ್ನು ಜೈಲು ಅಧಿಕಾರಿಯು ಅವಮಾನಗೊಳಿಸಿ ಜಾಗ್ರತೆ ವಾಪಸು ಕಳುಹಿಸಿದರು. ನನ್ನ ತಾಯಿಗೆ ಹೀಗೆ ಜೈಲು ಅಧಿಕಾರಿಗಳಿಂದ ಅವಮಾನ ವಾಗಬಹುದಾದುದನ್ನು ತಪ್ಪಿಸಲು ನಾನು ಭೇಟಿಗಳನ್ನೇ ತ್ಯಜಿಸಲು ತೀರ್ಮಾನಿಸಿದೆ. ನಾನು ಡೆಹರಾಡುನ್ ಜೈಲಿನಲ್ಲಿ ಇದ್ದಾಗ ಸುಮಾರು ಏಳು ತಿಂಗಳಕಾಲ ನಾನು ಯಾರನ್ನೂ ಭೇಟಿಯಾಗಲಿಲ್ಲ." (ಪು. 345)

ಜೈಲುಗಳಲ್ಲಿ ಗೊದ್ದ, ಇರುವೆ, ಗೆಜ್ಜಲುಹುಳು ಹಾಗೂ ಇತರ ಕೀಟಗಳು, ಹಲ್ಲಿಗಳು, ಅಳಿಲುಗಳು, ಕೋತಿಗಳು, ಪಾರಿವಾಳಗಳು ಮತ್ತು ಇತರ ಕೆಲವು ಪಕ್ಷಿಗಳೆಲ್ಲವೂ ಇರುತ್ತಿದ್ದವೆಂದು ನೆಹರೂ ಅವರು ಹೇಳಿರುತ್ತಾರೆ. ಇವುಗಳೆಲ್ಲದರಂತೆಯೇ "ಕೆಲವು ಬೇಡದ ಪ್ರಾಣಿಗಳ" ಬಗ್ಗೆ ಅವರು ಹೀಗೆ ಬರೆದಿರುತ್ತಾರೆ : "ನಮ್ಮ ಕೋಣೆಗಳಲ್ಲಿ ಅನೇಕ ವೇಳೆ ಚೇಳುಗಳು ಕಾಣಿಸಿಕೊಳ್ಳುತ್ತಿದ್ದವು. ನಾನು ಅದರಿಂದ ಕಚ್ಚಿಸಿಕೊಳ್ಳ ದಿದ್ದುದು ಆಶ್ಚರ್ಯ; ಏಕೆಂದರೆ, ನನ್ನ ಹಾಸಿಗೆಯಲ್ಲಿ, ನಾನು ಕೈಗೆ ಎತ್ತಿಕೊಂಡ ಪುಸ್ತಕದಲ್ಲಿ ಇಂತಹ ಅನಿರೀಕ್ಷಿತ ಜಾಗಗಳಲ್ಲಿ ಕೂಡ ಅವುಗಳನ್ನು ಕಂಡಿದ್ದೇನೆ. ಒಮ್ಮೆ ಒಂದು ವಿಷಪೂರ್ಣ ಕರಿಯ ಚೇಳೊಂದನ್ನು ಒಂದು ಶೀಸೆಯಲ್ಲಿ ಹಿಡಿದಿಟ್ಟು ಅದಕ್ಕೆ ಆಹಾರಕ್ಕಾಗಿ ನೊಣಗಳು ಇತ್ಯಾದಿಗಳನ್ನು ಹಾಕುತ್ತಿದ್ದೆ; ನಂತರ ಅದನ್ನು ದಾರದಲ್ಲಿ ಕಟ್ಟಿ ಗೋಡೆ ಮೇಲೆ ತೂಗು ಹಾಕಿದೆ; ಆಗ ಅದು ಹೇಗೋ ತಪ್ಪಿಸಿಕೊಂಡು ಹೋಯಿತು........ಒಂದು ಸಾರಿ ಮೂರು ನಾಲ್ಕು ಹಾವುಗಳೂ ನನ್ನ ಕೋಣೆಯಲ್ಲಿ ಅಥವಾ ಅದರ ಹತ್ತಿರ ಕಾಣಿಸಿಕೊಂಡವು." (ಪು. 357)

"ಕಲ್ಕತ್ತದ ಅಲಿಪೂರ್ ಜೈಲಿನಲ್ಲಿ ಒಂದು ದಿವಸ ಮಧ್ಯರಾತ್ರಿ ನನ್ನ ಕಾಲಿನ ಮೇಲೆ ಏನೋ ಒಂದು ಹರಿಯುತ್ತಿದ್ದಂತೆ ಅನ್ನಿಸಿ ಎಚ್ಚರಗೊಂಡೆ

ನನ್ನಲ್ಲಿದ್ದ ಟಾರ್ಚ್ ಹಾಕಿ ಅದರ ಬೆಳಕಿನಲ್ಲಿ ನೋಡಿದಾಗ ಸಾವಿರಕಾಲಿನ ಜರಿಯೊಂದುನನ್ನ ಹಾಸಿಗೆಯಲ್ಲಿ ಕಂಡಿತು. ತಕ್ಷಣನೇ ನಾನು ಅತ್ಯಂತ ರಭಸದಿಂದ ಹಾಸಿಗೆಯಿಂದ ಹೊರಳುವುದರಲ್ಲಿ ಕೋಣೆಯ ಗೋಡೆಯನ್ನು ಹೊಡೆಸಿಕೊಳ್ಳುವುದರಲ್ಲಿದ್ದೆ." (ಪು. 358)

ನೆಹರೂ ಅವರ ಮೇಲಿನ ಚಿತ್ರದಿಂದ ಜೈಲುಗಳನ್ನೂ, ಜೈಲು ಸುತ್ತ ಮುತ್ತಲಿನ ಆವರಣವನ್ನೂ ಅಧಿಕಾರಿಗಳು ಹೇಗಿಟ್ಟಿದ್ದರು ಎಂಬುದನ್ನು ಊಹಿಸಿಕೊಳ್ಳಬಹುದು.

1930ರಲ್ಲಿ ನೈನಿಜೈಲು ಕುರಿತು ನೆಹರೂ ಅವರು ಹೀಗೆ ಹೇಳಿರುತ್ತಾರೆ:

"ನಾನು ಹಾಸಿಗೆಯನ್ನೂ ತೆಗೆದುಕೊಂಡು ಎಲ್ಲಿ ಹೋಗಿಬಿಡುನೆನೋ ಎಂದೋ ಅಥವಾ ಕಾಂಪೌಂಡು ಗೋಡೆ ಮೇಲೆ ಹತ್ತಿಹೋಗಲು ಎಲ್ಲಿ ಹಾಸಿಗೆಯನ್ನು ಮೇಲೆ ಹತ್ತಬಹುದಾದ ಏಣಿಯಂತೆ ಉಪಯೋಗಿಸಿಕೊಳ್ಳು ವೆನೋ ಎಂಬ ಅನುಮಾನದಿಂದಲೋ ನನ್ನ ಹಾಸಿಗೆಯನ್ನು ಸರಪಳಿಗಳಿಂದ ಬಿಗಿದಿಟ್ಟಿದ್ದರು................... ಕೆಲವು ದಿವಸಗಳವರೆಗೆ ನನ್ನನ್ನು ಇಟ್ಟಿದ್ದ ಆವರಣದಿಂದ ವ್ಯಾಯಾಮಕ್ಕಾಗಲಿ ಅಥವಾ ಇನ್ಯಾವುದಕ್ಕಾಗಲಿ ಹೊರಗಡೆ ಹೋಗಲು ಬಿಡುತ್ತಿರಲಿಲ್ಲ. ತರುವಾಯ ಬೆಳಗಿನ ಝಾವ ಇನ್ನೂ ಕತ್ತ ಲಾಗಿದ್ದ ಹೊತ್ತಿನಲ್ಲಿ ಹೊರಗಿನ ಕಾಂಪೌಂಡು ಗೋಡೆಯ ಒಳಗಡೆ ಓಡಾಡಲು ಅಥವಾ ಓಡಲು ಅರ್ಧ ಗಂಟೆಕಾಲ ಮಾತ್ರ ಬಿಡುತ್ತಿದ್ದರು. ಇತರ ಬಂದಿಗಳನ್ನೂ ನಾನು ಸಂಪರ್ಕಿಸದಿರಲೆಂದೂ, ಇತರ ಬಂದಿಗಳ ಕಣ್ಣಿಗೆ ನಾನು ಬೀಳದಿರಲೆಂದೂ ಹಾಗೆ ಬೆಳಗಿನ ಝಾವ ಅಷ್ಟು ಮುಂಚೆಯ ಕಾಲವನ್ನು ಗೊತ್ತುಮಾಡಲಾಗಿದ್ದಿತು". (ಪು. 217–218)

"ಪ್ರತಿದಿನವೂ ಸುಮಾರು ಮೂರು ಗಂಟೆಗಳಕಾಲ ನನ್ನ ಸ್ವಂತ 'ಚರಖ'ದಲ್ಲಿ ನೂಲು ತೆಗೆಯುತ್ತಿದ್ದೆ ಮತ್ತು ಜೈಲು ಅಧಿಕಾರಿಗಳಿಂದ ವಿಶೇಷ ಅನುಮತಿ ಪಡೆದು ಇನ್ನೆರಡು ಅಥವಾ ಮೂರು ಗಂಟೆಗಳ ಕಾಲ **'ನೆವಾರ್'** ನೆಯ್ಗೆ ಮಾಡುವುದರಲ್ಲಿ ಕಾಲ ಕಳೆಯುತ್ತಿದ್ದೆ. ಬಹಳವಾಗಿ ಓದುತ್ತಿದ್ದೆ. ಮಿಕ್ಕ ಕಾಲದಲ್ಲಿ ರೂಮು ಚೊಕ್ಕಟಮಾಡುವುದು, ನನ್ನ ಬಟ್ಟೆಗಳನ್ನು ಒಗೆಯುವುದು ಇತ್ಯಾದಿಗಳಲ್ಲಿ ನಿರತನಾಗಿರುತ್ತಿದ್ದೆ. ನನ್ನ

ಶಿಕ್ಷೆ ಸಾದಾ ಜೈಲುವಾಸ" (ಸಿಂಪಲ್ ಇಂಪ್ರಿಸನ್‌ಮೆಂಟ್) ಆಗಿದ್ದುದರಿಂದ ದೈಹಿಕ ಶ್ರಮಕಾರ್ಯಗಳೆಲ್ಲವೂ ನನ್ನ ಇಚ್ಛೆಯಂತೆಯೇ ಮಾಡುವಂತಹುವಾಗಿದ್ದವು." (ಪು. 224)

1930ರ ಜೂನ್ 20 ರಂದು ಬಂಧಿಸಲಾದ ಮೋತಿಲಾಲ್ ನೆಹರೂ ಅವರನ್ನು ಜವಾಹರಲಾಲ್ ಅವರಿದ್ದ ರೂಮಿಗೇ ಇನ್ನೂ ಇಬ್ಬರೊಡನೆ ಸೇರಿಸಿದರು. ಈ ಸಂದರ್ಭ ಕುರಿತು ನೆಹರೂ ಅವರು ಹೀಗೆ ಹೇಳುತ್ತಾರೆ:

"ಜೈಲಿಗೆ ಬಂದಾಗ ತಂದೆಯವರ ದೇಹಸ್ಥಿತಿ ತುಂಬ ಹದಗೆಟ್ಟಿದ್ದಿತು. ಅವರನ್ನು ಇಡಲಾಗಿದ್ದ ಸ್ಥಿತಿಗಳಲ್ಲಿ ಅವರಿಗೆ ತುಂಬ ಅಸಾನುಕೂಲವಾಗಿದ್ದಿತು... ನಾನಿದ್ದ ಬ್ಯಾರಕ್ಕಿನ ನಾಲ್ಕು ಚಿಕ್ಕ ಚಿಕ್ಕ ರೂಂಗಳಲ್ಲಿ ನಾವು ನಾಲ್ವರನ್ನು ಒಟ್ಟು ಸೇರಿಸಲಾಗಿದ್ದಿತು." (ಪು. 226)

ಸ್ತ್ರೀಯರನ್ನು ಜೈಲುಗಳಲ್ಲಿ ಗಂಡಸರಿಗಿಂತಲೂ ಹೆಚ್ಚು ಕಠಿಣವಾಗಿ ನೋಡಿಕೊಳ್ಳುತ್ತಿದ್ದುದನ್ನು ಗಮನಿಸಿದ ನೆಹರೂ ಅವರು ಹೀಗೆ ನುಡಿದಿದ್ದಾರೆ:

"ದೀರ್ಘಕಾಲಾವಧಿಯ ಜೈಲುವಾಸದ ಶಿಕ್ಷೆಯಿಂದಲೂ, ಜೈಲಿನಲ್ಲಿ ತುಂಬ ಕೀಳುತರದಲ್ಲಿ ನೋಡಿಕೊಳ್ಳುವುದರಿಂದಲೂ ಹೆಂಗಸರನ್ನು ನಿರುತ್ತೇಜನಗೊಳಿಸಲು ಸರ್ಕಾರವು ನಿರ್ಧರಿಸಿತ್ತು. ನನ್ನ ಸಹೋದರಿಯನ್ನು ಬಂಧಿಸಿದ ಸಂದರ್ಭದಲ್ಲಿ ಬಹುಮಟ್ಟಿಗೆ 15–16 ವರ್ಷ ವಯಸ್ಸಿನ ಅನೇಕ ಯುವತಿಯರು ತಾವು ಏನು ಮಾಡಬೇಕೆಂಬುದನ್ನು ಚರ್ಚಿಸಲು ಅಲಹಾಬಾದಿನಲ್ಲಿ ಸಭೆ ಸೇರಿದ್ದರು... ಒಂದು ಖಾಸಗಿ ಗೃಹದಲ್ಲಿ ಸೇರಿ ಸಭೆ ನಡೆಸುತ್ತಿದ್ದಾಗ ಅವರೆಲ್ಲರನ್ನೂ ಬಂಧಿಸಿ ಒಬ್ಬೊಬ್ಬರಿಗೂ ಎರಡು ವರ್ಷದ ಕಠಿಣ ಜೈಲುವಾಸದ (Rigorous Imprisonment) ಶಿಕ್ಷೆಯನ್ನು ವಿಧಿಸಲಾಯಿತು. ಪ್ರತಿದಿನವೂ ದೇಶದ ಆದ್ಯಂತವೂ ನಡೆಯುತ್ತಿದ್ದ ಅನೇಕ ಘಟನೆಗಳಲ್ಲಿ ಇದು ಒಂದು ಸಣ್ಣ ಘಟನೆ. ಜೈಲು ಶಿಕ್ಷೆ ವಿಧಿಸಲಾಗಿದ್ದ ಬಹುಮಂದಿ ಹುಡುಗಿಯರು ಹಾಗೂ ಇತರ ಸ್ತ್ರೀಯರು ಜೈಲಿನಲ್ಲಿ ಬಹಳ ಕಷ್ಟ ಪರಿಸ್ಥಿತಿ

ಯನ್ನು, ಪುರುಷರು ಅನುಭವಿಸುತ್ತಿದ್ದುದಕ್ಕಿಂತಲೂ ಹೆಚ್ಚು ಕಷ್ಟಗಳನ್ನು ಅನುಭವಿಸುತ್ತಿದ್ದರು." (ಪು. 330)

ಂ ಂ ಂ ಂ

ರಾಜಕೀಯ ಬಂದಿಗಳನ್ನು ಒಳಪಡಿಸುತ್ತಿದ್ದ ಒಂದು ಅವಮಾನಕರ ಜೈಲು ನಿಯಮವನ್ನು ಸ್ವಾತಂತ್ರ್ಯ ಚಳುವಳಿಯ ಕರ್ನಾಟಕದ ವೀರ ಸರ್ದಾರ್ ವೆಂಕಟರಾಮಯ್ಯನವರು ತಮ್ಮ **'ಸತ್ಯಾಗ್ರಹಿಯ ನೆನಪುಗಳಲ್ಲಿ'** ಹೀಗೆ ನಿರೂಪಿಸಿರುತ್ತಾರೆ :–

"ಸೋಮವಾರ ಬೆಳಿಗ್ಗೆ ಸತ್ಯಾಗ್ರಹಿಗಳೆಲ್ಲ ತಮ್ಮ ಪ್ರಾರ್ಟೀಶಿಷಾಸದ ಕಾರ್ಡುಗಳನ್ನು ಬಲಗೈಯಲ್ಲಿ ಹಿಡಿದುಕೊಂಡು, ಕುಕ್ಕರಗಾಲಿನಲ್ಲಿ ನೆಲದ ಮೇಲೆ ಕುಳಿತು, ತಲೆ ಬಗ್ಗಿಸಿಕೊಂಡು ನೆಲವನ್ನೇ ನೋಡುತ್ತಿದ್ದುದನ್ನು ಕಾಣಬೇಕಾಯಿತು. ಅವರು ಯಾರೂ ಮುಖವೆತ್ತಿ ಜೈಲ್ ಸೂಪರಿಂಟೆಂಡೆಂಟರನ್ನು ನೋಡುವಹಾಗಿರಲಿಲ್ಲ. ನಾನು ಸೂಚನೆಯಂತೆ ಸಾಲಿನಲ್ಲಿ ಕುಳಿತೆ. ಆದರೆ, ಸೂಪರಿಂಟೆಂಡೆಂಟ್ ಮೋನೆಯವರು ನನ್ನ ಬಳಿ ಬಂದಾಗ ಎದ್ದುನಿಂತೆ. ಜೈಲು ಅಧಿಕಾರಿ ಕುರಲ್‌ಕರ್ ನನ್ನ ಭುಜದ ಮೇಲೆ ಕೈಹಾಕಿ ನನ್ನನ್ನು ಕೂರಲು ಜಗ್ಗಿಸಿದರು. ನಾನು ಜಗ್ಗಲಿಲ್ಲ.

"ಏನು, ನನಗೆ ಹೇಳಬೇಕಾದದ್ದೇನಾದರೂ ಇದೆಯೋ ?" ಎಂದು ಸೂಪರಿಂಟೆಂಡೆಂಟ್ ಮೋನೆ ಕೇಳಿದರು.

"ಏನೂ ಇಲ್ಲ ಸ್ವಾಮಿ"

"ಹಾಗಾದರೆ ನಿಂತಿದ್ದೇಕೆ ?"

"ಯಾಕೆಂದರೆ ಈ ರೀತಿ ಕುಕ್ಕರಗಾಲಿನಲ್ಲಿ ಕೂರುವುದು ನನಗೆ ಅಭ್ಯಾಸವಾಗಿಲ್ಲ."

"ಜೈಲು ನಿಯಮಗಳನ್ನು ನೀವು ಪಾಲಿಸಲೇಬೇಕು."

"ಹೌದು, ಅವು ನಮ್ಮ ಆತ್ಮಗೌರವಕ್ಕೆ ಚ್ಯುತಿಯುಂಟುಮಾಡದಿರುವವರೆಗೆ"

ಈ ಮೇಲಿನ ಪ್ರಸಂಗ ನಡೆದ ನಂತರ ಕ್ರಮೇಣ ಯಾವ ಕಾರಣದಿಂದಲೂ ಆ ಜೈಲಿನಲ್ಲಿ ಸತ್ಯಾಗ್ರಹಿ ಬಂದಿಗಳು ಕುಕ್ಕರುಗಾಲಿನಲ್ಲಿ ಪೂರ್ವೋಕ್ತಿ ಹಾಸದ ಕಾರ್ಡನ್ನು ಹಿಡಿದು ತಲೆತಗ್ಗಿಸಿಕೊಂಡು ಕೂರುವ ಅವಮಾನಕರವಾದ ಸೋಮವಾರದ ಪೆರೇಡನ್ನು ನಿಲ್ಲಿಸಲಾಯಿತೆಂದು ಸರ್ದಾರ್ ವೆಂಕಟರಾಮಯ್ಯನವರು ಹೇಳಿರುತ್ತಾರೆ.

[**ನೋಡಿ:** ಸರ್ದಾರ್ ವೆಂಕಟರಾಮಯ್ಯ, **ಸತ್ಯಾಗ್ರಹಿ,** ಐಬಿಎಚ್ ಪ್ರಕಾಶನ, ಬೆಂಗಳೂರು, 1983, ಪುಟ 297.]

✤✤✤

ರಾಷ್ಟ್ರಗೀತೆ – ಜನಗಣಮನ

"ಜನಗಣಮನ ಗೀತೆ"ಯನ್ನು ಸುಪ್ರಸಿದ್ಧ ಕವಿ ರಬೀಂದ್ರನಾಥ ಟಾಗೂರ್ ಅವರು ಬರೆದು ಪ್ರಥಮತಃ ೧೯೧೨ ರಲ್ಲಿ ಅವರೇ ಸಂಪಾದಕರಾಗಿದ್ದ 'ತತ್ವಬೋಧಿನಿ ಪತ್ರಿಕಾ' ಎಂಬುದರಲ್ಲಿ 'ಭಾರತ್ ವಿಧಾತಾ' ಎಂಬ ಹೆಸರನ್ನಿಟ್ಟು ಪ್ರಕಟಿಸಿದರು. ೧೯೫೦ರ ಜನವರಿ ೨೪ ರಂದು ಇದರ ಮೊದಲನೆ ಗೀತೆಯನ್ನು ಭಾರತದ ರಾಷ್ಟ್ರಗೀತೆಯಾಗಿ ಅನುಮೋದಿಸಲಾಯಿತು–

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ – ಉತ್ಕಲ – ವಂಗಾ
ವಿಂಧ್ಯ – ಹಿಮಾಚಲ – ಯಮುನಾ – ಗಂಗಾ
ಉಚ್ಛಲ – ಜಲಧಿ – ತರಂಗಾ
ತವಶುಭನಾಮೇ ಜಾಘೇ
ತವಶುಭ ಆಶಿಷ ಮಾಘೇ
ಗಾಹೇ ತವಜಯ ಗಾಥಾ
ಜನಗಣ ಮಂಗಳದಾಯಕ, ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ, ಜಯಹೇ, ಜಯಹೇ
ಜಯ ಜಯ ಜಯ ಜಯಹೇ
ಭಾರತ ಭಾಗ್ಯ ವಿಧಾತಾ ॥ ೧ ॥

ಅಹರ ಹತವ ಆಹ್ವಾನ ಪ್ರಚಾರಿತ ಸುನಿತವ ಉದಾರವಾಣೀ।
ಹಿಂದು ಬೌದ್ಧಸಿಖ ಜೈನಪಾರಸಿಕ ಮುಸಲ್ಮಾನ ಕ್ರಿಸ್ತಾನಿ
ಪೂರವ ಪಶ್ಚಿಮ ಆಸೇ
ತವ ಸಿಂಹಾಸನ ಪಾಸೇ
ಪ್ರೇಮಹಾರ ಹೊಯಗಾಥಾ
ಜನಗಣ ಮಂಗಳ ದಾಯಕ ಜಯಹೇ ಭಾರತ ಭಾಗ್ಯ ವಿಧಾತಾ।
ಜಯಹೇ ಜಯಹೇ ಜಯಹೇ ಜಯ ಜಯ ಜಯ ಜಯಹೇ
ಭಾರತ ಭಾಗ್ಯ ವಿಧಾತಾ ॥ ೧ ॥

ಪತನ ಅಭ್ಯುದಯ ಬಂಧುರ ಪಂಥಾ ಯುಗ ಯುಗ ಧಾವಿತಯಿಂತ್ರೀ ಯಾತ್ರೀ।
ತುಮಿಚಿರ ಸಾರಥಿ ತವರಥ ಚಕ್ರೇ ಮುಖರಿತ ಪಥದಿನರಾತ್ರೀ।
ದಾರುಣ ವಿಪ್ಲವ ಮಾಝೇ
ತವ ಶಂಖ ಧ್ವನಿ ಬಾಜೇ
ಸಂಕಟ ದುಃಖ ತ್ರಾಣ
ಜನಗಣ ಪಥ ಪರಿಚಾಯಕ ಜಯಹೇ ಭಾರತ ಭಾಗ್ಯ ವಿಧಾತಾ।
ಜಯಹೇ, ಜಯಹೇ, ಜಯಹೇ, ಜಯ ಜಯ ಜಯ ಜಯಹೇ ॥
ಭಾರತ ಭಾಗ್ಯ ವಿಧಾತಾ ॥ ೨ ॥

ಘೋರತಿ ಮಿಲಘನ ನಿಬಿಡನಿಶೀಥೇ। ಪೀಡಿತ ಮೂರ್ಛಿತ ದೇಶೇ।
ಜಾಗ್ರತ ಪುಲತುಮಿ ಅವಿಚಲ ಮಂಗಲ ನತನಯನೇ ಅನಿಮೇಷೇ।
ದುಃಸ್ವಪ್ನೇ ಆತಂಕೇ
ರಕ್ಷಾಕರಿಲೇ ಅಂಕೇ
ಪ್ರೇಮಮಯಿಾ ತುಮಿ ಮಾತಾ
ಜನಗಣ ದುಃಖ ತ್ರಾಯಕ ಜಯಹೇ ಭಾರತ ಭಾಗ್ಯ ವಿಧಾತಾ

ಜಯಹೇ ಜಯಹೇ ಜಯಹೇ ಜಯ ಜಯ ಜಯ ಜಯಹೇ
ಭಾರತ ಭಾಗ್ಯ ವಿಧಾತಾ || ೪ ||

ರಾತ್ರಿ ಪ್ರಭಾತಿಲೊ ಉದಿಲೋ ರವಿಚ್ಛವಿ ಪೂರ್ವ ಉದಯಗಿರಿ ಭಾಲೇ
ಗಾಹೆ ವಿಹಂಗವು ಪುಣ್ಯ ಸಮಿೀರಣ | ನವಜೀವನ್ಸ್‌ರಸಢಾಲೇ
ತವ ಕರುಣಾರುಣ ರಾಗೇ
ನಿದ್ರಿತ ಭಾರತ ಜಾಗೇ
ತವಚರಣೇ ನತ ಮಾತಾ
ಜಯಹೇ ಜಯಹೇ ಜಯಹೇ ಜಯ ರಾಜೇಶ್ವರಿ
ಭಾರತ ಭಾಗ್ಯ ವಿಧಾತಾ || ೫ ||

— ಜೈಹಿಂದ್ —

ವಂದೇ ಮಾತರಂ

1882 ರಲ್ಲಿ ಬಂಕಿಂಚಂದ್ರ ಚಟರ್ಜಿಯವರು ರಚಿಸಿದ 'ವಂದೇ ಮಾತರಂ' ಗೀತೆಯು ಕಾಂಗ್ರೆಸ್ಸಿನ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿಗೀತೆಯಾಯಿತು. ಇದಕ್ಕೂ 'ಜನಗಣಮನ' ರಾಷ್ಟ್ರಗೀತೆಯ ಅಂತಸ್ತು ನೀಡಲಾಗಿದೆ.

ವಂದೇ ಮಾತರಂ
ಸುಜಲಾಂ ಸುಫಲಾಂ ಮಲಯಜಶೀತಲಾಂ
ಸಸ್ಯಶ್ಯಾಮಲಂ ಮಾತರಂ |

ಶುಭ್ರಜ್ಯೋತ್ಸ್ನಾ-ಪುಲಕಿತ ಯಾಮಿನೀಂ
ಪುಲ್ಲ ಕುಸುಮಿತಾ-ದ್ರುಮದಲ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ ||

ಸಪ್ತಕೋಟಿಕಂಠ ಕಲಕಲನಿನಾದ ಕರಾಲೇ
ದ್ವಿಸಪ್ತಕೋಟಿ ಭುಜೈರ್ಧೃತಖರಕರವಾಲೇ
ಅಬಲಾ ಕೇನಮಾ ಎತಬಲೇ ||

ಬಹುಬಲಧಾರಿಣೀಂ
ನಮಾಮಿತಾರಿಣೀಂ
ರಿಪುದಲವಾರಿಣೀಂ
ಮಾತರಂ ||

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಧರ್ಮ
ತ್ವಂ ಹಿ ಪ್ರಾಣಾಃ ಶರೀರೇ ||

ಬಾಹು ತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಈ ಪ್ರತಿಮಾಗಡಿ
ಮಂದಿರೇ ಮಂದಿರೇ

ತ್ವಂ ಹಿ ದುರ್ಗಾ ದಶಪ್ರಹರಣ ಧಾರಿಣೀ ।
ಕಮಲಾ ಕಮಲ–ದಲ ವಿಹಾರಿಣೀ
ವಾಣೀ ವಿದ್ಯಾದಾಯಿನೀ

ನಮಾಮಿ ತ್ವಾಂ
ನಮಾಮಿ ಕಮಲಾಂ
ಅಮಲಾಂ ಅತುಲಾಂ
ಸುಜಲಾಂ ಸುಫಲಾಂ
ಮಾತರಂ
ವಂದೇ ಮಾತರಂ

ಶ್ಯಾಮಲಾಂ ಸರಲಾಂ
ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ
ಮಾತರಂ

ಒಂದು ಪ್ರಾರ್ಥನೆ

ಶ್ರೀರಸ್ತು ಸ್ವಸ್ತಿಮಾತೇ ಜಗದಖಿಲಹಿತೇ ದಿವ್ಯತೇಜೋವಿಭೂತೇ ।
ಪೌರಾಣೀ ಪುಣ್ಯವಾಣೀ ಬಹುಕುಲಜನನೀ ಬ್ರಹ್ಮವಿಜ್ಞಾನದಾನೀ ॥
ಪಾರಕ್ಯಾಕ್ರಾಂತಿಯಿಾಗಳ್ ಪರಿದುದು ಗೆಲಿದಾ ಭಾರತೀ ರಾಜ್ಞಿಯೋಗೀ ।
ಸ್ವೈರಾಧೀಶಿತ್ವ ಸಿಂಹಸನದಿ ವಿಜಯಿ ಸೌಧರ್ಮ ದೀಕ್ಷಾ ಪ್ರಶಸ್ತೇ ॥

ತಾತ್ಪರ್ಯ :— ತಾಯೇ, ನಿನಗೆ ಎಲ್ಲ ವಿಧವಾದ ಸಂಪತ್ತುಗಳೂ ಉಂಟಾಗಲಿ. ನಿನಗೆ ಒಳ್ಳೆಯದಾಗಲಿ. ಸಮಸ್ತಲೋಕಕ್ಕೂ ಹಿತವಾಗ ಬೇಕೆಂದು ಬಯಸುವವಳೇ, ದೇವಸಂಬಂಧವಾದ, ಅಂದರೆ, ಅಧ್ಯಾತ್ಮದ ತೇಜಸ್ಸನ್ನು ವಿಭೂತಿಯನ್ನಾಗಿ, ಅಂದರೆ, ನಿನ್ನ ಪರಮೈಶ್ವರ್ಯವನ್ನಾಗಿ ಹೊಂದಿದವಳೇ, ಪುರಾತನ ಕಾಲದವಳೇ, ಪುಣ್ಯದ ಮಾರ್ಗವನ್ನು ಬೋಧಿಸುವ ಉಪನಿಷತ್ತು, ರಾಮಾಯಣ, ಭಾರತಗಳನ್ನು ಹೇಳುವವಳೇ, ನಿನ್ನಲ್ಲಿ ಹುಟ್ಟಿ ಬೆಳೆದವರನ್ನು ಮಾತ್ರವಲ್ಲದೆ ನಿನ್ನ ಆಶ್ರಯಕ್ಕೆ ಬೇರೆ ಕಡೆಗಳಿಂದ ಬಂದವರನ್ನು ಕೂಡ ತಾಯಿಯಂತೆ ಕಾಪಾಡುವವಳೇ. ಪರಬ್ರಹ್ಮವಸ್ತುವನ್ನು ಕುರಿತ ವಿಶಿಷ್ಟವಾದ ಜ್ಞಾನವನ್ನು ಜಗತ್ತಿಗೆ ದಾನ ಮಾಡುವವಳೇ, ಪರಕೀಯರಿಂದ ಆದ ಆಕ್ರಮಣವು ಈಗ ಹರಿದು ಓಡಿ ಹೋಯಿತು. ಭರತನಂತೆ ಅಸ್ವಾರ್ಥವಾದ ನಡತೆಯನ್ನು ಉಳ್ಳವಳೇ, ಈಗ ನೀನು ಗೆದ್ದೆ, ಆದರೆ ಸ್ವತಂತ್ರಳಾದೆ. ಧರ್ಮಮಾರ್ಗದಲ್ಲಿ ನಡೆಯುತ್ತೇನೆಂದು ದೀಕ್ಷೆತೊಟ್ಟು, ಅದರಂತೆ ನಡೆದು ಪ್ರಶಸ್ತಿಯನ್ನು ಪಡೆದವಳೇ, ಈಗ ನೀನು ರಾಣಿಯಾಗಿ ನಿನ್ನ ಇಷ್ಟಬಂದ ಹಾಗೆ ಅಧಿದೇವಿಯ ಸಿಂಹಾಸನದಲ್ಲಿ ಕುಳಿತು ವಿಜಯವನ್ನು ಪಡೆ[1].

---

1. ಇದು ೧೯೪೭ ರಲ್ಲಿ ನಮ್ಮ ದೇಶ ಸ್ವತಂತ್ರವಾದಾಗ ಪೂಜ್ಯ ಡಾ। ಡಿ. ವಿ. ಗುಂಡಪ್ಪನವರು ರಚಿಸಿದ ೨೪ ವೃತ್ತಗಳ ಪದ್ಯಪ್ರಬಂಧದಲ್ಲಿ ಒಂದಾಗಿದೆ.

ನೋಡಿ:

ಶ್ರೀ ಡಿ. ವಿ. ಜಿ. ಅವರ **ಭಾರತ ಭೂವಂದನಂ** [ಜಿ. ಪಿ. ರಾಜರತ್ನಂ ಅವರ ಅರ್ಥವಿವರಣೆಗಳೊಂದಿಗೆ] ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಬೆಂಗಳೂರು, ಜನವರಿ ೨೬, ೧೯೭೮. ಪುಟ ೧.

ಝಂಡೇ ಕಾ ಗೀತ್

ವಿಜಯೀ ವಿಶ್ವ ತಿರಂಗಾ ಪ್ಯಾರಾ
ಝಂಡಾ ಊಂಚಾ ರಹೇ ಹಮಾರಾ ।

ಸದಾ ಶಕ್ತಿ ಬರಸಾನೇವಾಲಾ
ಪ್ರೇಮ–ಸುಧಾ ಸರಸಾನೇವಾಲಾ
ವೀರೋಂಕೋ ಹರ್ಷಾನೇವಾಲಾ
ಮಾತೃಭೂಮಿಕಾ ತನ–ಮನ–ಸಾರಾ । (ಝಂಡಾ......)

ಸ್ವತಂತ್ರತಾಕೇ ಭೀಷಣ ರಣಮೇ
ಲಖ್‌ಕರ್ ಬಢೇ ಜೋಶ್ ಕ್ಷಣ್ ಕ್ಷಣಮೇ
ಕಾಂಪೇ ಶತ್ರು ದೇಖ್‌ಕರ್ ಮನ್ ಮೇ
ಮಿಟ್ ಜಾವೇ ಭಯ್ ಸಂಕಟ ಸಾರಾ । (ಝಂಡಾ......)

ಆಓ ಪ್ಯಾರೇ ವೀರೋ ಆಓ
ಮಾತೃಭೂಮಿ ಪರ್ ಬಲಿ–ಬಲಿ ಜಾಓ
ಏಕ್ ಸಾಥ್ ಸಬ್ ಮಿಲ್‌ಕರ್ ಗಾಓ
ಪ್ಯಾರಾ ಭಾರತ ದೇಶ ಹಮಾರಾ । (ಝಂಡಾ......)

ಇಸ್‌ಕೀ ಶಾನ್ ನ ಜಾನೇ ಪಾವೇ
ಚಾಹೇ ಜಾನ್ ಭಲೇ ಹೀ ಜಾವೇ
ವಿಶ್ವ ವಿಜಯ್ ಕರ್‌ಕೇ ದಿಖಲಾವೇ
ತಬ್ ಹೋವೇ ಪ್ರಣ್ ಪೂರ್ಣ ಹಮಾರಾ । (ಝಂಡಾ......)

ಹಿಂದೋಸ್ತಾಂ ಹಮಾರಾ

ಸಾರೇ ಜಹಾಂ ಸೇ ಅಚ್ಛಾ, ಹಿಂದೋಸ್ತಾಂ ಹಮಾರಾ ।
ಹಮ್ ಬುಲ್ ಬುಲೇ ಹೈಂ ಇಸ್‌ಕೀ, ಯಹ್ ಜೋಸ್ತಾಂ ಹಮಾರಾ ॥

ಗುರ್‌ಬತ್‌ಮೇಂ ಹೋ ಅಗರ್ ಹಮ್, ರಹ್‌ತಾಹೈ ದಿಲ್ ವತನ್‌ಮೇಂ
ಸಮ್‌ಝೋ ವಹೀಂ ಹಮೇಂ ಭೀ, ದಿಲ್ ಹೋ ಜಹಾಂ ಹಮಾರಾ ॥

ಪರ್‌ಬತ್ ವೋ ಸಬ್‌ಸೇ ಊಂಚಾ, ಹಮ್ ಸಾಯಾ ಆಸ್‌ಮಾಕಾಂ ।
ವಹ್ ಸಂತರೀ ಹಮಾರಾ, ವಹ್ ಪಾಸ್‌ಬಾಂ ಹಮಾರಾ ॥

ಗೋದೀಮೇಂ ಖೇಲ್‌ತೀ ಹೈಂ, ಜಿಸ್‌ಕೀ ಹಜಾರೋಂ ನದಿಯಾಂ ।
ಗುಲ್‌ಶನ್ ಹೈ ಜಿನ್‌ಕೇ ದಮ್‌ಸೇ, ರಶ್‌ಕೇ ಜಿನಾಂ ಹಮಾರಾ ॥

ಐ ಆಬೋರೋದ್ ಗಂಗಾ ! ವಹ್ ದಿನ್ ಹೈ ಯಾದ್ ತುಝ್‌ಕೋ
ಉತರಾ ತೇರೇ ಕಿನಾರೇ, ಜಬ್ ಕಾರ್‌ವಾಂ ಹಮಾರಾ ॥

ಮಜ್‌ಹಬ್ ನಹೀಂ ಸಿಖಾತಾ, ಆಪಸ್ ಮೇಂ ಬೈರ್ ರಖ್‌ನಾ ।
ಹಿಂದೀ ಹೈಂ ಹಮ್, ವತನ್ ಹೈ ಹಿಂದೋಸ್ತಾಂ ಹಮಾರಾ ॥

ಕುಛ್ ಬಾತ್ ಹೈ ಕಿ ಹಸ್ತೀ, ಮಿಟ್‌ತೀ ನಹೀಂ ಹಮಾರೀ ।
ಸದಿಯೋಂ ರಹಾ ಹೈ ದುಶ್‌ಮನ್, ದೌರೇ-ಜಮಾಂ ಹಮಾರಾ ॥

'ಇಕ್‌ಬಾಲ್' ಕೋಈ ಮಹ್‌ರಮ್ ಅಪನಾ ನಹೀಂ ಜಹಾಂ ಮೇಂ ।
ಮಾಲೂಮ್ ಕ್ಯಾ ಕಿಸೀಕೋ ದರ್ದೇ ನಿಹಾಂ ಹಮಾರಾ ॥

✣✣✣

ವೈಷ್ಣವ ಜನತೋ

ವೈಷ್ಣವ ಜನತೋ ತೇನೆ ಕಹಿಯೇ ಜೇ ಪೀಡಪರಾಯೀ ಜಾಣೇರೇ ।
ಪರದುಃಖೇ ಉಪಕಾರ ಕರೆತೋಯೆ ಮನ ಅಭಿಮಾನನ ಆಣೇರೇ ॥

ಸಕಲಲೋಕಮಾಂ ಸೌನೇವಂದೇ ನಿಂದಾ ನ ಕರೆ ಕೇನೀರೇ ।
ವಾಚಕಾವುಮನ ನಿಶ್ಚಲ ರಾಖೇ ಧನಧನ ಜನನೀ ತೇನೀರೇ ॥

ಸಮದೃಷ್ಟೀನೇ ತೃಷ್ಣಾ ತ್ಯಾಗೀ ಪರಸ್ತ್ರೀಜನೆ ಮಾತರೇ ।
ಜಿಹ್ವಾತಕೀ ಅಸತ್ಯ ನ ಬೋಲೇ ಪರಧನ ನವ ಝಾಲೇ ಹಾಥರೇ ॥

ಮೋಹಮಾಯಾ ವ್ಯಾಪೀನಹೀಂ ದೃಢವೈರಾಗ್ಯ ಜೇನಾ ಮನಮಾಂರೇ ।
ರಾಮನಾಮ ಸೂಂತಾಲೀ ಲಾಗೀ ಸಕಲ ತೀರತ್ರ ತೇನಾ ತನಮಾಂರೇ ॥

ವಣಲೋಭೀನೇ ಕಪಟರಹಿತ ಛೆ ಕಾಮಕ್ರೋಧ ನಿವಾರ್ಯಾರೇ ।
ಭಣೆನರ ಸೈಯೋ ತೇನು ದರಶನ ಕರತಾಂಕುಲ ಏಕೋತೇರತಾರ್ಯಾರೇ ॥

—o—

ರಘುಪತಿ ರಾಘವ ರಾಜಾರಾಂ
ಪತೀತ ಪಾವನ ಸೀತಾರಾಂ
ಈಶ್ವರ ಅಲ್ಲಾ ತೇರೇ ನಾಂ
ಸಬಕೋ ಸನ್ಮತಿ ದೇ ಭಗವಾನ್

SELECT BIBLIOGRAPHY

* Alladi Vaidehi, *1857 and after, Epic struggle for freedom in India* Hyderabad, 1985
* Allan Campbell-Johnson, *Mission with Mountbatten* Robert Stale, London, 1953
* Ashok Mehta & Achyut Patwardhan, *The Communal Tangle*, Allahabad, 1946.
* Azad Abul Kalam, *India wins freedom*, Bombay 1959.
* Babu Krishnamurthy, *Adamya*. Rashtrothana Sahitya, Bangalore, 1984.
* Babu Krishnamurthy, *Ajeya*. Rashtrothana Sahitya, Bangalore, 1974.
* Brailford H. N., *Subject India*. Bombay, 1946.
* Chand, Tara, *History of the Freedom Movement in India*, Vol. I, New Delhi, 1961.
* Chatterji A. C., *India's Struggle for Freedom*, Calcutta, 1947.
* Chaudhri S. B., *Civil Disturbances during the British Rule in India*, 1765 to 1857, World Press, Calcutta, 1955
* Chaudhri S. B., Civil Rebellion in Indian Mutinies, 1857 – 58, Calcutta, 1957.
* *Congress Presidential Address*, [Second Series], G. A. Natesan & Co.

* Desikachar S. V., *Readings in the Constitutional History of India,* 1757–1947 O U P Delhi,1983

* Gandhi M. K., *The Story of My Experiments with Truth,* Boston, USA, 1950.

* Garrat G. J., *An Indian Commentary,* London, Butler & Tanner Ltd., 1918.

* Griffiths, Sir Percival, *Modern India,* London, 1957.

* Gupta D. C., *Indian National Movement,* Vikas, 1970.

* Kripalani J. B., *Gandhi'* Publications Division, New Delhi, 1970.

* Leonard Mosley, *The last days of the British Raj,* London, 1961.

* Mahajan V. D., *India Since 1526,* Chand & Co., New Delhi, 1964.

* Mujumdar R. C., *History of the Freedom Movement in India,* Calcutta, 1963.

* Mujumdar R. C., The sepoy Mutiny and the Revolt of 1857, Calcutta, 1957.

* Manserg N. and Moon, P., (Editors), *The transfer of Power,* Vol. IX UBS., New Delhi, 1980.

* Menon V. P., *The Transfer of Power in India,* Orient Longman, Bombay 1957.

* Nagarkar V. V., *Genesis,* Allied, Bombay, 1957

* Narayanaswamy K. S. [Ed.] *Namma Adarsha Grama Mahatma Gandhi* Karnataka Gandhi Smaraka Nidhi, Bangalore 1984.

* Nehru Jawaharlal, *The Glimpses of World History. Asia,* Bombay, 1962.

* Nehru Jawaharlal., *Discovery of India*, Calcutta, Signet Press, 1946.
* Nehru, Jawaharlal, *An Autobiography*, Allied Publisher, 1962.
* Rajendra Verma, *The Freedom struggle in Bhopal State*, (A gambit in the Transfer of Power) – Intellectual Publishing House, 23, Ansari Road, Daryaganj, New Delhi.
* Rajendra Prasad, *India Divided*, Bombay, 1946.
* Seshadri H. V., *The Tragic Story of Partition*, Jagarana Prakashana, Bangalore, 1982.
* Sharma T. T., *Vikranta Bharatha*, Rashtrothana Sahitya, Bangalore
* Shivaramu *Atmahuti*, Rashtrothana Sahitya. Bangalore, 1970
* Sitaramayya B Pattabhi, *The History of the Indian National Congress*, 1885–1935, Vol–I, Bombay, 1948
* Sitaramayya B Pattabhi, *The History of the Congress*, Congress working Committee, Allahabad, 1935.
* Tendulkar D. G., *Mahatma – Life of Mohandas Karamchand Gandhi*, Vols. I to VIII, Government of India, Revised Edition, 1961.
* Vakil C. N., *Economic Consequences of Divided India*, Vora, Bombay, 1950
* Venkataramaiah Sardar, *Satya–grahiya Nenapugalu*, I B H Prakashana, Bangalore, 1983.

—o—

Nehru Jawaharlal, *Discovery of India*, Calcutta, Signet Press, 1946.

Nehru, Jawaharlal, *[illegible] Autobiography*, Allied Publisher, 1962.

Rajendra Verma, *The Freedom Struggle in Mysore State* (A gambit in the Transfer of Power) - Intellectual Publishing House, 23 Ansari Road, Daryaganj, New Delhi.


Rajendra Prasad, *India Divided*, Bombay, 1946.

Seshadri H. V., *The Tragic Story of Partition*, Jagarana Prakashana, Bangalore, 1982.

Sharma, T. T., *[illegible]*, Rashtrotthana Sahitya, Bangalore.

[illegible] Rashtrotthana Sahitya, Bangalore [illegible]

[illegible]



"ಪ್ರೊ|| ಶ್ರೀನಿವಾಸಮೂರ್ತಿಯವರು ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಯಲ್ಲಿಯೂ ಚೆನ್ನಾಗಿ ನುರಿತ ಬರಹಗಾರರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇವರು ಪದವಿ ಹಾಗೂ ಪದವಿಯೋತ್ತರ ತರಗತಿಗಳಿಗೆ ಪಾಠ ಹೇಳಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಸ್ವತಃ ಸಂಶೋಧನೆಯನ್ನು ನಡೆಸಿ, ಸುಮಾರು ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿ ಗಣ್ಯಸ್ಥಾನ ಪಡೆದಿದ್ದಾರೆ. ಇವರು ಅನೇಕ ಲೇಖನಗಳನ್ನೂ, ಮೂವತ್ತು ಗ್ರಂಥಗಳನ್ನೂ ಬರೆದಿರುತ್ತಾರೆ. ಹಾಗೂ ಇವರ ಕೆಲವು ಗ್ರಂಥಗಳಿಗೆ ಪ್ರಶಸ್ತಿ ಲಭಿಸಿದೆ. ಇವರ ಬರಹಗಳು ಅರ್ಥಶಾಸ್ತ್ರಕ್ಕೆ ಮಾತ್ರ ಸೀಮಿತವಾಗದೆ ಇತರ ಕ್ಷೇತ್ರಗಳಿಗೂ ಹರಡಿವೆ. ಇವರು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಬರೆದಿರುವ ಸರ್. ಎಂ. ವಿಶ್ವೇಶ್ವರಯ್ಯನವರ ಅತ್ಯಂತ ಉಪಯುಕ್ತವಾದ ಜೀವನಚರಿತ್ರೆಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ."

(ಸಹಿ) ನಿಟ್ಟೂರು ಶ್ರೀನಿವಾಸರಾವ್

ಕರ್ನಾಟಕದ ಮಾಜಿ ಮುಖ್ಯ ನ್ಯಾಯಾಧೀಶರು,
ಗೌರ್ನರು, ವಿಜಿಲೆನ್ಸ್ ಕಮೀಷನರು ಮತ್ತು
ಪ್ರಸಕ್ತ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ
ಗೌರವ ಕಾರ್ಯದರ್ಶಿ